ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ


ಕನ್ನಡ ಭಾಷಾಭಿವೃದ್ಧಿ ಯೋಜನೆ

ಸಂಪುಟ ೨

ಬಸವಣ್ಣ

ಸಂಪಾದಕರು

ಡಾ. ವ್ಹಿ.ಜಿ. ಪೂಜಾರ



ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ - ೫೮೫ ೧೦೬

ಕನ್ನಡ ಭಾಷಾಭಿವೃದ್ಧಿಯೋಜನೆ

ಸಂಪುಟ ೨

ಕರ್ನಾಟಕ ಸರಕಾರ

ಬಸವಣ್ಣ

ಪ್ರಧಾನ ಸಂಪಾದಕರು

ಡಾ. ಎಚ್.ಟಿ. ಪೋತೆ

ಸಂಪಾದಕರು

ಡಾ. ವ್ಹಿ.ಜಿ. ಪೂಜಾರ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

BASAVANNA : A Collection of selected articles on Basavannal
Edited by: Dr. V.G. Pujar Professor of Kannada, Gulbarga University, Gulbarga.
Principal Investigator: Dr. H.T. Pote, Professor of Kannada, Gulbarga University, Gulbarga. Published by Kannada Adhyayana Samsthe, Gulbarga University, Gulbarga. Funding Agency : Govt. of Karnataka.

ಬಸವಣ್ಣ
ಪ್ರಧಾನ ಸಂಪಾದಕರು : **ಡಾ. ಎಚ್.ಟಿ. ಪೋತೆ,** ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
ಸಂಪಾದಕರು : **ಡಾ. ವ್ಹಿ.ಜಿ. ಪೂಜಾರ,** ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ISBN	: 978-81-921036-1-7
First Edition	: 2011
Pages	: xxvi + 274 = 300
©	: Institute of Kannada Studies, Gulbarga University, Gulbarga
Paper used	: 70 gsm N.S. Maplitho
Price	: **Rs. 200/-**

ಪ್ರಥಮ ಮುದ್ರಣ	: ೨೦೧೧
ಪುಟಗಳು	: xxvi + ೨೭೪ = ೩೦೦
©	: ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಬಳಸಿದ ಕಾಗದ	: ೭೦ gsm ಎನ್.ಎಸ್. ಮ್ಯಾಪಲಿಥೋ
ಬೆಲೆ	: **ರೂ. ೨೦೦/–**

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು -೫೬೦ ೦೨೬
ದೂರವಾಣಿ : ೨೬೭೫೭೧೫೯

ಸಲಹಾ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಸಂಚಾಲಕರು

ಪ್ರೊ. ಬಸವರಾಜ ಸಬರದ

ಪ್ರೊ. ವೀರಣ್ಣ ದಂಡೆ

ಸದಸ್ಯರು

ಡಾ. ಮ.ಗು. ಬಿರಾದಾರ

ಡಾ. ವೀರಣ್ಣ ರಾಜೂರ

ಡಾ. ವಸಂತ ಕುಷ್ಟಗಿ

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಕರ್ನಾಟಕ ಸರಕಾರ

ಕರ್ನಾಟಕ ಸರಕಾರ
ಬೆಂಗಳೂರು-೫೬೦ ೦೦೧
ದಿನಾಂಕ : ೧೫-೨-೨೦೧೧

ಶುಭಹಾರೈಕೆ

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಶರಣಸಾಹಿತ್ಯ ವಿಮರ್ಶಾ ಸಂಪುಗಳ ಯೋಜನೆಯಡಿಯಲ್ಲಿ ಸಿದ್ಧಪಡಿಸಿರುವ ಹನ್ನೆರಡು ಹೊಸ ಸಂಪುಟಗಳ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಔಚಿತ್ಯಪೂರ್ಣ.

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು, ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನಸಾಹಿತ್ಯ, ದಾಸಸಾಹಿತ್ಯ, ತತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯಚರಿತ್ರೆ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರು ವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ

ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡುಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ **ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯ**ಡಿಯಲ್ಲಿ ಸಿದ್ಧಪಡಿಸಿರುವ ಹನ್ನೆರಡು ಬೃಹತ್ ಸಂಪುಟಗಳನ್ನು ಪ್ರಕಟಪಡಿಸಲು ಶ್ರಮಿಸಿದ ಎಲ್ಲರನ್ನೂ ಅಭಿನಂದಿಸಿ ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರಕಾರ

ನಂ. ೩೩೦, ೩ನೇ ಮಹಡಿ,
ವಿಧಾನಸೌಧ,
ಬೆಂಗಳೂರು ೫೬೦ ೦೦೧
ದಿನಾಂಕ : ೧೫–೨–೨೦೧೧

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ರ ಹಲ್ಮಿಡಿ ಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯ** ಅಡಿಯಲ್ಲಿ

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಶರಣಸಾಹಿತ್ಯಕ್ಕೆ ಸಂಬಂಧಿಸಿದ ನಾಡಿನ ವಿವಿಧ ಲೇಖಕರು ಬರೆದ ವಿಮರ್ಶಾ ಲೇಖನಗಳ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಈಗ ಏಳು ಬೃಹತ್ ಸಂಪುಟಗಳು ಪ್ರಕಟವಾಗುತ್ತಿವೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡದ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ ಬಿ. ಝುಳಕಿ ಅವರನ್ನು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು–ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವುದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಿದ್ದಾರೆ. ನಾಡು–ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಸಹಿ/–
ಗೋವಿಂದ ಎಂ. ಕಾರಜೋಳ
ಸಚಿವರು

ರಮೇಶ್ ಬಿ. ಝಳಕಿ
ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರಕಾರ

ಕೊಠಡಿ ಸಂಖ್ಯೆ ೨,
ನೆಲಮಹಡಿ, ವಿಕಾಸಸೌಧ,
ಬೆಂಗಳೂರು–೫೬೦ ೦೦೧
ದಿನಾಂಕ : ೧೫–೨–೨೦೧೧

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದು ಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿರುತ್ತದೆ. ಕ್ರಿ.ಶ. ೪೫೦ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿಯ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರೆವಣಿಗೆಯಲ್ಲಿಯೇ ಕನ್ನಡನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪವಿರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ಧಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿದ ಶಾಸನದಿಂದಲೇ ಅಶೋಕನಿಗೆ 'ದೇವಾನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿಯೇ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ಐದನೆಯ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪಾರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಿರುವುದು, ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ

ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿರುತ್ತಾರೆ. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತಾಗಿ ಅನೇಕ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯನ್ನು ಹಮ್ಮಿಕೊಂಡು ಶರಣಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳ ಹನ್ನೆರಡು ಸಂಪುಟಗಳಲ್ಲಿ ಈಗ ಏಳು ಸಂಪುಟಗಳನ್ನು ಮೊದಲ ಕಂತಾಗಿ ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು ಮತ್ತು ಯೋಜನೆಯ ಪ್ರಧಾನ ಸಂಚಾಲಕರೂ ಆದ ಡಾ. ಎಚ್.ಟಿ. ಪೋತೆ ಅವರನ್ನೂ ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಅವರನ್ನೂ ಮತ್ತು ಕುಲಸಚಿವ ಪ್ರೊ. ಎಸ್.ಎಲ್. ಹಿರೇಮಠ ಅವರನ್ನೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ವೀರಣ್ಣ ದಂಡೆಯವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಕನ್ನಡ ಸಾಹಿತ್ಯದ ಎರಡು ಕಣ್ಣುಗಳೆಂದರೆ ವಚನ ದಾಸ ಪ್ರಕಾರಗಳು. ಅದರಲ್ಲೂ ವಚನಕಾರರ ಸಮಾಜಮುಖಿ ಚಿಂತನೆ ಜಗತ್ತಿನ ಇತಿಹಾಸದಲ್ಲಿ ಅವಿಸ್ಮರಣೀಯವಾದುದು. ಬುದ್ಧನ ತರುವಾಯ ಸಾಮಾನ್ಯರ ಕೊರಳಾಗಿ ಹೊರಹೊಮ್ಮಿದ ಸಾಹಿತ್ಯ ಪ್ರಕಾರವಿದು. ಈ ಚಿಂತನೆಯನ್ನು ವಿಮರ್ಶಿಸಿ ಬರೆದ ನಾಡಿನ ವಿದ್ವಾಂಸರ ಲೇಖನಗಳನ್ನು ಒಂದೆಡೆ ಸಂಕಲಿಸಿ ಬೃಹತ್ ಗ್ರಂಥರೂಪದಲ್ಲಿ ಪ್ರಕಟಿಸುತ್ತಿರುವುದು ಶ್ಲಾಘನೀಯವಾಗಿದೆ.

ಸಹಿ/–

ರಮೇಶ ಬಿ. ಝಳಕಿ

ಕಾರ್ಯದರ್ಶಿ

ಮನು ಬಳಿಗಾರ್
ಕ.ಆ.ಸೇ
ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರಕಾರ

ಕನ್ನಡ ಭವನ,
ಜೆ.ಸಿ. ರಸ್ತೆ,
ಬೆಂಗಳೂರು-೫೬೦ ೦೦೨
ದಿನಾಂಕ : ೧೫-೨-೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯ ವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು ವೀರಯುಗ ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು 'ವಿಕ್ರಮಾರ್ಜುನ ವಿಜಯ'ವಾದರೆ ರನ್ನ ಬರೆದದ್ದು 'ಸಾಹಸಭೀಮವಿಜಯ'. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜಮಾರ್ಗಕಾರನು ಕನ್ನಡನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜಮಾರ್ಗಕಾರನು ಕನ್ನಡ ಜನರು ಕವಿಗಳೂ ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡನಾಡಿನ ಹತ್ತನೆ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ

ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಏಳು ಬೃಹತ್ ಸಂಪುಟಗಳನ್ನು ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ವೀರಣ್ಣ ದಂಡೆ ಅವರಿಗೆ, ಈ ಯೋಜನೆಯ ಪ್ರಧಾನ ಸಂಚಾಲಕರು ಹಾಗೂ ಸಂಪುಟದ ಪ್ರಧಾನಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರಿಗೆ ಸಂಪುಟದ ಸಂಪಾದಕರಾದ ಪ್ರೊ. ವಿ.ಜಿ. ಪೂಜಾರ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಹಿ/–

ಮನು ಬಳಿಗಾರ್

ನಿರ್ದೇಶಕರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾ ಸಂಸ್ಥೆಯಾಗಿದೆ. ೧೯೭೦-೭೧ ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ ಮುಂದೆ ೧೯೮೦ ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ ಇವು ಆಕರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿ ಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು ಕೀರ್ತನಕಾರರ ಸ್ಮಾರಕಗಳು, ಸಾಂಸ್ಕೃತಿಕ ಪದಕೋಶ, ಹೈದ್ರಾಬಾದ ಕರ್ನಾಟಕದ

ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಈ ಯೋಜನೆಗಳಲ್ಲಿ ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನಾ ಯೋಜನೆಯೂ ಒಂದು ಈ ಯೋಜನೆಗೆ ಸಂಬಂಧಿಸಿದಂತೆ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಶೂನ್ಯಸಂಪಾದನೆ, ವಚನಕಾವ್ಯಚಿಂತನೆ, ಜಾಗತಿಕ ಚಿಂತಕರು ಮತ್ತು ಬಸವಣ್ಣ, ಸಿದ್ಧರಾಮ, ವಚನಕಾರ್ತಿಯರು, ದಲಿತವಚನಕಾರರು ಇತರ ವಚನಕಾರರು ಹಾಗೂ ವಚನ : ಜಾನಪದ ಹೀಗೆ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಈಗ ಏಳು ಸಂಪುಟಗಳನ್ನು ಹೊರತರುತ್ತಿರುವುದು ಹರ್ಷದ ಸಂಗತಿಯಾಗಿದೆ.

ಪ್ರಸ್ತುತ "ಬಸವಣ್ಣ" ಸಂಪುಟವನ್ನು ಡಾ. ವ್ಹಿ.ಜಿ. ಪೂಜಾರ ಅವರು ವಿಶೇಷ ಶ್ರಮವಹಿಸಿ ಸಿದ್ಧಪಡಿಸಿರವರು. ಇಲ್ಲಿನ ಲೇಖನಗಳು ತುಂಬ ಮೌಲಿಕವಾದುವುಗಳಾಗಿವೆ. ಬಸವಣ್ಣನವರ ಇತಿವೃತ್ತ ಹಾಗೂ ಅವರ ಸಾಧನೆಗಳ ಮೇಲೆ ಹೊಸಬೆಳಕು ಚೆಲ್ಲುವಂತಹವಾಗಿವೆ. ಬಸವಣ್ಣನವರ ಜೀವನ ಹಾಗೂ ಸಾಧನೆ, ಸಿದ್ಧಿಗಳನ್ನು ಜನಸಾಮಾನ್ಯರಿಗೆ ತಿಳಿಸುವಲ್ಲಿ ಇಲ್ಲಿನ ಲೇಖನಗಳು ಯಶಸ್ವಿಯಾಗಿವೆ. ಒಟ್ಟಿನಲ್ಲಿ ಇಲ್ಲಿನ ಲೇಖನಗಳೆಲ್ಲವೂ ಶತಮಾನದ ವಿಮರ್ಶಾಚಿಂತನೆಯನ್ನು ಸಾದರಪಡಿಸುತ್ತಲೇ ಹೊಸ ಆವಿಷ್ಕಾರ ಮತ್ತು ಚಿಂತನೆಗಳಿಗೆ ಉತ್ತಮ ದಾರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿವೆ. ಈ ಸಂಪುಟವನ್ನು ತುಂಬ ಶ್ರಮವಹಿಸಿ ಸಿದ್ಧಪಡಿಸಿದ ಸಂಪಾದಕರಾದ ಡಾ. ವ್ಹಿ.ಜಿ. ಪೂಜಾರ ಅವರಿಗೂ, ಯೋಜನೆಯ ಪ್ರಧಾನ ಸಂಚಾಲಕರು ಹಾಗೂ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝುಳಕಿ ಅವರಿಗೂ ನಿರ್ದೇಶಕರಾದ ಶ್ರೀ ಮನುಬಳಿಗಾರ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನುಬಳಿಗಾರ್ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಪಾದಕರ ನುಡಿ

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಸಂವರ್ಧನೆಯಲ್ಲಿ ಹನ್ನೆರಡನೇ ಶತಮಾನದ ವಚನ ಸಾಹಿತ್ಯ ವಹಿಸಿದ ಪಾತ್ರ ಅತ್ಯಂತ ಗುರುತರವಾಗಿದೆ. ಕನ್ನಡ ಸಾಹಿತ್ಯವಿಂದು ಜಾಗತಿಕ ಮಟ್ಟದಲ್ಲಿ ತಲೆಎತ್ತಿ ನಿಲ್ಲುವಂತಾದುದು ವಚನಸಾಹಿತ್ಯ ಹಾಗೂ ಕೀರ್ತನ ಸಾಹಿತ್ಯಗಳಿಂದಲೇ. ಇವೆರಡೂ ಕನ್ನಡ ಸಾಹಿತ್ಯಕ್ಕೆ ಎರಡು ಕಣ್ಣುಗಳಿದ್ದಂತೆ. ಹನ್ನೆರಡನೇ ಶತಮಾನದ ಬಸವಾದಿ ಶರಣರು ಹಾಗೂ ಹದಿನೈದು ಹದಿನಾರನೇ ಶತಮಾನಗಳಲ್ಲಿದ್ದ ಹರಿದಾಸರು ವಚನಗಳನ್ನು ಹಾಗೂ ಕೀರ್ತನೆಗಳನ್ನು ಬರೆದು ಕನ್ನಡ ಸಾಹಿತ್ಯದ ಕಣಜವನ್ನು ತುಂಬಿದರು. ಈ ಎರಡೂ ಸಾಹಿತ್ಯಗಳ ಉದ್ದೇಶ ಮಾನವ ಕಲ್ಯಾಣವೇ ಹೊರತು ಮತ್ತೇನಲ್ಲ. ಇವುಗಳ ಕಥಾವಸ್ತು ಸಾಮಾನ್ಯ ಮಾನವನೇ ಆಗಿದ್ದಾನೆ. ಇವುಗಳಲ್ಲಿ ಯಾವುದೇ ರಾಜ ಮಹಾರಾಜರ ಕಥೆಯಿಲ್ಲ, ಯಾವುದೇ ಕಾಲ್ಪನಿಕ ವಿಷಯಗಳ ವರ್ಣನೆಯಿಲ್ಲ. ಇವು ಮನುಷ್ಯನ ಸಮಸ್ಯೆಗಳತ್ತಲೇ ದೃಷ್ಟಿ ಹರಿಸಿದುದನ್ನೂ, ಮಾನವನ ಅನೇಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದುದನ್ನೂ ಲಕ್ಷಿಸುವೆವು. ವಚನ ಸಾಹಿತ್ಯವಂತೂ ಜನಸಾಮಾನ್ಯರನ್ನೇ ಕುರಿತಿದ್ದು ಅವರ ಒಳಿತಿಗಾಗಿಯೇ ಹುಟ್ಟಿಕೊಂಡಂಥದು. ಹನ್ನೆರಡನೇ ಶತಮಾನದ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟ ಜಾತೀಯತೆ, ಗಂಡು–ಹೆಣ್ಣು ಎಂಬ ಭೇದ ಭಾವ, ಬಡವ–ಬಲ್ಲಿದರೆಂಬ ಭಾವ, ಸ್ಪೃಶ್ಯ–ಅಸ್ಪೃಶ್ಯರೆಂಬ ಭಾವ ಹಾಗೂ ಜನರನ್ನಾವರಿಸಿದ ಮೂಢನಂಬಿಕೆಗಳು ಇವನ್ನೆಲ್ಲಾ ಆಮೂಲಾಗ್ರವಾಗಿ ಹೊಡೆದೋಡಿಸಿ ಜನಮಾನಸದಲ್ಲಿ ಸಮಾನತೆ ಸೋದರತ್ವಗಳನ್ನು ನೆಲೆಗೊಳಿಸಲೆಂದು ಶರಣರು ವಚನಗಳನ್ನು ಬರೆದರು. ಅವರು ವಚನಗಳನ್ನು ಬರೆದು ಸಾಹಿತಿಗಳಾಗಬೇಕೆಂದು ವಚನಕಾರರೆನ್ನಿಸಿಕೊಳ್ಳಬೇಕೆಂದು ಆಸೆ ಪಟ್ಟವರಲ್ಲ ಒಂದರ್ಥದಲ್ಲಿ ಅವರು ಸಮಾಜ ಸುಧಾರಕರು.

ಸಮಾನತೆಯ ಹಂದರದ ಮೇಲೆ ಹೊಸ ಸಮಾಜವನ್ನು ಕಟ್ಟಬೇಕೆಂದು ಕನಸು ಕಂಡವರು. ಕಾಯಕ–ದಾಸೋಹ–ಪ್ರಸಾದ ತತ್ವಗಳನ್ನು ಜನರಿಗೆ ತಿಳಿಹೇಳಿ ಅವರ ಜೀವನಮಟ್ಟವನ್ನು ಎತ್ತರಿಸಲು ಪ್ರಯತ್ನಿಸಿದರು. ಜನಸಾಮಾನ್ಯರಂತೆ ಬಾಳಿ ಬದುಕಿ ಹೋದ ಐತಿಹಾಸಿಕ ವ್ಯಕ್ತಿಗಳಾದ ಅವರ ಬದುಕು–ಬರಹ ಹಾಗೂ ಸಾಧನೆ–ಸಿದ್ಧಿಯನ್ನು ಕುರಿತು ವಿಶೇಷ ಅಧ್ಯಯನ ನಡೆಸುವುದು ಈಗ ಅಗತ್ಯವಾಗಿದೆ. ಈವರೆಗೆ ಶರಣರು ಹಾಗೂ ಅವರು ಬರೆದ ವಚನಗಳನ್ನು ಕುರಿತಾಗಿ ಅನೇಕ ವಿದ್ವಾಂಸರು ಲೇಖನ ರೂಪದಲ್ಲಿ, ಪುಸ್ತಕಗಳ ರೂಪದಲ್ಲಿ ಬರೆದಿರುವರು. ಆದರೆ ವ್ಯವಸ್ಥಿತವಾದ ಕ್ರಮದಲ್ಲಿ ಒಬ್ಬೊಬ್ಬ ಶರಣರ ಇತಿವೃತ್ತ

ಹಾಗೂ ಸಾಧನೆ ಸಿದ್ಧಿಗಳನ್ನು ಕುರಿತಾದ ಬರಹಗಳನ್ನೊಳಗೊಂಡ ಸಂಪುಟಗಳು ಈವರೆಗೆ ಬಂದಿಲ್ಲವೆಂಬುದನ್ನು ನಾನು ಗುರುತಿಸಿ, ಈ ಕಾರ್ಯವನ್ನು ಕೈಗೆತ್ತಿಕೊಂಡಿರುವೆ.

ಕರ್ನಾಟಕ ಸರ್ಕಾರವು ಕನ್ನಡಭಾಷೆಗೆ–ಶಾಸ್ತ್ರೀಯ ಸ್ಥಾನಮಾನ ಲಭಿಸಿದ ಈ ಸಂದರ್ಭದಲ್ಲಿ ನಮ್ಮ ಕನ್ನಡ ಅಧ್ಯಯನ ಸಂಸ್ಥೆಗೆ ಧನಸಹಾಯ ನೀಡಿ ಸಂಶೋಧನ ಯೋಜನೆಗಳನ್ನು ಹಾಕಿಕೊಂಡು ಕಾರ್ಯಗತಗೊಳಿಸಲು ಪ್ರೇರೇಪಿಸಿದುದು ಸಮಯೋಚಿತವೂ ಸಮಂಜಸ ವಾದುದೂ ಆಗಿದೆ. ಪ್ರಸ್ತುತ ಯೋಜನೆಯಡಿ ನಾನು ಶರಣರ ಇತಿವೃತ್ತ ಹಾಗೂ ಅವರ ಸಾಹಿತ್ಯಕ ಸಾಧನೆಯನ್ನು ಸಮಗ್ರವಾಗಿ ಒಳಗೊಳ್ಳುವ ಲೇಖನಗಳ ವಿಮರ್ಶಾ ಸಂಪುಟಗಳನ್ನು ಸಿದ್ಧಿಪಡಿಸುವ ಯೋಜನೆಯನ್ನು ಹಾಕಿಕೊಂಡಿರುವೆ. ಪ್ರಸ್ತುತ ಯೋಜನೆಯಡಿ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ವಚನಕಾರ್ತಿಯರು, ಶೂನ್ಯಸಂಪಾದನೆ, ವಚನ ಕಾವ್ಯಮೀಮಾಂಸೆ ಮುಂತಾದ ಸಂಪುಟಗಳನ್ನು ಆಯಾ ವಿದ್ವಾಂಸರಿಂದ ಸಂಪಾದಿಸಿ ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿರುವೆ.

ಪ್ರಸ್ತುತ 'ಬಸವಣ್ಣ' ವಿಮರ್ಶಾ ಸಂಪುಟವನ್ನು ಡಾ. ವ್ಹಿ.ಜಿ. ಪೂಜಾರ ಅವರು ಸಂಪಾದಿಸಿಕೊಟ್ಟಿರುವರು. ಈ ಸಂಪುಟವು ಬಸವಣ್ಣನವರ ಬದುಕು, ವಚನಗಳ ರಚನೆ, ಸಾಮಾಜಿಕ ಕಾರ್ಯಕಲಾಪಗಳು, ಹಾಗೂ ಅವರು ಮಾಡಿದ ಸಮಾಜೋಧಾರ್ಮಿಕ ಚಟುವಟಿಕೆಗಳ ಮೇಲೆ ಹೊಸಬೆಳಕು ಚೆಲ್ಲುವಂಥ ಲೇಖನಗಳನ್ನು ಒಳಗೊಂಡಿದೆ. ಬಸವಣ್ಣನವರ ಬದುಕಿನ ವಿವರಗಳನ್ನು ಶಾಸನ, ಕಾವ್ಯ, ಪುರಾಣಗಳಿಂದ ಶೋಧಿಸಿ ವಿದ್ವಾಂಸರು ಇಲ್ಲಿ ಲೇಖನಗಳನ್ನು ಬರೆದುದು ತುಂಬ ಔಚಿತ್ಯ ಪೂರ್ಣವೆನ್ನಿಸಿದೆ, ಬಸವಣ್ಣನವರು ಬರೆದ ವಚನಗಳಲ್ಲಿ ವ್ಯಕ್ತಗೊಂಡ ಮಾನವತಾವಾದ, ಸಾಮಾಜಿಕ ಪ್ರಜ್ಞೆ, ದಲಿತ ಪ್ರಜ್ಞೆ, ಸಾಮಾಜಿಕ ಕಾಳಜಿ, ಮೌಢ್ಯಗಳ ಖಂಡನೆ ಮುಂತಾದ ವಿಷಯಗಳನ್ನು ಇಲ್ಲಿ ವ್ಯಾಪಕವಾಗಿ ಚರ್ಚೆಗೆ ಎತ್ತಿಕೊಂಡು ಲೇಖನಗಳನ್ನು ವಿದ್ವಾಂಸರು ಆಳವಾದ ಅಧ್ಯಯನ ಹಾಗೂ ಅನುಸಂಧಾನಗೈದು ಬರೆದುದು ತುಂಬ ಸಮರ್ಪಕವೆನ್ನಿಸಿದೆ. ಬಸವಣ್ಣನವರ ವಚನಗಳು ಕೇವಲ ವೀರಶೈವ ಧರ್ಮದ ತತ್ವಗಳನ್ನಷ್ಟೇ ಒಳಗೊಂಡಿಲ್ಲ. ಅವು ವಿಶ್ವದ ಎಲ್ಲಾ ಜನತೆಗೂ, ಎಲ್ಲಾ ಕಾಲಕ್ಕೂ ಪ್ರಸ್ತುತವಾಗಬಲ್ಲ, ಪ್ರಯೋಜನಕ್ಕೆ ಬರಬಲ್ಲ ಜೀವಗುಣವನ್ನು ಒಳಗೊಂಡುದನ್ನಿಲ್ಲಿ ಸೋದಾಹರಣವಾಗಿ ಚರ್ಚಿಸಲಾಗಿದೆ. ಅವರ ವಚನಗಳು ಕಾವ್ಯಾಂಶವನ್ನೂ ಒಳಗೊಂಡಿವೆ. ಹೀಗೆಂದ ಮಾತ್ರಕ್ಕೆ ಬಸವಣ್ಣನವರು ಕೇವಲ ಕವಿಗಳಷ್ಟೇ ಅಲ್ಲ. ಅವರು ಬಿಜ್ಜಳನ ಭಂಡಾರಿಯಾಗಿ, ಸಮಾಜದ ಹಿತಚಿಂತಕರಾಗಿ, ದೀನ ದಲಿತರ ಬಂಧುವಾಗಿ, ಶೋಷಕರ ವಿರುದ್ಧ ದನಿ ಎತ್ತಿದ ಬಂಡಾಯಗಾರರಾಗಿ, ಮೌಢ್ಯಗಳನ್ನು ಖಂಡಿಸಿದ ವಿಜ್ಞಾನಿಯಾಗಿ ಇಲ್ಲಿ ಕಂಗೊಳಿಸಿದುದನ್ನು ಸಾಧಾರ ಪೂರ್ವಕವಾಗಿ ನಿರೂಪಿಸಲಾಗಿದೆ.

ಬಸವಣ್ಣನವರು ವಚನಗಳನ್ನಷ್ಟೇ ಬರೆದಿರುವರೆಂದು ಬಹುಜನ ಭಾವಿಸಿರುವರು. ಅವರು ವಚನಗಳ ಜೊತೆ ಸ್ವರ ವಚನಗಳನ್ನೂ, ಕಾಲಜ್ಞಾನ ನುಡಿಗಳನ್ನೂ ಬರೆದುದನ್ನು ಸಂಶೋಧಕರು ಇತ್ತೀಚೆಗೆ ಶೋಧ ಮಾಡಿರುವರು. ಅವರ ಸಾಹಿತ್ಯವು ಒಳಗೊಂಡ ಸಾರ್ವಕಾಲಿಕ ತತ್ವಗಳನ್ನು ಜೀವದಯಾಪರ ಹಾಗೂ ಪ್ರಗತಿ ಪರಧೋರಣೆಗಳನ್ನು ಅನೇಕ ವಿದ್ವಾಂಸರು ತಮ್ಮ ಲೇಖನಗಳಲ್ಲಿ ಸಾಧಾರಪೂರ್ವಕವಾಗಿ ವಿವರಿಸಿದುದು ವಿನೂತನ

ವಾದುದಾಗಿದೆ. ಇಲ್ಲಿನ ಎಲ್ಲಾ ಇಪ್ಪತ್ತಾರು ಲೇಖನಗಳು ತುಂಬ ಪರಿಶ್ರಮದಿಂದ ಹಾಗೂ ಆಳವಾದ ಅಧ್ಯಯನದಿಂದ ರೂಪುಗೊಂಡಂಥವಾಗಿವೆ. ಇಂಥ ಮೌಲಿಕವಾದ ಲೇಖನಗಳನ್ನು ವಿದ್ವಾಂಸರಿಂದ ಸಂಗ್ರಹಿಸಿ, ಸಂಪಾದಿಸಿಕೊಟ್ಟ ಡಾ. ವ್ಹಿ.ಜಿ. ಪೂಜಾರ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ. ಅವರು ಇಲ್ಲಿ ಬಸವಣ್ಣನವರಿಗೆ ಸಂಬಂಧಿಸಿದ, ಅವರ ಸಾಹಿತ್ಯವನ್ನು ಕುರಿತು ವಿಶೇಷ ಅಧ್ಯಯನ ನಡೆಸಿ ಬರೆದ ವಿದ್ವಾಂಸರ ಬರಹಗಳನ್ನು ತುಂಬ ಚಾಕಚಕ್ಯತೆಯಿಂದ ಆಯ್ದುಕೊಂಡು ಸಂಪಾದಿಸಿದ್ದಾರೆ. ಇದರಿಂದಾಗಿ ಪ್ರಸ್ತುತ ಸಂಪುಟಕ್ಕೆ ಒಂದು ವಿಧದ ಸಮಗ್ರತೆಯುಂಟಾಗಿದೆ. ಇಲ್ಲಿನ ವಿಮರ್ಶಾ ಹಾಗೂ ಸಂಶೋಧನ ಲೇಖನಗಳು ಬಸವಣ್ಣನವರ ಬದುಕು ಹಾಗೂ ಬರಹಗಳ ಮೇಲೆ ಹೊಸ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗಿವೆ.

ಡಾ. ಎಚ್.ಟಿ. ಪೋತೆ
ಪ್ರಧಾನ ಸಂಪಾದಕರು

ಸಂಪಾದಕರ ನುಡಿ

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದ ಈ ಶುಭ ಸಂದರ್ಭದಲ್ಲಿ ಕರ್ನಾಟಕ ಸರಕಾರವು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಉದಾರವಾಗಿ ಆರ್ಥಿಕ ನೆರವು ನೀಡಿದುದು ಶ್ಲಾಘನೀಯವಾಗಿದೆ. ಈ ಆರ್ಥಿಕ ನೆರವು ಪಡೆದು ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡು ಕಾರ್ಯಪ್ರವೃತ್ತವಾಗಿದೆ. ಅವುಗಳಲ್ಲಿ ಶಿವಶರಣರ ಇತಿವೃತ್ತ ಹಾಗೂ ಸಾಹಿತ್ಯ ಕುರಿತ ವಿಮರ್ಶಾ ಸಂಪುಟಗಳ ಪ್ರಕಟನಾ ಯೋಜನೆಯೂ ಒಂದು. ಪ್ರಸ್ತುತ ಸಂಪುಟದ ಪ್ರಧಾನ ಸಂಪಾದಕರಾಗಿ ಹಾಗೂ ಯೋಜನೆಯ ಪ್ರಧಾನ ಸಂಚಾಲಕರಾಗಿ ಡಾ. ಎಚ್.ಟಿ. ಪೋತೆಯವರು ಕಾರ್ಯ ನಿರ್ವಹಿಸಿರುವರು.

ಶಿವಶರಣರನ್ನು ಕುರಿತ ವಿಮರ್ಶಾ ಸಂಪುಟಗಳ ಪ್ರಕಟನಾ ಯೋಜನೆಯ ಮಾಲಿಕೆಯಲ್ಲಿ "ಬಸವಣ್ಣ" ಕೃತಿಯ ಸಂಪಾದನೆಯ ಕಾರ್ಯವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಸ್ನೇಹಿತರಾದ ಡಾ. ಎಚ್.ಟಿ. ಪೋತೆಯವರು ಹಾಗೂ ಸಲಹಾ ಸಮಿತಿಯ ಸದಸ್ಯರು ನನಗೆ ಒಪ್ಪಿಸಿದ್ದಾರೆ. ಅವರ ಸೂಚನೆಯ ಮೇರೆಗೆ ನಾನು ಬಸವಣ್ಣನವರ ಜೀವನ ವಿವರ, ವಚನಗಳು ಹಾಗೂ ಅವರು ಗೈದ ಸಮಾಜೋಧಾರ್ಮಿಕ ಕಾರ್ಯ ಚಟುವಟಿಕೆಗಳ ಮೇಲೆ ಹೊಸಬೆಳಕು ಚೆಲ್ಲುವ ಇಪ್ಪತ್ತಾರು ವಿದ್ವಾಂಸರ ಲೇಖನಗಳನ್ನು ಇಲ್ಲಿ ನಾನು ಸಂಗ್ರಹಿಸಿರುವೆನು. ಈ ಲೇಖನಗಳು ತುಂಬ ಪರಿಶ್ರಮದಿಂದ ರಚನೆಗೊಂಡಂಥವು. ಬಸವಣ್ಣನವರ ಕಾರ್ಯವೈಖರಿ ಹಾಗೂ ಅವರ ಒಟ್ಟು ಸಾಧನೆಯನ್ನು ಇಲ್ಲಿನ ಲೇಖನಗಳು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ. ಇಂಥ ಸಂಕಲನಗಳು ಸಂಶೋಧಕರಿಗೆ ವಿದ್ಯಾರ್ಥಿಗಳಿಗೆ ತುಂಬ ಪ್ರಯೋಜನಕಾರಿಯಾಗಬಲ್ಲುವು ಎಂದು ಭಾವಿಸಿರುವೆ. ಇಂಥ ಗುರುತರವಾದ ಜವಾಬ್ದಾರಿಯನ್ನು ನನಗೆ ವಹಿಸಿದ ಮಾನ್ಯಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೂ, ಕುಲಸಚಿವರಾದ ಡಾ. ಎಸ್.ಎಲ್. ಹಿರೇಮಠ ಅವರಿಗೂ ಇಲ್ಲಿನ ಲೇಖನಗಳನ್ನು ಸಂಕಲನರೂಪದಲ್ಲಿ ಪ್ರಕಟಿಸಲು ಸಮ್ಮತಿಯನ್ನು ಸೂಚಿಸಿದ ಎಲ್ಲಾ ವಿದ್ವಾಂಸರಿಗೂ ಪ್ರಧಾನ ಸಂಪಾದಕರಾದ ಡಾ. ಎಚ್.ಟಿ.ಪೋತೆ ಅವರಿಗೂ ನನ್ನ ವಂದನೆಗಳು.

ಡಾ. ವ್ಹಿ.ಜಿ. ಪೂಜಾರ
ಸಂಪಾದಕರು

ಪ್ರಸ್ತಾವನೆ

ಕರ್ನಾಟಕ ಸಂಸ್ಕೃತಿಯ ಸಂವರ್ಧನೆಗೆ ಹನ್ನೆರಡನೆಯ ಶತಮಾನದ ಕೊಡುಗೆ ಮಹತ್ವಪೂರ್ಣವಾದುದು. ಕನ್ನಡನಾಡನಲ್ಲಿ ಆಗ ಏಕಕಾಲಕ್ಕೆ ನೂರಾರು ಶರಣರು ಉದಿಸಿ ಶ್ರೀಸಾಮಾನ್ಯರಿಗೆ ಸುಲಭದಲ್ಲಿ ಅರ್ಥವಾಗುವ ಭಾಷೆಯಲ್ಲಿ ವಚನಗಳನ್ನು ರಚಿಸಿದರು. ಬಸವಣ್ಣನವರು ಅಂದು ಶರಣರೆಲ್ಲರ ನೇತೃತ್ವ ವಹಿಸಿದ್ದು ಕರ್ನಾಟಕದ ಅಷ್ಟೇ ಏಕೆ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರ ಗಳಿಂದ ಬರೆದಿಡುವಂಥದು. ಅವರನ್ನು ಕೇವಲ ಧಾರ್ಮಿಕ ಮಹಾಪುರುಷ ಎಂದಷ್ಟೇ ಕೆಲವರು ಮೊದಲು ಗುರುತಿಸಿದ್ದರು. ಆದರೆ, ಇವತ್ತು ಅವರ ವ್ಯಕ್ತಿತ್ವದ ಹಲವು ಮಗ್ಗುಲಗಳನ್ನು ಅರಿತಿದ್ದೇವೆ. ಸಮಗ್ರ ಮಾನವ ಜನಾಂಗದ ಬಗ್ಗೆ ಕಳಕಳಿ ಹೊಂದಿದ ಅವರು ಸಮಾಜಸುಧಾರಣಾ ಕಾರ್ಯಕ್ರಮಗಳನ್ನು ಕೈಗೊಂಡರು. ಅವರು ಸಮಾನತೆಯ ಹಂದರದ ಮೇಲೆ ಸರ್ವಾಂಗ ಸುಂದರವಾದ ಸಮಾಜವನ್ನು ನಿರ್ಮಿಸಬೇಕೆಂದೂ, ಅಂದಿನ ಸಮಾಜದಲ್ಲಿ ಬೇರೂರಿದ ಅಸಮಾನತೆ, ಜಾತೀಯತೆಯ ಬೇರನ್ನು ಕಿತ್ತೆಸೆದು ಸಮಗ್ರವಾದ ಬದಲಾವಣೆ ಮಾಡುವ ಉದ್ದೇಶ ಹೊಂದಿದ್ದರು. ಸಮಾಜವಾದಿಗಳೂ, ಮಾನವತಾವಾದಿಗಳೂ ಆದ ಅವರು ದೀನದಲಿತರ, ಶೋಷಿತರ ಬಗ್ಗೆ ವಿಶೇಷ ಅನುಕಂಪವನ್ನು ಹೊಂದಿದ್ದರು. ಅವರದು ತೋರಿಕೆಯ ಅನುಕಂಪವಲ್ಲ. ಎಲ್ಲ ಧರ್ಮಗಳಲ್ಲಿನ ಶೋಷಿತರನ್ನು, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರನ್ನು ಮೇಲೆತ್ತಲು ತಮ್ಮ ಜೀವನದುದ್ದಕ್ಕೂ ಶ್ರಮಿಸಿದರು. ಅವರಲ್ಲಿ ವೈಚಾರಿಕತೆಯ ಕಿಡಿಯನ್ನು ಹೊತ್ತಿಸುವಲ್ಲಿ ಕ್ರಿಯಾಶೀಲರಾದರು. ಅಂದು ಶೂದ್ರರ ಸಾಲಿನಲ್ಲಿ ಗಣಿಸಲ್ಪಡುತ್ತಿದ್ದ ಮಹಿಳೆಗೆ ಪುರುಷನ ಸಮಾನ ಸ್ಥಾನ ದೊರಕಿಸಿಕೊಡಲು ಹೆಣಗಿದರಲ್ಲದೆ ಯುಗಯುಗಗಳಿಂದ ಉಚ್ಚವರ್ಣದವರಿಂದ ತುಳಿತಕ್ಕೊಳಗಾಗಿ ಕೀಳರಿಮೆ ಯನ್ನೇ ಮೈಗೊಡಿಸಿಕೊಂಡು ಬಾಳುತಿದ್ದ ಸಾಮಾನ್ಯ ಜನತೆಯ ನೋವಿಗೆ ಧ್ವನಿಯಾದರು. ಅವರಲ್ಲಿ ರಕ್ತಗತವಾಗಿದ್ದ ಮೂಢನಂಬಿಕೆಗಳನ್ನು, ಅರ್ಥಹೀನ ಸಂಪ್ರದಾಯಗಳನ್ನು ವಿಡಂಬಿಸಿ ಅವುಗಳ ನಿರ್ಮೂಲನೆಗಾಗಿ ಶ್ರಮಿಸಿದರು.

ಎಂಟು ನೂರು ವರ್ಷಗಳಷ್ಟು ಹಿಂದೆಯೇ ಹೇಳಿದ ಬಸವಣ್ಣನವರ ಎಷ್ಟೋ ವಿಚಾರಗಳು ನಮಗಿಂದೂ ಅನುಕರಿಸಲು ಮಹತ್ವದ್ದೆನಿಸುತ್ತವೆ. ಪ್ರಗತಿಪರವೆನಿಸುತ್ತವೆ. ಇಂದೂ ನಾವು ಜ್ಯೋತಿಷ್ಯ, ಶಕುನ ಕೇಳುವವರನ್ನೂ, ನಂಬುವವರನ್ನೂ, ತೀರ್ಥಕ್ಷೇತ್ರ ಯಾತ್ರೆ ಮಾಡಿ, ನದಿಯಲ್ಲಿ ಮುಳುಗೆದ್ದು ಪುನೀತರಾದೆವೆನ್ನುವವರನ್ನೂ, ಕಲ್ಲು–ಗಿಡ–ಮರಗಳನ್ನು ದೇವರೆಂದು ನಂಬಿ ಅವಕ್ಕೆ ಸುತ್ತುಹಾಕುವವರನ್ನೂ, ನಾನಾ ವಿಧದ ದೇವರುಗಳನ್ನು

ಸೃಷ್ಟಿಸಿಕೊಂಡು ಪೂಜಿಸುವವರನ್ನೂ, ಸಾರ್ವಜನಿಕ ಸಭೆ – ಸಮಾರಂಭಗಳಲ್ಲಿ 'ಜಾತೀಯತೆ ಮಾಡಬಾರದು, ಅದೊಂದು ನಮ್ಮ ದೇಶಕ್ಕಂಟಿದ ಕಳಂಕ, ಶಾಪ ಎಂದು ಅದನ್ನು ಘಂಟಾ ಘೋಷವಾಗಿ ಖಂಡಿಸುತ್ತಾ ಉದ್ದುದ್ದ ಭಾಷಣ ಬಿಗಿದು ಒಳಗೊಳಗೆ ವ್ಯವಸ್ಥಿತವಾಗಿ – ಗುಪ್ತವಾಗಿ ಜಾತೀಯತೆ ಮಾಡುವವರನ್ನೂ, ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ' ಎಂಬ ವಚನವನ್ನು ಕಂಠ ಪಾಠಮಾಡಿ, ನಿಜ ಜೀವನದಲ್ಲಿ ಇವೆಲ್ಲವನ್ನೂ ಮಾಡುತ್ತಾ ಈ ವಚನವನ್ನು ಮಾತ್ರ ಬೇಕೆಂದಾಗ ಗಿಳಿಯಂತೊಪ್ಪಿಸುವವರನ್ನೂ, ಅಂತರ್ಜಾತೀಯ ವಿವಾಹಗಳನ್ನು ಸಾರ್ವಜನಿಕರೆದುರು ಪ್ರೋತ್ಸಾಹಿಸಿ, ಬೇಕೆಂದರೆ ಕೆಲವು ವಿವಾಹಗಳನ್ನು ಜರುಗಿಸಿ ತಾವು ಮಾತ್ರ ಅದನ್ನು ತಮ್ಮ ವೈಯಕ್ತಿಕ ಜೀವನದಲ್ಲಿ ಒಪ್ಪಿಕೊಳ್ಳದವರನ್ನೂ ಕಾಣುವೆವು. ಇಂದು ಇಂಥವರ ಸಂಖ್ಯೆಯೇ ಬೆಳೆಯ ತೊಡಗಿದೆ. ಇವರ ಮಾತು ಕೃತಿ, ಅರಿವು – ಆಚಾರ, ಜ್ಞಾನ–ಕ್ರಿಯೆಗಳಲ್ಲಿ ದೊಡ್ಡ ಕಂದರ ಇರುವುದನ್ನು ಗುರುತಿಸುವೆವು. ಇಂಥವರಿಂದ ತುಂಬಿಕೊಂಡ ಇಂದಿನ ಸಮಾಜಕ್ಕೆ ಬಸವಣ್ಣನವರ ಪ್ರಗತಿಪರ ವಿಚಾರಗಳು–ಧೋರಣೆಗಳು ದಾರಿದೀಪವಾಗಬಲ್ಲುವು 'ಬಸವಣ್ಣತನ' ನಮ್ಮೆಲ್ಲರಲ್ಲಿ ಜಾಗ್ರತಗೊಳ್ಳಬೇಕಿದೆ.

ಬಸವಣ್ಣನವರ ಜೀವನ, ಸಾಧನೆ, ಸಿದ್ಧಿಗಳನ್ನು ನಾವಿಂದು ಅನ್ಯಜ್ಞಾನ ಶಿಸ್ತುಗಳಡಿಯಲ್ಲಿ ವ್ಯಾಪಕವಾದ ಅಧ್ಯಯನ ನಡೆಸಿ ತಿಳಿದುಕೊಳ್ಳುವ ಅಗತ್ಯವಿದೆ. ಕೇವಲ ಅವರ ವಚನಗಳನ್ನಷ್ಟೇ ವಾಚ್ಯಾರ್ಥದಲ್ಲಿ ಅರ್ಥೈಸಿಕೊಂಡರೆ ಸಾಲದು. ವಿಭಿನ್ನ ದೃಷ್ಟಿಕೋನದಡಿ ಅವುಗಳ ಅಧ್ಯಯನ ಇಂದು ನಡೆಯಬೇಕಿದೆ. ಬಸವಣ್ಣನವರನ್ನು ಕುರಿತು ಇದುವರೆಗೆ ಕನ್ನಡದಲ್ಲಿ ಬಂದಷ್ಟು ಕಾವ್ಯ, ನಾಟಕ, ಪುರಾಣ, ಸಂಶೋಧನಾ ಲೇಖನಗಳು ಇನ್ನಾವ ಮಹಾಪುರುಷನನ್ನೂ ಕುರಿತು ರಚನೆಯಾಗಿಲ್ಲ. ಅವರ ಜೀವನ, ಇತಿವೃತ್ತ ಕುರಿತು ಹರಿಹರ, ಪಾಲ್ಕುರಿಕೆ ಸೋಮನಾಥ ಭೀಮಕವಿ, ಚಾಮರಸ, ಸಿಂಗಿರಾಜ, ಲಕ್ಕಣ್ಣದಂಡೇಶ ಮುಂತಾದ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳಲ್ಲಿ ನಿರೂಪಿಸಿದ್ದಾರೆ. ಅವರನ್ನು ಧಾರ್ಮಿಕ ಮಹಾಪುರುಷ, ಸಮಾಜಸುಧಾರಕ, ಪವಾಡಪುರುಷ, ಮಾನವತಾವಾದಿ ಆರ್ಥಿಕತಜ್ಞ, ರಾಜಕೀಯ ತಜ್ಞ ಎಂದೆಲ್ಲ ಅರ್ಥೈಸಲು ಪ್ರಯತ್ನಿಸಿದ್ದುಂಟು. ಆಧುನಿಕ ಸಾಹಿತ್ಯದಲ್ಲಿ ಅದರಲ್ಲೂ ನಾಟಕ, ಕಾದಂಬರಿಗಳಲ್ಲಿ ಅವರ ವ್ಯಕ್ತಿಚಿತ್ರವನ್ನು ಕಡೆದಿರಿಸಲು ಬಿ. ಪುಟ್ಟಸ್ವಾಮಯ್ಯ, ತಿಪ್ಪೇರುದ್ರಸ್ವಾಮಿ, ಪಿ. ಲಂಕೇಶ, ಎಚ್.ಎಸ್. ಶಿವಪ್ರಕಾಶ ಮುಂತಾದವರು ಯತ್ನಿಸಿದ್ದಾರೆ. ಇಂದಿಗೂ ಅವರ ಚರಿತ್ರೆಯನ್ನು ಕುರಿತು ಸಾಹಿತ್ಯ ರಚನೆ ನಿರಂತರವಾಗಿ ನಡೆದಿರುವುದನ್ನು ಗುರುತಿಸುವೆವು. ಅವರ ತಂದೆ–ತಾಯಿ, ಊರು, ಧರ್ಮ–ಕಾಯಕ ಸಾಧನೆ, ಜೀವಮಾನದ ಅವಧಿ ಕುರಿತಾಗಿ ವಿವಿಧ ವಿದ್ವಾಂಸರು ನಡೆಸಿದ ಸಂಶೋಧನಾ ಬರಹಗಳು ಕನ್ನಡದಲ್ಲಿ ವಿಪುಲವಾಗಿ ಬಂದಿವೆ. ಅವರನ್ನು ಕುರಿತು ಬಂದ ಬರಹಗಳೆಲ್ಲವೂ ವಿವಿಧ ವಿದ್ವಾಂಸರು ಅವರನ್ನು ವಿವಿಧ ದೃಷ್ಟಿಕೋನಗಳಿಂದ ಕಂಡು ಬರೆದಂಥವು ಐತಿಹಾಸಿಕ ದಾಖಲೆಗಳ, ಶಾಸನಗಳ, ಸತ್ಯದ ತಳಹದಿಯನ್ನು ಆಧರಿಸಿ ಬರೆದಂಥ ಬರಹಗಳು ಬಹುಕಾಲ ನಿಲ್ಲುವವು. ಸತ್ಯದ ತಳಹದಿಯಿಲ್ಲದೆ, ಕೇವಲ ಊಹೆ ಕಲ್ಪನೆಗಳನ್ನು ಆಧರಿಸಿ ಬರೆದ ಬರಹಗಳು ಗಾಳಿಗೆ ಹಾರಿಹೋಗುವವು. ಇಂಥ ಬರಹಗಳಿಗೆ ಕಾಲವೇ ಉತ್ತರಿಸುವುದು. ಜನಸಮ್ಮುಖವಲ್ಲದ, ಅಸತ್ಯದಿಂದ, ಕಲ್ಪನೆಗಳಿಂದ ಕೂಡಿದ ಬರಹಗಳು ಇತಿಹಾಸದ ಚಕ್ರಕ್ಕೆ ಸಿಕ್ಕಿ ನುಚ್ಚು ನೂರಾಗುವವು. ಆಕರಗಳ ಆಧಾರದಿಂದ, ಸತ್ಯಾಂಶಗಳಿಂದ ಕೂಡಿದ ಬರಹಗಳು ಕಾಲದಿಂದ

ಕಾಲಕ್ಕೆ ಸಾಗಿ ಬರುವವು. ಈ ಮಾತುಗಳ ಹಿನ್ನೆಲೆಯಲ್ಲಿ ಬಸವಣ್ಣನವರನ್ನು ಕುರಿತು ಕನ್ನಡದಲ್ಲಿ ಬಂದ ಶ್ರೇಷ್ಠ ಸಂಶೋಧನಾ ಲೇಖನಗಳನ್ನು ಪ್ರಸ್ತುತ ಬಸವಣ್ಣದಲ್ಲಿ ಸಂಕಲಿಸಲಾಗಿದೆ. ಇಲ್ಲಿನ ಲೇಖನಗಳ ಕರ್ತೃಗಳು ಬಸವಣ್ಣನವರ ಇತಿವೃತ್ತ, ಸಾಧನೆ, ವಚನ ಸಾಹಿತ್ಯವನ್ನೆಲ್ಲ ಆಮೂಲಾಗ್ರವಾಗಿ ಅಧ್ಯಯನ ಮಾಡಿದವರು.

ಬಸವಣ್ಣದಲ್ಲಿ ಇಪ್ಪತ್ತೆಂಟು ಲೇಖನಗಳನ್ನು ಸಂಕಲಿಸಲಾಗಿದೆ. ಈ ಎಲ್ಲ ಲೇಖನಗಳು ನೇರವಾಗಿ ಬಸವಣ್ಣನವರನ್ನೇ ಕುರಿತಂಥವು. ಆಳವಾದ ಸಂಶೋಧನಾಧ್ಯಯನದಿಂದ ರೂಪುಗೊಂಡಂಥವು. ಬಸವಣ್ಣನವರ ವ್ಯಕ್ತಿತ್ವದ ಹಲವು ಆಯಾಮಗಳನ್ನು ಕುರಿತು ರಚನೆಗೊಂಡ ಇಲ್ಲಿನ ಲೇಖನಗಳು 'ಬಸವಪ್ರಜ್ಞೆ'ಯನ್ನು ಜನತೆಯಲ್ಲಿ ಮೂಡಿಸುವ ದಿಸೆಯಲ್ಲಿ ಪರಿಣಾಮಕಾರಿಯಾಗಿವೆ. ಅವರ ವ್ಯಕ್ತಿತ್ವ, ಕರ್ತೃತ್ವ ಶಕ್ತಿಯ ಮೇಲೆ ಹೊಸಬೆಳಕು ಬೀರುವ ಈ ಲೇಖನಗಳು ಗಮನಾರ್ಹವಾಗಿವೆ. ಇಲ್ಲಿನ ಯಾವ ಲೇಖನಗಳೂ ಕಲ್ಪನೆಗಳಿಂದ ಕೂಡಿಲ್ಲ, ಪ್ರಚಾರದ ಉದ್ದೇಶಹೊಂದಿಲ್ಲ, ಪರಿಚಯಾತ್ಮಕವೂ ಆಗಿಲ್ಲ ಹಾಗೂ ಯಾವುದೇ ವಿವಾದವನ್ನು ಹುಟ್ಟು ಹಾಕುವುದಿಲ್ಲವೆಂಬುದನ್ನು ಅರಿಯುವೆವು. ಬಸವಣ್ಣನವರ ಹುಟ್ಟಿನ ಬಗ್ಗೆ, ತಾಯಿ-ತಂದೆ ಪೂರ್ವಜರ ಬಗ್ಗೆ ಇದ್ದ ಊಹಾಪೋಹಗಳಿಗೆ ತೆರೆ ಎಳೆಯುವ ರೀತಿಯಲ್ಲಿರುವ ಡಾ. ಬಿ.ಆರ್. ಹಿರೇಮಠರ 'ಶಾಸನಗಳಲ್ಲಿ ಬಸವಣ್ಣನವರು ಹಾಗೂ ಅವರ ಪೂರ್ವಜರು -ವಂಶಜರು' ಎಂಬ ಲೇಖನವನ್ನಿಲ್ಲಿ ಅಳವಡಿಸಲಾಗಿದೆ. ಈ ಲೇಖನದಲ್ಲಿ ಬಸವಣ್ಣನವರ ಪೂರ್ವಜರ, ತಂದೆ-ತಾಯಿಗಳ ಬಗ್ಗೆ ನಿಖರವಾದ, ಸಾಧಾರಪೂರ್ವಕವಾದ ಸಾಕ್ಷ್ಯಾಧಾರಗಳನ್ನು ಶಾಸನಗಳ ಮೂಲಕ ನೀಡಿದುದನ್ನು ಗುರುತಿಸುವೆವು. ಬಸವಣ್ಣನವರ ಪೂರ್ವಜರ ವಂಶಾವಳಿಯು ಅಧಿಕೃತವಾದುದನ್ನು ಸಂಶೋಧಕರೆಲ್ಲರೂ ದೃಢಪಡಿಸಿದುದನ್ನಿಲ್ಲಿ ಲೇಖಕರು ಸಾಧಾರಪೂರ್ವಕವಾಗಿ ನಿರೂಪಿಸಿದ್ದಾರೆ. ಡಾ. ಎಂ.ಎಂ. ಕಲಬುರ್ಗಿಯವರು ಬಸವಣ್ಣನವರ ಜನನದ ಉದ್ದೇಶವನ್ನು ಪ್ರಾಚೀನ ಕಾವ್ಯಗಳನ್ನಾಧರಿಸಿ ವಿನೂತನ ರೀತಿಯಲ್ಲಿ ವಿಶ್ಲೇಷಿಸಿದ್ದು ತುಂಬ ಮಹತ್ವದ್ದಾಗಿದೆ. ಬಸವಣ್ಣನವರನ್ನು ಅವರ ಸಮಕಾಲೀನ ಶರಣರು ಕಂಡ ಬಗೆಯನ್ನು ಸಾಧಾರವಾಗಿ ನಿರೂಪಿಸಿದುದನ್ನು ಡಾ. ವಿಜಯಶ್ರೀ ಸಬರದ ಅವರ 'ಶಿವಶರಣರ ದೃಷ್ಟಿಯಲ್ಲಿ ಬಸವಣ್ಣ' ಎಂಬ ಲೇಖನದಲ್ಲಿ ಕಾಣುವೆವು. ಬಸವಣ್ಣನವರ ಬದುಕಿನುದ್ದಕ್ಕೂ ಕಾಣಬರುವ ಅತೃಪ್ತಿ, ನಿರಾಕರಣೆ ಮತ್ತು ಅನ್ವೇಷಣೆ ಈ ಮೂರು ಲಕ್ಷಣಗಳನ್ನು ಡಾ. ಎಂ. ಚಿದಾನಂದ ಮೂರ್ತಿಯವರು ತಮ್ಮ 'ಬಸವಣ್ಣ; ಮೂರು ಮುಖ್ಯ ಲಕ್ಷಣಗಳ ಸಂಗಮ' ಎಂಬ ಲೇಖನದಲ್ಲಿ ಚೆನ್ನಾಗಿ ಗುರುತಿಸಿದ್ದಾರೆ. ಬಸವಣ್ಣನವರ ವ್ಯಕ್ತಿತ್ವದ ಮೇಲೆ ಹೊಸಬೆಳಕು ಚೆಲ್ಲುವ ಈ ಲೇಖನ ಮೌಲಿಕವಾದುದಾಗಿದೆ. ಬಸವಣ್ಣನವರ ವ್ಯಕ್ತಿತ್ವದಲ್ಲಿ ಅರಿವು-ಆಚಾರ ಹಾಗೂ ಅನುಭಾವ ಸಮರಸಗೊಂಡುದನ್ನು ಬಿ. ಮಹಾದೇವಪ್ಪನವರು 'ಅರಿವು-ಆಚಾರ ಅನುಭಾವ ಬಸವಣ್ಣನವರಲ್ಲಿ' ಎಂಬ ಲೇಖನದಲ್ಲಿ ಸಾಧಾರಪೂರ್ವಕವಾಗಿ ನಿರೂಪಿಸಿರುವರು. 'ಬಸವಣ್ಣನವರು ಮತ್ತು ರಾಜತ್ವ'ವೆಂಬ ಡಾ. ಜಿ.ಎಸ್. ಶಿವರುದ್ರಪ್ಪನವರ ಲೇಖನದಲ್ಲಿ ಬಸವಣ್ಣನವರ ವ್ಯಕ್ತಿತ್ವದ ವಿರಾಟ್ ರೂಪದರ್ಶನವನ್ನು ಕಾಣುವೆವು-ಬಸವಣ್ಣನವರು ನ್ಯಾಯನಿಷ್ಠುರಿ ದಾಕ್ಷಿಣ್ಯ ಪರರಲ್ಲರೆಂಬುದನ್ನೂ, ರಾಜನ ಹಿಂಬಾಲಕರಲ್ಲವೆಂಬುದನ್ನೂ ಈ ಲೇಖನ ತಿಳಿಸುವುದರ ಜೊತೆಗೆ ಅವರು ನಡೆಸಿದ ಸಮಾಜೋಧಾರ್ಮಿಕ ಆಂದೋಳನವನ್ನು ಪರಿಣಾಮಕಾರಿಯಾಗಿ ನಿರೂಪಿಸಿದೆ.

'ಬಸವಪ್ರಜ್ಞೆ'ಯೆಂಬ ಲೇಖನ ಶ್ರೀ ರಂಜಾನ್ ದರ್ಗಾ ಅವರದು. ಬಸವಪ್ರಜ್ಞೆ ನಮ್ಮೆಲ್ಲರಲ್ಲಿ ಇಂದು ಜಾಗ್ರತವಾಗಬೇಕಿದೆ. ಜಗತ್ತಿನ ನಾನಾ ಸಮಸ್ಯೆಗಳಿಗೆ ಬಸವನ ಬಗೆಗಿನ ಅರಿವು ಪರಿಹಾರವನ್ನು ಸೂಚಿಸಬಲ್ಲುದು. ಬಸವಣ್ಣನವರ ವಚನಗಳಲ್ಲಿ ವ್ಯಕ್ತಗೊಂಡ ಕಾಯಕ, ಪ್ರಸಾದ, ಜಂಗಮ ಮುಂತಾದ ತತ್ವಗಳನ್ನಿಲ್ಲಿ ವಿವರಿಸಿದೆ. ಜೊತೆಗೆ ಬಸವಪ್ರಜ್ಞೆ ವಿನೂತನ ಸಮಾಜದ ಸೃಷ್ಟಿಗೆ ಕಾರಣವಾಗಬಲ್ಲುದೆಂಬುದನ್ನಿಲ್ಲಿ ನಿರೂಪಿಸಿದ್ದು ಚೇತೋಹಾರಿಯಾಗಿದೆ. ಬಸವಣ್ಣನವರ ಕಾಯಕತತ್ವ, ಅವರ ಅನುಪಮ ದಾಂಪತ್ಯ ಜೀವನ, ಹೋರಾಟದ ಬದುಕು, ಸ್ತ್ರೀಯರ ಬಗೆಗಿದ್ದ ಕಳಕಳಿ, ದಲಿತರ ಬಗೆಗಿದ್ದ ಅನುಕಂಪ, ಅವರ ಆರ್ಥಿಕ ವಿಚಾರಗಳು, ಪ್ರಸ್ತುತ ಸಾಮಾಜಿಕ ಸಂದರ್ಭಕ್ಕೆ ಹೊಂದಿಕೆಯಾಗುವ ಅವರ ವಿಚಾರಗಳು, ಅವರಲ್ಲಿರುವ ಜಾನಪದ ಪ್ರಜ್ಞೆ, ಅವರನ್ನು ಕುರಿತಿದ್ದ ಪವಾಡಗಳ ಅಂತರಾರ್ಥ, ಅವರು ನಿರ್ಮಿಸಬಯಸಿದ ಸಮಾಜ ಈ ಮುಂತಾದ ವಿಷಯಗಳನ್ನೊಳಗೊಂಡ ವಿವಿಧ ವಿದ್ವಾಂಸರ ಲೇಖನಗಳು ತುಂಬ ಮೌಲಿಕವಾದುವೂ, ಸಂಶೋಧನಾತ್ಮಕವಾದುವೂ ಆಗಿವೆಯೆನ್ನುವಲ್ಲಿ ಎರಡು ಮಾತಿಲ್ಲ. ಇವೆಲ್ಲ ಬಸವಣ್ಣನವರ ವ್ಯಕ್ತಿತ್ವದ ಹಲವು ಮಗ್ಗುಲಗಳನ್ನು ಅವರ ಸಾಹಿತ್ಯದ ಸತ್ವವನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿವೆ.

ಬಸವಣ್ಣನವರ ವಚನಗಳು ನಿಜಕ್ಕೂ ಕನ್ನಡದ ಉಪನಿಷತ್ತುಗಳೇ ಆಗಿವೆ. ಅವರ ವಚನಗಳೊಂದಿಗೆ ಉಪನಿಷತ್ತುಗಳನ್ನು ತುಲನಿಸಿ ಬರೆದ ಡಾ.ಎಂ.ಎನ್.ವಾಲಿ ಅವರ ಲೇಖನ ವಿನೂತನವಾದುದಾಗಿದೆ. ಬಸವಣ್ಣನವರ ವಚನಗಳಲ್ಲಿ ಮನೋವೈಜ್ಞಾನಿಕ ಅಂಶಗಳಿರುವುದನ್ನು ಪ್ರೊ. ಬಿ.ಜಿ. ಅಮ್ಮಣಗಿ ಅವರು 'ಬಸವಣ್ಣನವರ ವಚನಗಳಲ್ಲಿ ಮನೋವೈಜ್ಞಾನಿಕತೆ' ಎಂಬ ಲೇಖನದಲ್ಲಿ ಗುರುತಿಸಿದ್ದು ಅವರ ಆಳವಾದ ಸಂಶೋಧನಾಧ್ಯಯನಕ್ಕೆ ಜ್ವಲಂತ ನಿದರ್ಶನವಾಗಿದೆ. ಬಸವಣ್ಣನವರ ವಚನಗಳಲ್ಲಿ ವ್ಯಕ್ತಗೊಂಡ ಕಾವ್ಯಾಂಶಗಳನ್ನು ಸಾಮಾಜಿಕ ಪ್ರಜ್ಞೆಯನ್ನು ಶ್ರೀ ಚೆನ್ನವೀರ ಕಣವಿ ಅವರು ಹಾಗೂ ಡಾ. ಸಿ. ನಾಗಭೂಷಣ ಅವರು ತಮ್ಮ ಲೇಖನಗಳಲ್ಲಿ ಸಾಧಾರಪೂರ್ವಕವಾಗಿ ನಿರೂಪಿಸಿದ್ದು ಸ್ವಾಗತಾರ್ಹವೆನ್ನಿಸಿದೆ. ಬಸವಣ್ಣನವರ ವಚನಗಳಿಗೆ ಬರೆದ ಟೀಕೆಗಳು, ಅವರ ಕಾಲಜ್ಞಾನ ಸಾಹಿತ್ಯ ಹಾಗೂ ಅವರ ಸ್ವರವಚನಸಾಹಿತ್ಯ ಕುರಿತಾಗಿ ಬರೆದ ಮೌಲಿಕ ಬರಹಗಳನ್ನಿಲ್ಲಿ ಸಮಾವೇಶಗೊಳಿಸಿದೆ. ಬಸವಣ್ಣನವರು ನಿರ್ಮಿಸಬಯಸಿದ ಸಮಾಜ ಹಾಗೂ ಅವರ ಮಾನವತಾವಾದ ಕುರಿತ ಲೇಖನಗಳೂ ಮೌಲಿಕವಾಗಿದ್ದು ಅವನ್ನಿಲ್ಲಿ ಸಂಕಲಿಸಿದೆ. ಜಾತಿವಿನಾಶಕ್ಕಾಗಿ ಹೋರಾಟ ನಡೆಸಿದ, ಸಮಾನತೆಯನ್ನು ಅಂದಿನ ಸಮಾಜದಲ್ಲಿ ತರಲು ಹೆಣಗಿದ ಬಸವಣ್ಣನವರ ಪ್ರಗತಿಪರ ವಿಚಾರಗಳನ್ನಿಲ್ಲಿ ಪ್ರೊ. ಸಿ.ಪಿ. ಸಿದ್ಧಾಶ್ರಮ ಅವರು ನಿರೂಪಿಸಿದ್ದು ಸಮಂಜಸವಾಗಿದೆ.

ಇಲ್ಲಿನ ಎಲ್ಲ ಲೇಖನಗಳೂ ವಿಶೇಷವಾದ ಪರಿಶ್ರಮದಿಂದ ವಿದ್ವಾಂಸರು–ಸಂಶೋಧಕರು ಸಿದ್ಧಪಡಿಸಿದಂಥವು. ಬಸವಣ್ಣನವರನ್ನು ಅರ್ಥೈಸುವಲ್ಲಿ, ಅವರ ವ್ಯಕ್ತಿತ್ವವನ್ನು ವಿರಾಟ್ ರೂಪದಲ್ಲಿ ದರ್ಶಿಸುವಲ್ಲಿ ಅವರ ಸಾಹಿತ್ಯದ ಮೌಲಿಕತೆಯನ್ನು ತಿಳಿಸುವಲ್ಲಿ ಇಲ್ಲಿನ ಲೇಖನಗಳು ಮಹತ್ವದ ಪಾತ್ರವಹಿಸಿವೆ. ಬಸವಣ್ಣನವರ ಮಾನವತಾವಾದ, ದಲಿತಪ್ರಜ್ಞೆ, ಕಾಯಕತತ್ವ, ಪ್ರಸಾದತತ್ವ ಪ್ರಗತಿಪರ ವಿಚಾರಧಾರೆ, ಆರ್ಥಿಕ–ರಾಜಕೀಯ ಧೋರಣೆ, ಸಮಾಜೋ–ಧಾರ್ಮಿಕ ಚಿಂತನೆ ಮುಂತಾದುವನ್ನು ತಿಳಿಸುವಲ್ಲಿ ಇಲ್ಲಿನ ಲೇಖನಗಳು ತುಂಬ ಸಾರ್ಥಕವೆನ್ನಿಸಿವೆ. 'ಬಸವಣ್ಣತನ'ವನ್ನು ಸಮಗ್ರವಾಗಿ ಪರಿಚಯಿಸುವಲ್ಲಿ ಇಲ್ಲಿನ

ಲೇಖನಗಳ ಪಾತ್ರ ತುಂಬ ಮಹತ್ವದ್ದಾಗಿದೆಯೆನ್ನುವಲ್ಲಿ ಎರಡು ಮಾತಿಲ್ಲ. ಬಸವಣ್ಣನವರನ್ನು ಕುರಿತು ವಿಭಿನ್ನ ಧೋರಣೆ–ದೃಷ್ಟಿಯನ್ನಿರಿಸಿಕೊಂಡು ಬರೆದ ಬರಹಗಳು ಬರುತ್ತಿರುವ ಈ ಸಂದರ್ಭದಲ್ಲಿ ಪ್ರಸ್ತುತ 'ಬಸವಣ್ಣ' ಗ್ರಂಥ ತುಂಬ ಮೌಲಿಕವಾದುದೂ ಮಾರ್ಗದರ್ಶಿಯಾದುದೂ ಆಗಿದೆ. ಬಸವಣ್ಣನವರ ಇತಿವೃತ್ತ ಹಾಗೂ ಅವರ ಸಾಹಿತ್ಯಕ, ಸಮಾಜೋ–ಧಾರ್ಮಿಕ–ಸಾಧನೆಗಳನ್ನು ಇಲ್ಲಿನ ಲೇಖನಗಳು ಸಮರ್ಥವಾಗಿ ಒಳಗೊಂಡಿವೆ. ಇದರ ಪ್ರಯೋಜನವನ್ನು ಸಹೃದಯರು ಪಡೆಯಲೆಂದು ಆಶಿಸುವೆ.

■ **ಡಾ. ವ್ಹಿ.ಜಿ. ಪೂಜಾರ**
ಸಂಪಾದಕರು.

ಪರಿವಿಡಿ

ಅನುಬಂಧ

ಶಾಸನಗಳಲ್ಲಿ ಬಸವಣ್ಣನವರು ಹಾಗೂ ಅವರ ಪೂರ್ವಜರು–ವಂಶಜರು

●

ಡಾ. ಬಿ.ಆರ್. ಹಿರೇಮಠ

ಬಸವಣ್ಣನವರು:

ಬಸವಣ್ಣನವರು ತಮ್ಮ ಜೀವಿತಕಾಲದಲ್ಲಿ ಯಾವುದೇ ಶಾಸನವನ್ನು ಬರೆಯಿಸಿಕೊಳ್ಳಲಿಲ್ಲ. ಇನ್ನೊಬ್ಬರಿಗೆ ಶಾಸನವನ್ನು ಹಾಕಿಸಿಕೊಡಲಿಲ್ಲ. ಕಳಚುರಿ ಬಿಜ್ಜಳನ ದಂಡನಾಯಕನಾಗಿದ್ದ, ರಾಜನ ಆಸ್ಥಾನದಲ್ಲಿ ಪ್ರಮುಖ ಹುದ್ದೆಯನ್ನು ಅಲಂಕರಿಸಿದ್ದ, ಅತ್ಯಂತ ಪ್ರಭಾವಿ ವ್ಯಕ್ತಿಯೆನಿಸಿದ್ದ ಬಸವಣ್ಣನವರಿಗೆ ತಮ್ಮ ಹೆಸರಿನಲ್ಲಿ ಶಾಸನ ಬರೆಯಿಸಿಕೊಳ್ಳುವುದಾಗಲೀ, ಬೇರೆಯವರಿಗೆ ಹಾಕಿಸಿಕೊಡುವುದಾಗಲೀ ಅಸಾಧ್ಯದ ಕಾರ್ಯವೇನೂ ಆಗಿರಲಿಲ್ಲ. ಒಂದು ವೇಳೆ ಬಸವಣ್ಣನವರು ಶಾಸನ ಬರೆಯಿಸಿಕೊಂಡಿದ್ದರೆ 'ಶರಣ ಸಂವಿಧಾನ'ಕ್ಕೆ, 'ಬಸವತತ್ವ'ಕ್ಕೆ ವಿರೋಧವೆನಿಸುತ್ತಿದ್ದಿತು.

> **"ಹತ್ತು ಮತ್ತರ ಭೂಮಿ, ಬತ್ತದ ಹಯನು**
> **ನಂದಾದೀವಿಗೆಯ ನಡೆಸಿಹೆವೆಂಬವರ**
> **ಮುಖವ ನೋಡಲಾಗದು, ನುಡಿಯ ಕೇಳಲಾಗದು."**

ಎಂದು ಹೇಳಿದ ಬಸವಣ್ಣನವರು ತತ್ವಬದ್ಧರಾಗಿ, 'ಶರಣ ಸಂವಿಧಾನ' ನಿಷ್ಠರಾಗಿ ತಮ್ಮ ಜೀವಿತಾವಧಿಯಲ್ಲಿ ಯಾವ ಶಾಸನವನ್ನೂ ತಮಗಾಗಿ ಬರೆಯಿಸಿಕೊಳ್ಳಲಿಲ್ಲ. ಹೀಗಾಗಿ ಕೆಲವುವಿದ್ವಾಂಸರು–ಸಂಶೋಧಕರು ಬಸವಣ್ಣನವರ ಐತಿಹಾಸಿಕತೆಯನ್ನು ಪ್ರಶ್ನಿಸುವ, ಸಂದೇಹಿಸುವ ಹಾಗೂ ಕೆದಕುವ ವಿಫಲ ಪ್ರಯತ್ನವನ್ನು ನಡೆಸುವಂತಾಯಿತು.

ಬಸವಣ್ಣನವರನ್ನು ಕುರಿತು ಇಲ್ಲಿಯವರೆಗೆ ಹಿರಿಯೂರ ಅರ್ಜುನವಾಡ, ಚೌಡದಾನಪುರ(೨), ಕಲ್ಲೇದೇವರಪುರ, ಮರಡಿಪುರ ಕವಿಳಾಸಪುರ, ಗುಡಿಹಾಳಕುಂಟೋಜಿ, ಆನಂದಪುರ, ಜೋಡಿ ದಾಸೇನಹಳ್ಳಿ, ಕಾನಕಾನಹಳ್ಳಿ (೨), ಬೆಟ್ಟದಪುರ–ಹೀಗೆ ೧೨ ಅಧಿಕೃತ ಶಾಸನಗಳು ಲಭಿಸಿರುತ್ತವೆ. ಈ ಎಲ್ಲಾ ಶಿಲಾ–ತಾಮ್ರ ಶಾಸನಗಳೂ ಬಸವಣ್ಣನವರ ಲಿಂಗೈಕ್ಯದ ತರುವಾಯವೇ ರಚಿತವಾದವುಗಳಾಗಿರುತ್ತವೆ. ಈ ಎಲ್ಲ ಶಾಸನಗಳು ಬಸವಣ್ಣನವರನ್ನು ಕುರಿತು ಒದಗಿಸುವ ವಿವರಗಳನ್ನು ಒಂದೊಂದಾಗಿ ಹೀಗೆ ವಿವೇಚಿಸಬಹುದಾಗಿದೆ.

ಕ್ರಿ.ಶ. ೧೨೫೫ರ ಹಿರಿಯೂರ ಶಾಸನದ

ಸಿರಿಯಾಳ್ವಂ ಬಸವಯ್ಯನೊಳ್ಪೆಸೆವ.... ಮಂ ಬಾಣನುಂ
ದರಭೋಗಂ ಸಲೆ ಚೋಳನುದ್ಭಟತರ್ಕ್ಯಂ ಸಿಂಧುಬಲ್ಲಾಳನೀ
ಧರೆ ಕೊಂಡಾಡುವ ದಾಸಿಮಯ್ಯನೆನಿಸಿರ್ದೀ ಭಕ್ತ ಸಂದೋಹವಾ
ದರದಿಂ ಕಾಕರ ಕಂಡನಂಬಿ ನಿನಗೀಗುದ್ಬೋಧ ಸಂಪತ್ತಿಯಂ ॥

ಎಂಬ ಪದ್ಯದಲ್ಲಿ ಸಿರಿಯಾಳ ಮೊದಲಾದ ಪುರಾತನ ಶಿವಭಕ್ತರ ಜೊತೆಯಲ್ಲಿ ಬಸವಣ್ಣನವರನ್ನು ಹೆಸರಿಸಲಾಗಿದೆ. ಇಲ್ಲಿ ಬಸವಣ್ಣನವರನ್ನು "ಬಸವಯ್ಯ" ಎಂದು ಸಂಬೋಧಿಸಲಾಗಿದೆ. ಇದಲ್ಲದೆ ಈ ಶಾಸನಪದ್ಯದಲ್ಲಿಯ "ಭಕ್ತ ಸಂದೋಹ" ಪದ, ಬಸವಣ್ಣನವರ ಭಕ್ತಿಮಾರ್ಗವನ್ನು ಸೂಚಿಸುತ್ತಿದೆ.

ಕ್ರಿ.ಶ. ೧೨೬೦ರ ಅರ್ಜುನವಾಡ ಶಾಸನ ಬಸವಣ್ಣನವರ ಚರಿತ್ರೆಯ ಮೇಲೆ ಪ್ರಥಮಬಾರಿಗೆ ಹೊಸಬೆಳಕು ಚೆಲ್ಲಿದ ಅತ್ಯಂತ ಮಹತ್ವಪೂರ್ಣ ಶಾಸನ ಎನಿಸಿದೆ. ಈ ಶಾಸನ ಶೋಧದಿಂದ ಬಸವಣ್ಣನವರ ಬಗೆಗಿನ ಹಲವಾರು ಸಂದೇಹ–ಸಮಸ್ಯೆಗಳಿಗೆ ಸಮರ್ಪಕ ಚಾರಿತ್ರಿಕ ಸತ್ಯದ ಉತ್ತರ ದೊರಕಿದಂತಾಗಿದೆ.

ಬಸವಣ್ಣನವರ ತಂದೆ ಮತ್ತು ಅವರ ಜನ್ಮಸ್ಥಳ, ವಾಸಸ್ಥಳವನ್ನು ಕುರಿತು ಸಂದೇಹಿಸುತ್ತಿದ್ದವರಿಗೆ "ಮುತ್ತಂ ತಥವಾಡಿ ಮಧ್ಯಗ್ರಾಮಂ ಬಾಗವಾಡೀ ಪುರವರಾಧೀಸ್ವರಂ ಮಾದಿರಾಜನ ತನೂಜಂ ಬಸವರಾಜ" ಎಂಬ ಈ ಶಾಸನದ ವಾಕ್ಯ ಸರಿಯಾದ, ವಸ್ತುನಿಷ್ಠವಾದ ಉತ್ತರವನ್ನು ನೀಡಿದೆ. ಬಸವಣ್ಣನವರ ಜನ್ಮಸ್ಥಳ–ವಾಸಸ್ಥಳ ಎನಿಸಿದ್ದ ಬಾಗೇವಾಡಿ ಎಂದರೆ ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅರ್ಜುನವಾಡ ಶಾಸನದ

ಮಂಗಳಕೀರ್ತಿ ಪುರಾತನ
ಜಂಗಮ ಲಿಂಗೈಕ ಭಕ್ತಿ ನಿರ್ಭರ ಲೀಲಾ
ಸಂಗಂ ಸಂಗನಬಸವಂ
ಸಂಗತಿಯಂ ಮಾಳ್ಕೆ ಭಕ್ತಿಯೊಳನವರತಂ ॥

ಎಂಬ ಈ ಕಂದಪದ್ಯ ಬಸವಣ್ಣನವರ ಧವಳ ವ್ಯಕ್ತಿತ್ವದ ವಿವಿಧ ಮುಖಗಳನ್ನು ಪರಿಚಯಿಸುತ್ತದೆ. ಇಲ್ಲಿ ಬಸವಣ್ಣನವರ ಪುರಾತನರ ಜಂಗಮಭಕ್ತಿ ಹಾಗೂ ಲಿಂಗಭಕ್ತಿಗಳನ್ನು, ಅವರ ಕೀರ್ತಿ ಮಂಗಳಕರ ಆಗಿದ್ದುದನ್ನು ಎತ್ತಿ ಹೇಳಲಾಗಿದೆ. ಇದಲ್ಲದೆ ಇದೇ ಶಾಸನದ ಗದ್ಯಭಾಗದಲ್ಲಿ "ತೇಸಠ್ಠಿ (ತ್ರಿಷಷ್ಟಿ) ಪುರಾತನ ಪಾದಾರ್ಚಕರುಂ ಮಹಾಲಿಂಗಜಂಗಮ ಪ್ರಸಾದನಿಯತರುಂ ಸಮಯಭಕ್ತಿ ಸಂಪನ್ನರುಂ" ಎಂದು ಬಸವಣ್ಣನವರನ್ನು ಕರೆಯಲಾಗಿದೆ. ಹೀಗೆ ಅಜುರ್ನವಾಡ ಶಾಸನ, ಬಸವಣ್ಣನವರು ಪುರಾತನ ಶಿವಭಕ್ತರಲ್ಲಿ ಹೊಂದಿದ್ದ ಭಕ್ತಿಯನ್ನು, ಅವರು ಆಚರಿಸುತ್ತಿದ್ದ ಲಿಂಗ–ಜಂಗಮ ನಿಷ್ಠೆಯನ್ನು, ಪಡೆದಿದ್ದ ಪ್ರಸಾದ ಸಿದ್ಧಿಯನ್ನು, ನೆರವೇರಿಸಿದ ಸಮಯ ಭಕ್ತಿಯನ್ನು ಇಲ್ಲಿ ಖಚಿತವಾಗಿ ದಾಖಲಿಸಿರುತ್ತದೆ. ಇದಲ್ಲದೆ ಬಸವಣ್ಣನವರನ್ನು ಈ ಶಾಸನ ಸಂಗನಬಸವ, ಬಸವರಾಜ ಎಂದು ಕರೆದಿರುತ್ತದೆ. ಬಸವಣ್ಣನವರ ಚಾರಿತ್ರಿಕ ವಿವರಗಳನ್ನು ನೀಡುವ ಅರ್ಜುನವಾಡ ಶಾಸನಕ್ಕೆ ವಿಶೇಷ ಮಹತ್ವವಿದೆ.

ಕ್ರಿ.ಶ. ೧೨೯೦ರ ಚೌಡದಾನಪುರ ಶಾಸನವು ಬಸವಣ್ಣನವರು ನಂದಿನಾಥನ ಅವತಾರವೆಂದೂ ಸಂಗಮೇಶನ ಪುತ್ರರೆಂದೂ ಹೇಳುತ್ತದೆ. ವೇದ–ಶಾಸ್ತ್ರಗಳಿಗೆ ಅತೀತವಾದ ಭಕ್ತಿಯ ಪ್ರಸಾದವನ್ನು ಭೂಲೋಕದಲ್ಲಿ ಬಿತ್ತರಿಸುವುದಕ್ಕಾಗಿ ನಂದಿನಾಥ ಗಣಾಧೀಶ್ವರನು "ಸಂಗಮೇಶನ ಪುತ್ರಂ ಬಸವಯ್ಯ"ನಾಗಿ ಅವತರಿಸಿದ ರೀತಿಯಲ್ಲಿ ಶಿವನು ಶಿವದೇವನಾಗಿ ಅವತರಿಸಿದನೆಂದು ಈ ಶಾಸನದಲ್ಲಿ ವಿವರಿಸಲಾಗಿದೆ. ಈ ಸಂಗತಿಯನ್ನು ಕಥಿಸುವ ಶಾಸನ ಪದ್ಯಗಳು ಹೀಗಿರುತ್ತವೆ:

ಆ ಉಮಾಮಹೇಶ್ವರಂ ಗಣಂಗಳಿಗೆ ಪ್ರಸಂಗನನಾಗಿಯಿಂತೆಂದಂ–
ಇದೆ ನಾಲ್ಕುಂ ವೇದಪಾರಂ ಬಗೆವಡೆ ದಿಟದಿಂ ಸರ್ವಶಾಸ್ತ್ರಾರ್ಥಪಾರಂ
ಪದಪಿಂ ಸ್ಮೃತ್ಯರ್ಥಪಾರಂ ತ್ರಿಭುವನ ಭುವನಜ್ಞಾನ ವಿಜ್ಞಾನಪಾರಂ
ಸದ್ವಾಕ್ಯಾರ್ಥಪಾರಂ ಪ್ರಣವ ಸಮುದಿತಂ ಧ್ಯಾನ ಭಾವೈಕಪಾರಂ
ವಿದಿತಂ ಶ್ರೀ ಜ್ಯೋತಿಲಿಂಗಾಮರಗಣಂ ಕರುಣೋತ್ಪನ್ನ ಭಕ್ತಿಪ್ರಸಾದಂ ॥

ಎನೆ ಕೇಳ್ದದ್ರಿಜೆ ಬಿನ್ನಪಂ ಶಿವಜಗಕ್ಕೀ ಮಾರ್ಗಮಂ ತೋರಬೇ
ಳ್ಕೆನಲಂದಾ ಪ್ರಭು ನಂದಿನಾಥನ ಮೊಗನ್ನೋಡಲ್ಕೆ ಶ್ರೀ ಸಂಗಮೇ
ಶನ ಪುತ್ರಂ ಬಸವಯ್ಯ ಬಂಕನದರಿಂ ಶಿವಮುದ್ದುದೇವಂ ಜಗ
ಕ್ಕನಿಮಿತ್ತಂ ಶಿವದೇವನಾಗಿಯು ಗಣ ಶ್ರೀಪಾದಂ ತೋರುವೆಂ ॥

ಕ್ರಿ.ಶ. ೧೨೯೩ರ ಚೌಡದಾನಪುರದ ಇನ್ನೊಂದು ಶಾಸನ, ಬಸವಣ್ಣನವರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಗುರುಸೇವೆ, ಲಿಂಗಪೂಜೆ, ಜಂಗಮದಾಸೋಹ ಹಾಗೂ ಪ್ರಸಾದಸಿದ್ಧಿಗಳನ್ನು ವಿವರಿಸುತ್ತದೆ. ಬಸವಣ್ಣನವರ ನಿತ್ಯ ಬದುಕಿನ ಈ "ಚತುರ್ವಿಧಸಾರಾಯ"ಗಳನ್ನು ವಿವರಿಸುವ ಕಂದ ಪದ್ಯಗಳು ಈ ಶಾಸನದಲ್ಲಿ ಹೀಗಿರುತ್ತವೆ:

ಲಿಂಗಕ್ಕೆ ಜಂಗಮಕ್ಕಂ
ಹಿಂಗದೆ ದಾಸತ್ವ ಮಾಳ್ಪುದೇ ಬೆಸನೆಂದಾ
ಸಂಗನಬಸವಂ ಬೆಸಸೆ ಮ
ನಂಗೊಂಡರ್ಚಿಸುವನುಭಯ ಲಿಂಗದ ಮುದದಿಂ ॥

ಮೃಡಗಣ ವರಪ್ರಸಾದಮಂ
ಪಡೆದಂ ಜಗವರಿಯಲಂದು ಸಂಗನಬಸವಂ
ಪಡೆದಾ ಪ್ರಸಾದ ಸಿದ್ಧಿಯ
ಕಡು ವೀರವ್ರತದಿ ಪಡೆದನೀ ಶಿವದೇವಂ ॥

ಈ ಶಾಸನದಲ್ಲಿ ಬಸವಣ್ಣನವರನ್ನು "ಸಂಗನಬಸವ" ಎಂದು ಕರೆಯಲಾಗಿದೆ.

ಚೇರ, ಚೋಳ, ನಂಬಿ, ಚಿಕ್ಕ, ಕಕ್ಕ, ಚೆನ್ನ, ಹೊನ್ನ, ಬಂಕ, ಭೋಜ ಮೊದಲಾದ "ಮರ್ತ್ಯಲೋಕ"ದ "ಮಹಾಗಣ"ಗಳ ಜೊತೆಯಲ್ಲಿ "ಬಸವರಾಜ" ಹೆಸರಿನಿಂದ ಬಸವಣ್ಣನವರನ್ನು ಕ್ರಿ.ಶ. ೧೨೭೮ರ ಮರಡಿಪುರ ಶಾಸನ ದಾಖಲಿಸಿದೆ. ಬಸವಾದಿ ಪ್ರಮಥರ ಆಚಾರ ಮತ್ತು ಆಚರಣೆಗಳು ೧೩ನೆಯ ಶತಮಾನದಲ್ಲಿ ಆದರ್ಶಮಯವೆನಿಸಿದ್ದುವೆಂಬ ಅಂಶ ಈ ಶಾಸನದಿಂದ ವ್ಯಕ್ತವಾಗುತ್ತದೆ.

ಕ್ರಿ.ಶ. ೧೨೮೦ರ ಮರಡಿಪುರ ಶಾಸನ, 'ಮರ್ತ್ಯಲೋಕದ ಮಹಾಗಣಂ'ಗಾದ ಸಿರಿಯಾಳ, ದಾಸ, ದಶವರ್ಮ, ಐಹಿಲ, ಉದ್ಭಟ, ನಂಬಿ ಕಂಬಾರಗುಂಡ, ಅಂಡವಲ, ಕರಿಕಾಲಚೋಳ, ಭೋಗದೇವ, ಬಾಣ, ಮಯೂರ, ಕಾಳಿದಾಸ, ಜಗದೇವ ದಣ್ಣಾಯಕ, ಏಕಾಂತದ ರಾಮಯ್ಯ, ಸುರಿಗೆಯ ಚೌಡಯ್ಯ, ಅನಿಮಿಷ ಕೇಶಿರಾಜ, ನೆಲುವಿಗೆಯ ಶಾಂತಯ್ಯರ ಹೆಸರಿನ ಮಧ್ಯದಲ್ಲಿ ಬಸವಣ್ಣನವರ ಹೆಸರನ್ನು ಉಲ್ಲೇಖಿಸುತ್ತದೆ.

ಈ ಶಾಸನದಲ್ಲಿ ಬಸವಣ್ಣನವರನ್ನು 'ಸಂಗನಬಸವ' ಎಂದು ಕರೆಯಲಾಗಿದೆ.

೧೩-೧೪ನೆಯ ಶತಮಾನದ ಕವಿಳಾಸಪುರ ಗ್ರಾಮದ ಶಾಸನ, ಬಸವಣ್ಣನವರನ್ನು "ಬಸವ ದಂಣಾಯಕ" ಎಂದು ಹೆಸರಿಸಿದೆ. ಬಸವಣ್ಣನವರನ್ನು 'ದಂಡನಾಯಕ' ಎಂದು ಕರೆದ ಪ್ರಪ್ರಥಮ ಶಾಸನ ಇದಾಗಿರುತ್ತದೆ.

೧೪ನೆಯ ಶತಮಾನದ ಗುಡಿಹಾಳ-ಕುಂಟೋಜಿ ಶಾಸನದಲ್ಲಿ ಬಸವಣ್ಣನವರನ್ನು "ಬಸವರಾಜದೇವರು" ಎಂದು ಹೆಸರಿಸಲಾಗಿದೆ.

ಕ್ರಿ.ಶ. ೧೬೬೦ರ ಆನಂದಪುರ ಸಂಸ್ಥಾನಮಠದ ತಾಮ್ರಶಾಸನದ "ಕಲ್ಯಾಣಪಟ್ಟಣದಲ್ಲಿ ನಿರಂಜನಪ್ರಭುಸ್ವಾಮಿಗಳು ತಮ್ಮ ಶೂನ್ಯ ಸಿಂಹಾಸನಕ್ಕೆ ಮುಂದೆ ಒಬ್ಬರ ಯೋಗ್ಯರ ಮಾಡಬೇಕೆಂದು ಚನ್ನಬಸವ, ಬಸವೇಶ್ವರ ಮುಂತಾದ ಪ್ರಮಥರು..." ಎಂಬ ಸಾಲುಗಳಲ್ಲಿ ಬಸವಣ್ಣನವರನ್ನು "ಬಸವೇಶ್ವರ" ಎಂದು ಉಲ್ಲೇಖಿಸಲಾಗಿದೆ.

ಕ್ರಿ.ಶ. ೧೯೮೬ರ ಜೋಡಿದಾಸೇನಹಳ್ಳಿ ಶಾಸನದ "ಕಲ್ಯಾಣ ಪಟ್ಟಣಕ್ಕೆ ವಡೆಕರ್ತರಾಗಿ ೧,೯೬,೦೦೦ ಜಂಗಮಕ್ಕೆ ದಾಸೋಹ ಮಾಡಿ ನಿಚ್ಚ ಪವಾಡವ ಮೆರೆದ ಕಪ್ಪಟಿಯ ಸಂಗನಬಸವ ರಾಜೇಂದ್ರನು" ಎಂಬ ವಿವರಗಳು ಅತ್ಯಂತ ಮಹತ್ವದವುಗಳಾಗಿರುತ್ತವೆ. ಇಲ್ಲಿ ಬಸವಣ್ಣನವರನ್ನು "ಕಪ್ಪಟಿ(ಡಿ)ಯ ಸಂಗನ ಬಸವರಾಜೇಂದ್ರ" ಎಂದು ಕರೆದಿರುವುದು ಕಪ್ಪಡಿ ಸಂಗಮನಾಥನೊಂದಿಗಿನ ಅವರ ದೈವೀ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಇದರಂತೆ ಬಸವಣ್ಣನವರು ಕಲ್ಯಾಣ ಪಟ್ಟಣಕ್ಕೆ ಪ್ರಮುಖ ವ್ಯಕ್ತಿಯಾಗಿದ್ದುದು, ಅವರು ಪ್ರತಿನಿತ್ಯ ೧,೯೬,೦೦೦ ಜಂಗಮರಿಗೆ ನಡೆಸುತ್ತಿದ್ದ ದಾಸೋಹ, ದಿನನಿತ್ಯ ಜರುಗಿಸುತ್ತಿದ್ದ ಪವಾಡದ ವಿವರಗಳು ಶಾಸನಸ್ಥವಾಗಿರುತ್ತವೆ. ಈ ಘಟನೆಗಳ ಚಾರಿತ್ರಿಕತೆಗೆ ಶಾಸನ ಸಾಕ್ಷಿಯಾಗಿ ನಿಂತಿದೆ.

ಕ್ರಿ.ಶ. ೧೭೦೦ರ ಕಾನಕಾನಹಳ್ಳಿಯ ಎರಡು ಶಾಸನಗಳು ಬಸವಣ್ಣನವರನ್ನು ಕ್ರಮವಾಗಿ "ಕಲ್ಯಾಣ ಪಟ್ಣಮಂದು ಬಸವೇಶ್ವರ ಸ್ವಾಮುಲು", "ಕಲ್ಯಾಣದ ಬಸವಪ್ಪನವರು" ಎಂದು ಕರೆದಿರುತ್ತವೆ. ಈ ಎರಡು ಶಾಸನಗಳು ಬಸವಣ್ಣನವರ ಹೆಸರನ್ನು ಉಲ್ಲೇಖಿಸುವ ಅಂಶಕ್ಕೆ ಮಾತ್ರ ಸೀಮಿತಗೊಂಡಿರುತ್ತವೆ.

ಈ ಶಾಸನಗಳಲ್ಲದೆ ಇತ್ತೀಚೆಗೆ ನೀಲಲೋಚನೆ, ಚೆನ್ನಬಸವಣ್ಣ ಹಾಗೂ ಬಸವಣ್ಣನವರನ್ನೊಳಗೊಂಡ ಅಖಂಡಶಿಲ್ಪ ಬೆಟ್ಟದಪುರದಲ್ಲಿ ಶೋಧಗೊಂಡಿದ್ದು, ಈ ಶರಣರ 'ಶಿಲ್ಪ'ಗಳ ಕೆಳಗೆ ಅವರ ಹೆಸರುಗಳನ್ನು ಬರೆಯಲಾಗಿದೆ. ಮಹತ್ವದ ಈ ಶಿಲ್ಪ-ಶಾಸನ ಮೈಸೂರು ಅರಸರ ಕಾಲದಲ್ಲಿ ರಚಿತವಾಗಿರುತ್ತದೆ. ಇವು ನೀಲಲೋಚನೆ, ಚೆನ್ನಬಸವಣ್ಣ ಹಾಗೂ ಬಸವಣ್ಣನವರನ್ನು ಕುರಿತು ದೊರೆಯುವ ಪ್ರಪ್ರಥಮ ಹಾಗೂ ಚಾರಿತ್ರಿಕ ವಿಶೇಷತೆ ಹೊಂದಿರುವ 'ಶಿಲ್ಪ'ಗಳಾಗಿರುತ್ತವೆ.

ಈ ರೀತಿಯಾಗಿ ಈ ಶಾಸನಗಳು ಹೆಚ್ಚಾಗಿ ಬಸವಣ್ಣನವರ ಹೆಸರನ್ನು ಮಾತ್ರ

ಉಲ್ಲೇಖಿಸುತ್ತವೆ. ಇನ್ನು ಕೆಲವು ಸಲ ಅವರಿಗೆ ಸಂಬಂಧಿಸಿದ, ಅವರ ಬದುಕಿನಲ್ಲಿ ಜರುಗಿದ ಸತ್ಯ ಘಟನೆಗಳನ್ನು ದಾಖಲಿಸುತ್ತವೆ. ಈ ಎಲ್ಲ ಬಿಡಿಬಿಡಿಯಾದ ವಿವರಗಳು ಶಾಸನಗಳಲ್ಲಿ ದಾಖಲಾಗಿದ್ದು, ಬಸವಣ್ಣನವರ ಚಾರಿತ್ರಿಕತೆಗೆ ಮಹತ್ವದ ಆಧಾರಗಳಾಗಿ ಪರಿಣಮಿಸಿವೆ. ಆದುದರಿಂದ ಬಿಡಿಬಿಡಿಯಾದ ಈ ಶಾಸನೋಕ್ತ ವಿವರಗಳಿಗೆ ಚಾರಿತ್ರಿಕ ದೃಷ್ಟಿಯಿಂದ ಅತ್ಯಂತ ಉಪಯುಕ್ತರೆನಿಸಿರುತ್ತವೆ. ಅನೇಕ ಸಲ ಇವು ಸಾಹಿತ್ಯಿಕ ಆಕರಗಳಿಗೆ ಪೂರಕ ಹಾಗೂ ಪೋಷಕ ಸಂಗತಿಗಳನ್ನು ಒದಗಿಸಲು ಸಮರ್ಥವಾಗಿರುತ್ತವೆ.

ಹೀಗೆ ೧೩ನೆಯ ಶತಮಾನದಿಂದ ೧೭-೧೮ನೆಯ ಶತಮಾನದವರೆಗಿನ ಶಾಸನಗಳಲ್ಲಿ ಬಸವಣ್ಣನವರನ್ನು ಬಸವಯ್ಯ, ಬಸವರಾಜ, ಸಂಗನಬಸವ, ಸಂಗಮೇಶನ ಪುತ್ರ ಬಸವಯ್ಯ, ಸಂಗನಬಸವಯ್ಯ, ಬಸವರಾಜದೇವರು, ಬಸವೇಶ್ವರ, ಬಸವ ದಂಡನಾಯಕ, ಬಸವರಾಜೇಂದ್ರ, ಬಸವೇಶ್ವರಸ್ವಾಮಿ, ಕಲ್ಯಾಣದ ಬಸವಪ್ಪನವರು ಎಂದು ಅನೇಕ ರೀತಿಯಲ್ಲಿ ಹೆಸರಿಸಲಾಗಿದೆ. ಇದರೊಂದಿಗೆ ಬಸವಣ್ಣನವರ ಗುರುಸೇವೆ, ಲಿಂಗಪೂಜೆ, ಜಂಗಮ ದಾಸೋಹ, ಪ್ರಸಾದಸಿದ್ಧಿಗಳನ್ನು; ಅವರ ಸಮಯ ಭಕ್ತಿ, ಅವತಾರ-ಪವಾಡ ನಂಬಿಕೆಗಳನ್ನು; ನಿತ್ಯ ನಡೆಯುತ್ತಿದ್ದ ೧,೯೬,೦೦೦ ಜಂಗಮ ದಾಸೋಹವನ್ನು; ಸಮಾಜದ ಮೇಲಾದ ಬಸವಣ್ಣನವರ ಪ್ರಭಾವ-ಪರಿಣಾಮಗಳನ್ನು ಶಾಸನಗಳು ಸ್ಥೂಲವಾಗಿ ವಿವರಿಸುತ್ತವೆ. ಒಟ್ಟಿನಲ್ಲಿ ಶಾಸನಗಳಲ್ಲಿ ಬಸವಣ್ಣನವರ ಹೆಸರು ಹಾಗೂ ಅವರ ಬದುಕಿಗೆ ಸಂಬಂಧಿಸಿದ ಹಲವಾರು ಮಹತ್ವದ ವಿವರಗಳು ದಾಖಲಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಚಾರಿತ್ರಿಕವಾಗಿ ಇವು ಅತ್ಯಂತ ಬೆಲೆಯುಳ್ಳವುಗಳಾಗಿರುತ್ತವೆ.

ಪೂರ್ವಜರು :

ಬಸವಣ್ಣನವರ ತಂದೆಯವರಾದ ಮಾದಿರಾಜರು ತರ್ದವಾಡಿ ನಾಡಿನ ಮಧ್ಯವರ್ತಿ ಪ್ರದೇಶದಲ್ಲಿರುವ ಬಾಗೇವಾಡಿಯ ಪುರವರಾಧೀಶ್ವರರಾಗಿದ್ದರು. ಮಾದಿರಾಜರ ಕಾಲಕ್ಕೆ ವಿಜಾಪುರ ಜಿಲ್ಲೆಯ ಬಾಗೇವಾಡಿ ಬಸವಣ್ಣನವರ ಜನ್ಮಸ್ಥಳವೂ ದೀಕ್ಷಾಪೂರ್ವದ ಕಾರ್ಯಕ್ಷೇತ್ರವೂ ಆಗಿದ್ದಿತು. ಈ ರೀತಿಯಾಗಿ ಬಾಗೇವಾಡಿ ಗ್ರಾಮ, ಮಾದಿರಾಜ ಮತ್ತು ಬಸವಣ್ಣನವರ ವಾಸಸ್ಥಳವಾಗಿ ಪರಿಣಮಿಸಿದ್ದಿತು.

'ಮಂಡಗೆಯ ಮಾದಿರಾಜ' ಎಂಬ ಉಲ್ಲೇಖದ ಮೂಲಕ ಮಾದಿರಾಜರು ಮೂಲತಃ 'ಮಂಡಗೆ' ಯವರೆಂದು ಹೇಳಬೇಕಾಗುತ್ತದೆ. ಮಾದಿರಾಜರ ಕಾಲಕ್ಕೆ ಬಸವಣ್ಣನವರ ಪೂರ್ವಜರು. ವಿಜಾಪುರ ಜಿಲ್ಲೆಯ ಬಾಗೇವಾಡಿ ಗ್ರಾಮಕ್ಕೆ ಆಗಮಿಸಿದುದನ್ನು ಇದರ ಮೂಲಕ ಗುರುತಿಸಿ, ಹೇಳಬಹುದಾಗಿದೆ. ಮಾದಿರಾಜರ ಕಾಲಕ್ಕೆ ಬಸವಣ್ಣನವರ ಪೂರ್ವಜರು ಮಂಡಗೆಯಿಂದ ಬಾಗೇವಾಡಿಗೆ ಬಂದ ಕಾರಣಗಳು ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಆದರೂ ಅಲ್ಲಿ ಒಂದು ಊಹೆಯನ್ನು ಮಾಡಬಹುದಾಗಿದೆ. ಪಂಪನ ತಂದೆ ಭೀಮಪಯ್ಯನ ಕಾಲಕ್ಕೆ ಪಂಪನ ವಂಶಜರು ಆಂಧ್ರಪದೇಶದಿಂದ ಕರ್ನಾಟಕಕ್ಕೆ ಆಗಮಿಸಿದುದನ್ನು ಇಲ್ಲಿ ನೆನೆಯಬಹುದಾಗಿದೆ. ಪಂಪನ ಪೂರ್ವಜರು ಮೂಲತಃ 'ವೆಂಗಿಪಟು' ಗ್ರಾಮದವರು-ಮಾಧವ ಸೋಮಯಾಜಿಯ ಕಾಲಕ್ಕೆ. ಆಮೇಲೆ ಅಭಿಮಾನಚಂದ್ರನ ಕಾಲಕ್ಕೆ ಆ ಮನೆತನ ಗುಂಡಿನದಿ ತೀರದ ನಿಡಗುಂದಿಗೆ ಸ್ಥಳಾಂತರಗೊಂಡಿತು. ಇದರಂತೆ ಬಸವಣ್ಣನವರ

ಪೂರ್ವಜರು 'ಮಂಡಗೆ' ಗ್ರಾಮದಿಂದ ಬಾಗೇವಾಡಿಗೆ ಸ್ಥಳಾಂತರಗೊಂಡಿರುವುದರಲ್ಲಿ ಯಾವುದೇ ಆಶ್ಚರ್ಯವೆನಿಸುವುದಿಲ್ಲ. ಈ ಸ್ಥಳಾಂತರ ಪ್ರಕ್ರಿಯೆ ಮಾದಿರಾಜರ ಕಾಲಕ್ಕೆ ನಡೆದಿರುವ ಸಾಧ್ಯತೆಯಿದೆ. ಮಾದಿರಾಜರ ವಿವಾಹಪೂರ್ವದಲ್ಲಿ ಇದು ಜರುಗಿತೊ? ವಿವಾಹದ ನಂತರದಲ್ಲಿ ಜರುಗಿತೊ? ಅಗ್ರಹಾರದ ಆಧಿಪತ್ಯ ಇದಕ್ಕೆ ಕಾರಣವೋ? ಈ ಮೂರರಲ್ಲಿ ಯಾವುದಾದರೂ ಒಂದು ಕಾರಣವಾಗಿರಬೇಕೆನಿಸುತ್ತದೆ. ಹಾಗಾದರೆ ಮಾದಿರಾಜರು ಬಾಗೇವಾಡಿಗೆ ಆಗಮಿಸುವ ಪೂರ್ವದಲ್ಲಿ ಅವರು ಹಾಗೂ ಅವರ ಪೂರ್ವಜರು ವಾಸವಾಗಿದ್ದ ಸ್ಥಳ(ಗ್ರಾಮ) ಯಾವುದು? ಅದು ಈಗ ಎಲ್ಲಿದೆ? ಅದನ್ನು ಕಂಡು ಹಿಡಿಯಲು ಸಾಧ್ಯವಿದೆಯೇ? ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಈ ಪ್ರಶ್ನೆಗಳಿಗೆ ಪರಿಹಾರ ಪಡೆಯಲು ಈ ರೀತಿ ಪ್ರಯತ್ನಿಸಬಹುದಾಗಿದೆ.

ವೀರಶೈವ ಕಾವ್ಯ, ಪುರಾಣಗಳಲ್ಲಿ ಬಸವಣ್ಣನವರ ತಂದೆ–ಮಾದಿರಾಜರನ್ನು 'ಮಂಡಗೆಯ ಮಾದಿರಾಜ' ಎಂದೇ ಕರೆಯಲಾಗಿದೆ. ಇಲ್ಲಿ 'ಮಾದಿರಾಜ' ಎಂಬುದು ವ್ಯಕ್ತಿನಾಮ. ಈ ವ್ಯಕ್ತಿನಾಮದ ಹಿಂದಿರುವ 'ಮಂಡಗೆ' ಪದ ಏನನ್ನು ಸೂಚಿಸುತ್ತದೆಯೆಂಬುದು ವಿಚಾರಣೀಯ, ವಿವೇಚನೀಯ ಅಂಶವಾಗಿದೆ. 'ಮನಸ್ಸಿನಲ್ಲಿ ಮಂಡಗಿ ಮಾಡಿದರೆ ಗೋಧಿ ಲೆಖ್ಖ ಕೊಡುವವರಾರು' ಎಂಬ ಗಾದೆ ಮಾತು ಸುಪ್ರಸಿದ್ಧವಾಗಿದ್ದು, ಈಗಲೂ ಪ್ರಚಲಿತದಲ್ಲಿದೆ. ಇಲ್ಲಿ 'ಮಂಡಗಿ' ಎಂದರೆ ಗೋಧಿಯ ಹಿಟ್ಟಿನಿಂದ ತಯಾರಿಸಿದ ಪದಾರ್ಥ (ತಿಂಡಿ) ಎಂದಾಗುತ್ತದೆ. ಗೋಧಿಯ ಹಿಟ್ಟಿನಿಂದ ಸಿದ್ಧಪಡಿಸಿದ ಸಿಹಿತಿಂಡಿಗೆ ಈಗಲೂ ಮಂಡಗಿ ಅಥವಾ ಮಂಡಗೆ ಎಂದು ಕರೆಯುತ್ತಾರೆ. ಆದುದರಿಂದ "ಮಂಡಗೆ" ಎಂದರೆ 'ಸಿಹಿತಿಂಡಿ' ಎಂದಾಗುತ್ತದೆ. ಆದರೆ ಇದು ಸ್ವೀಕಾರಯೋಗ್ಯ ಅರ್ಥವಲ್ಲ. ಈ ಅರ್ಥವನ್ನು ಒಂದು ವೇಳೆ ಒಪ್ಪುವುದಾದರೆ ಬಸವಣ್ಣನವರ ಪೂರ್ವಜರು 'ಮಂಡಗೆ' ವೃತ್ತಿಯವರೆಂದು ಹೇಳಬೇಕಾಗುತ್ತದೆ. ಇದು ಸಮರ್ಪಕವಾದ ಅರ್ಥವಲ್ಲ. ಆದುದರಿಂದ 'ಮಂಡಗೆ' ಪದಕ್ಕೆ ಇನ್ನೂ ಬೇರೆಯಾದ ಅರ್ಥವಿರುವ ಸಾಧ್ಯತೆಗಳಿರುತ್ತವೆ. ಬಸವಣ್ಣನವರ ಸಮಕಾಲೀನ ಶಿವಶರಣ ಹಾಗೂ ವಚನಕಾರ ಘಟ್ಟಿವಾಳಯ್ಯನ ವಚನವೊಂದರಲ್ಲಿ 'ಮಂಡಗೆ'ಪದ ಪ್ರಯೋಗವಾಗಿದ್ದು, ಅದು ಗ್ರಾಮನಾಮಸೂಚಿಯಾಗಿರುವುದು ವ್ಯಕ್ತವಾಗುತ್ತದೆ. 'ಮಂಡಗೆ' ಪದ ಪ್ರಯೋಗವಾದ ಘಟ್ಟಿವಾಳಯ್ಯನ ವಚನ ಹೀಗಿದೆ:

ಕರವೂರ ನಿರಹಂಕಾರ ಸುಜ್ಞಾನಿದೇವಿಯರ
ಬಸುರಲ್ಲಿ ಬಂದರೆನ್ನಬಹುದೆ ಪ್ರಭುದೇವರ?
ಮಂಡಗೆಯ ಮಾದಿರಾಜ ಮಾದಾಂಬಿಕೆಯಮ್ಮನವರ
ಬಸುರಲ್ಲಿ ಬಂದರೆನ್ನಬಹುದೆ ಬಸವೇಶ್ವರನ?
(ಶಿವಸ್ವಾಮಿ) ಅಕ್ಕನಾಗಲಾಂಬಿಕೆಯರ ಬಸುರಲ್ಲಿ
ಬಂದರೆನ್ನಬಹುದೆ ಚೆನ್ನಬಸವೇಶ್ವರನ?
ಮೊರಡಿಯ ಮುದ್ದಗೌಡ ಸುಗ್ಗವ್ವೆಯರ
ಬಸುರಲ್ಲಿ ಬಂದರೆನ್ನಬಹುದೆ ಸಿದ್ಧರಾಮೇಶ್ವರನ?
ಇವರು ಒಬ್ಬರಿಂದಾದವರಲ್ಲ, ತಮ್ಮಿಂದ ತಾವಾದರು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು.

ಈ ವಚನದಲ್ಲಿ ಉಕ್ತವಾದ ಪ್ರಭುದೇವರ ತಂದೆ–ತಾಯಿಗಳಾದ ನಿರಹಂಕಾರ–

ಸುಜ್ಞಾನಿದೇವಿ ಎಂಬುದನ್ನು ವ್ಯಕ್ತಿನಾಮ ಮಾಡಿ ಪದಗಳ ಹಿಂದಿರುವ 'ಕರವೂರು' ಗ್ರಾಮನಾಮ ಸೂಚಿಯಾಗಿ; ಸಿದ್ಧರಾಮೇಶ್ವರರ ತಂದೆ-ತಾಯಿ ಮುದ್ದಗೌಡ-ಸುಗ್ಗವ್ವೆ ಎಂಬುದನ್ನು ವ್ಯಕ್ತಿನಾಮ ಮಾಡಿ ಪದಗಳ ಪೂರ್ವದಲ್ಲಿರುವ 'ಮೊರಡಿ' ಪದ ಗ್ರಾಮನಾಮ ಸೂಚಿಯಾಗಿರುವುದು ಈಗಾಗಲೇ ನಿರ್ಧರಿತವಾಗಿದೆ. ಹೀಗಾಗಿ ಬಸವಣ್ಣನವರ ತಂದೆ-ತಾಯಿಗಳಾದ ಮಾದಿರಾಜ-ಮಾದಲಾಂಬಿಕೆ ಹೆಸರಿನ ಹಿಂದಿರುವ (ಪೂರ್ವಪದ) 'ಮಂಡಗೆ' ಎಂಬುದೂ 'ಗ್ರಾಮನಾಮವಾಚಿ' ಯೆಂದೇ ಸಿದ್ಧವಾಗುತ್ತದೆ. ಈ 'ಮಂಡಗೆ' ಪದ 'ಗ್ರಾಮನಾಮವಾಚಿ'ಯೇ ಎಂಬುದನ್ನು ಪೋಷಕ ಆಕರ ಸಾಮಗ್ರಿಯ ಮೂಲಕ ಇನ್ನೂ ಗಟ್ಟಿಯಾಗಿ ನಿರ್ಣಯಿಸಬಹುದಾಗಿದೆ.

ಗುಲಬರ್ಗಾ ಜಿಲ್ಲೆಯ ಮುದನೂರಿನ ಕ್ರಿ.ಶ. ೧೧೨೯ರ ಶಾಸನದಲ್ಲಿ ವಿವಿಧ ಗ್ರಾಮದ ವರ್ತಕರನ್ನು ಹೆಸರಿಸುವಾಗ 'ಮಂಡಗೆಯ ರಾಮಿಸೆಟ್ಟಿ'ಯ ಉಲ್ಲೇಖವೂ ದಾಖಲಾಗಿದೆ. ಇಲ್ಲಿ ವರ್ತಕ ರಾಮಿಸೆಟ್ಟಿ 'ಮಂಡಗೆ' ಗ್ರಾಮದವನೆಂಬುದು ಸ್ಪಷ್ಟವಾಗಿ ನಮೂದಿತವಾಗಿದೆ. ಆದುದರಿಂದ 'ಮಂಡಗೆ' ಗ್ರಾಮನಾಮ ಸೂಚಿಪದವೆಂಬುದು ನಿರ್ಧಾರವಾಗುತ್ತದೆ. ಹೀಗಾಗಿ 'ಮಾದಿರಾಜ' ವ್ಯಕ್ತಿನಾಮದ ಪೂರ್ವದಲ್ಲಿರುವ 'ಮಂಡಗೆ' ಪದ ಗ್ರಾಮನಾಮವಾಚಿಯೆಂಬುದು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ 'ಮಂಡಗೆ' ಪದ ಸಿಹಿತಿಂಡಿ, ಗ್ರಾಮನಾಮ ಹೀಗೆ ಎರಡು ಅರ್ಥಗಳನ್ನು ಹೊಂದಿರುವುದು ಕಂಡುಬರುತ್ತದೆ. ಹೀಗಿದ್ದರೂ ಘಟ್ಟಿವಾಳಯ್ಯನ ವಚನದಲ್ಲಿಯ ಸಾಂದರ್ಭಿಕ, ಆನ್ವಯಿಕ ಹಾಗೂ ಕ್ರಮಾನುಗತ ಅರ್ಥದ ಹಿನ್ನೆಲೆಯಲ್ಲಿ, ಮುದನೂರಿನ ಶಾಸನದ ಆಧಾರದ ಮೂಲಕ 'ಮಂಡಗೆ' ಎಂಬುದು ಗ್ರಾಮನಾಮವಾಚಿ ಪದವೆಂಬುದೇ ಸಾಧಾರವಾದ, ಸೂಕ್ತವಾದ ತೀರ್ಮಾನವಾಗಿರುತ್ತದೆ. ಹೀಗಾಗಿ 'ಮಂಡಗೆಯ ಮಾದಿರಾಜ' ಎಂದರೆ 'ಮಂಡಗೆ' ಗ್ರಾಮದ ಮಾದಿರಾಜ ಎಂದಾಗುತ್ತದೆ. ಇದರಿಂದ ಬಸವಣ್ಣನವರ ತಂದೆಯವರಾದ ಮಾದಿರಾಜರು ಮೂಲತಃ 'ಮಂಡಗೆ' ಗ್ರಾಮದವರಾಗಿದ್ದು, ಆಮೇಲೆ ಈ ಗ್ರಾಮದಿಂದ ಬಾಗೇವಾಡಿಗೆ ಆಗಮಿಸಿದ್ದಾರೆಂದು ಹೇಳಬೇಕಾಗುತ್ತದೆ. ಹೀಗೆ ಮಂಡಗೆ ಗ್ರಾಮ, ಬಸವಣ್ಣನವರ ತಂದೆ ಮಾದಿರಾಜರ ಮೂಲಗ್ರಾಮ, ಇವರ ಪೂರ್ವಜರ ವಾಸಸ್ಥಳವೆಂಬ ಸಂಗತಿ ವಚನ ಹಾಗೂ ಶಾಸನಾಧಾರಗಳಿಂದ ಗೊತ್ತಾಗುತ್ತದೆ. ಹಾಗಾದರೆ ಈ ಮಂಡಗೆ ಗ್ರಾಮವನ್ನು ಈಗ ಗುರುತಿಸಲು ಸಾಧ್ಯವೆ? ಎಂಬ ಪ್ರಶ್ನೆ ಸಹಜವಾಗಿಯೇ ಎದುರಾಗುತ್ತದೆ. ಮುದನೂರ ಶಾಸನದ ಮೂಲಕ ಈ 'ಮಂಡಗೆ' ಗ್ರಾಮವನ್ನು ಕಂಡುಹಿಡಿಯುವ ಪ್ರಯತ್ನ ಮಾಡಬಹುದಾಗಿದೆ.

ಕ್ರಿ.ಶ. ೧೧೨೯ರ ಮುದನೂರ ಶಾಸನದಲ್ಲಿ ಉಲ್ಲೇಖಗೊಂಡ ವರ್ತಕ ರಾಮಿಸೆಟ್ಟಿ 'ಮಂಡಗೆ' ಗ್ರಾಮದವನೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆದುದರಿಂದ ಈ 'ಮಂಡಗೆ' ಗ್ರಾಮ ಮುದನೂರಿನ ಸುತ್ತಮುತ್ತ ಇರುವುದರಲ್ಲಿ ಯಾವುದೇ ಸಂದೇಹವಿಲ್ಲ. ಗುಲಬರ್ಗಾ ಜಿಲ್ಲೆಯ ಮುದನೂರಿನ ಸುತ್ತಮುತ್ತ ವ್ಯಾಪಕವಾದ ಕ್ಷೇತ್ರಕಾರ್ಯ ಕೈಕೊಂಡು, ಬಸವಣ್ಣನವರ ಪೂರ್ವಜರ ಗ್ರಾಮವಾದ ಈ 'ಮಂಡಗೆ'ಯನ್ನು ಶೋಧಿಸುವ ಕಾರ್ಯ ನಡೆಯುವುದು ತೀರ ಅವಶ್ಯವಿದೆ. ಈ ಗ್ರಾಮ, ಬಸವಣ್ಣನವರ ವಂಶಜರ ಕವಿಳಾಸಪುರ ಗ್ರಾಮದಂತೆ ಭೂಗತವಾಗಿದೆಯೋ, ಸದ್ಯ ಅಸ್ತಿತ್ವದಲ್ಲಿದೆಯೋ ಎಂಬುದನ್ನು ಪತ್ತೆ ಹಚ್ಚಬೇಕಾಗಿದೆ. ಮಂಡಗೆ ಗ್ರಾಮ ಅಥವಾ

ಪ್ರದೇಶದಲ್ಲಿ ಕೈಗೊಳ್ಳುವ ಸಂಶೋಧನೆ, ಕ್ಷೇತ್ರ ಕಾರ್ಯಗಳ ಮೂಲಕ ಬಸವಣ್ಣನವರ ಪೂರ್ವಜರ ಮೇಲೆ ಹೊಸಬೆಳಕು ಬೀಳುವ ಸಾಧ್ಯತೆ ಇದೆ. ವಿದ್ವಾಂಸರು ಹಾಗೂ ಸಂಶೋಧಕರು ಆದಷ್ಟು ಬೇಗ ಈ ಪ್ರದೇಶದಲ್ಲಿ ಸಂಶೋಧನೆ ನಡೆಸುವ ಅಗತ್ಯವಿದೆಯೆಂಬುದನ್ನು ಇಲ್ಲಿ ಮತ್ತೊಮ್ಮೆ ಒತ್ತಿ ಹೇಳಬೇಕಾಗುತ್ತದೆ.

ಬಸವಪೂರ್ವ ಯುಗದಲ್ಲಿ ಮುದನೂರು ಗ್ರಾಮ ಅಥವಾ ಪ್ರದೇಶ 'ಎಳಮೇಲ ಸಿಂಹಪರ್ಷೆ'ಯೆಂಬ ಶೈವ ಪ್ರಭೇದದ ಮೂಲ ಹಾಗೂ ಪ್ರಧಾನ ಕೇಂದ್ರ ಎನಿಸಿದ್ದಿತು. ಬಸವಣ್ಣನವರ ಹಿರಿಯ ಸಮಕಾಲೀನ ಶರಣ ಮತ್ತು ವಚನಕಾರ ಜೇಡರ ದಾಸಿಮಯ್ಯ ಈ ಮುದನೂರು ಗ್ರಾಮದವ. ಈ ಗ್ರಾಮದ 'ರಾಮನಾಥ ದೇವಾಲಯ', 'ಎಳಮೇಲ ಸಿಂಹಪರ್ಷೆ'ಯ ಸಮಸ್ತ ಚಟುವಟಿಕೆಗಳಿಗೆ ಕೇಂದ್ರವೆನಿಸಿದ್ದಿತು.

ಜೇಡರ ದಾಸಿಮಯ್ಯನ ವಚನಾಂಕಿತ 'ರಾಮನಾಥ' ಎಂದೇ ಇದೆ. ಹೀಗಾಗಿ ಜೇಡರ ದಾಸಿಮಯ್ಯ ಮೂಲತಃ ಎಳಮೇಲ ಸಿಂಹಪರ್ಷೆಯ ಶೈವಶಾಖೆಗೆ ಸಂಬಂಧಿಸಿದವನೆಂಬುದು ವ್ಯಕ್ತವಾಗುತ್ತದೆ. ಈ ಎಳಮೇಲ ಸಿಂಹಪರ್ಷೆಯ ಶೈವವನ್ನು ಶಾಸನಗಳಲ್ಲಿ "ಅಭಿನವ ಪಾಶುಪತ"ವೆಂದು ಕರೆಯಲಾಗಿದೆ. ಈ 'ಅಭಿನವೀಕರಣ'ದಿಂದ 'ಅಭಿನವ ಪಾಶುಪತ'ವೇ 'ವೀರಶೈವ' ಆಯಿತೆಂಬ ಹೇಳಿಕೆಯೂ ಇದೆ. ಈ ಅಭಿನವೀಕರಣ ಪ್ರಕ್ರಿಯೆ ಪ್ರಾರಂಭ ವಾದುದು ಮುದನೂರಿನಿಂದಲೇ.

ಬಸವಪೂರ್ವ ಯುಗದ ಪ್ರಮುಖ ಶೈವಶಾಖೆಯಾದ ಪ್ರಭೇದ) 'ಎಳಮೇಲ ಸಿಂಹಪರ್ಷೆ'ಯ ಕೇಂದ್ರ ಸ್ಥಳವಾದ ಮುದನೂರಿನ ಸುತ್ತಮುತ್ತಲೇ ಈ 'ಮುಂಡಗೆ' ಗ್ರಾಮ ಇದ್ದಿರುವ ಸಾಧ್ಯತೆ ಅಧಿಕ ಇದೆ. ಬಸವಣ್ಣನವರ ಪೂರ್ವಜರ ವಾಸಸ್ಥಳವಾದ ಈ ಮಂಡಗೆ ಗ್ರಾಮವೂ ಎಳಮೇಲ ಸಿಂಹಪರ್ಷೆಯ ಶೈವಶಾಖೆಯ ಪ್ರಭಾವಲಯದಲ್ಲಿಯೇ ಬೆಳೆದಿರ ಬೇಕೆನಿಸುತ್ತದೆ. ಈ ನಿಟ್ಟಿನಲ್ಲಿ ಸಂಶೋಧನೆ ಮುನ್ನಡೆಯಬೇಕಾಗಿದೆ.

'ಮಂಡಗೆ' ಬಸವಣ್ಣನವರ ಪೂರ್ವಜರ ಗ್ರಾಮವೆಂಬುದೂ ಅದು ಈ ಮುದನೂರಿನ ನೆರೆಹೊರೆಯಲ್ಲಿರಬಹುದೆಂಬುದೂ ಸ್ಪಷ್ಟವಾದ ಮೇಲೆ ಈ ಗ್ರಾಮನಾಮದ ನಿಷ್ಪತ್ತಿ ಮತ್ತು ಅರ್ಥ ವಿವೇಚನೆ ಕುರಿತು ಚರ್ಚಿಸುವುದು ಅಗತ್ಯವೆನಿಸುತ್ತದೆ.

ಪ್ರಾಚೀನ ಕರ್ನಾಟಕದ ಗ್ರಾಮನಾಮಗಳಲ್ಲಿ ಜನಾಂಗವಾಚಿ ಹಾಗೂ ವ್ಯಕ್ತಿ ನಾಮವಾಚಿ ಗ್ರಾಮಗಳೇ ಅಧಿಕ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಇಂಥ ಗ್ರಾಮನಾಮದ ಪೂರ್ವಪದ ಅಂತ್ಯದಲ್ಲಿ 'ನ' ಅಥವಾ 'ಯ' (ಉದಾ: ಅಯ್ಯನ+ಪೊಟಿಲ್>ಐಹೊಳೆ, ಆರನೆಯ+ಬೀದಿ> ಆರನೇಬೀದಿ) ಇದ್ದರೆ, ಅದು ವ್ಯಕ್ತಿನಾಮವಾಚಿ ಗ್ರಾಮ ಎನಿಸುತ್ತದೆ. ಇದರಂತೆ ಗ್ರಾಮನಾಮದ ಪೂರ್ವಪದ ಅಂತ್ಯದಲ್ಲಿ 'ರ' (ಸಿಂದರ+ಕೆಯ್>ಸಿಂದಗಿ), ಮುಂಡರ+ಕೆಯ್>ಮುಂಡರಗಿ) ಇದ್ದರೆ, ಅದು ಜನಾಂಗವಾಚಿ ಗ್ರಾಮವೆನಿಸಿಕೊಳ್ಳುತ್ತದೆ. ಆದುದರಿಂದ 'ಮಂಡಗೆ, ಗ್ರಾಮನಾಮದಲ್ಲಿ 'ಮಂಡ' ಪೂರ್ವಪದ, ಕೆಯ್ ಉತ್ತರ ಪದವಾಗಿರುತ್ತದೆ. ಹೀಗಾಗಿ ಮಂಡಗೆ ಗ್ರಾಮನಾಮದ ನಿಷ್ಪತ್ತಿಯನ್ನು ಹೀಗೆ ನಿರೂಪಿಸ ಬಹುದಾಗಿದೆ:

ಮಂಡರ + ಕೆಯ್ > ಮಂಡರಕೆಯ್ > ಮಂಡರಗೆ > ಮಂಡರ್ಗೆ > ಮಂಡಗೆ ಇಲ್ಲಿ ಈ ರೀತಿಯಾಗಿ 'ಮಂಡಗೆ' ಗ್ರಾಮನಾಮದ ಪೂರ್ವಪದದ (ಮಂಡರ) ಅಂತ್ಯದಲ್ಲಿ 'ರ' ಇರುವುದರಿಂದ ಇದು ಜನಾಂಗಸೂಚಿ ಗ್ರಾಮನಾಮವೆಂದಾಗುತ್ತವೆ.

ಒಟ್ಟಿನಲ್ಲಿ ಬಸವಣ್ಣನವರ ತಂದೆ ಮಾದಿರಾಜರು ಹಾಗೂ ಅವರ ಪೂರ್ವಜರು 'ಮಂಡಗೆ' ಗ್ರಾಮದವರೆಂಬುದು ಸ್ಪಷ್ಟವಾಗುತ್ತದೆ. ಇವರು ಮೂಲತಃ ಬಾಗೇವಾಡಿಯವರಲ್ಲ, ಮಂಡಗೆಯಿಂದ ಸ್ಥಳಾಂತರಗೊಂಡವರು. ಮಂಡಗೆ ಮುದನೂರಿನ ಸುತ್ತಮುತ್ತಲಿದೆ. ಆ ಪ್ರದೇಶ 'ಎಳಮೇಲ ಸಿಂಹಪರ್ಷೆ'ಯ ಅಥವಾ ಅಭಿನವ ಪಾಶುಪತದ ಪ್ರಭಾವಕ್ಕೆ ಒಳಗಾಗಿದ್ದಿತು – ಹೀಗೆ ಹಲವಾರು ಮಹತ್ವದ ಅಂಶಗಳು ಈ ವಿವೇಚನೆಯಿಂದ ಗೊತ್ತಾಗುತ್ತವೆ.

ವಂಶಜರು :

ವೀರಶೈವದ ಮಹಾಬೆಳಕಾಗಿ ಉದಯಿಸಿದ ಬಸವಣ್ಣನವರು ವಿಶ್ವಮಾನ್ಯ ವಿಭೂತಿಪುರುಷರಲ್ಲಿ ಒಬ್ಬರು. ಹನ್ನೆರಡನೆಯ ಶತಮಾನದಲ್ಲಿ ಬಾಳಿದ ಇವರ ವಂಶಜರು ಇದ್ದರೆ? ಅವರ ಹೆಸರೇನು? ಎಲ್ಲಿದ್ದರು? ಬಾಗೇವಾಡಿ ಬಿಟ್ಟು ಹೊರಗೆ ಹೋಗಲು ಕಾರಣಗಳಾವುವು? ವಂಶ ಮುಂದುವರಿಯಿತೆ? ಮೊದಲಾದ ಪ್ರಶ್ನೆಗಳು ಉದ್ಭವಿಸುತ್ತವೆ. ಕ್ರಿ.ಶ. ೧೨೬೦ರ ಹಾಗೂ ಸುಮಾರು ಕ್ರಿ.ಶ. ೧೩ರ ಅರ್ಜುನವಾಡ ಶಾಸನಗಳು, ಕಾವ್ಯ–ಪುರಾಣಗಳು, ಈ ಪ್ರಶ್ನೆಗಳ ಮೇಲೆ ಬೆಳಕು ಚೆಲ್ಲುತ್ತವೆ.

ಡಾ. ನಾ.ಶ್ರೀ. ರಾಜಪುರೋಹಿತ, ಡಾ. ಎಸ್.ಸಿ. ನಂದೀಮಠ, ಮಧುರಚೆನ್ನ ಮತ್ತು ಡಾ. ಫ.ಗು. ಹಳಕಟ್ಟಿ ಅವರ ಸಂಯುಕ್ತ ಪರಿಶ್ರಮದ ಮೂಲಕ ೧೯೨೮ರಲ್ಲಿ ಹೊರಬಂದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಅರ್ಜುನವಾಡ ಗ್ರಾಮದ ನೆರೆಯಲ್ಲಿ (ಭೂಗತ ಕವಿಳಾಸಪುರದ ಪ್ರದೇಶದಲ್ಲಿ) ದೊರೆತ ಶಾಸನ, ಬಸವಣ್ಣ ಹಾಗೂ ಅವರ ವಂಶಜರ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಿತು. ಇದರಿಂದ ಬಸವಣ್ಣನವರ ಚರಿತ್ರೆ ಮತ್ತು ಅವರ ವಂಶಜರ ಇತಿಹಾಸದ ಮುಚ್ಚಿದ ಬಾಗಿಲು ತೆರೆದಂತಾಯಿತು.

ಕವಿಳಾಸಪುರವು ಬಸವಣ್ಣನವರ ವಂಶಜರ ವಾಸಸ್ಥಳವೆಂದು ತಿಳಿದುಬಂದುದು ಈ ಶಾಸನದಿಂದ. ಈ ಶಾಸನ ಲಭಿಸಿದ ಮೇಲೆ ಅದನ್ನು ಓದುವ, ಅರ್ಥೈಸುವ ಕಾರ್ಯಗಳು ಅವ್ಯಾಹತವಾಗಿ ಮುಂದುವರಿದಂತೆ, ಕವಿಳಾಸಪುರವನ್ನು ಗುರುತಿಸುವ ಕೆಲಸವೂ ಆರಂಭವಾಯಿತು.


ಕ್ರಿ.ಶ. ೧೨೬೦ರ ಅರ್ಜುನವಾಡ ಶಾಸನ ಶೋಧದಿಂದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕವಿಳಾಸಪುರ (ಭೂಗತ) ಗ್ರಾಮ ಬಸವಣ್ಣನವರ ವಂಶಜರ ಗ್ರಾಮವೆಂಬುದು ದೃಢಪಟ್ಟಿದೆ. ಈ ಶಾಸನ ಬಸವಣ್ಣನವರಿಗೆ ಹಾಗೂ ಅವರ ವಂಶಜರಿಗೆ ಸಂಬಂಧಿಸಿದ ಅಪೂರ್ವ ಶಾಸನ. ಯಾವ ಆಕರಗಳಲ್ಲಿಯೂ ಇಲ್ಲದ ಹಲವಾರು ಹೊಸ ಸಂಗತಿಗಳನ್ನು ಮೊದಲಬಾರಿಗೆ ಇದು ಬಿಡಿಸಿ ಹೇಳುತ್ತದೆ. ಬಸವಣ್ಣನವರು ಪೌರಾಣಿಕ ವ್ಯಕ್ತಿಯೆಂದು ಭಾವಿಸುತ್ತಿದ್ದ ಅವರ ಜನ್ಮಸ್ಥಳ ಹಾಗೂ ತಂದೆಯ ಬಗೆಗೆ ಸಂದೇಹಿಸುತ್ತಿದ್ದ ಜನರಿಗೆ "ಮುತ್ತಂ ತಥವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರಂ ಮಾದಿರಾಜ" ಎಂಬ ಶಾಸನ ಪ್ರಮಾಣ ದೊರೆತು, ಬಸವಣ್ಣನವರು ಪೌರಾಣಿಕ ವ್ಯಕ್ತಿಗಳಲ್ಲ; ಐತಿಹಾಸಿಕ ವ್ಯಕ್ತಿಗಳು. ಅವರ ಜನ್ಮಸ್ಥಳ ವಿಜಾಪುರ ಜಿಲ್ಲೆಯ ಬಾಗೇವಾಡಿ, ತಂದೆ ಪುರಪ್ರಭು ಮಾದಿರಾಜ ಎಂಬ ಸಂಗತಿಗಳು ನೆಲೆಯೂರಿ ನಿಂತವು. ಈ ಶಾಸನದಲ್ಲಿ ಬರುವ

ಸಂಗನ ಬಸವನ ಅಗ್ರ [ಜ
ಲಿಂ]ಗೈಕಂ ದೇವರಾಜ ಮುನಿಪನ ತನಯಂ।
ಜಂಗಮ ಪರುಸಂ (ಕಾವ)ಕ
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥

ಕಲಿದೇವ ಮುನಿಪನಾತ್ಮಜ
ಸತಿ ಮೂಜಗದೊಳಗೆ ಮೆಱೆವ ಮಾನವದೇವಂ।
ಗೆಲಿದಂ ಅಸ (ಶ)ನ ಬೆಸನ
ಛಲರಧಿಕಂ ಹಾಲ ಬಸವಿದೇವ ಮುನೀಸಂ ॥

ಈ ಕಂದಪದ್ಯಗಳನ್ನು ಆಧರಿಸಿ, ಈ ವಂಶಾವಳಿಯನ್ನು ಸಿದ್ಧಪಡಿಸಬಹುದಾಗಿದೆ:

ಇದರಿಂದ ಬಸವಣ್ಣನವರಿಗೆ 'ದೇವರಾಜ' ಹೆಸರಿನ ಅಣ್ಣನಿದ್ದ ವಿಷಯ ಹೊಸದಾಗಿ ತಿಳಿದುಬರುತ್ತದೆ. ಇಲ್ಲಿಯವರೆಗೆ ಬಸವಣ್ಣನವರಿಗೆ 'ನಾಗಲಾಂಬಿಕೆ' ಎಂಬ ಅಕ್ಕ ಇದ್ದುದು



ಮಾತ್ರ ಗೊತ್ತಿತ್ತು. ಹೀಗಾಗಿ ಬಸವಣ್ಣ ಮಾದರಸ–ಮಾದಲಾಂಬಿಕೆಯರಿಗೆ ಮೂರನೆಯ ಮಗ, ಅಣ್ಣ ದೇವರಾಜನ ಮಗ ಕಲಿದೇವ ಈತ ಕಾವರಸ ಗುರುವಿನ ಪರಮಶಿಷ್ಯ. ಈ ಕಲಿದೇವ ಮುನಿಯ ಮಗನೇ ಹಾಲಬಸವಿದೇವ. ಹೀಗೇ ಬಸವಣ್ಣನವರ ವಂಶಜರು ಕವಿಳಾಸಪುರದಲ್ಲಿ ಸ್ಥಾವರ ಪೂಜಕರಾಗಿಯೇ ಇದ್ದರು. ಇವರು ವೀರಶೈವರಾಗಿರಲಿಲ್ಲ. ಈ ಎಲ್ಲ ವ್ಯಕ್ತಿಗಳು ಸಾಮಾನ್ಯರಾಗಿರದೆ "ಮುನಿ ಪರಂಪರೆಯವರಾಗಿದ್ದರು. ಅಂದರೆ ದೇವಾಲಯಗಳ ಸ್ಥಾನಾಚಾರ್ಯರಾಗಿದ್ದ ಇವರು ಬಾಗೇವಾಡಿಯಿಂದ ಕವಿಳಾಸಪುರಕ್ಕೆ ಬರಲು ಕಾರಣಗಳಾವುವು? ಎಂಬುದು ನಿರ್ದಿಷ್ಟವಾಗಿ ತಿಳಿದುಬರುವುದಿಲ್ಲ. ಹೀಗಿದ್ದರೂ ಇಲ್ಲಿ ಒಂದು ಊಹೆಯನ್ನು ಮಾಡಲು ಸಾಧ್ಯವಿದೆ. ಬಾಗೇವಾಡಿಯಲ್ಲಿ ಜರುಗಿದ ಬಸವಣ್ಣನವರ 'ಉಪನಯನದ ಸಂದರ್ಭ' ಇದಕ್ಕೆ ಪ್ರಬಲ ಕಾರಣವಾಗಿರಬಹುದೆನಿಸುತ್ತದೆ. 'ಉಪನಯನ'

ಧಿಕ್ಕರಿಸುವ ಮೂಲಕ ಬಸವಣ್ಣ 'ಪುರಪ್ರಭು' ಮನೆತನಕ್ಕೆ ಅವಮಾನ ಮಾಡಿ ಇದರಿಂದ ತಾನು ಊರು ತೊರೆದು, ಕೂಡಲಸಂಗಮ ಸೇರಿದ. ಸಮಾಜದಲ್ಲಿ ಪ್ರತಿಷ್ಠಿತರೆನಿಸಿಕೊಂಡಿದ್ದ ಈ ಮನೆತನದ ಸದಸ್ಯರು ಅವಮಾನವನ್ನು ಸಹಿಸಲಾರದೆ ಬಾಗೇವಾಡಿ ಬಿಟ್ಟು ಹೊರ ನಡೆದರು. ಹೀಗೆ ಬಸವಣ್ಣನವರ ಕುಟುಂಬದ ಸದಸ್ಯರಿಗೆ ಮನೆ ತ್ಯಜಿಸಲು ಈ ಉಪನಯನ ಸಂದರ್ಭ ಕಾರಣವಾಗಿರುವ ಸಾಧ್ಯತೆಯಿದೆ. ಹೀಗೆ ತಮ್ಮ ಬಸವಣ್ಣನ ಉಪನಯನ ಧಿಕ್ಕಾರದಿಂದ ಅವಮಾನಿತರಾದ, ತತ್ತರಿಸಿಹೋದ ದೇವರಾಜ ಬಾಗೇವಾಡಿ ಬಿಟ್ಟು ಕವಿಳಾಸಪುರಕ್ಕೆ ಆಗಮಿಸಿರಬೇಕೆನಿಸುತ್ತದೆ.

ಇದಲ್ಲದೆ ಬಸವಣ್ಣನವರ ಈ ವಂಶಜರು ಬಸವಣ್ಣನವರ ಮೇಲಿನ ಸಿಟ್ಟಿನಿಂದ ಅವನ ಆಂದೋಲನದಲ್ಲಿ ಎಂದೂ ಭಾಗವಹಿಸಲಿಲ್ಲ. ಅವರು ವೀರಶೈವತ್ವವನ್ನು ಒಪ್ಪಿಕೊಳ್ಳಲಿಲ್ಲ. ಕೊನೆಯವರೆಗೂ ಶೈವರಾಗಿಯೇ ಉಳಿಯುತ್ತಾರೆ.

ಬಸವಣ್ಣನವರ ವಂಶಜರಾದ ದೇವರಾಜ, ಕಲಿದೇವ ಹಾಗೂ ಹಾಲ ಬಸವದೇವರು ಕವಿಳಾಸಪುರದಲ್ಲಿಯೇ ವಾಸವಾಗಿ ಹಾಲ ಬಸವಿದೇವನವರೆಗೆ ಮಾತ್ರ ವಂಶಾವಳಿ ಇದೆ. ಈ ಹಾಲಬಸವಿದೇವ ಕವಿಳಾಸಪುರದಲ್ಲಿ ಎಷ್ಟು ಕಾಲ ಬದುಕಿದ್ದ? ಅವನ ವಂಶ ಮುಂದುವರಿದಿದ್ದಿತೆ? ಅವರ ಹೆಸರೇನು? ಅವರು ಅಲ್ಲಿಯೇ ಇದ್ದರೆ? ಅಥವಾ ಬೇರೆ ಸ್ಥಳದಲ್ಲಿ ವಾಸವಾಗಿದ್ದರೋ? ಈ ಮೊದಲಾದ ಪ್ರಶ್ನೆಗಳಿಗೆ ಆಕರಗಳ ಕೊರತೆಯಿಂದ ಸದ್ಯಕ್ಕೆ ಉತ್ತರ ಲಭಿಸುವುದಿಲ್ಲ.

ಕವಿಳಾಸಪುರದಲ್ಲಿ ದೊರೆತಿರುವ ಸು. ಕ್ರಿ.ಶ. ೧೩ರ ಸೀಮೆಕಲ್ಲು ಶಾಸನ ಇದು ಬಸವಣ್ಣನವರ ಹೊಲವನ್ನು ಸೂಚಿಸುವಂತೆ ಕಾಣುವುದಿಲ್ಲ. "ಹತ್ತು ಮತ್ತರ ಭೂಮಿ, ಬತ್ತದ ಹಯನ, ನಂದಾದೀವಿಗೆಯ ನಡೆಸಿಹೆವೆಂಬವರ ಮುಖವ ನೋಡಲಾಗದು, ನುಡಿಯ ಕೇಳಲಾಗದು" ಎಂಬುದು ಬಸವ ಸಂವಿಧಾನದ ಧ್ಯೇಯವಾಕ್ಯ. ಹೀಗಾಗಿ ಬಸವಣ್ಣನವರು ದಾನ ಕೊಡಲಿಲ್ಲ, ಸ್ವೀಕರಿಸಲಿಲ್ಲ. ಆದುದರಿಂದ ಬಸವಣ್ಣನವರ ವಂಶಜರು ಪಡೆದ ಭೂದಾನವನ್ನು ಇದು ತಿಳಿಸುತ್ತದೆ. ಅವರು ಪಡೆದ ಭೂದಾನದ ಸೀಮೆಗಳನ್ನು ಸೂಚಿಸುವ ಒಂದು ಸೀಮೆಕಲ್ಲು ಇದಾಗಿದೆ. ಹಾಗಾದರೆ ಬಸವಣ್ಣನವರ ವಂಶಜರು ಭೂಮಿಯನ್ನು ದಾನವಾಗಿ ಸ್ವೀಕರಿಸಿದ ವಿವರಗಳನ್ನು ತಿಳಿಸುವ ಇನ್ನೊಂದು ಶಾಸನ ಈ ಕವಿಳಾಸಪುರ ಪ್ರದೇಶದಲ್ಲಿ ಇರುವ ಸಾಧ್ಯತೆಯಿದೆ. ಅದನ್ನು ಗುರುತಿಸುವ, ಹೊರತೆಗೆಯುವ ಕಾರ್ಯನಡೆಯ ಬೇಕಾಗಿದೆ. ಒಂದುವೇಳೆ ಈ ದಾನ ಶಾಸನ ಲಭಿಸಿದರೆ ಬಸವಣ್ಣನವರ ವಂಶಜರನ್ನು ಕುರಿತು ಇನ್ನೂ ಹಲವಾರು ಹೊಸ ವಿಷಯಗಳು ಪ್ರಕಟಗೊಳ್ಳುವ ಸಾಧ್ಯತೆಯಿದೆ.

ಹೀಗೆ ಬಸವಣ್ಣನವರನ್ನು ಕುರಿತು ಈ ಶಾಸನಗಳು ಅವರ ಚಾರಿತ್ರಿಕತೆಗೆ ಬಲವಾದ ಬೆಂಬಲವನ್ನು, ಆಧಾರಗಳನ್ನು ಒದಗಿಸುತ್ತವೆ. ಬಸವಣ್ಣನವರ ಪೂರ್ವಜರು ಗುಲಬರ್ಗಾ ಜಿಲ್ಲೆಯ ಮುದನೂರಿನ ಹತ್ತಿರದ 'ಮಂಡಗೆ' ಗ್ರಾಮದಲ್ಲಿಯೂ ಬಸವಣ್ಣನವರ ವಂಶಜರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ 'ಕವಿಳಾಸಪುರ' ಗ್ರಾಮದಲ್ಲಿಯೂ ವಾಸವಾಗಿದ್ದುದು ವಿದಿತವಾಗುತ್ತದೆ. ಆದರೆ ಬಸವಣ್ಣನವರ ತಂದೆಯ ಕಾಲಕ್ಕೆ ಈ ಮನೆತನ ವಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ನೆಲೆಸಿದ್ದುದು ತಿಳಿದುಬರುತ್ತದೆ.

❑

ಬಸವಣ್ಣನವರ ಜನನದ ಉದ್ದೇಶ

●

ಡಾ. ಎಂ.ಎಂ. ಕಲಬುರ್ಗಿ

ಮಹಾಪುರುಷರ ಬದುಕಿನ ಕೇಂದ್ರ ಉದ್ದೇಶದ ಸುತ್ತ ಅನೇಕ ಗೌಣ ಉದ್ದೇಶಗಳೂ ಹೆಣೆದುಕೊಂಡಿರುತ್ತವೆ. ಇವರನ್ನು ಕುರಿತು ಬರೆಯುವವರು ಈ ಕೇಂದ್ರ ಉದ್ದೇಶವನ್ನು ಶೋಧ ಮಾಡಬೇಕಾಗುತ್ತದೆ. ಆದರೆ ಕೆಲವರು ಅಮುಖ್ಯ ಉದ್ದೇಶವನ್ನೇ ಮುಖ್ಯವೆಂದು ನಂಬಿ, ಇನ್ನು ಕೆಲವರು ಮುಖ್ಯಾಮುಖ್ಯ ಉದ್ದೇಶಗಳನ್ನು ಕೈಗೆ ಬಂದಂತೆ ಮಿಶ್ರಗೊಳಿಸಿ ಚರಿತ್ರೆ ಬರೆಯುತ್ತಾರೆ. ಸಮರ್ಥ ಲೇಖಕನಾದವನು ಮಾತ್ರ ಅವರ ಜೀವನದ ಎಲ್ಲ ಚಟುವಟಿಕೆಗಳನ್ನು ಸಮಗ್ರವಾಗಿ ಅಭ್ಯಸಿಸಿ, ಕೇಂದ್ರ ಉದ್ದೇಶವನ್ನು ಕಂಡುಹಿಡಿದು, ಅದರ ತಳಹದಿಯ ಮೇಲೆ ಕೃತಿ ಕಟ್ಟಡವನ್ನು ಬೆಳೆಸುತ್ತಾನೆ. ಆ ಕೃತಿಯ ಪ್ರತಿಯೊಂದು ಘಟನೆ ಆ ಕೇಂದ್ರ ಉದ್ದೇಶದ ನಿಯಂತ್ರಣಕ್ಕೆ ಒಳಪಡುತ್ತವೆ.

ಈ ಕೇಂದ್ರ ಉದ್ದೇಶವನ್ನು ಕೃತಿಯ ಪ್ರಾರಂಭದಲ್ಲಿಯೇ ಅವತಾರ ರೂಪದ ಒಂದು ಕಥೆಯ ಮೂಲಕ ಸಂಕೇತಿಸುವುದು ಭಾರತೀಯ ಬರವಣಿಗೆಯ ಪದ್ಧತಿಯಾಗಿದೆ. ಇದು ಒಂದು ತಂತ್ರವೆಂಬಂತೆ ನಮ್ಮಲ್ಲಿ ಬೆಳೆದುಬಂದಿದೆ. ಈ ಮೇರೆಗೆ ಬಸವಣ್ಣನವರ ಜನನದ ಹಿಂದೆ ಯಾವ ಉದ್ದೇಶವನ್ನು ನಮ್ಮ ಕವಿಗಳು ಗುರುತಿಸಿದ್ದಾರೆ? ಸರಿಯಾದುದನ್ನು ಯಾರು ಗುರುತಿಸಿದ್ದಾರೆ? ಹಾಗೆ ಗುರುತಿಸಿ ಕಲ್ಪಿಸಿದ ಕಥೆ ಕೃತಿಯ ಉದ್ದಕ್ಕೂ ಕಾರಣ–ಕಾರ್ಯ ಸಂಬಂಧವನ್ನು ಸಾಧಿಸಿದೆಯೇ? ಇತ್ಯಾದಿಗಳ ವಿವೇಚನೆ ಈ ಲೇಖನದ ವಿಷಯ.

ಬಸವಣ್ಣನವರ ಜನನೋದ್ದೇಶವನ್ನು ಒಬ್ಬೊಬ್ಬರು ಒಂದೊಂದು ಬಗೆಯಾಗಿ ಹೇಳಿದ್ದಾರೆ: ೧. ಖಿಲವಾದ ಶಿವಮತವನ್ನು ಉದ್ಧರಿಸಬೇಕೆಂಬ ನಾರದನ ಬಿನ್ನಹದ ಮೇರೆಗೆ ಶಿವನು ನಂದಿನಾಥನನ್ನು ಬಸವಣ್ಣನಾಗಿ ಕಳಿಸಿದನೆಂದು ಬಸವಪುರಾಣ ಹೇಳುತ್ತದೆ. ೨. ವಸುದೀಪ್ಯ (ಅನಿಮಿಷ) ನಿಗೆ ತನ್ನ ಇಷ್ಟಲಿಂಗವನ್ನು ಕೊಟ್ಟು, ನಂದಿ ಕೈಲಾಸಕ್ಕೆ ಹೋಗುತ್ತಾನೆ. ಈ ಲಿಂಗವಿರಹಿತನೆಂಬ ನಿಂದೆಯನ್ನು ನೀಗಿಸಿಕೊಂಡು ಬರಲು ಶಿವನ ಆಜ್ಞೆಯಂತೆ ಆತನು ಭೂಲೋಕದಲ್ಲಿ ಬಸವಣ್ಣನಾಗಿ ಜನಿಸಿದನೆಂದು ಸಿಂಗಿರಾಜ ಪುರಾಣ ಹೇಳುತ್ತದೆ. ೩. ಕೈಲಾಸದಲ್ಲಿ ಎಲ್ಲ ಗಣಗಳಿಗೂ ಪುಷ್ಪ ಪ್ರಸಾದವನ್ನು ಹಂಚುವಾಗ ವೃಷಭಮುಖನು ಷಣ್ಮುಖನನ್ನು ಮರೆಯುತ್ತಾನೆ. ಈ 'ಪ್ರಸಾದ ವಿತರಣೆ'ಯ ವಿಷಯವಾಗಿ

ಮಾಡಿದ ತಪ್ಪನ್ನು ತಿದ್ದಿಕೊಂಡು ಬರಲು ಶಿವನು ಆತನನ್ನು ಭೂಲೋಕಕ್ಕೆ ಕಳಿಸಿದನೆಂದು ಬಸವರಾಜದೇವರ ರಗಳೆ ಹೇಳುತ್ತದೆ.

ಇವುಗಲ್ಲಿ ಬಸವಪುರಾಣ ಹೇಳುವುದು ಎಲ್ಲ ಮಹಾಪುರುಷರ ಅವತಾರಕ್ಕೂ ಹೇಳುವ ಮಾಮೂಲಿ ಕಾರಣವಾಗಿದೆ. ಕೈಲಾಸಕ್ಕೆ ನಾರದ ಬರುವುದು, ಶಿವನಿಗೆ ಬಿನ್ನವಿಸಿಕೊಳ್ಳುವುದು – ಇತ್ಯಾದಿಗಳೆಲ್ಲ ಹಿಂದೂ ಪುರಾಣಗಳ ಅನುಕರಣಗಳೇ ಸರಿ. ಹೀಗಾಗಿ ಬಸವಪುರಾಣ ಜನನದ ನಿರ್ದಿಷ್ಟ ಉದ್ದೇಶವನ್ನು ಗುರುತಿಸುವ ಗೋಜಿಗೆ ಹೋಗಿಲ್ಲವೆಂದು ಸ್ಪಷ್ಟವಾಗುತ್ತದೆ. ಅಲ್ಲದೆ ಸಹಜವಾಗಿಯೇ ಇದಕ್ಕೆ ನಿರ್ದಿಷ್ಟ ತಳಹದಿಯಿಲ್ಲ. ಒಟ್ಟು ೬೦ ಸಂಧಿಗಳಲ್ಲಿ ೧೦ ಸಂಧಿಗಳು ಮಾತ್ರ ಬಸವಣ್ಣನನ್ನು ಕುರಿತವು; ಮಿಕ್ಕವು ಅನ್ಯರನ್ನು ಕುರಿತವು. ಈ ಪುರಾಣ ಪ್ರಾರಂಭದಲ್ಲಿ ಬಸವಣ್ಣನವರ ಕಥೆಯಾಗಿ ಬಿಚ್ಚಿಕೊಂಡು, ಮುಂದೆ ಅನೇಕ ಕಥೆಗಳು ಕಲಾತ್ಮಕವಲ್ಲದ ಕವಲುಗಳಾಗಿ ಬೆಳೆದಿವೆ. ಹೀಗಾಗಿ ಬಸವಪುರಾಣ ಏಕಮುಖತೆಯಿಲ್ಲದ ಒಂದು ಸೃಜನಶೀಲ ಪ್ರಯತ್ನವೆನಿಸಿದೆ.

ಭೀಮಕವಿಯನ್ನು ಬಿಟ್ಟರೆ ಮೇಲೆ ಹೇಳಿದಂತೆ ಸಿಂಗಿರಾಜ 'ಲಿಂಗತತ್ವ'ದ ಮೇಲೆ ಒತ್ತುಕೊಟ್ಟರೆ, ಹರಿಹರ 'ಪ್ರಸಾದತತ್ವ'ದ ಮೇಲೆ ಒತ್ತು ಕೊಡುತ್ತಾನೆ. 'ಲಿಂಗಧಾರಣ' ಸೂಚನೆಯ ಮೂಲಕ ಸಿಂಗಿರಾಜಪುರಾಣ 'ವೈಯಕ್ತಿಕ ಉದ್ಧಾರ'ಕ್ಕೆ ಮುಖ್ಯತೆಯನ್ನು ಕೊಟ್ಟರೆ, 'ಪ್ರಸಾದ ವಿತರಣೆ' ಸೂಚನೆಯ ಮೂಲಕ ಬಸವರಾಜ ದೇವರ ರಗಳೆ 'ಸಾಮೂಹಿಕ ಉದ್ಧಾರ'ಕ್ಕೆ ಮುಖ್ಯತೆಯನ್ನು ಕೊಡುತ್ತದೆ. ಅಂದರೆ ಬಸವಣ್ಣನಿಗೆ ಸಂಬಂಧಪಟ್ಟಂತೆ ಒಂದರಲ್ಲಿ 'ಲಿಂಗವ್ಯಸನ'ದ, ಇನ್ನೊಂದರಲ್ಲಿ 'ಜಂಗಮಪ್ರೇಮ'ದ ಸೂಚನೆಯಿದೆ. ಸಿಂಗಿರಾಜನೇನೋ ಲಿಂಗವಿರಹಿತನೆಂಬ ಅಪವಾದವನ್ನು ನೀಗಿಸಿಕೊಂಡು ಬರಲು ಬಸವಣ್ಣ ಹುಟ್ಟಿದ ಎಂಬ ಅಂಶವನ್ನು ಪ್ರಾರಂಭದಲ್ಲಿ ಹೇಳಿದ್ದರೂ ಮುಂದೆ ಅವನ ಕೃತಿ ಈ ಅಂಶವನ್ನು ಗುರಿಯಿಟ್ಟು ನಡೆಯುವುದೇ ಇಲ್ಲ. ಜನನ ಕಾರಣಕ್ಕೂ ಜೀವನ ಘಟನೆಗಳಿಗೂ ಸಂಬಂಧವಿಲ್ಲದಂತೆ ಈ ಕೃತಿಯ ತುಂಬ ಯಾವು ಯಾವುದೋ ೬೪ ಪವಾಡಗಳನ್ನು ತುಂಬಿದ್ದಾನೆ. ಹೀಗಾಗಿ ಬಸವಪುರಾಣದಂತೆ ಸಿಂಗಿರಾಜ ಪುರಾಣವೂ 'ಕಥೆ'ಯಾಗಿದೆಯೇ ಹೊರತು 'ಕೃತಿ'ಯಾಗಿಲ್ಲ.

ಹರಿಹರನ ದೃಷ್ಟಿ ಇವರಿಬ್ಬರಿಗಿಂತ ಭಿನ್ನ. ಕಾಲದೃಷ್ಟಿಯಿಂದ, ಸ್ಥಳದೃಷ್ಟಿಯಿಂದ ಈತ ಬಸವಣ್ಣನವರಿಗೆ ಎಲ್ಲರಿಗಿಂತ ಸಮೀಪದಲ್ಲಿದ್ದವನು. ಭೌಗೋಳಿಕವಾಗಿ, ಐತಿಹಾಸಿಕವಾಗಿ ಕಥಾನಾಯಕ ದೂರನಾದಷ್ಟೂ ಅವನ ಸುತ್ತ ಪವಾಡಗಳೂ ಅತ್ಯುಕ್ತಿಗಳೂ ಒಂದೊಂದಾಗಿ ಹುಟ್ಟುತ್ತ ಸೇರಿಕೊಳ್ಳುತ್ತ ಹೋಗುತ್ತವೆ. ಹರಿಹರನ ಸಮಯದಲ್ಲಿ ಶರಣರ ಸುತ್ತ ಪವಾಡಗಳು ಇನ್ನೂ ಅಷ್ಟಾಗಿ ಬೆಳೆದಿರಲಿಲ್ಲ. ಅಲ್ಲಿ ಚರಿತ್ರೆಯ ಅಂಶಗಳು ಇನ್ನೂ ಢಾಳವಾಗಿ ಉಳಿದಿದ್ದವು. ಹೀಗಾಗಿ ಎಷ್ಟೇ ಪವಾಡಗಳನ್ನೊಳಗೊಂಡಿದ್ದರೂ ಹರಿಹರ–ರಾಘವಾಂಕರ ಕೃತಿಗಳು ಇತಿಹಾಸ ಪ್ರಧಾನ 'ಚರಿತ್ರೆ'ಗಳು; ಮುಂದಿನವು ಮಾತ್ರ ಚರಿತ್ರೆಯನ್ನು ಗೌಣವಾಗಿರಿಸಿಕೊಂಡ, ಪವಾಡಗಳನ್ನು ಪ್ರಧಾನವಾಗಿರಿಸಿಕೊಂಡ 'ಪುರಾಣ'ಗಳು. ರಾಘವಾಂಕನು ತನ್ನ ಕೃತಿಗಳಿಗೆ 'ಸಿದ್ಧರಾಮ ಚಾರಿತ್ರ' ಇತ್ಯಾದಿ ಹೆಸರಿಟ್ಟುದೂ ವಿರೂಪಾಕ್ಷ ಪಂಡಿತ ಮೊದಲಾದವರು ತಮ್ಮ ಕೃತಿಗಳಿಗೆ 'ಚೆನ್ನಬಸವ ಪುರಾಣ' ಇತ್ಯಾದಿ ಹೆಸರಿಟ್ಟುದೂ ಅವರ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಪುರಾಣಗಳಿಗಿಂತ ಚರಿತ್ರೆಗಳಲ್ಲಿ ನೈಜತೆ ದಟ್ಟವಾಗಿರುತ್ತದೆ;

ಕಾರ್ಯ-ಕಾರಣ ಸಂಬಂಧ ಸ್ಪಷ್ಟವಾಗಿರುತ್ತದೆ. ಇದಕ್ಕೆ ಅನುಗುಣವಾಗಿ ಚರಿತ್ರೆ ನಿರ್ಮಾಣ ಯುಗದ ಕವಿಯಾದ ಹರಿಹರನು ಬಸವಣ್ಣನವರ ಜನನಕ್ಕೋಸುಗ ಕಲ್ಪಿಸಿಕೊಂಡ ಕಥೆಯಲ್ಲಿ ಮಿಡಿಯುವ ಕಾರಣ ಮತ್ತು ಇದನ್ನು ಸಮರ್ಥಿಸಲು ನಿರೂಪಿಸಿದ ಘಟನೆಗಳಲ್ಲಿ ಕಾರ್ಯ-ಕಾರಣ ಸಂಬಂಧ ಎದ್ದು ಕಾಣುತ್ತದೆ. ಹೀಗಾಗಿ ಇಡೀ ಬಸವರಾಜದೇವರ ರಗಳೆ ಬಸವಣ್ಣನವರ ಜನನ ಕಾರಣಕ್ಕೆ ಬರೆದ ಸಾಹಿತ್ಯಕ ವ್ಯಾಖ್ಯಾನದಂತೆ ಬೆಳೆದು ನಿಂತಿದೆಯೆಂದು ಹೇಳಬಹುದು.

ಕೈಲಾಸದಲ್ಲಿ ಶಿವನ ಸಭೆ, ಮಾಲೆಗಾರನೊಬ್ಬ ಹೂಗಳನ್ನು ತಂದು ಶಿವನಿಗೆ ಕೊಟ್ಟ. ಇವುಗಳನ್ನು ಗಣಸಭೆಗೆ ಹಂಚಲು ವೃಷಭಮುಖನೆಂಬ ಗಣನಿಗೆ ಶಿವ ಹೇಳಿದ. ಈ ಸೇವಾ ಉತ್ಸಾಹದ ಭರದಲ್ಲಿ ವೃಷಭಮುಖನು ಶಿವನ ಮಗನಾದ ಷಣ್ಮುಖನಿಗೇ ಹೂ ಕೊಡುವದನ್ನು ಮರೆತ. ಆಗ ಶಿವ,

ಇಲ್ಲಿ ಪ್ರಸಾದಮಂ ಕುಡುದಿರ್ಪ ಬಳಿವಿಡಿದು
ಅಲ್ಲಿ ಪ್ರಸಾದಮಂ ವಾದಿನಿಂದಂ ಪಡೆದು
ಗಣ ಸಮಕ್ಷದ ಪುಸಿಗೆ ಶರಣರ್ಗೆ ಮಾಡುತ್ತ
....
ಮನ್ನಣೆಯೊಳಿಲ್ಲಿಗೆಯ್ತುಪ್ಪುದಿದು ನಿರ್ಮಿತಂ

ಎಂದು ಆದೇಶ ನೀಡಿ ಭೂಲೋಕಕ್ಕೆ ಕಳಿಸಿದ. ಇದು ಹರಿಹರ ತಾನು ಇಟ್ಟುಕೊಂಡ ಗುರಿಯ ಸಮರ್ಥನೆಗೆ ಕಟ್ಟಿಕೊಂಡ ಹಿನ್ನೆಲೆಯಾಗಿದೆ. ಬಸವಣ್ಣ ಭೂಲೋಕದಲ್ಲಿ ಪ್ರಸಾದತತ್ವದ ಅನುಷ್ಠಾನಕ್ಕಾಗಿ, ಅದರ ಪ್ರಸಾರಕ್ಕಾಗಿ ಹುಟ್ಟಿದನೆಂಬುದನ್ನು ಕಾವ್ಯದ ಮೂಲಕ ಸ್ಪಷ್ಟಪಡಿಸಿರುವುದರ ಸಲುವಾಗಿ ಆತನು ಕಲ್ಪಿಸಿಕೊಂಡ ಕಥಾ ಬೀಜವಿದು. ಈ ಕಾರಣ ಬೀಜವೇ ಮುಂದೆ ಕಾವ್ಯಭೂಜವಾಗಿ ಬಿಚ್ಚಿಕೊಂಡಿದೆ.

ಹರಿಹರನ ಪ್ರಕಾರ ಬಸವಣ್ಣ ಹುಟ್ಟಿದುದು 'ಪ್ರಸಾದ' ತತ್ವದ ಸಿದ್ಧಿಗಾಗಿ, ಪ್ರಸಿದ್ಧಿಗಾಗಿ. ಅಂದರೆ ಬಸವಣ್ಣ ಹುಟ್ಟುವ ಮೊದಲು ಅವನ ಪರಿಸರ 'ಪದಾರ್ಥ' ಮಯವಾಗಿದ್ದಿತು. ಅದನ್ನು ಪ್ರಸಾದಮಯ ಮಾಡುವುದು ಆತನ ಜನನದ ಉದ್ದೇಶ. ಪದಾರ್ಥ ಜೀವನವೆಂದರೆ ಸ್ಥಗಿತ ಬದುಕು; ಪ್ರಸಾದ ಜೀವನವೆಂದರೆ ಚಲನಶೀಲ ಬದುಕು. ಒಂದು ಸ್ಥಾವರ, ಇನ್ನೊಂದು ಜಂಗಮ. ಒಂದಕ್ಕೆ ಅಳಿವುಂಟು, ಇನ್ನೊಂದಕ್ಕೆ ಅಳಿವಿಲ್ಲ. ಬಸವರಾಜದೇವರ ರಗಳೆಯಲ್ಲಿ ಸ್ಥಾವರವಾಗಿದ್ದ ಎರಡು ಸಾಮಾಜಿಕ ಅಂಶಗಳನ್ನು ಜಂಗಮಗೊಳಿಸುವ ಉದ್ದೇಶ ಪ್ರಧಾನವಾಗಿ ಕಾಣುತ್ತದೆ. ಅವು: ೧. ರಾಜ-ಪ್ರಜೆ (=ಜಂಗಮ) ಎಂದು ಸಮಾಜವನ್ನು ಒಡೆದು ಶೋಷಣೆ ನಡೆಸಿದ್ದ ರಾಜನ ಅಧಿಕಾರವನ್ನು ಅಲ್ಲಗಳೆದು ಪ್ರಜೆಗೂ (=ಜಂಗಮ) ರಾಜನಷ್ಟೇ ಅಧಿಕಾರವಿದೆಯೆಂದು ಸಾರುವುದು. ೨. ಕುಲಜ-ಅಂತ್ಯಜ ಎಂದು ಸಮಾಜವನ್ನು ಒಡೆದು ಶೋಷಣೆ ನಡೆಸಿದ್ದು ಕುಲಜನ ಶ್ರೇಷ್ಠತೆಯನ್ನು ಅಲ್ಲಗಳೆದು ಅಂತ್ಯಜನಿಗೂ ಕುಲಜನಷ್ಟೇ ಗೌರವವಿದೆಯೆಂದು ಸಾರುವುದು. ಈ ಎರಡು ಉದ್ದೇಶಗಳು ಈ ರಗಳೆಯ ತುಂಬ ಡಂಗುರ ಹೊಡೆದಂತೆ ಕೇಳಿಸುತ್ತವೆ. ಇದರಲ್ಲಿ ಕಂಡುಬರುವ ಎಲ್ಲ ಘಟನೆಗಳನ್ನು ಈ ಎರಡು ಉದ್ದೇಶಗಳಲ್ಲಿ ಹಂಚಿ ಹಾಕಬಹುದಾಗಿದೆ. ಒಮ್ಮೆ ಬಸವಣ್ಣನು ಜಂಗಮರ (=ಪ್ರಸಾದವಾದಿ ಪ್ರಜೆ) ಪ್ರತಿನಿಧಿಯಾಗಿ ನಿಂತು ಸಂಪತ್ತಿನ ಅಧಿಕಾರ

ಯಾರದು?–ಎಂಬ ಪ್ರಶ್ನೆಯೆತ್ತಿಕೊಂಡು ಬಿಜ್ಜಳನೊಂದಿಗೆ ಸಂಘರ್ಷಕ್ಕೆ ಇಳಿಯುವುದು, ಇನ್ನೊಮ್ಮೆ ಬಿಜ್ಜಳನು ಬ್ರಾಹ್ಮಣರ ಪರವಾಗಿ ನಿಂತು ಸ್ಪೃಶ್ಯಾಸ್ಪೃಶ್ಯತೆಯ ಪ್ರಶ್ನೆಯೆತ್ತಿಕೊಂಡು ಬಸವಣ್ಣನೊಂದಿಗೆ ಸಂಘರ್ಷಕ್ಕೆ ನಿಲ್ಲುವುದು ಇಲ್ಲಿ ಉದ್ದಕ್ಕೂ ನಡೆದಿದೆ, ಇವುಗಳಲ್ಲಿ ಒಂದು ಸಂಪತ್ತಿನ ಮೂಲವಾದ ವರ್ಗಸಂಘರ್ಷವೆನಿಸಿದರೆ, ಇನ್ನೊಂದು ಜಾತಿಮೂಲವಾದ ವರ್ಣಸಂಘರ್ಷವೆನಿಸಿದೆ. ರಗಳೆಯಲ್ಲಿ ಈ ಎರಡನ್ನೂ ಕುರಿತ ಪ್ರತಿಪಾದನೆ ಹೀಗಿದೆ:

ರಾಜ್ಯ ಭಂಡಾರದ ಮೇಲ್ವಿಚಾರಣೆ ಹೊತ್ತ ಬಸವಣ್ಣ
ಚಿಂತಿಸಿದನಾ ವಸ್ತುಗಳ ನಡುವೆ ಕುಳ್ಳಿರ್ದು
ಅಯ್ಯಲಾ ಇಂತಪ್ಪನರ್ಘ್ಯಮಂ ಭಕ್ತರ್ಗೆ
ಕೈಯಾರೆ ಕೊಡಲಿಲ್ಲ........
ಲೋಕಾಯತರ್ಗೆ ಸಾರುತಿರ್ದಪುದಕಟ

ಎಂದು ನುಡಿದು ಆಮೇಲೆ ಕಾವ್ಯದುದ್ದಕ್ಕೂ ಇದನ್ನು ನಡೆಸಿಕೊಡುತ್ತಾನೆ. ಇಲ್ಲಿ 'ಲೋಕಾಯತರ್ಗೆ' ಅಂದರೆ ಪದಾರ್ಥವಾದಿ ಪ್ರಜೆ (=ಭವಿ)ಗಳಿಗೆ ವ್ಯಯವಾಗುತ್ತಲಿದ್ದ ರಾಜ್ಯಸಂಪತ್ತು 'ಲಿಂಗಾಯತರ್ಗೆ' ಅಂದರೆ ಪ್ರಸಾದವಾದಿ ಪ್ರಜೆ (=ಭಕ್ತ)ಗಳಿಗೆ ಬಳಕೆಯಾಗ ಬೇಕೆಂಬುದು ಬಸವಣ್ಣನ ಸಿದ್ಧಾಂತ. ಇವುಗಳಲ್ಲಿ ಲೋಕಾಯತ ಸಂವಿಧಾನ ಬಿಜ್ಜಳನದು; ಲಿಂಗಾಯತ ಸಂವಿಧಾನ ಬಸವಣ್ಣನದು. ಹೀಗಾಗಿ ಬಸವಣ್ಣನ–ಅ. ಪದಾರ್ಥ ಭಾವದಿಂದ ಉಪಭೋಗಿಸುವವರನ್ನು ಕಡೆಗಣಿಸಿ, ಪ್ರಸಾದಭಾವದಿಂದ ಉಪಭೋಗಿಸುವವರಿಗೆ ರಾಜ್ಯಭಂಡಾರವನ್ನು ಆಗಾಗ ವಿನಿಯೋಗಿಸುತ್ತಾನೆ; ಆ. ಇದರ ಸಮರ್ಥನೆಗಾಗಿ 'ತಮ್ಮೊಡವೆಯಂ ತಾವೆ ಕೊಂಡರ್'[೧] ಎಂದು ಆಗಾಗ ಬಿಜ್ಜಳನೊಂದಿಗೆ ವಾದಕ್ಕೆ ಇಳಿಯುತ್ತಾನೆ. ಈ ಎರಡು ಬಗೆಯ ಘಟನೆ (ಅರ್ಥವನ್ನು ವಿನಿಯೋಗಿಸುವುದು ಮತ್ತು ವಿನಿಯೋಗದ ಸಮರ್ಥನೆಗಾಗಿ ವಾದಿಸುವುದು)ಗಳೇ ಇಲ್ಲಿ ಕಂಡುಬರುತ್ತಿದ್ದು, ಇವು ಬಸವಣ್ಣನ ಜನನದ ಉದ್ದೇಶವನ್ನು ಸಾಕಾರಗೊಳಿಸಲು ಸೃಷ್ಟಿಸಿಕೊಂಡುವೆಂದು ಸ್ಪಷ್ಟವಾಗುತ್ತದೆ. ಕೊನೆಗೆ ಜಂಗಮರೇ (=ಪ್ರಸಾದವಾದಿ ಪ್ರಜೆಗಳೇ) ಬಸವಣ್ಣನವರ ಪ್ರಾಣವೆಂದು ನಿದ್ರಾಪವಾಡದ ಮೂಲಕ ಧ್ವನಿಸುತ್ತಾನೆ.

೨. ಇದೇ ರೀತಿ ಸ್ಪೃಶ್ಯಾಸ್ಪೃಶ್ಯತೆಯಿಂದಾಗಿ ನಿರ್ಮಾಣವಾಗಿದ್ದ ಪದಾರ್ಥ ವ್ಯವಸ್ಥೆಯನ್ನು ಮುರಿದು ಪ್ರಸಾದ ವ್ಯವಸ್ಥೆಯನ್ನು ರೂಢಿಗೆ ತರಲು ಬಸವಣ್ಣ ನಡೆಸಿದ ಪ್ರಯತ್ನವನ್ನು ಈ ಕಾವ್ಯದಲ್ಲಿ ಕಾಣಬಹುದು. ಇದಕ್ಕೆ ಸಂಬೋಳಿ ನಾಗಿದೇವನ ಪ್ರಸಂಗ, ಕೇತಕಿ ಪ್ರಸಂಗ, ಉಳ್ಳಿ ಪ್ರಸಂಗಗಳು ನಿದರ್ಶನವಾಗಿವೆ. ಇವುಗಳಲ್ಲಿ ಕೇತಕಿಪುಷ್ಪ ಪೂಜೆಗೆ ತ್ಯಾಜ್ಯ, ಉಳ್ಳಿ ಊಟಕ್ಕೆ ವರ್ಜ್ಯವೆಂಬ ವಿಚಾರಗಳ ಖಂಡನೆಯು ವ್ಯಕ್ತಿಗಳಂತೆ ಹೂವು, ಸೊಪ್ಪುಗಳಲ್ಲಿಯೂ ಕಲ್ಪಿಸಲಾಗಿದ್ದ ಸ್ಪೃಶ್ಯಾಸ್ಪೃಶ್ಯದ ಭೇದವನ್ನು ಪ್ರತಿಭಟಿಸುವುದಾಗಿದೆ. ಇದು ಸ್ಪೃಶ್ಯಾಸ್ಪೃಶ್ಯಭೇದ ನಿವಾರಣೆಗಾಗಿ ಬಸವಣ್ಣ ನಡೆಸಿದ ಅನೇಕ ಸ್ತರಗಳ ಹೋರಾಟವನ್ನು ಸೂಚಿಸುತ್ತದೆ. ತನ್ನ ಈ ಧೋರಣೆಯನ್ನು ಕಾರ್ಯಗೊಳಿಸುವುದಲ್ಲದೆ ಅದರ ಸಮರ್ಥನೆಗಾಗಿ ಅರಸನೊಂದಿಗೆ ವಾದಕ್ಕೆ ಇಳಿಯುತ್ತಾನೆ. ಸಂಬೋಳಿ ನಾಗಿದೇವನ ಪ್ರಸಂಗದಲ್ಲಿ ಬ್ರಾಹ್ಮಣರನ್ನು ಬೆನ್ನುಕಟ್ಟಿಕೊಂಡು

---

೧. ತನ್ನ ಹೆಂಡತಿಗ: ಕಿವಿಯೋಲೆಗಳನ್ನು ಕಳಚಿ ಕೊಡಿಸುವುದೂ ಪ್ರಸಾದತತ್ವವನ್ನೇ ಸೂಚಿಸುತ್ತದೆ

ನಿಂತ ಅರಸು ಬಿಜ್ಜಳನೊಂದಿಗೆ ಶೂದ್ರರನ್ನು ಬೆನ್ನು ಕಟ್ಟಿಕೊಂಡು ಬಸವಣ್ಣ ವಾದ ನಡೆಸಿದುದು ಇದಕ್ಕೆ ಉದಾಹರಣೆಯಾಗಿದೆ.

ಹೀಗೆ ಪ್ರಭು ಮತ್ತು ಪುರೋಹಿತ ವರ್ಗದವರ ಶ್ರೇಷ್ಠತೆಯನ್ನು ಅಲ್ಲಗಳೆಯುವ, ಪ್ರಜೆ ಮತ್ತು ಶೂದ್ರವರ್ಗದವರ ಕನಿಷ್ಠತೆಯನ್ನು ಅಲ್ಲಗಳೆಯುವ ಕ್ರಿಯೆ ಒಮ್ಮೆ ಮಾತಿನ ಮೂಲಕ, ಇನ್ನೊಮ್ಮೆ ಕೃತಿಯ ಮೂಲಕ ವ್ಯಕ್ತವಾಗುತ್ತ ನಡೆದಿದೆ, ಈ ಕಾವ್ಯದಲ್ಲಿ. ಪದಾರ್ಥವಾದಿ ಸಮಾಜದಲ್ಲಿ ಪ್ರಸಾದವಾದವನ್ನು ಅನುಷ್ಠಾನಗೊಳಿಸುವುದು ಸುಲಭದ ಕೆಲಸವಲ್ಲ. ಉದ್ದಕ್ಕೂ ಹೋರಾಟ ನಡೆಸಬೇಕಾಗುವುದೆಂಬುದನ್ನು ಸೂಚಿಸುವಂತೆ ಈ ಕೃತಿಯ ಎಲ್ಲ ಘಟನೆಗಳಲ್ಲಿಯೂ ಸಂಘರ್ಷ ಕೇಳಿಬರುತ್ತದೆ. ಆದುದರಿಂದ ಬಸವರಾಜದೇವರ ರಗಳೆ ಕನ್ನಡದ ಪ್ರಥಮ ಸಾಮಾಜಿಕ ಸಂಘರ್ಷ ಕಾವ್ಯವಾಗಿದೆ. ಒಟ್ಟು ಕಾವ್ಯ ತನ್ನ ಕೇಂದ್ರ ಉದ್ದೇಶವಾದ 'ಪ್ರಸಾದತತ್ವ'ದ ಸುತ್ತ ಬಿಚ್ಚಿಕೊಳ್ಳುತ್ತ ನಡೆದಿದ್ದು, ಇದು ಬಸವಣ್ಣನವರ ಜೀವನೋದ್ದೇಶವನ್ನು ಅರ್ಥ ಮಾಡಿಕೊಂಡ ಕನ್ನಡ ಕಾವ್ಯಗಳಲ್ಲಿಯೇ ಅರ್ಥಪೂರ್ಣ ಕೃತಿಯಾಗಿದೆ.

❑

ಶಿವಶರಣರ ದೃಷ್ಟಿಯಲ್ಲಿ ಬಸವಣ್ಣ

●

ಡಾ. ವಿಜಯಶ್ರೀ ಸಬರದ

ಪ್ರಸ್ತಾವನೆ:

ಬಸವಣ್ಣನವರ ಚರಿತ್ರೆಯನ್ನು ಸಂಪೂರ್ಣವಾಗಿ ಕಟ್ಟಿಕೊಡುವಲ್ಲಿ ನಮ್ಮ ಇತಿಹಾಸ ಮೌನ ತಾಳಿದೆ. ಕೆಲವು ಆಧಾರಗಳಿಂದ ಶಿವಶರಣರ ಚರಿತ್ರೆಯ ಕೆಲವು ಪ್ರಸಂಗಗಳು ಮಾತ್ರ ತಿಳಿದು ಬರುತ್ತವೆ. ಬಸವಣ್ಣನವರ ಸಮಕಾಲೀನ ಶರಣರ ವಚನಗಳಲ್ಲಿ ಬಸವಣ್ಣನವರನ್ನು ಕುರಿತಂತೆ ಕೆಲವು ಪ್ರಸಂಗಗಳು ಉಲ್ಲೇಖವಾಗಿವೆ. ಸಮಕಾಲೀನ ಶರಣರ ವಚನಗಳಲ್ಲಿ ಬರುವ ಈ ಆಧಾರಗಳು ಹೆಚ್ಚು ಅಧಿಕೃತವಾಗುವ ಸಾಧ್ಯತೆಗಳನ್ನು ಪಡೆಯಬಹುದಾಗಿತ್ತು. ಆದರೆ ಇವು ಸೃಜನಶೀಲ ಸಾಹಿತ್ಯವೊಂದರ ಬೆಳವಣಿಗೆಗಳಾಗಿರುವುದರಿಂದ ಇವುಗಳನ್ನು ಚರಿತ್ರೆಯ ಹಾಗೆ ಅಧಿಕೃತವೆಂದು ಭಾವಿಸುವುದು ಎಷ್ಟು ಸೂಕ್ತ ಎಂಬ ಪ್ರಶ್ನೆ ಏಳುತ್ತದೆ. ಆದರೂ ಬಸವಣ್ಣನವರನ್ನು ಕುರಿತಂತಿರುವ ಶಾಸನಗಳು, ಕಾವ್ಯಗಳು, ಜನಪದ ಹಾಡುಗಳು, ಆಧುನಿಕ ಕೃತಿಗಳು ಇವೆಲ್ಲವುಗಳಿಂದ ಸಮಕಾಲೀನ ಶರಣರ ವಚನಗಳು ಹೆಚ್ಚು ಕೂತೂಹಲಕಾರಿಯಾಗಿವೆ. ಅಂತಹ ಸಮಕಾಲೀನ ಶರಣರು ರಚಿಸಿರುವ ವಚನಗಳಲ್ಲಿ ಬರುವ ಬಸವಣ್ಣನವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಗುರುತಿಸುವುದು ಇಲ್ಲಿಯ ಉದ್ದೇಶವಾಗಿದೆ.

ವಚನಕಾರರು ಬಸವಣ್ಣನವರನ್ನು ತೀರ ಹತ್ತಿರದಿಂದ ಕಂಡಿರುವುದರಿಂದ ಅವರಿಗೆ ಬಸವಣ್ಣನವರು ಇತಿಹಾಸದ ವ್ಯಕ್ತಿಯಾಗಿ ಕಾಣದೆ ಇತಿಹಾಸವನ್ನು ನಿರ್ಮಿಸಿದ ವ್ಯಕ್ತಿಯಾಗಿ ಕಾಣುತ್ತಾರೆ. ಬಸವಣ್ಣನವರ ಅಂತರಂಗ-ಬಹಿರಂಗದ ಸಾಧನೆಗಳನ್ನು ಗುರುತಿಸಿದ ವಚನಕಾರರಿಗೆ ಬಸವಣ್ಣನವರು ದೇವರಾಗಿ ಕಾಣುವುದರ ಜೊತೆಗೆ ಮಹಾಮಾನವರಾಗಿ ಕಂಡಿರುವುದು ಗಮನಾರ್ಹವಾಗಿದೆ. ಲೌಕಿಕ ಅಲೌಕಿಕ ಭಾವದ ಸಮ್ಮಿಲನತೆಯ ದ್ಯೋತಕವಾಗಿ ಬಸವಣ್ಣನವರು ವಚನಕಾರರಿಗೆ ಕಂಡಿದ್ದಾರೆ. ವಚನಕಾರರು ಬಸವಣ್ಣನವರ ಜೊತೆಯಲ್ಲಿರುವಾಗ ತಮಗಾದ ಅನುಭವಗಳನ್ನು ಅನುಭಾವಾತ್ಮಕವಾಗಿ ಸರಳವಾದ ರೀತಿಯಲ್ಲಿ ವಚನರೂಪದಲ್ಲಿ ಅಭಿವ್ಯಕ್ತಿಸಿದ್ದಾರೆ. ಮಾನವ-ದೇವರಾಗುವ, ಭಕ್ತ-ಗುರುವಾಗುವ, ಜಂಗಮ-ಲಿಂಗವಾಗುವ, ವ್ಯಕ್ತಿ-ಶಕ್ತಿಯಾಗುವ ಸಾಧ್ಯತೆಗಳನ್ನು ವಚನಕಾರರು ಬಸವಣ್ಣನವರಲ್ಲಿ ಕಂಡಿದ್ದಾರೆ. ಷಟ್‌ಸ್ಥಲವನ್ನೊಳಗೊಂಡು ಅಂತರಂಗದ ಸಿದ್ಧಿಯನ್ನು ಪಡೆದ ಮತ್ತು ಅಷ್ಟಾವರಣ,

ಪಂಚಾಚಾರಗಳನ್ನೊಳಗೊಂಡು ಬಹಿರಂಗದ ಸಿದ್ಧಿಯನ್ನು ಪಡೆದ ಬಸವಣ್ಣನವರ ಜನ್ಮವೃತ್ತಾಂತದ ಹಂತದಿಂದ ಕೈಲಾಸವನ್ನಾಗಿ ಮಾಡಿದ ಕಲ್ಯಾಣವನ್ನು ಬಿಟ್ಟು ಹೋಗುವ ಹಂತದವರೆಗೂ ವಚನಕಾರರು ತಾವು ಕಂಡ ಬಸವಣ್ಣನವರ ವ್ಯಕ್ತಿತ್ವವನ್ನು ಕುರಿತು ಭಾವ ತುಂಬಿ, ಮನ ತುಂಬಿ ಹಾಡಿದ್ದಾರೆ. ತಮಗೂ ಬಸವಣ್ಣನವರಿಗೂ ಇರುವ ಬೌದ್ಧಿಕ, ತಾತ್ವಿಕ, ವೈಚಾರಿಕ ಹಾಗೂ ಭಾವನಾತ್ಮಕ ಸಂಬಂಧದ ಅನುಭವಗಳನ್ನು ವಚನಗಳಲ್ಲಿ ಬಿಚ್ಚಿಟ್ಟಿದ್ದಾರೆ.

ವಚನಕಾರರು, ಬಸವಣ್ಣನವರು ಸೃಷ್ಟಿಕರ್ತರೆಂದು, ಆದಿ-ಅನಾದಿಗೆ ಮೂಲರೆಂದು, ಪರಮ ಗುರುವೆಂದು, ಭಕ್ತಿ ಭಂಡಾರಿಯೆಂದು, ಮಹಾ ಪ್ರಸಾದಿಯೆಂದು, ಪವಾಡ ಪುರುಷರೆಂದು ತಮ್ಮ ವಚನಗಳಲ್ಲಿ ಚಿತ್ರಿಸಿದ್ದಾರೆ. ಬಸವಣ್ಣನವರ ಕೃಪೆಯಿಂದಲೇ ತಾವು ಬದುಕಿದ್ದೇವೆಯೆಂಬ ಭಾವವನ್ನು, ಬಸವಣ್ಣನವರಿಂದಲೇ ತಮ್ಮ ಬದುಕು ಸಾರ್ಥಕವಾಯಿತೆಂಬ ಭಾವವನ್ನು, ಬಸವಣ್ಣನವರಿಗೆ ತಮ್ಮನ್ನು ಸಮರ್ಪಿಸಿಕೊಂಡ ಭಾವವನ್ನು, ತಾವು ಬಸವಣ್ಣನಲ್ಲಿ ಒಂದಾಗುವ; ಬಸವಣ್ಣನವರು ತಮ್ಮಲ್ಲಿ ಒಂದಾಗುವ ಅನ್ಯೋನ್ಯಭಾವವನ್ನು ತಾತ್ವಿಕ ನೆಲೆಯಲ್ಲಿ ಚಿತ್ರಿಸಿದ್ದಾರೆ. ತಮಗೂ ಬಸವಣ್ಣನವರಿಗೂ ಇರುವ ಅಲೌಕಿಕ ಸಂಬಂಧವನ್ನು ಆತ್ಮೀಯ ರೀತಿಯಲ್ಲಿ ಹೇಳಿಕೊಂಡಿದ್ದಾರೆ. ಬಸವಣ್ಣನವರ ಲಿಂಗಾಂಗ ಸಾಮರಸ್ಯದ ಅನುಭಾವದ ಎತ್ತರವನ್ನು ತಮ್ಮಿಂದ ಬಣ್ಣಿಸಲಾಗದೆಂದು ವಿನಮ್ರವಾಗಿ ತಿಳಿಸಿದ್ದಾರೆ. ಬಸವಣ್ಣನವರ ಅಗಲುವಿಕೆಯ ನೋವನ್ನು ತೋಡಿಕೊಂಡಿದ್ದಾರೆ. ಹೀಗೆ ಬಸವಣ್ಣನವರ ಚರಿತ್ರೆಗೆ ಸಂಬಂಧಿಸಿದಂತಹ ಕೆಲವು ಸಂಗತಿಗಳನ್ನು ವಚನಕಾರರ ವಚನಗಳಲ್ಲಿ ಕಾಣಬಹುದಾಗಿದೆ. ಈ ಲೇಖನದ ಉದ್ದೇಶಕ್ಕೆ ಅನುಗುಣವಾಗಿ ಮತ್ತು ಅರ್ಥಸ್ಪಷ್ಟತೆಗಾಗಿ ವಚನಕಾರರ ವಚನಗಳನ್ನು ಉದಾಹರಿಸಿದ್ದೇನೆ. ಕೆಲವು ಕಡೆಗೆ ವಚನಗಳ ಸಾಲುಗಳನ್ನು ಮಾತ್ರ ಉದಾಹರಿಸಿದ್ದೇನೆ.

ಜನನ:

ಬಸವಣ್ಣನವರು ಯಾವ ಕಾರಣಕ್ಕಾಗಿ ಮರ್ತ್ಯಲೋಕಕ್ಕೆ ಅವತರಿಸಿದರೆಂಬುದನ್ನು ಅಲ್ಲಮಪ್ರಭು, ಮಡಿವಾಳಮಾಚಿದೇವರು, ಶಂಕರದಾಸಿಮಯ್ಯ, ಚೆನ್ನಬಸವಣ್ಣ, ಅಕ್ಕಮಹಾದೇವಿ, ನಾಗಲಾಂಬಿಕೆ, ನೀಲಮ್ಮ ಮೊದಲಾದ ವಚನಕಾರ್ತಿಯರು ಹಾಗೂ ವಚನಕಾರರು ತಮ್ಮ ವಚನಗಳಲ್ಲಿ ಸುದೀರ್ಘವಾಗಿ ವಿವರಿಸಿದ್ದಾರೆ.

ಇಪ್ಪತ್ತೊಂದು ಯುಗಂಗಳನ್ನು ಸೃಷ್ಟಿಸಿದ ಬಸವಣ್ಣನವರನ್ನು ತನ್ನ ಕರಕಮಲವೆಂಬ ಗರ್ಭದಲ್ಲಿ ಜನಿಸದರೆಂದು (ವ.೧೦೦೨, ಪು: ೩೩೨, ಸ.೩), ಲಿಂಗ, ಜಂಗಮದ ಪ್ರಸಾದದ ಪೂರ್ವಾಶ್ರಯ ಕಳೆಯಲೆಂದು (ವ.೮, ಪು.೫ ಸಂ.೩), ಹರನ ಆಗ್ರಹ ನಿಗ್ರಹದಿಂದಾಗಿ ಗುರು ನಿರೂಪವೆಂದು ಕೈಕೊಂಡು ಬಸವಣ್ಣ ಕೈಲಾಸದಿಂದ ಗುರು ಲಿಂಗ ಜಂಗಮಕ್ಕೆ ಭಕ್ತಿಯ ಮಾಡಬೇಕೆಂದು ಏಳುನೂರೆಪ್ಪತ್ತು ಅಮರ ಗಣಂಗಳ ಸಹಿತ ಮರ್ತ್ಯಲೋಕಕ್ಕೆ ತಂದನಯ್ಯಾ (ವ. ೧೭೫೪. ಪು. ೬೫೦ ಸಂ.೩) ಎಂದು ಚೆನ್ನಬಸವಣ್ಣನವರು ಬಸವಣ್ಣನವರ ಜನನದ ಉದ್ದೇಶವನ್ನು ತಿಳಿಸಿದ್ದಾರೆ.

ಶೈವಾಗಮಾಚಾರ್ಯ ಮಂಡಗೆಯ ಮಾದಿರಾಜನ ಸತಿ ಮಾದಲಾಂಬಿಕೆಯ ಮಗನಾಗಿ, ಶಿವಭಕ್ತಿಯನ್ನು ಹೆಚ್ಚಿಸಲು ಮರ್ತ್ಯಕ್ಕೆ ಅವತರಿಸಿದನೆಂದು; ಕಪ್ಪಡಿ ಸಂಗಯ್ಯ

ದೇವರಿಂದ ಉಪದೇಶ ಪಡೆದು ಸರ್ವಾಚಾರ ಸಂಪನ್ನರಾಗಿ, ಶಿವಪ್ರಧಾನರಾಗಿ, ಶಿವಾಚಾರ ಶಿರೋಮಣಿಯಾಗಿ ಏಳುನೂರಾಯೆಪ್ಪತ್ತು ಅಮರ ಗಣಗಳಿಗೆ ಪ್ರಥಮ ದಂಡನಾಯಕರಾಗಿ ಗುರುಲಿಂಗಜಂಗಮಕ್ಕೆ ತನು ಮನ ಧನವನ್ನು ಅರ್ಪಿಸಿ ಅನವರತ ಶಿವಗಣ ತಿಂಥಿಣಿಯೊಳು ಓಡಾಡುತ್ತಿದ್ದರೆಂದು (ವ, ೫೭೦, ಪು.೨೧೭. ಸಂಕೀ. ವಸಂ.೩) ಮಡಿವಾಳ ಮಾಚಿದೇವರು ಹೇಳಿದ್ದಾರೆ.

ಮರ್ತ್ಯಲೋಕದ ಮಹಾಮನೆ ಹಾಳಾಗಬಾರದೆಂದು ಶಿವನು ಬಸವಣ್ಣನವರನ್ನು ಭೂಲೋಕಕ್ಕೆ ಕಳುಹಿಸಿದನೆಂದು, ಕಲಿಯುಗದಲ್ಲಿ ಬಸವನೆಂಬ ಗಣೇಶ್ವರನಾಗಿ ಹುಟ್ಟಿಸಿದರೆಂದು, ಶಿವಾಚಾರದ ಧ್ವಜವನೆತ್ತಿಸಿ ಮರ್ತ್ಯಲೋಕಕ್ಕೆ ಶಿವಲೋಕಕ್ಕೆ ನಿಚ್ಚಣಿಗೆಯಾದರೆಂಬುದು (ವ.೧೧೭೪, ಪು.೩೩೬, ಸಂ.೩) ಅಲ್ಲಮಪ್ರಭು ಅವರ ವಿಚಾರವಾಗಿದೆ.

ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ, ವೀರಶೈವ ಮಾರ್ಗವನರುಪುವುದಕ್ಕೆ ಬಾವನ್ನ ವಿವರನೊಳಕೊಂಡು ಚರಿಸಿದನು (ವ.೩೦೯, ಪು.೯೫, ಶಿ.ಶ.ವ.ಸಂ.೫) ಎಂದು ಅಕ್ಕಮಹಾದೇವಿ ಅವರು ಹೇಳಿದರೆ, ಆಚಾರವೆಂಬುದು ಅಗೋಚರ ನೋಡಯ್ಯಾ, ಆರಿಗೆಯೂ ಸಾಧ್ಯವಲ್ಲ, ಮರ್ತ್ಯಲೋಕದಲ್ಲಿ ಆ ಸದಾಚಾರದ ಬೆಳವಿಗೆಯ ಮಾಡಲೆಂದು ಬಸವಣ್ಣ ಬಂದು ಭಕ್ತಸ್ಥಲವ ಹರಹಿದ. ಗುರು ಲಿಂಗ ಜಂಗಮ ದಾಸೋಹ ಪಾದೋದಕ ಪ್ರಸಾದದ ಹಾದಿಯನೆಲ್ಲರಿಗೆ ತೋರಿದ (ವ.೪, ಪು. ೨೩೧, ಶಿ.ಶ.ವ.ಸಂ.೫) ಎಂದು ನಾಗಲಾಂಬಿಕೆ ಅವರು ಹೇಳಿದ್ದಾರೆ.

ಹರನ ನಿರೂಪದಿಂದ ಧರೆಗೆ ಬಸವಣ್ಣನವತರಿಸಿದ ಕಾರಣ ಶಿವಾಚಾರ ಸದಾಚಾರವೆಂಬುದು ಧರೆಗೆ ವಿಖ್ಯಾತವಾಯಿತು. (ವ.೧೩೨, ಪು.೫೨, ಸಂಕೀ. ವ.ಸಂ.೪) ಎಂದು ಶಂಕರ ದಾಸಿಮಯ್ಯನವರು ತಿಳಿಸಿದ್ದಾರೆ. ಹೀಗೆ ಬಸವಣ್ಣನವರು ಆದಿ-ಅನಾದಿಗೂ ಪೂರ್ವದಲ್ಲಿದ್ದು ಮೂರು ಲೋಕಗಳನ್ನು ಸೃಷ್ಟಿಸಿದವರು. ಮರ್ತ್ಯಲೋಕವನ್ನು ಉದ್ಧರಿಸಲು ಬಂದವರು, ವೀರಶೈವ ಮಾರ್ಗವನ್ನು ತಿಳಿಸಲು, ಶಿವಭಕ್ತಿಯನ್ನು ಸಾರಲು ಭೂಲೋಕಕ್ಕೆ ಅವತರಿಸಿದರೆಂಬುದು ವಚನಕಾರರ ಮತ್ತು ವಚನಕಾರ್ತಿಯರ ಅಭಿಪ್ರಾಯವಾಗಿದೆ.

ಸ್ತುತಿ :

ವಚನಕಾರರು ಮತ್ತು ವಚನಕಾರ್ತಿಯರು ಬಸವಣ್ಣನವರ ಜನ್ಮವೃತ್ತಾಂತದ ಬಗೆಗೆ ತಿಳಿಸುತ್ತಲೇ ಅವರ ಸಾಧನೆಯ ಕುರಿತಂತೆ ಮನತುಂಬಿ ಸ್ತುತಿಸಿದ್ದಾರೆ.

ತನುವ ಗೆಲಲರಿಯದೆ, ಮನವ ಗೆಲಲರಿಯದೆ, ಧನವ ಗೆಲಲರಿಯದೆ, ಭ್ರಮೆಗೊಂಡಿತ್ತು ಲೋಕವೆಲ್ಲವು. ತನುವ ದಾಸೋಹಕ್ಕೆ ಸವಿಸಿ, ಮನವ ಲಿಂಗಧ್ಯಾನದಲ್ಲಿ ಸವಿಸಿ, ದನವ ಜಂಗಮದಲ್ಲಿ ಸವಿಸಿ ಗೆಲಬಲ್ಲಡೆ, ಸಂಗನ ಬಸವಣ್ಣನಲ್ಲದೆ ಮತ್ತಾರನೂ ಕಾಣೆ ಗುಹೇಶ್ವರ ನಿಮ್ಮ ಶರಣ ಸಂಗನ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು (ವ.೧೨೨೦, ಪು.೩೬೪, ವ.ಶಂ.೨) ಎಂದು ಅಲ್ಲಮಪ್ರಭು ಅವರು ಬಸವಣ್ಣನವರ ಸಮರ್ಪಣಾ ಭಾವದ ಭಕ್ತಿಯನ್ನು ಕಂಡು ನಮಸ್ಕರಿಸಿದ್ದಾರೆ.

ದಾಸೋಹ ಸಂಪನ್ನರು, ಸದ್ಭಕ್ತಿ ಸಂಪನ್ನರು, ಲಿಂಗ ಸಂಪನ್ನರು, ಸರ್ವಾಂಗದಲ್ಲಿ ಸರ್ವಾಚಾರ ಸಂಪನ್ನರಾದ ಬಸವಣ್ಣನವರ ಶ್ರೀಪಾದಕ್ಕೆ ನಮೋ ನಮೋ (ವ.೧೪೩೨,

ಪು.೫೩೨, ವ.ಸಂ.೩) ಎಂದು ಚೆನ್ನಬಸವಣ್ಣನವರು ಬಸವಣ್ಣನವರ ಬಸವಣ್ಣನವರ ಸರ್ವಾಚಾರ ಸಂಪನ್ನತೆಯನ್ನು ಕಂಡು ನಮಿಸಿದ್ದಾರೆ.

ಸರ್ವಾಂಗಲಿಂಗಿ, ದಾಸೋಹ ಸಂಪನ್ನ ಇಂತೀ ಐವತ್ತೆರಡು ವಿಧದಲ್ಲಿ ನಿಪುಣರಾಗಿ ಮೆರೆದ ನಮ್ಮ ಬಸವಣ್ಣನು. ಆ ಬಸವಣ್ಣನ ಶ್ರೀಪಾದಕ್ಕೆ ನಾನು ಆಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಚೆನ್ನಮಲ್ಲಿಕಾರ್ಜುನಾ (ವ.೩೦೯, ಪು.೯೫, ಶಿ.ಶ.ವ.ಸಂ.೫) ಎಂದು ಅಕ್ಕಮಹಾದೇವಿಯು ಬಸವಣ್ಣನವರ ವ್ಯಕ್ತಿ ವಿಶಿಷ್ಟತೆಯನ್ನು ಕಂಡು ನಮಸ್ಕರಿಸಿದ್ದಾರೆ.

ಇಂತೀ ನವವಿಧಲಿಂಗವೂ ಬಸವಣ್ಣನೇ, ಇಂತಿವನೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು ಎನಗೆ ಪ್ರಸಾದವನಿಕ್ಕಿ ಸಲಹಿದನಯ್ಯಾ ಬಸವಣ್ಣನು. ಇದು ಕಾರಣ ಅನವರತ ನಾನು ಬಸವಾ, ಬಸವಾ, ಬಸವಯ್ಯಾ, ಬಸವಗುರುವೇ, ಬಸವಲಿಂಗವೇ, ಬಸವತಂದೆಯೇ, ಬಸವ ಪ್ರಭುವೇ ನಮೋ ನಮೋ ಎನುತಿರ್ದೆನಯ್ಯಾ (ವ.೧೫೩೨, ಪು.೫೯೨, ಸಂಕೀ ವ.ಶಂ.೧) ಎಂದು ಉರಿಲಿಂಗಪೆದ್ದಿಗಳು ಬಸವಣ್ಣನವರನ್ನು ಭಕ್ತಿಭಾವದಿಂದ ಸ್ತುತಿಸಿದ್ದಾರೆ ಹಾಗೂ ಕೃತಜ್ಞತಾ ಭಾವವನ್ನು ವ್ಯಕ್ತಪಡಿಸಿದ್ದಾರೆ.

ಗುರು:

ಲೋಕಕ್ಕೆ ಪ್ರಥಮಾಚಾರ್ಯರಾದ ಬಸವಣ್ಣನವರು ತಮಗೆಲ್ಲರಿಗೂ ಗುರು ಎಂಬುದನ್ನು ವಚನಕಾರರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಅಲ್ಲಮಪ್ರಭು ತನ್ನ ಗುರು ಅನಿಮಿಷನೆಂದು, ತನ್ನ ಗುರುವಿನ ಗುರು, ಬಸವಣ್ಣನೇ ತನಗೂ ಗುರು ಎಂದು ತಿಳಿಸಿದ್ದಾರೆ. ಗುರು, ಲಿಂಗ, ಜಂಗಮ, ಪ್ರಸಾದ, ಆಚಾರವೆಂಬ ಪಂಚವಿಧವೇ ಪಂಚಬ್ರಹ್ಮವೆಂದು ಅರಿದು, ಆಚರಿಸಿ ಎಲ್ಲರಿಗೆಯೂ ಅರುಹಿಕೊಟ್ಟ ಬಸವಣ್ಣನು ಎನಗೆಯೂ ಗುರು, ಶಿವನಿಗೆಯೂ ಗುರು, ಮೂರು ಲೋಕಕ್ಕೆ ಗುರುವೆಂಬುದು ಅಲ್ಲಮಪ್ರಭು ಅವರ ಅಭಿಪ್ರಾಯ.

ಅಲ್ಲಮನಂತೆ ಸಿದ್ಧರಾಮಯ್ಯನವರು ಬಸವಣ್ಣನವರು ಗುರುವಾದ ಬಗೆಯನ್ನು ಹೇಳುತ್ತಾರೆ. ತನು, ಮನ, ಧನವನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಿ ಎಲ್ಲರಿಗೂ ಗುರುವಾದನಯ್ಯಾ ಬಸವಣ್ಣನು (ವ.೨೩೨, ಪು. ೧೦೯, ಶರಣರು ಕಂಡ ಬಸವಣ್ಣ) ಹಾಗೂ ಎನ್ನ ಸಕಲಕ್ಕೆ ಗುರುಬಸವಣ್ಣ, ಎನ್ನ ನಿಃಕಲಕ್ಕೆ ಗುರುಬಸವಣ್ಣ (ವ.೨೪೧, ಪು.೬೭ ಸಂ.೪) ಎಂದು ತಿಳಿಸಿದ್ದಾರೆ. ಎನ್ನ ಭಾವಕ್ಕೆ ಗುರುವಾದನಯ್ಯ ಬಸವಣ್ಣನು ಎಂಬುದು (ವ.೧೦, ಪು.೨೭೩, ಶಿ.ಶ.ವ.ಸಂ.೫) ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀಯ ಅಭಿಪ್ರಾಯವಾದರೆ, ಎನ್ನ ಕಾಯಕ್ಕೆ ಗುರುವಾದನಯ್ಯಾ ಬಸವಣ್ಣನು ಎಂದು (ವ.೧೨೮,ಪು.೫೪, ಸಂಕೀ.ವ.ಸಂ.೪) ಶಂಕರದಾಸಿಮಯ್ಯ ಅವರ ವಿಚಾರವಾಗಿದೆ. ಬಸವಣ್ಣನೆ ಎನಗೆ ಗುರುಸ್ವರೂಪನಯ್ಯಾ ಎಂಬುದು (ವ.೧೬೪೧. ಪು. ೬೩೫ ಸಂಕೀವ. ಸಂ.೧) ಎಳಿಯುಮೇಶ್ವರ ಚಿಕ್ಕಣ್ಣಗಳವರ ಅಭಿಪ್ರಾಯವಾಗಿದೆ. ಎನಗೆ ಗುರು ತಾನೀತ ಬಸವಣ್ಣನು, ಎನ್ನ ಭವರೋಗದ ಭೇದಿಸಿ ಭಕ್ತನೆನಿಸುವಲ್ಲಿ (ವ. ೫೨೭, ಪು. ೩೦೩ ಸಂಕೀ. ವ.ಸಂ.೩) ಎಂದು ಮಡಿವಾಳ ಮಾಚಿದೇವರು ತಿಳಿಸಿದ್ದಾರೆ. ಹೀಗೆ ಈ ಮೊದಲಾದ ವಚನಕಾರರು ನವ ವಿಧಲಿಂಗ

ಸ್ವರೂಪಿಯಾದ ಹಾಗೂ ಜಂಗಮ ಸ್ವರೂಪಿಯಾದ, ಪ್ರಸಾದ ಸ್ವರೂಪಿಯಾದ, ಬಸವಣ್ಣನವರನ್ನು ಗುರು ಸ್ವರೂಪದಲ್ಲಿ ಕಂಡಿದ್ದಾರೆ.

ಮಹಾಪ್ರಸಾದಿ :

ಬಸವಣ್ಣನವರು ಮಹಾಪ್ರಸಾದಿಯೆಂದು ವಚನಕಾರರು ಅವರ ಪ್ರಸಾದದ ಮಹಿಮೆಯನ್ನು ತಮ್ಮ ವಚನಗಳಲ್ಲಿ ಬಣ್ಣಿಸಿದ್ದಾರೆ. ಅಯ್ಯಾ ನಿಮ್ಮ ಪ್ರಸಾದದ ಮಹಿಮೆಯನೇನೆಂಬೆನೆಯ್ಯಾ ವೇದಂಗಲರಿಯವು ಶಾಸ್ತ್ರಂಗಳರಿಯವು (ವ.೪೭೦, ಪು.೧೮೨), ಸಂಕಿ.ವ.ಸಂ.೩) ಎಂದು ಮಡಿವಾಳ ಮಾಚಿದೇವರು ಭಾವ ತುಂಬಿ ಬಣ್ಣಿಸುವುದರೊಂದಿಗೆ ಬಸವಣ್ಣನ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದವನ್ನು ತೆಗೆದುಕೊಳ್ಳುವುದರಿಂದ ತನ್ನ ತನು, ಮನ, ಭಾವ ಶುದ್ಧವಾಯಿತೆಂದು (ವ.೫೩೪, ಪು.೩೦೪, ಸಂಕೀ.ವ.ಸಂ.೩) ಮನತುಂಬಿ ಬಣ್ಣಿಸಿದ್ದಾರೆ.

ತನುವಿಡಿದು ದಾಸೋಹ ಮಾಡಿ ಗುರು ಪ್ರಸಾದಿಯಾದ ಬಸವಣ್ಣ, ಮನವಿಡಿದು ದಾಸೋಹ ಮಾಡಿ ಲಿಂಗ ಪ್ರಸಾದಿಯಾದ ಬಸವಣ್ಣ, ಧನವಿಡಿದು ದಾಸೋಹ ಮಾಡಿ ಜಂಗಮ ಪ್ರಸಾದಿಯಾದ ಬಸವಣ್ಣ, ಇಂತೀ ತ್ರಿವಿಧವಿಡಿದು ದಾಸೋಹ ಮಾಡಿ ಸದ್ಗುರು ಕಪಿಲಸಿದ್ಧ ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣ ಸ್ವಯಂ ಪ್ರಸಾದಿಯಾದನಯ್ಯ ಬಸವಣ್ಣ (ವ.೪೫೫, ಪು. ೧೫೮, ವ.ಸಂ.೪) ಬಸವಣ್ಣನ ಪ್ರಸಾದದ ಕೊಂಡು ನಾನು ಬದುಕಿದೆನು ಎಂದು ಸಿದ್ಧರಾಮಯ್ಯನವರು ಬಸವಣ್ಣನವರು ಪ್ರಸಾದಿಯಾಗುವ ವಿಚಾರವನ್ನು ತಿಳಿಸಿದ್ದಾರೆ.

ಆದಿಯಲ್ಲಿ ಬಸವಣ್ಣನುತ್ಪತ್ತಿಯಾದ ಕಾರಣ ನಾಗಲೋಕದ ನಾಗಗಣಂಗಳಿಗೆಯೂ ಬಸವಣ್ಣ ಪ್ರಸಾದ, ಮರ್ತ್ಯಲೋಕದ ಮಹಾಗಣಂಗಳಿಗೆಯೂ ಬಸವಣ್ಣ ಪ್ರಸಾದ ದೇವಲೋಕದ ದೇವಗಣಂಗಳಿಗೆಯೂ ಬಸವಣ್ಣ ಪ್ರಸಾದ, ಗುಹೇಶ್ವರ ನಿಮ್ಮಾಣೆ ಎನಗಯ್ಯಾ ನಿನಗೆಯೂ ಬಸವಣ್ಣನ ಪ್ರಸಾದ (ವ.೯೨, ಪು.೩೯, ವ.ಸಂ.೩) ಎಂದು ಅಲ್ಲಮಪ್ರಭು ಅವರು ತಿಳಿಸಿದಂತೆ ಚೆನ್ನಬಸವಣ್ಣನವರು ಅಂದೊಮ್ಮೆ ಧರೆಯ ಮೇಲೆ ಬೀಜವಿಲ್ಲದಂದು, ಬಸವನೆಂಬ ಗಣೇಶ್ವರನು ಭೋಂಕರಿಸಿ ಕೆಲೆದಡೆ ಬೀಜ ಉತ್ಪತ್ತಿಯಾಯಿತ್ತು. ಅದನೆ ಬೆಳೆದು ಅದನೆ ಅಟ್ಟಟ್ಟು ಲಿಂಗಕ್ಕೆ ಬೋನವ ಮಾಡಿ ನಾಗ ಲೋಕದ ನಾಗಗಣಂಗಳಿಗೆಯೂ ಬಸವಣ್ಣನ ಪ್ರಸಾದ, ಮರ್ತ್ಯಲೋಕದ ಮಹಾಗಣಂಗಳಿಗೆಯೂ ಬಸವಣ್ಣನ ಪ್ರಸಾದ, ದೇವಲೋಕದ ದೇವಗಣಂಗಳಿಗೆಯೂ ಬಸವಣ್ಣನ ಪ್ರಸಾದ ಎಲೆ ಕೂಡಲ ಚೆನ್ನಸಂಗಮದೇವಾ, ನಿಮ್ಮಾಣೆ ನಿಮಗೂ ಎನಗೂ ಬಸವಣ್ಣ ಪ್ರಸಾದ! (ವ.೮೯೪, ಪು.೨೭೭) ಎಂದು ಬಸವಣ್ಣನವರ ಪ್ರಸಾದದ ಮಹತ್ವವನ್ನು ತಿಳಿಸಿದ್ದಾರೆ. ಹೀಗೆ ವಚನಕಾರರು ಬಸವಣ್ಣನವರ ಪ್ರಸಾದದ ಮಹತ್ವವನ್ನು ಕೊಂಡಾಡುವುದರ ಜತೆಯಲ್ಲಿ ಬಸವಣ್ಣನವರ ಪ್ರಸಾದವ ಕೊಂಡು ತಾವು ಬದುಕಿದೆವು, ಸುಖಿಯಾದೆವುಯೆಂಬ ಧನ್ಯತಾಭಾವವನ್ನು ವ್ಯಕ್ತಪಡಿಸಿದ್ದಾನೆ. ಬಸವಣ್ಣನವರ ಪ್ರಸಾದದಿಂದ ತಮ್ಮ ತನು, ಮನ, ಭಾವ ಶುದ್ಧವಾಯಿತೆಂದು ಹೇಳುವ ವಚನಕಾರರಿಗೆ ಬಸವಣ್ಣನವರು ಲಿಂಗ ಪ್ರಸಾದಿ, ಸಮಯಪ್ರಸಾದಿ, ನಿಚ್ಚಪ್ರಸಾದಿ, ಶುದ್ಧಪ್ರಸಾದಿ, ಸಿದ್ಧಪ್ರಸಾದಿ, ಪ್ರಸಿದ್ಧ ಪ್ರಸಾದಿಯಾಗಿ ಕಂಡಿದ್ದಾರೆ.

ಭಕ್ತ :

ಬಸವಣ್ಣನವರು ತಾವು ಭಕ್ತರಾಗಿದ್ದು ಶರಣರಿಗೆ ಭಕ್ತಿಮಾರ್ಗವನ್ನು ತೋರಿಸಿಕೊಟ್ಟ ಮಹಾನುಭಾವರು. ಅವರ ಭಕ್ತಿಯನ್ನು ಕುರಿತಂತೆ ವಚನಕಾರರು ತಮ್ಮ ಅಭಿಪ್ರಾಯಗಳನ್ನು ಹೀಗೆ ಹೇಳಿದ್ದಾರೆ.

ಬಸವಣ್ಣನವರು ಮರ್ತ್ಯಕ್ಕೆ ಅವತರಿಸಿದ್ದರಿಂದ 'ಭಕ್ತಿಯ ಬೆಳವಿಗೆ ದೆಸೆ ದೆಸೆಗೆಲ್ಲಾ ಪಸರಿಸಿತ್ತಯ್ಯಾ (ವ.೧೦, ಪು.೨೩೩, ಶಿ.ಶ.ವಸಂ.೫) ಎಂಬುದು ನಾಗಲಾಂಬಿಕೆಯ ಅಭಿಪ್ರಾಯವಾದೆ 'ಭಕ್ತನಾದೆಡೆ ಬಸವಣ್ಣನಂತಾಗಬೇಕು' ಎಂಬುದು ದುಗ್ಗಳೆಯ ಅಭಿಪ್ರಾಯವಾಗಿದೆ. 'ಭಕ್ತಿರೂಪನು ಬಸವ, ನಿತ್ಯರೂಪನು ಬಸವ' (ವ.೬೨೨, ಪು.೧೩೨, ಸಂ.೪) 'ಭಕ್ತಿಸ್ಥಲದ ಮರ್ಮವನು ಲೋಕಕ್ಕೆ ನಿಶ್ಚಿಂತವ ಮಾಡಿ ತೋರಿದ ಬಸವಣ್ಣ' (ವ.೬೨೩, ಪು.೧೭೨, ಸಂ.೪) ಎಂದು ಸಿದ್ಧರಾಮಯ್ಯನವರು ಹೇಳಿದರೆ, 'ಭಕ್ತಿಕಾಂಡದ ಮೂಲಿಗನ ಕಾಣಿರೆ ಬಸವನ? ಭಕ್ತಿಯ ನಿಜ ಸಮಾಧಿಯ ಸುಖವ ಕರುಣಿಸುವ ಅಯ್ಯ ಬಸವನ, ಸಂಗಯ್ಯನ ಪ್ರಸಾದಿಯಾದ ಬಸವನಕಾಣಿರೆ ಭಕ್ತರು?' (ವ.೪೧, ಪು. ೨೪೬, ಶಿ.ಶ.ಸಂ.೫) ಎಂದು ನೀಲಮ್ಮನವರು ಹೇಳಿದ್ದಾರೆ.

ಬಸವಣ್ಣನವರ ಭಕ್ತಿ ವಿಶಿಷ್ಟತೆಯನ್ನು ಅಲ್ಲಮಪ್ರಭು ಅವರು ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ.

> **ಸಿರಿಯಾಳ ಚೆಂಗಳೆಯಂತೆ, ಸಿಸುವಧೆ ಮಾಡಿದವನಲ್ಲ**
> **ನಂಬಿ ಬಲ್ಲಾಳರಂತೆ, ಕಾಮುಕತನವ ಮಾಡಿದವನಲ್ಲ**
> **ಬೊಮ್ಮಯ್ಯ ಕಣ್ಣಪ್ಪರಂತೆ, ಜೀವ ಹಿಂಸೆಯ ಮಾಡಿದವನಲ್ಲ**
> **ಗುಹೇಶ್ವರಾ ನಿಮ್ಮ ಶರಣರಿಗಿಕ್ಕಿದ ಹೊಡರು ಸಂಗನಬಸವಣ್ಣ**
>
> *(ವ.೧೫೯೯, ಪು. ೪೭೫, ಸಂ.೨)*

ಬಸವಣ್ಣನವರ ಭಕ್ತಿ ಸಿರಿಯಾಳ ಚಂಗಳೆಯಂತೆ, ನಂಬಿ ಬಲ್ಲಾಳರಂತೆ, ಬೊಮ್ಮಯ್ಯರಂತೆ, ಕಣ್ಣಪ್ಪರಂತೆ ಹಿಂಸಾ ಮೂಲವಾಗಿರದೆ ಸಮರ್ಪಣಾ ಮೂಲವಾಗಿದೆಯೆಂಬುದನ್ನು ತಿಳಿಸುವುದೇ ಅಲ್ಲಮಪ್ರಭು ಅವರ ವಚನದ ಆಶಯವಾಗಿದೆ. ಹೀಗೆ ವಚನಕಾರರಿಗೆ ಬಸವಣ್ಣನವರು ಭಕ್ತಿ ಭಂಡಾರಿಯಾಗಿ ಮತ್ತು ಭಕ್ತ ಶಿರೋಮಣಿಯಾಗಿ ಕಂಡಿದ್ದಾರೆ.

ಪವಾಡ ಪುರುಷ :

ಬಸವಣ್ಣನವರು ಧರ್ಮನಿಷ್ಠರಾಗಿ, ತತ್ವನಿಷ್ಠರಾಗಿ ಮತ್ತು ಕರ್ತವ್ಯನಿಷ್ಠರಾಗಿ ಬದುಕುವ ಸಂದರ್ಭದಲ್ಲಿ ಅವರಿಂದ ಪ್ರಕಟವಾಗಿರುವ ಕೆಲವು ವಿಶೇಷ ಸಂಗತಿಗಳು ವಚನಕಾರರಿಗೆ ಪವಾಡಗಳಾಗಿ ಕಂಡಿವೆ. ದಾಸೋಹ ಸಂಪನ್ನರಾದ, ಸದ್ಭಕ್ತಿ ಸಂಪನ್ನರಾದ, ಲಿಂಗಸಂಪನ್ನರಾದ, ಸರ್ವಾಚಾರ ಸಂಪನ್ನರಾದ ಬಸವಣ್ಣನವರು ಪರವಾದಿ ಬಿಜ್ಜಳನ ಒರೆಗಲ್ಲ ಹಿಡಿದು ಶಿವಭಕ್ತಿ ಸಂಪಾದನೆಯ ಮಾಡುವಲ್ಲಿ ಮೂವತ್ತಾರು ಕೊಂಡೆಯ ಪರಿಹರಿಸಿ, ಶಿವಾಚಾರದ ಧ್ವಜವನೆತ್ತಿ ಮೆರೆದೆನಯ್ಯಾ ಬಸವಣ್ಣನು ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ, ಬಸವಣ್ಣನ ನಿಲವ ಹೊಗಳುವುದು ಎನ್ನಳವಲ್ಲ, ನಿನ್ನಳವಲ್ಲ (ವ.೧೪೭೭, ಪು. ೫೩೫, ಸಂ.೩) ಮತ್ತು "ಪರಮನಟ್ಟಿದ ಓಲೆ ಬಂದಿಯಿಳಿತ್ತು. ಬಿಜ್ಜಳನ ಸಿಂಹಾಸನದ ಮುಂದೆ. ಅದ ತಂದು ಓದಿದಡೆ

ಸೃಷ್ಟಿಯ ಸೇನಬೋವರಿಗೆ ತಿಳಿಯದು. ಛಪ್ಪನ್ನ ದೇಶದ ಭಾಷೆಯ ಲಿಪಿ ಮುನ್ನವಲ್ಲ ಇದನೋದಿದವರಿಗೆ ಆನೆ ಸೇನೆ ಕುದುರೆ ಭಂಡಾರ, ಅರವತ್ತಾರು ಕರಣಿಕರಿಗೆ ಮುಖ್ಯನ ಮಾಡುವೆನೆಂದು, ಬಿಜ್ಜಳ ಭಾಷೆಯ ಕೊಡುತ್ತಿರಲು, ಹರನಿರೂಪವ ಶಿರದ ಮೇಲಿಟ್ಟು ಶಿವಶರಣೆಂದು, ಬಸವಣ್ಣನೋದಿ ಮೆಟ್ಟಿ ತೆಗೆಸಿದನಯ್ಯಾ ಅರವತ್ತಾರು ಕೋಟಿ ವಸ್ತುವ ಅರಮನೆಗೆ. ರಾಜ್ಯಕ್ಕೆ ಅರಮನೆಗೆ (ಶಿರಃ ಪ್ರಧಾನವಾಗಿ) ಹರಗಣಂಗಳಿಗೆ ಗತಿಮತಿ ಚೈತನ್ಯನಾಗಿ ಕೂಡಲಚೆನ್ನಸಂಗಯ್ಯನಲ್ಲಿ ಅಂಡಜದೊಳಗಿದ್ದು ಶಿವನ ಭಂಡಾರಿಯಾದನಯ್ಯಾ, ಎನ್ನ ತಂದೆ ಪೂರ್ವಾಚಾರಿ ಸಂಗನ ಬಸವಣ್ಣನು" (ವ. ೧೭೫೪, ಪು. ೬೫೦, ಸಂ.೩) ಎಂದು ಚೆನ್ನಬಸವಣ್ಣನವರು ನಿರೂಪಿಸುವ ವಿಚಾರದಲ್ಲಿ ಮತ್ತು "ಕಾಲಿಲ್ಲದವಂಗೆ ಕಾಲ ಕೊಟ್ಟೆ ಬಸವಣ್ಣಾ, ಕಣ್ಣಿಲ್ಲದವಂಗೆ ಕಣ್ಣ ಕೊಟ್ಟೆ ಬಸವಾ, ಎನ್ನ ಕಣ್ಣು ಕಾಲಿಂಗೆ ನೀನಯ್ಯಾ ಬಸವಾ ಕಪಿಲಸಿದ್ಧಮಲ್ಲಿನಾಥಯ್ಯ (ವ.೩೫೦, ಪು.೯೭, ಸಂ.೪) ಎಂದು ಅನುಭಾವಾತ್ಮಕವಾಗಿ ತಿಳಿಸುವ ಸಿದ್ಧರಾಮಯ್ಯನವರ ಮಾತಿನಲ್ಲಿ ಬಸವಣ್ಣನವರು ಪವಾಡ ಪುರುಷರೆಂಬ ಭಾವ ಅಡಗಿರುವುದನ್ನು ಕಾಣಬಹುದು. ಚೆನ್ನಬಸವಣ್ಣನವರು "ಮೂವತ್ತಾರು ಕೊಂಡೆಯ ಪರಿಹರಿಸಿ, ಶಿವಾಚಾರದ ಧ್ವಜವನೆತ್ತಿ ಮೆರೆದನಯ್ಯಾ ಬಸವಣ್ಣನು" ಎಂದು ಹೇಳುವಲ್ಲಿ ಹಾಗೂ ಬಿಜ್ಜಳನ ಸಭಾಗೃಹದಲ್ಲಿ ದೊರೆತ ಓಲೆಯನ್ನು ಯಾರಿಂದಲೂ ಓದಲು ಸಾಧ್ಯವಾಗದಿದ್ದಾಗ ಬಸವಣ್ಣನವರು ಓದಿ ಹೇಳುವ ಮತ್ತು ಅರವತ್ತಾರು ಕೋಟಿ ವಸ್ತುವ ಅರಮನೆಗೆ ತೆಗೆಸಿಕೊಟ್ಟ ಪ್ರಸಂಗವನ್ನು ಬಣ್ಣಿಸುವಲ್ಲಿ ಬಸವಣ್ಣನವರ ಸಂಯಮ ಸಮತೋಲನ ಸ್ವಭಾವ, ಧರ್ಮಪರ ಕಾಳಜಿ, ಬುದ್ಧಿಶಕ್ತಿ, ಗ್ರಹಣಶಕ್ತಿ, ಆಲೋಚನಾ ಶಕ್ತಿಯೇ ಪವಾಡವಾಗಿ ಪರಿಣಮಿಸಿದೆ. ಸಿದ್ಧರಾಮಯ್ಯನವರು 'ಕಾಲಿಲ್ಲದವಂಗೆ ಕಾಲ ಕೊಟ್ಟೆ ಬಸವಣ್ಣಾ, ಕಣ್ಣಿಲ್ಲದವಂಗೆ ಕಣ್ಣ ಕೊಟ್ಟೆ ಬಸವಾ' ಎಂದು ತಿಳಿಸುವಲ್ಲಿ ಜ್ಞಾನ-ಕ್ರಿಯಾಶಕ್ತಿಯ ಅರಿವನ್ನು ಮೂಡಿಸುವ ಬಸವಣ್ಣನವರ ಪ್ರಕ್ರಿಯೆ ಪವಾಡವಾಗಿರುವುದು ಗಮನಾರ್ಹವಾಗಿದೆ. "ಎಂಬತ್ತೆಂಟು ಪವಾಡಂಗೆದ್ದು ಮುನ್ನೂರರುವತ್ತು ಸತ್ತ ಪ್ರಾಣವನೆತ್ತಿ ಮೆರೆದು, ಪರಸಮಯವ ನಳಿದಾತ ನಮ್ಮ ಬಸವಯ್ಯನು" (ವ.೨೧, ಪು.೨೪೦, ಸಂ.ಶಿ.ಶ,ವ.ಸಂ.೫) ಎಂದು ನೀಲಮ್ಮ ಬಸವಣ್ಣನವರು ಪವಾಡಪುರುಷರೆಂಬುದನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ನೀಲಮ್ಮ ಮೊದಲಾದ ವಚನಕಾರರೆಲ್ಲರಿಗೂ ಬಸವಣ್ಣನವರ ಸಂಘಟನಾಶಕ್ತಿ, ಧಾರ್ಮಿಕ ಶಕ್ತಿ, ಆಧ್ಯಾತ್ಮಿಕ ಜೀವನ ಪವಾಡಗಳಾಗಿ ಕಂಡಿವೆ.

ಬಸವಣ್ಣನವರ ಸಾಮರ್ಥ್ಯ-ಸಾಧನೆಗಳನ್ನು ಗುರುತಿಸಿದ ವಚನಕಾರರಿಗೆ ಬಸವಣ್ಣನವರು ಪವಾಡ ಪುರುಷರಂತೆ ಕಂಡಿದ್ದಾರೆ. ಬಸವಣ್ಣನವರು ಪವಾಡಗಳನ್ನು ಮೆರೆದರೆಂಬ ವಿಚಾರವನ್ನು ನೀಲಮ್ಮ ತನ್ನ ವಚನದಲ್ಲಿ ಪ್ರಸ್ತಾಪಿಸಿದ ಹಾಗೆ ಉಳಿದ ವಚನಕಾರರು ತಮ್ಮ ವಚನಗಳಲ್ಲಿ ಪ್ರಸ್ತಾಪಿಸುವುದಿಲ್ಲ. ಪವಾಡವೆಂಬ ಪದದ ಉಲ್ಲೇಖವು ಇವರ ವಚನಗಳಲ್ಲಿ ಕಂಡುಬರುವುದಿಲ್ಲ. ಬಸವಣ್ಣನವರು ಮಾತ್ರ ತಮ್ಮ ವಚನದಲ್ಲಿ ಪವಾಡದ ಕುರಿತು ಪ್ರಸ್ತಾಪಿಸಿದ್ದಾರೆ. ವಚನಕಾರರು ತಮ್ಮನ್ನು ಪವಾಡ ಪುರುಷರೆಂದು ಭಾವಿಸಿದ ರೀತಿಯನ್ನು ಕಂಡು ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಬಸವಣ್ಣನವರು ಪವಾಡಗಳನ್ನು ನಂಬಿದವರಲ್ಲ. ಆದರೆ ಅವರ ಬದುಕಿನಲ್ಲಿ ಘಟಿಸಿದ ಅಘಟಿತ ಘಟನೆ, ಸನ್ನಿವೇಶಗಳೇ ವಚನಕಾರರಿಗೆ ಪವಾಡವಾಗಿ ಕಂಡಿವೆ. ವಚನಕಾರರು ಚಿತ್ರಿಸಿದ ಬಸವಣ್ಣನವರ ವ್ಯಕ್ತಿ ಚಿತ್ರಣವನ್ನು

ಗಮನಿಸಿದಾಗ ಹಾಗೂ ಬಸವಣ್ಣನವರ ವಚನಗಳನ್ನು ಅಧ್ಯಯನ ಮಾಡಿದಾಗ ಇಂದು ನಮಗೆ ಬಸವಣ್ಣನವರ ಅಂದಿನ ಹೋರಾಟದ ಬದುಕೇ ಒಂದು ಪವಾಡವಾಗಿ ಕಾಣುತ್ತದೆ.

ವ್ಯಕ್ತಿ ವೈಶಿಷ್ಟ್ಯ:

ಬಸವಣ್ಣನವರ ವ್ಯಕ್ತಿತ್ವವನ್ನು ಕುರಿತು ವಚನಕಾರರು ಅನೇಕ ರೀತಿಯಲ್ಲಿ ಬಣ್ಣಿಸಿದ್ದಾರೆ. ಅಲ್ಲಮಪ್ರಭು, ಅಕ್ಕಮಹಾದೇವಿ, ನೀಲಮ್ಮ, ಚೆನ್ನಬಸವಣ್ಣನವರಂತೂ ದೀರ್ಘವಾದ ವಿವರಣೆ ಯೊಂದಿಗೆ ಬಸವಣ್ಣನವರ ವ್ಯಕ್ತಿತ್ವವನ್ನು ಪರಿಚಯಿಸಿದ್ದಾರೆ. ಅವರ ಭಕ್ತಿ, ಜ್ಞಾನ, ಕ್ರಿಯೆಯನ್ನು ಕುರಿತು ವಿವರಿಸಿದ್ದಾರೆ.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದ,
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ!
ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು
ಶಿವಭಕ್ತರಿರ್ದ ಕ್ಷೇತ್ರವ ಅವಿಮುಕ್ತಕ್ಷೇತ್ರವೆಂಬುದು ಹುಸಿಯೇ?
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು
ಬದುಕಿದೆನು ಕಾಣಾ ಸಿದ್ಧರಾಮಯ್ಯಾ.

(ವ. ೧೦೬೯, ಪು.೩೧೮, ವ.ಸಂ.೨)

ಅಲ್ಲಮಪ್ರಭು ಅವರ ಈ ವಚನ ಬಸವಣ್ಣನವರ ಸಮಗ್ರವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ ಯಾಗಿದೆ.

ಕೌಪ ಕಾಷಾಯಾಂಬರವಕಟ್ಟಿ, ಮಂಡೆ ಬೋಳಾದಡೇನಯ್ಯಾ, ಎನ್ನಲ್ಲಿ ನಿಜವಿಲ್ಲದನ್ನಕ್ಕ? ಹೊನ್ನು ಹೆಣ್ಣು ಮಣ್ಣು ತ್ರಿವಿಧವ ತೊರೆದಡೇನಯ್ಯಾ, ಮನದಲ್ಲಿ ವ್ರತಿಯಾಗದನ್ನಕ್ಕ? ಹಸಿವು ತೃಷೆ ವ್ಯಸನಾದಿಗಳ ಬಿಟ್ಟಡೇನಯ್ಯಾ, ಅರ್ಥದಿಚ್ಛೆ ಮನದಲ್ಲಿ ಹಿಂಗದನ್ನಕ್ಕ? ಆನು ಜಂಗಮನೆ? ಆನು ಹಿರಿಯನಾದೆನಲ್ಲದೆ ಆನು ಜಂಗಮವೆ, ಒಡಲಿಲ್ಲದಾತ ಬಸವಣ್ಣ, ಪ್ರಾವಿಲ್ಲದಾತ ಬಸವಣ್ಣ.ಎನ್ನ) ಬಸವಣ್ಣನಾಗಿ ಹುಟ್ಟಿಸದೆ ಪ್ರಭುವಾಗಿ ಏಕೆ ಹುಟ್ಟಿಸಿದೆ ಗುಹೇಶ್ವರಾ (ವ.೧೧೫೦, ಪು.೩೪೦, ಸಂ.೨) ಎಂದು ಅಲ್ಲಮಪ್ರಭು ಕೇಳುವುದರಲ್ಲಿ ತಮ್ಮ ಸನ್ಯಾಸತ್ವ, ಜಂಗಮತ್ವಗಳಿಗಿಂತಲೂ ಬಸವಣ್ಣನವರ ಆಧ್ಯಾತ್ಮಿಕ, ಸಾಮಾಜಿಕ ಸಾಧನೆಗಳು ಅವರಿಗೆ ವಿಶಿಷ್ಟವಾಗಿ ಕಂಡಿವೆ. ಆದುದರಿಂದ ಅಲ್ಲಮಪ್ರಭು ತಾವು ಪ್ರಭುವಾಗಿ ಹುಟ್ಟದೆ ಬಸವಣ್ಣನಾಗಿ ಹುಟ್ಟಬೇಕಾಗಿತ್ತೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಮಪ್ರಭು ಅವರ ಈ ಆಶಯವು ಬಸವಣ್ಣನವರ ವ್ಯಕ್ತಿತ್ವದ ಮಹತ್ವವನ್ನು ತಿಳಿಸುತ್ತದೆ.

"ತನ್ನ ತಾ ತಿಳಿದಲ್ಲಿ ಎರಡನೆಯ ಶಂಭುವೆನಿಸಿದ್ದ, ತನ್ನ ಮರೆದಲ್ಲಿ ಮಹೀತಳದ ಮಾನವನೆನಿಸಿದ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ" (ವ. ೧೬೫೫, ಪು. ೪೫೬, ಸಂ.೪) ಎಂದು ಸಿದ್ಧರಾಮಯ್ಯನವರು ಹೇಳುವ ಮಾತು ಅರ್ಥಪೂರ್ಣವಾಗಿದೆ. ಬಸವಣ್ಣನವರು ದೇವಮಾನವರಾಗಿದ್ದರೆಂಬುದು ಸಿದ್ಧರಾಮಯ್ಯನವರ ಅಭಿಪ್ರಾಯವಾಗಿದೆ.

ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ
ವೀರಶೈವ ಮಾರ್ಗವನರುಪುವುದಕ್ಕೆ
ಬಾವನ್ನ ವಿವರವನೊಳಕೊಂಡು ಚರಿಸಿದನದೆಂತೆಂದಡೆ;

ಗುರುಕಾರುಣ್ಯ ವೇದ್ಯನು, ವಿಭೂತಿ ರುದ್ರಾಕ್ಷಿಧಾರಕನು,
ಪಂಚಾಕ್ಷರೀ ಭಾಷಾಸಮೇತನು, ಲಿಂಗಾಂಗ ಸಂಬಂಧಿ,
ನಿತ್ಯ ಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ,
ಪಾದೋದಕ ಪ್ರಸಾದಗ್ರಾಹಕನು, ಗುರುಭಕ್ತಿ ಸಂಪನ್ನನು,
ಏಕಲಿಂಗನಿಷ್ಠಾಪರನು, ಚರಲಿಂಗಲೋಲುಪ್ತನು,
ಶರಣ ಸಂಗಮೈಸ್ವರ್ಯನು, ತ್ರಿವಿಧಕ್ಕಾಯತನು,
ತ್ರಿಕರಣ ಶುದ್ಧನು, ತ್ರಿವಿಧ ಲಿಂಗಾಂಗ ಸಂಬಂಧಿ
ಅನ್ಯದೈವ ಸ್ಮರಣೆಯ ಹೊದ್ದ, ಭವಿ ಸಂಗವ ಮಾಡ,
ಭವಿ ಪಾಕವ ಕೊಳ್ಳ, ಪರಸತಿಯ ಬೆರಸ,
ಪರಧನವನೊಲ್ಲ, ಪರನಿಂದೆಯನಾಡ, ಅನೃತವ ನುಡಿಯ,
ಹಿಂಸೆಯ ಮಾಡ, ತಾಮಸ ಭಕ್ತಸಂಗವ ಮಾಡ,
ಗುರುಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನ
ಮುಂತಾದವೆಲ್ಲವ ಸಮರ್ಪಿಸಿ,
ಪ್ರಸಾದ ಮುಂತಾಗಿ ಭೋಗಿಸುವ, ಜಂಗಮ ನಿಂದೆಯ ಸೈರಿಸ,
ಪ್ರಸಾದನಿಂದೆಯ ಕೇಳ, ಅನ್ಯರನಾಸೆಗೆಯ್ಯಾ,
ಪಾತ್ರಾಪಾತ್ರವನರಿದೀಪ, ಚತುರ್ವಿಧ ಪದವಿಯ ಹಾರ,
ಅರಿಷಡ್ವರ್ಗಕ್ಕೆ ಅಳುಕ, ಕುಲಾದಿಮದಂಗಳ ಬಗೆಗೊಳ್ಳ,
ದ್ವೈತಾದ್ವೈತವ ನುಡಿವನಲ್ಲ, ಸಂಕಲ್ಪ ವಿಕಲ್ಪವ ಮಾಡುವನಲ್ಲ,
ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿ ಷಟ್‌ಸ್ಥಲಭರಿತ,
ಸರ್ವಾಂಗಲಿಂಗಿ, ದಾಸೋಹ ಸಂಪನ್ನ,
ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ
ಮೆರೆದ ನಮ್ಮ ಬಸವಣ್ಣನು
ಆ ಬಸವಣ್ಣನ ಶ್ರೀಪಾದಕ್ಕೆ ನಾನು ಆಹೋರಾತ್ರಿಯಲ್ಲಿ
ನಮೋ ನಮೋ ಎಂದು ಬದುಕಿದೆನು ಕಾಣಾ ಚೆನ್ನಮಲ್ಲಿಕಾರ್ಜುನಾ.

(ವ.೩೦೯, ಪು.೯೫, ಶಿ.ಶ.ವ.ಸಂ.೫)

ಎಂದು ಅಕ್ಕಮಹಾದೇವಿ ಬಸವಣ್ಣನವರ ವ್ಯಕ್ತಿತ್ವವನ್ನು ವಸ್ತುನಿಷ್ಠವಾಗಿ ಚಿತ್ರಿಸಿದ್ದಾರೆ. ಬಸವಣ್ಣನವರ ಆಚಾರ ಸಂಪನ್ನತೆ, ಗುಣ ಸಂಪನ್ನತೆ, ಶೀಲ ಸಂಪನ್ನತೆಯನ್ನು ಮೆಚ್ಚಿ ಅಭಿಮಾನದಿಂದ ಅಕ್ಕಮಹಾದೇವಿ ಬಸವಣ್ಣನವರ ವ್ಯಕ್ತಿತ್ವದ ಕುರಿತು ಬಣ್ಣಿಸಿದ್ದಾರೆ.

ಆದಿಯಾಧಾರವಿಲ್ಲದಂದು, ಕಳೆಮೊಳೆದೋರದಂದು
ಕಾಮ ನಿಃಕಾಮವಿಲ್ಲದಂದು, ವೀರವಿರತಣವಿಲ್ಲದಂದು,
ಯುಗಜುಗವಿಲ್ಲದಂದು, ಪಿಂಡಾಂಡ ಬ್ರಹ್ಮಾಂಡವಿಲ್ಲದಂದು,
ಏನೂ ಏನೂ ಇಲ್ಲದಂದು, ಎಲ್ಲಾ ಮೂರ್ತಿಗಳು ನೆಲೆಗೊಳ್ಳದಂದು
ಅಂದು ಏನೆಂದು ಅರಿಯದಿರ್ದ ನಮ್ಮ ಬಸವಯ್ಯನು
ಆ ಅಕ್ಷರವ ರೂಪ ಮಾಡಿ,
ತ್ರಯಾಕ್ಷರದಲ್ಲಿ ಕಳೆಯ ಸಂಬಂಧಿಸಿದಾತ ನಮ್ಮ ಬಸವಯ್ಯನು
ಆ ಕಳೆಯ ಮೂರು ತೆರನ ಮಾಡಿ
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಎಂಬ ಪಂಚತತ್ವವ ಪಂಚವದನವಾಗಿ

ಆ ಪಂಚ ವದನವೆ ಪಂಚೀಕೃತವನೆಯ್ದಿ,
ಜಗದಾದಿ ಸೃಷ್ಟಿಯನನುಮಾಡುವುದಕ್ಕೆ ಕರ್ತನಾದ ನಮ್ಮ ಬಸವಯ್ಯನು
ಆ ಸೃಷ್ಟಿಯ ಮುಖವ ಕಂಡು ಸೃಜಿಸಲು ಪುಟ್ಟಿದರು ಪಂಚಶಕ್ತಿಯರು
ಆ ಪಂಚಶಕ್ತಿಯರಿಗೆ ಪಂಚ ಮೂರ್ತಿಯರ
ಕೈಗೊಳಿಸಿದಾತ ನಮ್ಮ ಬಸವಯ್ಯನು
ಆ ಪಂಚಮೂರ್ತಿಗಳಿಂದುತ್ಪತ್ಯವಾದ ಲೋಕವ ನೋಡಲೆಂದು,
ಕೈಲಾಸವನೆ ಕಲ್ಯಾಣವ ಮಾಡಿದಾತ ನಮ್ಮ ಬಸವಯ್ಯನು,
ಆ ಕೈಲಾಸವೇ ಕಲ್ಯಾಣವಾಗಲಾ ಕಲ್ಯಾಣಕ್ಕೆ
ಪ್ರಮಥಗಣಂಗಳ ರುದ್ರಗಣಂಗಳ ಅಮರಗಣಂಗಳ
ಪುರಾತನ ಗಣಂಗಳ, ಪುಣ್ಯಗಣಂಗಳ, ಮಹಾಗಣಂಗಳ,
ಮುಖ್ಯಗಣಂಗಳ, ಮಹಾಲಿಂಗೈಕ್ಯ ಸಂಪನ್ನರಂ
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂಬ
ಆಚಾರಾದಿ ಮಹಾಲಿಂಗಸಂಪನ್ನರಂ,
ಷಟ್‌ಸ್ಥಲ ಪ್ರಸಾದ ಪ್ರಸನ್ನರೂಪರಂ,
ಆದಿ ಮುಕ್ತರಂ, ಅನಾದಿ ಮುಕ್ತರಂ, ಅಜಾತರಂ, ಅಪ್ರಮಾಣರಂ,
ಅನಿಮಿಷಲಿಂಗ ನಿರೀಕ್ಷಣರಂ, ತ್ರಿವಿಧವಿದೂರರಂ,
ತ್ರಿವಿಧಲಿಂಗಾಂಗ ಮೂರ್ತಿಗಳಂ, ಅರ್ಪಿತ ಸಂಯೋಗರಂ,
ಆಗಮವಿದರಂ, ಅನಾದಿ ಪರಶಿವಮೂರ್ತಿಗಳಂ,
ಏಕಲಿಂಗನಿಷ್ಠಾ ಪರರುಮಪ್ಪ ಮಹಾ ಪ್ರಮಥಗಣಂಗಳಂ
ತಂದು ನೆರೆಹಿದಾತ ನಮ್ಮ ಬಸವಯ್ಯನು
ಮರ್ತ್ಯಲೋಕವನೆ ಮಹಾ ಪ್ರಮಥರ ಬಿಡಾರವ
ಮಾಡಿದಾತ ನಮ್ಮ ಬಸವಯ್ಯನು
ಆದಿಯ ಸೃಷ್ಟಿಯನನಾದಿಯ ಸೃಷ್ಟಿಗೆ ತಂದು,
ಅನಾದಿ ಸೃಷ್ಟಿಯನಾದಿ ಸೃಷ್ಟಿಗೆ ತಂದು,
ಅಜಾತನ ಬೀಡನಂಗದಲ್ಲಿ ನೆರಹಿದಾತ ನಮ್ಮ ಬಸವಯ್ಯನು.
ಭಾವವಿಲ್ಲದ ಭ್ರೆಮೆಯ ಭ್ರಮೆಗೊಳಿಸಿ
ಭಾವಕ್ಕೆ ತಂದಾತ ನಮ್ಮ ಬಸವಯ್ಯನು,
ಬಯಲನೊಂದು ರೂಪ ಮಾಡಿ ಬಣ್ಣಕ್ಕೆ ತಂದು,
ಆ ಬಣ್ಣವ ನಿಜದಲ್ಲಿ ನಿಲಿಸಿದಾತ ನಮ್ಮ ಬಸವಯ್ಯನು
ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ,
ಇಚ್ಛೆಯನರಿದು ಅರ್ಪಿತವ ಮಾಡಿದಾತ ನಮ್ಮ ಬಸವಯ್ಯನು,
ಅಂಗ ಸಂಗಿಗಳವಂತರಿಗೆ
ಅಂಗನೆಯರ ಅನುಭವವ ನಡೆಸಿದಾತ ನಮ್ಮ ಬಸವಯ್ಯನು.
ಮೂವತ್ತಾರು ಸಾವಿರ ಮಾಹೇಶ್ವರರಿಗೆ ಮುಖ ಮೂರ್ತಿಯಾಗಿ
ಅರ್ಪಿತ ಪ್ರಸಾದಿಗಳ ಮಾಡಿದಾತ ನಮ್ಮ ಬಸವಯ್ಯನು
ಹನ್ನೆರಡು ಸಾವಿರ ರಾಣಿಯರ
ಅಂಗವನರ್ಪಿತ ಪ್ರಸಾಧಿಗಳ ಮಾಡಿದಾತ ನಮ್ಮ ಬಸವಯ್ಯನು

ಎಂಬತ್ತೆಂಟು ಪವಾಡಮಂ ಗೆದ್ದು
ಮುನ್ನೂರರುವತ್ತು ಸತ್ತ ಪ್ರಾಣವನೆತ್ತಿಮೆರೆದು
ಪರಸಮಯವನಳಿದಾತ ನಮ್ಮ ಬಸವಯ್ಯನು
ಇಪ್ಪತ್ತೈದು ಸಾವಿರ ಚಾರ್ವಾಕರಂ ನೆಗ್ಗಿಲೊತ್ತ,
ಅಪ್ರತಿಮ ಶಿವಗಣಂಗಳ ಮಹಾತ್ಮೆಯಂ
ಮೆರೆದಾತ ನಮ್ಮ ಬಸವಯ್ಯನು.
ಪ್ರಣವದ ಬೀಜವ ಬಿತ್ತಿ ಪಂಚಾಕ್ಷರಿಯ ಬೆಳೆದು ಬೆಳೆದು,
ಪರಮ ಪ್ರಸಾದವನೊಂದು ರೂಪ ಮಾಡಿ ಮೆರೆದು,
ಭಕ್ತಿ ಫಲವನುಂಡಾತ ನಮ್ಮ ಬಸವಯ್ಯನು,
ಚೆನ್ನಬಸವನೆಂಬ ಪ್ರಸಾದಿಯ ಪಡೆದು,
ಅನುಭವ ಮಂಟಪವನು ಮಾಡಿ,
ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು
ಅರಿವ ಸಂಪಾದಿಸಿ ಆಚಾರವನಂಗಗೊಳಿಸಿ
ಏಳುನೂರೈಪ್ಪತ್ತು ಅಮರಗಣಂಗಳ
ಅನುಭವ ಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು
ಆ ಅನುಭವದಲ್ಲಿ ಐಕ್ಯಪ್ರಸಾದವನಂಗಂಗೊಂಡು,
ಮಂತ್ರ ನಿರ್ಮಂತ್ರವಾದಾತ ನಮ್ಮ ಬಸವಯ್ಯನು,
ಭಕ್ತಿಸ್ಥಲವನಳಿದು ಭಾವವಡಗಿ ಬಟ್ಟಬಯಲಕೂಡಿ,
ಸಂಗಯ್ಯನಲ್ಲಿ ಸ್ವಯಂಲಿಂಗಿಯಾದ ನಮ್ಮ ಬಸವಯ್ಯನು.

(ವ.೨೧,ಪು. ೨೪೦, ಶಿ.ಶ.ವ.ಸಂ.೫)

ಎಂದು ನೀಲಮ್ಮ ಅವರು ಬಸವಣ್ಣನವರು ಲೋಕವನ್ನು ಸೃಷ್ಟಿಸಿದವರೆಂದು, ಕೈಲಾಸವನೆ ಕಲ್ಯಾಣವ ಮಾಡಿದವರೆಂದು, ಆ ಕಲ್ಯಾಣದಲ್ಲಿ ಮಹಾ ಪ್ರಮಥಗಣಂಗಳಂ ತಂದು ನೆರೆಹಿದವರೆಂದು, ಮರ್ತ್ಯಲೋಕವನೆ ಮಹಾ ಪ್ರಮಥರ ಬಿಡಾರ ಮಾಡಿದವರೆಂದು, ಮೂವತ್ತಾರು ಸಾವಿರ ಮಾಹೇಶ್ವರರಿಗೆ ಮುಖ ಮೂರ್ತಿಯಾದವರೆಂದು ಎಂಬತ್ತೆಂಟು ಪವಾಡಮಂ ಗೆದ್ದವರೆಂದು, ಅನುಭವ ಮಂಟಪವನು ಮಾಡಿದವರೆಂದು, ಅವರ ಭಕ್ತಿಮಾರ್ಗದ ಸಾಧನೆಗಳನ್ನು ವಿವರಿಸಿದ್ದಾರೆ. ಅವರ ಆಧ್ಯಾತ್ಮಿಕ ಬದುಕಿನ ವ್ಯಕ್ತಿತ್ವವನ್ನು ಪರಿಚಯಿಸಿದ್ದಾರೆ.

ನೀಲಮ್ಮನವರಿಗೆ ಬಸವಣ್ಣನವರು ಸೃಷ್ಟಿಕರ್ತರಾಗಿ, ಭಕ್ತರಾಗಿ, ಸಾಧಕರಾಗಿ, ಮಹಿಮಾತೀತರಾಗಿ, ಅನುಭಾವಿಗಳಾಗಿ ಕಂಡಿದ್ದಾರೆ. ಹೀಗೆ ವಚನಕಾರ್ತಿಯರು ಹಾಗೂ ವಚನಕಾರರು ಬಸವಣ್ಣನವರ ವ್ಯಕ್ತಿತ್ವದ ಪರಿಪೂರ್ಣತೆಯನ್ನು ಧಾರ್ಮಿಕ-ತಾತ್ವಿಕ ನೆಲೆಯಲ್ಲಿ ಕಂಡಿದ್ದಾರೆ.

ಸಂಬಂಧ :

ಧಾರ್ಮಿಕ-ತಾತ್ತ್ವಿಕ ನೆಲೆಯಲ್ಲಿ ರೂಪಗೊಂಡ ಬಸವಣ್ಣನವರ ವ್ಯಕ್ತಿತ್ವಕ್ಕೆ ಪ್ರಭಾವಿತರಾದ ವಚನಕಾರರು, ತಮ್ಮ ಬೆಳವಣಿಗೆಗೆ, ತಮ್ಮ ಬದುಕಿನ ಸಾರ್ಥಕತೆಗೆ ಬಸವಣ್ಣನವರೇ ಕಾರಣರೆಂದು ತಿಳಿಸಿದ್ದಾರೆ. ಬಸವಣ್ಣನವರಿಂದಲೇ ತಾವು ಬದುಕಿದೆವು, ಬಸವಣ್ಣನವರಿಂದಲೇ

ತಾವು ಕೃತಾರ್ಥರಾದೆವುಯೆಂಬ ಭಾವವನ್ನು ತಮ್ಮ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ತಮಗೂ ಬಸವಣ್ಣನವರಿಗೂ ಇದ್ದ ಸಂಬಂಧವನ್ನು ತಾತ್ವಿಕ ನೆಲೆಯಲ್ಲಿ ವಿವರಿಸಿದ್ದಾರೆ.

"ಎನಗೆ ಮಹಾ ಶ್ರೀಗುರು, ಲಿಂಗ, ಜಂಗಮ, ಪ್ರಸಾದ ಈ ಚತುರ್ವಿಧವು ಬಸವಣ್ಣನು" (ಏ.ಶ.ಸ್ಥ.ಪು.೬೩, ವ.೩, ಉರಿಲಿಂಗಪೆದ್ದಿ) ಎಂದು ಉರಿಲಿಂಗಪೆದ್ದಿಯವರೂ ತಮಗೂ ಬಸವಣ್ಣನವರಿಗೂ ಇರುವ ಸಂಬಂಧವನ್ನು ತಿಳಿಸಿದರೆ ಚೆನ್ನಬಸವಣ್ಣನವರು "ಬಸವಣ್ಣಾ ಓಂಕಾರದಿಂದಿತ್ತತ್ತ ನೀನೆ, ಬಸವಣ್ಣಾ ನಾದ ಬಿಂದು ಕಳೆಗಳಿಂದತ್ತತ್ತ ನೀನೆ, ಬಸವಣ್ಣಾ ಜಂಗಮಾಚಾರ್ಯ ನೀನೆ, ಬಸವಣ್ಣಾ ಪ್ರಸಾದಾಚಾರ್ಯ ನೀನೆ, ಬಸವಣ್ಣಾ ಎನಗೆ ಸರ್ವಾಚಾರ್ಯ ನೀನೆ, ನೀನೇ ಗತಿಮತಿಯಾಗಿ ಎನ್ನನುಳಿಹಿದ ಕಾರಣ ಕೂಡಲ ಚೆನ್ನ ಸಂಗಮದೇವಾ" ಆವ ವರ್ಣವಿಲ್ಲದಂದು "ಓಂ ನಮಃ ಶಿವಾಯ" ಎನುತಿರ್ದೆನು. (ವ.೧೪, ಪು ೩, ವ.ಸಂ.೩) ಎಂದು ಚೆನ್ನಬಸವಣ್ಣನವರು ತಮ್ಮ ಹಾಗೂ ಬಸವಣ್ಣನವರ ನಡುವೆಯಿರುವ ಅಲೌಕಿಕ ಆತ್ಮೀಯ ಸಂಬಂಧವನ್ನು ತಿಳಿಸಿದ್ದಾರೆ. ಶಿವಸ್ವರೂಪಿಯಾದ ಬಸವಣ್ಣನವರು ತಮ್ಮ ಸರ್ವಾಂಗದಲ್ಲಿ ಸರ್ವೇಶ್ವರನೆಂಬ ರುದ್ರನಾಗಿ ನೆಲೆಸಿದ್ದಾರೆ ಹಾಗೂ ತಮ್ಮ ಅಂಗದ ಮೂವತ್ತೆಂಟು ಸ್ಥಾನಂಗಳಲ್ಲಿ ಬಸವ ಸಾಹಿತ್ಯವಾಗಿದೆ ಎಂದು ತಿಳಿಸಿದ್ದಾರೆ. (ವ.೧೦೭೯ ಪು. ೩೬೫, ವ.ಸಂ.೩ ನೋಡಿ) ಪಂಚಾಕ್ಷರಿ ಮಂತ್ರಮಯರಾದ ಬಸವಣ್ಣನವರು ತಮ್ಮ "ನವಚಕ್ರಂಗಳಲ್ಲಿಯೂ ನವನಾಳಗಳಲ್ಲಿಯೂ, ನವ ವಿಧಲಿಂಗ ಸ್ವರೂಪ ವಾದಾತ ಬಸವಣ್ಣ. ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ನಿಮ್ಮ ತೋರಿ, ಎನ್ನ ಸಲಹಿದವರ ಗುರು ಸಂಗನಬಸವಣ್ಣನ ಶ್ರೀ ಪಾದಕ್ಕೆ ಶರಣೆಂದು ಬದುಕಿದೆನು ಕಾಣಾ ಪ್ರಭುವೆ" (ವ. ೧೦೮೭, ಪು.೩೭೧, ವ.ಸಂ.೩) ಎಂದು ಚೆನ್ನಬಸವಣ್ಣನವರು ಕೃತಜ್ಞತಾಭಾವವನ್ನು ವ್ಯಕ್ತಪಡಿಸಿದ್ದಾರೆ. "ಎನ್ನೊಳಗೆ ತನ್ನ ತೋರಿದನು, ತನ್ನೊಳಗೆ ಎನ್ನ ತೋರಿದನು. ಮತ್ತೆ ಎರಡುವನು ಏಕಮಾಡಿ ಎನ್ನೊಳಗೆ ಗುಹೇಶ್ವರನಾದನು ಹೊರಗೆ ಮಹಾಲಿಂಗವಾಗಿ ನಿಂದನು. ಶ್ರೀ ಗುರುಲಿಂಗ ಬಸವಣ್ಣನು" ಎಂದು (ವ.೧೫೩೯, ಪು. ೪೬೭, ವ.ಸಂ.೨) ಅಲ್ಲಮಪ್ರಭು ಅವರು, ತಾವು ಬಸವಣ್ಣನಲ್ಲಿ ಲೀನವಾಗಿರುವ, ಬಸವಣ್ಣ ತಮ್ಮಲ್ಲಿ ಲೀನಾವಾಗಿರುವ ಭಾವನಾತ್ಮಕ ಸಂಬಂಧದ ಕುರಿತು ಹೇಳಿದ್ದಾರೆ. "ಬಸವಣ್ಣನವರ ಮಹಾಮನೆಯ ಕಾವಲು ಬಂಟನೆಂದು" (ವ.೧೧೨೮, ಪು. ೩೬೭, ವ.ಸಂ.೨) ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. "ಗುರುಶಿಷ್ಯರಿಬ್ಬರ ಮಧ್ಯದಲ್ಲಿ ಒಂದು ಮಗು ಹುಟ್ಟಿತ್ತು ನೋಡಾ! ಗುರುವಿಗೆ ಗುರುವಾದ ಪರಿಯಂತೋ? ಶಿಷ್ಯಂಗೆ ಶಿಷ್ಯನಾದ ಪರಿಯೆಂತೋ?" ಎಂದು (ವ.೧೧೭೭, ಪು.೩೪೭, ವ.ಸಂ.೨) ಅಲ್ಲಮಪ್ರಭು ತಮ್ಮ ಹಾಗೂ ಬಸವಣ್ಣನವರಿಗೂ ಇರುವ ಗುರು-ಶಿಷ್ಯ ಸಂಬಂಧದ ಕುರಿತು ತಿಳಿಸಿದ್ದಾರೆ. "ಈ ತ್ರಿವಿಧ ಭಕ್ತಿ-ಯುಕ್ತಿಯ ಅರುಹಿಸಿಕೊಟ್ಟ ಸಂಗನಬಸವಣ್ಣನ ಬೆರಸಿ-ನೀನು ನಾನು ಬದುಕಿದೆವು ಕಾಣಾ ಗುಹೇಶ್ವರಾ" (ವ.೧೧೭೩, ಪು.೩೪೬, ವ.ಸಂ.೨) ಎಂದು ಅಲ್ಲಮಪ್ರಭು ಅವರು ಕೃತಜ್ಞತಾಭಾವದಿಂದ ಬಸವಣ್ಣನವರನ್ನು ಸ್ಮರಿಸಿದ್ದಾರೆ. "ಬಸವಣ್ಣನ ಅರವಿನೊಳಗೆ ನಾನಿದ್ದೆನು, ಬಸವಣ್ಣನ ಮರಹಿನೊಳಗೆ ನಾನಿದ್ದೆನು. ಕಾಣಾ ಕಲಿದೇವರ ದೇವಾ (ವ.೫೩೧, ಪು. ೨೦೩, ಸಂ.ಕೀ, ವ.ಸಂ.೩) ಎಂದು ಮಡಿವಾಳ ಮಾಚಿದೇವರು ತಾವು ಬಸವಣ್ಣನವರಲ್ಲಿ ಒಂದಾಗಿರುವ ಭಾವವನ್ನು ವ್ಯಕ್ತಪಡಿಸಿದ್ದಾರೆ. "ತಮ್ಮ ತನು, ಮನ ಬಸವಣ್ಣನವರದೆಂದು (ವ.೫೧೪,

ಪು. ೧೪೭ ವ.ಸಂ.೪) ತಾವು ಮಾಡುವ ಭಕ್ತಿ, ತಾವು ಮಾಡುವ ಯೋಗ ಬಸವಣ್ಣನವರೆಂದು (ವ.೫೭೮, ಪು. ೧೪೪, ವ.ಸಂ.೪) "ಬಾಲನಾಗಿದ್ದಂದು ಕರೆದು ಎತ್ತಿ ಮುದ್ದಿಕ್ಕಿ ಮೊಲೆವಾಲಕೊಟ್ಟು ಸಲಹಿದ ಬಸವಾ ಮೂಲ ಶಿವಜ್ಞಾನಕ್ಕೆ ದೀಪ್ತಿಯನಿಕ್ಕಿ ಸಲಹಿದ ಬಸವಾ ಎನಗೆ ನೀನೆ ಗತಿಯಯ್ಯಾ" (ವ.೬೦೩, ಪು. ೧೬೬, ವ.ಸಂ.೪) ಎಂದು ಸಿದ್ಧರಾಮಯ್ಯಾ ಅವರು ತಮ್ಮ ಹಾಗೂ ಬಸವಣ್ಣನವರ ನಡುವೆಯಿರುವ ಸಮರ್ಪಣಾ ಭಾವದ ಸಂಬಂಧವನ್ನು ಅನುಭಾವಾತ್ಮಕವಾಗಿ ಹೇಳಿದ್ದಾರೆ. "ಕಾಮಾರಿಯ ಗೆಲೆದೆನು ಬಸವಾ ನಿಮ್ಮಿಂದ, ಸೋಮಧರನ ಹಿಡಿತಿಪ್ಪೆನು ಬಸವಾ ನಿಮ್ಮ ಕೃಪೆಯಿಂದ, ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು? ಭಾವಿಸಲು ಗಂಡುರೂಪು ಬಸವಾ ನಿಮ್ಮಿದಯದಿಂದ" (ವ.೧೩೦, ಪು.೪೨, ಶಿ.ಶ.ವ.ಸಂ.೫) ಎಂದು ಅಕ್ಕಮಹಾದೇವಿ ಅವರು ತಮ್ಮ ಸಾಧ್ಯತೆಗಳಿಗೆ ಬಸವಣ್ಣನ ಕೃಪೆಯೇ ಕಾರಣವೆಂದು ತಿಳಿಸಿದ್ದಾರೆ. "ಎನ್ನ ಕುಲ, ಛಲ, ತನು, ಮನ ಸೂತಕವ ಕಳೆದಾತ ಬಸವಣ್ಣ" (ವ.೬, ಪು. ೩೩೧, ಶಿ.ಶ.ವ.ಸಂ.೫) ಎಂದು ನಾಗಲಾಂಬಿಕೆ ಅವರು ಕೃತಜ್ಞತಾಭಾವದಿಂದ ಬಸವಣ್ಣನವರ ಮಾನವೀಯ ಸಂಬಂಧವನ್ನು ಸ್ಮರಿಸಿದ್ದಾರೆ. ಈ ಮೊದಲಾದ ವಚನಕಾರರ ಮತ್ತು ವಚನಕಾರ್ತಿಯರಗಿಂತಲೂ ಭಿನ್ನವಾದ ರೀತಿಯಲ್ಲಿ ನಿಲಮ್ಮ ಅವರು ತಮಗೂ ಬಸವಣ್ಣನವರಿಗೂ ಇರುವ ಸಂಬಂಧದ ಕುರಿತು ಹೇಳಿದ್ದಾರೆ. "ಮಡದಿ ಎಂಬ (ಶಬ್ದ) ನಿಶ್ಶಬ್ದವಾದಡೆ ನಾನೀಗ ನಿಜಸುಖಿ ಬಸವಾ. ಬಸವನಂಗವ ಕಂಡಡೆ ನಾನು ಪರಿಣಾಮಿ, ಬಸವನ ಹರುಷವ ಕಂಡರಿದಡೆ ನಾನೈಕ್ಯ ಸಂಪನ್ನೆಯಯ್ಯಾ ಸಂಗಯ್ಯಾ" (ವ.೧೦೦, ಪು.೨೬೦,ಶಿ.ಶ.ವ.ಸಂ.೫) ಹಾಗೂ "ಮಡದಿ ಎನ್ನಲಾಗದು. ಬಸವಂಗೆ ಎನ್ನನು, ಪುರುಷನೆನ್ನಲಾಗದು ಬಸವನ ಎನಗೆ, ಉಭಯದ ಕುಳವ ಹರಿದು ಬಸವಂಗೆ ಬಸವಂಗೆ ಶಿಶು ವಾನಾದೆನು, ಬಸವನೆನ್ನ ಶಿಶುವಾದನು, ಪ್ರಮಥರು ಪುರಾತರು ಸಾಕ್ಷಿಯಾಗಿ ಸಂಗಯ್ಯ ನಿಕ್ಕಿದ ದಿಬ್ಬವ ಮೀರದೆ ಬಸವನೊಳಗಾನಡಗಿದೆ." (ವ.೧೦೧, ಪು. ೨೬೦, ಶಿ.ಶ.ವ.ಸಂ.೫) ಎಂದು ನೀಲಮ್ಮ ಅವರು ತಿಳಿಸಿದ್ದಾರೆ. ಇವರಿಗೆ ಲೌಕಿಕ ಭಾವದ ಗಂಡ–ಹೆಂಡತಿಯ ಸಂಬಂಧಕಿಂತಲೂ ನಿರ್ಮೋಹದ, ಮುಗ್ಧ, ಮಧುರಭಾವದ, ಪರಸ್ಪರ ಶಿಶುವಾಗುವ ಸಂಬಂಧ ಮುಖ್ಯವಾಗುತ್ತದೆ. ಬಸವಣ್ಣನವರಿಗೆ ತಾವು "ವಿಚಾರ ಪತ್ನಿಯಾದೆನೆಯ್ಯಾ ಸಂಗಯ್ಯಾ" (ವ. ೮೮, ಪು. ೨೫೩, ಶಿ.ಶ.ವ. ಸಂ.೫) ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ವಚನಕಾರರು ತಮಗೂ ಬಸವಣ್ಣನವರಿಗೂ ಇದ್ದ ಭಾವನಾತ್ಮಕ ಸಂಬಂಧವನ್ನು ತಾತ್ವಿಕ ನೆಲೆಯಲ್ಲಿ ಕಂಡಿದ್ದರೆ, ನೀಲಮ್ಮ ಅವರು ತಮ್ಮ ಹಾಗೂ ಬಸವಣ್ಣನವರ ಸಂಬಂಧವನ್ನು ಲೌಕಿಕ ನೆಲೆಯಲ್ಲಿ ಕಾಣದೆ ಅಲೌಕಿಕ ನೆಲೆಯಲ್ಲಿ ಕಂಡು ಕೊಂಡಿದ್ದಾರೆ.

ವಚನಕಾರರು ಬಸವಣ್ಣವರೇ ತಮಗೆ ಗುರು, ಲಿಂಗ, ಜಂಗಮ, ಪ್ರಸಾದ ತಮಗೆ ಬಸವಣ್ಣನವರೇ ಸರ್ವಸ್ವ, ಬಸವಣ್ಣನವರೇ ತಮ್ಮ ಅಂಗಾಂಗಗಳಲ್ಲಿ ಭಾವನೆಗಳಲ್ಲಿ ನೆಲೆಸಿದವರೆಂದು ತಮ್ಮ ವಚನಗಳಲ್ಲಿ ಚಿತ್ರಿಸಿದ್ದಾರೆ. ಮಡಿವಾಳ ಮಾಚಿದೇವರು 'ಎನ್ನ ಸರ್ವಾಂಗಕ್ಕೆ ಓಂಕಾರ ವಾದಾತ ಬಸವಣ್ಣ' (ವ.೫೩೬, ಪು. ೨೦೪, ಸಂಕೀ, ವ.ಸಂ.೩) ಎಂದು ಹೇಳಿದರೆ, 'ಚೆನ್ನಬಸವಣ್ಣನವರು ಎನ್ನ ಸರ್ವಾಂಗದಲ್ಲಿ ಸರ್ವೇಶ್ವರರೆಂಬ ರುದ್ರನಾಗಿ ನಿಂದಾಣ ಬಸವಣ್ಣ' (ವ.೧೦೭೯, ಪು. ೩೬೫, ವ.ಸಂ.೩) ಎಂದು ಹೇಳಿದ್ದಾರೆ.

ಹೀಗೆ ವಚನಕಾರರಿಗೂ ಮತ್ತು ಬಸವಣ್ಣನವರಿಗೂ ಪರಸ್ಪರ ಪೂಜ್ಯನೀಯ, ಆತ್ಮೀಯ, ಗೌರವ ಭಾವದ ಸಂಬಂಧವಿತ್ತು. ತಾವು ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯುವಾಗ ತಮ್ಮಿಂದ ಏನಾದರೂ ತಪ್ಪಾದರೆ ಪರಸ್ಪರ ತಿದ್ದುವ ಎಚ್ಚರಿಸುವ ಸ್ವತಂತ್ರ ಮನೋಧರ್ಮದ ಸಾತ್ವಿಕ ಸಂಬಂಧವೂ ಇತ್ತು. ಈ ರೀತಿಯ ಸಂಬಂಧವನ್ನು ಅಲ್ಲಮಪ್ರಭು, ಚೆನ್ನಬಸವಣ್ಣ, ನೀಲಮ್ಮವರ ವಚನಗಳಲ್ಲಿ ಕಾಣಬಹುದಾಗಿದೆ.

ತನುವರ್ಪಿತವೆಂದಡೆ ಗುರುದ್ರೋಹ
ಮನವರ್ಪಿತವೆಂದಡೆ ಲಿಂಗದ್ರೋಹ
ಧನವರ್ಪಿತವೆಂದಡೆ ಜಂಗಮದ್ರೋಹ
ಇಂತೀ ತನುಮನಧನಂಗಳೆಂಬ ಅನಿತ್ಯವನು
ನಿತ್ಯಕ್ಕರ್ಪಿಸಿ ಭಕ್ತನಾದೆನೆಂದಡೆ, ಅದು ಅಜ್ಞಾನ ನೋಡಾ
ಒಡೆಯರಿಗೆ ಉಂಡೆಯ ಮುರಿದಿಕ್ಕಿ
ನಾ ಭಕ್ತನೆಂಬ ಮಾತ ಸಮ್ಯಕ್ ಶರಣರು ಮೆಚ್ಚುವರೆ?
ನಮ್ಮ ಗುಹೇಶ್ವರ ಲಿಂಗಕ್ಕೆ
ನೀನು ಆವುದರಲ್ಲಿ ಏನನರ್ಪಿಸಿ ಭಕ್ತನಾದೆ ಹೇಳಾ ಸಂಗನ
ಬಸವಣ್ಣಾ? (ವ.೧೨೩೨, ಪು. ೩೬೪, ವ.ಸಂ.೩)
–ಅಲ್ಲಮಪ್ರಭು
ತನುವಿನಲ್ಲಿ ತನು ಸವೆದು ಮನದಲ್ಲಿ ಮನ ಸವೆದು,
ಧನದಲ್ಲಿ ಧನಸವೆದು
ಭಕ್ತಿ ಯುಕ್ತಿಯ ಮಾತು ನಿನಗೇಕೆ ಹೇಳಾ ಬಸವಾ?
ಮಾಟಕೂಟವೆಂಬ ಕೀರ್ತಿವಾರ್ತೆಗೆ ಸಿಲುಕಿ
ಜಂಗಮವೆ ಲಿಂಗವೆಂಬುದ ಮರೆದೆಯಲ್ಲಾ ಬಸವಣ್ಣಾ!
ಗುಹೇಶ್ವರನ ಶರಣರಿಗೆ ತ್ರಿಕರಣವನೊಪ್ಪಿಸಿದಲ್ಲದೆ
ಭಕ್ತನಾಗಬಾರದು ಕಾಣಾ ಸಂಗನಬಸವಣ್ಣಾ
(ವ.೧೩೪, ಪು. ೩೬೫, ವ.ಸಂ.೨–
–ಅಲ್ಲಮಪ್ರಭು
ಸೂಳೆ ಹಲಬರನು ಉಳಿದಳೆಂದು ನಿಂದಿಸುವುದಿಲ್ಲ ಕೇಳಾ
ಪತಿವ್ರತೆ ತನ್ನ ಪುರುಷನಲ್ಲದೆ ಮತ್ತೊಬ್ಬನ ಮುಖವ ನೋಡಿದಡೆ
ಅವಳ ಚಾಂಡಾಲಗಿತ್ತಿ ಎಂಬುದು ಲೋಕವೆಲ್ಲವು,
ಕೀರ್ತಿವಾರ್ತೆಗೆ ಮಾಡುವ ಭಕ್ತತಪ್ಪಿದಡೆ ಅದ ಮನಕ್ಕೆ ತರಲಿಲ್ಲ
ಸಜ್ಜನ ಸದ್ಭಕ್ತನೆಡಹಿದಡೆ ಆದ ಸೈರಿಸಬಾರದು ಕೇಳಾ,
ನಮ್ಮ ಗುಹೇಶ್ವರಲಿಂಗಕ್ಕೆ ಆದಿಯಿಂದತ್ತತ್ತ ನೀನೆ ಭಕ್ತನಾದ ಕಾರಣ
ಮನನೊಂದಿತ್ತು ಕಾಣಾ ಸಂಗನಬಸವಣ್ಣಾ

(ವ. ೧೪೯೯, ಪು. ೪೭೫, ವ.ಸಂ.೨)
–ಅಲ್ಲಮಪ್ರಭು

ಅಂಗದ ಮೇಲೆ ಲಿಂಗವುಳ್ಳುದೆಲ್ಲಾ ಸಂಗಮನಾಥನೆಂಬ ಭಾವ ಬಸವಣ್ಣಂಗಾಯಿತ್ತಲ್ಲದೆ, ಎನಗೆ ಆ ಭಾವವಿಲ್ಲ ನೋಡಾ.

(ವ.೮೬೨, ಪು. ೨೬೨, ವ.ಸಂ.೩) – ಚೆನ್ನ ಬಸವಣ್ಣ

ಲಿಂಗವೆ ಜಂಗಮ, ಜಂಗಮವೆ ಲಿಂಗವೆಂದು ನಂಬಿದಲ್ಲಿ
ಹೊರೆ ಹುಟ್ಟಿದ ಬಳಿಕ
ಹಾಲ ಹರವಿಯೊಳಗೆ ಹುಳಿ ಹೊಕ್ಕಂತೆ ನೋಡಯ್ಯಾ!
ಅಂಗದ ಮೇಲೆ ಲಿಂಗವುಳ್ಳುದೆಲ್ಲ ಸಂಗಮನಾಥದೇವರೆಂದು ನಂಬಿದ ನಂಬುಗೆಯು
ಬಂದ ಶರಣರ ನಿಲವನರಿಯದಿದ್ದಲ್ಲಿ ತಪ್ಪಿತ್ತು ನೋಡಾ ಗುರುವೆ.
ಸಂಗಮನಾಥ ಅಂಗವಿಡಿದು ಮನೆಗೆ ನಡೆದು ಬಂದಡೆ
ದಿಮ್ಮನೆ ಇದಿರೆದ್ದು ವಂದಿಸಬೇಕು ನೋಡಯ್ಯಾ,
ಕೂಡಲಚೆನ್ನಸಂಗನ ಶರಣ ಪ್ರಭುದೇವರು, ಸಿದ್ಧರಾಮಯ್ಯ
ದೇವರು ಬಂದು ಬಾಗಿಲೊಳಗಿರಲು
ಕಣ್ಣರಿಯದಿದ್ದರೂ ಕರುಳರಿಯಬೇಡವೆ ಸಂಗನ ಬಸವಣ್ಣಾ?

(ವ.೧೬೭೯, ಪು. ೫೯೧, ವ.ಸಂ.೩) – ಚೆನ್ನಬಸವಣ್ಣ.

ಅಟ್ಟಡವಿಯಲ್ಲಿ ಬಿಟ್ಟು ಹೋದಿರಿ ಬಸವಯ್ಯಾ
ನಟ್ಟ ನಡುಗ್ರಾಮದ ಕೆಡಿಸಿ ಹೋದಿರಿ ಬಸವಯ್ಯಾ
ಹುಟ್ಟಿಲ್ಲದ ಬಂಜೆಗೆ ಮಕ್ಕಳ ಕೊಟ್ಟಿರಿ ಬಸವಯ್ಯಾ
ಆ ಮಕ್ಕಳ ಫಲವಿಲ್ಲದಂತೆ ಮಾಡಿದಿರಿ ಬಸವಯ್ಯಾ
ಸಂಗಯ್ಯನಲ್ಲಿ ನೀನೆಂತಪ್ಪ ಮಹಿಮನಯ್ಯಾ ಬಸವಯ್ಯಾ?

(ವ.೪, ಪು. ೨೬೩, ಶಿ.ಶ.ವ.ಸಂ.೫) – ನೀಲಮ್ಮ.

ಅಲ್ಲಮಪ್ರಭು, ಚೆನ್ನಬಸವಣ್ಣ ಮತ್ತು ನೀಲಮ್ಮ ಅವರು ಬಸವಣ್ಣನವರ ಲಿಂಗ–ಜಂಗಮ ಸಂಬಂಧದ ಕುರಿತು ಭಕ್ತಿಯ ಕುರಿತು ಪ್ರಶ್ನಿಸುವ ಕಾಳಜಿ ಆತ್ಮೀಯವಾಗಿದೆ.

ಬಸವಣ್ಣನವರು ಕಲ್ಯಾಣದಲ್ಲಿರುವವರೆಗೆ ಕಲ್ಯಾಣ ಸ್ವರ್ಗವಾಗಿತ್ತು ಶಿವಭಕ್ತಿಯ ನೆಲೆಯಾಗಿತ್ತು. ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಹೋದಾಗ ಕಲ್ಯಾಣದ ಸ್ಥಿತಿ ಹೇಗಿತ್ತು ಎಂಬುದನ್ನು ನಾಗಲಾಂಬಿಕೆಯವರು ಹೇಳುವುದರ ಮೂಲಕ ಬಸವಣ್ಣನವರ ಅಗಲುವಿಕೆಯ ನೋವನ್ನು ವ್ಯಕ್ತಪಡಿಸಿದ್ದಾರೆ.

ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲ್ಲಾ
ಅಯ್ಯಾ ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವರಾರು ಬಲ್ಲರು?
ಅಣ್ಣಾ ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು
ನೀವು ಲಿಂಗೈಕ್ಯವಾದೊಡೆ, ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ
ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ
ಎನ್ನನೊಯ್ಯದೆ ಹೋದೆಯಲ್ಲಾ ಪಂಚಪುರುಷಮೂರ್ತಿ ಬಸವಣ್ಣಾ
ಬಸವಣ್ಣ ಪ್ರಿಯ ಚೆನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ!

(ವ.೧೦, ಪು. ೨೩೩, ಶಿ.ಶ.ವ.ಸಂ. ೫)

ವಚನಕಾರರು ಬಸವಣ್ಣನವರ 'ಒಡನಾಡಿಗಳಾಗಿದ್ದು ಅವರು ಹುಟ್ಟು ಹಾಕಿದ ಶರಣ ಚಳವಳಿಯಲ್ಲಿ ಭಾಗವಹಿಸಿದ್ದರು. ಹಾಗೂ ಅವರನ್ನು ಸಮೀಪದಿಂದ ಕಂಡಿದ್ದರು. ಬಸವಣ್ಣನವರೊಂದಿಗೆ ಇವರ ಪರಸ್ಪರ ಸಂಬಂಧ ಪ್ರೀತಿ, ಸ್ನೇಹ, ಭಕ್ತಿ ಮತ್ತು ಸಮರ್ಪಣಾ ಭಾವದಿಂದ ಕೂಡಿತ್ತು. ವಚನಕಾರರ ಹಾಗೂ ಬಸವಣ್ಣನವರ ಪರಸ್ಪರ ಸಂಬಂಧ ಸತಿ–ಪತಿಭಾವದ ಸಂಬಂಧವಾಗಿತ್ತು. ಆದುದರಿಂದ ವಚನಕಾರರು ಬಸವಣ್ಣನವರನ್ನು ಗುರುವಾಗಿ, ತಂದೆಯಾಗಿ, ಪೂಜ್ಯವ್ಯಕ್ತಿಯಾಗಿ, ಭೂಲೋಕದ ಕರ್ತಾರರಾಗಿ, ಲೋಕೋದ್ಧಾರಕಾರಾಗಿ, ಮತಸಂಸ್ಥಾಪಕರಾಗಿ, ಶಿವಭಕ್ತರಾಗಿ, ಅನುಭಾವಿಗಳಾಗಿ, ದಾಸೋಹಿಗಳಾಗಿ ಆಧ್ಯಾತ್ಮ ಜೀವಿಗಳಾಗಿ, ತತ್ವಜ್ಞಾನಿಗಳಾಗಿ ಕಂಡಿದ್ದಾರೆ.

ಸಮಾರೋಪ :

ವಚನಕಾರರು ಬಸವಣ್ಣನವರ ವ್ಯಕ್ತಿತ್ವವನ್ನು ಚಿತ್ರಿಸುವುದಕ್ಕೂ ನಡುಗನ್ನಡ ಮತ್ತು ಆಧುನಿಕ ಕನ್ನಡ ಕಾಲದ ಸೃಜನಶೀಲ ಸಾಹಿತ್ಯವು ಬಸವಣ್ಣನವರ ಚರಿತ್ರೆಯನ್ನು ಚಿತ್ರಿಸುವುದಕ್ಕೂ ವ್ಯತ್ಯಾಸವಿದೆ. ವಚನಕಾರರು ಬಸವಣ್ಣನವರ ದಿವ್ಯ ವ್ಯಕ್ತಿತ್ವವನ್ನು ವಸ್ತುನಿಷ್ಠವಾಗಿ ಚಿತ್ರಿಸಿದರೆ ನಡುಗನ್ನಡ ಮತ್ತು ಆಧುನಿಕ ಕನ್ನಡಕಾಲದ ಸೃಜನಶೀಲ ಸಾಹಿತ್ಯ ಬಸವಣ್ಣನವರ ಚರಿತ್ರೆಯನ್ನು ತನ್ನ ವರ್ತಮಾನದಲ್ಲಿಟ್ಟು ಪುನಃ ಸೃಷ್ಟಿಸಿದೆ.

ಹರಿಹರನ ಬಸವರಾಜದೇವರ ರಗಳೆ ಪಾಲ್ಕುರಿಕೆ ಸೋಮನಾಥನ ಬಸವಪುರಾಣ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ ಭೀಮಕವಿಯ ಬಸವಪುರಾಣ, ಷಡಕ್ಷರದೇವನ ಬಸವರಾಜ ವಿಜಯ, ಸಂಸ್ಕೃತದಲ್ಲಿ ಕಂಚಿಯ ಶಂಕರಾರಾಧ್ಯರಿಂದ ಬರೆಯಲ್ಪಟ್ಟ ಬಸವಪುರಾಣ ಸಿಂಗಿರಾಜನ ಅಮಲಬಸವಚಾರಿತ್ರ್ಯ ಮತ್ತು ಲಕ್ಷ್ಮದಂಡೇಶನ ಶಿವತತ್ವ ಚಿಂತಾಮಣಿ ಈ ಮೊದಲಾದ ಕವಿಗಳ ಪುರಾಣ ಕಾವ್ಯಗಳು ಬಸವಣ್ಣನವರ ಚರಿತ್ರೆಯನ್ನು ತಿಳಿಸುತ್ತವೆ.

ಹರಿಹರ, ಪಾಲ್ಕುರಿಕೆ ಸೋಮನಾಥ, ಭೀಮಕವಿ, ಸಿಂಗಿರಾಜ ಲಕ್ಕಣ್ಣದಂಡೇಶ ಮೊದಲಾದ ಕವಿಗಳು ಬಸವಣ್ಣನವರ ಜನನ, ಬಾಲ್ಯಜೀವನ, ಸಾಧನೆಯ ಕುರಿತು ಚಿತ್ರಿಸುವ ರೀತಿಯಲ್ಲಿ ಹಾಗೂ ಆಶಯದಲ್ಲಿ ವ್ಯತ್ಯಾಸವಿದೆ. ಹರಿಹರನು ಸ್ವರ್ಗಲೋಕದಲ್ಲಿ ವೃಷಭಮುಖನೆಂಬ ಗಣೇಶ್ವರನು ತಾನು ಮಾಡಿದ ತಪ್ಪನ್ನು ತಿದ್ದಿಕೊಳ್ಳಲು ಮತ್ತು ಆತ್ಮೋದ್ಧಾರಕ್ಕಾಗಿ ಶಿವಭಕ್ತಿ–ಪ್ರಸಾದದ ಮಹತ್ವವನ್ನು ತಿಳಿಸುವುದಕ್ಕಾಗಿ ಭೂಲೋಕಕ್ಕೆ ಅವತರಿಸಿದನೆಂದು ಬಣ್ಣಿಸಿದರೆ ಪಾ. ಸೋಮನಾಥ, ಭೀಮಕವಿ, ಲಕ್ಕಣದಂಡೇಶ ಕವಿಗಳು ಶಿವಸ್ವರೂಪಿಯಾದ ಬಸವಣ್ಣನವರು ಮರ್ತ್ಯವನ್ನು ಪಾವನಗೊಳಿಸುವುದಕ್ಕಾಗಿ ಮತ್ತು ಶಿವಧರ್ಮದ ಪುನರುದ್ಧಾರಕ್ಕಾಗಿ ಭೂಲೋಕಕ್ಕೆ ಅವತರಿಸಿದನೆಂದು ಚಿತ್ರಿಸಿದ್ದಾರೆ. ಬಸವಣ್ಣನವರ ಜನ್ಮವೃತ್ತಾಂತದ ಕುರಿತು ವ್ಯಕ್ತಪಡಿಸಿದ ವಚನಕಾರರ ಅಭಿಪ್ರಾಯದ ಮುಂದುವರಿಕೆಯನ್ನು ಪುರಾಣ ಕಾವ್ಯಗಳಲ್ಲಿ ಕಾಣಬಹುದಾಗಿದೆ.

ನಡುಗನ್ನಡದ ಕವಿಗಳು ಬಸವಣ್ಣನವರ ಜನ್ಮ ವೃತ್ತಾಂತದ ಕುರಿತು ಚಿತ್ರಿಸುವಲ್ಲಿ ಕೆಲವು ಬದಲಾವಣೆಗಳು ಕಂಡುಬಂದರೂ ಬಸವಣ್ಣನವರು ಅವತಾರಿಪುರುಷರು, ಪವಾಡಪುರುಷರು, ಭಕ್ತರು, ಸಾಧಕರು, ಅನುಭಾವಿಗಳು, ಬಾಗೇವಾಡಿಯ ಮಾದರಸಮಾದಲಾಂಬಿಕೆಯರ

ಮಗನು ಬ್ರಾಹ್ಮಣ್ಯವನ್ನು ತಿರಸ್ಕರಿಸದವರು, ಪುರೋಹಿತಶಾಹಿ ಅಧಿಕಾರಶಾಹಿಯನ್ನು ವಿರೋಧಿಸಿದವರು ಶಿವಭಕ್ತರೆಲ್ಲರೂ ಶರಣರೆಂದು ಭಾವಿಸಿದವರು ಹಾಗೂ ಕಾಯಕಜೀವಗಳು, ದಾಸೋಹಿಗಳು ಎಂಬುದರಲ್ಲಿ ಕವಿಗಳ ಒಮ್ಮತವಿದೆ.

ಜನಪದ ಹಾಗೂ ಅನುಭಾವಿ ಕವಿಗಳು ಬಸವಣ್ಣನವರನ್ನು ಶಿವಭಕ್ತರೆಂದು, ಕಲ್ಯಾಣವನ್ನು ಕೈಲಾಸವನ್ನಾಗಿ ಮಾಡಿದವರೆಂದು, ಲೋಕೋದ್ಧಾರಕರೆಂದು, ಶರಣತತ್ವವನ್ನು ಸಾರಿದವರೆಂದು, ಜಗತ್ತಿಗೆ ಗುರುಗಳೆಂದು ತಮ್ಮ ಹಾಡುಗಳಲ್ಲಿ ಅವರ ವ್ಯಕ್ತಿ ವಿಶಿಷ್ಟತೆಯ ಕುರಿತು ಹಾಡಿ ಹೊಗಳಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಕವಿಗಳು, ಸಾಹಿತಿಗಳು ನಡುಗನ್ನಡ ಸಾಹಿತ್ಯ ಸಂದರ್ಭದ ಕವಿಗಳಂತೆ ಬಸವಣ್ಣನವರನ್ನೂ ಅಲೌಕಿಕ ವ್ಯಕ್ತಿಯನ್ನಾಗಿ ನೋಡದೆ ಲೌಕಿಕ ವ್ಯಕ್ತಿಯನ್ನಾಗಿ ನೋಡಿದ್ದಾರೆ. ನಡುಗನ್ನಡದ ಕವಿಗಳು ಬಸವಣ್ಣನವರ ವ್ಯಕ್ತಿತ್ವವನ್ನು ಭಕ್ತಿಯ ಹಿನ್ನಲೆಯಲ್ಲಿ ಹಾಗೂ ಪವಾಡಗಳ ಮೂಲಕ ವೈಭವೀಕರಿಸಿ ಚಿತ್ರಿಸಿದಂತೆ ಆಧುನಿಕ ಕನ್ನಡ ಕವಿಗಳು ಚಿತ್ರಿಸದೆ ಸ್ವತಂತ್ರತೆ–ಸಮಾನತೆ–ಮಾನವೀಯತೆಯನ್ನು ಬಯಸಿದ ಹೋರಾಟಗಾರರ ಸಂಘರ್ಷಮಯ ಬದುಕನ್ನು ವಾಸ್ತವವಾಗಿ ಚಿತ್ರಿಸಿದ್ದಾರೆ. ಆಧುನಿಕ ಕನ್ನಡ ಕಾವ್ಯ ನಡುಗನ್ನಡ ಕಾವ್ಯದಂತೆ ಬಸವಣ್ಣನವರನ್ನು ಅವತಾರಿ ಪುರುಷರೆಂದು, ಕಾರಣಿಕ ಪುರುಷರೆಂದು, ಮತಸ್ಥಾಪಕರೆಂದು ಚಿತ್ರಿಸದೆ ಸಮಾಜಶಾಸ್ತ್ರಜ್ಞರೆಂದು, ಅರ್ಥಶಾಸ್ತ್ರಜ್ಞರೆಂದು, ಮಾನವತಾ ವಾದಿಗಳೆಂದು ಚಿತ್ರಿಸಿದೆ. ವಚನಕಾರರಿಗೆ ಬಸವಣ್ಣನವರು ಗುರುವಾಗಿ (ಮತಸಂಸ್ಥಾಪಕರಾಗಿ, ಅನುಭಾವಿಗಳಾಗಿ ಕಂಡರೆ ಆಧುನಿಕ ಕನ್ನಡ ಕವಿಗಳಿಗೆ ಬಸವಣ್ಣನವರು ವಿಶಿಷ್ಟ ವ್ಯಕ್ತಿತ್ವ ವನ್ನೊಳಗೊಂಡ ಅಪರೂಪದ ವ್ಯಕ್ತಿಯಾಗಿ, ಮಹಾಮಾನವತಾವಾದಿಯಾಗಿ, ಕ್ರಾಂತಿಕಾರಿಯಾಗಿ ಕಂಡಿದ್ದಾರೆ.

ಶಾಸನಗಳಲ್ಲಿ ಬಸವಣ್ಣನವರು ಇತಿಹಾಸದ ವ್ಯಕ್ತಿಯಾಗಿ ಕಂಡರೆ ಪುರಾಣ ಕಾವ್ಯಗಳಲ್ಲಿ ಭಕ್ತಿಭಂಡಾರಿಯಾಗಿ, ಅಲೌಕಿಕ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದಾರೆ. ಜನಪದ ಹಾಗೂ ಅನುಭಾವಿ ಕವಿಗಳ ಹಾಡುಗಳಲ್ಲಿ ಬಸವಣ್ಣನವರು ಶಿವಭಕ್ತರಾಗಿ, ಮಾನವಧರ್ಮದ ಪ್ರತಿಪಾದಕರಾಗಿ ಕಂಡರೆ ಆಧುನಿಕ ಕನ್ನಡ ಕಾವ್ಯದಲ್ಲಿ ಸಮಾಜವಾದಿಯಾಗಿ, ಸಂಘಟನಾಕಾರರಾಗಿ, ವ್ಯವಸ್ಥೆಯ ವಿರುದ್ಧ ಬಂಡೆದ್ದ ಬಂಡಾಯಗಾರರಾಗಿ, ತತ್ವಜ್ಞಾನಿಯಾಗಿ ಕಂಡಿದ್ದಾರೆ.

❑

* ಕರ್ನಾಟಕ ಸರಕಾರ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಇವರು ಪ್ರಕಟಿಸಿದ ಸಮಗ್ರ ವಚನ ಸಂಪುಟಗಳಿಂದ ಆಯ್ದ ವಚನಗಳನ್ನು ಈ ಲೇಖನದಲ್ಲಿ ಬಳಸಿಕೊಳ್ಳಲಾಗಿದೆ.

ಬಸವಣ್ಣ : ಮೂರು ಮುಖ್ಯ ಲಕ್ಷಣಗಳ ಸಂಗಮ

●

ಡಾ. ಎಂ. ಚಿದಾನಂದ ಮೂರ್ತಿ

ಉಪನಿಷತ್ತಿನ ಕಾಲದಿಂದ ಹನ್ನೆರಡನೆಯ ಶತಮಾನದವರೆಗೆ ಭಾರತದಲ್ಲಿ ಅನೇಕ ದಾರ್ಶನಿಕರು, ಧಾರ್ಮಿಕ ಮುಖಂಡರು ಉದಯಿಸಿದರು. ಆದರೆ ಭಾರತೀಯ ಸಮಾಜದ ಎಲ್ಲ ವರ್ಗಗಳ ಮೇಲೆ ತೀವ್ರ ಪ್ರಭಾವವನ್ನು ಬೀರಿ ಅವರಲ್ಲಿ ಒಂದು ಒಳ ಎಚ್ಚರವನ್ನು ಮೂಡಿಸಿದ ಮೊತ್ತ ಮೊದಲ ನಿಜವಾದ ಅರ್ಥದ ಸಾಮಾಜಿಕ ಚಳವಳಿ ನಡೆದದ್ದು ಬಸವ ಮತ್ತು ಅವನ ಸಹೋದ್ಯೋಗಿಗಳಿಂದ, ಕರ್ನಾಟಕದಲ್ಲಿ. ಅಲ್ಲಿಯವರೆಗೆ ಯಾವುದೇ ಮತ ಅಥವಾ ಯಾವುದೇ ಉದಾತ್ತ ಚಿಂತನೆ ಸಮಾಜದ ತೀರ ಕೆಳಗಿನ ಪದರಗಳನ್ನು ಮುಟ್ಟಲೂ ಇಲ್ಲ, ಮುಟ್ಟುವ ಸ್ಥಿತಿಯಲ್ಲೂ ಇರಲಿಲ್ಲ. ಮುಟ್ಟುವ ಗುರಿಯೂ ಇರಲಿಲ್ಲ. ಭಾರತದ ಸಾಮಾಜಿಕ ಚರಿತ್ರೆಯ ಪರಿಚಯ ಇರುವವರಿಗೆ ಇದು ಉತ್ಪ್ರೇಕ್ಷೆಯ ಅಥವಾ ಅಭಿಮಾನದ ಮಾತು ಎಂಬ ಸಂದೇಹ ಬರಲಾರದು. ರೈತ, ಬಡಗಿ, ನೇಕಾರ, ಹರಿಜನ, ದನಗಾಹಿ, ಅಂಬಿಗ ಇಂತಹ ಭಿನ್ನ ಭಿನ್ನ ಉದ್ಯೋಗದ ಅನೇಕ ನೂರು ಜನ ಪುರುಷರು, ಇಪ್ಪತ್ತೈದಕ್ಕೆ ಮೀರಿದ ಸ್ತ್ರೀಯರು ಒಂದು ನಿರ್ದಿಷ್ಟ ಕಾಲದ ಅವಧಿಯಲ್ಲಿ ಒಂದು ಭಾಷೆಯಲ್ಲಿ ಕೃತಿ ರಚನೆ ಮಾಡಿದ ಉದಾಹರಣೆ ಭಾರತೀಯ ಇತಿಹಾಸದಲ್ಲಿ ಮಾತ್ರವಲ್ಲ. ವಿಶ್ವದ ಇತಿಹಾದಲ್ಲಿಯೇ ಮತ್ತೊಂದು ದೊರಕುವ ಬಗ್ಗೆ ಸಂದೇಹ ಇದೆ.

ಅವರು ಮಾಡಿದ ಕೃತಿ ರಚನೆ ಅವರಲ್ಲಿ ಮೂಡಿದ ಸಾಮಾಜಿಕ ಅರಿವಿನ ಸಂಕೇತ ಎನ್ನುವ ಕಾರಣದಿಂದಲೇ ಮಹತ್ವವನ್ನು ಪಡೆಯುತ್ತದೆ. ಸಾಹಿತ್ಯದ ಮಾನದಂಡಗಳಿಂದ ಅಳೆದರೆ ಅನೇಕ ವಚನಕಾರರ ಕೃತಿಗಳು ಇಂದು ತೀರ ಸಾಧಾರಣವಾಗಿ ತೋರುತ್ತವೆ. ಆದರೆ, ಸಮಾಜಶಾಸ್ತ್ರದ ದೃಷ್ಟಿಯಿಂದ ನೋಡಿದರೆ, ಅಷ್ಟು ಜನ ತಮ್ಮನ್ನು ತಾವು ಬಹಿರಂಗವಾಗಿ ವ್ಯಕ್ತಪಡಿಸಿಕೊಂಡು ತಮ್ಮ ಎಷ್ಟೇ ಸಾಮಾನ್ಯ ಚಿಂತನೆಗಳಾದರೂ ಅವನ್ನು ಹೇಳಿಕೊಳ್ಳುವ ಧೈರ್ಯ ಮಾಡಿದರು ಎನ್ನುವುದೇ ಮುಖ್ಯವಾಗುತ್ತದೆ. ಜೊತೆಗೆ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯನಂತಹ ಕೆಲವು ವಚನಕಾರರಂತೂ ತೀರ ಸ್ಪಷ್ಟೋಕ್ತಿಗಳಲ್ಲಿಯೇ ತಮ್ಮ ಸಾಮಾಜಿಕ ಚಿಂತನೆ ವಿಮರ್ಶೆಗಳನ್ನು ಮುಂದಿಟ್ಟಿದ್ದಾರೆ ಎನ್ನುವುದು ಗಮನಾರ್ಹ ಸಂಗತಿ. ಹೀಗೆ ಸಾಮಾನ್ಯರೂ ಮಾತನಾಡುವ ಮನಸ್ಸು ಮಾಡಿದ್ದು ಒಂದು ಸಾಮೂಹಿಕ ಆವೇಶದ ಆಂದೋಲನದ ಫಲವೆಂಬಲ್ಲಿ ಅನುಮಾನವಿಲ್ಲ.

ಈ ಆಂದೋಲನದ ಕೇಂದ್ರ ವ್ಯಕ್ತಿ ಬಸವನನ್ನು 'ಭಕ್ತಿ ಭಂಡಾರಿ' ಎಂದು ಕರೆಯುವುದು ರೂಢಿಯಾಗಿದೆ. ಭಕ್ತಿ ಬಸವಣ್ಣನ, ಅವನ ಚಳವಳಿಯ ಮುಖ್ಯಭಾಗ ಎಂಬುದು ನಿಜವಾದರೂ, ಭಕ್ತಿ ಸಾಧನೆಯೊಂದೇ ಬಸವಣ್ಣನ ಜೀವಿತದ ಉದ್ದೇಶವಾಗಿದ್ದರೆ ಅವನು ತನ್ನ ಹುಟ್ಟೂರನ್ನಾಗಲಿ ಅಥವಾ ಮುಂದೆ ತನಗೆ ಆಶ್ರಯವಿತ್ತ ಕೂಡಲಸಂಗಮದ ದೇವಾಲಯವನ್ನಾಗಲಿ ತಿರಸ್ಕರಿಸಿ ಹೊರಬರುವ ಅಗತ್ಯ ಇರಲಿಲ್ಲ. 'ಭಕ್ತಿ ಭಂಡಾರಿ' ಎಂದು ಕರೆಯುವವರು ಅವನ ಬದುಕಿನ ಪರಮ ಆದರ್ಶ ಭಕ್ತಿ, ಅನುಷಂಗಿಕವಾಗಿ ಅಥವಾ ಆಕಸ್ಮಿಕವಾಗಿ ಅವನ ಗಮನ ಸಮಾಜದ ಕಡೆ ಹರಿಯಿತು ಎಂದು ನಂಬುವಂತೆ ತೋರುತ್ತದೆ. ಅವನ ಬದಕಿನ ಘಟನೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ನೋಡಿದರೆ ನಮಗೆ ಇದಕ್ಕೆ ಸಂಪೂರ್ಣ ವಿರುದ್ಧವಾದ ಚಿತ್ರ ಕಂಡುಬರುತ್ತದೆ. ಸಮಾಜದ ಹಿತಸಾಧನೆ ಮತ್ತು ವೈಯಕ್ತಿಕ ಭಕ್ತಿಸಾಧನೆ ಇವೆರಡರಲ್ಲಿ ಬಸವ ಯಾವುದಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದ ಎಂದು ಪ್ರಶ್ನೆಯನ್ನು ಸರಳಗೊಳಿಸಲು ನನಗೆ ಮನಸ್ಸಿಲ್ಲ. ಯಾವನೇ ಒಬ್ಬ ವ್ಯಕ್ತಿ ಎಲ್ಲ ವಿವರಗಳನ್ನೂ ಯೋಚಿಸಿ ನಿರ್ಧರಿಸಿ ಬಳಿಕ ತನ್ನ ಬದುಕನ್ನು ರೂಪಿಸಿಕೊಳ್ಳುವುದಿಲ್ಲ. ಎಲ್ಲ ಅಂಶಗಳೂ ಎಲ್ಲ ಪ್ರಚೋದನೆಗಳೂ ಮಿಳಿತಗೊಂಡು ಅವನ ಬದುಕಿಗೆ ಒಂದು ಆಕಾರವನ್ನು ಕೊಟ್ಟಿರುತ್ತವೆ. ಅವನಾದ ಮೇಲೆ ಅವನ ಬದುಕಿನ ವಿವಿಧ ಘಟ್ಟಗಳನ್ನು ಪರಿಶೀಲಿಸಿ ಅವನ ಅಂತರಂಗದ ಮಿಡಿತ, ದಿಕ್ಕುಗಳನ್ನು ಊಹಿಸುವ ಕೆಲಸ ನಮ್ಮದಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಅವನ ವ್ಯಕ್ತಿತ್ವದ ಗಣನೀಯ ಭಾಗ-ಬಹುಮುಖ್ಯವಾದ ಭಾಗವೆಂದರೂ ಸರಿಯೇ, ಸಾಮಾಜಿಕವಾದುದು ಎಂದು ಹೇಳುವಲ್ಲಿ ನನಗೆ ತಪ್ಪೇನೂ ಕಾಣುವುದಿಲ್ಲ.

ಬಸವಣ್ಣನ ಬದುಕಿನ ಉದ್ದಕ್ಕೂ ಕಾಣಬರುವ ಮುಖ್ಯ ಲಕ್ಷಣಗಳು : ಅತೃಪ್ತಿ, ನಿರಾಕರಣೆ ಮತ್ತು ಅನ್ವೇಷಣೆ, ಅತೃಪ್ತಿ: ಕನಸುಗಾರನಾದ ಅವನಿಗೆ ತನ್ನ ಸುತ್ತ ಇರುವ ವಾಸ್ತವತೆಯ ಬಗ್ಗೆ ಅತೃಪ್ತಿ; ತನ್ನ ಜಾತಿಯ ಬಗ್ಗೆ ತನ್ನ ತಂದೆ ತಾಯಿ ಬಂಧುಗಳ ಬಗ್ಗೆ, ದೇವಸ್ಥಾನ ಸಂಸ್ಥೆಯ ಬಗ್ಗೆ, ರಾಜಕೀಯ ವ್ಯವಸ್ಥೆಯ ಬಗ್ಗೆ ಸಾಮಾಜಿಕ ಅಸಮಾನತೆಯ ಬಗ್ಗೆ ಕೊನೆಗೆ ತನ್ನ ಕೊರತೆಗಳ ಬಗ್ಗೆ ಅವನು ಸದಾ ಅತೃಪ್ತ, ಇಂತಹ ಅತೃಪ್ತಿ ಕಾಣುವುದು ಎಲ್ಲೋ ಕೆಲವರಲ್ಲಿ ಮಾತ್ರ, ಅವರಲ್ಲೂ ಬಹುಪಾಲು ಜನ ಬಹು ಬೇಗ, ಇರುವ ವಾಸ್ತವತೆಯನ್ನು ನಿರಾಕರಿಸಲಾಗದೆ, ಅತೃಪ್ತಿಯನ್ನೂ ಕೈಬಿಡಲಾಗದೆ ವಾಸ್ತವ ಮತ್ತು ಆದರ್ಶಗಳ ಗೊಂದಲಕ್ಕೆ ಸಿಕ್ಕು ಒದ್ದಾಡುತ್ತಾರೆ. ಆದರೆ ಆ ಅತೃಪ್ತ ಕೆಲವರಲ್ಲೂ ಒಂದಿಬ್ಬರು ಬಸವಣ್ಣನಂತೆ ವಾಸ್ತವತೆಯನ್ನು ನಿರಾಕರಿಸುವ ಧೈರ್ಯ ಮಾಡುತ್ತಾರೆ. ಅವರ ನಿರಾಕರಣೆ ವಾಸ್ತವತೆಯಿಂದ ದೂರ ಪಲಾಯನ ಮಾಡುವ ಪ್ರವೃತ್ತಿಯದಾಗಿರದೆ ವಾಸ್ತವತೆಯನ್ನು ಎದುರಿಸಿ ಅದನ್ನು ತಮ್ಮ ಕನಸಿಗೆ ಒಗ್ಗಿಸಿ ಕೊಳ್ಳುವ ಪ್ರಯತ್ನಕ್ಕೆ ಪ್ರೇರಣೆಯಾಗುತ್ತದೆ. ನಿರಾಕರಣೆ ಎಂಬುದು ಎಲ್ಲ ಸಾರಿಯೂ ಒಂದನ್ನು ಪೂರ್ತಿ ಬಿಟ್ಟು ಹೋಗುವುದೆಂದು ಆಗಬೇಕಾಗಿಲ್ಲ; ವಾಸ್ತವತೆಯ ಅಪಾಯಾಂಶಗಳನ್ನು ಅಥವಾ ಹಿತವಿರೋಧಿ ಲಕ್ಷಣಗಳನ್ನು ತೆಗೆದು ಹಾಕುವ ಸಂಕಲ್ಪದ ಪೂರ್ವಭಾವಿ ಸ್ಥಿತಿಯೂ ಆಗಬಹುದು. ನಿರಾಕರಣೆಯ ಜೊತೆ ಜೊತೆಗೇ, ನಿರಾಕರಿಸಿದ್ದರ ಸ್ಥಾನದಲ್ಲಿ ಪ್ರತಿಷ್ಠೆಗೊಳ್ಳಬೇಕಾದ ಮೌಲ್ಯದ ಹುಡುಕಾಟವೂ ಆರಂಭವಾಗುತ್ತದೆ. ಇದನ್ನೇ ಅನ್ವೇಷಣೆ ಎಂದು ಕರೆದಿರುವುದು. ಸಮಾಜಕ್ಕೆ ಇದು ಸರಿಯಲ್ಲವೆಂದು ಹೇಳಿದರೆ ಸಾಲದು.

ಯಾವುದು ಸರಿ ಎಂದೂ ಹೇಳಬೇಕಾಗುತ್ತದೆ. ಈ ಅತೃಪ್ತಿ, ನಿರಾಕರಣೆ ಮತ್ತು ಅನ್ವೇಷಣೆಗಳು ಬಸವಣ್ಣನಲ್ಲಿ ಕಂಡು ಬರುವ ರೀತಿಯನ್ನು ಗಮನಿಸೋಣ.

ಬಸವಣ್ಣ ತನ್ನ ಹದಿನಾರನೆಯ ವಯಸ್ಸಿನಲ್ಲಿ ಉಪನಯನವನ್ನು ನಿರಾಕರಿಸಿದ್ದು ಉಪೇಕ್ಷಿಸಬಹುದಾದ ಕ್ಷುದ್ರಘಟನೆಯಲ್ಲ, ಉತ್ತಮ ವರ್ಣದವನಾಗಿ ಅಗ್ರಹಾರದ ಮುಖ್ಯಸ್ಥನ ಮಗನಾಗಿ ಎಲ್ಲ ಬಗೆಯ ಸವಲತ್ತುಗಳನ್ನೂ ಅನಾಯಾಸವಾಗಿ ಪಡೆದಿದ್ದ ಬಸವನಿಗೆ ಉಪನಯನ ಸಂಸ್ಕಾರವನ್ನು ತಿರಸ್ಕರಿಸಲು ಅವನ ತೀವ್ರ ಮಾನಸಿಕ ಅತೃಪ್ತಿ ಕಾರಣ. ಬ್ರಾಹ್ಮಣ್ಯ ತನಗೆ ಮನುಷ್ಯತ್ವವನ್ನು ದೊರಕಿಸಲಾರದೆಂದು ಅವನಿಗೆ ಅನ್ನಿಸಿತು. ಶ್ರೇಷ್ಠ ವರ್ಣವೆಂಬ ಕಾರಣದಿಂದ ಅದು ಇತರ ವರ್ಣಗಳನ್ನು ಅದೇ ಹೀನ ಸ್ಥಿತಿಯಲ್ಲಿ ಮುಂದುವರಿಯಲು ಪ್ರಚೋದಿಸುತ್ತದೆ. ಅದು ಬೆಳೆಸಿಕೊಂಡಿರುವ ಕರ್ಮಾಚಾರಗಳು ಜಟಿಲತೆಯು ನಿರ್ಮಲ ಭಕ್ತಿಗೆ ಅಡ್ಡಿಯಾಗುತ್ತದೆ. ಬಸವ ಉಪನಯನವನ್ನು, ತನ್ಮೂಲಕ ಬ್ರಾಹ್ಮಣ್ಯವನ್ನು, ತನ್ಮೂಲಕ ಉತ್ತಮ ಜನ್ಮದಿಂದ ಸ್ವಾಭಾವಿಕವಾಗಿ ಲಭ್ಯವಾಗುವ ಎಲ್ಲ ಸವಲತ್ತುಗಳನ್ನು ನಿರಾಕರಿಸಿ ಹೊರ ಬಂದವನು. ಕೂಡಲಸಂಗಮದ ದೇವಾಲಯಕ್ಕೆ ಹೋದ. ಅಲ್ಲಿ ಅವನಿಗೆ ಆಶ್ರಯ ಏನೋ ಸಿಕ್ಕಿತು. ಅಲ್ಲಿಯ ಸ್ಥಾನಪತಿಗಳು ಅವನ ಭಕ್ತಿಯನ್ನೂ ಉಜ್ವಲ ಆದರ್ಶಾಭಿಮಾನವನ್ನೂ ಕಂಡು ಮನಸೋತು ಅಲ್ಲೇ ಇದ್ದು ಬಿಡುವಂತೆ ಕೇಳಿಕೊಂಡರು. ಬಸವಣ್ಣ ಕೇವಲ ಭಕ್ತನಾಗಿದ್ದರೆ, ಅವನ ಭಕ್ತಿ ಸಾಧನೆಗೆ ಕೂಡಲಸಂಗಮಕ್ಕಿಂತ ಒಳ್ಳೆಯ ಅವಕಾಶ ದೊರೆಯಲಾರದಿತ್ತು. ಶಿವನ ಸಾನ್ನಿಧ್ಯ. ನದಿಗಳ ಸಂಗಮಸ್ಥಾನ, ದಿನವೂ ಬರುವ ಭಕ್ತಮಾರ್ಗ. ದೇವಾಲಯಕ್ಕೆ ಒಳ್ಳೆಯ ಆದಾಯ, ಭಕ್ತನೆಂಬ ಕೀರ್ತಿ; ಮೈಗೆ ಸ್ವಲ್ಪವೂ ನೋವು ಕೊಡದೆ ಜನರಿಂದ ಮಹಾಶಿವಭಕ್ತನೆಂಬ ಪ್ರಶಂಸೆಯನ್ನು ಪಡೆಯುವ, ತನ್ನ ಎಲ್ಲ ಕಾಲವನ್ನೂ ಶಿವಪೂಜೆ, ಸಂಕೀರ್ತನ, ಧ್ಯಾನಗಳಲ್ಲಿ ಕಳೆಯುವ ಸದವಕಾಶ. ಬ್ರಾಹ್ಮಣನಾಗಿ ಅಗ್ರಹಾರವನ್ನು ನಿರಾಕರಿಸಿದ ಬಸವ ಮತ್ತೆ ಕೂಡಲಸಂಗಮದ ದೇವಾಲಯವನ್ನೂ ನಿರಾಕರಿಸಿದ. ತನ್ಮೂಲಕ ಒಟ್ಟಾರೆ ದೇವಸ್ಥಾನ ಸಂಸ್ಥೆಯನ್ನೇ ನಿರಾಕರಿಸಿದ. ಬ್ರಾಹ್ಮಣ್ಯ ಉತ್ತಮ ಅಧಮ ಜಾತಿಗಳ ಅಂತರವನ್ನು ಪೋಷಿಸಿದರೆ ದೇವಾಲಯ ಆ ಅಂತರದ ಜೊತೆ ಶ್ರೀಮಂತ, ದರಿದ್ರರ ಅಂತರವನ್ನೂ ಪೋಷಿಸುವ ಸಂಸ್ಥೆಯಾಗುತ್ತದೆ. ಬ್ರಾಹ್ಮಣ್ಯದಲ್ಲಿ ಕರ್ಮಗಳ ದೈವಕ್ಕೆ ಅಡ್ಡಿಯಾದರೆ, ಇಲ್ಲಿ ಅರ್ಚಕ ಅಡ್ಡಿಯಾಗಬಹುದು. ದೇವಾಲಯದೊಳಕ್ಕೆ ಪ್ರವೇಶಿಸುವ ಹಕ್ಕು ಕೆಲವರಿಗೆ ಮಾತ್ರ ಮೀಸಲು, ಎಲ್ಲರಿಗೂ ಮುಕ್ತ ಪ್ರವೇಶವಿಲ್ಲದ ದೇವಾಲಯ ಅಸ್ಪೃಶ್ಯರನ್ನು ಬಹಿಷ್ಕರಿಸಿದರೆ ಬಸವನು ದೇವಾಲಯವನ್ನೇ ಬಹಿಷ್ಕರಿಸಿದ.

ಕೂಡಲಸಂಗಮದಿಂದ ಬಿಜ್ಜಳನ ರಾಜಧಾನಿಗೆ ಹೋಗುವ ಸಂದರ್ಭದಲ್ಲಿ ಅವನಿಗೂ ಶಿವನಿಗೂ ಕನಸಿನಲ್ಲಿ ವಾಗ್ವಾದ ನಡೆದಂತೆ ಕವಿ ಹರಿಹರ ಚಿತ್ರಿಸುತ್ತಾನೆ. ಬಸವನಿಗೆ ಹೋಗಲು ಇಷ್ಟವಿಲ್ಲ; ಶಿವ ಹೋಗಲು ಒತ್ತಾಯಪಡಿಸಿದ. ಇದು ಬಸವಣ್ಣನ ಹೋಳಾದ ಮನಸ್ಸಿನ ಹೋರಾಟದ ಸಾಂಕೇತಿಕ ರೂಪವೆಂದು ಹೇಳಬೇಕಾಗಿಲ್ಲ. ಅವನ ಮನಸ್ಸಿನ ಒಂದು ಭಾಗವು, ಇಲ್ಲೇ ಎಲ್ಲ ಇದೆ, ಸುಖವಾಗಿ ಇದ್ದು ಭಕ್ತಿ ಸಾಧನೆ ಮಾಡು ಎಂದು ಹೇಳಿದರೆ, ಅದೇ ಅವನ ಮನಸ್ಸಿನ ಶಿವರೂಪ ಆ ಕ್ಷೇತ್ರವನ್ನೂ ನಿರಾಕರಿಸಲು ಹೇಳುತ್ತದೆ. ಭಕ್ತಿ ಪ್ರಪಂಚ ಬಹುಸಾರಿ ಸ್ವಾರ್ಥದ ಅಥವಾ ಸ್ವಂತ ಉದ್ಧಾರದ ಕ್ಷೇತ್ರವಾಗಿ ಬಿಡುತ್ತದೆಯಾದ ಕಾರಣ ಅದು ಬಸವನಿಗೆ

ಬೇಕಾಗಲಿಲ್ಲ. ಹೊರಗಿನ ಜಗತ್ತು ಬಸವನನ್ನು ಕೈಬೀಸಿ ಕರೆಯಿತು. ಸಮಾಜ ಹಿತ ಸ್ವಂತ ಹಿತಕ್ಕಿಂತ ದೊಡ್ಡದಾಗಿ ಕಾಣಿಸಿತು.

ಕೂಡಲ ಸಂಗಮದಿಂದ ಮಂಗಳವೇಡೆ ರಾಜಧಾನಿಗೆ ಭಂಡಾರಿಯಾಗಿ ಬಂದು ಸೇರಿಕೊಂಡ. ಹೇಳಿ ಕೇಳಿ ಅದು ರಾಜಕೀಯ ರಂಗ; ಅಧಿಕಾರ, ಐಶ್ವರ್ಯ, ರಾಜನ ಕೃಪೆ. ಕೆಳಗಿನ ಅಧಿಕಾರಿಗಳ ಓಲೈಕೆ ಎಲ್ಲವೂ ಬಸವನಿಗೆ ಯಥೇಷ್ಟವಾಗಿ ಪ್ರಾಪ್ತವಾಗಿದ್ದುವು. ಸಾಮಂತನಾಗಿದ್ದ ಬಿಜ್ಜಳ ತನ್ನ ರಾಜಧಾನಿಯನ್ನು ಮಂಗಳವೇಡೆಯಿಂದ ಕಲ್ಯಾಣಕ್ಕೆ ವರ್ಗಾಯಿಸಿ ಚಾಲುಕ್ಯ ಚಕ್ರವರ್ತಿಯೆಂದು ಘೋಷಿಸಿಕೊಂಡ. ಸಾಮಂತನ ಭಂಡಾರಿಯಾಗಿದ್ದ ಬಸವನು ಚಕ್ರವರ್ತಿಯ ಭಂಡಾರಿಯಾದ. ಹೆಚ್ಚಿನ ಅಧಿಕಾರ, ಹೆಚ್ಚಿನ ಐಶ್ವರ್ಯ, ಚಕ್ರವರ್ತಿಯ ಕೃಪೆ, ಕೆಳಗಿನ ಅಧಿಕಾರಿಗಳ ಓಲೈಕೆ, ಸಾಮಂತ ದೊರೆಗಳ ಕಪ್ಪಕಾಣಿಕೆ ವಸೂಲು ಮಾಡುವ ದರ್ಪ ಎಲ್ಲವೂ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪ್ರಾಪ್ತವಾದುವು. ಸದಾ ಎಚ್ಚರ ಸ್ಥಿತಿಯ ಬಸವನನ್ನು ಇವು ಯಾವುವೂ ಮರುಳುಗೊಳಿಸಲಿಲ್ಲ. ಸದಾ ಅತೃಪ್ತನಾಗಿದ್ದ ಬಸವ ಇಲ್ಲೂ ಅತೃಪ್ತನಾಗಿಯೇ ಉಳಿದ ಮತ್ತು ತನ್ನ ಜಾಯಮಾನದಂತೆ ಅವೆಲ್ಲವನ್ನೂ ನಿರಾಕರಿಸಿದ. ಆದರೆ, ಇಲ್ಲಿಯ ನಿರಾಕರಣೆ ಅಗ್ರಹಾರ, ದೇವಾಲಯಗಳನ್ನು ಬಿಟ್ಟು ಹೊರಬರದಂತಿರದೆ ಬೇರೆ ರೂಪವನ್ನು ಪಡೆದುಕೊಂಡಿತು. ಸಮಾಜದ ಒಳಿತಿಗಾಗಿ ದುಡಿಯುತ್ತಿದ್ದ ಅವನು ರಾಜಕೀಯ ರಂಗದಿಂದ ಭೌತಿಕವಾಗಿ ದೂರ ಹೋಗುವುದು ಮೂರ್ಖತನವೆಂದು ಭಾವಿಸಿದ. ಅಧಿಕಾರ, ಹಣ, ಸ್ಥಾನಮಾನಗಳು ತನಗೆ ತಂದುಕೊಟ್ಟ ಎಲ್ಲ ಸವಲತ್ತುಗಳನ್ನೂ ಸಮಾಜದ ಕಡೆ ತಿರುಗಿಸಿದ. ಇದು ಅವನ ವಚನಗಳಲ್ಲೇ ವ್ಯಕ್ತವಾಗಿದೆ. ಆದರೆ, ಅವನು ಎಂದೂ ಪ್ರಭುತ್ವದ ಹೆಜ್ಜೆಯ ಜೊತೆ ಹೆಜ್ಜೆ ಇಡಲಿಲ್ಲ. ಚಕ್ರವರ್ತಿ ಬಿಜ್ಜಳನಿಗೂ ಅವನಿಗೂ ಉದ್ದಕ್ಕೂ ಒಂದಲ್ಲ ಒಂದು ಬಗೆಯ ಘರ್ಷಣೆಗಳು ನಡೆದವೆಂದೂ ಹರಳಯ್ಯ ಮಧುವಯ್ಯ ಪ್ರಸಂಗದಲ್ಲಿ ಇದು ಉತ್ಕಟ ಸ್ಥಿತಿಗೆ ಹೋಗಿ ಮುಟ್ಟಿತೆಂದೂ ಕತೆಗಳಿವೆ. ಅಧಿಕಾರದಲ್ಲಿದ್ದೂ ಅದಕ್ಕೆ ಅಂಟಿಕೊಳ್ಳದೆ, ಆದರೆ ಅದನ್ನು ಕೈಬಿಡದೆ, ಆ ಅಧಿಕಾರವನ್ನು ನಿರಾಕರಿಸಿದ ರೀತಿ ಬಸವನಿಗೇ ವಿಶಿಷ್ಟವಾದುದು.

(ಬ್ರಾಹ್ಮಣ್ಯವನ್ನು ನಿರಾಕರಿಸಿದ ಅವನಿಗೆ ಎಲ್ಲ ಜಾತಿಗಳನ್ನೂ ಸಮಾನವಾಗಿ ಕಾಣುವ ದೃಷ್ಟಿಯನ್ನು ಬೆಳೆಸಿಕೊಳ್ಳುವುದು ಸಾಧ್ಯವಾಯಿತು. ದೇವಸ್ಥಾನದ ನಿರಾಕರಣೆ ದೈವದ ನಿರಾಕರಣೆ ಆಗಲಿಲ್ಲ, ದೈವನನ್ನು ಇನ್ನೂ ಹತ್ತಿರಕ್ಕೆ ಬರಮಾಡಿಕೊಳ್ಳುವ ಸಾಧನವಾಯಿತು. ದೇವಾಲಯದಲ್ಲಿ ಅರ್ಚಕನು ದೈವ ಮತ್ತುಭಕ್ತರ ಮಧ್ಯೆ ನಿಲ್ಲುತ್ತಾನೆ. ಮೈಮೇಲೆ ಇಷ್ಟಲಿಂಗವನ್ನು ಧರಿಸಿದಾತನಿಗೆ ದೈವದ ಜೊತೆ ಹೃದಯ ಸಂವಾದವನ್ನು ಬೆಳೆಸಲು ಮೂರನೆಯವನ ಮಾಧ್ಯಮ ಅನವಶ್ಯಕವಾಗುತ್ತದೆ. ಶಿವ ಮತ್ತು ಭಕ್ತರ ಮಿಲನ ಗಂಡು ಮತ್ತು ಹೆಣ್ಣಿನ ಮಿಲನವಿದ್ದಂತೆ. ಆ ಮಿಲನದಲ್ಲಿ ಮೂರನೆಯವರ ಪ್ರವೇಶ ಮೂಲೋದ್ದೇಶವನ್ನೇ ಹಾಳು ಮಾಡುವಂತಹುದು. ಈ ಮಾತು ತನ್ನ ಮಾತಲ್ಲ. ಬಸವಣ್ಣನೇ ಈ ಅರ್ಥದ ಮಾತು ಹೇಳುತ್ತಾನೆ. ಇಷ್ಟಲಿಂಗ ಧಾರಣೆಯಲ್ಲಿ ಭಕ್ತನಾದವನು ಶಿವನ ಸಾನ್ನಿಧ್ಯವನ್ನು ಸದಾ ಅನುಭವಿಸಬಹುದು; ಏಕಾಂತದಲ್ಲಿ ತನ್ನ ಇಷ್ಟಲಿಂಗವನ್ನು ಪೂಜಿಸುತ್ತ ಅದರಲ್ಲಿ ತಾದಾತ್ಮ್ಯವನ್ನು ಪಡೆಯಬಹುದು. ಈ ಪೂಜೆಯಲ್ಲಿ ವೈಭವ, ಆಡಂಬರವಿಲ್ಲ; ಪ್ರವೇಶದ ಹಕ್ಕು ನಿರ್ಬಂಧ ಇಲ್ಲ. ಇಷ್ಟಲಿಂಗದ ಪರಿಕಲ್ಪನೆ ಶ್ರೀಮಂತ–ಬಡವ, ಉತ್ತಮ–ಕನಿಷ್ಠ

ಎಲ್ಲರನ್ನೂ ಒಂದು ಸಮದಲ್ಲಿ ನಿಲಿಸುವ ಬಗೆ ಹೀಗೆ.) ಇಂತಹ, ಭಕ್ತಿಯ ವೈಯಕ್ತಿಕ ಸ್ಥಿತಿಯ ಮುಕ್ತ ವಾತಾವರಣದಲ್ಲಿ ಬಸವನಂತೆ ಹಲವಾರು ಜನ ತಮ್ಮ ಸ್ವಕೀಯ ಅನುಭವಗಳನ್ನು ಬಿಡಿ ಬಿಡಿ ವಚನಗಳಲ್ಲಿ ತಮಗೆ ತೋರಿದ್ದನ್ನು ತಮಗೆ ತೋರಿದ ರೀತಿ ಭಾಷೆಗಳಲ್ಲಿ ಹೇಳಿಕೊಳ್ಳಲು ಸಾಧ್ಯವಾಯಿತು. ಹನ್ನೆರಡನೆಯ ಶತಮಾನದಲ್ಲಿ ನಿರ್ಮಾಣವಾದ ಸಾಮಾಜಿಕ ವಾತಾವರಣಕ್ಕೂ ವಚನಗಳ ವಸ್ತು ಬಂಧಗಳಿಗೂ ತಾರ್ಕಿಕ ಸಂಬಂಧವಿದೆ. ವಚನಗಳು ವಸ್ತುವಿಗಾಗಿ ಹಿಂದಿನ ಕಾಲದತ್ತ ನೋಡುವುದಿಲ್ಲ; ತಮ್ಮ ಕಾಲದತ್ತ ನೋಡುತ್ತದೆ ಅಥವಾ ವಚನಕಾರನ ಅನುಭವದತ್ತ ಇಣುಕುತ್ತವೆ. ಕತೆ ಹೇಳಿ ರಂಜಿಸುವುದು ಅವುಗಳ ಉದ್ದೇಶವಲ್ಲ; ಅನುಭವಗಳನ್ನು ಹೇಳಿ ಜನರನ್ನು ಉದ್ದೀಪನಗೊಳಿಸುವುದು. ವಿಚಾರಗಳನ್ನು ಹೇಳಿ ಜನರನ್ನು ಎಚ್ಚರಗೊಳಿಸುವುದು ಅವುಗಳ ಗುರಿ. ಅನೇಕ ವಚನಕಾರರಲ್ಲಿ ಕಾಣುವ ಚಿಂತನೆಯ ಹೊಸತನ, ವಚನಗಳ ಮುಕ್ತ ಛಂದ ಇವು ಆಧುನಿಕರಿಗೂ ಹೊಸತು, ಮತ್ತು ಅಧ್ಯಯನ ಯೋಗ್ಯ ಎನ್ನಿಸುವಷ್ಟು ಉಜ್ವಲವಾಗಿದೆ.

ಬಸವನನ್ನು ಕುರಿತು ಮಾತನಾಡುವಾಗ ನಾನು ಉಳಿದ ವಚನಕಾರರ ಮಾತನ್ನೂ ಹೇಳುತ್ತಿರುವುದಕ್ಕೆ ಉದ್ದೇಶವಿದೆ. ಅಂದಿನ ಸಮಾಜೋ–ಧಾರ್ಮಿಕ ಚಳವಳಿಯ ಎಲ್ಲ ಯಶಸ್ಸಿಗೆ ಬಸವಣ್ಣನೊಬ್ಬನೇ ಕಾರಣವೆನ್ನುಷ್ಟರಮಟ್ಟಿಗೆ ಕೆಲವರು ಘೋಷಿಸುವುದನ್ನು ನಾನು ವಿರೋಧಿಸುತ್ತ ಬಂದಿದ್ದೇನೆ. ಅಂದಿನ ಚಳವಳಿಯ ನಾಯಕ, ಕೇಂದ್ರ ಬಿಂದು ಬಸವ ಎಂಬಲ್ಲಿ ಅನುಮಾನ ಇಲ್ಲ. ಅಲ್ಲಮನಂತಹ ಅನುಭಾವಿ, ಸಿದ್ಧರಾಮನಂತಹ ಸಮಾಜ ಕಾರ್ಯಕರ್ತ, ಚನ್ನ ಬಸವನಂತಹ ಕುಶಾಗ್ರಮತಿ, ಚೌಡಯ್ಯನಂತಹ ಹರಿತ ನಾಲಗೆ ವ್ಯಕ್ತಿ, ಮಹಾದೇವಿಯಂತಹ ದಿಟ್ಟ ವಿರಾಗಿ, ಮುಕ್ತಾಯಕ್ಕನಂತಹ ಬುದ್ಧಿಜೀವಿ–ಇವರು ಯಾರಿಗೂ ಬಸವನಿಗೆ ನಾಯಕನಾಗಲು ಇದ್ದಂತಹ ಅನುಕೂಲ ಸ್ಥಿತಿಯಿರಲಿಲ್ಲ. ಆಯಾ ನಿಟ್ಟಿನಲ್ಲಿ ಅವರೆಲ್ಲ ಒಂದು ರೀತಿ ಬಸವನಿಗಿಂತ ಮಿಗಿಲು. ಆದರೆ ಹುಟ್ಟಿದ ಬ್ರಾಹ್ಮಣ ಜಾತಿ, ದೊರೆತ ಅಧಿಕಾರದ ಸ್ಥಾನ ಬಲ, ಇವುಗಳ ಜೊತೆ ಅಕೃತಕ ವಿನಯ, ಉದಾತ್ತ ಉದ್ದೇಶ, ಸಂಘಟನಾ ಚಾತುರ್ಯ ಇವುಗಳಿಂದ ಕೂಡಿದ ಬಸವನಿಗೆ ತನ್ನ ಸುತ್ತಮುತ್ತ ತನ್ನಂತೆ ಯೋಚಿಸುವ ಜನರನ್ನು ಒಂದುಗೂಡಿಸುವುದು ಸಾಧ್ಯವಾಯಿತು. ಅಂದಿನ ಚಳವಳಿಯ ಯಶಸ್ಸಿಗೆ ಬಸವನಂತೆ ಉಳಿದವರೂ ತಮ್ಮ ತಮ್ಮ ರೀತಿಯಲ್ಲಿ ಪಾತ್ರರು ಎಂಬುದನ್ನು ಮರೆಯಬಾರದು. ಬಸವ ಅಂದಿನ ಸಾಮಾಜಿಕ ಎಚ್ಚರ, ಅದರ ಫಲವಾದ ಚಳವಳಿಯ ಉತ್ಕೃಷ್ಟ ಸಂಕೇತ ಎಂದು ಭಾವಿಸುವುದು ಉಚಿತವಾದುದು. "ಗಾಂಧೀಜಿ ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟರು" ಎಂಬ ಮಾತನ್ನು ನಾವು ವೈಚರಿಕವಾಗಿ ಎಷ್ಟು ಎಚ್ಚರಿಕೆಯಿಂದ ಯಾವ ಅರ್ಥದಲ್ಲಿ ಸ್ವೀಕರಿಸುತ್ತೇವೆ ಹಾಗೆ "ಬಸವಣ್ಣನಿಂದ ಆಂದೋಲನ ನಡೆಯಿತು" ಎಂಬ ಮಾತನ್ನೂ ಹಾಗೆಯೇ ಸ್ವೀಕರಿಸಬೇಕು.

ಬಸವ ಅನ್ವೇಷಿಸಿ ಕಂಡುಕೊಂಡ ಪ್ರಪಂಚ ಸಾಮಾಜಿಕ ಸಮಾನತೆಯ ಭಕ್ತಿಯ ಪ್ರಪಂಚ. ಅಲ್ಲಿ ಸ್ವಾರ್ಥ. ವಂಚನೆಗಳಿಗೆ ಸ್ಥಾನವಿಲ್ಲ; ಎಲ್ಲರೂ ದುಡಿಯುತ್ತ ತಮ್ಮ ದುಡಿಮೆಯ ಫಲವನ್ನು ಹಂಚಿಕೊಂಡು ಬದುಕುತ್ತಾರೆ. ಅವನ ಕನಸಿನ ಆದರ್ಶ ಅವನ ಕಾಲದಲ್ಲೇ ನಿಜವಾಯಿತೇ ಎಂಬ ಪ್ರಶ್ನೆಗೆ ಉತ್ತರ ಕೊಡಬೇಕಿಲ್ಲ. ಆದರೆ ಅದರ ಒಂದು ಭಾಗವಾದರೂ ನಿಜವಾಯಿತೇ ಎಂಬ ಪ್ರಶ್ನೆಗೆ 'ಹೌದು' ಎಂದೇ ಸ್ಪಷ್ಟ ಉತ್ತರ. ಅವನ ಕನಸು ಮುಂದೆ ಏನಾಯಿತು? ಅವನ

ಸಾಮಾಜೋಧಾರ್ಮಿಕ ಚಳವಳಿ ಮುಂದೆ ಕೇವಲ ಮತವಾಯಿತೇ? ಅಥವಾ ಏನಾದರೂ ಸಾಮಾಜಿಕ ಚಳವಳಿಯ ಲಕ್ಷಣಗಳನ್ನು ಸ್ವಲ್ಪವಾದರೂ ಉಳಿಸಿಕೊಂಡಿತೇ? ಬಸವ ಜಯಂತಿಯಂದು, ಬಸವನನ್ನು ಉದಾತ್ತೀಕರಿಸಿ, ದೈವವೆಂದು ಪ್ರವಾದಿ ಎಂದು ಪ್ರಶಂಸಿಸುವ ಜನ ಆ ಬಗ್ಗೆ ಚಿಂತಿಸುವ ಅಗತ್ಯವಿದೆ. ಏಕೆ ಹೀಗಾಯಿತು ಎಂಬ ವಿಷಾದ ಎಲ್ಲ ಚಳವಳಿಗಳೂ ಹೀಗಾಗಬಹುದು ಎಂಬ ಸಮಾಧಾನದಿಂದ ಕಡಿಮೆಯಾಗಬೇಕಾಗಿಲ್ಲ.

ಆದರೆ, ಇಂದಿನ ಬಹುಸಂಖ್ಯೆಯ ಲಿಂಗಾಯತ ಬುದ್ಧಿಜೀವಿಗಳ ಒಂದು ಬಯಕೆಯನ್ನು ವ್ಯಕ್ತಪಡಿಸುವುದಕ್ಕೆ ಈ ಲೇಖನಕ್ಕಿಂತ ಒಳ್ಳೆ ಅವಕಾಶ ಬೇರೊಂದಿರಲಾರದು. ಬಸವ ಇತರ ಕೆಳವರ್ಗದವರ ಮನೆಗಳಿಗೆ ಮಾತ್ರವಲ್ಲ. ಅಸ್ಪೃಶ್ಯರ ಮನೆಗಳಿಗೂ ಹೊಗುತ್ತಿದ್ದನೆಂಬುದಕ್ಕೆ ಪುರಾವೆಗಳಿವೆ. ಆ ಮಹಾತ್ಮನಿಗೆ ಮನುಷ್ಯ ಮನುಷ್ಯನಲ್ಲಿ ಭೇದ ಇರಲಿಲ್ಲ; ಅವನ ಸಮಕಾಲೀನ ಅನುಯಾಯಿಗಳೂ ಅವನಂತೆ ಆ ಭೇದ ಭಾವದಿಂದ ವಿಮುಕ್ತರಾಗಿದ್ದಿರಬೇಕು. ಅಸ್ಪೃಶ್ಯತೆಯ ವಿರುದ್ಧ ಭಾರತದಲ್ಲಿಯೇ ಮೊತ್ತ ಮೊದಲ ದನಿ ಎತ್ತಿದ ಬಸವ ಪರಂಪರೆಯಲ್ಲಿಯೇ ಮುಂದೆ ಅಸ್ಪೃಶ್ಯತೆಯ ಭಾವನೆಗೆ ಮಾನ್ಯತೆ ಬಂದುದು ನಾಚಿಕೆಗೇಡಿನ ವಿಷಯ. ಇಂದಿನ ವೀರಶೈವ ಗುರು ವರ್ಗವು ಸಮಾಜದ ಪ್ರತಿರೋಧವನ್ನೂ ಲೆಕ್ಕಿಸದೆ ತಮ್ಮ ಮಠಗಳನ್ನೂ ಪೂಜಾಮಂದಿರಗಳನ್ನೂ ಎಲ್ಲ ಬಣ್ಣ, ಜಾತಿಗಳವರಿಗೆ ಮುಕ್ತವಾಗಿ ತೆರೆದಿಡುವಂತಹ, ಯಾರು ಕರೆದರೂ ಅಲ್ಲಿಗೆ ಹೋಗುವಂತಹ ದಿಟ್ಟ ನಿರ್ಧಾರವನ್ನು ಕೈಗೊಂಡೀತೇ? 'ಅಸಾಧ್ಯ' ಎಂದು ಯಾರಾದರೂ ಹೇಳಿದರೆ, ಅಸಾಧ್ಯವಾದುದನ್ನು ಸಾಧಿಸಿ ತೋರಿದ ಬಸವನ ಅನುಯಾಯಿಗಳೆಂದು ಸಾರ್ಥಕವಾಗಿ ತೋರಿಸಿಕೊಡುವಲ್ಲಿ ವೀರಶೈವ ಗುರುವರ್ಗ ಹಿಂದೆ ಬೀಳಲಾರದು.

ಅವರು ಮನಸ್ಸು ಮಾಡಲಿ; ಜನ ಗೋಣಗುತ್ತ ಅವರನ್ನು ಅನುಸರಿಸುತ್ತಾರೆ.

❑

ಬಸವಣ್ಣನ ದೃಷ್ಟಿಯಲ್ಲಿ ದಲಿತರು

●

ಡಾ. ಕೆ.ಆರ್. ದುರ್ಗಾದಾಸ್

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿರುವ ಕಾಲಘಟ್ಟವೆಂದರೆ ಹನ್ನೆರಡನೇ ಶತಮಾನವೇ. ಸಾಹಿತ್ಯದ ರಚನೆಯೆಂಬುದು ಮೇಲ್ವರ್ಗದ ಜನರಿಗೆ ಮಾತ್ರ ಮೀಸಲಾಗಿದ್ದ ಕಾಲದಲ್ಲಿ, ಸಮಾಜದ ಎಲ್ಲ ಸ್ತರಗಳ ಜನರು ವಚನಗಳನ್ನು ಬರೆದದ್ದು ಆಶ್ಚರ್ಯವೆನಿಸುತ್ತದೆ. ಆಸ್ಥಾನ ಕವಿಗಳು ರಚಿಸುತ್ತಿದ್ದ ಪಾಂಡಿತ್ಯ ಪೂರ್ಣ ಸಾಹಿತ್ಯಕ್ಕೆ ಎದುರಾಗಿ, ವಚನಕಾರರು ಸರಳ ಭಾಷೆಯಲ್ಲಿ ತಮ್ಮ ಅನುಭವಗಳನ್ನು ದಾಖಲಿಸಿದ್ದು ಮಹತ್ವದ ಸಂಗತಿಯಾಗಿದೆ. ಈ ವಚನ ಸಾಹಿತ್ಯದಲ್ಲಿ ವ್ಯಕ್ತಿ ಸಾಧನೆಗಳಿಗಿಂತ ಸಾಮೂಹಿಕ ಹಿತ ಸಾಧನೆಯ ಉದ್ದೇಶಗಳು ಮುಖ್ಯವಾಗಿದ್ದವು. ಇದರಲ್ಲಿ ಮಾದಾರ ಚೆನ್ನಯ್ಯ, ಜೇಡರ ದಾಸಿಮಯ್ಯರಂತಹ ಆದ್ಯವಚನಕಾರರಿಂದ ಹಿಡಿದು ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯರಂತಹ ನೂರಾರು ವಚನಕಾರರು ತಮ್ಮ ಅನುಭವಗಳನ್ನು ವಿಶಿಷ್ಟ ರೀತಿಯಲ್ಲಿ ದಾಖಲುಗೊಳಿಸಿದ್ದಾರೆ. ಆದಾಗ್ಯೂ ವಚನಸಾಹಿತ್ಯ ಕುರಿತ ಚರ್ಚೆಯಲ್ಲಿ ಬಸವಣ್ಣನಿಗೆ ಹೆಚ್ಚಿನ ಪ್ರಾಧಾನ್ಯತೆ ದೊರಕಿದೆ.

ಬಸವಣ್ಣನಿಗೆ ಆದ್ಯತೆ ದೊರಕಲು ಕೆಲವು ಕಾರಣಗಳಿವೆ. ಈ ಕುರಿತು ಬಸವರಾಜ ಕಲ್ಗುಡಿಯವರ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸಬಹುದು. 'ಹನ್ನೆರಡನೇ ಶತಮಾನದ ವಚನಕಾರರ ಚಳವಳಿಯ ಬಗ್ಗೆ ಪ್ರಸ್ತಾಪ ಮಾಡುವ, ವಿವರಿಸಲು ಪ್ರಯತ್ನ ಪಡುವ ಎಲ್ಲ ಬರವಣಿಗೆಗಳು ಮತ್ತು ಬಸವಣ್ಣನನ್ನು ನಾಯಕನನ್ನಾಗಿ ಮಾಡಿಕೊಂಡ ಕಾವ್ಯಪುರಾಣಗಳೂ, ಅವನನ್ನು ವಚನ ಚಳವಳಿಯ ವಕ್ತಾರನೆಂದು ವಿವರಿಸಿರುವುದು ಕೇವಲ ಆ ವ್ಯಕ್ತಿಯನ್ನು ಮೇಲೇರಿಸಬೇಕೆಂಬ ಆಶಯಗಳನ್ನು ಮಾತ್ರ ಒಳಗೊಂಡಿದೆ ಎಂದು ಭಾವಿಸಬೇಕಾಗಿಲ್ಲ. ಅನೇಕ ಕಡೆಗಳಲ್ಲಿ ಇವು ಬಸವಣ್ಣನ ವ್ಯಕ್ತಿತ್ವವನ್ನು ವೈಭವೀಕರಿಸುತ್ತವೆ ಎನ್ನುವ ಮಾತನ್ನೇನೂ ನಿರಾಕರಿಸಲಾಗುವುದಿಲ್ಲವಾದರೂ ಸಮಾಜದ ಹೊಸ ಸ್ವರೂಪಗಳಿಗೆ ಅತ್ಯಂತ ಪ್ರಮುಖ ಆಲೋಚನಾ ಸ್ವರೂಪದ ಹಾಗೂ ಕ್ರಿಯಾತ್ಮಕ ನೆಲೆಯ ಧಾತುಗಳನ್ನು ಇವನು ಒದಗಿಸಿದ ಎನ್ನುವ ಮಾತುಗಳನ್ನು ಒಪ್ಪಬೇಕಾಗುತ್ತದೆ.೧

ಬಸವಣ್ಣನವರ ಚಿಂತನೆಗಳ ಹರಹು ಕೂಡಾ ತುಂಬಾ ವಿಸ್ತಾರವಾದುದು. ಅಂತರಂಗದ

ಅಭಿವ್ಯಕ್ತಿಯಿಂದ ಹಿಡಿದು, ಸಾಮಾಜಿಕ ವಲಯದ ಎಲ್ಲ ಮಗ್ಗಲುಗಳನ್ನೂ ಆತ ಲಕ್ಷಿಸಿದ್ದಾನೆ. ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಮಸ್ಯೆಗಳ ಕುರಿತು ಆತ ಚಿಂತಿಸಿರುವ ಪರಿ ವಿಶಿಷ್ಟವಾದುದು.

ಪ್ರಸ್ತುತದಲ್ಲಿ ದಲಿತರ ಬಗೆಗೆ ಆತ ಮಾಡಿರುವ ಚಿಂತನೆಗಳನ್ನು ಇಲ್ಲಿ ಪರಿಶೀಲನೆಗೆ ಎತ್ತಿಕೊಳ್ಳಲಾಗಿದೆ.

ದಲಿತ ಸಮಸ್ಯೆ ತುಂಬಾ ಜಟಿಲವಾದುದು. ಏಕೆಂದರೆ ಅದಕ್ಕೆ ಹಲವಾರು ಮುಖಗಳಿವೆ. ಹಿಂದಿನಿಂದಲೂ ಈ ಬಗೆಗೆ ಸಾಕಷ್ಟು ಚಿಂತನ–ಮಂಥನಗಳು ನಡೆದಿವೆ. ಆದರೂ ಈ ಸಮಸ್ಯೆ ಪರಿಹಾರ ಕಾಣದೇ ದಿನದಿಂದ ದಿನಕ್ಕೆ ಕಗ್ಗಂಟಾಗುತ್ತಲೇ ನಡೆದಿದೆ. ಬಸವಣ್ಣ ಆ ಕಾಲದಲ್ಲಿ ದಲಿತರನ್ನು ಕುರಿತು ವಿಚಾರ ಮಾಡಿದುದು ನಿಜಕ್ಕೂ ಮಹತ್ವದ ವಿಚಾರವೇ. ದಲಿತರನ್ನು ಬೆನ್ನಿಗೆ ಹಾಕಿಕೊಳ್ಳುವುದೆಂದರೆ ಸಮಾಜದಲ್ಲಿ ಪಟ್ಟಭದ್ರರನ್ನು ಎದುರು ಹಾಕಿಕೊಂಡಂತೆಯೇ. ಹೀಗಾಗಿ ದಲಿತರನ್ನು ಕುರಿತು ಚಿಂತನೆ ಮಾಡುವುದು ಮತ್ತು ಅವರ ಸುಧಾರಣೆಗೆ ಪ್ರಯತ್ನಿಸುವುದು ಈ ಎರಡೂ ತೊಂದರೆದಾಯಕ ಕಾರ್ಯಗಳೇ.

ಬ್ರಾಹ್ಮಣನಾಗಿ ಹುಟ್ಟಿದ ಬಸವಣ್ಣನಿಗೆ ಬ್ರಾಹ್ಮಣತ್ವದ ಆಸರೆಯಲ್ಲಿರುವುದು ಆತನಿಗೆ ಇಷ್ಟವಾಗಲಿಲ್ಲ. ಬಾಲ್ಯದಲ್ಲಿ ವೈಯಕ್ತಿಕ ಕಷ್ಟಗಳನ್ನೆದುರಿಸಿ, ಹುಟ್ಟೂರನ್ನೇ ಬಿಟ್ಟು ಕಲ್ಯಾಣಕ್ಕೆ ಬಂದ ಆತನಿಗೆ, ಬದುಕಿನ ಕಷ್ಟಕೋಟಲೆಗಳನ್ನು ಅರಿಯಲು ಹೆಚ್ಚು ಕಾಲ ಹಿಡಿಯಲಿಲ್ಲ. ಬಿಜ್ಜಳನಲ್ಲಿ ಆತನಿಗೆ ನೌಕರಿ ದೊರೆತರೂ, ನಿರುಮ್ಮಳವಾಗಿರಲಿಲ್ಲ. ಬಹುಶಃ ಆತನು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿಯೇ ಆ ಪ್ರದೇಶದಲ್ಲಿ ತುಳಿತಕ್ಕೆ ಒಳಗಾದ ಜನ ತಮ್ಮ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದುದು ಆತನ ಗಮನಕ್ಕೆ ಬಂದು, ಅತ್ತ ಕಡೆ ದೃಷ್ಟಿ ಹರಿಸಲು ಸಾಧ್ಯವಾಯಿತು. ಆತನ ವಚನಗಳಲ್ಲಿ ಒಂದು ಕಡೆ ಸಾಮಾಜಿಕ ವ್ಯವಸ್ಥೆಯ ವಿರೋಧವಿದ್ದರೆ, ಮತ್ತೊಂದೆಡೆ ಅಂತಹ ವ್ಯವಸ್ಥೆಯ ದಳ್ಳುರಿಗೆ ಸಿಕ್ಕು ಕಂಗಾಲಾದ ಜನಗಳ ಬಗೆಗೆ ಮಾನವಾನುಕಂಪದ ಮಾತುಗಳಿವೆ. ಜಾತಿ ವ್ಯವಸ್ಥೆಯನ್ನು ಹುಟ್ಟುಹಾಕಿ, ತಮಗೆ ಉನ್ನತ ಸ್ಥಾನವನ್ನು ದೊರಕಿಸಿಕೊಂಡ ಬ್ರಾಹ್ಮಣರು ಸಮಾಜದಲ್ಲಿ ಅಸಮಾನತೆಯ ಸೃಷ್ಟಿಗೆ ಮೂಲ ಕಾರಣರಾಗಿದ್ದರು. ವರ್ಣವ್ಯವಸ್ಥೆಯ ಆಧಾರದ ಮೇಲೆ, ಇತರ ವರ್ಣಗಳ ಜನರಿಗೆ ಹಂಚಿಕೆಯಾದ ಹಕ್ಕು, ಅಧಿಕಾರಗಳು ಮತ್ತು ಶೂದ್ರರಿಗೆ ನಿಗದಿಯಾದ ಬಿಟ್ಟಿ ಕೆಲಸ – ಇವುಗಳ ಉದ್ದೇಶವೇ ಅಸಮಾನತೆಯ ಪ್ರತಿಪಾದನೆಯಾಗಿತ್ತು. ಈ ಕಾರಣಕ್ಕೆ ಬಸವಣ್ಣ ತಾನು ಬ್ರಾಹ್ಮಣನೆಂದು ಗುರುತಿಸಿಕೊಳ್ಳುವುದಕ್ಕೇ ಮುಜುಗರಪಟ್ಟಿದ್ದಾನೆ. 'ಆನು ಹಾರುವನೆಂದೊಡೆ ಕೂಡಲ ಸಂಗಮ ನಗುವನಯ್ಯಾ' ಎಂಬ ಮಾತನ್ನು ಗಮನಿಸಬಹುದು. ಅಂದರೆ ಜಾತಿ ಮೇಲರಿಮೆಯನ್ನು ಒಪ್ಪದೇ, ತನ್ನನ್ನೂ ಅಪವರ್ಗೀಕರಣಗೊಳಿಸಿಕೊಂಡು ಸಮಾನತೆಗಾಗಿ ಹಂಬಲಿಸಿದ್ದು, ನಿಜಕ್ಕೂ ಅನುಸರಣೀಯ ವಿಚಾರವಾಗಿದೆ. ಅಷ್ಟೇ ಅಲ್ಲದೆ ಜಾತಿವ್ಯವಸ್ಥೆಯಲ್ಲಿ ತಾವು ಎಲ್ಲರಿಗಿಂತ ಶ್ರೇಷ್ಠರೆಂದು ಬೀಗುತ್ತಿದ್ದ ಬ್ರಾಹ್ಮಣರು 'ಹೇಳುವುದೊಂದು ಮಾಡುವುದು ಮತ್ತೊಂದು' ಎಂಬಂತೆ ಬದುಕುತ್ತಿದ್ದ ಬಗೆಗೆ ಪ್ರತಿಕ್ರಿಯಿಸಿದ್ದಾನೆ. ಆತನ ವಚನ ಹೀಗಿದೆ:

ಏನಯ್ಯಾ ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ;
....
....

ಜಾತಿಸಮಸ್ಯೆಯ ನಿವಾರಣೆಗೆ ಬಸವಣ್ಣ ವ್ಯಕ್ತಮಾಡಿದ ಈ 'ಬ್ರಾಹ್ಮಣ್ಯದ ನಿರಾಕರಣೆ' ತುಂಬಾ ಪ್ರಸ್ತುತವಾದ ವಿಚಾರವೆನ್ನಬಹುದು. ಬ್ರಾಹ್ಮಣರು ತಮ್ಮ ಮೇಲ್ಮೆಯನ್ನು ಸಾಧಿಸಲು ಹೂಡಿದ ತಂತ್ರಗಳು ಹಲವಾರು. ಜಾತಿವ್ಯವಸ್ಥೆಗೆ ವರ್ಣವ್ಯವಸ್ಥೆ ಮೂಲಾಧಾರವಾಗಿದೆ ತಾನೆ? ಈ ವರ್ಣಗಳು ಹೇಗೆ ಹುಟ್ಟಿದವೆಂಬುದಕ್ಕೆ ವೇದಗಳು ಕೊಡುವ ವಿವರಣೆಯಂತೂ ಅಸಮಂಜಸವಾದುದು. ಬ್ರಾಹ್ಮಣರು ತಲೆಯಿಂದ, ಕ್ಷತ್ರಿಯರು ತೋಳಿನಿಂದ, ವೈಶ್ಯರು ತೊಡೆಗಳಿಂದ ಮತ್ತು ಶೂದ್ರರು ಪಾದದಿಂದ ಹುಟ್ಟಿದರೆಂಬ ಮಾತನ್ನು ಬಸವಣ್ಣ ಪರೋಕ್ಷವಾಗಿ ಅಲ್ಲಗಳೆಯುತ್ತಾನೆ. ಆ ವಚನ ಹೀಗಿದೆ:

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ,
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?

....

ಈ ವಚನದ ಮೊದಲಿನ ಎರಡು ಸಾಲುಗಳು ಜಾತಿಗೂ ವೃತ್ತಿಗೂ ಸಂಬಂಧವಿರಬಾರದೆಂದು ಹೇಳಿದರೂ, ಮುಂದೆ ವೃತ್ತಿಗಳೇ ಜಾತಿಗಳಾಗಿ ಪರಿವರ್ತಿತವಾದ ಸಂಗತಿಯನ್ನು ಕಾಣಿಸುತ್ತದೆ. ಆದರೆ ಇಲ್ಲಿ ಮುಖ್ಯವಾದ ಮಾತೆಂದರೆ 'ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?' ಎಂದಿರುವುದು. ಎಲ್ಲರೂ ಹುಟ್ಟುವ ಜಾಗ ಒಂದೇ, ಅದರಲ್ಲಿ ಮೇಲುಕೀಳುಗಳನ್ನೆಣಿಸಬಾರದು ಎಂಬುದು ಬಸವಣ್ಣನ ಇಂಗಿತವಾಗಿದೆ.

ಬಸವಣ್ಣನ ಮತ್ತೊಂದು ವಚನ ವೃತ್ತಿಗೂ, ಜಾತಿಗೂ ಸಂಬಂಧ ಕಲ್ಪಿಸುತ್ತದೆ. ಕೆಳಗಿನ ವಚನವನ್ನು ನೋಡಿ

ಕೊಲುವವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ
ಕುಲವೇನೋ ಅವದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು.

ಹುಟ್ಟಿನ ಆಧಾರದ ಮೇಲೆ ಜಾತಿ ನಿರ್ಧಾರಿತವಾಗುತ್ತಿದ್ದುದಕ್ಕೆ, ವಿರುದ್ಧವಾಗಿ ಹೊಸ ವ್ಯಾಖ್ಯಾನವೊಂದನ್ನು ಬಸವಣ್ಣ ಕೊಡುತ್ತಿದ್ದಾನೆ. ಪ್ರಾಣಿ ಹತ್ಯೆ ಮತ್ತು ಪ್ರಾಣಿ ಆಹಾರ ಈ ಎರಡನ್ನು ಕೀಳೆಂಬ ಅರ್ಥದಲ್ಲಿ ಪರಿಗಣಿಸಿ ಆ ಕೆಲಸ ಮಾಡುವವರನ್ನು ಕೀಳುಜಾತಿಯವರೆಂದು ಗುರುತಿಸಲಾಗಿದೆ. ಮಾನವ ವಿಕಾಸದ ಆರಂಭ ಘಟ್ಟದಿಂದ ಹಿಡಿದು, ಇಂದಿನವರೆಗೂ ಪ್ರಾಣಿ ಆಹಾರವೆಂಬುದು 'ಹಿಂಸೆ', 'ಅಹಿಂಸೆ'ಗಳ ತರ್ಕಕ್ಕೆ ಸಿಗದೇ ಮಾನವ ಸಮುದಾಯಗಳಲ್ಲಿ ಉಳಿದುಕೊಂಡು ಬಂದಿದೆ. ವೈದಿಕ ಧರ್ಮವು ಈ ಹಿಂದೆ ಯಜ್ಞ, ಯಾಗಾದಿ ಕರ್ಮಗಳಲ್ಲಿ ಪ್ರಾಣಿ ಬಲಿಯನ್ನು ವಿದ್ಯುಕ್ತವಾಗಿ ನಡೆಸಿ, ಪ್ರಾಣಿ ಆಹಾರವನ್ನು ಕಡ್ಡಾಯಗೊಳಿಸಿತ್ತು. ಜೈನ ಮತ್ತು ಬೌದ್ಧಧರ್ಮಗಳು, ಯಜ್ಞ ಯಾಗಾದಿಗಳಲ್ಲಿ ನಡೆಯುತ್ತಿದ್ದ, ಯಥೇಚ್ಛ ಪ್ರಾಣಿ ಹಿಂಸೆಯ ವಿರುದ್ಧ ಧ್ವನಿ ಎತ್ತಿದಾಗ, ವೈದಿಕ ಧರ್ಮವು ಯಜ್ಞಕರ್ಮಗಳನ್ನು ಉಳಿಸಿಕೊಂಡು ಪ್ರಾಣಿಬಲಿಯನ್ನು ನಿಷೇಧಿಸಿತು. ಅಷ್ಟೇ ಅಲ್ಲ ಪ್ರಾಣಿ ಆಹಾರ ಉಪಯೋಗಿಸುವವರನ್ನು ಕೀಳುಜಾತಿಯವರೆಂದು ಸಾರಿತು. ಬಸವಣ್ಣನವರಿಗೆ ಈ ಅಂಶಗಳು ಗೊತ್ತಿರಲಿಲ್ಲವೆಂದಲ್ಲ. ಬ್ರಾಹ್ಮಣನಾಗಿದ್ದ ಬಸವಣ್ಣನಿಗೆ ಆ ಕಾಲದಲ್ಲಿ ಮಾಂಸಾಹಾರವನ್ನು ಸಮರ್ಥಿಸಿಕೊಂಡು ಮಾತಾಡುವುದು ಕಷ್ಟವೆನಿಸಿರಬೇಕು. ವೈದಿಕ

ಬ್ರಾಹ್ಮಣರು ಗೋಮಾಂಸ ತಿನ್ನುವವರನ್ನು ಅಸ್ಪೃಶ್ಯರನ್ನಾಗಿಸಿದಂತೆ ಪ್ರಾಣಿಗಳನ್ನು ಕೊಂದು ತಿನ್ನುವುದು ಪಾಪಕರವೆಂದು ಭಾವಿಸಿ, ಬಸವಣ್ಣ ಇಂತಹ ಕೆಲಸ ಮಾಡುವವರು ಹೊಲೆ–ಮಾದಿಗರೆಂದು ಹೇಳಿಕೆ ಕೊಟ್ಟಿರಬೇಕು. ಮೇಲ್ಜಾತಿ ಜನರು ಹೊಲೆ–ಮಾದಿಗರು ಮಾಂಸ ತಿನ್ನುವರೆಂಬ ನೆಪವೊಡ್ಡಿ ಅವರನ್ನು ಹೀನಜಾತಿಯವರೆಂದು ಪರಿಗಣಿಸಿದರೆ, ಬಸವಣ್ಣ ಈ ಆಹಾರ ಪದ್ಧತಿಯನ್ನು ಬಿಡಿಸುವ ಮೂಲಕ ದಲಿತರನ್ನು ಸುಧಾರಿಸಬಹುದೆಂದು ಯೋಚಿಸಿದ. ಬಸವಣ್ಣನ ಮಾತಿಗೆ ಓಗೊಟ್ಟು ಕೆಲವು ದಲಿತರು ಮಾಂಸಾಹಾರವನ್ನು ಆಗ ತ್ಯಜಿಸಿರಲೂಬಹುದು. ಆದೆ ಹುಟ್ಟಿದಾರಭ್ಯ ಪ್ರಾಣಿಗಳ ಒಡನಾಟದೊಂದಿಗೆ ಕಳೆಯುವ ಒಟ್ಟಾರೆ ದಲಿತರು ಅಷ್ಟು ಸುಲಭವಾಗಿ ಮಾಂಸಾಹಾರವನ್ನು ಬಿಡುವ ಸ್ಥಿತಿಯಲ್ಲಿರಲಿಲ್ಲವೆಂಬುದಕ್ಕೆ, ದಲಿತ ವಚನಕಾರರಲ್ಲಿ ಕೆಲವರು ಅದನ್ನು ಸಮರ್ಥಿಸಿಕೊಂಡಿರುವುದೇ ನಿದರ್ಶನವಾಗಿದೆ. ಕಾಳವ್ವೆಯ ವಚನವೊಂದು ಹೀಗಿದೆ:

ಕುರಿಕೋಳಿ ಕಿರುಮೀನ ತಿಂಬವರೆಲ್ಲ ಕುಲಜರೆಂಬರು
ಶಿವಗೆ ಪಂಚಾಮೃತಕರೆವ ಪಶುವ ತಿಂಬ ಮಾದಿಗ
ಕೀಳು ಜಾತಿಯೆಂಬರು
ಅವರೆಂತು ಕೀಳುಜಾತಿಯಾದರು, ಜಾತಿಗಳು ನೀವೇಕೆ ಕೀಳಾದಿರೋ೨

....

ಕಾಳವ್ವೆ ಕುರಿ, ಕೋಳಿ, ಮೀನು ತಿನ್ನುವ, ಉತ್ತಮರೆಂದು ಕರೆಯಲಾಗುವ ಬ್ರಾಹ್ಮಣರನ್ನು ಶ್ರೇಷ್ಠರೆಂದು ಕರೆದು, ದನದ ಮಾಂಸವನ್ನು ತಿನ್ನುವ ಮಾದಿಗರನ್ನು ಕೀಳೆಂದು ಭಾವಿಸುವ ಬಗ್ಗೆ ತಕರಾರು ತೆಗೆದಿದ್ದಾಳೆ. ಇದೇ ಕಾರಣಕ್ಕೆ ಹೊಲೆ–ಮಾದಿಗರನ್ನು ಮಾತ್ರವಲ್ಲ, ಮುಸ್ಲಿಂ, ಕ್ರೈಸ್ತರನ್ನು ತಾತ್ಸಾರವಾಗಿ ಕಾಣುವ ದೃಷ್ಟಿ ಈಗಲೂ ಮುಂದುವರೆದಿದೆ. ಹಾವಿನಹಾಳ ಕಲ್ಲಯ್ಯನಂತೂ ಮಾಂಸಾಹಾರಕ್ಕೂ ಆಚಾರ್ಯ ಪುರುಷರು ಬ್ರಾಹ್ಮಣರಾಗಿದ್ದು, ಮಿಕ್ಕ ಹದಿನೇಳು ಜಾತಿಗಳು ಅವರಿಂದ ತಿನಕಲಿತರೆಂದು ಹೇಳಿದ್ದಾನೆ. ಕೆಳಗಿನ ವಚನ ನೋಡಿ:

ಅತ್ಯಂತ ಯಜ್ಞಕ್ಷಮವೆಂದು ಹೋತನೆ ಕೊಂದು
ಚಿಕ್ಕ ಚಿಕ್ಕದಾಗಿ ಕಡಿದು ಭಕ್ಷಿಸಿದುದ ಕಂಡು
ಮಿಕ್ಕ ಹದಿನೇಳು ಜಾತಿ ವಿಪ್ರರಕೈಯಲನುಗ್ರಹವ ಪಡೆದು ತಿನಕಲಿತರಯ್ಯಾ೩

ಅಂದರೆ ದಲಿತ ವಚನಕಾರರು ತಮ್ಮ ವಚನಗಳಲ್ಲಿ ಮಾಂಸಾಹಾರ ಸೇವಿಸುವವರನ್ನು ಕೀಳೆಂದು ಪರಿಗಣಿಸುವ ಔಚಿತ್ಯವನ್ನೇ ಪ್ರಶ್ನೆ ಮಾಡಿದ್ದಾರೆ.

ದಲಿತರನ್ನು ಸುಧಾರಿಸಲು ಬಸವಣ್ಣ ಆಲೋಚಿಸಿದ ಮತ್ತೊಂದು ಕ್ರಮವೆಂದರೆ ಅವರನ್ನು ಪೂರ್ವಾಶ್ರಮದಿಂದ ಬಿಡುಗಡೆಗೊಳಿಸುವುದು. ಪೂರ್ವಾಶ್ರಮವೆಂದರೆ ದಲಿತರು ಪಾರಂಪರಿಕವಾಗಿ ಅನುಸರಿಸಿಕೊಂಡು ಬಂದ ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳು. ಇವುಗಳಲ್ಲಿ ಕೆಲವು ಅಂಧಶ್ರದ್ಧೆಗಳಿಂದ ಕೂಡಿರಬಹುದು. ಇವುಗಳನ್ನು ಬಿಡಿಸುವುದರಿಂದ ದಲಿತರನ್ನು ಸುಧಾರಿಸಬಹುದೆಂದು ಆತ ಯೋಚಿಸಿದಂತಿದೆ ಇದು ಒಂದು ಬಗೆಯಲ್ಲಿ ಮತಾಂತರದ ಪ್ರಕ್ರಿಯೆಯೇ.

ದಲಿತರು ಮುಖ್ಯವಾಗಿ ಶಕ್ತಿದೇವತೆಯ ಆರಾಧಕರಾಗಿದ್ದು, ಆಚರಣೆಗಳಲ್ಲಿ ಪ್ರಾಣಿಬಲಿ, ಮಾಂಸಾಹಾರ ಇವುಗಳನ್ನು ರೂಢಿಯಲ್ಲಿ ಉಳಿಸಿಕೊಂಡು ಬಂದಿದ್ದರು. ಈ ಸಮಸ್ಯೆಯನ್ನು ಧಾರ್ಮಿಕ ನೆಲೆಯಲ್ಲಿ ಬಿಡಿಸಲು ಪ್ರಯತ್ನಿಸಿದ ಬಸವಣ್ಣ 'ಏಕದೇವೋಪಾಸನೆ'ಯನ್ನು

ಪ್ರತಿಪಾದಿಸಿದನು. ಈ ಕಾರಣಕ್ಕೆ ಸಮಾಜವನ್ನು ಎರಡು ಬಗೆಯಲ್ಲಿ ವಿಂಗಡಿಸಿ, ವೀರಶೈವ ತತ್ವವನ್ನು ಸ್ವೀಕರಿಸಿದವರು ಭಕ್ತರೆಂದೂ, ಉಳಿದವರನ್ನು ಭವಿಗಳೆಂದೂ ತೀರ್ಮಾನಿಸಲಾಯಿತು. ಬಿಜ್ಜಳನನ್ನು ಸಹಿತ ಬಸವಣ್ಣ 'ಭವಿ'ಯೆಂದು ಕರೆದುದನ್ನು ನೋಡಬಹುದು. ಭಕ್ತರನ್ನು ಆದರಿಸುವ ಭವಿಗಳನ್ನೂ ನಿರಾಕರಿಸುವ ಬಸವಣ್ಣನ ಧೋರಣೆ ಕೇವಲ ಮತಾಂತರವನ್ನು ಮಾತ್ರ ಉದ್ದೇಶವಾಗಿರಿಸಿಕೊಂಡಿತ್ತೇ ಎಂಬ ಸಂಗತಿ ಕುತೂಹಲಕಾರಿಯಾಗಿದೆ. ಆಗಿನ ಕಾಲದಲ್ಲಿ ದೊಡ್ಡ ದೊಡ್ಡ ದೇವಾಲಯಗಳು, ರಾಜರು, ಮಾಂಡಲಿಕರು ಮತ್ತು ಪುರೋಹಿತರಂತಹ ಪ್ರತಿಷ್ಠಿತ ವರ್ಗದವರ ಭೋಗ ಜೀವನಕ್ಕೆ ವ್ಯವಸ್ಥಿತ ತಾಣಗಳಾಗಿದ್ದವು. ಸಂಗೀತ, ನರ್ತನಾದಿಗಳ ನೆಪದಲ್ಲಿ ದೇವದಾಸಿ ಪದ್ಧತಿಯನ್ನು ದೇವರ ಸೇವೆಯೆಂದೇ ಪರಿಗಣಿಸಲಾಗಿತ್ತು. ಈ ಕಾರ್ಯಕ್ರಮಗಳಿಗಾಗಿ ರಾಜರುಗಳು ದೇವಸ್ಥಾನಗಳಿಗೆ ಯಥೇಚ್ಛ ದಾನ, ದತ್ತಿಗಳನ್ನು ನೀಡುತ್ತಿದ್ದರು. ರಾಜರುಗಳು ಈ ಸಂಪತ್ತನ್ನೇನು ಸ್ವತಃ ದುಡಿದು ಸಂಪಾದಿಸುತ್ತಿರಲಿಲ್ಲ. ಅದೆಲ್ಲ ಶ್ರಮಿಕರ ದುಡಿಮೆಯಿಂದ ಸಂಗ್ರಹಿಸಿದ ಸಂಪತ್ತೆಂಬ ಮಾತು ಬೇರೆ. ಮೇಲಾಗಿ ಇಂತಹ ದೇವಸ್ಥಾನಗಳಲ್ಲಿ ದಲಿತರಿಗೆ ಪ್ರವೇಶವಿರಲಿಲ್ಲ. ಈ ಕಾರಣಕ್ಕೆ ಬಸವಣ್ಣ ದೇವಸ್ಥಾನ, ಅಲ್ಲಿನ ಆರಾಧನ ಪದ್ಧತಿ – ಈ ಎಲ್ಲವನ್ನೂ ಸಾರಾಸಗಟಾಗಿ ತಳ್ಳಿಹಾಕಿದ. ಅಂದರೆ ದೇವರ ಕಲ್ಪನೆಯನ್ನು 'ಆಲಯದಿಂದ ಬಯಲಿಗೆ' ತರಲು ಬಸವಣ್ಣ ಪ್ರಯತ್ನಿಸಿದ. ಇದೂ ಒಂದು ಕ್ರಾಂತಿಕಾರಕ ಹೆಜ್ಜೆಯೇ. ಈ ಕಾರಣಕ್ಕೆ 'ಇಷ್ಟಲಿಂಗ'ದ ಕಲ್ಪನೆಯೂ ಅದರ ಧಾರಣೆ ಮತ್ತು ದೀಕ್ಷೆಗಳು ಅನುಷ್ಠಾನದಲ್ಲಿ ಬಂದವು. ಇದಕ್ಕೆ ಹೊಂದಿಕೊಂಡಂತೆಯೇ 'ಜಂಗಮ' ತತ್ತ್ವವಿದೆ. ಅನಕ್ಷರಸ್ಥರೇ ಹೆಚ್ಚಾಗಿದ್ದ ಆ ಕಾಲದಲ್ಲಿ ಹಳ್ಳಿಹಳ್ಳಿಗೆ, ಮನೆ ಮನೆಗೆ ಅಡ್ಡಾಡಿ ಧರ್ಮೋಪದೇಶ ಮಾಡುವುದರ ಜೊತೆಗೆ ಲಿಂಗಾಯತ ಧರ್ಮಕ್ಕೆ ಮತಾಂತರಗೊಳ್ಳುವವರಿಗೆ ಇಷ್ಟಲಿಂಗಧಾರಣೆ ಮಾಡುವುದು ಜಂಗಮನ ಕಾರ್ಯವಾಗಿತ್ತು. ಜಾತಿ ನಿವಾರಣೆಯಲ್ಲಿ 'ಮತಾಂತರ' ಪ್ರಕ್ರಿಯೆಯನ್ನು ಮಹತ್ವದ ಹೆಜ್ಜೆಯೆಂದೇ ಭಾವಿಸಲಾಗಿತ್ತು. ಈ ಕಾರ್ಯಕ್ಕೆ ದಲಿತರು ಪೂರಕವಾಗಿ ಸ್ಪಂದಿಸಿರಬಹುದು. ಆದರೆ ಕುಟುಂಬದ ನೆಲೆಯಲ್ಲಿಯೇ 'ಗಂಡ' ಮತಾಂತರಕ್ಕೆ ಒಲಿದರೆ, 'ಹೆಂಡತಿ' ತನ್ನ ಹಳೆಯ ಆಚರಣೆಗಳಿಗೆ ಅಂಟಿಕೊಂಡ ವಿಷಯ ಬಸವಣ್ಣನವರ ಒಂದು ವಚನದಲ್ಲಿದೆ:

ಗಂಡ ಶಿವಲಿಂಗದೇವರ ಭಕ್ತ
ಹೆಂಡತಿ ಮಾರಿ ಮಸಣೆಯ ಭಕ್ತೆ.
ಗಂಡ ಕೊಂಬುದು ಪಾದೋದಕ–ಪ್ರಸಾದ,
ಹೆಂಡತಿ ಕೊಂಬುದು ಸುರೆ–ಮಾಂಸ.
ಭಾಂಡ–ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಿಕೆಯ ಹೊರಗೆ ತೊಳೆದಂತೆ
ಕೂಡಲಸಂಗಮದೇವಾ.

ಇಲ್ಲಿ ಪುನಃ ಸುರೆ–ಮಾಂಸವನ್ನು ಸೇವಿಸುವುದು ಅನಾಚಾರವೆಂಬ ಧೋರಣೆಯಿದೆ. ಅಂದರೆ ದಲಿತರು ಇಡಿಯಾಗಿ ಮತಾಂತರದತ್ತ ಆಕರ್ಷಿತವಾಗಲಿಲ್ಲವೆಂಬ ಅಂಶ ಇಲ್ಲಿ ಸೂಚಿತವಾಗಿದೆ. ದಲಿತರು ಪೂರ್ಣವಾಗಿ ಮತಾಂತರಕ್ಕೆ ಶರಣಾಗಲು ಸಿದ್ಧರಿರಲಿಲ್ಲವೆಂಬ ಅಂಶವೂ ಸಹ ಇಲ್ಲಿ ಗಮನಾರ್ಹವಾದುದು. ದಲಿತರಿಗೆ ತಮ್ಮ ಪೂರ್ವಾಶ್ರಮದ ರೂಢಿಗಳನ್ನು ಒಮ್ಮಿಂದೊಮ್ಮೆಗೆ ಬಿಡಲು ಅವರಿಗೆ ಅಡ್ಡಿಯಾದುದೆಂದರೆ, ಹಿಂದಿನಿಂದಲೂ

ಆಚರಿಸಿಕೊಂಡು ಬಂದ ಕುಲದೇವತಾ ಪದ್ಧತಿ ಮತ್ತು ಆಚರಣೆಗಳು. ಇವುಗಳ ಜೊತೆಯಲ್ಲಿ ದಲಿತರು ಭಾವನಾತ್ಮಕ ಸಂಬಂಧವನ್ನು ಹೊಂದಿದ್ದರಿಂದ ಅಷ್ಟು ಸುಲಭದಲ್ಲಿ ಅವುಗಳ ಜೊತೆ ಸಂಬಂಧ ಕಡಿದುಕೊಳ್ಳುವುದು ಅಸಾಧ್ಯವಾಗಿತ್ತು. ಇದರ ಜೊತೆಗೆ ಲಿಂಗಾಯತ ಧರ್ಮ ವಿಧಿಸಿದ ಹಲವು ಬಗೆಯ ಕಟ್ಟುಪಾಡುಗಳು. ದಲಿತರಲ್ಲಿ ಗುಪ್ತ ಭಕ್ತಿ ಮತ್ತು ಗುರುಪರಂಪರೆಯ ಅನುಭಾವದ ಪರಿಕಲ್ಪನೆಗಳು ಹಿಂದಿನಿಂದಲೂ ರೂಢಿಯಲ್ಲಿದ್ದಿರಬೇಕು. ಮಾದಾರ ಚೆನ್ನಯ್ಯ ಅಂತಹ ಗುಪ್ತಭಕ್ತಿಯ ಸಾಧಕನಾಗಿದ್ದ. ಬಸವಣ್ಣ ಆಚರಣೆಯಲ್ಲಿ ತಂದ ಇಷ್ಟಲಿಂಗ ಪದ್ಧತಿಯನ್ನು ಒಪ್ಪದೇ, ಲಿಂಗಕಟ್ಟಿಕೊಳ್ಳಲು ಸಿದ್ಧರಾಮನಂಥವರು ಮೊದಲು ನಿರಾಕರಿಸಿದ ರೆಂಬುದನ್ನು ನೋಡಿದರೆ, ದಲಿತರ ಸಾಧನೆಯ ಮಾರ್ಗಗಳು ಭಿನ್ನವಾಗಿದ್ದವೆಂಬುದು ಗೊತ್ತಾಗುತ್ತದೆ. ಏನೇ ಇರಲಿ ಬಸವಣ್ಣನಂತಹ ಒಬ್ಬ ಪ್ರಾಮಾಣಿಕ ಸುಧಾರಕನನ್ನು ನಂಬಿ, ಆ ಕಾಲದಲ್ಲಿ ದಲಿತ ಸಮುದಾಯಗಳ ಅನೇಕ ಜನ ಲಿಂಗಾಯತ ಧರ್ಮಕ್ಕೆ ಮತಾಂತರ ಹೊಂದಿ ಲಿಂಗದೀಕ್ಷೆಯನ್ನು ಪಡೆದಿರಬೇಕು. ಆದರೆ ಮತಾಂತರ ಹೊಂದಿದ ದಲಿತರನ್ನು ಮೇಲುಜಾತಿಯ ಜನರು ಸಮಾನ ಗೌರವದಿಂದ ನಡೆಸಿಕೊಳ್ಳಲಿಲ್ಲವೆಂಬುದಕ್ಕೆ ಸ್ವತಃ ಬಸವಣ್ಣನೇ ತುಂಬಾ ಜಿಗುಪ್ಸೆಯಿಂದ ಮಾತಾಡಿದ್ದಾನೆ:

ದೇಹಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ..... ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ.

ಸಮಾಜದಲ್ಲಿ ದಲಿತರನ್ನು ಅಂದರೆ ಪೂರ್ವಾಚಾರಗಳನ್ನು ತೊರೆದು ವೀರಶೈವ ಧರ್ಮಕ್ಕೆ ಮತಾಂತರಗೊಂಡವರನ್ನೂ ಜಾತಿ ಹಿಡಿದು ಮಾತಾಡಿಸುತ್ತಿದ್ದ ಬಗೆಗೆ ಬಸವಣ್ಣ ಪ್ರತಿಕ್ರಿಯಿಸಿರುವ ರೀತಿ ಇಲ್ಲಿದೆ. ಅಂದರೆ ದಲಿತರು ಮತಾಂತರ ಹೊಂದಿದರೂ ಅವರಿಗೆ ಪ್ರಯೋಜನವಂತೂ ಆಗಲಿಲ್ಲ.

ದಲಿತರ ಸುಧಾರಣೆಗಾಗಿ ಬಸವಣ್ಣನ ಕಾಲದಲ್ಲಿ ಸೂಚಿತವಾದ ಮತ್ತೊಂದು ಅಂಶವೆಂದರೆ ಕಾಯಕ ತತ್ವ. ಪ್ರತಿಯೊಬ್ಬರು ಒಂದಲ್ಲ ಒಂದು ಕಾಯಕ ಮಾಡಿಯೇ ಜೀವಿಸಬೇಕೆಂಬ ಒತ್ತಾಯವನ್ನು ಸಾಮಾಜಿಕ ನೆಲೆಯಲ್ಲಿ ಸಾರುವುದು ಇಲ್ಲಿ ಮುಖ್ಯವಾಗಿತ್ತು. ಜೊತೆಗೆ ವೃತ್ತಿಗಳಲ್ಲಿನ ಶ್ರೇಷ್ಠ-ಕನಿಷ್ಠವೆಂಬ ತಾರತಮ್ಯ ಭಾವವನ್ನೂ ತೊಡೆದು ಹಾಕುವುದು ಇದರ ಮುಖ್ಯ ಉದ್ದೇಶವಾಗಿತ್ತು. ದಲಿತರು ದೇಹಶ್ರಮದ ದುಡಿಮೆಗಳನ್ನು, ಕಾಯಾ, ವಾಚಾ, ಮನಸಾ ಅಪ್ಪಿಕೊಂಡು ಬದುಕಿದವರು. ಕಾಯಕದ ಬಗೆಗೆ ಎಲ್ಲಿಲ್ಲದ ಶ್ರದ್ಧೆ ಅವರಿಗೆ. ಪ್ರತಿಯೊಬ್ಬರೂ ದುಡಿದು ಬದುಕಬೇಕೆನ್ನುವ ತತ್ವ ಅವರಿಗೆ ಇಷ್ಟವಾದುದಾಗಿತ್ತು. ಮೇಲಾಗಿ ಎಲ್ಲ ವೃತ್ತಿಗಳೂ ಸಮಾನ, ಅವುಗಳಲ್ಲಿ ಮೇಲು-ಕೀಳೆಂಬ ಭಾವ ಎಣಿಸಲಾಗದು ಎಂಬ ಧೋರಣೆಯೂ ಅವರಿಗೆ ಪ್ರಿಯವಾಯಿತು. ಇದರಿಂದಾಗಿ ಎಲ್ಲ ಬಗೆಯ ಕಾಯಕ ಜೀವಿಗಳಿಗೆ ವೃತ್ತಿಗೌರವ ತಾನಾಗಿ ಬಂತು. ಬಟ್ಟೆ ನೇಯುವ, ಬಟ್ಟೆ ಶುಚಿಗೊಳಿಸುವ, ಚಪ್ಪಲಿ ಹೊಲಿಯುವ, ಚರ್ಮ ಹದಗೊಳಿಸುವ, ನೇಕಾರ, ಮಡಿವಾಳ, ಸಮಗಾರ, ಡೋಹರ ಮುಂತಾದವರು ತಮ್ಮ ತಮ್ಮ ವೃತ್ತಿಗಳನ್ನು ಹೇಳಿಕೊಳ್ಳಲು ಎಳ್ಳಷ್ಟೂ ಹಿಂಜರಿಯಲಿಲ್ಲ. ಆದರೆ ಒಟ್ಟಾರೆ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ವೃತ್ತಿಗಳನ್ನು ಕೀಳೆಂದು ಭಾವಿಸಲಾಗಿತ್ತೋ

ಅಂತಹ ವೃತ್ತಿಗಳನ್ನು ದಲಿತರು ಲಿಂಗದೀಕ್ಷೆಯ ನಂತರವೂ ಮುಂದುವರೆಸುವಂತಾದ್ದರಿಂದ ದಲಿತರ ಸ್ಥಾನಮಾನಗಳು ಬದಲಾಗದೇ ಉಳಿದವು. 'ವೃತ್ತಿ ಸಮಾನತೆ' ಒಂದು ತತ್ವವಾಗಿ ಪ್ರತಿಪಾದನೆಯಾದರೂ, ಆಚರಣೆಯಲ್ಲಿ ವೃತ್ತಿಗಳ ಬಗೆಗಿನ ಧೋರಣೆ ಯಥಾಪ್ರಕಾರ ಮುಂದುವರೆಯಿತು. ಅಂದರೆ ಉಚ್ಚವರ್ಣದ ಲಿಂಗವಂತರು ಚಪ್ಪಲಿ ಹೊಲೆಯುವ ಕಾಯಕ ಮಾಡುವುದಾಗಲಿ, ಹೊಲೆಯ ಭಕ್ತನೊಬ್ಬ ಲಿಂಗದೀಕ್ಷೆ ಪಡೆದ ಮೇಲೆ 'ಜಂಗಮ'ನಾದ ನಿದರ್ಶನಗಳಾಗಲಿ ಕಾಣಸಿಗುವುದಿಲ್ಲ. ಧನದಾಸೆಗೆ ಕಟ್ಟುಬಿದ್ದು ದಲಿತರಿಗೆ ಲಿಂಗದೀಕ್ಷೆ ಮಾಡಲು ಮುಂದಾದ ಜಂಗಮರು, ಅವರನ್ನು ಸಮಾನ ನೆಲೆಯಲ್ಲಿ ನಡೆಸಿಕೊಳ್ಳದೆ ಜಾತಿ ಆಚರಣೆ ಮಾಡಿದ ಸಂದರ್ಭಗಳು ವಚನಕಾರರಿಂದಲೇ ಟೀಕೆಗೊಳಗಾಗಿವೆ. ಬಸವಣ್ಣ ಯಾವುದನ್ನು ಸ್ಥಾವರವೆಂದು ಕರೆದಿದ್ದನೋ, ಮುಂದೆ ಆತನ ಅನುಯಾಯಿಗಳು ಅದನ್ನೇ ಅಪ್ಪಿಕೊಂಡದ್ದು ಎಂತಹ ವಿಪರ್ಯಾಸ.

ಬಸವಣ್ಣ ಆ ಕಾಲದಲ್ಲಿ ದಲಿತರ ಸಮಸ್ಯೆಗಳ ಕಡೆಗೆ ಲಕ್ಷ್ಯವಹಿಸಿ, ಅವುಗಳನ್ನು ನಿವಾರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದನೆಂಬುದಕ್ಕೆ ಆತನ ವಚನಗಳೇ ಸಾಕ್ಷಿಯಾಗಿವೆ. ಮೇಲ್ವರ್ಗದವರು ದಲಿತರನ್ನು ಕಂಡರೆ ಹರಿಹಾಯುವಂತಹ ಸಂದರ್ಭದಲ್ಲಿ, ಅವರನ್ನು ಪ್ರೀತಿಯಿಂದ ಮಾತಾಡಿಸಿ ಅವರ ಜೊತೆ ಸರಿ ಬೆರೆತಿರುವ ಅಂಶಗಳು ಚಾರಿತ್ರಿಕವಾಗಿಯೂ ಮಹತ್ವದ ಸಂಗತಿಗಳೇ ಆಗಿವೆ. ಇದರಿಂದಾಗಿ ದಲಿತರು ಬಸವಣ್ಣನ ಸುತ್ತ ನೆರೆದುದಷ್ಟೇ ಅಲ್ಲ, ತಮ್ಮ ವಿಚಾರಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುವುದಕ್ಕೆ ಧೈರ್ಯದಿಂದ ಮುಂದಾದರು. ಸಾಹಿತ್ಯ ವಲಯದಲ್ಲಿ ಇದೊಂದು ಅಪರೂಪದ ಸನ್ನಿವೇಶವೇ.

ಬಸವಣ್ಣನಂಥವರು ದಲಿತರನ್ನು ಸುಧಾರಿಸುವ ನಿಟ್ಟಿನಲ್ಲಿ ಕೈಕೊಂಡ ಕೆಲವು ನಿರ್ಧಾರಗಳು ಚರ್ಚಾಸ್ಪದವಾಗಿವೆ. ಯಾವುದೇ ಒಂದು ಹಿಂದುಳಿದ ಸಮುದಾಯವನ್ನು ಪ್ರಗತಿಯತ್ತ ಮುನ್ನಡೆಸುವಾಗ, ಅವರಲ್ಲಿ ಪ್ರಚಲಿತವಿರುವ ಎಲ್ಲ ಅಂಶಗಳೂ ಅನುಸರಣೀಯವಲ್ಲವೆಂದು ತೀರ್ಮಾನಿಸುವುದು ಸರಿಯಲ್ಲ. ದಲಿತರ ಬಗೆಗೆ ವಿಚಾರ ಮಾಡುವಾಗ ಅವರಲ್ಲಿ ಕೆಲವು ಕಂದಾಚಾರಗಳು ರೂಢಿಯಲ್ಲಿವೆಯೆಂಬುದು ನಿಜವೇ. ಅಂದಮಾತ್ರಕ್ಕೆ ಅವರ ಒಟ್ಟಾರೆ ಜೀವನ ಪದ್ಧತಿಯೇ ದೋಷಗಳಿಂದ ಕೂಡಿದೆ ಎಂದು ಅರ್ಥವಲ್ಲ. ಯಾವುದನ್ನು ಉಳಿಸಿಕೊಳ್ಳಬೇಕು, ಯಾವುದನ್ನು ಬಿಡಬೇಕು ಎಂಬ ನಿಟ್ಟಿನಲ್ಲಿ ಅನ್ವಯಿಕ ದೃಷ್ಟಿಬೇಕು. ದಲಿತರ ಕುಲದೇವತಾ ಪದ್ಧತಿ ಮತ್ತು ಜೀವನ ವಿಧಾನಗಳ ನಡುವೆ ಭಾವನಾತ್ಮಕ ಸಂಬಂಧಗಳಿವೆ. ಮಾತೃದೇವತೆ (ಮಾರಿ, ಮಸಣಿ)ಯ ಆರಾಧನೆ 'ಪುರುಷ ದೈವ'ಕ್ಕಿಂತಲೂ ಪ್ರಾಚೀನವಾದುದಷ್ಟೇ ಅಲ್ಲ, ಅದು ಜೀವಪರವಾದುದು. ಈ ಕಾರಣಕ್ಕೆ ಅಲ್ಲಿ ನಡೆಯುವ ಪ್ರಾಣಿಬಲಿಯನ್ನು ಒಪ್ಪಬೇಕಾಗಿಲ್ಲ. ಆದರೆ ದಲಿತರೆಲ್ಲ ಮಾಂಸಾಹಾರ ಪದ್ಧತಿಯನ್ನು ಬಿಡಬೇಕೆಂದು ವಾದಿಸುವುದು ತಪ್ಪಾಗುತ್ತದೆ. ಈ ಕಾರಣಕ್ಕೆ ದಲಿತ ವಚನಕಾರರು ಮಾಂಸಾಹಾರವನ್ನು ಸಮರ್ಥಿಸಿಕೊಂಡು ಮಾತಾಡಿದ್ದಾರೆ. ವೃತ್ತಿಗಳ ವಿಷಯದಲ್ಲಿ ಮಾತಾಡುವಾಗ ದಲಿತ ವಚನಕಾರರು ತಮ್ಮ ಪಾರಂಪರಿಕ ವೃತ್ತಿಗಳನ್ನು ಕೀಳೆಂದು ಭಾವಿಸದೇ ವೃತ್ತಿಗೌರವ ತೋರಿದುದು ಒಂದು ರೀತಿಯಲ್ಲಿ ಸರಿ. ಆದರೆ ಅವುಗಳ ಬಗೆಗೆ ಮೇಲ್ಜಾತಿಯವರು ತಾಳಿರುವ ಪಾರಂಪರಿಕ ಧೋರಣೆ ಬದಲಾಗಿಲ್ಲ. ಸಮಾಜದಲ್ಲಿ ಕೀಳೆಂದು ಭಾವಿಸಲಾಗಿರುವ ವೃತ್ತಿಗಳನ್ನು ದಲಿತರು ಮಾತ್ರ ಮಾಡುವಂತಹ

ಪರಿಸ್ಥಿತಿಯಿರಬಾರದು. ಇಂತಹ ವೃತ್ತಿಗಳಿಗೆ ಆಕರ್ಷಕ ಕೂಲಿಯನ್ನು ನಿಗದಿ ಮಾಡುವ ಮೂಲಕ ಬೇರೆ ಬೇರೆ ಜಾತಿಯ ಜನವರ್ಗದವರನ್ನು ಈ ಕಡೆಗೆ ಸೆಳೆಯಬಹುದು. ಬೇರೆ ಬೇರೆ ಜಾತಿಯ ಜನ ಒಂದು ಸಾಮೂಹವಾಗಿ ದುಡಿಯುವಾಗ ವೃತ್ತಿಗಳಲ್ಲಿ ಜಾತಿ ಗುರುತಿಸುವ ಪರಿಪಾತ ಹೋಗಬಹುದು.

ಸಮಾಜದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಜಾಗೃತಿಯನ್ನುಂಟು ಮಾಡುವುದರಲ್ಲಿ ಪ್ರಧಾನ ಪಾತ್ರವಹಿಸಬೇಕಾಗಿದ್ದ, ಜಂಗಮತತ್ವ ಇಂದು ಪುರೋಹಿತ ವ್ಯವಸ್ಥೆಯನ್ನೇ ಮಾದರಿಯಾಗಿರಿಸಿಕೊಂಡುದರಿಂದಾಗಿ ದಲಿತರು ವೀರಶೈವ ಧರ್ಮದಿಂದ ದೂರ ಸರಿದರು. ಅನೇಕ ಜಾತಿಗಳನ್ನು ಒಗ್ಗೂಡಿಸಿಕೊಂಡು, ಭಿನ್ನ ವಿಚಾರಧಾರೆಗಳಿಂದ ಜೀವಂತವಾಗಿದ್ದ ವೀರಶೈವ ಧರ್ಮ, ಇಂದು ಜಾತೀಯತೆಯನ್ನು ತಾತ್ವಿಕವಾಗಿ ವಿರೋಧಿಸಿದರೂ, ಅನುಷ್ಠಾನದಲ್ಲಿ ಅದೂ ಒಂದು ಮತಧರ್ಮ ಮಾತ್ರವಾಗಿ ನಿಂತು ಬಿಟ್ಟಿದೆ.

❑

---

೧. ಬಸವರಾಜ ಕಲ್ಗುಡಿ : ಅನುಭಾವ : ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ೨೦೬.

೨. ಶಿವಶರಣೆಯರ ವಚನಗಳು, ಪು. ೩೯೧.

೩. ಸಕಲ ಪುರಾತನರ ವಚನಗಳು, ಪು. ೩೪೯.

ಅರಿವು–ಆಚಾರ–ಅನುಭಾವ ಬಸವಣ್ಣನವರಲ್ಲಿ

●

ಬಿ. ಮಹಾದೇವಪ್ಪ

ಮಹಾನುಭಾವ ಬಸವಣ್ಣನವರಲ್ಲಿ ನಾವು ಅರಿವು–ಆಚಾರ–ಅನುಭಾವವನ್ನು ಅರಸಲು ಹೊರಟಿದ್ದೇವೆಯೆಂದರೆ 'ಮೂರು ವರ್ಷದ ಮೊಮ್ಮಗ ಮುತ್ತ್ಯಾನಿಗೆ ಕೆಮ್ಮು ಕಲಿಸಲು ಹೋಗಿದ್ದನಂತೆ' ಎಂಬ ಗಾದೆ ಮಾತಿಗೆ ಎಲ್ಲಿ ಎಡೆಯಾಗುತ್ತದೆಯೋ ಎಂದು ನನಗೆ ಗಾಬರಿಯಾಗುತ್ತಿದೆ. ಅರಿವಿನ ಆಗರ ಬಸವಣ್ಣ, ಆಚಾರದ ಆಗರ ಬಸವಣ್ಣ, ಅನುಭಾವದ ಸಾಗರ ಬಸವಣ್ಣ, ಹೀಗಿರುವಾಗ ಬಸವಣ್ಣನವರ ಯಾವ ಮಗ್ಗುಲನ್ನು ಹೇಳಬೇಕು, ಯಾವುದನ್ನು ಹೇಳದಿರಬೇಕು? ಅದಕ್ಕಾಗಿ ಬಸವಣ್ಣನವರನ್ನು ಕರಿಯನ್ನು ಕನ್ನಡಿಯೊಳಗೆ ಹಿಡಿಸಿದಂತೆ ಭಕ್ತಿಯ ಮಗ್ಗಲನ್ನು ಮಾತ್ರ ಹೇಳಲು ಈ ಲೇಖನದಲ್ಲಿ ಪ್ರಯತ್ನಿಸುತ್ತೇನೆ.

"ಅನುಭಾವದಿಂದ ಹುಟ್ಟಿತ್ತು ಲಿಂಗ, ಅನುಭಾವದಿಂದ ಹುಟ್ಟಿತ್ತು ಜಂಗಮ, ಅನುಭಾವದಿಂದ ಹುಟ್ಟಿತ್ತು ಪ್ರಸಾದ" ಎಂದು ವೈರಾಗ್ಯಮೂರ್ತಿ ಅಲ್ಲಮಪ್ರಭುಗಳು ಅಪ್ಪಣೆ ಕೊಡಿಸಬೇಕಾದರೆ ಮತ್ತು ಚಾಮರಸ ಕವಿಯು ತನ್ನ ಕಾವ್ಯದಲ್ಲಿ "ಬಸವ ಮಾಡಿದೊಡಾಯ್ತು ಗುರು ನೆಲೆ, ಬಸವ ಮಾಡಿದೊಡಾಯ್ತು ಲಿಂಗವು, ಬಸವ ಮಾಡಿದೊಡಾಯ್ತು ಜಂಗಮವರಿವ ಮಹಿಮಂಗೆ, ಬಸವನಿಂದಾಧ್ಯಾತ್ಮವೇ ಪಸರಿಸಿತು ಲೋಕದೊಳಂತು ಕಾರಣ, ಬಸವನೇ ಪರದೈವ" ಎಂದು ಬಣ್ಣಿಸಬೇಕಾದರೆ ಬಸವಣ್ಣನವರು ಅನುಭಾವದ ಉಗಮ ಮತ್ತು ಆಧ್ಯಾತ್ಮದ ಗಂಗೋತ್ರಿ ಎಂಬುದು ಇದರಿಂದ ಸಾಬೀತಾಗುತ್ತದೆ. ಅರಿವು ಆಚಾರದಲ್ಲಿ, ಆಚಾರವು ಅನುಭಾವದಲ್ಲಿ ಮಾರ್ಪಟ್ಟಾಗಲೇನೇ ಒಂದಕ್ಕೊಂದು ಅರ್ಥ ಬರುತ್ತದೆ. "ಆಚಾರವಿಲ್ಲದುದು ಅರಿವಲ್ಲ, ಅರಿವು ಇಲ್ಲದುದು ಆಚಾರವಲ್ಲ, ಇವೆರಡು ಇಲ್ಲದುದು ಅನುಭಾವವಲ್ಲ. ಜ್ಞಾನವೇ ಕ್ರಿಯೆ, ಕ್ರಿಯೆಯೇ ಜ್ಞಾನ, ಜ್ಞಾನವೆಂದರೆ ತಿಳಿಯುವುದು, ಕ್ರಿಯೆಯೆಂದರೆ ತಿಳಿದಂತೆ ಆಚರಿಸುವುದು. ಪರಸ್ತ್ರೀಯರ ನೋಡಬಾರದೆಂಬುದೇ ಜ್ಞಾನ, ಅಂತು ಆಚರಿಪುದೇ ಕ್ರಿಯೆ, ಅಂತು ಆಚರಿಸದಿದ್ದರೆ ಅದು ಅಜ್ಞಾನ ನೋಡಾ ಕೂಡಲಚೆನ್ನಸಂಗಮದೇವಾ" ಎಂಬ ಚೆನ್ನಬಸವಣ್ಣನವರ ವ್ಯಾಖ್ಯಾನದಂತೆ ಆಚರಿಸಲ್ಪಡದಿರುವ ಅರಿವು ಅದು ಜ್ಞಾನವಲ್ಲವೇ ಅಲ್ಲ, ಅದು ಅಜ್ಞಾನ. ಅದರಂತೆ ಜ್ಞಾನವಿಲ್ಲದ ಕ್ರಿಯೆ ಅದು ಕ್ರಿಯೆಯಲ್ಲ ದುಷ್ಕ್ರಿಯೆ, ಅರಿವು ಇಲ್ಲದ ಆಚಾರ ಅದು ಆಚಾರವೆನಿಸುವುದಿಲ್ಲ ದುರಾಚಾರವೆನಿಸಿಕೊಳ್ಳುತ್ತದೆ.

ಹಾಗೆ ನೋಡಿದರೆ ನಾವು ಸಂಸಾರಿಗಳು ಏನಾದರೂ ಆಚರಿಸುತ್ತಲೇ ಇರುತ್ತೇವೆ. ಯಾವ ಜೀವಿಯೂ ನಿಷ್ಕ್ರಿಯೆ ಆಗಿರುವುದಿಲ್ಲ. ಜೀವವು ಕ್ರಿಯಾಬದ್ಧವಾಗಿರುತ್ತದೆ. ಆದರೂ ನಾವು ಯಾರನ್ನಾದರೂ ಬಹಳ ಆಚಾರವಂತನಿದ್ದಾನೆಯೆಂದು ಬೆರಳು ಮಾಡಿ ತೋರಿಸಿದರೆ ಆತ ಬಹಳ ಅರಿವುವಂತನಿದ್ದಾನೆಯೆಂದು ಬೆರಳು ಮಾಡಿ ತೋರಿಸಿದರೆ ಆತ ಬಹಳ ಅರಿವುವಂತನಿದ್ದಾನೆಂಬುದೇ ಅರ್ಥವಾಗುತ್ತದೆ. ಕಳ್ಳರು–ಕಾಕರು, ಸುಳ್ಳರು–ವಂಚಕರನ್ನು ಯಾರೂ ಆಚಾರವಂತರೆನ್ನುವುದಿಲ್ಲ. ಅರಿವನ್ನು ಆಚರಣೆಯಲ್ಲಿ ತಂದವರನ್ನು ಮಾತ್ರ ಆಚಾರವಂತರೆನ್ನುತ್ತೇವೆ. ಅಂಥವರೇ ಅನುಭಾವಿಗಳು ಮತ್ತು ಶಿವಾನುಭಾವಿಗಳು.

ಭಕ್ತಿಯ ಸಾಕಾರರೂಪ ಬಸವಣ್ಣನವರು. ಭಕ್ತಿಯೆಂದರೆ ಬಸವ, ಬಸವ ಎಂದರೆ ಭಕ್ತಿ. 'ಬಸವ ಬಾರಯ್ಯಾ ಲೋಕದೊಳಗೆ ಭಕ್ತರುಂಟೇ ಹೇಳಯ್ಯಾ ಎಂದು ಕೂಡಲಸಂಗಮ ದೇವರು ಕೇಳಿದರೆ ಮತ್ತಾರೂ ಇಲ್ಲವಯ್ಯಾ, ಮತ್ತಾರೂ ಇಲ್ಲವಯ್ಯಾ ನಾನೊಬ್ಬನೇ ಭಕ್ತ' ಎಂದು ಎದೆತಟ್ಟಿ ಹೇಳಿಕೊಂಡವರು ಬಸವಣ್ಣನವರು. ನಿಜ ಹೇಳಬೇಕೆಂದರೆ ಬಸವಣ್ಣನವರೊಬ್ಬರೇ ಭಕ್ತರು. ನಾವುಗಳೆಲ್ಲ ಡಂಬು ಡಳಹು ಉಳ್ಳವರು, ಡಂಬಕರೆಂಬವರು ನಾವು, ದೇವರನ್ನು ನಂಬಿಯೂ ನಂಬದ ಡೊಂಬಗಾರರು ನಾವು. ಹಾವ ತೋರಿ ಹಾಲು ಬೇಡಿಕೊಳ್ಳುವ ಹಾವಾಡಿಗರು ನಾವು. ಏಕೆಂದರೆ ಭಕ್ತಿಯೆಂಬುದು ಸಾಮಾನ್ಯವಾದುದಲ್ಲ. ಅದು ಹೋಗುತ್ತ ಕೊಯ್ಯುವಂಥದು, ಬರುತ್ತ ಕೊರೆಯುವಂಥದ್ದು. ಏನಾದರೂ ಅನ್ನಿಸಿಕೊಳ್ಳಬಹುದು; ಆದರೆ ಭಕ್ತನೆನಿಸಿಕೊಳ್ಳುವುದು ಬಹಳ ದುಸ್ತರ ಕಾರ್ಯ.

ಹೀಗೆಂದ ಮಾತ್ರಕ್ಕೆ ಭಕ್ತಿಯ ಹೆಸರಿಗೇನೇ ಹೋಗಬಾರದೆಂದು ಹೇಳಿದಂತೆಯೂ ಆಗುವುದಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಭಕ್ತಿಗಿಂತ ಸರಳವಾದ, ಸುಲಭವಾದ, ಖರ್ಚು–ವೆಚ್ಚವಿಲ್ಲದ, ಕಷ್ಟ–ನಷ್ಟವಿಲ್ಲದ ಕೆಲಸ ಬೇರೊಂದಿಲ್ಲ. ಅದಕ್ಕಾಗಿಯೇ ಅಲ್ಲಮಪ್ರಭುಗಳು "ವೇದವೆಂಬುದು ಓದಿನ ಮಾತು; ಶಾಸ್ತ್ರವೆಂಬುದು ಸಂತೆಯ ಸುದ್ದಿ; ಪುರಾಣವೆಂಬುದು ಪುಂಡರ ಗೋಷ್ಠಿ; ತರ್ಕವೆಂಬುದು ತಗರ ಹೋರಟೆ; ಭಕ್ತಿಯೆಂಬುದು ತೋರುಂಬ ಲಾಭ" ಎಂದು ಸರಳೀಕರಿಸಿ ಹೇಳಿದ್ದಾರೆ. ಈ ಕೈಯಿಂದ ಭಕ್ತಿಯ ಮಾಡಿರಿ, ಆ ಕೈಯಿಂದ ಪ್ರತಿಫಲ ಪಡೆಯಿರಿ ಎಂಬುದೇ ಅಲ್ಲಮ ಪ್ರಭುಗಳ ವಚನದ ಮಥಿತಾರ್ಥ. ಬಹಳ ಸರಳ ಕೆಲಸವಾದ ಭಕ್ತಿಯಾಚರಣೆಯಲ್ಲಿ ಬಹಳ ಬಿಕ್ಕಟ್ಟಿನ ಎರಡೇ ಎರಡು ಕಾರ್ಯಗಳೆಂದರೆ ಒಂದು ಮನವನ್ನು ನಿಗ್ರಹಿಸುವುದು, ಎರಡನೆಯದು ಆಶೆಯನ್ನು ಅಳಿಯುವುದು. ಇವೆರಡು ಕಾರ್ಯಗಳನ್ನು ಮಹಾನುಭಾವಿ ಬಸವಣ್ಣನವರು ಅಮೋಘವಾಗಿ ಸಾಧಿಸಿದ್ದುದರಿಂದಲೇ ಅವರು ಭಕ್ತಿಭಂಡಾರಿ ಬಸವಣ್ಣನವರು ಎನಿಸಿದರು.

ಇವೆರಡಕ್ಕೆ ಉಪಷ್ಟಂಭಕಗಳಾಗಿ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಅವರು ತಮ್ಮ "ವಚನ ಶಾಸ್ತ್ರಸಾರ" ಗ್ರಂಥದಲ್ಲಿ ಭಕ್ತಸ್ಥಲದ ಲಕ್ಷಣವಾಗಿ ಕೆಲವೊಂದು ವಿಧಿ–ನಿಷೇಧಗಳನ್ನು ನಿರೂಪಿಸಿರುವರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ೧. ಭಕ್ತನು ಸದಾಚಾರಿ ಯಾಗಿರಬೇಕು, ೨. ಸತ್ಯವನ್ನೇ ನುಡಿಯಬೇಕು, ೩. ಕಳವು ಮಾಡಬಾರದು, ೪. ಜೀವಹಿಂಸೆ ಎಸಗಬಾರದು, ೫. ಎಲ್ಲರನ್ನೂ ಸಮಾನವಾಗಿ ಕಾಣಬೇಕು, ೬. ಜ್ಞಾನಿಗಳೇ ಶ್ರೇಷ್ಠರೆಂದು ತಿಳಿಯಬೇಕು, ೭. ಸರ್ವತ್ರ ಸಮಾಧಾನಿಯಾಗಿರಬೇಕು, ೮. ಎಂತಹ ಸಮಯದಲ್ಲಿಯೂ ಸೈರಣೆ ಕಳೆದುಕೊಳ್ಳಬಾರದು, ೯. ವ್ಯಭಿಚಾರ ಮಾಡಬಾರದು, ೧೦. ಲೋಭಿಯಾಗದೆ

ದಾಸೋಹ ಮಾಡುತ್ತಿರಬೇಕು, ೧೧. ವಂಚನೆ ಮಾಡಬಾರದು, ೧೨. ಅಹಂಕಾರಿಯಾಗಿರ ಬಾರದು, ೧೩. ದೈನ್ಯಭಾವದಿಂದಿರಬೇಕು, ೧೪. ಸ್ತ್ರೀಯರನ್ನು ಪೂಜಿಸಬೇಕು, ೧೫. ಭಕ್ತರನ್ನು ಮನ್ನಿಸಬೇಕು. ೧೬. ಪೂಜ್ಯರೊಡನೆ ಸರಸವಾಡಬಾರದು, ೧೭. ಸಜ್ಜನರ ಸಂಗದಲ್ಲಿರಬೇಕು, ೧೮. ನೈತಿಕ ಶಕ್ತಿಯುಕ್ತನಾಗಿರಬೇಕು, ೧೯. ದೇವರಲ್ಲಿ ಶ್ರದ್ಧೆಯುಳ್ಳವರಾಗಿರಬೇಕು, ೨೦. ಇಷ್ಟಲಿಂಗವನ್ನೇ ಪ್ರಾಣಲಿಂಗವೆಂದು ಪೂಜಿಸಬೇಕು, ೨೧. ಅಂಧಶ್ರದ್ಧೆಗಳನ್ನು ತೊರೆಯಬೇಕು, ೨೨. ಮಾಯಾನಿರಸನ ಮಾಡಿಕೊಳ್ಳಬೇಕು, ೨೩. ಪರಮಾತ್ಮನನ್ನು ಒಲಿಸಿಕೊಳ್ಳಬೇಕು, ೨೪. ಸದಾ ಶಿವಾನುಭವದಲ್ಲಿರಬೇಕು, ೨೫. ಈ ಎಲ್ಲ ವಿಧಿ-ನಿಷೇಧ ಗಳನ್ನು ಪಾಲಿಸುವ ಸಾಮರ್ಥ್ಯವನ್ನು ಕೊಡು ಎಂದು ಆ ಪರಮಾತ್ಮನೊಬ್ಬನಿಗೇನೇ ಮೊರೆಹೋಗಬೇಕು.

ಮಹಾನುಭಾವಿ ಬಸವಣ್ಣನವರು ಮನದ ಚಂಚಲತೆಯನ್ನು ಕಂಡುಕೊಂಡು ಅದನ್ನು ಅಮೋಘವಾಗಿ ನಿಗ್ರಹಿಸಿಕೊಂಡಿದ್ದರು. ಮನವನ್ನು ನಿಗ್ರಹಿಸಿಕೊಂಡಿದ್ದರು ಎನ್ನುವುದಕ್ಕಿಂತ ಮನವನ್ನೇ ಅಳಿದುಕೊಂಡಿದ್ದರೆಂದು ಹೇಳಿದರೆ ಇನ್ನೂ ವಾಸ್ತವಿಕವಾದೀತು. "ಮನವೆಂಬ ಮರ್ಕಟನ ತಡೆಯಲಾರೆನು ದೇವ. ಎನಿತದರ ಕಪಿ ಕುಚೇಷ್ಟೆಗಳು" ಎಂದು ಬಹಳ ಸಾಧನೆ ಮಾಡಿ ಅದನ್ನು ತಮ್ಮ ಹತೋಟಿಯಲ್ಲಿ ಇರಿಸಿಕೊಂಡರು. ಮತ್ತೊಂದು ವಚನದಲ್ಲಿ ಅವರು–

ಎನಿಸು ಕಾಲ ಕಲ್ಲು ನೀರೊಳಗಿರ್ದರೇನು? ನೆನೆದು ಮೃದುವಾಗಬಲ್ಲುದೇ?
ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ? ಮನದಲ್ಲಿ ದೃಢವಿಲ್ಲದನ್ನಕ್ಕರ?

ಎಂದು ಮನವನ್ನು ನಿಗ್ರಹಿಸುವ ಉಪಾಯವನ್ನು ಕಂಡುಕೊಂಡರು. ಅತ್ತಲಿತ್ತ ಹರಿವ ಮನಸ್ಸನ್ನು ನೆತ್ತಿಯ ಮೇಲೆ ಬಡಿದು ಕೂಡ್ರಿಸಬೇಕಾದರೆ ಏನು ಮಾಡಬೇಕು? ಮನದೆದುರು ಒಂದು ಪರವಸ್ತುವನ್ನು ಇರಿಸಬೇಕು. ನಿಷ್ಠಾಪೂರ್ವಕವಾದ ಲಿಂಗಾನುಸಂಧಾನದಿಂದ ಮನವನ್ನು ಲಯ ಮಾಡಿಕೊಳ್ಳಬಹುದು. ಲಿಂಗಾನುಸಂಧಾನದ ಉಪಾಯವನ್ನೂ ಬಸವಣ್ಣನವರೇ ಹೇಳಿಕೊಟ್ಟಿರುವರು.

ಅಂಗೈಯೊಳಗಣ ಲಿಂಗವ ನೋಡುತ್ತ, ಕಂಗಳು ಕಡೆಗೋಡಿವರಿವುತ್ತ, ಸುರಿವುತ್ತ, ಎಂದಿಪ್ಪೆನೋ

ನೋಟವೇ ಪ್ರಾಣವಾಗಿ ಎಂದಿಪ್ಪೆನೋ? ಕೂಟವೇ ಪ್ರಾಣವಾಗಿ ಎಂದಿಪ್ಪೆನೋ?
ಎನ್ನಂಗವಿಕಾರದ ಸಂಗವಳಿದು, ಎನ್ನ ಮನೋವಿಕಾರದ ದುಸ್ಸಂಗವಳಿದು,
ಕೂಡಲ ಸಂಗಯ್ಯಾ, ಲಿಂಗಯ್ಯಾ, ಲಿಂಗ ಲಿಂಗವೆನ್ನುತ್ತ?

ಹೀಗೆ ಮನೋರ್ಲಯ ಮಾಡಿಕೊಳ್ಳುವುದು ಭಕ್ತನ ಪ್ರಥಮ ಲಕ್ಷಣ. ಮನಸ್ಸೇ ಅಳಿದ ಸಂದರ್ಭದಲ್ಲಿ ಕಾಮವಿಲ್ಲ, ಕ್ರೋಧವಿಲ್ಲ, ಮೋಹವಿಲ್ಲ, ಲೋಭವಿಲ್ಲ, ಮದವಿಲ್ಲ, ಮತ್ಸರವಿಲ್ಲ ಇಂಥ ಅರಿಷಡ್ವರ್ಗಗಳ ಉಪಟಳವಿಲ್ಲವೆಂದ ಬಳಿಕ, ಸಪ್ತವ್ಯಸನಗಳ ಜಂಜಡವಿಲ್ಲ, ಅಷ್ಟಮದಗಳ ಪೀಡಣೆಯಿಲ್ಲ, ಮನೋರ್ಲಯವಾದ ಭಕ್ತ ಘನಗಂಭೀರ ಅಂಬುಧಿಯಂತಿರುತ್ತಾನೆ.

ಇನ್ನು ಎರಡನೆಯದಾದ ಆಶೆಯೆಂಬುದು ಬಸವಣ್ಣನವರ ಹತ್ತಿರ ಸುಳಿದೇ ಇರಲಿಲ್ಲ. "ಎಲ್ಲಿ ನೋಡಿದಡಲ್ಲಿ ಮನವೆಳಸಿದರೆ ಆಣೆ ನಿಮ್ಮಾಣೆ" ಎಂದು ಅವರು ತಮ್ಮದಲ್ಲದುದನ್ನು ಎಂದೂ ಮುಟ್ಟುತ್ತಿರಲಿಲ್ಲ. ನಿಜವಾಗಿಯೂ ತನುಮನಧನಗಳು ಅವರಿಗೆ ಬಾಧಕಗಳಾಗಿಯೇ ಇರಲಿಲ್ಲ. ಅವರು ಒಂದು ಕಡೆ ಉದ್ಘೋಷಿಸುತ್ತಾರೆ– "ನೀವಿರಿಸಿದ ತನುವಿನಲ್ಲಿ

ನಾನಂಜೆನಯ್ಯಾ, ತನುವು ಗುರುಸೇವೆಗೆ ಸಂದುದಾಗಿ, ನೀವಿರಿಸಿದ ಮನದಲ್ಲಿಯೂ ನಾನಂಜೆನಯ್ಯಾ, ತನುವು ಗುರುಸೇವೆಗೆ ಸಂದುದಾಗಿ, ನೀವಿರಿಸಿದ ಮನದಲ್ಲಿಯೂ ನಾನಂಜೆನಯ್ಯಾ, ಮನವು ಘನ ವಸ್ತುವಿಗೆ ಶರಣುವೊಕ್ಕುದಾಗಿ. ನೀವಿರಿಸಿದ ಧನದಲ್ಲಿಯೂ ನಾನಂಜೆನಯ್ಯಾ, ಧನವು ಸತಿಸುತರಿಗೆ ಹೋಗದಾಗಿ" ಎಂದು. ತನು-ಮನ-ಧನಗಳನ್ನು ಸರಿಯಾಗಿ ವಿನಿಯೋಗಿಸಲು ಬಲ್ಲವರು ಯಾವುದಕ್ಕೂ ಆಶೆ ಮಾಡುವ ಪ್ರಮೇಯವೇ ಉದ್ಭವಿಸುವುದಿಲ್ಲ. "ಬಟ್ಟೆಯಲ್ಲಿ ಹೊನ್ನು, ವಸ್ತ್ರಬಿದ್ದಡೆ ಬೇಕೆಂದು ಎತ್ತಿದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ." ದುಡಿಯದೆ ದೊರೆತುದು ಅದು ಅಂದಂದಿಗೆ ಕಿಲ್ಬಿಷ ಮತ್ತು ವಿಷ ಎಂದು ಬಸವಣ್ಣನವರು ತಿಳಿದಿದ್ದರು. ಅವರು ಮತ್ತೊಂದು ಕಡೆ ಹೇಳುತ್ತಾರೆ "ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗೆಂಜೆ, ಒಂದಕ್ಕಂಜುವೆ ಒಂದಕ್ಕಳಕುವೆ ಪರಧನ, ಪರಸತಿಯೆಂಬ ಜೂಬಿಂಗಂಬುವೆ. ಮುನ್ನಂಜದ ರಾವಣನೇ ವಿಧಿಯಾದ, ಇನ್ನಂಜುವೆನಯ್ಯಾ ಕೂಡಲಸಂಗಮದೇವಾ!" ಪರಧನ, ಪರರ ನೆಲಕ್ಕೆ ಆಶಿಸಿ ಎಷ್ಟೋ ರಾಜಮಹಾರಾಜರು ನರಕಕ್ಕೆ ಭಾಜನರಾದುದನ್ನು ತಿಳಿದು ಬಸವಣ್ಣನವರು ಆಶೆಯೆಂಬುದನ್ನೇ ಮೆಟ್ಟಿ ನಿಂತಿದ್ದರು. ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು ಓರೆ ಆವಿನ ಹಿಂದೆ ಹರಿಯಲೇಕೆ? ದುಡಿದಷ್ಟು ಫಲ ಕೊಡಲು ಸಂಗಮನಾಥನು ಸಮರ್ಥನಿರುವಾಗ ಪರಧನದ ಆಶೆಯೇಕೆ?

ಈ ಎಲ್ಲ ಗುಣಲಕ್ಷಣಗಳು ಮಹಾನುಭಾವಿ ಬಸವಣ್ಣನವರಲ್ಲಿದ್ದುವೆಂಬ ಸಂಗತಿಯನ್ನು ನಾವು ಅವರ ವಚನಗಳಿಂದಲೂ ಮತ್ತು ಅವರ ಬಗೆಗಿನ ಚರಿತ್ರೆಗಳಿಂದಲೂ ತಿಳಿದುಕೊಳ್ಳಬಹುದಾಗಿದೆ. ಚರಿತ್ರೆಗಳು ನಮ್ಮ ಕವಿಗಳ ಕಲ್ಪನೆಗಳು, ಹೊಗಳು ಭಟ್ಟರ ಉವಾಚಗಳು ಎಂದು ಅಲಕ್ಷಿಸಿದರೂ ಬಸವಣ್ಣನವರು ಸಾಮಾನ್ಯ ಮಾನವರಾಗಿರಲಿಲ್ಲ, ಅವರು ದೇವಮಾನವರಾಗಿದ್ದರು ಅಥವಾ ದೇವರೇ ಆಗಿದ್ದರೆಂಬುದಕ್ಕೆ ಅವರ ವಚನಗಳೂ ಮತ್ತು ಅವರ ಸಮಕಾಲೀನ ಶಿವಶರಣರ ವಚನಗಳೂ ನಮಗೆ ಸಾಕ್ಷೀಭೂತವಾಗುತ್ತವೆ. ಶಿವಶರಣರಾರೂ ಲೌಕಿಕ ಆಶೆ-ಆಮಿಷಗಳಿಗೋಸುಗ ಸುಮ್ಮನೆ ಸ್ತುತಿ ಪಾಠಕರಾಗಿರಲಿಲ್ಲ ಎಂಬ ಮಾತನ್ನು ನಾವು ಮೊದಲು ಜ್ಞಾಪಕದಲ್ಲಿರಿಸಿಕೊಳ್ಳಬೇಕು.

ಮಹಾನುಭಾವಿ ಬಸವಣ್ಣನವರನ್ನು ತಿದ್ದಿ-ತೀಡಿ ಒಪ್ಪಮಾಡಿದ ಅನುಭವ ಮಂಟಪದ ಶೂನ್ಯಸಿಂಹಾಸನಾಧೀಶ ಅಲ್ಲಮಪ್ರಭುಗಳೇ ಒಂದು ಕಡೆ ತಾನು ಬಸವಣ್ಣನಾಗಿ ಏಕೆ ಹುಟ್ಟಲಿಲ್ಲ ಎಂಬ ಉದ್ಗಾರವನ್ನು ಆತ್ಮಾವಲೋಕನದ ರೀತಿಯಲ್ಲಿ ಈ ಕೆಳಗಿನ ವಚನದಲ್ಲಿ ಎತ್ತಿದ್ದಾರೆ.

ಕೌಪು, ಕಾಷಾಂಬರವ ತೊಟ್ಟು, ಮಂಡೆ ಬೋಳಾದರೇನಯ್ಯಾ,
ಮನದಲ್ಲಿ ನಿಜವಿಲ್ಲದನ್ನಕ್ಕರ?
ಹೊನ್ನು, ಹೆಣ್ಣು, ಮಣ್ಣು, ತ್ರಿವಿಧವ ತೊರೆದರೇನಯ್ಯಾ,
ಮನದಲ್ಲಿ ವ್ರತಿಯಾಗದನ್ನಕ್ಕರ?
ಹಸಿವು, ತೃಷೆ, ವ್ಯಸನಾದಿಗಳ ತೊರೆದರೇನಯ್ಯಾ,
ಮನದಲ್ಲಿ ಅರ್ಥದಿಚ್ಛೆ ಹಿಂಗದನ್ನಕ್ಕರ?
ಆನು ಜಂಗಮವೇ? ಆನು ಹಿರಿಯನಾದೆನಲ್ಲದೆ, ಆನು ಜಂಗಮವೇ?

ಒಡಲಿಲ್ಲದಾತ ಬಸವಣ್ಣ! ಪ್ರಾಣವಿಲ್ಲದಾತ ಬಸವಣ್ಣ,
ಬಸವಣ್ಣನಾಗಿ ಹುಟ್ಟಿಸದೆ ಎನ್ನ ಪ್ರಭುವಾಗಿ ಹುಟ್ಟಿಸಿದೆಯಯ್ಯಾ ಗುಹೇಶ್ವರಾ!

ಬಸವಣ್ಣನವರಿಗೆ ಒಡಲಿರಲಿಲ್ಲವೆಂಬ ಮಾತು ಬಹಳ ಮಹತ್ವಪೂರ್ಣವಾದುದು. ಒಡಲಿಲ್ಲದ ವ್ಯಕ್ತಿಯೇ ಆ ಮಾತನ್ನು ಹೇಳುತ್ತಿದ್ದಾನೆಂದರೆ ಆ ಮಾತಿಗೆ ಇನ್ನೂ ಬೆಲೆ ಹೆಚ್ಚು. ಅಲ್ಲಮಪ್ರಭುಗಳು ಹುಟ್ಟು ನಿರ್ದೇಹಿಯಾಗಿದ್ದರೆಂಬ, ಮಾತು ಸುಪ್ರಸಿದ್ಧವಾಗಿಯೇ ಇದೆ. ಯಾರೇ ಆಗಲಿ ನಿರ್ದೇಹಿಗಳಾಗಬಹುದು. ಒಡಲಿನ ಬಾಧೆಗಳಾದ ಹಸಿವು, ನೀರಡಿಕೆ, ನಿದ್ರೆ, ತೂಕಡಿಕೆ, ವಿಷಯ, ವ್ಯಸನಾದಿ ಗುಣಗಳನ್ನು ಅಳಿದುಕೊಂಡಿದ್ದರೆ ಆತ ನಿರ್ದೇಹಿ ವ್ಯಕ್ತಿ. ಇಂತಹ ವ್ಯಕ್ತಿತ್ವ ಮಹಾನುಭಾವಿ ಬಸವಣ್ಣನವರಿಗೆ ಸಹಜ ಸಿದ್ಧಿಸಿತ್ತು. ಇದೇ ರೀತಿ–ಪ್ರಾಣವಿಲ್ಲದ ವ್ಯಕ್ತಿಯೆಂದರೆ ಅಹಂಕಾರ–ಮಮಕಾರಗಳು, ಮೋಹ–ಮತ್ಸರಗಳು, ಆಶೆ–ಆಮಿಷಗಳು, ರೋಷ–ಹರುಷಗಳು, ಸ್ನೇಹ–ದ್ವೇಷಗಳು ಇಲ್ಲದಂತಹ ನಿರ್ಮಲ ಸ್ವರೂಪರು. ಇಂತಹ ಸ್ವರೂಪ ಬಸವಣ್ಣನವರದಾಗಿತ್ತು.

ದೇಹಗುಣಗಳನ್ನು ನಿವಾರಿಸಿಕೊಳ್ಳುವುದು, ಪ್ರಾಣಗುಣಗಳನ್ನು ಕಳೆದುಕೊಳ್ಳುವುದು ಬಹಳ ಕಠಿಣವಾದ ಕಾರ್ಯವಾಗಿದೆ. ದೇಹ ಯಾವಾಗಲೂ ಸುಖವನ್ನೇ ಬಯಸುತ್ತದೆ. ನಡೆದು ಶ್ರಮಪಡಲು ಅದು ಎಂದೂ ತಯಾರಿರುವುದಿಲ್ಲ. ಒಂದು ಕಿಲೋ ಮೀಟರಿನಷ್ಟು ದೂರವನ್ನೂ ಅದು ರೈಲು, ಬಸ್ಸು, ಕಾರು, ಜೀಪುಗಳಲ್ಲಿಯೇ ಕ್ರಮಿಸಬೇಕೆನ್ನುತ್ತದೆ. ಹೀಗೆ ದೇಹದ ಆಕಾಂಕ್ಷೆಗಳು ಒಂದೇ? ಎರಡೇ? ಬಿಸಿಲಲ್ಲಿ ನೆರಳು ಬೇಡುತ್ತದೆ, ಚಳಿಯಲ್ಲಿ ಬೆಚ್ಚಗೆ ಬಯಸುತ್ತದೆ. ದೇಹದ ಮಾತು ಕೇಳಿದವರು ಕಳ್ಳರಾಗಲು, ಸುಳ್ಳರಾಗಲು, ವ್ಯಭಿಚಾರಿಯಾಗಲು, ಅಧರ್ಮಿಯಾಗಲು ಹೇಸುವುದಿಲ್ಲ.

ಆದರೆ ಬಸವಣ್ಣನವರು ಎಲ್ಲವನ್ನೂ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ಚಾಮರಸ ಕವಿಯು ಬಣ್ಣಿಸಿದಂತೆ.

ಆತನಂತಃಕರಣವಾತನ ಮಾತ ಕೇಳುವವಾಗಿ ದಿಟ ಬಳಿ
ಕಾತನಾಜ್ಞಾ ಮಾತ್ರದಿಂದೇ ಸ್ಥೂಲತನುವಿನಲಿ
ಓತಿರಲು ಬೇಡೆಂದೊಡಾಗಳೆ ಭೀತಿಯಿಂದೊಳಪೊಕ್ಕು ತಮ್ಮಯ
ಧಾತುಗೆಟ್ಟಿಹವೇನನೆಂಬೆನು ಬಸವನನುಭಾವ!

ಚಾಮರಸ ಕವಿಯ ಈ ಪದ್ಯದ ಭಾವಾರ್ಥವಿಷ್ಟೆ. ಬಸವಣ್ಣನವರ ದೇಹ, ಮನಸ್ಸು, ಇಂದ್ರಿಯಗಳು, ಬುದ್ಧಿ ಮೊದಲಾದುವೆಲ್ಲ ಆತನ ವಶವರ್ತಿಯಾಗಿದ್ದವು. ಆತ ಏಳು ಎಂದರೆ ಏಳುತ್ತಿದ್ದವು, ಕೂಡು ಎಂದರೆ ಕೂಡುತ್ತಿದ್ದವು. ಬಸವಣ್ಣನವರ ಹಲವು ಪ್ರತಿಜ್ಞೆಗಳಲ್ಲಿ ಮಂಚವನೇರದ ಪ್ರತಿಜ್ಞೆ ಒಂದಾಗಿದೆ. ಕೂಡಲಸಂಗಮದೇವನು ಯಾವ ಸಮಯದಲ್ಲಿ, ಯಾವ ರೂಪದಲ್ಲಿ ಬರುವನೋ ಗೊತ್ತಿಲ್ಲ. ದೇವರು ಬಂದಾಗ ಆತನಿಗೆ ಗೌರವ ತೋರಲು ಧಿಗ್ಗನೆ ಮಂಚದಿಂದ ಇಳಿಯುವುದಕ್ಕಿಂತ ೨೪ ಗಂಟೆಯೂ ಮಂಚವನ್ನೇರದಿದ್ದರೆ ಆಯಿತಲ್ಲಾ ಎಂದು ಬಸವಣ್ಣನವರು ಜೀವನದಲ್ಲಿ ಎತ್ತರದ ಸ್ಥಾನದಲ್ಲಿ ಕುಳಿತುಕೊಂಡಿರಲೇ ಇಲ್ಲವಂತೆ. ನಮ್ಮ ಸೇಡಂ ಪಟ್ಟಣದ ಬಳಿಯಲ್ಲಿ ರುದ್ನೂರು ಸಿದ್ಧಯ್ಯ ಮುತ್ಯಾ ಎಂಬವರಿದ್ದರು. ಅವರು ಯಾವ ಕಡೆ ಕಾಲು ಮಾಡಿ ಮಲಗಿದರೂ ದೇವರ ಕಡೆ ಮಾಡಿದಂತೆಯಾಗುತ್ತದೆಯೆಂಬ ಭಾವದಿಂದಲೋ ಏನೋ ತಮ್ಮ ಜೀವಮಾನವಿಡೀ

ಅವರು ಕಾಲು ಚಾಚಿಯೇ ಮಲಗಿಕೊಂಡಿರಲಿಲ್ಲ. ಕುಳಿತುಕೊಂಡೇ ನಿದ್ರಾ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಈ ದೇಹವೇನು? ನಾವು ಇಟ್ಟ ಹಾಗೆ ಇರುತ್ತದೆ, ನಾವು ಕಲಿಸಿದ್ದನ್ನು ಕಲಿಯುತ್ತದೆ. ದೇಹದಂಡನೆಯನ್ನು ನಮ್ಮ ವೀರಶೈವ ಧರ್ಮ ಒಪ್ಪುವುದಿಲ್ಲವಾದರೂ ದೇಹಾಧೀನವಾಗಿರಬೇಕೆಂದೂ ಅದು ಹೇಳುವುದಿಲ್ಲ. ನಾವು ಹೇಳಿದ ಹಾಗೆ ನಮ್ಮ ದೇಹ ಕೇಳಬೇಕೇ ಹೊರತು ಅದು ಬಯಸಿದ ರೀತಿಯಲ್ಲಿ ನಾವು ಕುಣಿಯಬಾರದು. ಅದಕ್ಕಾಗಿಯೇ ಅನುಭಾವಿಗಳಾದವರು ಮನುಷ್ಯನಿಗೆ ಹೊಟ್ಟೆಗಿಂತ ದೊಡ್ಡ ವೈರಿಯಿಲ್ಲ ಎಂದು ಹೇಳಿದ್ದಾರೆ. ಕಣ್ಣು, ನಾಲಗೆ, ಮನವು ತನ್ನದೆಂದೆನಬೇಡ ಎಂದು ಸರ್ವಜ್ಞ ಕವಿ ಎಚ್ಚರಿಸಿದ್ದಾನೆ.

ಭಕ್ತಿಭಂಡಾರಿಯಾದ ಬಸವಣ್ಣನವರ ಒಂದು ವೈಶಿಷ್ಟ್ಯವೆಂದರೆ ಅವರು ತಮ್ಮ ದೇಹ, ಮನ, ಭಾವ, ಪ್ರಾಣಗಳನ್ನು ಒಬ್ಬ ವಿಜ್ಞಾನಿಯಂತೆ ಒಂದೊಂದೇ ಬೇರೆಗೊಳಿಸಿ ಅವುಗಳಲ್ಲಿನ ಲೋಪದೋಷಗಳನ್ನು ತಿದ್ದಿ, ತೀಡಿ, ಬಡಿದು, ಬೈದು ಕೂಡಲಸಂಗಮ ದೇವರ ಸಾಕ್ಷಾತ್ಕಾರಕ್ಕೆ ಸಿದ್ಧಪಡಿಸಿಕೊಂಡರು. ಸತ್ಯ ಶರಣರೆಲ್ಲರೂ ಮಾವಿನ ಕಾಯಿಗಳಂತಿರುವಾಗ ತಾವು ಮಾವಿನಕಾಯಿಯನ್ನು ಹೋಲುವ ಎಕ್ಕೆಯ ಕಾಯಿಯಂತೆ ಇರುವೆನಲ್ಲಾ ಎಂಬುದನ್ನು ತಾವೇ ಕಂಡುಕೊಂಡರು. ತಮ್ಮ ಚಿತ್ತವು ಮೇಲೆ ಕೆಂಪಾಗಿ ಸುಂದರವಾಗಿದ್ದರೂ ಒಳಗೆ ಅತ್ತಿಯ ಹಣ್ಣಿನಂತಿದೆಯೆಂದು ಗುರುತಿಸಿಕೊಂಡರು. ತಮ್ಮ ಮನಸ್ಸು ಮರ್ಕಟವಲ್ಲದೆ ಬೇರೇನೂ ಅಲ್ಲವೆಂದು ಕಂಡುಕೊಂಡರು. ತಮ್ಮ ದೇಹ ಕರಿಮಣ್ಣ ಪುತ್ಥಳಿಯಾಗಿರುವಾಗ ತೊಳೆದಷ್ಟೂ ಕೆಸರಲ್ಲದೆ ತನ್ನ ಮೂಲಸ್ವರೂಪ ಬಿಡದೆಂದು ಗೊತ್ತುಮಾಡಿಕೊಂಡರು. ಹೀಗೆ ಅರೆಬರೆಯನ್ನು ಕಂಡುಕೊಂಡು ವಿಶೇಷ ಸಾಧನೆಗಳಿಂದ ಅವುಗಳನ್ನು ತುಂಬಿಕೊಂಡು ಪರಿಪೂರ್ಣ ಮಾನವರಾದರು, ದೇವಮಾನವರೂ ಆದರು.

ಬಸವಣ್ಣನವರ ವಚನಗಳನ್ನು ಓದಿದಾಗ ನಮಗೆ ದೊರೆಯುವ ಅನುಭಾವವೆಂದರೆ ನಾವು ಲೋಕದ ಡೊಂಕನ್ನು ತಿದ್ದಲು ಹೋಗಬಾರದು, ನಮ್ಮ ಡೊಂಕನ್ನು ನಾವು ತಿದ್ದಿಕೊಳ್ಳಬೇಕು. ನಮ್ಮನ್ನು ನಾವು ಮೊದಲು ಸುಧಾರಿಸಿಕೊಂಡರೆ ಜಗತ್ತಿನಲ್ಲಿ ಒಬ್ಬ ದುಷ್ಟ ಕಡಿಮೆಯಾಗುತ್ತಾನೆ. ಹೀಗೆ ಪ್ರತಿಯೊಬ್ಬರೂ ತಮ್ಮ ಅರೆಕೊರೆಗಳನ್ನು ತುಂಬಿಕೊಂಡರೆ ಜಗತ್ತೇ ಸ್ವಯಂ ಶುದ್ಧವಾಗುತ್ತದೆ.

ಎರಡನೆಯದಾಗಿ ವಿನಯವೇ ನಮ್ಮನ್ನು ದೊಡ್ಡವರನ್ನಾಗಿ ಮಾಡುತ್ತದೆ. ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದು ಬಸವಣ್ಣನವರು ಸಾರಿಸಾರಿ ಹೇಳಿದರೂ ಜಗತ್ತು ಬಸವಣ್ಣನವರಿಗಿಂತ ದೊಡ್ಡವರು ಯಾರೂ ಇಲ್ಲವೆಂದು ಅವರನ್ನು ಗುರುತಿಸುತ್ತಿದೆ. ಕೀಳಿನಲ್ಲಿರುವ ಸ್ವಾದು-ಸ್ವಾರಸ್ಯ ಹಿರಿಮೆಯಲ್ಲಿಲ್ಲ. ಆನೆಯಾಗಿ ಕಬ್ಬಿನ ಸೊಪ್ಪೆ ತಿನ್ನುವುದಕ್ಕಿಂತ ಇರುವೆಯಾಗಿ ಸಕ್ಕರೆ ತಿನ್ನುವುದು ಬಹಳ ಶ್ರೇಷ್ಠವಾದುದು. ನಾವು ಆಕಳ ಹಾಲು ಪಡೆಯಬೇಕಾದರೆ ಅದರ ಪಾದತಳದಲ್ಲಿ ವಿನಯಶೀಲರಾಗಿ ಕೂಡಲೇಬೇಕಾಗುತ್ತದೆ. ಒಂದು ಕ್ಷುಲ್ಲಕ ಪ್ರಾಣಿಯ ಪಾದತಳದಲ್ಲಿ ತಾನೇಕೆ ಕೂತುಕೊಳ್ಳಬೇಕು ಎಂದು ಗರ್ವ ಪಟ್ಟರೆ ಸ್ವಾದಿಷ್ಟ ಹಾಲಿನಿಂದ ವಂಚಿತರಾಗಬೇಕಾಗುತ್ತದೆ.

ಮೂರನೆಯದಾಗಿ ನಮಗೆ ದೊರೆಯುವ ಪಾಠವೆಂದರೆ "ಆರಿಗಾರೂ ಇಲ್ಲ; ಕೆಟ್ಟವಂಗೆ ಕೆಳೆ ಇಲ್ಲ; ಜಗದ ನೆಂಟ ಪರಮಾತ್ಮನೊಬ್ಬನೇ." ಹೆಂಡತಿ ಮಕ್ಕಳು, ಬಂಧು-ಬಳಗ ನಮ್ಮವರೆಂದು ಭ್ರಮಿಸಿದರೆ ಅವರ ಕೃತಕವೇ ಬೇರೆ. ಅವರು ತಮ್ಮ ಸ್ವಾರ್ಥ ಸಾಧನೆಗೋಸುಗ

ನಮ್ಮ ಸುತ್ತ ನೆರೆದಿರುತ್ತಾರೆ ವಿನಃ ನಮ್ಮ ಲೇಸಿಗಾಗಿ ಅವರಲ್ಲ. ಬೆಡಗಿನ ಕೀಲು ಕಳಚಲೊಡನೆ ಅರ್ಥಾತ್ ಜೀವವೆಂಬ ಗಾಳಿ ಹೋಗಲೊಡನೆ ಕಡಗೂರ್ಪ ಮಡದಿ ಮುಟ್ಟಲಮ್ಮಳು. ಒಡಲನುರಿಕೊಂಬುದು, ಒಡವೆಯನರಸುಕೊಂಬ, ಕಡಗೂರ್ಪ ಮಡದಿಯ ಮತ್ತೊಬ್ಬ ಚಿನ್ನಿಗಕೊಂಬ. ಹುರುಳಿಲ್ಲದ ಬಾಳುವೆ. ವಿದ್ಯೆ ಕಲಿಸದ ಗುರುವು ದೊರೆತಂತೆ, ಬುದ್ಧಿ ಹೇಳದ ತಂದೆಯೂ ಲಭಿಸಿರುತ್ತಾನೆ. ಅದಕ್ಕಾಗಿ ಯಾರನ್ನೂ ಹೆಚ್ಚು ಅವಲಂಬಿಸದೆ ನಮ್ಮನ್ನು ನಾವು ಉದ್ಧರಿಸಿಕೊಳ್ಳಬೇಕು. ನಮ್ಮನ್ನು ನಾವು ಸುಧಾರಿಸಿಕೊಳ್ಳಬೇಕು. ಆನೆಯು ಕೆಸರೊಳಗೆ ಸಿಕ್ಕುಬಿದ್ದಾಗ ತಾನೇ ತನ್ನಯ ಭುಜಬಲದಿಂದ ಮೇಲೇಳುವುದಲ್ಲದೆ ಅದನ್ನು ಮೇಲೆತ್ತುವ ಶಕ್ತಿವಂತರು ಯಾರಿರುತ್ತಾರೆ? ಅದಕ್ಕಾಗಿ ಆನೆಯ ಬಾಳುವೆಯನ್ನು ನಾವು ಬಾಳಬೇಕು.

ಬಸವಣ್ಣನವರ ಅರಿವು–ಆಚಾರ–ಅನುಭಾವದ ಮತ್ತೊಂದು ಸಂದೇಶವೆಂದರೆ ಪರಮಾತ್ಮನನ್ನು ಪೂರ್ಣವಾಗಿ ನಂಬಬೇಕು. ನಂಬದೆ ನೆಚ್ಚದೆ ಬರಿದೆ ಕರೆದಡೆ ಕೊಂಬ ಮೆಟ್ಟಿ ಕೂಗೆಂದು ದೂರ ಸರಿಯುತ್ತಾನೆ. ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲ ಎಂದು ನನ್ನ ಯೋಗಕ್ಷೇಮ ನಿಮ್ಮದಯ್ಯಾ, ಎನ್ನ ಹಾನಿವೃದ್ಧಿ ನಿಮ್ಮದಯ್ಯಾ ಎಂದು ನಮ್ಮ ಸಂಪೂರ್ಣ ರಕ್ಷಣೆಯ ಹೊಣೆಯನ್ನು ಪರಮಾತ್ಮನ ಮೇಲೆ ಹಾಕಿದಾಗ ಆಡಿ ಬರುವ ಕೂಡಿಗೆ ತಾಯಿಯೇ ಅದರ ಹೊಟ್ಟೆ ತೆಳ್ಳಗಾಗಿರುವುದನ್ನು ಗಮನಿಸಿ ಪ್ರೀತಿಯಿಂದ ಉಣಿಸಿ ಸಲಹುವಂತೆ ಪರಮಾತ್ಮನು ನಮ್ಮನ್ನು ಸಾಕುತ್ತಾನೆ.

ಬಸವಣ್ಣನವರ ಜೀವನದಿಂದ ನಮಗೆ ದೊರೆಯುವ ಮತ್ತೊಂದು ಮಾರ್ಗದರ್ಶನವೆಂದರೆ ಬಾರದು ಬಪ್ಪದು ಮತ್ತು ಬಪ್ಪುದು ತಪ್ಪದು. ನಾವೆಷ್ಟೇ ಪ್ರಯತ್ನ ಮಾಡಿದರೂ ಅದು ಆಗುವ ಕಾಲಕ್ಕೆ ಆಗುತ್ತದೆಯೇ ಹೊರತು ಆಗದಿರುವ ಸನ್ನಿವೇಶದಲ್ಲಿ ನಾವು ಕಾಲು ಮೇಲು ಮಾಡಿದರೂ ಅದು ಆಗುವುದಿಲ್ಲ.

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು
ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯ
ನೆರೆಯದ ವಸ್ತು, ನೆರೆವುದು ನೋಡಯ್ಯ
ಅರಸು ಪರಿವಾರ ಕೈವಾರ ನೋಡಯ್ಯ
ಪರಮನಿರಂಜನನು ತಾ ಮರೆದ ಕಾಲಕ್ಕೆ
ತುಂಬಿದ ಹರವಿಯ ಕಲ್ಲು ಕೊಂಡಂತೆ ಕೂಡಲಸಂಗಮದೇವಾ!

ಅದಕ್ಕಾಗಿ ನಾವು ಬೇಡಿಕೊಳ್ಳಬೇಕಾದುದು ಪರಮಾತ್ಮನನ್ನು, ನಾವು ಪಡೆದುಕೊಳ್ಳಬೇಕಾದುದು ಪರಮಾತ್ಮನಿಂದ. ಪ್ರತಿ ನಕ್ಷತ್ರಕ್ಕೂ ಬಾಯಿ ತೆರೆದರೆ ಸಿಂಪು ಅಮೂಲ್ಯವಾದ ಮುತ್ತನ್ನು ಎಲ್ಲಿ ಪಡೆಯುತ್ತದೆ? ಈ ಬಗೆಗಿನ ಬಸವಣ್ಣನವರ ವಚನವೆಂದರೆ:

ಮುನ್ನೂರಾ ಅರವತ್ತು ನಕ್ಷತ್ರಕ್ಕೆ ಬಾಯಿ ತೆರೆದುಕೊಂಡಿಪ್ಪುದೇ ಸಿಂಪು?
ಅದು ಸ್ವಾತಿ ನಕ್ಷತ್ರಕ್ಕಲ್ಲದೆ ಬಾಯಿ ತೆರೆಯದು
ಎಲ್ಲವಕ್ಕೆ ಬಾಯಿ ತೆರೆದರೆ ತಾನೆಲ್ಲಿಯ ಮುತ್ತಪ್ಪುದು?
ಪರಮಂಗಲ್ಲದೆ ಹರುಷತಿಕೆಯಿಲ್ಲವೆಂದು ಕರಣಾದಿಗುಣಗಳ ಮರೆದರು
ನಮ್ಮ ಶರಣರು.

ಕೇಳಿದರೆ ಪರಮ ಧನಿಕರಿಗೆ ಮಾತ್ರ ಕೇಳಬೇಕು. ಪರಮಶಕ್ತರಿಗೆ ಮಾತ್ರ ಕೇಳಬೇಕು. ಅವರಿವರನ್ನು ಕೇಳಿದರೆ ತಮಗೇನೇ ಸಾಲದವರು ನಮಗೇನು ಕೊಟ್ಟಾರು! ಅಲ್ಲಮಪ್ರಭುಗಳು ಅಭಿಪ್ರಾಯಪಟ್ಟಂತೆ:

"ಊರಕ್ಕಿ, ಊರೆಣ್ಣೆ ಉಣ್ಣುವ ಮಾರಿಕವ್ವ ತಾಯಿ ಬಾರೇ!
ಕುಮಾರನ ತಲೆ ಕಾಯಿ ಬಾರೇ"

ಎಂದು ಮಾರಿ-ಮಸಣಿ ಕ್ಷುಲ್ಲಕ ದೇವರಿಗೆ ಬೇಡಿಕೊಂಡರೆ ಅವೇ ತಿರಿದುಂಬ, ಹಿಡಿದುಂಬ ಪರಿಸ್ಥಿತಿಯಲ್ಲಿರುವಾಗ ನಮ್ಮನ್ನೇನು ಕಾಪಾಡಿಯಾವು! ಅದಕ್ಕಾಗಿಯೇ ನಮ್ಮ ಗರತಿಯೂ ಕೂಡ ಬಸವಾದಿ ಶಿವಶರಣರ ವಿಚಾರಧಾರೆಯಿಂದ ಪ್ರಭಾವಿತಳಾಗಿ ಬೇಡಿದರೆ ಪರ್ವತದ ಮಲ್ಲಯ್ಯನನ್ನೇ ಬೇಡಿಕೊಳ್ಳಬೇಕೆಂದು ಈ ತ್ರಿಪದಿಯನ್ನು ರಚಿಸಿದ್ದಾಳೆ.

ಮಂದೇನು ಕೊಟ್ಟೀತು? ಮನವೇನು ತಣಿದೀತು?
ಮುಂಜಾನದಾನ ಮಲ್ಲಯ್ಯ ಕೊಟ್ಟರ,
ಮನೆ ತುಂಬಿ ನನ್ನ ಮನತುಂಬಿ.

ಬಸವಣ್ಣನವರ ಮತ್ತೊಂದು ಅರಿವು-ಆಚಾರ-ಅನುಭಾವವೆಂದರೆ "ಮರ್ತ್ಯವೆಂಬುದು ಕರ್ತಾರನ ಕಮ್ಮಟ" ಮಾನವ ಜನ್ಮ ಹೀನವಾದುದಲ್ಲ. ಕೇವಲ ದೇಹವೇ ತಾನೆಂದು ಭಾವಿಸಿದಾಗ ಅದು ಮೊಲನಿಂದ ಕನಿಷ್ಠರಾಗಬಹುದು. ಆದರೆ ದೇಹದಲ್ಲಿ ಆತ್ಮನೆಂಬ ಪರಮಾತ್ಮನಿದ್ದಾನೆಯೆಂದು ಭಾವಿಸಿದರೆ ಈ ಜನ್ಮಕ್ಕಿಂತ ಉತ್ಕೃಷ್ಟವಾದ ಜನ್ಮ ಮತ್ತೊಂದು ಇಲ್ಲ. ಕೂಡಲಸಂಗಮ ದೇವನನ್ನು ಒಲಿಸಲಿಕ್ಕೆ ಬಂದ ಕಾಯವಿದು. ಅದರ ರಚನೆಯನ್ನು ನೋಡಿದರೆ ನಮಗೇನೇ ಆಶ್ಚರ್ಯವಾಗುತ್ತದೆ. ದೇವರು ಎಂತಹ ಜಾಣ್ಮೆಯಿಂದ ಏನನ್ನೂ ಅಂಟಿಸಿಕೊಳ್ಳಲಾರದ ನಾಲಗೆಯಂತಹ ವಿಶಿಷ್ಟ ಚರ್ಮವನ್ನು ಸೃಷ್ಟಿಸಿದ್ದಾನೆ. ಒಂದು ವೇಳೆ ಅಂಗೈ ಚರ್ಮವೇ ನಾಲಗೆಗೆ ಇದ್ದಿದ್ದರೆ ಉಂಡ ಸಲಕ್ಕೊಮ್ಮೆ ಅದನ್ನು ಸಬಕಾರದಿಂದ ತೊಳೆಯಬೇಕಾಗುತ್ತಿತ್ತು. ಮಾನವನ ಪ್ರತಿಯೊಂದು ಅಂಗವೂ ಲಕ್ಷಾನುಗಟ್ಟಲೆ ಬೆಲೆ ಬಾಳುವಂಥವುಗಳಾಗಿವೆ. "ಮಾನವ ಜನ್ಮ ದೊಡ್ಡದು, ಇದನು ಹಾಳು ಮಾಡಲು ಬೇಡಿ ಹುಚ್ಚಪ್ಪಗಳಿರಾ!" ಎಂದು ದಾಸವರೇಣ್ಯ ಪುರಂದರದಾಸರು ಬಹಳ ಕಳಕಳಿಯಿಂದ ಕೇಳಿಕೊಂಡರೆ; ಅನುಭಾವಿ ಕವಿ ಕಡಕೋಳ ಮಡಿವಾಳಪ್ಪನವರು "ಎಂಥ ಮಾನವ ಜನ್ಮ ಇದು ಮಾಯಿಗೆ ಸೋತಾದ, ಅರುವಿನ ಜನ್ಮ ತಾನೇ ಇದ್ದು ತನ್ನನೆ ಮರೆತಾದ" ಎಂದು ಖೇದಪಟ್ಟಿರುವರು.

ಆದರೆ ಬಸವಣ್ಣನವರು "ಇಂದ್ರಿಯಗಳ ನಿಗ್ರಹಿಸಿದರೆ ಹೊಂದುವವು ದೋಷಂಗಳು, ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು ರತಿಸುಖ ಭೋಗೋಪಭೋಗವ ಬಿಟ್ಟರೇ ಸಿರಿಯಾಳ-ಚಂಗಳೆಯರು" ಎಂದು ಪ್ರಶ್ನೆ ಮಾಡಿ ಈ ಸಂಸಾರವನ್ನು ಸವೆಯೆ ಬಳಸಿದರು. ಅವರೇ ಪ್ರತಿಪಾದಿಸಿದಂತೆ "ಹುಳಿವಿಡಿದು ಘೃತವ ಕಾಣುವಂತೆ, ಅಕ್ಷರವಿಡಿದು ವಿದ್ಯೆಯನರಿವಂತೆ, ಸತಿವಿಡಿದು ನಿರ್ವಾಣ ಸತಿಯನ್ನು" ಕೂಡಬೇಕು. ಇದಕ್ಕೆ ಬೆಂಬಲಾರ್ಥವೆಂಬಂತೆ, ಶೂನ್ಯಪೀಠಾಧಿಪತಿಗಳಾದ ಅಲ್ಲಮ ಪ್ರಭುಗಳು ಅಪ್ಪಣೆ ತೊಡಿಸಿದ್ದಾರೆ. "ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ; ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ; ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ; ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರಾ!" ಅತ್ಯಾಶೆ ದುರಾಶೆ ಇಲ್ಲದುದು ಯಾವುದೂ ತ್ಯಾಜ್ಯವಲ್ಲ. ಇದು ಮಹಾನುಭಾವಿ ಬಸವಣ್ಣನವರ ಅರಿವು-ಆಚಾರ-ಅನುಭಾವ.

❑

ಬಸವಣ್ಣನವರು ಮತ್ತು ರಾಜತ್ವ

ಡಾ. ಜಿ.ಎಸ್. ಶಿವರುದ್ರಪ್ಪ

ಬಸವಣ್ಣನವರನ್ನು ಹನ್ನೆರಡನೆಯ ಶತಮಾನದ ಸಾಮಾಜಿಕ-ಧಾರ್ಮಿಕ ಆಂದೋಲನ ವೊಂದರ ಮುಂಚೂಣಿಯಲ್ಲಿದ್ದವರೆಂದು ಪರಿಗಣಿಸಲಾಗಿದೆ. ಸಾಮಾಜಿಕವಾಗಿ ಬಸವಣ್ಣನವರು, ಅಂದಿನ ಸಮಾಜದ ಪ್ರತಿಷ್ಠಿತ ಸ್ತರದಿಂದ ಬಂದವರು ಮತ್ತು ಸಾಮಾಜಿಕವಾಗಿಯೂ ಅಂದಿನ ಆಳುವ ವರ್ಗದ ಪ್ರತಿಷ್ಠಿತ ಸ್ಥಾನದಲ್ಲಿದ್ದವರು ಅಂದರೆ ಬ್ರಾಹ್ಮಣ ಮತ್ತು ರಾಜಷಾಹಿ – ಈ ಎರಡೂ ಲಕ್ಷಣಗಳನ್ನು ಮೈಗೂಡಿಸಿಕೊಂಡ ವ್ಯಕ್ತಿಯೊಬ್ಬ ಅಂದಿನ ಸಾಮಾಜಿಕ-ಧಾರ್ಮಿಕ ಆಂದೋಳನದ ಮುಂದಾಳುವಾಗಿ ತನ್ನನ್ನು ತೊಡಗಿಸಿಕೊಂಡದ್ದು ನಿಜವಾಗಿಯೂ ಕಾಲಧರ್ಮದ ಆಶ್ಚರ್ಯಗಳಲ್ಲಿ ಒಂದು. ಯಾಕೆಂದರೆ ಬಸವಣ್ಣನವರು ತಮ್ಮನ್ನು ತೊಡಗಿಸಿಕೊಂಡ ಚಳವಳಿ, ಅಂದಿನ ಸಮಾಜದ ಕೆಳಗಿನ ಸ್ತರದ ಬಹುಸಂಖ್ಯೆಯ ಜನಸಾಮಾನ್ಯರನ್ನು ಒಳಗೊಂಡದ್ದು. ಸಾಮಾನ್ಯವಾಗಿ ಪುರೋಹಿತಷಾಹಿ ಹಾಗೂ ರಾಜಷಾಹಿ, ಇವು ಸದಾ ಚಾರಿತ್ರಿಕವಾಗಿ ಸಾಮಾನ್ಯವಾಗಿ ಪುರೋಹಿತಷಾಹಿ ಹಾಗೂ ರಾಜಷಾಹಿ, ಇವು ಸದಾ ಚಾರಿತ್ರಿಕವಾಗಿ ಜನಸಾಮಾನ್ಯರ ಸ್ತರದಿಂದ ಮೇಲಿನ ನೆಲೆಗೆ ಸೇರಿದವುಗಳಾಗಿದ್ದು, ಈ ಆಳಿಸಿಕೊಳ್ಳುವ ವರ್ಗದವರನ್ನು ಹೆದರಿಸಿ, ಸುಲಿಗೆ ಮಾಡಿ, ಹತೋಟಿಯಲ್ಲಿಟ್ಟುಕೊಂಡವುಗಳು. ಆದರೆ ಪುರೋಹಿತಷಾಹಿ ಮತ್ತು ರಾಜಷಾಹಿಯ ಒಂದು ಭಾಗವಾಗಿದ್ದ ಬಸವಣ್ಣನವರು, ಕೆಳಗಿನ ಸ್ತರದ ಜನಸಾಮಾನ್ಯರೊಂದಿಗೆ ತಮ್ಮನ್ನು ಸಮೀಕರಿಸಿಕೊಂಡು, ಹೊಸತೊಂದು ಸಾಮಾಜಿಕ-ಧಾರ್ಮಿಕ ಆಂದೋಳನದ ಪ್ರವರ್ತಕ ರಾದದ್ದು ಅತ್ಯಂತ ಅಪೂರ್ವವಾದ ಸಂಗತಿಯಾಗಿದೆ.

ಹೀಗೆ ಮಾಡಬೇಕಾದರೆ ವ್ಯಕ್ತಿ ಒಂದನ್ನು ನಿರಾಕರಿಸದೆ ಮತ್ತೊಂದರೊಂದಿಗೆ ಬೆರೆಯಲು ಬರುವುದಿಲ್ಲ. ಬಸವಣ್ಣನವರು ಮಾಡಿದ ಮೊದಲ ಕೆಲಸವೆಂದರೆ ಅವರು ತಮ್ಮನ್ನು ತಾವು ಬ್ರಾಹ್ಮಣ್ಯದಿಂದ ಪಾರುಮಾಡಿಕೊಂಡಿದ್ದು. ಇದಂತೂ ಅವರು ತಮ್ಮ ಎಂಟನೆಯ ವರ್ಷದಲ್ಲಿ ಉಪನಯನದ ಸಂದರ್ಭದಲ್ಲಿ ಜನಿವಾರವನ್ನು ಹಾಕಿಕೊಂಡು ತಾವೂ ಬ್ರಾಹ್ಮಣರಾಗಲು ನಿರಾಕರಿಸಿದರೆಂಬ ಸಂಗತಿಯಿಂದ ಸ್ಪಷ್ಟವಾಗುತ್ತದೆ. ಅಂದರೆ ಯಾವ ಒಂದು ಸಂಸ್ಕಾರದ ಮೂಲಕ, ತಾವು ಉಳಿದೆಲ್ಲರಿಗಿಂತ ಶ್ರೇಷ್ಠರೆಂದು ಭಾವಿಸಿಕೊಂಡು ಬದುಕಬಹುದಾಗಿತ್ತೋ

ಅಂಥ ಒಂದು ನಿಲುವನ್ನು ತಿರಸ್ಕರಿಸುವ ಕ್ರಾಂತಿಕಾರಕ ಕ್ರಿಯೆಯ ಮೂಲಕ, ಮುಂದೆ ತಾವು ಸಾಮಾನ್ಯ ಜನತೆಯೊಂದಿಗೆ ಬೆರೆತು ಆಂದೋಳನವೊಂದರ ನೇತಾರನಾಗಬಹುದೆಂಬ ಯಾವುದೇ ಪೂರ್ವ ಕಲ್ಪನೆಯೂ ಇಲ್ಲದ ಕಾಲದಲ್ಲಿ, ಬ್ರಾಹ್ಮಣ್ಯವನ್ನು ತಿರಸ್ಕರಿಸಿದರು; ಮುಂದೆ ಅವರು ವೀರಶೈವ ಧರ್ಮವನ್ನು ಒಪ್ಪಿಕೊಂಡು, 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲರನು ಒಂದೇ ಎಂಬೆ' ಎಂಬ ಒಂದು ಮನಃಸ್ಥಿತಿಯನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಿದರು. ಸಮಾಜದ ವಿವಿಧ ಸ್ತರಗಳ ಜನಗಳನ್ನು ಒಳಗೊಂಡ ಆಂದೋಳನದ ಕೇಂದ್ರದಲ್ಲಿ ನಿಂತು, ಹೆಜ್ಜೆ–ಹೆಜ್ಜೆಗೂ ತಾನು ಉತ್ತಮಕುಲದಲ್ಲಿ ಹುಟ್ಟಿದವನೆಂಬ ಹಳೆಯ ನೆನಪನ್ನು ಅಳಿಸಿ ಹಾಕುವ ನಿರಂತರವಾದ ಹೋರಾಟದಲ್ಲಿ ತೊಡಗಿದರು.[೧] ಸಮಾಜದ ಕನಿಷ್ಟ ಘಟಕವಾದ ಹೊಲೆಯರ ಹೊಟ್ಟೆಯಲ್ಲಿ, ತಾವು ಹಾದರಕ್ಕೆ ಹುಟ್ಟಿದವರೆಂದುಕೊಳ್ಳುವ ನೈಚ್ಯಾನು ಸಂಧಾನದ ನಿಲುವುಗಳನ್ನು ತಾಳುತ್ತಾ, ತಮ್ಮನ್ನು ಬೆಂಬಿಡದ ಭೂತದಂತೆ ಕಾಡುವ ಬ್ರಾಹ್ಮಣ್ಯದ ಬೇರನ್ನು ಮನಸ್ಸಿನಿಂದ ಕೀಳಲು ಪ್ರಯತ್ನಿಸಿದರು.[೨] ಹೀಗೆ ಹುಟ್ಟಿನೊಡನೆ ಬಂದ ಬ್ರಾಹ್ಮಣ್ಯದ ಸಂಸ್ಕಾರವನ್ನು ಮೂಲೋತ್ಪಾಟನ ಮಾಡಿ ಕೊಳ್ಳುತ್ತ, ಸಮಾಜದ ಸಾಮಾನ್ಯ ವರ್ಗದವರೊಂದಿಗೆ, ಬಸವಣ್ಣನವರು ತಮ್ಮನ್ನು ಸಮೀಕರಿಸಿಕೊಂಡು ಬದುಕಿದ್ದು, ಅತ್ಯಂತ ಮಹತ್ವದ ಸಂಗತಿಯಾಗಿದೆ.

ಆದರೆ, ಅವರು ತಮ್ಮ ಬ್ರಾಹ್ಮಣ್ಯವನ್ನು ನಿರಾಕರಿಸಿದರೂ, ಅವರು ಅಂದಿನ ರಾಜಷಾಹಿಯೊಂದಿಗೆ ಹೊಂದಿಕೊಂಡು ಬದುಕಬೇಕಾಗಿ ಬಂದದ್ದರಿಂದ, ಬೇರೆ ಬಗೆಯ ಬಿಕ್ಕಟ್ಟುಗಳನ್ನು ಎದುರಿಸಬೇಕಾಯಿತೆಂದು ತೋರುತ್ತದೆ. ಮೊದಲು ಸಾಮಂತನಾಗಿದ್ದು, ಆನಂತರ ಚಕ್ರವರ್ತಿಯಾದ ಬಿಜ್ಜಳನಲ್ಲಿ ಅವರು ದಂಡಾಧಿಕಾರಿಯಾಗಿ ಉದ್ಯೋಗದಲ್ಲಿದ್ದವರು. ಪುರೋಹಿತಷಾಹಿಯನ್ನು ಧಿಕ್ಕರಿಸಿದ ಬಸವಣ್ಣನವರು, ವೀರಶೈವವೆಂಬ ಧರ್ಮವನ್ನೇನೋ ಒಪ್ಪಿಕೊಂಡರು; ಆದರೆ ಬ್ರಾಹ್ಮಣ್ಯವನ್ನು ನಿರಾಕರಿಸಿದ ರೀತಿಯಲ್ಲಿ ರಾಜಷಾಹಿಯನ್ನೂ ಧಿಕ್ಕರಿಸಿ, ಬೇರೊಂದು ಸ್ವತಂತ್ರ ಉದ್ಯೋಗದಲ್ಲಿ ನಿಂತು ಅವರು ಅಂದಿನ ಜನತೆಯ ಆಂದೋಳನದಲ್ಲಿ ಪಾಲುಗೊಳ್ಳಬಹುದಾಗಿತ್ತು ಎಂದು ಈ ದಿನ ನಾವು ನಿರೀಕ್ಷಿಸುವುದಾಗಲಿ, ಭಾವಿಸುವುದಾಗಲಿ ಸರಿಯಾಗುವುದಿಲ್ಲ. ಯಾಕೆಂದರೆ ರಾಜತ್ವದ ಬಗೆಗೆ ಬಸವಣ್ಣನವರ ನಿಲುವುಗಳೇನೇ ಇರಲಿ, ಅವರ ಆಂದೋಳನ ಯಶಸ್ವಿಯಾದದ್ದಕ್ಕೆ ಅವರು ಅಂದಿನ ರಾಜತ್ವದ ಒಂದು ಅಂಗವಾಗಿ ಪಡೆದುಕೊಂಡಿದ್ದ ಅಧಿಕಾರಿಕ ಸ್ಥಾನ–ಮಾನಗಳೂ ಬಹುಮುಖ್ಯವಾದ ಕಾರಣಗಳಾಗಿವೆ ಎಂಬುದನ್ನು ತಳ್ಳಿಹಾಕಲು ಬರುವುದಿಲ್ಲ. ಯಾಕೆಂದರೆ ಅಂದಿನ ಆಂದೋಳನಕ್ಕೆ, ಅದರ ಸಂಘಟನೆಗೆ ಮತ್ತು ಅದರ ನಿರ್ವಹಣೆಗೆ ಸಾಕಷ್ಟು ಜನಬಲ ಮತ್ತು ಧನಬಲ ಅಗತ್ಯವಾಗಿದ್ದು, ಬಸವಣ್ಣನವರ ಈ 'ಅಧಿಕಾರ'ದಿಂದಲೂ ಆ ಬಗೆಯ ನೆರವು ಸಿಕ್ಕಿರಬೇಕು. ಹೀಗಲ್ಲದೆ, ಇದಾವುದೂ ಇಲ್ಲದ ಸರ್ವಸಂಗ ಪರಿತ್ಯಾಗಿಯೊಬ್ಬ ಇಂಥ ಸಂಘಟನೆಗಳನ್ನು ಮಾಡುವುದು ಸಾಧ್ಯವಿಲ್ಲ; ಮಿಗಿಲಾಗಿ ಸರ್ವಸಂಗ ಪರಿತ್ಯಾಗಿಗಳಿಗೆ ಇದಾವುದೂ ಬೇಕಾಗುವುದಿಲ್ಲ. ಅದೃಷ್ಟವಶಾತ್ ಬಸವಣ್ಣನವರು ಇಂಥ ಸರ್ವಸಂಗ ಪರಿತ್ಯಾಗಿ ಅಲ್ಲ.

ಹೀಗೆ ರಾಜತ್ವದೊಂದಿಗೆ ಸಂಬಂಧವಿರಿಸಿಕೊಂಡವನೊಬ್ಬನನ್ನು, ರಾಜತ್ವದಿಂದ ಶೋಷಣೆಗೆ ಒಳಗಾಗುತ್ತ ಬಂದ ಜನಸಮೂಹ ತನ್ನ ನಾಯಕನೆಂದು ಒಪ್ಪಿಕೊಂಡದ್ದು ಹೇಗೆ?

ಅದರಲ್ಲೂ ಸದಾ ಸಮಾನತೆಯ ಮಾತನಾಡುತ್ತಾ, ಈ ಲೋಕದ ಭೋಗ–ವೈಭವಗಳ ಬಗ್ಗೆ ವಿರಕ್ತಿಯ ಮಾತನಾಡುತ್ತಾ ಇದ್ದ ವ್ಯಕ್ತಿಯೊಬ್ಬ, ತಮ್ಮ ಎದುರಿಗೇ ರಾಜ್ಯದ ದೊಡ್ಡ ಅಧಿಕಾರವನ್ನು ನಿರ್ವಹಿಸುತ್ತ, ರಾಜನೊಂದಿಗೆ ಅರಮನೆಯೊಳಗೆ ವ್ಯವಹರಿಸುತ್ತಿರುವುದರ ವೈಪರೀತ್ಯವನ್ನು, ಅವರನ್ನು ನಾಯಕನೆಂದು ಒಪ್ಪಿಕೊಂಡ ಜನ ಹೇಗೆ ತಾಳಿಕೊಂಡರು? ಹೀಗೆ ಜನ ಅವರನ್ನು ಒಪ್ಪಿಕೊಂಡದ್ದಕ್ಕೆ ಕಾರಣ, ಬಸವಣ್ಣನವರ ಮುಚ್ಚು ಮರೆಯಿಲ್ಲದ ವ್ಯಕ್ತಿತ್ವದ ನಿಲುವುಗಳೇ ಎಂದು ಹೇಳಬಹುದು. ಅವರು 'ರಾಜ'ನೊಂದಿಗೆ, 'ರಾಜತ್ವ'ದೊಂದಿಗೆ ತಮಗೆ ಇರುವ ಸಂಬಂಧಗಳನ್ನೂ ತಮ್ಮ ನಿಲುವುಗಳನ್ನೂ ಅತ್ಯಂತ ಸ್ಪಷ್ಟವಾಗಿ ಬಿಚ್ಚಿಡುತ್ತಾ, ತಮ್ಮ ಸುತ್ತಣ ಜನ ಆಗಾಗ ಸಂಶಯಪಟ್ಟರೂ, ಒಟ್ಟಾರೆಯಾಗಿ ತಮ್ಮನ್ನು 'ಇವನಾರವ ಇವನಾರವ' ಎಂದು ಕೊಳ್ಳದೆ 'ಇವ ನಮ್ಮವ ಇವ ನಮ್ಮವ'ನೆಂದು ಒಪ್ಪಿಕೊಳ್ಳುವಂತೆ ನಡೆದುಕೊಂಡರು.

ಬಸವ ಬಿಜ್ಜಳರ ಸಂಬಂಧವನ್ನು ಕುರಿತು, ಮುಂದಿನ ಕಾವ್ಯಗಳು ಅವರಿಬ್ಬರನ್ನು ಬಹುಮಟ್ಟಿಗೆ ನಾಯಕ–ಪ್ರತಿನಾಯಕರೆಂಬಂತೆ ಚಿತ್ರಿಸಿದರೂ, ಎಷ್ಟೋ ವೇಳೆ ಬಿಜ್ಜಳನಿಗಿಂತ ಬಸವಣ್ಣನೇ 'ರಾಜ'ನೆಂಬಂತೆ ಕಾಣಿಸಿದರೂ, ಮೂಲತಃ ಅವರಿಬ್ಬರ ಸಂಬಂಧ ಒಂದು ಬಗೆಯ ವೈಯಕ್ತಿಕ ಒಡಂಬಡಿಕೆಯಾಗೇ ಇತ್ತೆಂದು ತೋರುತ್ತದೆ. ಅವರಿಬ್ಬರ ಸಂಬಂಧಗಳನ್ನು ಕೆಡಿಸಲು 'ಕೊಂಡೆಯರು' ಮತ್ತು ಇತರ ಉಚ್ಚವರ್ಗದವರು ಹೊಂಚುತ್ತಿದ್ದರೆಂಬುದು ಸಹಜವಾದ ಸಂಗತಿಯೇ. ಬಸವಣ್ಣನವರ ಸಾಮಾಜಿಕ–ಧಾರ್ಮಿಕ ನಿಲುವುಗಳಿಗೂ, ಬಿಜ್ಜಳನ ರಾಜಕೀಯ–ಧಾರ್ಮಿಕ ನಿಲುವುಗಳಿಗೂ ಘರ್ಷಣೆ ಬಂದದ್ದು ವಿರಳವೆಂದೇ ಹೇಳಬೇಕು. ಜತೆಗೆ ಅಧಿಕಾರದಲ್ಲಿದ್ದೂ, ಅದರ ಬಗ್ಗೆ ಸಾಕಷ್ಟು ಎಚ್ಚರವಾಗಿ ಹಾಗೂ ಅತ್ಯಂತ ಪ್ರಾಮಾಣಿಕನಾಗಿದ್ದ ಬಸವಣ್ಣನವರಂಥವರ ಬಗೆಗೆ, ಪ್ರಭುವಾದವನು ದುಡುಕಿ ನಡೆದು ಕೊಳ್ಳುವುದಾಗಲೀ, ಅಥವಾ ಆತನ ಸಾಮಾಜಿಕ–ಧಾರ್ಮಿಕ ನಿಲುವುಗಳನ್ನು ಪ್ರಶ್ನಿಸುವುದಾಗಲೀ, ಬಹುಶಃ ಸಾಧ್ಯವಾಗಲಿಲ್ಲವೆಂದು ಊಹಿಸಬಹುದು. ಈ ಬಗ್ಗೆ ಕಾವ್ಯಗಳು ಹೇಳುವ ಸಂಗತಿ ಗಳನ್ನು ಬದಿಗೆ ಇರಿಸಿ, ಬಸವಣ್ಣನವರ ವಚನಗಳನ್ನು ನಾವು ಅವಲಂಬಿಸುವುದು ಒಳ್ಳೆಯದು.

ಬಸವಣ್ಣನವರು ಮೂಲತಃ ಅನುಭಾವಿಕ ನಿಲುವಿನ ವ್ಯಕ್ತಿಯಾದದ್ದರಿಂದ, ಅವರ ಪಾಲಿಗೆ ಈ ಅಧಿಕಾರ ಇತ್ಯಾದಿಗಳ ಬಗ್ಗೆ ಅಂತಹ ಭ್ರಮೆಗಳೇನೂ ಇರಲಿಲ್ಲ. ಲೋಕದ ಭೋಗ–ವೈಭವಗಳ ಬಗೆಗೆ ವಿರಕ್ತವಾಗುವಂತಹ ಚೇತನಕ್ಕೆ, ಇವು ಯಾವುವೂ ದೊಡ್ಡವೆಂದು ತೋರುವುದಿಲ್ಲ; ಅವರಿಗೆ ಲೋಕದ ಭೋಗ ವೈಭವಗಳಿಗಿಂತ ಸತ್ಯದ ನಿಲವನ್ನರಿಯುವುದು ಮುಖ್ಯವಾಗಿತ್ತು.

ಆನೆಯನೇಜಿಕೊಂಡು ಹೋದಿರೆ ನೀವು
ಕುದುರೆಯನೇಜಿಕೊಂಡು ಹೋದಿರೆ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ ಅಣ್ಣಾ
ಸತ್ಯದ ನಿಲವನಜಿಯದೆ ಹೋದಿರಲ್ಲಾ......

(ವ.೬೩೭ ಪು. ೨೫೭)

ಎಂಬ ಮಾತಿನಲ್ಲಿ, ಈ ಲೋಕದ ಭೋಗ–ಭಾಗ್ಯಗಳ ಬೆನ್ನು ಹತ್ತಿ ಸತ್ಯದ ನಿಲವನ್ನರಿಯದೆ ವ್ಯರ್ಥವಾಗಿ ಹೋದ ಪದವಿಗಳ ಹಾಗೂ ಅಧಿಕಾರಗಳ ಬಗ್ಗೆ ತಾಳಿದ

ಕನಿಕರ ಅಭಿವ್ಯಕ್ತವಾಗಿದೆ. ಜತೆಗೆ ರಾಜರ ದರ್ಪ, ಮುನಿಸು ಇತ್ಯಾದಿಗಳ ನಡುವೆ ಕೆಲಸ ಮಾಡುವುದು ಎಂತಹ ಕಷ್ಟದ ಪರಿಸ್ಥಿತಿ ಎಂಬುದನ್ನೂ ಅವರು ಬಲ್ಲವರಾಗಿದ್ದರು. "ಅರಸು ಮುನಿದಡೆ ನಾಡೊಳಗಿರಬಾರದಯ್ಯಾ" (ವ: ೮೨೪:ಪು.೩೩೫) ಎಂಬ ಮಾತಿನಲ್ಲಿ, ರಾಜನ ಆಗ್ರಹಕ್ಕೊಳಗಾದರೆ ಅಂಥವನಿಗೆ ಉಳಿಗಾಲವೆ ಇಲ್ಲ ಎಂಬ ಕಟುಸತ್ಯವನ್ನರಿತವರಾಗಿದ್ದರು. ಇಂಥ ಪರಿಸ್ಥಿತಿಯಲ್ಲಿ ಅವರಿಗೆ ಬಹುಶಃ 'ರಾಜ', 'ರಾಜತ್ವ' ಇತ್ಯಾದಿಗಳ ಬಗ್ಗೆ ತಿರಸ್ಕಾರವೇ ಇದ್ದಂತೆ ತೋರುತ್ತದೆ. 'ರಾಜ' ಕೂಡ ಎಲ್ಲರ ಹಾಗೆ ಒಬ್ಬ ಮನುಷ್ಯ; ಅವನಿಗೆ ಬೆಲೆ ಬರುವುದು ಅವನ 'ರಾಜತ್ವ' ಅಥವಾ 'ರಾಜಪದವಿ'ಯಿಂದ. ಅವನೂ ಮೃತ್ಯುವಿಗೆ ಒಳಗಾಗುವ ಒಬ್ಬ ಮನುಷ್ಯ; ಇಂಥವನು ಸತ್ತರೆ, ಉಳಿದವರ ಶವಗಳಿಗೂ, ಇವನ ಶವಕ್ಕೂ ಏನು ವ್ಯತ್ಯಾಸ? ರಾಜನ 'ಶವ' ಎಂದರೆ ಅದಕ್ಕೆ ಅಂಥ ವಿಶೇಷವೇನೂ ಇಲ್ಲ;

ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ
ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ.

(ವ: ೧೫೮ : ಪು:೭೧)

ರಾಜನಾದವನ ಶವಕ್ಕೆ ಒಂದು ಮೊಲಕ್ಕಿರುವ ಬೆಲೆಯೂ ಇಲ್ಲ; ಅಂಥ ನಿಕೃಷ್ಟವಾದ ಪದಾರ್ಥ ಅದು. ಎಲ್ಲ ಅನುಭಾವಿಗಳಂತೆ 'ಮೃತ್ಯುತತ್ವ'ವನ್ನು ಕೇಂದ್ರದಲ್ಲಿರಿಸಿಕೊಂಡು ಲೋಕದ ಪದವಿ-ಐಶ್ವರ್ಯ ಇತ್ಯಾದಿಗಳನ್ನು ಒರೆಗೆ ಹಚ್ಚುವ ಬಸವಣ್ಣನವರಿಗೆ, ಅವರು ವಹಿಸಿಕೊಂಡ ಪದವಿ ಕೂಡಾ ನಿಕೃಷ್ಟವಾದದ್ದೆ. ಅವರು ಬಹಿರಂಗದಲ್ಲಿ ಯಾವನೋ ಒಬ್ಬ ಒಡೆಯನ ಸೇವೆಗೆ ನಿಂತಂತೆ ಕಾಣಿಸಿದರೂ, ಅಂತರಂಗದಲ್ಲಿ ಅವರ ಒಡೆಯರು ಬೇರೆಯೇ. "ಎನಗೆ ಒಡೆಯರುಂಟು ಕೂಡಲಸಂಗನ ಶರಣರು" (ವ : ೩೨೩ ಪು : ೧೨೯) ಎಂದು ಹೇಳುವುದರ ಮೂಲಕ, ಮಾನಸಿಕವಾಗಿ ತಮ್ಮ ನಿಷ್ಠೆ ಯಾರಿಗೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಾರೆ. ಅಷ್ಟೇ ಅಲ್ಲ.

ಅರಸನ ಮನೆಯಲ್ಲಿ ಅರಸಿಯಾಗಿಪ್ಪುದಜೆಂದ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ (ವ.೩೫೫ : ಪು: ೧೪೦)

ಎಂಬುದನ್ನು ಅವರು ಚೆನ್ನಾಗಿ ಬಲ್ಲರು. ಈ ನಿಲುವಿನ ಬಸವಣ್ಣನವರು ರಾಜತ್ವ, ಅಧಿಕಾರ, ಇತ್ಯಾದಿಗಳನ್ನು ಕುರಿತ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸುತ್ತ, ಸುತ್ತಣ ಸಾಮಾನ್ಯ ಜನತೆಯೊಂದಿಗೆ ತಮ್ಮನ್ನು ಸಮೀಕರಿಸಿಕೊಂಡು, ಅವರ ವಿಶ್ವಾಸ-ಗೌರವಗಳನ್ನು ಗಳಿಸಿಕೊಳ್ಳಲು ಸಾಧ್ಯವಾಯಿತೆಂದು ತೋರುತ್ತದೆ.

ಆದರೂ, ಅವರು ಬಿಜ್ಜಳನ ಸೇವೆಯಲ್ಲಿ ನಿಂತದ್ದನ್ನು ಕಂಡು, ಅವರ ನಿಲುವುಗಳನ್ನು ಕುರಿತು ಸಂದೇಹಿಸಿದ, ಪ್ರಶ್ನಿಸಿದ ಸಂದರ್ಭಗಳು ಇದ್ದೇ ಇದ್ದವು. ಹಾಗಿದ್ದುದು ತೀರಾ ಸಹಜವಾದುದ್ದು. ಹೀಗೆ ಸಂದೇಹಿಸಿದ ಹಾಗೂ ಪ್ರಶ್ನಿಸಿದ ಜನ, ಅವರ ಆಂದೋಲನದಾಚೆ ನಿಂತವರು ಮಾತ್ರವಲ್ಲ, ಅವರ ಆಪ್ತರೆ ಈ ಬಗ್ಗೆ ಪ್ರಶ್ನಿಸಿರಬಹುದು. 'ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು' (ವ : ೭೦೯ : ಪು ೨೮೩) ಎಂಬ ಮಾತಿನಲ್ಲಿ ಹೀಗೆ ಅವರನ್ನು ಕುರಿತು ಆಡಿಕೊಂಡವರಲ್ಲಿ ಅವರ ಆಪ್ತವರ್ಗಕ್ಕೆ ಸೇರಿದವರೇ ಇದ್ದರೆಂಬುದು ಸ್ಪಷ್ಟವಾಗಿದೆ. ಬಸವಣ್ಣನವರು, ಇಂಥ ಯಾವುದೇ ಪ್ರಶ್ನೆ-ಆಕ್ಷೇಪಣೆಗಳನ್ನು ತಳ್ಳಿಹಾಕದೇ ಉತ್ತರ ಕೊಟ್ಟಿರುವುದು ಅವರ ದೊಡ್ಡತನಕ್ಕೆ ಹಾಗೂ

ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ. ಬಸವಣ್ಣನವರಿಗೆ ಗೊತ್ತು ತಾವು ಸೇವೆ ಮಾಡುತ್ತಿದ್ದೇವೆ ಎಂದು. ಆದರೆ ಅವರು ಈ ಹಂತದಲ್ಲಿ

ನಾನು ಬೆವಹಾರವ ಮಾಡುವೆನಯ್ಯಾ
ಲಿಂಗಾರ್ಚನೆಗೆಂದು
ನಾನು ಪರ ಸೇವೆಯ ಮಾಡುವೆನಯ್ಯಾ
ಜಂಗಮದಾಸೋಹಕ್ಕೆಂದು *(ವ:೭೦೮:ಪು:೨೮೩)*

ಎಂದು ಉತ್ತರ ಕೊಡುತ್ತಾರೆ. ಲೌಕಿಕವಾಗಿ, ಒಬ್ಬ ಮನುಷ್ಯನಾಗಿ ಬದುಕುವುದಕ್ಕೆ ಯಾವುದಾದರೂ ಒಂದು ಉದ್ಯೋಗವನ್ನು ಅವಲಂಬಿಸುವುದು ತಪ್ಪೇನಲ್ಲ. ಆದರೆ ತಮ್ಮ ಈ ವ್ಯವಹಾರ ಹಾಗೂ ಪರಸೇವೆ, ಲಿಂಗಾರ್ಚನೆ ಮತ್ತು ಜಂಗಮ ದಾಸೋಹಕ್ಕೆ. ಈ ಎರಡೂ ಮೂಲತಃ ಆಧ್ಯಾತ್ಮಿಕವಾದ ಕ್ರಿಯೆಗಳು. ಇದು ತಮ್ಮ ಸ್ವಾರ್ಥಕ್ಕಾಗಿ ಅಥವಾ ಕೇವಲ ಉದರ ಪೋಷಣೆಯ ಏಕೈಕ ಉದ್ದೇಶಕ್ಕಾಗಿ ಅಲ್ಲ. ಈ ಅಭಿಪ್ರಾಯವನ್ನು ಇನ್ನಷ್ಟು ಸಮರ್ಥಿಸುತ್ತಾ–

ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ
ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿ–ಮಕ್ಕಳಿಗೆಂದು
ಕುದಿದೆನಾದೊಡೆ ಎನ್ನ ಮನಕೆ ಮನವೇ ಸಾಕ್ಷಿ

....

ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ
ಸಲೆ ಕೈ ಕೂಲಿಯ ಮಾಡಿಯಾದೆಡೆಯೂ
ನಿಮ್ಮ ನಿಲುವಿಂಗೆ ಕುದಿವೆನಲ್ಲದೆ, ಎನ್ನೊಡಲವಸರಕ್ಕೆ ಕುದಿದೆನಾದೊಡೆ
ತಲೆದಂಡ! ಕೂಡಲಸಂಗಮದೇವಾ. *(ವ:೭೦೯:ಪು:೨೮೩–೨೮೪)*

ಎಂದು ಉದ್ಘೋಷಿಸುತ್ತಾರೆ. ಈ ಉದ್ಘೋಷ ಅತ್ಯಂತ ಪ್ರಾಮಾಣಿಕನಾದ ಮನುಷ್ಯನೊಬ್ಬನ ಕಳಕಳಿಯನ್ನು ಅತ್ಯಂತ ತೀವ್ರವಾಗಿ ಪ್ರಕಟಿಸುತ್ತದೆ. ಇಂಥ ಮಾತನ್ನು, ಇಬ್ಬಂದಿತನದ ಬದುಕನ್ನು ನಡೆಸುವ ಮನುಷ್ಯ ಹೇಳಲಾರ. ತಮ್ಮ ಪದವಿ ಅಧಿಕಾರಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸುತ್ತಿರುವುದಾಗಿ ಯಾರಾದರೂ ತೋರಿಸಿ ಕೊಟ್ಟರೆ, ತಮ್ಮ ತಲೆಯನ್ನೇ ದಂಡವಾಗಿ ಒಪ್ಪಿಸುವುದಾಗಿ ಸಾರುವ ಈ ಮಾತು, ಅತ್ಯಂತ ಪ್ರಾಮಾಣಿಕವಾದ ಹಾಗೂ ದಿಟ್ಟತನದ ಮಾತಾಗಿದೆ.

ಇಂಥ ವ್ಯಕ್ತಿತ್ವವನ್ನು ಕುರಿತು ಇನ್ನೂ ಕೆಲವು ಆಪಾದನೆಯ ಮಾತುಗಳು ಬಂದಿರಬೇಕು. ಬಿಜ್ಜಳನ ಭಂಡಾರದ ಹಣವನ್ನು ಬಸವಣ್ಣನವರು ಬಳಸಿಕೊಂಡಿರಬಹುದು ಎನ್ನುವುದು ಅವುಗಳಲ್ಲಿ ಒಂದು. ದಿನವೂ ಅವರು ನಡೆಸುತ್ತಿದ್ದ ಲಿಂಗಾರ್ಚನೆ, ಜಂಗಮ ದಾಸೋಹ ಇತ್ಯಾದಿಗಳನ್ನು ಕಂಡು, ಆಗದವರು ಅಂದರೆ 'ಪರವಾದಿಗಳು' ಈ ಆರೋಪವನ್ನು ಮಾಡಿರಬಹುದು. ಇಂಥ ಮಾತಿಗೆ ಬಸವಣ್ಣನವರು–

ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು
ಓರೆಯಾವಿನ ಬೆನ್ನಲಿ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೇಡಲೇಕೆ?
ಕೂಡಲಸಂಗಮ ದೇವರುಳ್ಳನ್ನಕ್ಕ
ಬಿಜ್ಜಳನ ಭಾಂಡಾರವೆನಗೇಕಯ್ಯಾ?

(ವ:೭೫೪ : ಪು:೩೦೧)

ಎಂದು ಉತ್ತರ ಕೊಟ್ಟಂತೆ ತೋರುತ್ತದೆ. ಇಲ್ಲಿ 'ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು ಓಜೆಯಾವಿನ ಬೆನ್ನಲಿ ಹರಿಯಲದೇಕಯ್ಯಾ' ಎಂಬ ಮಾತು, ತಾನೇ ತಾನಾಗಿ ಸಮೃದ್ಧವಾದ ನೆರವು ಲಭಿಸುತ್ತಿರುವಾಗ, ಬಿಜ್ಜಳನ ಹಣದ ಮೇಲೆ ಅವಲಂಬಿಸುವ ಅಗತ್ಯ ತಮಗಿಲ್ಲ ಎಂಬುದನ್ನು ಸೂಚಿಸುತ್ತದೆ. ಓಜೆಯಾವು ಎಂದರೆ, ಹಾಲನ್ನು ಜಿನುಗಿಸುವ ಅಥವಾ ಬಂಜೆಯಾದ ಅಥವಾ ಗೊಡ್ಡಾದ ಹಸು ಎಂಬ ಅರ್ಥವನ್ನು ವಿದ್ವಾಂಸರು ಕೊಡುತ್ತಾರೆ. ಊರೆದುರು ಹಾಲಿನ ಹಳ್ಳವೇ ಹರಿಯುವಾಗ ಇಂಥ 'ಓಜೆಯಾವನ್ನು' ಬೆನ್ನು ಹತ್ತುವುದು ಹೇಗೋ ಹಾಗೆ, ಬಿಜ್ಜಳನ ಭಂಡಾರದ ಕಡೆ ಕಣ್ಣು ಹಾಯಿಸುವುದು. ಈ ಬಗ್ಗೆ ನಾಚಿಕೆ ಪಟ್ಟುಕೊಳ್ಳುವಂಥದೇನಿದೆ. ತಮ್ಮ ಪರವಾಗಿ 'ಕೂಡಲಸಂಗಮ ದೇವರು' ಇರುವಾಗ 'ಬಿಜ್ಜಳನ ಭಾಂಡಾರವೆನಗೇಕಯ್ಯಾ' ಎಂಬ ಮುಂದಿನ ಮಾತು, ತಮಗೊದಗುವ ಧನಸಹಾಯ 'ಊರ ಮುಂದಿನ ಹಾಲು ಹಳ್ಳ'ದಂಥಾದ್ದು. ಅಷ್ಟೇ ಅಲ್ಲ ತಮ್ಮ ಈ ಕಾರ್ಯಭಾರದ ಹಿಂದೆ ಕೂಡಲಸಂಗನೇ ನಿಂತಿದ್ದಾನೆ. ಇದಿಷ್ಟೂ ಈ ವಚನದ ಅರ್ಥ.

ಈ ಒಂದು ವಚನವನ್ನು ಗಮನಿಸಿ, ಬಸವಣ್ಣನವರು ಬಿಜ್ಜಳನ ಭಂಡಾರದಿಂದ ಸ್ವಲ್ಪ ಹಣವನ್ನು ತಮ್ಮ ಜಂಗಮದಾಸೋಹಾದಿಗಳಿಗೆ ಬಳಸಿರಬಹುದೆಂದೂ, ಇಲ್ಲದಿದ್ದರೆ ಹಾಗೆ ಖರ್ಚು ಮಾಡಲು ಅವರಿಗೆ ಅಷ್ಟೊಂದು ಹಣ ಬಂದುದಾದರೂ ಹೇಗೆ ಎಂದು ತರ್ಕಿಸುತ್ತ 'ಊರ ಮುಂದೆ ಹರಿಯುತ್ತಿದ್ದ "ಹಾಲುಹಳ್ಳ" ಯಾವುದೋ ತಿಳಿಯದು' ಎಂಬಂಥ ಅಭಿಪ್ರಾಯಗಳೂ ವ್ಯಕ್ತವಾಗಿವೆ. ನಮ್ಮ ಸಮಕಾಲೀನ ಅಧಿಕಾರಿಗಳ ನಡುವಳಿಕೆಯನ್ನು ನೋಡಿ, ಬಹುಶಃ ಬಸವಣ್ಣನವರೂ, ಬಿಜ್ಜಳನ ಭಂಡಾರದ ಹಣದ ಸ್ವಲ್ಪ ಭಾಗವನ್ನು ಬಳಸಿಕೊಂಡಿರಬಹುದು. ಆದುದರಿಂದ ಇಂಥ ಆಪಾದನೆಯ ಮಾತುಗಳಿಗೆ ಬಸವಣ್ಣನವರು ಉತ್ತರ ಕೊಡುವ ಸಂದರ್ಭ ಈ ವಚನದಿಂದ ಸ್ಪಷ್ಟವಾಗುತ್ತದೆ ಎಂದು ತೀರ್ಮಾನಕ್ಕೆ ಬರುವುದು ತೀರಾ ಸಹಜ ಕೂಡ. ಆದರೆ, ಈ ಬಗೆಯ 'ಆಪಾದನೆ' ಆ ಕಾಲದಲ್ಲಿ ಬಂದಿರುವುದು ಆಶ್ಚರ್ಯದ ಸಂಗತಿಯಲ್ಲವಾದರೂ, ಅದನ್ನು ಇಂದು ಪರಿಶೀಲಿಸುವ ನಾವು, ಯಾವುದರ ಮೇಲೆ ಹೆಚ್ಚು ಒತ್ತನ್ನು ಕೊಟ್ಟು ವಿಚಾರದಲ್ಲಿ ತೊಡಗುತ್ತೇವೆ ಎನ್ನುವುದು ಬಹುಮುಖ್ಯವಾದದ್ದು. ಬಸವಣ್ಣನವರ ವಚನಗಳಷ್ಟನ್ನೂ ಸರಿಯಾಗಿ ನೋಡಿದವರಿಗೆ ಮುಖ್ಯವಾಗಿ ಎದ್ದು ಕಾಣಿಸುವುದು ಅವರ ನಿರಂತರ ಆತ್ಮನಿರೀಕ್ಷೆ ಮತ್ತು ಅದರಿಂದ ನಿಷ್ಪನ್ನವಾಗುವ ಪ್ರಾಮಾಣಿಕತೆ. ಇಷ್ಟರಮಟ್ಟಿಗೆ ತನ್ನನ್ನು ತಾನು ಮುಚ್ಚುಮರೆಯಿಲ್ಲದೆ ಬಿಚ್ಚಿಟ್ಟುಕೊಳ್ಳುವ ಈ ವ್ಯಕ್ತಿ, ಬಿಜ್ಜಳನ ಭಂಡಾರದ ಹಣವನ್ನು ತಾನು ಬಳಸಿಕೊಳ್ಳಲಿಲ್ಲ. ('ಬಿಜ್ಜಳನ ಭಾಂಡಾರವೆನಗೇಕಯ್ಯಾ'; 'ಎನ್ನೊಡಲವಸರಕ್ಕೆ ಕುದಿದೆನಾದೊಡೆ ತಲೆದಂಡ') ಎಂದು ಹೇಳಿದ ಮಾತನ್ನು ನಂಬದೆ ಅಥವಾ ಅದು ಪ್ರಾಮಾಣಿಕವಾದುದಲ್ಲ ಎಂದು ಶಂಕಿಸುತ್ತ, ಬಿಜ್ಜಳನ ಭಂಡಾರದ ಹಣವನ್ನು ಬಸವಣ್ಣನವರು ಸ್ವಲ್ಪಮಟ್ಟಿಗಾದರೂ ಬಳಸಿಕೊಂಡಿರಬಹುದು ಎಂದು ಭಾವಿಸುವುದು ಆ ವ್ಯಕ್ತಿತ್ವಕ್ಕೆ ಮಾಡುವ ಅಪಚಾರವೇ ಸರಿ. ಹಾಗಾದರೆ ಓಜೆಯಾವಿನಂತಹ ಬಿಜ್ಜಳನ ಭಂಡಾರವನ್ನು ನೆಚ್ಚದೆ ಇರಬೇಕಾದರೆ 'ಊರ ಮುಂದೆ ಹರಿಯುವ ಹಾಲಹಳ್ಳ' ಯಾವುದು ಎಂಬ ಪ್ರಶ್ನೆ ಉಚಿತವಾದದ್ದೆ. ಬಸವಣ್ಣನವರು ತಮ್ಮನ್ನು ತೊಡಗಿಸಿಕೊಂಡ ಆಂದೋಲನದಲ್ಲಿ ಬಹುಸಂಖ್ಯಾತ ಸಾಮಾನ್ಯ ಜನರಿದ್ದರೆಂಬುದೇನೋ ನಿಜವೆ; ಹಾಗೆಂದರೆ, ಹಾಗೆ ಬಂದು ಕೂಡಿಕೊಂಡರೆಲ್ಲಾ, ತೀರಾ

ದಟ್ಟದರಿದ್ರರೆಂದೂ, ಬಸವಣ್ಣನವರ ಈ ಲಿಂಗಾರ್ಚನೆ ಜಂಗಮ ದಾಸೋಹ ಅಂಥವರಿಗೆ ಒಂದು ಜೀವನೋಪಾಯವಾಗಿತ್ತೆಂದೂ ಭಾವಿಸುವುದು ಸರಿಯಲ್ಲ. ಅಂದಿನ ಸಮಾಜದ ವಿವಿಧ ಸ್ತರಗಳಿಂದ ಬಂದು ಕೂಡಿಕೊಂಡವರಲ್ಲಿ ರಾಜ್ಯದ ಶ್ರೀಮಂತವರ್ಗದವರು, ವರ್ತಕರು ಮತ್ತು ತಕ್ಕಷ್ಟು ಅನುಕೂಲವಂತರೂ ಇದ್ದಿರಬಹುದು. ಮೋಳಿಗೆ ಮಾರಯ್ಯನಂಥವನು ಒಂದು ದೇಶದ ರಾಜನಾಗಿದ್ದವನು ಎಂಬುದನ್ನು ಗಮನಿಸಬೇಕು. ಇವರೆಲ್ಲ ತಮ್ಮ ತಮ್ಮಗಳಿಕೆಯ ಒಂದಷ್ಟು ಭಾಗವನ್ನು ಬಸವಣ್ಣನವರ ಈ ಕಾರ್ಯಕ್ಕೆ ಒದಗಿಸಿರಬಹುದು. ಈ ಸಾಮೂಹಿಕ ಸಂಪತ್ತಿನ ಸಂಚಯವೇ ಊರ ಮುಂದೆ ಹರಿಯುತ್ತಿದ್ದ 'ಹಾಲಹಳ್ಳ'. ಜತೆಗೆ ಕೂಡಲಸಂಗಮನನ್ನೇ ನಂಬಿ (ಕೂಡಲ ಸಂಗಮದೇವರುಳ್ಳನ್ನಕ್ಕ) ಬಸವಣ್ಣನವರು ನಡೆಸುತ್ತಿದ್ದ ಅಭೂತಪೂರ್ವವಾದ ಕಾರ್ಯಕ್ಕೆ ಹೇಗೋ ಅವರಿವರಿಂದ ಧನ-ಜನ ಸಹಾಯ ಒದಗಿರಬೇಕು. ಎಲ್ಲ ಕಾಲದಲ್ಲೂ ಈ ಬಗೆಯ ನಿಸ್ವಾರ್ಥವಾದ ಕಾರ್ಯಗಳಿಗೆ, ಅದು ಹೇಗೋ, ದೈವ ಸಹಾಯವೆಂಬಂತೆ ಹಲವು ಹತ್ತು ಕಡೆಗಳಿಂದ ನೆರವು ಒದಗಿ ಬರುತ್ತದೆಂಬುದು ತಿಳಿದ ಸಂಗತಿಯಾಗಿದೆ. ಆದುದರಿಂದ ಅತ್ಯಂತ ಪ್ರಾಮಾಣಿಕರಾದ ಬಸವಣ್ಣನವರು ಈ ಬಗೆಗೆ ಹೇಳಿದ ಮಾತುಗಳನ್ನು ನಾವು ಸಂಶಯದಿಂದ ನೋಡಬೇಕಾಗಿಲ್ಲ. ಯಾಕೆಂದರೆ–

ತಾಳಮರದ ಕೆಳಗೆ ಹಾಲ ಹರವಿಯಿದ್ದಡೆ
ಅದ ಹಾಲ ಹರವಿಯೆನ್ನರು; ಸುರೆಯ ಹರವಿ ಎಂಬರು

(ವ : ೯೦ : ಪು : ೪೪)

ಈ ಮಾತು ಭಂಡಾರಿಯಾಗಿ ಬಿಜ್ಜಳನಲ್ಲಿ ಕೆಲಸ ಮಾಡುತ್ತಿದ್ದ ಬಸವಣ್ಣನವರ ನಡವಳಿಕೆಯನ್ನು ಕುರಿತು, ತಿಳಿಯದ ಜನ ತಾಳುವ ನಿಲುವಿಗೆ ಒಡ್ಡಿದ ಒಂದು ಪ್ರತಿಮೆಯಾಗಿದೆ. ಬಸವಣ್ಣನವರು ಬಿಜ್ಜಳನ ಭಾಂಡಾರದ ದುರುಪಯೋಗ ಪಡಿಸಿಕೊಂಡಿರಬಹುದು ಎಂದು ತರ್ಕಿಸುವವರು, ತಾಳಮರದ ಕೆಳಗಣ ಹಾಲ ಹರವಿಯನ್ನು ಸುರೆಯ ಹರವಿ ಎಂದುಕೊಳ್ಳುವವರು. ಹಾಗೆಂದುಕೊಳ್ಳುವುದು ತಪ್ಪಲ್ಲವಾದರೂ, ಈ ವಸ್ತುಗಳ ಅಸ್ತಿತ್ವದ ಸಂದರ್ಭದ ಮಹಿಮೆ, ಯಾರನ್ನಾದರೂ ಆ ರೀತಿ ವಿಚಾರ ಮಾಡಲು ಅವಕಾಶ ಕೊಡುತ್ತದೆ.

ಒಟ್ಟಿನಲ್ಲಿ ಬಿಜ್ಜಳನಂಥ ರಾಜನ ಕೆಳಗೆ ಉದ್ಯೋಗವನ್ನು ಒಪ್ಪಿಕೊಳ್ಳಬೇಕಾಗಿದ್ದ ಬಸವಣ್ಣನವರ ಬದುಕು ಈ ಎಲ್ಲ ಅಪವಾದ ಹಾಗೂ ಸಂಘರ್ಷಗಳನ್ನು ಎದುರಿಸಬೇಕಾಗಿ ಬಂದದ್ದು ತೀರಾ ಸಹಜವಾಗಿದೆ. ಅವರನ್ನು ಕುರಿತು ಬಂದ ಅಪವಾದಗಳೇನೇ ಇರಲಿ. ಅವರಂತೂ ವ್ಯವಹಾರ ಹಾಗೂ ಆಧ್ಯಾತ್ಮಗಳನ್ನು ಬೆರಸದೆ, ತಮ್ಮ ವ್ಯಕ್ತಿತ್ವವನ್ನು ಎಲ್ಲ ಬಗೆಯ ಹೋರಾಟಗಳಿಗೂ ಒಡ್ಡಿಕೊಂಡು ದಿಟ್ಟತನದಿಂದ ನಿಂತವರು; ರಾಜನ ಅರಮನೆಯ ಅಧಿಕಾರದಲ್ಲಿದ್ದ ಮಾತ್ರಕ್ಕೆ ಅವರು ತಮ್ಮನ್ನು ಮಾರಿಕೊಂಡವರಲ್ಲ. ತಮ್ಮನ್ನು ಕುರಿತು

ನ್ಯಾಯನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ,
ಲೋಕ ವಿರೋಧಿ ಶರಣನಾರಿಗಂಜುವನಲ್ಲ
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ

(ವ: ೭೫೩ : ಪು:೩೦೧)

ಎಂದು ಹೇಳಿಕೊಳ್ಳುವುದರ ಮೂಲಕ, ತಮ್ಮ ಸಮಸ್ತ ವ್ಯಕ್ತಿತ್ವವೂ 'ಕೂಡಲ ಸಂಗಮದೇವರ

ರಾಜತೇಜ'ದಲ್ಲಿರುವುದರಿಂದ ತಾವು ಯಾರಿಗೂ ಹೆದರಬೇಕಾಗಿಲ್ಲವೆಂಬುದನ್ನು ಸ್ಪಷ್ಟಪಡಿಸಿಕೊಂಡರು. ತಮ್ಮ ವ್ಯವಹಾರ ಭೂಮಿಕೆಯನ್ನೂ, ಆಧ್ಯಾತ್ಮಿಕ ಭೂಮಿಕೆಯನ್ನೂ ಅವರು ಒಂದರೊಳಗೊಂದು ಬೆರಸಿ ಕೊಂಡವರಲ್ಲ. ಇದೊಂದು ಅಪೂರ್ವವಾದ ಜಾಣ್ಮೆ ಅಥವಾ ವಿವೇಕ. ರಾಜನೊಬ್ಬನ ಆಸ್ಥಾನದಲ್ಲಿದ್ದುಕೊಂಡೂ, ಈ ಬಗೆಯ ದಿಟ್ಟತನದ ನಿಲುವುಗಳನ್ನು ತಾಳುತ್ತ, ಇತ್ತ ಅರಮನೆಯಿಂದಾಚೆಯ ಸಾಮಾಜಿಕ-ಧಾರ್ಮಿಕ ಚಳವಳಿಯಲ್ಲಿ ತೊಡಗಿಸಿಕೊಳ್ಳುತ್ತ ಇದ್ದ ಬಸವಣ್ಣನವರು, ಎಲ್ಲಿನ ತನಕ ತಮ್ಮ ಹಾಗೂ ರಾಜ ಬಿಜ್ಜಳನ ನಡುವಣ ಸಂಬಂಧಗಳು ಒಡೆಯದೆ ಇದ್ದುವೋ ಅಷ್ಟು ಕಾಲ ರಾಜನೊಂದಿಗೆ ಪ್ರೀತಿ-ವಿಶ್ವಾಸಗಳಿಂದಲೇ ಇದ್ದಿರಬಹುದು. ರಾಜನಾದ ಬಿಜ್ಜಳ ಕೂಡಾ ಬಸವಣ್ಣನವರ ಪ್ರಾಮಾಣಿಕವಾದ ನಿಲುವುಗಳನ್ನು ತಕ್ಕಷ್ಟು ಚೆನ್ನಾಗಿಯೇ ಅರ್ಥಮಾಡಿಕೊಳ್ಳುತ್ತ ಗೌರವದಿಂದ ನಡೆಯಿಸಿಕೊಂಡಿರಬಹುದು. ಅಥವಾ ಅಂದಿನ ಜನಸಮೂಹದ ಪ್ರೀತಿ-ಗೌರವಗಳನ್ನು ಗಳಿಸಿಕೊಂಡು ಒಂದು ರೀತಿಯಲ್ಲಿ ನಾಯಕನಾದ ಬಸವಣ್ಣನವರನ್ನು ಎದುರು ಹಾಕಿಕೊಳ್ಳುವ ಅಚಾತುರ್ಯಕ್ಕೆ ಕೈ ಹಾಕದೆ, ವ್ಯವಹಾರ ನಿಪುಣನಂತೆ ನಡೆದುಕೊಂಡಿರಬಹುದು. ಅನಂತರ ಅವರಿಬ್ಬರ ಸಂಬಂಧಗಳು ಏನಾಗಿರಬಹುದೋ, ಇಲ್ಲಿ ಅಪ್ರಸ್ತುತ.

ಬಸವಣ್ಣನವರ ಹಾಗೂ ಒಟ್ಟಾರೆಯಾಗಿ ವಚನಕಾರರ ಈ ಜನಪರವಾದ ಮತ್ತು ಅನುಭಾವಿಕವಾದ ನಿಲುವುಗಳನ್ನು, ಹಲವರು ಇದು ಸ್ಪಷ್ಟವಾಗಿ ರಾಜವಿರೋಧಿ ಧೋರಣೆ ಎಂದು ಭಾವಿಸುವಂತೆ ತೋರುತ್ತದೆ. ಈ ಭಾವನೆ, ಬಸವಣ್ಣನವರ ಚಳವಳಿಯ ಬಗೆಗೆ ಒಂದು ಆಕ್ಷೇಪಣೆಯನ್ನೂ ಮುಂದಿಡುತ್ತದೆ. ಅದೇಂದರೆ, ಕೆಳವರ್ಗದ ಜನಸಮೂಹದಿಂದ ಸಂಘಟಿತವಾದ ಈ ಆಂದೋಲನ ಅಂದಿನ ಕರ್ನಾಟಕದ ರಾಜಕೀಯ ಚರಿತ್ರೆಯನ್ನೇ ಬದಲಿಸಬಹುದುದಾಗಿತ್ತು. ಆದರೆ ಬಸವಾದಿಗಳು ಕೇವಲ ಆಧ್ಯಾತ್ಮಿಕವಾದ ತಿರುವನ್ನು ಕೊಡುವುದರ ಮೂಲಕ ಈ ಜನತಾ ಕ್ರಾಂತಿಯನ್ನು ವಿಫಲವನ್ನಾಗಿ ಮಾಡಿದರು.

ಆದರೆ ಗಮನಿಸಬೇಕು. ಬಸವಾದಿಗಳು ಸಂಘಟಿಸಿದ ಈ ಆಂದೋಲನದ ಉದ್ದೇಶ ಖಂಡಿತ ರಾಜಕೀಯವಾದುದಲ್ಲ; ಅದೊಂದು ಸಾಮಾಜಿಕ-ಧಾರ್ಮಿಕ ಆಂದೋಲನ. ಅದರಲ್ಲಿ ಖಂಡಿತವಾಗಿಯೂ ಪ್ರತಿಭಟನೆಯ ಅಂಶಗಳಿವೆ. ಅದು ವರ್ಣಾಶ್ರಮ ಧರ್ಮದ ವಿರುದ್ಧವಾದದ್ದು; ಸಾಮಾನ್ಯ ವರ್ಗದವರನ್ನು ಅನುಭಾವಿಕ ನೆಲೆಯಲ್ಲಿ ತೊಡಗಿಸಿ, ಅವರಿಗೆ ತಾವೆಲ್ಲ ಸಮಾನರೆಂಬ ಭಾವನೆಯನ್ನು ಪ್ರಚೋದಿಸಿ, ಅವರಿಗೆ ಒಂದು ಬಗೆಯ ಮಾನಸಿಕ ಸ್ಥೈರ್ಯವನ್ನು ತಂದುಕೊಟ್ಟು, ಸಮಾಜದ ಉಚ್ಚವರ್ಣದವರೆದುರು ಬಂಡೇಳುವಂತೆ ಮಾಡಿದ್ದು ಈ ಆಂದೋಲನದ ಒಂದು ಮಹತ್ಸಾಧನೆಯಾಗಿದೆ. ಆದರೆ ಅದು ರಾಜವಿರೋಧಿ ಅಥವಾ ರಾಜಷಾಹೀ ವಿರೋಧಿ ನಿಲುವಂತೂ ಅಲ್ಲ. ಆದರೆ, ರಾಜತ್ವ, ಅದರ ದರ್ಪ-ಭೋಗ-ವೈಭವಗಳು ಇತ್ಯಾದಿಗಳ ಬಗ್ಗೆ, ಅದನ್ನು ತೀರಾ ನಿಕೃಷ್ಟವಾಗಿ ಭಾವಿಸುವಂತಹ ಒಂದು ಆಧ್ಯಾತ್ಮಿಕ ದೃಷ್ಟಿಕೋನವನ್ನು ಈ ಆಂದೋಲನ ಗಟ್ಟಿಗೊಳಿಸಿತು. ರಾಜನನ್ನಾಗಲಿ, ರಾಜತ್ವವನ್ನಾಗಲೀ ದೊಡ್ಡದೆಂದೂ, ಆ ಕಾರಣಕ್ಕಾಗಿ ಅದನ್ನು ತಾವು ಪ್ರತಿಭಟಿಸಬೇಕೆಂಬ ಅಥವಾ ತಾವು ಅದನ್ನು ಆಕ್ರಮಿಸಿಕೊಳ್ಳಬೇಕೆಂಬ ಯಾವ ಉದ್ದೇಶಗಳೂ ಈ ಸಂಘಟನೆಗೆ ಇರಲಿಲ್ಲ. ಜತೆಗೆ ಇದಕ್ಕೆ ಹಿಂದಿನ ಶತಮಾನಗಳಲ್ಲಿಯಂತೆ, ರಾಜನನ್ನು ಕುರಿತ ನಿಷ್ಠೆ, ರಾಜನಿಗಾಗಿ ತಮ್ಮ ಪ್ರಾಣವನ್ನೇ ಮುಡುಪಾಗಿಡಬೇಕೆಂಬ ಶ್ರದ್ಧೆ, ಜೋಳವಾಳಿ.

ವೇಳೆವಾಳಿಗಳನ್ನು ಒಂದು ಮೌಲ್ಯವೆಂಬಂತೆ ಭಾವಿಸುವ ಪ್ರವೃತ್ತಿ.* ಈ ಕಾಲದ ಕರ್ನಾಟಕದ ಈ ಭಾಗದಲ್ಲಿ ತನ್ನ ಅರ್ಥವನ್ನು ಬಹುಶಃ ಕಳೆದುಕೊಳ್ಳತೊಡಗಿತ್ತು. ಇದಕ್ಕೆ ಅಂದಿನ ರಾಜಕೀಯ ಅಸ್ಥಿರತೆಯೂ ಒಂದು ಕಾರಣವಾದರೆ, ಬಸವಾದಿಗಳಿಂದ ಸಂಘಟಿತವಾದ ಭಕ್ತಿಮೂಲವಾದ ಈ ಚಳುವಳಿಯೂ ಮತ್ತೊಂದು ಕಾರಣವೆನ್ನಬಹುದು. ಈ ಚಳುವಳಿ, ವ್ಯಕ್ತಿಯಾದವನು ತನ್ನ ವಿಧೇಯತೆಯನ್ನು ರಾಜನ ಬದಲು ದೇವರ ಕಡೆ ಕೇಂದ್ರೀಕರಿಸುವ ದಿಕ್ಕಿನಲ್ಲಿ ಮನಸ್ಸನ್ನು ಸಿದ್ಧಗೊಳಿಸಿತು. ಹೀಗಾಗಿ ರಾಜನನ್ನು ಧಿಕ್ಕರಿಸುವ ಅಥವಾ ರಾಜತ್ವವನ್ನು ಪ್ರತಿಭಟಿಸುವ 'ರಾಜಕೀಯ' ನಿಲುವುಗಳು ಇಲ್ಲಿ ಮುಖ್ಯವಾಗದೆ, ರಾಜ, ರಾಜತ್ವ ಇತ್ಯಾದಿಗಳನ್ನು ಮೀರಿದ ಆಧ್ಯಾತ್ಮಿಕ ಮನಃಸ್ಥಿತಿಯನ್ನು ಸಾಧಿಸುವುದು ಮುಖ್ಯವಾಯಿತು. ಹಾಗೇ ನೋಡಿದರೆ ನಿಜವಾದ ರಾಜವಿರೋಧೀ ಧೋರಣೆ ಭಾರತೀಯ ಪರಿಸರದಲ್ಲಿ ಸ್ಪಷ್ಟವಾಗಿ ಮೂಡಿದ್ದು ಆಧುನಿಕ ಕಾಲದಲ್ಲಿಯೇ. ಇದು ವಾಸ್ತವವಾಗಿ ಪ್ರಜಾಪ್ರಭುತ್ವ ತತ್ತ್ವಗಳ ಪರಿಣಾಮ. ಹಿಂದೆ ಭಾರತದ ಚರಿತ್ರೆಯಲ್ಲಿ ಈ ಬಗೆಯ ಪ್ರಜಾಪ್ರಭುತ್ವವಾದಿ ನಿಲುವುಗಳಿರಲೇ ಇಲ್ಲ. ಹಿಂದಿನ ಜನ ಒಂದೊಂದು ಸಲ ರಾಜನನ್ನು ಕುರಿತು, ಅಂದರೆ ನಿರ್ದಿಷ್ಟವಾದ ರಾಜರೆಂಬ ವ್ಯಕ್ತಿಗಳನ್ನು ಕುರಿತು ಆಗಾಗ ಬಂಡಾಯವೆದ್ದಿರಬಹುದು; ಆದರೆ ರಾಜತ್ವ ವಿರೋಧೀ ಧೋರಣೆಯೊಂದು ಯಾವ ಕಾಲದಲ್ಲೂ ರೂಪುಗೊಂಡಂತೆ ಕಾಣುವುದಿಲ್ಲ. ಈ ಧೋರಣೆ ಸಂಪೂರ್ಣವಾಗಿ ಆಧುನಿಕ ಕಾಲದ್ದು.

❑

---

೧. 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊಜೆಯ ಹೊಜೆಸದಿರಯ್ಯಾ'

(ವ : ೩೪೩ : ಪು: ೧೩೬)

೨. 'ಚನ್ನಯ್ಯನ ಮನೆಯ ದಾಸಿಯ ಮಗನು;
ಕಕ್ಕಯ್ಯನ ಮನೆಯ ದಾಸಿಯ ಮಗಳು–
ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ'

(ವ: ೩೪೫ : ಪು: ೧೩೭)

ವಿ.ಸೂ.:ಉದ್ದಕ್ಕೂ ಉಲ್ಲೇಖಿತವಾಗಿರುವ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿರುವ 'ಬಸವಣ್ಣನವರ ವಚನಗಳು' ಗ್ರಂಥದಿಂದ.

* ಜೋಳವಾಳಿಯಾನಲ್ಲ, ವೇಳೆವಾಳಿಯವನಾನಯ್ಯಾ
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ

(ವ : ೬೯೮ : ಪು : ೨೭೮)

ಬಸವ ಪ್ರಜ್ಞೆ

●

ರಂಜಾನ್ ದರ್ಗಾ

ಕಾಯಕ ತತ್ತ್ವದ ಕ್ರಾಂತಿಮಂತ್ರಪುರುಷ ಬಸವಣ್ಣ ಕನ್ನಡ ನೆಲದಲ್ಲಿ ಉದ್ಭವಿಸಿದ ಸಹಸ್ರಮಾನಪುರುಷ. ನವ ಸಮಾಜದ ಮುನ್ಸೂಚಕರಾಗಿದ್ದ ಬಸವಣ್ಣನವರು ಭಾರತೀಯ ಸಮಾಜವನ್ನು ನೋಡಿದ ದೃಷ್ಟಿಕೋನ ವಿಶಿಷ್ಟವಾದುದು. ಅವರು ಎಲ್ಲವನ್ನೂ ತ್ಯಾಗ ಮಾಡುತ್ತ ತಮ್ಮ ನಡೆ ನುಡಿಗಳಲ್ಲಿ ಏಕತೆ ಸಾಧಿಸುವುದರ ಮೂಲಕ ಜಗಜ್ಯೋತಿಯಾದರು. ತಮ್ಮೊಳಗಿನ ಕುರುಕ್ಷೇತ್ರದಲ್ಲಿ ಹೋರಾಡುತ್ತ, ಎಲ್ಲ ತೆರನಾದ ವೈರಿಗಳನ್ನು ನಾಶಮಾಡುತ್ತ ಅರಿಹಂತರಾದರು. ಆ ಮೂಲಕ ಧರ್ಮಯುದ್ಧವು ಮನುಷ್ಯನ ಒಳಗಡೆ ನಡೆಯುವಂಥದ್ದು ಎಂದು ತೋರಿಸಿಕೊಟ್ಟರು. ಕಾಯಕನಿಷ್ಠೆ ಎಂಬ ಖಡ್ಗ ಹಿಡಿದು ಐದು ಸಾವಿರ ವರ್ಷಗಳಿಂದ ಜನಸಮುದಾಯದ ಜೀವ ತಿನ್ನುತ್ತಿರುವ ಕರ್ಮವಾದ ಎಂಬ ದುಷ್ಟಶಕ್ತಿಯ ವಿರುದ್ಧ ಹೋರಾಡುತ್ತ ಮಹಾವೀರರಾದರು. ಅವರು ನರಕದ ಬೆಂಕಿಯ ಮೇಲೆ ನೀರು ಸುರಿದರು; ಸ್ವರ್ಗದ ಭ್ರಮೆಯನ್ನು ಸುಟ್ಟು ಹಾಕಿ 'ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ' ಎಂದರು. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ' (ಫಲವತ್ತಾದ ಈ ಪೃಥ್ವಿ ದೇವರ ಆನಂದಭವನ) ಎಂದು ಸಾರಿದರು. ಆದರೆ ಹಿಂದೂ ಎಂದು ಕರೆಯಿಸಿಕೊಳ್ಳುವ ವೈದಿಕ ತತ್ತ್ವಜ್ಞಾನವು ಐದುಸಹಸ್ರ ವರ್ಷಗಳಿಂದ ಮಾತಿನ ಮಹಾಮಂಟಪವಾಗಿದೆ. ಇಲ್ಲಿ ಮಾತಿನಲ್ಲೇ ಶಾಂತಿ ಇದೆ; ಮಾತಿನಲ್ಲೇ ಸಮಾಧಾನವಿದೆ; ಮಾತಿನಲ್ಲೇ ಲೋಕ ಕಲ್ಯಾಣವಿದೆ; ಮಾತಿನಲ್ಲೇ ವಿಶ್ವಮಾನವತ್ವವಿದೆ; ಮಾತಿನಲ್ಲೇ ಸಮಾನತೆ ಮತ್ತು ಸಹೋದರತ್ವವಿದೆ. ಏಕದೇವೋಪಾಸನೆ, ಬಹುದೇವೋಪಾಸನೆ, ನಿರಾಕಾರಬ್ರಹ್ಮ, ಸಾಕಾರಬ್ರಹ್ಮ, ನಿರ್ಗುಣಬ್ರಹ್ಮ, ಸಗುಣಬ್ರಹ್ಮ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಹೀಗೆ ಎಲ್ಲವನ್ನೂ ಒಳಗೊಂಡಿರುವ ವೈದಿಕ ಸಂಸ್ಕೃತಿ, ಎಲ್ಲದರ ಬಗ್ಗೆಯೂ ಚಿಂತಿಸಿದ ವೈದಿಕ ಸಂಸ್ಕೃತಿ, ಯಾವುದರ ಪರವಾಗಿ ನಿಲ್ಲುತ್ತದೆ? ಸತ್ಯವನ್ನು ಅನ್ವೇಷಿಸುವುದಕ್ಕಾಗಿ ಅದು ಆರಿಸಿಕೊಳ್ಳುವ ಮಾರ್ಗ ಯಾವುದು? ಈ ವಿಚಾರಧಾರೆಗಳನ್ನು ಪ್ರತಿಪಾದಿಸುವ ಮಾತಿನ ಮಲ್ಲರಾದ 'ಬ್ರಹ್ಮಜ್ಞಾನಿ'ಗಳಿಗೆ ಇಷ್ಟೆಲ್ಲ ಗೊತ್ತಿದ್ದರೂ ಅವರು ಸ್ವಾರ್ಥವೇ ಕೇಂದ್ರಬಿಂದುವಾದ ಭೌತಿಕ ಬದುಕಿನ ದಾಹದಿಂದೇಕೆ ಚಡಪಡಿಸುತ್ತಿದ್ದಾರೆ? ಅಣು ರೇಣು ತೃಣ ಕಾಷ್ಠಂಗಳಲ್ಲಿ ದೇವರ ಅಸ್ತಿತ್ವ ಗುರುತಿಸುವ, 'ತೇನ ವಿನಾ ತೃಣಮಪಿ ನ ಚಲತಿ' ಎಂದು ವಾದಿಸುವ ಇವರಿಗೆ ಶೂದ್ರರೇಕೆ ಕಣ್ಣಿಗೆ ಕಾಣುವುದಿಲ್ಲ?

ಜನರ ಬಡತನ, ಅಸಹಾಯಕತೆಗಳೇಕೆ ಇವರನ್ನು ಬಾಧಿಸುವುದಿಲ್ಲ? ಅಸ್ಪೃಶ್ಯತೆ ಮತ್ತು ಸುಲಿಗೆ ವ್ಯವಸ್ಥೆಯ ಕ್ರೌರ್ಯ ಇವರ ಅಂತಃಸಾಕ್ಷಿಗೆ ತಟ್ಟುವುದಿಲ್ಲವೇಕೆ? ಇವರೇಕೆ ಅಹಂಭಾವದಿಂದ ಉನ್ಮತ್ತರಾಗಿದ್ದಾರೆ? ಇವರೇಕೆ ಸ್ವಾರ್ಥಮುಖಿಗಳಾಗಿಯೇ ಉಳಿದಿದ್ದಾರೆ? ಇವರ ಚಿಂತನೆಗಳೇಕೆ ಸಮಾಜಮುಖಿಯಾಗಿಲ್ಲ? ದೇವರ ವಿರಾಟ್ ಸ್ವರೂಪದ ಬಗ್ಗೆ ಮಾತನಾಡುವ ಇವರಿಗೆ ಸಮಾಜವೆಂಬುದು ಆತನ ವಿರಾಟ್ ಸ್ವರೂಪದ ಬಹುಮುಖ್ಯ ಅಂಶವೆಂಬ ಸತ್ಯದ ಅರಿವೇಕೆ ಆಗುತ್ತಿಲ್ಲ? ಸಕಲಜೀವಾತ್ಮರ ಸಮೂಹವಾದ ಸಮಾಜದ ಬಗ್ಗೆ ಸಂವೇದನೆ ಇಲ್ಲದೆ ಪರಮಾತ್ಮನ ಜೊತೆ ತಾದಾತ್ಮ್ಯ ಹೊಂದಲು ಸಾಧ್ಯವೆ? ಅಸ್ಪೃಶ್ಯರು, ಬಡವರು ಮತ್ತು ಹೆಣ್ಣು ಮಕ್ಕಳನ್ನು ಕೀಳಾಗಿ ನೋಡುತ್ತ ದೊಡ್ಡ ದೊಡ್ಡ ಮಾತುಗಳನ್ನಾಡುವುದರಿಂದ ಏನು ಪ್ರಯೋಜನ? ಕಾಯಕಕ್ಕೆ ಮಹತ್ತ್ವ ಕೊಡದೆ ಇಡೀ ದುಡಿಯುವ ಜನಸಮುದಾಯವನ್ನೇ ಕೀಳಾಗಿ ನೋಡುತ್ತ ವಾಸ್ತವದಲ್ಲಿ ಸುಲಿಗೆಯ ಪರವಾಗಿ ನಿಲ್ಲುವ ತತ್ತ್ವಜ್ಞಾನದಿಂದೇನು ಪ್ರಯೋಜನ? 'ಮಾಯಾಭ್ರಾಂತಿ ಕವಿದ ಗೀತಜ್ಞರು' ವಾಸ್ತವವನ್ನೇಕೆ ನೋಡುತ್ತಿಲ್ಲ? ಹೀಗೆ ಕ್ರಿಯಾಶೀಲವಾಗಿದ್ದುಕೊಂಡು ನಿರ್ಭಿಡೆಯ ಪ್ರಶ್ನೆಗಳನ್ನು ಹಾಕುವ ಪ್ರಜ್ಞೆಯೇ 'ಬಸವಪ್ರಜ್ಞೆ'. ಬಸವಪ್ರಜ್ಞೆ ಎಂದರೆ ಸಕಲ ಚರಾಚರಗಳ ಬಗ್ಗೆ ಕಾಳಜಿಯನ್ನಿಟ್ಟುಕೊಂಡು ಪಂಚಮಹಾಭೂತ ಗಳನ್ನು ಜನ ಕಲ್ಯಾಣಕ್ಕಾಗಿ ಬಳಸುವ ದೃಢನಿರ್ಧಾರದೊಂದಿಗೆ ಬಸವಣ್ಣನವರನ್ನು ಅರಿಯುವುದು. ಬಸವಪ್ರಜ್ಞೆ ಎಂದರೆ ಐದು ಸಾವಿರ ವರ್ಷಗಳಿಂದ ಕತ್ತಲಲ್ಲೇ ನಿಂತವರು ಬೆಳಕಿನ ಕಡೆಗೆ ಮುನ್ನಡೆಯುವುದು. ಬಸವಪ್ರಜ್ಞೆ ಎಂದರೆ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕನ್ನು ಏಕಕಾಲಕ್ಕೇ ಅನುಭವಿಸುವುದು. ಬಸವಪ್ರಜ್ಞೆ ಎಂದರೆ ಅಂತಃಕರಣವೇ ಮೈವೆತ್ತಂತಿರುವುದು. ಬಸವಪ್ರಜ್ಞೆ ಎಂದರೆ ಯಾರಿಗೂ ಶರಣಾಗತರಾಗದೆ ಶರಣಭಾವದಿಂದ ಲೋಕದಲ್ಲಿ ಕಾಯಕನಿರತರಾಗಿರುವುದು. ಈ ಪ್ರಜ್ಞೆಯನ್ನು ಜನಮನದಲ್ಲಿ ಮೂಡಿಸುವುದಕ್ಕಾಗಿ ಬಸವಣ್ಣನವರು ಮಾಡಿದ ತ್ಯಾಗ, ಎದುರಿಸಿದ ಕಷ್ಟಕೋಟಲೆ, ಸಹಿಸಿದ ಅಪಮಾನ ಮತ್ತು ಬದುಕನ್ನೇ ಮುಡಿಪಾಗಿಟ್ಟ ರೀತಿ ಹೃದಯಸ್ಪರ್ಶಿಯಾಗಿದೆ. ಬಸವಣ್ಣನವರು ಸಕಲವೇದಶಾಸ್ತ್ರಪುರಾಣ ಪಾರಂಗತರಾಗಿ ರೀತಿ ಹೃದಯಸ್ಪರ್ಶಿಯಾಗಿವೆ. ಬಸವಣ್ಣನವರು ಸಕಲವೇದಶಾಸ್ತ್ರ ಪುರಾಣ ಪಾರಂಗತರಾಗಿ, ಬಿಜ್ಜಳನ ಭಂಡಾರಿ, ಪ್ರಧಾನಿ ಆಗಿದ್ದವರು. ತಮ್ಮ ಕಾಲದ ಉನ್ನತ ಕುಲ, ಉನ್ನತ ಶಿಕ್ಷಣ, ಉನ್ನತ ವರ್ಗ, ಉನ್ನತ ಪದವಿ ಮತ್ತು ಉನ್ನತ ಕ್ರಿಯಾಶೀಲತೆಯಿಂದ ಸಕಲಸೌಭಾಗ್ಯ ಪಡೆದಿದ್ದ ಅವರು ಅವುಗಳಿಂದೇಕೆ ತೃಪ್ತರಾಗಲಿಲ್ಲ? ಅವರೇಕೆ ಸುಖತೊರೆದು, ಬದುಕೆಂಬ ಯಾತನಾಶಿಬಿರದಲ್ಲಿ ಬಸವಳಿದ ಮನುಷ್ಯನ ಕಡೆ ಬಂದರು? ಇದನ್ನರಿಯುವುದೇ ಬಸವಪ್ರಜ್ಞೆ.

ಹನ್ನೆರಡನೆಯ ಶತಮಾನದಲ್ಲಿ ಆಧ್ಯಾತ್ಮಿಕ ಪ್ರಜ್ಞೆಯಿಂದ ಕೂಡಿದ ಸಾಮಾಜಿಕ ಆಂದೋಲನಕ್ಕೆ ನಾಂದಿ ಹಾಡಿದ ಬಸವಣ್ಣನವರು ಇಂದಿಗೂ ಕೋಟ್ಯಂತರ ಜನರ ಹೃದಯಸಿಂಹಾಸನದಲ್ಲಿ ರಾರಾಜಿಸುತ್ತಿದ್ದಾರೆ. ಅಹಂ ಮತ್ತು ಶೋಷಣೆ ಇಲ್ಲದ ಸರಳ ಸಹಜವಾದ ಸಮಾಜ ನಿರ್ಮಾಣಕ್ಕಾಗಿ ಆಧ್ಯಾತ್ಮಿಕ ಮತ್ತು ಭೌತಿಕ ಶಕ್ತಿಗಳಲ್ಲಿ ಏಕತೆಯನ್ನು ಸಾಧಿಸಬೇಕು ಎಂಬುದನ್ನು ಅವರು ಲಿಂಗಜಂಗಮದ ಅಂದರೆ 'ಕುಂದಿಲ್ಲದ ಸಮಾಜವೆಂಬ ದೇವರ' ಮೂಲಕ ತೋರಿಸಿಕೊಟ್ಟರು. ಜನರು ಬಸವ ಪ್ರಜ್ಞಾವಂತರಾದರೆ ಈ ನಾಡು ಸರ್ವ ರೀತಿಯಿಂದಲೂ ಸುಂದರವಾಗುವುದರಲ್ಲಿ ಸಂಶಯವಿಲ್ಲ.

ಬಸವಪ್ರಜ್ಞೆ ಎಂದರೆ ಕರ್ಮಸಿದ್ಧಾಂತವನ್ನು ಬಿಟ್ಟು ಕಾಯಕ ಸಿದ್ಧಾಂತವನ್ನು ಹಿಡಿಯುವುದು. ಬಸವಪ್ರಜ್ಞೆ ಎಂದರೆ ಬಸವಣ್ಣನವರ ಸರ್ವರೀತಿಯ ಸಮಾನತಾ ತತ್ತ್ವ ಅರಿಯುವುದು, ಬಸವಪ್ರಜ್ಞೆ ಎಂದರೆ ಜೀವನವನ್ನು ಮತ್ತು ಉಪಜೀವನವನ್ನು ಅಭೇದ್ಯವಾಗಿ ಸಾಗಿಸುವುದು.

ಬಸವಪ್ರಜ್ಞೆ ಎಂದರೆ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಪ್ರಜ್ಞೆ, ಈ ಸಮಾಜವನ್ನು ಎಲ್ಲ ರೀತಿಯಿಂದಲೂ ಮಾನವೀಯಗೊಳಿಸುವ ಪ್ರಜ್ಞೆ. ಬಸವಪ್ರಜ್ಞೆ ಎಂದರೆ ವಿಶ್ವಕ್ಕೆ ದೇವರು ಒಬ್ಬನೇ ಎಂದು ನಂಬಿ ಜಾತಿಭೇದ, ಲಿಂಗಭೇದ, ವರ್ಗಭೇದ, ವರ್ಣಭೇದ ಮತ್ತು ಕುಲಭೇದಗಳನ್ನು ಅಳಿಸಿಹಾಕುವುದು. ಬಸವಪ್ರಜ್ಞೆ ಎಂದರೆ ಮನುಧರ್ಮವನ್ನು ಬಿಟ್ಟು ಮಾನವ ಧರ್ಮ ಸ್ವೀಕರಿಸುವುದು. ಬಸವಪ್ರಜ್ಞೆ ಎಂದರೆ ಜೀವ ವಿರೋಧಿ ಶಸ್ತ್ರ, ಶಾಸ್ತ್ರ ಮತ್ತು ಮೂರ್ತಿಪೂಜೆ ತ್ಯಜಿಸುವುದು. ಬಸವಪ್ರಜ್ಞೆ ಎಂದರೆ ನಮ್ಮೊಳಗೇ ಕಟ್ಟಳೆಗಳನ್ನು ಹಾಕಿಕೊಳ್ಳುವುದು. ನಮ್ಮ ತಪ್ಪುಗಳನ್ನು ನಾವೇ ಬಹಿರಂಗ ಪಡಿಸುವುದು. ಅಹಂಕಾರ ನಾಶಮಾಡುವುದು. ಬಸವಪ್ರಜ್ಞೆ ಎಂದರೆ ಕೇಡಿಲ್ಲದ, ಸುಲಿಗೆಯಿಲ್ಲದ ಸಮಾಜದ ಬಗ್ಗೆ ಚಿಂತಿಸುವುದು. ಎಲ್ಲ ಸಂಸ್ಕೃತಿ, ನಾಗರಿಕತೆ ಮತ್ತು ಧರ್ಮಗಳ ವಿಚಾರಧಾರೆಗಳಲ್ಲಿನ ವೈವಿಧ್ಯದಲ್ಲಿ ಏಕತೆಯನ್ನು ಹುಡುಕುವ ಪ್ರಜಾಪ್ರಭುತ್ವವಾದಿ ಪ್ರಜ್ಞೆಯೇ ಬಸವಪ್ರಜ್ಞೆ.

ಭೌತಿಕ ಮತ್ತು ಆಧ್ಯಾತ್ಮಿಕ ಜಗತ್ತುಗಳಲ್ಲಿ ಏಕಕಾಲಕ್ಕೆ ಜೀವಿಸುವುದನ್ನು ಕಲಿಸುವ ಪ್ರಜ್ಞೆಯೇ ಬಸವಪ್ರಜ್ಞೆ. ಭೌತಿಕ ನೆಲೆಯ ಅನುಭವದ ಮೂಲಕ ಆಧ್ಯಾತ್ಮಿಕ ನೆಲೆಯ ಅನುಭಾವ ಪಡೆಯುವುದೇ ಬಸವಪ್ರಜ್ಞೆ.

ಈ ಭೂಮಿಯನ್ನು ಎಲ್ಲ ರೀತಿಯಿಂದಲೂ ಬದುಕಲು ಯೋಗ್ಯಗೊಳಿಸುವುದಕ್ಕಾಗಿ ದಾರಿದೀಪವಾಗುವ ಪ್ರಜ್ಞೆಯೇ ಬಸವಪ್ರಜ್ಞೆ.

ಬಸವಪ್ರಜ್ಞೆ ಎಂದರೆ ಎಲ್ಲ ವಿಧದ ಅನ್ಯಾಯ ವಿರೋಧಿಸುತ್ತ ಸುಲಿಗೆ ವ್ಯವಸ್ಥೆಯನ್ನು ತಿರಸ್ಕರಿಸುವುದು. ನ್ಯಾಯನಿಷ್ಠುರಿಗಳಾಗುವುದು. ದಾಕ್ಷಿಣ್ಯಕ್ಕೊಳಗಾಗಿ ನ್ಯಾಯವನ್ನು ಕಂಡೂ ಕಾಣದಂತಿರುವ ಸ್ಥಿತಿಯಿಂದ ಹೊರಬರುವುದು. ಅನ್ಯಾಯದ ವಿರುದ್ಧ ಧ್ವನಿ ಎತ್ತುವುದು.

ದಯಾನಿಧಿಯಾಗಿದ್ದ ಬಸವಣ್ಣನವರು ಸರಳ ಸಹಜವಾದ ಸ್ವತಂತ್ರ ಬದುಕಿನ ಕಡೆ ಮನುಷ್ಯನನ್ನು ಅದು ಹೇಗೆ ತಂದರು? ಕಾಯಕದ ಮಹತ್ತ್ವ ಸಾರುವುದರ ಮೂಲಕ ಅದು ಹೇಗೆ ಮಾನವಘನತೆ ಪ್ರತಿಷ್ಠಾಪಿಸಿದರು? ಇದನ್ನೆಲ್ಲ ಅರಿಯುವ ಪ್ರಜ್ಞೆಯೇ ಬಸವಪ್ರಜ್ಞೆ!

ಬಸವಣ್ಣನವರು ಜನ್ಮತಾಳುವ ಮೊದಲೇ ಈ ದೇಶದಲ್ಲಿ ಲೋಕಾಯತರು, ಮಹಾವೀರ ಮತ್ತು ಬುದ್ಧನಂಥ ಅನೇಕ ಮಹಾತ್ಮರು ಮನುಷ್ಯನನ್ನು ಕರ್ಮಕೂಪದಲ್ಲಿ ಸಿಗಿಸುವುದನ್ನು, ಶೋಷಣೆ ಮಾಡುವುದನ್ನು ಮತ್ತು ಹುಟ್ಟಿನ ಮೂಲದಿಂದ ಬರುವ ಶ್ರೇಷ್ಠತೆಯನ್ನು ಅಲ್ಲಗಳೆದರು. ಶೂದ್ರರು, ಪಂಚಮರು ಮೊದಲುಮಾಡಿ ಸರ್ವರೂ ಸರ್ವ ರೀತಿಯಲ್ಲೂ ಸಮಾನತೆಯಿಂದ ಬದುಕುವಂಥ ಸಮಾಜದ ಕಲ್ಪನೆ ಕೊಟ್ಟರು. ಆದರೆ ಬಸವಣ್ಣನವರು ಇದನ್ನು ಸಾಧಿಸುವ ದಾರಿಯನ್ನು ತೋರಿಸಿಕೊಟ್ಟರು. ಅಲ್ಪಸಂಖ್ಯೆಯಲ್ಲಿರುವ ಅನುತ್ಪಾದಕ ವರ್ಣಗಳ ಜನ ಸದಾ ಉತ್ಪಾದನೆಯಲ್ಲಿ ತೊಡಗುವ ಬಹುಸಂಖ್ಯಾತ ಶೂದ್ರರನ್ನು, ಪಂಚಮರನ್ನು ಮತ್ತು ಮಹಿಳೆಯರನ್ನು ಏಕೆ ದೂರವಿಟ್ಟಿದ್ದಾರೆ ಎಂಬುದನ್ನು ಬಸವಣ್ಣನವರು ವಿಶ್ಲೇಷಿಸಿದರು. ವರ್ಣ, ಜಾತಿ, ಜ್ಞಾನ ಹಾಗೂ ಅಧಿಕಾರದ ಮೂಲಕ ಮಾಡುವ ಸುಲಿಗೆಯೇ

ಸಮಾಜದಲ್ಲಿನ ದುಃಖದ ಮೂಲವೆಂಬುದನ್ನು ಜನಸಮುದಾಯಕ್ಕೆ ತೋರಿಸಿಕೊಟ್ಟರು. ಸುಲಿಗೆಗೊಳಗಾದ ಜನಸಮುದಾಯಕ್ಕೆ ಹೊಸ ದಾರಿ ತೋರಿಸುವುದೇ ತಮ್ಮ ಬದುಕಿನ ಗುರಿ ಎಂಬ ಭಾವದೊಂದಿಗೆ ಬಸವಣ್ಣನವರು ಅವಿಶ್ರಾಂತ ಚಿಂತನೆ ಮಾಡಿದರು. ಹೊಸ ಸಮಾಜದ ಜನಸಮುದಾಯಕ್ಕೆ ಹೊಸ ದೇವರು, ಹೊಸವಿಚಾರ, ಹೊಸ ಜೀವನಕ್ರಮ, ಹೊಸ ತಿಳಿವಳಿಕೆ, ಹೊಸ ಮೌಲ್ಯ ಮತ್ತು ಹೊಸ ಮಾನವ ಸಂಬಂಧಗಳನ್ನು ಕಲ್ಪಿಸುವ ಚಿಂತನೆ ಅದಾಗಿತ್ತು. ಈ ಹೊಸತನಕ್ಕೆ ಅಡ್ಡಿಯುಂಟುಮಾಡುವ ಹಳೆಯದೆಲ್ಲವನ್ನೂ ಅವರು ಪ್ರಶ್ನಿಸಿದರು. ಕಂಠಪಾಠದ ಜಡ ಸಂಸ್ಕೃತಿಯ ಟೊಳ್ಳುತನ ಬಹಿರಂಗಗೊಳಿಸಿದರು. ಕಾಯಕ ಪ್ರಧಾನವಾದ ಚೈತನ್ಯ ಸಂಸ್ಕೃತಿಯ ಹರಿಕಾರರಾದರು. ಈ ಹಿನ್ನೆಲೆಯಲ್ಲಿ ಅವರು ಸಾಧಿಸಿದ್ದನ್ನು ಅವರ ವಚನಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಿದಾಗ ಬಸವಣ್ಣನವರು ಪರಂಪರಾಗತ ವಾದ ಸುಲಿಗೆ ವ್ಯವಸ್ಥೆಯನ್ನು ಬೆಂಬಲಿಸುವವರಿಗೆ ಹೇಗೆ ಬೆಂಕಿಯಾದರು ಮತ್ತು ಸುಲಿಗೆಗೊಳಗಾದವರಿಗೆ ಹೇಗೆ ಬೆಳಕಾದರು ಎಂಬುದು ಕಣ್ಣಿಗೆ ಕಟ್ಟುತ್ತದೆ.

ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ?
ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೇ ರೂಪಾದೆ.
ಇನ್ನು ಜಂಗಮವೇ ಲಿಂಗವೆಂದು ನಂಬಿದೆ ಕೂಡಲಸಂಗಮದೇವಾ.

ಬಸವಣ್ಣನವರ ದೇವರೆಂದರೆ ಅಂತಃಸಾಕ್ಷಿ. ಬಸವಣ್ಣನವರು ಆ ದೇವರನ್ನು ಅರಿಯುವ ಮೊದಲು ಮೂರ್ತಿರೂಪ ತಾಳಿದ್ದ ದೇವರುಗಳು ಬಸವಣ್ಣನವರ ದೇವರುಗಳೇ ಅಲ್ಲ! ಆ ಅಂತಃಸಾಕ್ಷಿಯನ್ನೇ ಇಷ್ಟಲಿಂಗದ ರೂಪದಲ್ಲಿ ನೋಡಲಾಯಿತು. ಹೀಗಾಗಿ ಇಷ್ಟಲಿಂಗವು ಅಂತಃಸಾಕ್ಷಿಯ ಸಂಕೇತವಾಯಿತು. ಆ ಅಂತಃಸಾಕ್ಷಿಯ ಎದುರು ಇಡೀ ಲೋಕವೇ ಒಂದಾಗುತ್ತದೆ. ಅಂತೆಯೇ ಬಸವಣ್ಣನವರು ಸಕಲಜೀವಿಗಳಿಂದ ಕೂಡಿದ ಜಂಗಮಜಗತ್ತನ್ನೇ ದೇವರೆಂದು ಭಾವಿಸಿದರು. ಹೀಗೆ ಅವರು ಅಂತಃಸಾಕ್ಷಿ, ದೇವರು ಮತ್ತು ಸಮಾಜವನ್ನು ಬೇರೆಯಾಗಿ ಕಾಣಲಿಲ್ಲ. ಈ ರೀತಿ ಅವರು ದೇವರನ್ನು ಪಡೆದರು.

ಸ್ವಯಂ ಲಿಂಗದನುಭಾವ ತನಗೆ ದೊರಕೊಂಡ ಬಳಿಕ
ದೇವಲೋಕವೆಂಬುದೇನೋ?
ಮರ್ತ್ಯಲೋಕವೆಂಬುದೇನೋ?
ಆವುದರಲ್ಲಿಯೂ ಭೇದವೇನಯ್ಯಾ,
ಕೂಡಲಸಂಗಮದೇವನೊಲಿದ ಬಳಿಕ ಆಲಸ್ಯವುಂಟೆ?

ಬಸವಣ್ಣನವರು ತಮ್ಮೊಳಗಿನ ದೇವರನ್ನು ಕಂಡುಕೊಂಡಾಗ ಎಲ್ಲವೂ ಅಭೇದ್ಯವಾಗಿ ಕಾಣತೊಡಗಿತು. ತಾರತಮ್ಯ ಮಾಡುವ ಜ್ಞಾನ ತೃಣಸಮಾನವಾಗಿ ಗೋಚರಿಸತೊಡಗಿತು. ಅವರು ಈ ಸತ್ಯವನ್ನು ಲೋಕಕ್ಕೆ ತಿಳಿಸುವುದಕ್ಕಾಗಿ ಶ್ರಮಿಸುವಾಗ ಆಲಸ್ಯವೆಂಬುದೇ ಉಂಟಾಗಲಿಲ್ಲ!

ದೇವರು ನಮ್ಮೊಳಗೇ ಇದ್ದಾಗ ದೇಹವು ಸಹಜವಾಗಿಯೇ ಕೈಲಾಸವಾಗುವುದು. "ಕಾಯವೇ ಕೈಲಾಸ ಇದು ಸತ್ಯ" ಎಂಬುದು ಬಸವಣ್ಣನವರ ನಿಲುವಾಗಿದೆ.

ಬಸವಣ್ಣನವರ ಈ ದೇವರ ಕಲ್ಪನೆಯನ್ನು ಚೆನ್ನಬಸವಣ್ಣನವರು ಗುರುತಿಸಿದ್ದಾರೆ. ಅಂತೆಯೆ 'ಅನಾದಿ ಬಸವಣ್ಣ, ಆದಿ ಲಿಂಗ' ಎನ್ನುತ್ತಾರೆ.

ಆದಿ ಬಸವಣ್ಣ, ಅನಾದಿ ಲಿಂಗವೆಂದೆಂಬುದು,
ಹುಸಿ ಹುಸಿ, ಈ ನುಡಿಯ ಕೇಳಲಾಗದು.
ಆದಿ ಲಿಂಗ, ಅನಾದಿ ಬಸವಣ್ಣನು
ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು.
ಪ್ರಸಾದವು ಬಸವಣ್ಣನನುಕರಿಸಲಾಯಿತ್ತು.
ಇಂತೀ ತ್ರಿವಿಧಕ್ಕೆ ಬಸವಣ್ಣನೇ ಕಾರಣನೆಂದರಿದೆನಯ್ಯಾ
ಕೂಡಲಚೆನ್ನಸಂಗಮದೇವಾ.

ಇಷ್ಟಲಿಂಗವು ಬಸವಣ್ಣನವರ ಅಂತಃಕರಣದಿಂದ ಹುಟ್ಟಿದ ಲಿಂಗವಾಗಿದೆ. ಬಸವಣ್ಣನವರ ದೇವರು ಅಂತಃಕರಣದ ಸಂಕೇತವಾಗಿದ್ದಾನೆ. ಎಲ್ಲ ಧರ್ಮಗಳ ಮೂಲ ಅಂತಃಕರಣವಾಗಿದೆ. ಅಂತೆಯೆ ಬಸವಣ್ಣನವರು "ದಯವಿಲ್ಲದ ಧರ್ಮವಾವುದಯ್ಯಾ?" ಎಂದು ಪ್ರಶ್ನಿಸುತ್ತಾರೆ. ಬಸವಣ್ಣನವರು ಅಂತಃಕರಣದ ಸಾಕಾರಮೂರ್ತಿಯಾಗಿದ್ದರಿಂದಲೇ ಮನುಸಂಸ್ಕೃತಿಯ ಕ್ರೌರ್ಯದ ವಿರುದ್ಧ ಸಿಡಿದೆದ್ದರು. ವೈದಿಕರ ಸ್ವರ್ಗ ನರಕಗಳನ್ನು ಅಲ್ಲಗಳೆದರು.

ಭಕ್ತಿಯ ಪಿತ್ತ ತಲೆಗೇರಿ ಕೈಲಾಸದ ಬಟ್ಟೆಯ ಹತ್ತುವ ವ್ಯರ್ಥರ ಕಂಡು
ಎನ್ನ ಮನ ನಾಚಿತ್ತು, ನಾಚಿತ್ತು.
ಕೈಲಾಸವೆಂಬುದೇನೋ, ಪೃಥ್ವಿಯ ಮೇಲೊಂದು ಮೊರಡಿ.

ಸ್ವರ್ಗ ನರಕಗಳ ಭ್ರಮೆಯನ್ನಿಟ್ಟುಕೊಂಡು ಬದುಕನ್ನು ಹಸನುಗೊಳಿಸಲಿಕ್ಕಾಗದು. ಅರಿವಿನ ಪೊರಕೆ ಹಿಡಿದು ಅಸಹ್ಯವಾದುದನ್ನೆಲ್ಲ ಗುಡಿಸಿದಾಗ ಮಾತ್ರ ಬದುಕು ಹಸನಾಗುವುದು. ವೈದಿಕರು ಅಸಹ್ಯವಾದುದನ್ನು ಸೃಷ್ಟಿಸಿರುವುದರಲ್ಲಿ ಸ್ವರ್ಗ ನರಕಗಳೂ ಸೇರಿವೆ.

ಅಂತರಂಗದೊಳಗಿರ್ದ ನಿರವಯಲಿಂಗವನು ಸಾವಯಲಿಂಗವ ಮಾಡಿ,
ಶ್ರೀಗುರುಸ್ವಾಮಿ ಕರಸ್ಥಲಕ್ಕೆ ತಂದುಕೊಟ್ಟನಾಗಿ,
ಆ ಇಷ್ಟಲಿಂಗವೇ ಅಂತರಂಗವನಾವರಿಸಿ
ಅಂತರಂಗದ ಕರಣಂಗಳೇ ಕಿರಣಂಗಳಾಗಿ
ಬೆಳಗುವ ಚಿದಂಶವೇ ಪ್ರಾಣಲಿಂಗವು,
ಆ ಮೂಲ ಚೈತನ್ಯವೇ ಭಾವಲಿಂಗವು,
ಇದನರಿದು, ನೋಡುವ ನೋಟ ಭಾವಪರಿಪೂರ್ಣವಾಗಿ
ತಾನು ತಾನಾದಲ್ಲದೆ, ಇದಿರಿಟ್ಟು ತೋರುವುದಿಲ್ಲವಾಗಿ
ಅಖಂಡ ಪರಿಪೂರ್ಣವಪ್ಪ ನಿಜವು ತಾನೆ, ಕೂಡಲಸಂಗಮದೇವ.

ಅಂತರಂಗದ ನಿರಾಕಾರ ಲಿಂಗವು ಇಷ್ಟಲಿಂಗದ ಕುರುಹು ತಾಳಿ ಕರಸ್ಥಲಕ್ಕೆ ಬರುವುದೆಂದು ಹೇಳುವ ಬಸವಣ್ಣನವರು ಇಲ್ಲಿ ಅದರ ಸೂಕ್ಷ್ಮಾತಿಸೂಕ್ಷ್ಮ ರೂಪದ ಬಗ್ಗೆ ತಿಳಿಸುತ್ತಾರೆ. 'ತಾನು ತಾನಾದಲ್ಲದೆ' ಆ ಇಷ್ಟಲಿಂಗವು ಕಾಣುವುದಿಲ್ಲ ಎಂದು ತಿಳಿಸುತ್ತಾರೆ. ಕುರುಹನ್ನು ನೋಡುವುದು ಬೇರೆ. ಅರಿವನ್ನು 'ನೋಡುವುದು' ಬೇರೆ.

'ಇಷ್ಟಲಿಂಗವೆಂಬ ಕುರುಹು' ಬರಿ ಸಾಧನ; 'ಇಷ್ಟಲಿಂಗವೆಂಬ ಅರಿವು' ಮಾತ್ರ ದೇವರು. ಆದ್ದರಿಂದ ಈ ಅರಿವಿದ್ದಾಗಲೇ ಕುರುಹಾದ ಇಷ್ಟಲಿಂಗ ದೇವರಾಗಿ ತೋರುವುದು. ಆಗ ಸಮಾಜ (ಜಂಗಮ)ದ ದಿಗ್ದರ್ಶನವಾಗುವುದು. ಇಂಥ ಅರಿವಿಲ್ಲದ ಲಿಂಗಪೂಜೆಯನ್ನು ಬಸವಣ್ಣನವರು ನಿರರ್ಥಕವೆಂದು ತಿಳಿಸಿದ್ದಾರೆ.

ಎರೆದಡೆ ನೆನೆಯದು, ಮರೆದಡೆ ಬಾಡದು
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ
ಕೂಡಲಸಂಗಮದೇವಾ ಜಂಗಮಕ್ಕೆರೆದಡೆ ಸ್ಥಾವರ ನೆನೆಯಿತ್ತು.

ಬಸವಣ್ಣನವರು ಅರುಹಿದ ಇಷ್ಟಲಿಂಗಪೂಜೆಯ ಒಳಗೆ ಸಾಮಾಜಿಕ ಜವಾಬ್ದಾರಿಯಿದೆ. ಆ ಜವಾಬ್ದಾರಿಯನ್ನು ನಿಭಾಯಿಸದೆ ಲಿಂಗವಂತರಾಗಲು ಸಾಧ್ಯವಿಲ್ಲ.

ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು;
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರಕಠಿಣವಾಯಿತ್ತು.
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು;
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು.
ಇದು ಕಾರಣ ಕೂಡಲಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯಾ.

ಜಂಗಮಭಕ್ತಿ ಇಲ್ಲದೆ ಅಂದರೆ ತನುಮನಧನನೊಂದಿಗೆ ಸಮಾಜಸೇವೆ ಮಾಡದೆ ಬರಿ ಲಿಂಗಭಕ್ತಿ ನಿರರ್ಥಕವೆಂಬುದು ಬಸವಣ್ಣನವರ ದೃಢನಿಲುವಾಗಿದೆ:

ಅನುದಿನದಲ್ಲಿ ಮಜ್ಜನಕ್ಕೆರೆದು ನೆನೆದು ಲಿಂಗ ಕರಿಗಟ್ಟಿತ್ತು;
ನೀರನ್ನೊಲ್ಲದು, ಬೋನವ ಬೇಡದು, ಕರೆದಡೆ ಓ ಎನ್ನದು;
ಸ್ಥಾವರ ಪೂಜೆ, ಜಂಗಮದ ಉದಾಸೀನ
ಕೂಡಲಸಂಗಯ್ಯನೊಲ್ಲ ನೋಡಾ.

ಸಮಾಜ ಮತ್ತು ದೇವರು ಗಂಡಭೇರುಂಡ ಪಕ್ಷಿಯ ಎರಡು ತಲೆಗಳಿದ್ದಂತೆ. ತಲೆಗಳು ಬೇರೆಯಾಗಿದ್ದರೂ ದೇಹ ಒಂದೇ ಆಗಿರುತ್ತದೆ.

ಭೇರುಂಡನ ಪಕ್ಷಿಗೆ ದೇಹ ಒಂದೇ,
ತಲೆ ಎರಡರ ನಡುವೆ ಕನ್ನಡವಡ ಕಟ್ಟಿ
ಒಂದು ತಲೆಯಲ್ಲಿ ಹಾಲನೆರೆದು,
ಒಂದು ತಲೆಯಲ್ಲಿ ವಿಷವನೆರೆದಡೆ
ದೇಹವೊಂದೇ ವಿಷ ಬಿಡುವುದೇ ಅಯ್ಯಾ?
ಲಿಂಗದಲ್ಲಿ ಪೂಜೆಯ ಮಾಡಿ ಜಂಗಮದಲ್ಲಿ
ನಿಂದೆಯ ಮಾಡಿದಡೆ
ನಾ ಬೆಂದೆ ಕಾಣಾ, ಕೂಡಲಸಂಗಮದೇವಾ.

ಬಸವಣ್ಣನವರಿಗೆ ಲಿಂಗವು ಪರಿಪೂರ್ಣ ಸಮಾಜದ ಲಾಂಛನವಾಗಿ ಕಾಣುತ್ತದೆ. ಅವರು ಶರಣೆನ್ನುವುದು ಆ ಲಾಂಛನಕ್ಕೆ. ಲಾಂಛನಕ್ಕೆ ತಕ್ಕಂತೆ ಸಮಾಜಮುಖಿ ನಡೆ ಇರಲೇಬೇಕೆಂಬುದು ಅವರ ಹಠವಾಗಿದೆ:

ಅಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ;
ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದಡೆ
ಕೂಡಲಸಂಗಮದೇವಾ, ನೀ ಸಾಕ್ಷಿಯಾಗಿ ಛೀ ಎಂಬೆನು.

ಸೂಕ್ಷ್ಮಾತಿಸೂಕ್ಷ್ಮ ಸ್ವರೂಪದ ಇಷ್ಟಲಿಂಗವನ್ನು ಹೀಗೆ ಸಮಾಜಕ್ಕೆ ಪರ್ಯಾಯವಾಗಿ ನೋಡುವ ಬಸವಣ್ಣನವರು ಅದೇ ಲಿಂಗವನ್ನು ವಿರಾಟ್ ಸ್ವರೂಪದಲ್ಲೂ ನೋಡುತ್ತಾರೆ. ಮತ್ತೆ ಅದನ್ನು ನಿರಾಕಾರ ರೂಪಕ್ಕೆ ಒಯ್ಯುತ್ತಾರೆ:

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ;
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮುಕುಟ;
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲಸಂಗಮದೇವಯ್ಯಾ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.

ಕರಸ್ಥಳಕ್ಕೆ ಬಂದು ಚುರುಕಾದ ಕೂಡಲಸಂಗಮದೇವ ನಿರಾಕಾರಮೂಲದವನಾಗಿದ್ದಾನೆ. ಬಸವಣ್ಣನವರು ಸಾಕಾರ ನಿರಾಕಾರಗಳ ಬಗ್ಗೆ ಭಾರೀ ಜಿಜ್ಞಾಸೆ ಮಾಡಿದ್ದಾರೆ. ಆ ಕುರಿತ ಅವರ ತರ್ಕವು ಹೃದಯಂಗಮವಾಗಿದೆ:

ಸಾಕಾರ ಸಂಗನಲ್ಲಿ ನಿರಾಕಾರವಿಲ್ಲೆಂದು
ನಿರಾಕಾರ ಸಂಗವನರಸಿ ತೊಳಲಿ ಬಳಲಿದೆನಯ್ಯಾ
ನಿಶ್ಚಿಂತ ನಿಜಭಜನೆ ನೆಲೆಗೊಳ್ಳದೆನಗೆ,
ಭ್ರಾಂತು ಭ್ರಮೆ ಇಲ್ಲದಂತೆ ಎಂದಪ್ಪುದೋ ಎನಗೆ;
ಕೂಡಲಸಂಗಮದೇವಾ ಕೇಳಯ್ಯಾ.

ಬಸವಣ್ಣನವರು ಬಯಸುವುದು ನಿರಾಕಾರ ಸಂಗನನ್ನು. ಗಣಸಂಕೇತವಿಲ್ಲದೆ ನಿರಾಕಾರ ಸಂಗನನ್ನು ಆರಾಧಿಸುವುದು ಹೇಗೆ ಎಂಬ ವಾಸ್ತವ ಅವರನ್ನು ಕಾಡಿತು:

ಆತ್ಮನೇ ಲಿಂಗವೆಂಬರು;
ಆತ್ಮನ ದೇಹರಹಿತವಾಗಿ ಕಾಂಬವರುಂಟೆ?
ಪ್ರಾಣವೇ ಲಿಂಗವೆಂಬರು;
ಪ್ರಾಣವನು ಕಾಯವ ಬಿಟ್ಟು ಬೇರೆ ಕಾಣಬಹುದೆ?
ಕಂಡೆಹೆನೆಂದಡೆ ಅದು ನಿರವಯ, ನಿರಾಕಾರವಾದುದು,
ಭಾವಕ್ಕೆ ಬಾರದು.
ಭಾವಕ್ಕೆ ಬಾರದುದ ಪೂಜಿಸಬಹುದೆ?
ಅದು ಕಾರಣ, ಕಾಯದ ಕರಸ್ಥಲದಲ್ಲಿ
ಕ್ರಿಯಾಲಿಂಗವಿಡಿದು ನೋಡಲು
ಪ್ರಾಣ ಆತ್ಮನೆಂಬುವು ಬೇರಿಲ್ಲ.
ಇದು ಕಾರಣ ಇಷ್ಟವ ಬಿಟ್ಟು ಬಟ್ಟಬಯಲೇ ವಸ್ತುವೆಂಬ
ಮಿಟ್ಟಿಯ ಭಂಡರ ನಮ್ಮ ಕೂಡಲಸಂಗನ ಶರಣರು ಮೆಚ್ಚರು.

ಹೀಗೆ ಬಸವಣ್ಣನವರ ಇಷ್ಟಲಿಂಗ ರೂಪ ತಾಳಿತು. (ಬಸವಣ್ಣನವರಿಗಿಂತಲೂ ಮೊದಲು ಕರಡಿಗೆಯಲ್ಲಿ ಹೊತ್ತೊಯ್ಯುವ ಲಿಂಗಗಳಿದ್ದವು. ಜನ ತಮ್ಮ ಮನೆಯ ಲಿಂಗದೇವರ ಪ್ರತಿರೂಪವನ್ನು ಮಾಡಿಕೊಂಡಿರುತ್ತಿದ್ದರು. ದೇಶಾಂತರ ಹೋದಾಗ ಆ ಪ್ರತಿಲಿಂಗವನ್ನು ಪೂಜಿಸುತ್ತಿದ್ದರು. ಬಸವಣ್ಣನವರ ಇಷ್ಟಲಿಂಗವು ಶರಣಗಣದ ಅರಿವಿನ ಕುರುಹು.) ಆದರೆ ಬಸವಣ್ಣನವರಿಗೆ ಇಷ್ಟಾದರೂ ಸಮಾಧಾನವಿಲ್ಲ. ಲಿಂಗದ ನೈಜಪ್ರತಿರೂಪ ಸಮಾಜ (ಜಂಗಮಲಿಂಗ)ವೇ ಆಗಿದೆ ಎಂಬ ನಿರ್ಧಾರಕ್ಕೆ ಬಂದಮೇಲೆಯೆ ಅವರು ತೃಪ್ತರಾಗುತ್ತಾರೆ.

ಲಿಂಗವೆಂತಿಪ್ಪುದೆಂದರಿಯೆನು,
ಲಿಂಗದ ನಿಲವೆಂತುಂಟೆಂಬುದನ್ನರಿಯೆನು,

ಲಿಂಗಾರ್ಚನೆಯ ಮಾತು ಎನಗೇಕಯ್ಯಾ?
ಜಂಗಮಲಿಂಗವಾಗಿ ಬಂದು ನೀವಿರುತ್ತಿರಲು,
ಸ್ಥಾವರಕ್ಕೆ ಮೆಚ್ಚಿ ಮರುಳಾದೆನು.
ಎನ್ನ ತಪ್ಪನೆ ಎಣಿಸಿಹೆನೆಂದಡೆ ಕಡೆಯಿಲ್ಲ.

ಹೀಗೆ ಬಸವಣ್ಣನವರು ದೇವಸಹಿತ ಸಮಾಜಮುಖಿಯಾಗುತ್ತಾರೆ. ಆ ಮೂಲಕ ದೇವರ ವಿರಾಟ್ ಸ್ವರೂಪದ ಅರಿವು ಮೂಡಿಸುತ್ತಾರೆ. ಅಂತಃಸಾಕ್ಷಿಯ ಸೂಕ್ಷ್ಮಾತಿ ಸೂಕ್ಷ್ಮರೂಪ (micro level) ಮತ್ತು ಇಡೀ ವಿಶ್ವದ ವಿರಾಟ್ ಸ್ವರೂಪ (macro level)ಗಳ ಸಂಗಮದಿಂದ ಸೃಷ್ಟಿಯಾದ ಇಷ್ಟಲಿಂಗವು ಮನುಷ್ಯನ ಒಳಹೊರಗುಗಳನ್ನು ಏಕಕಾಲಕ್ಕೆ ಪ್ರತಿನಿಧಿಸುತ್ತದೆ. ಮಾನವನ ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಬಯಸುತ್ತದೆ. ಅವೆರಡನ್ನೂ ಒಂದಾಗಿಸುತ್ತದೆ. ಅಂತೆಯೆ ಇಷ್ಟಲಿಂಗವನ್ನು ನಂಬಿದ ಶರಣರ ಮಾತುಗಳು ವಚನ (promise) ಗಳಾಗಿವೆ. ಅವರು ನುಡಿದಂತೆ ನಡೆದರು, ದುಡಿದರು, ಇಹಪರಗಳನ್ನು ತಮ್ಮ ಕ್ರಿಯಾಶಕ್ತಿಯ ಮೂಲಕ ಒಂದಾಗಿಸಿದರು. ಅಂತೆಯೆ 'ವಚನ ಸಂಸ್ಕೃತಿ' ಎಂಬುದು 'ಕಾಯಕರಹಿತ ಕಂಠಪಾಠ ಸಂಸ್ಕೃತಿ'ಗೆ ವಿರುದ್ಧವಾಗಿದೆ. ಕಂಠಪಾಠ ಸಂಸ್ಕೃತಿಯಲ್ಲಿ ದುಡಿಯದ ಜನ ಯಜಮಾನರಾಗಿರುತ್ತಾರೆ. ವಚನಸಂಸ್ಕೃತಿಯಲ್ಲಿ ದುಡಿಯುವ ಜನ ಅಂದರೆ ಶೂದ್ರರು ಮತ್ತು ಅತಿಶೂದ್ರರು ಮುಖ್ಯರಾಗುತ್ತಾರೆ. ಕಂಠಪಾಠ ಸಂಸ್ಕೃತಿಯಲ್ಲಿ ಈ ಕಾಯಕ ಜೀವಿಗಳು ಸೇವೆ ಮತ್ತು ಉತ್ಪಾದನೆ ಮಾಡುವುದಕ್ಕಾಗಿ ಮಾತ್ರ ಇದ್ದವರು. ಫಲ ಉಣ್ಣುವುದಕ್ಕಾಗಿ ಅಲ್ಲ!

ಸಂಕೇತಗಳುಳ್ಳ ಗಣ ಸಮಾಜದ ಪರಂಪರೆಯ ಜನರಿಗೆ ಗಣಲಾಂಛನಗಳನ್ನು ಕೊಡುವುದು ಅವಶ್ಯವಾಗಿದೆ. ಹೀಗಾಗಿ ಇಷ್ಟಲಿಂಗವು ಶರಣಗಣಲಾಂಛನವಾಗಿರಲು ಸಾಕು. "ಲಿಂಗಾಯತ ಆಚರಣೆಯ ಸಾಮಾಜಿಕ ಹಿನ್ನೆಲೆ ಗಣಸಮಾಜವೆಂದು ಗ್ರಹಿಸಿ ವಿವೇಚಿಸಿದರೆ ಅದರ ಅನೇಕ ಮೂಲತತ್ತ್ವಗಳ ರಹಸ್ಯ ಬಯಲಾಗುವಂತೆ ತೋರುತ್ತದೆ. ವೀರಶೈವರ ಆರಾಧ್ಯ ತತ್ತ್ವ ಲಿಂಗವಷ್ಟೇ! ಲಿಂಗವು ಬಹುತರವಾಗಿ ಗಣ–ಗೋತ್ರಗಳ ಲಾಂಛನ ತತ್ತ್ವದ ಸಾಧಾರಣೀಕರಣವಾಗಿದೆ.... ಲಿಂಗನಿಷ್ಠೆಯೆಂದರೆ ಗಣದಲ್ಲಿ ನಿಷ್ಠೆ; ಗಣದ ಸದಸ್ಯರು ಪರಸ್ಪರ ಬಂಧುಗಳೆಂಬ ನಿಷ್ಠೆ. ಈ ಸನ್ನಿವೇಶವೇ ಲಿಂಗಾಯತದ ಜಂಗಮಲಿಂಗ ತತ್ತ್ವಕ್ಕೂ ಭಕ್ತ ದೇಹಿಕದೇವ ಎಂಬ ಬೋಧೆಗೂ ಭೌತಿಕ ಹಿನ್ನೆಲೆ ಎಂದು ತೋರುತ್ತದೆ" ಎಂದು ವಿಜಾಪುರದ ಖ್ಯಾತ ಮಾರ್ಕ್ಸ್‌ವಾದಿ ವಿದ್ವಾಂಸ ಪಿ.ಎಸ್.ಪಾಟೀಲರು ತಮ್ಮ 'ಬಸವ ಚಳವಳಿಯ ಭೌತಿಕವಾದಿ ಅಧ್ಯಯನ' ಪುಸ್ತಕದಲ್ಲಿ ತಿಳಿಸಿದ್ದಾರೆ.

ಕಲ್ಯಾಣ ಸಮಾಜ

ದೇವರು ಮತ್ತು ಶುದ್ಧ ಸಮಾಜವನ್ನು ಒಂದಾಗಿ ನೋಡುವ ಬಸವಣ್ಣನವರ ಕಲ್ಯಾಣ ಸಮಾಜದ ಕಲ್ಪನೆ ಅದ್ವಿತೀಯವಾಗಿದೆ. ಸಂಗಮಪ್ರತಿಮಾ ವಿಧಾನದಲ್ಲಿ ಅವರು ಕಲ್ಯಾಣವನ್ನು ವರ್ಣಿಸುವ ಕ್ರಮ ಕುತೂಹಲಕಾರಿಯಾಗಿದೆ. ಕಲ್ಯಾಣದ ಭೌಗೋಳಿಕ ರಚನೆಯನ್ನು ಅವರು ನಮ್ಮ ಮುಂದೆ ಇಡುವುದರ ಜೊತೆಗೇ ಕಲ್ಯಾಣ ಸಮಾಜದ ರಚನೆಯನ್ನೂ ಇಡುತ್ತಾರೆ:

ಅಂಗುಲ ಹನ್ನೆರಡು ಕೂಡಲು ಒಂದು ಗೇಣು,
ಗೇಣು ಎರಡು ಕೂಡಲು ಒಂದು ಮೊಳ,

ಮೊಳವೆರಡು ಕೂಡಲು ಒಂದು ಹಸ್ತ,
ಹಸ್ತವೆರಡು ಕೂಡಲು ಒಂದು ಮಾರು,
ಮಾರೆರಡು ಕೂಡಲು ಒಂದು ಜಂಘೆ,
ಜಂಘೆ ಏಳುನೂರೆಪ್ಪತ್ತು ಕೂಡಲು ಒಂದು ಪಾದಚ್ಛಯ,
ಪಾದಚ್ಛಯವೆರಡುಸಾವಿರದೆಂಟನೂರು ಕೂಡಲು ಒಂದು ಕೂಗಳತೆ,
ಕೂಗಳತೆ ನಾಲ್ಕು ಕೂಡಲು ಒಂದು ಹರದಾರಿ,
ಹರದಾರಿ ನಾಲ್ಕು ಕೂಡಲು ಒಂದು ಯೋಜನ,
ಅಂಥ ಯೋಜನ ನಾಲ್ಕು ಚೌಕಕ್ಕೂ ಹನ್ನೆರಡು ಹನ್ನೆರಡು ಕೂಡಲು
ಬಳಸಿ ನಾಲ್ವತ್ತೆಂಟು ಯೋಜನ ಪ್ರಮಾಣಿಸಿದ ಕಟ್ಟಳೆಯಾಯಿತ್ತು.
ಇಂತಪ್ಪ ಕಟ್ಟಳೆಯಾಗಿದ್ದ ಕಲ್ಯಾಣದೊಳಗಿರುವ ಗಣಂಗಳೆಲ್ಲರನೂ
ಕೂಡಲಸಂಗಯ್ಯಾ ನಿಮ್ಮೊಳು ಕಂಡು ಸುಖಿಯಾಗಿರ್ದೆನು.

ಮನುಷ್ಯನ ಅಂಗಾಂಗಳು, ಚಲನೆ (ಪಾದ) ಮತ್ತು ಧ್ವನಿ (ಕೂಗಳತೆ) ಅಂದರೆ ಜನಸಮುದಾಯದ ಪ್ರಜ್ಞೆಯೊಂದಿಗೆ ಬಸವಣ್ಣನವರು ಕಲ್ಯಾಣದ ಭೌತಿಕ ರೂಪದ ಕಲ್ಪನೆ ಕೊಡುತ್ತಾರೆ. ಅಲ್ಲಿ ಕೂಡುವಿಕೆ ಇದೆ, ಬಳಸುವಿಕೆ ಇದೆ, ಪ್ರಮಾಣಬದ್ಧ ಕಟ್ಟಳೆ ಇದೆ. ಇಂಥ ಕಟ್ಟಳೆಯ ಕಲ್ಯಾಣದೊಳಗೆ ಗಣಗಳಿದ್ದಾರೆ. ಹೀಗೆ ಬಸವಣ್ಣನವರ ಗಣಸಂಸ್ಕೃತಿಯ ಉದಯವಾಗಿದೆ. ಇಂಥ ಸಮುದಾಯವನ್ನು ಬಸವಣ್ಣನವರು ಕೂಡಲಸಂಗಯ್ಯನಲ್ಲಿ ಕಾಣುತ್ತಾರೆ.

ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಹೆಣ್ಣು ಗಂಡುಗಳ ಮಧ್ಯೆ ಸಮಾನತೆಯನ್ನು ಸಾಧಿಸದೆ ಕಲ್ಯಾಣ ಸಮಾಜವನ್ನು ಸೃಷ್ಟಿಸಲಿಕ್ಕಾಗದು, ಇಂಥ ಸಮಾನತೆ ಸಾದಿಸಬೇಕಾದರೆ ಸಮಾಜವು ವರ್ಗರಹಿತ, ವರ್ಣರಹಿತ, ಜಾತಿರಹಿತ ಮತ್ತು ಲಿಂಗಭೇದರಹಿತವಾಗಬೇಕು. ಈ ರೀತಿ ಸಮತಾ ಸಮಾಜಕ್ಕಾಗಿ ಬಸವಣ್ಣನವರು ತಮ್ಮ ತನು ಮನ ಧನಗಳನ್ನು ಅರ್ಪಿಸಿದರು. ಅಮಾನವೀಯವಾದಂಥ ಎಲ್ಲವನ್ನೂ ಪ್ರಶ್ನಿಸಿದರು. ಎಲ್ಲ ದೃಷ್ಟಿಯಿಂದಲೂ ಕಟ್ಟಕಡೆಯ ಮನುಷ್ಯನಾಗಿದ್ದವನು ಮನುಧರ್ಮವು ಸೃಷ್ಟಿಸಿದ್ದ ಅಸಹ್ಯವಾದ ಅಸ್ಪೃಶ್ಯತೆಯ ಕೂಪದಲ್ಲಿ ಬಿದ್ದು ನರಳುತ್ತಿರುವುದನ್ನು ನೋಡಿ ಮಮ್ಮಲ ಮರುಗಿದರು. ಸ್ವತಃ ಕೆಳಜಾತೀಕರಣಕ್ಕೊಳಗಾಗಿ ಹೊಸಮನಃಸ್ಥಿತಿಯನ್ನೇ ಸಾಧಿಸಿದರು. ಅಸ್ಪೃಶ್ಯತೆಯಿಂದ ಕೂಡಿದ ಜಾತಿ ಎಂದರೆ ಬರಿ ಜಾತಿ ಅಲ್ಲ. ಅದರ ಹಿಂದೆ ಸವರ್ಣೀಯರ ಪರವಾದ ಉತ್ಪಾದನಾ ವ್ಯವಸ್ಥೆ ಇದೆ. ಅಸ್ಪೃಶ್ಯರಿಗೆ ವಿರುದ್ಧವಾದ ಸುಲಿಗೆ ವ್ಯವಸ್ಥೆ ಇದೆ, ಅನಾದರವಿದೆ, ಅಪಮಾನವಿದೆ, ಹಿಂಸೆ ಇದೆ, ದುಃಖವಿದೆ, ಯೋಗ್ಯ ಪ್ರತಿಫಲವಿಲ್ಲದ ದುಡಿಮೆ ಇದೆ, ಅಸಹಾಯಕತೆ ಇದೆ, ಹಸಿವು ಇದೆ! ಬಸವಣ್ಣನವರು ಜಾತಿಕೂಪದಲ್ಲಿ ಬಿದ್ದಿದ್ದ ಕಟ್ಟಕಡೆಯ ಮನುಷ್ಯನ ಕಡೆಗೆ ಹೋಗಿ ಆತನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಮೇಲೆ ಬಂದರು. ಐದು ಸಾವಿರ ವರ್ಷಗಳ ಇತಿಹಾಸದಲ್ಲಿ ಬುದ್ಧನಿಂದ ಗಾಂಧೀಜಿವರೆಗೆ ಅನೇಕ ಮಹಾತ್ಮರು ಆಗಿ ಹೋಗಿದ್ದಾರೆ. ದೀನ ದಲಿತರ ಪರವಾಗಿ ಎಲ್ಲವನ್ನೂ ತ್ಯಾಗ ಮಾಡಿದವರಿದ್ದಾರೆ. ಆದರೆ ಬಸವಣ್ಣನವರ ಹಾಗೆ ಕೆಳಜಾತೀಕರಣಕ್ಕೊಳಗಾದವರು ಇನ್ನೊಬ್ಬರಿಲ್ಲ!

ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬುವನ ಕುಲವೇನೋ!
ದೇವಾ ನೀನೊಲಿದವನ. ಸ್ವಾಮೀ ನೀ ಹಿಡಿದವನ ಕುಲವೇನೋ!

ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ,
ನಿಮ್ಮಿಂದಧಿಕ ಕೂಡಲಸಂಗಮದೇವಾ.

ಮನುಸಂಸ್ಕೃತಿಯು ಯಾವ ಮನುಷ್ಯನನ್ನು ಕಟ್ಟಕಡೆಯಲ್ಲಿಟ್ಟಿತೋ ಅದೇ ಮನುಷ್ಯ ಶರಣಸಂಸ್ಕೃತಿಯಲ್ಲಿ ತನ್ನ ನೈತಿಕ ಮತ್ತು ಕಾಯಕ ಶಕ್ತಿಯಿಂದ ದೇವರಿಗಿಂತಲೂ ಅಧಿಕನಾಗಬಲ್ಲ. ಮಹೋನ್ನತ ವ್ಯಕ್ತಿತ್ವದ ಮಾದಾರ ಚೆನ್ನಯ್ಯನವರು ಬಸವಣ್ಣನವರ ದೃಷ್ಟಿಯಲ್ಲಿ ಕೂಡಲಸಂಗಮದೇವನಿಗಿಂತಲೂ ಹೆಚ್ಚಾಗಿದ್ದಾರೆ ಎಂದರೆ ಅವರು ಹಳೆಯ, ಕೊಳೆತು ನಾರುತ್ತಿರುವ ಸಮಾಜಕ್ಕೆ ಪರ್ಯಾಯವಾಗಿ ಹೊಸ ಸಮಾಜವೊಂದನ್ನು ಸೃಷ್ಟಿಸುತ್ತಿದ್ದಾರೆ ಎಂದೇ ಅರ್ಥ.

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯಾ ಮಹಾದಾನಿ ಕೂಡಲ ಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ.

ಬಸವಣ್ಣನವರು ಮಾದಾರ ಚೆನ್ನಯ್ಯನ ಮನೆಯ ಮಗನಾಗಿ ಪರಿವರ್ತಿತರಾದುದರಿಂದ ಮನುಧರ್ಮದ ನಿಜರೂಪ ಅವರಿಗೆ ಕಾಣತೊಡಗಿದೆ. ಅವರು ನೊಡುತ್ತಾರೆ ವೇದವು ಖಡ್ಗದಂತಾಗಿರುವುದನ್ನು, ಶಾಸ್ತ್ರವು ಮದ್ದಾನೆಯಂತಾಗಿರುವುದನ್ನು, ತರ್ಕವು ಉಪದ್ವ್ಯಾಪಿ ಯಾಗಿದ್ದನ್ನು ಮತ್ತು ಆಗಮ ಎಲ್ಲ ಕಡೆ ಮೂಗು ತೂರಿಸುತ್ತಿರುವುದನ್ನು. ಅಂತೆಯೆ ಬಸವಣ್ಣನವರು ವೇದವನ್ನು ಖಡ್ಗವನ್ನಿಡುವ ಚರ್ಮದ ಕವಚದಲ್ಲಿಡುತ್ತೇನೆನ್ನುತ್ತಾರೆ. ಮದ್ದಾನೆಗೆ ನಿಗಳ (ಸಂಕೋಲೆ) ಬಿಗಿದು ಕಟ್ಟುವಂತೆ ಶಾಸ್ತ್ರವನ್ನು ಬಿಗಿದು ಕಟ್ಟುವುದಾಗಿ ಹೇಳುತ್ತಾರೆ. ಅಸಮಾನತೆಯನ್ನು ಬೆಂಬಲಿಸುವ ಮನುವಿನ ತರ್ಕಕ್ಕೆ ಛಡಿಯೇಟಿನ ಶಿಕ್ಷೆ ನೀಡುತ್ತಾರೆ. ಆಗಮದ ಮೂಗ ಕೊಯ್ದು ತಲೆಯೆತ್ತದಂತೆ ಮಾಡುವುದಾಗಿ ನುಡಿಯುತ್ತಾರೆ. ಮಾದಾರ ಚೆನ್ನಯ್ಯನ ಮನೆಯ ಮಗನಾದ ಕೂಡಲೆ ಅವರು ಪಡೆದುಕೊಂಡ ಅಮಿತ ಶಕ್ತಿಯಿದು. ಮಹಾಜ್ಞಾನಿ ಬಸವಣ್ಣನವರು ಶೂದ್ರಶಕ್ತಿಯನ್ನು ಪಡೆದದ್ದರಿಂದಲೇ ಅವರಿಗೆ ಒಳ್ಳೆಯ ಮನುಷ್ಯರನ್ನು ಸೃಷ್ಟಿಸುವಂಥ ಸಮಾಜದ ಬೃಹತ್ ಕಲ್ಪನೆಯನ್ನು ಮಾಡಲು ಸಾಧ್ಯವಾಯಿತು. ಅಷ್ಟೇ ಅಲ್ಲದೆ ತಮ್ಮ ಕಾಲದಲ್ಲೇ ಅಂಥ ಗಣಸಮೂಹ ಪಡೆಯಲು ಸಾಧ್ಯವಾಯಿತು. ಎಲ್ಲ ಸನಾತನ ಜ್ಞಾನವುಳ್ಳವರು ಕೂಡ ಇಂಥ ನಿಜಶರಣರ ಸಮಬರುವುದಿಲ್ಲ:

ಅಕ್ಷರ, ಗಣಿತ, ಗಾಂಧರ್ವ, ಜ್ಯೋತಿಷ, ತರ್ಕ, ವ್ಯಾಕರಣ, ನಿಘಂಟು, ಸಾಲಿಹೋತ್ರ, ಛಂದಸ್ಸು, ಗ್ರಹವಾದ, ಗಾರುಡ, ದ್ಯೂತ, ವೈಶಿಕಶಾಸ್ತ್ರ, ಸಾಮುದ್ರಿಕಶಾಸ್ತ್ರ, ಅಶ್ವಶಿಕ್ಷೆ, ಗಜಶಿಕ್ಷೆ, ಗೋಕರ್ಣದಾಡಾಬಂಧ, ಮೂಲಿಕಾಸಿದ್ಧಿ, ಭೂಚರತ್ವ, ಖೇಚರತ್ವ, ಅತೀತ, ಅನಾಗತ, ವರ್ತಮಾನ, ಸ್ಥೂಲ, ಸೂಕ್ಷ್ಮ, ಇಂದ್ರಜಾಲ, ಮಹೇಂದ್ರಜಾಲ, ಒಡ್ಯಾಣಬಂಧಚೇಷ್ಟೆ, ಪರಕಾಯಪ್ರವೇಶ, ದೂರದೃಷ್ಟಿ, ದೂರಶ್ರವಣ, ಋಗ್ಯಜಸ್ಸಾಮಾಥರ್ವಣಾದ್ಯನೇಕ ಶ್ರುತಿಸ್ಮೃತಿ, ಪುರಾಣೇತಿಹಾಸಾದಿ, ಆಯುರ್ದರ್ಶಿ, ನೈಷ್ಟಿಕಾಮುಷ್ಟಿಚಿಂತನೆ, ಚೋರವಿದ್ಯೆ, ಅಮೃತೋದಯ, ಭಾಷಾಪರೀಕ್ಷೆ, ವೀಣಾವಿದ್ಯೆ, ಭೃಂಗಿವಿದ್ಯೆ, ಭರತ, ಮಲ್ಲವಿದ್ಯೆ, ಶಸ್ತ್ರವಿದ್ಯೆ, ಧನುರ್ವಿದ್ಯೆ, ಡೊಂಬವಿದ್ಯೆ, ಅಗ್ನಿಸ್ತಂಭ, ಜಲಸ್ತಂಭ, ವಾಯುಸ್ತಂಭ, ವಾದವಶ್ಯ, ಅಂಜನಸಿದ್ಧಿ, ಘಟಿಕಾಸಿದ್ಧಿ, ಮಂತ್ರಸಿದ್ಧಿ, ತಂತ್ರಸಿದ್ಧಿ, ಇವೆಲ್ಲವಂ ಕಲಿತಡೇನು? ಚೌಷಷ್ಟಿವಿದ್ಯಾಕಲಾ

ಪ್ರವೀಣನೆನಿಸಿಕೊಂಬ ನಲ್ಲದೆ ಲಿಂಗಭಕ್ತನೆನಿಸಿಕೊಂಬುದಿಲ್ಲ. ಲಿಂಗವುಳ್ಳ ನಿಜಶರಣಂಗೆ ಇವರೆಲ್ಲರು ಸರಿಬಾರರು. ಸಹಜ ಸದ್ಭಕ್ತಿಯಿಲ್ಲದವರನೊಲ್ಲ ನಮ್ಮ ಕೂಡಲಸಂಗಮದೇವರು.

ಕರ್ಮವಾದ

ಕರ್ಮವಾದವು ಮನುಸಂಸ್ಕೃತಿಯ ಆಧಾರಸ್ತಂಭವಾಗಿದೆ. ಮನುಷ್ಯನನ್ನು ಸದಾ ಪಾಪಪ್ರಜ್ಞೆಯಿಂದ ಬಳಲುವಂತೆ ಮಾಡುತ್ತದೆ. ಅವನ ದುರ್ಗತಿಗೆ ಸುಲಿಗೆ ವ್ಯವಸ್ಥೆ ಕಾರಣವಲ್ಲದೆ ಹಿಂದಿನ ಜನ್ಮದ ಪಾಪವೇ ಕಾರಣವೆನ್ನುತ್ತದೆ. ಸದಾ ಸುಲಿಗೆಕೋರರ ಪರವಾಗಿರುತ್ತದೆ. ಬಸವಣ್ಣನವರು ಕರ್ಮವಾದದ ಕಡುವಿರೋಧಿಗಳಾಗಿದ್ದರು:

ಕಬ್ಬುನ ಪರುಷವೇಧಿಯಾದಡೇನು
ಕಬ್ಬುನ ಹೊನ್ನಾಗದಡಾ ಪರುಷವದೇಕೊ?
ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ?
ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ
ಕರ್ಮ ಹರಿಯದೊಡಾ ಪೂಜೆಯದೇಕೊ?

ಪರುಷದ ಸ್ಪರ್ಶವಾದಮೇಲೂ ಕಬ್ಬಿಣವು ಚಿನ್ನವಾಗದಿದ್ದರೆ ಆ ಪರುಷದ ಅವಶ್ಯಕತೆ ಏನಿದೆ? ಮನೆಯೊಳಗಿನ ಕತ್ತಲೆಯನ್ನು ಕಳೆಯದಿದ್ದರೆ ಜ್ಯೋತಿಯ ಅವಶ್ಯಕತೆ ಏನಿದೆ? ಹಾಗೆಯೇ ಮನುಷ್ಯನು ಇಷ್ಟಲಿಂಗ ಪೂಜೆ ಮಾಡಿಯೂ ಕರ್ಮವಾದದಲ್ಲಿ ನಂಬಿಕೆ ಇಟ್ಟರೆ ಆ ಇಷ್ಟಲಿಂಗದ ಅವಶ್ಯಕತೆಯಾದರೂ ಏನಿದೆ? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. ಕರ್ಮವಾದವು ಮನುಧರ್ಮದ ತಾಯಿಬೇರಾಗಿದ್ದರಿಂದ ಇಷ್ಟಲಿಂಗ ಪೂಜೆಯ ಉದ್ದೇಶವು ಆ ತಾಯಿಬೇರನ್ನೇ ಕೊಚ್ಚಿಹಾಕಿ ಹೊಸ ಮನುಷ್ಯನನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿದೆ ಎಂಬುದನ್ನು ಬಸವಣ್ಣನವರು ಇಲ್ಲಿ ತಿಳಿಸಿದ್ದಾರೆ.

ವೇದ, ಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟಿನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?
ಹಿರಿಯತನವಾವುದೆಂದಡೆ: ಗುಣಜ್ಞಾನ
ಆಚಾರಧರ್ಮ. ಕೂಡಲಸಂಗನ ಶರಣರು
ಸಾಧಿಸಿದ ಸಾಧನೆಯ ಹಿರಿಯತನ.

ಕೂಡಲಸಂಗನ ಶರಣರು ಗುಣವುಳ್ಳ ಜ್ಞಾನವನ್ನೂ ಮತ್ತು ಆಚಾರವುಳ್ಳ ಧರ್ಮವನ್ನೂ ಸಾಧಿಸಿದ್ದಾರೆ.

ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ
ಬಾಯಲಿ ಸುರೆಯ ಗಡಿಗೆ, ಕೊರಳಲಿ ದೇವರಿರಲು
ಅವರ ಲಿಂಗನೆಂಬೆ, ಸಂಗನೆಂಬೆ, ಕೂಡಲಸಂಗಮದೇವಾ,
ಅವರ ಮುಖಲಿಂಗಿಗಳೆಂಬೆನು.

ತಾವು ಸಾಕ್ಷಾತ್ಕರಿಸಿಕೊಂಡ ಸತ್ಯದ ಬಗ್ಗೆ ಮತ್ತು ಮನುಷ್ಯನ ಬಗ್ಗೆ ಇರುವ ನಂಬಿಕೆಯೆ ಇಷ್ಟು ಗಾಢವಾದುದು! ಈ ಕಾರಣದಿಂದಲೇ ಜನ ಸಮುದಾಯ ಅವರನ್ನು ವಿಶ್ವಗುರು ಎಂದು ಕೊಂಡಾಡುತ್ತಿದೆ. ದುಶ್ಚಟಗಳಿಂದ ಕೂಡಿದ ಒಬ್ಬ ವ್ಯಕ್ತಿ ಲಿಂಗಸಂಪರ್ಕದಲ್ಲಿ ಒಳ್ಳೆಯವ

ನಾಗುತ್ತಾನೆಂಬ ನಂಬಿಕೆಯ ಜೊತೆಗೆ ಸ್ಥಾವರದೈವಗಳ ಬಗ್ಗೆ ಬಸವಣ್ಣನವರು ಸದಾ ಎಚ್ಚರಿಕೆಯಿಂದ ಇದ್ದಾರೆ. ಅವು ಮೇಲು ಕೀಳಿನಿಂದ ಕೂಡಿದ ಮನುಧರ್ಮಕ್ಕೆ ಬದ್ಧವಾದ ಕರ್ಮಸಿದ್ಧಾಂತದ ಅಡಿಪಾಯದ ಮೇಲೇ ನಿಂತಿರುವುದರಿಂದ:

ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ
ಸ್ಥಾವರ ದೈವಕ್ಕೆರಗಲಾಗದು.

ಎಂದು ಆದೇಶಿಸುತ್ತಾರೆ. ಮನುಷ್ಯನ ಬಗ್ಗೆ ಇರುವ ಕಾಳಜಿ ಈ ಆದೇಶಕ್ಕೆ ಕಾರಣವಾಗಿದೆ. ಬಸವಣ್ಣನವರ ಕೂಡಲಸಂಗಮದೇವ ಏಕ್‌ದಂ ಸೀದಾಸಾದಾ ಇದ್ದಾನೆ. ಆತ ಅಸ್ಪೃಶ್ಯರ ಮನೆಗೆ ಹೋಗುತ್ತಾನೆ. ಅವರ ಜೊತೆ ಕುಳಿತು ಅಂಬಲಿ ಕುಡಿಯುತ್ತಾನೆ:

ವೇದ ನಡನಡುಗಿತ್ತು. ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟೆದ್ದಿತಯ್ಯಾ!
ಆಗಮ ಹೊರತೊಲಗಿ ಅಗಲಿದ್ದಿತಯ್ಯಾ!
ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ
ಮನೆಯಲುಂಡ ಕಾರಣ.

ದುಷ್ಟವ್ಯವಸ್ಥೆಯು ಬುಡಮೇಲಾಗಿ ಶಿಷ್ಟ ವ್ಯವಸ್ಥೆಯು ಬರುವುದರ ಮುನ್ಸೂಚನೆಯನ್ನು ಬಸವಣ್ಣ ಈ ವಚನದ ಮೂಲಕ ಕೊಟ್ಟಿದ್ದಾರೆ. ಕೂಡಲಸಂಗಯ್ಯ ಮಾದಾರ ಚೆನ್ನಯ್ಯನ ಮನೆಯಲ್ಲುಂಡಕೂಡಲೇ ವೈದಿಕ ವ್ಯವಸ್ಥೆ ತಬ್ಬಿಬ್ಬಾಗುತ್ತದೆ. ಪ್ರತಿಗಾಮಿಗಳಿಗೆ ಗಡಿಯಾರದ ಮುಳ್ಳು ಉಲ್ಟಾ ತಿರುಗಿದಂತಾಗುತ್ತದೆ. ಇಲ್ಲಿಯವರೆಗೆ ಸಮಾಜವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡಿದ್ದ ವೇದಗಳು ನಡುಗತೊಡಗುತ್ತವೆ. ಶಾಸ್ತ್ರಗಳು ಪಕ್ಕಕ್ಕೆ ಸರಿಯುತ್ತವೆ. ಸುಲಿಗೆ ವ್ಯವಸ್ಥೆಯನ್ನು ಬೆಂಬಲಿಸುವ ತರ್ಕ ಮೌನವಾಗುತ್ತದೆ. ಆಗಮ ಜಾಗ ಖಾಲಿ ಮಾಡುತ್ತದೆ.

ಸಂಪೂರ್ಣವಾಗಿ ತುಳಿತಕೊಳ್ಳಗಾದವರ ಜೊತೆ ಇದ್ದಾಗ ಮಾತ್ರ ಜಡವ್ಯವಸ್ಥೆಯ ಸೂಕ್ಷ್ಮ ಕ್ರೌರ್ಯಗಳೆಲ್ಲ ಕಾಣತೊಡಗುತ್ತವೆ. ಹೀಗೆ ಬಸವಣ್ಣನವರು ಆ ಕಾಲದ ಸುಲಿಗೆ ವ್ಯವಸ್ಥೆಯ ಬಗ್ಗೆ ಅರಿಯದ್ದು ಯಾವುದೂ ಇರಲಿಲ್ಲ. ಅಂತೆಯೆ ಅವರು ಎಲ್ಲದರ ಬಗ್ಗೆ ಇಷ್ಟೊಂದು ಖಚಿತವಾಗಿ ಹೇಳುವ ಶಕ್ತಿಯನ್ನು ಪಡೆದಿದ್ದರು.

ಸ್ಥಾವರಲಿಂಗವನ್ನು ಪೂಜಿಸುವ ಶೈವರು ಅಸ್ಪೃಶ್ಯರ ಬಗ್ಗೆ ಕಾಳಜಿ ವಹಿಸಲಿಲ್ಲ. ಈ ಶಿವಭಕ್ತರು ಅಸ್ಪೃಶ್ಯರ ಬಗ್ಗೆ ಉದಾಸೀನಭಾವ ತಾಳಿದ್ದನ್ನು ಬಸವಣ್ಣನವರು ಪ್ರತಿಭಟಿಸುವ ರೀತಿ ನೂತನವಾಗಿದೆ.

ಲಿಂಗಾರ್ಚನೆ ಮಾಡುವ ಮಹಿಮರೆಲ್ಲರೂ ಸಲಿಗೆವಂತರಾಗಿ ಒಳಗೈದಾರೆ.
ಆನು ದೇವಾ ಹೊರಗಣವನು. ಸಂಬೋಳಿ ಸಂಬೋಳಿ
ಎನ್ನುತ್ತ ಇಂಬಿನಲ್ಲಿ ಇದ್ದೇನೆ. ಕೂಡಲಸಂಗಮದೇವಾ
ನಿಮ್ಮ ನಾಮವಿಡಿದ ಅನಾಮಿಕ ನಾನು.

ಇಲ್ಲಿ ಬಸವಣ್ಣನವರು ಕೂಡಲಸಂಗಮದೇವನನ್ನು ಉದ್ದೇಶಿಸಿ ಹೇಳುತ್ತಿದ್ದಾರೆ. ಈ ಹೇಳುವಿಕೆಯಲ್ಲಿ ಸಾತ್ವಿಕ ಸಿಟ್ಟು ಇದೆ, ಹಠ ಇದೆ, ದೇವರು ತಮ್ಮ ಜೊತೆಯಲ್ಲಿದ್ದಾನೆಂದು ಭಾವಿಸುವ ಉಳ್ಳವರ ಒಣ ಧಿಮಾಕಿನ ಸಲಿಗೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ವಿರೋಧಿಸುವ ಭಾವವಿದೆ. ಅವರು ಸತ್ಯಾಗ್ರಹ ಮಾಡುವವರಂತೆ ದೇವಸ್ಥಾನದ ಹೊರಗೆ ನಿಂತು ಹೇಳುತ್ತಿದ್ದಾರೆ. ಅಸ್ಪೃಶ್ಯರ ಪರವಾಗಿ ಹೇಳುತ್ತಿದ್ದಾರೆ. 'ಅಸ್ಪೃಶ್ಯ'ರಾಗಿಯೇ ಹೇಳುತ್ತಿದ್ದಾರೆ.

'ಹೊರಗಣವನು', 'ಸಂಬೋಳಿ' ಮತ್ತು 'ಅನಾಮಿಕ' ಪದಗಳು ಬಸವಣ್ಣನವರು ಅಸ್ಪೃಶ್ಯರ ಜೊತೆ ಅದ್ವೈತವನ್ನು ಸಾಧಿಸಿದ್ದನ್ನು ಸೂಚಿಸುತ್ತವೆ. 'ಸಂಬೋಳಿ ಸಂಬೋಳಿ ಎನ್ನುತ್ತ ಇಂಬಿನಲ್ಲಿ (ದೂರದಲ್ಲಿ) ಇದ್ದೇನೆ' ಎನ್ನುವಲ್ಲಿ ಸಂಬೋಳಿ ಪದ ಎಚ್ಚರಿಕೆಯ ಸೂಚಕವಾಗಿದೆ. 'ಎಚ್ಚರ, ದೂರದಲ್ಲಿ ಇದ್ದರೂ ಗಮನಿಸುತ್ತಿದ್ದೇನೆ' ಎಂದು ಎಚ್ಚರಿಕೆ ನೀಡುತ್ತಿದ್ದಾರೆ. ಹೀಗೆ ಅವರ ವಿಚಾರ ಹೊಸ ಧರ್ಮದ ಅಡಿಪಾಯವಾಗಿದೆ.

ಬಸವಣ್ಣನವರು ಅಸ್ಪೃಶ್ಯರ ಪರವಾಗಿ ಮಾತ್ರ ನಿಂತಿಲ್ಲ. ಅನೈತಿಕ ಸಂಬಂಧದಿಂದ ಜನಿಸಿ ಸಮಾಜದಲ್ಲಿ ಅತಿ ಕನಿಷ್ಠವಾಗಿ ಬದುಕುತ್ತಿದ್ದ ಮಕ್ಕಳ ಪರವಾಗಿಯೂ ನಿಲ್ಲುತ್ತಾರೆ. ಅವರೆಷ್ಟು ಸಂವೇದನಾಶೀಲರೆಂದರೆ ಕೂಡಲಸಂಗಮದೇವನ ಸಾಕ್ಷಿಯಾಗಿ ತಾವೇ ಅಂಥ ಮಗುವಾಗುತ್ತಾರೆ.

ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ,
ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಗಮದೇವ ಸಾಕ್ಷಿಯಾಗಿ.

ಮನುಧರ್ಮ ಜಾತಿಸಂಕರಕ್ಕೆ ವಿರುದ್ಧವಾಗಿತ್ತು. ಆದರೆ ಜಾತಿಸಂಕರವೇ ಬಸವಧರ್ಮದ ಉಸಿರಾಗಿತ್ತು. ನೈತಿಕ ಶಕ್ತಿಯ ಮುಂದೆ ಜಾತಿ ಎಂಬುದು ಎಷ್ಟು ಟೊಳ್ಳು ಎಂಬುದನ್ನು ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲೇ ತೋರಿಸಿಕೊಟ್ಟರು. ಕಲ್ಯಾಣ ಕ್ರಾಂತಿಯ ದೀಪ ಎಂದೂ ನಂದುವಂಥದ್ದಲ್ಲ ಎಂಬುದು ಈ ಜಗತ್ತಿಗೆ ಅರಿವಾಗತೊಡಗಿದೆ.

ಕುಲವನರಸುವರೇ ಶರಣರಲ್ಲಿ,
ಜಾತಿಸಂಕರವಾದ ಬಳಿಕ?

ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. ಶರಣಗಣದಲ್ಲಿ ಮಧುವಯ್ಯ ಬ್ರಾಹ್ಮಣರಲ್ಲ, ಹರಳಯ್ಯ ಸಮಗಾರರಲ್ಲ, ಶರಣರು ಅಷ್ಟೇ.

"ಕೊಲುವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ;
ಕುಲವೇನೋ ಅವದಿರ ಕುಲವೇನೋ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು.

ಇಲ್ಲಿ 'ಕೊಲ್ಲುವ' ಮತ್ತು 'ಹೊಲಸು ತಿನ್ನುವ' ಪದಗಳು ಯಜ್ಞಕ್ಕೆ ಸಂಬಂಧಿಸಿದವುಗಳಾಗಿವೆ. ಯಜ್ಞೋಪಜೀವಿಗಳು ಯಜ್ಞಕ್ಕಾಗಿ ಬಲಿ ಕೊಡುವುದರಲ್ಲಿ (ಕೊಲ್ಲುವುದರಲ್ಲಿ) ಮತ್ತು ಕಾಯಕ ಮಾಡದೆ 'ಹೊಲಸು' ತಿನ್ನುವುದರಲ್ಲಿ ತಲ್ಲೀನರಾಗಿದ್ದಾರೆಂದು ಅವರು ಸೂಚಿಸುತ್ತಾರೆ. ಜೀವಿಗಳನ್ನು ಬಲಿ ತೆಗೆದುಕೊಳ್ಳುವ ಯಜ್ಞವನ್ನು ವಿರೋಧಿಸುವ ಶರಣರು ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರು ಎಂದು ಹೇಳುವುದರ ಮೂಲಕ ಪರ್ಯಾಯ ಕಾಯಕವ್ಯವಸ್ಥೆಯ ಕಲ್ಪನೆ ಮೂಡಿಸುತ್ತಾರೆ. ಭೌತಿಕ ಮತ್ತು ಆಧ್ಯಾತ್ಮಿಕ ತಳಹದಿಯ ಈ ವ್ಯವಸ್ಥೆಯಲ್ಲಿ 'ಬೇಡುವಾತ ಭಕ್ತನಲ್ಲ'. ಬಸವಣ್ಣನವರು ಇದು ನಮಗೆ ಕೊಟ್ಟ ಬಳುವಳಿ. ಇಂಥ ಸಮಾಜಕ್ಕಾಗಿ ವಿಶ್ವ ಹಾತೊರೆಯುತ್ತಿದೆ.

ಸಮಕಾಲೀನ ಶರಣರ ಕಣ್ಣಲ್ಲಿ ಬಸವಣ್ಣ

ವಿನಯ ಕರುಣೆಗಳ ಮಹಾಸಾಗರವಾಗಿದ್ದ ಬಸವಣ್ಣನವರನ್ನು ಸಮಕಾಲೀನ ಶರಣರು ಹೃದಯತುಂಬಿ ಕೊಂಡಾಡಿದ್ದಾರೆ. ಬಸವ ಶಬ್ದವು ಧ್ವನಿಯಾಗಿ, ಮಂತ್ರವಾಗಿ ಅವರ ಅಂತರಾಳದಲ್ಲಿ ಮಿಡಿಯುತ್ತಿತ್ತು.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು,
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು,
ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ!
ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು.
ಶಿವಭಕ್ತರಿದ್ದ ಕ್ಷೇತ್ರವೇ ಅವಿಮುಕ್ತಕ್ಷೇತ್ರವೆಂಬುದು ಹುಸಿಯೇ?
ಶಿವಭಕ್ತರಿದ್ದ ದೇಶ ಪಾವನವೆಂಬುದು ಹುಸಿಯೆ?
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ
ಕಂಡು ಬದುಕಿದೆನು ಕಾಣಾ ಸಿದ್ಧರಾಮಯ್ಯಾ *–ಅಲ್ಲಮ ಪ್ರಭುಗಳು*

ವ್ಯೋಮಮೂರುತಿ, ಶೂನ್ಯಸಿಂಹಾಸನಾಧೀಶ್ವರ ಅಲ್ಲಮ ಪ್ರಭುಗಳು ಬಸವಣ್ಣನವರನ್ನು ಗುಹೇಶ್ವರಲಿಂಗದಲ್ಲಿ ಕಂಡು ಬದುಕುವ ಪರಿಯನ್ನು ಅರಿತಾಗ ಬಸವಣ್ಣನವರ ವ್ಯಕ್ತಿತ್ವದ ಕಲ್ಪನೆ ಮೂಡುವುದು. ಇಲ್ಲಿ ಪ್ರಭುಗಳು ಶಿಷ್ಟ ಸಮಾಜದ ಕಲ್ಪನೆಯನ್ನು ಕೊಡುತ್ತಾರೆ. ಅದೇ ಪವಿತ್ರ ಕ್ಷೇತ್ರವೆನ್ನುತ್ತಾರೆ. ಅಂಥ ಸಮಾಜವನ್ನು ಒಳಗೊಂಡ ದೇಶದ ಕಲ್ಪನೆ ಮೂಡಿಸುತ್ತಾರೆ. ಬಸವಣ್ಣನೆಂಬ ಜ್ಯೋತಿಯಿಂದಾಗಿ ಇದೆಲ್ಲ ಸಾಧ್ಯ ಎಂಬುದನ್ನು ಸೂಚಿಸುತ್ತಾರೆ.

ಆದಿ ಅನಾದಿಗಳಿಂದತ್ತಲಯ್ಯಾ ಬಸವಣ್ಣನು;
ಮೂದೇವರ ಮೂಲಸ್ಥಾನವಯ್ಯಾ ಬಸವಣ್ಣನು;
ನಾದಬಿಂದು ಕಳಾತೀತ ಆದಿ ನಿರಂಜನನಯ್ಯಾ ಬಸವಣ್ಣನು;
ಆ ನಾದಸ್ವರೂಪವೇ ಬಸವಣ್ಣನಾದ ಕಾರಣ;
ಆ ಬಸವಣ್ಣನ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದೆನು
ಕಾಣಾ ಚೆನ್ನಮಲ್ಲಿಕಾರ್ಜುನಯ್ಯ *–ಅಕ್ಕಮಹಾದೇವಿ*

ಅಕ್ಕನ ಈ ವಚನದಲ್ಲಿ ಪ್ರೀತಿ ಉಕ್ಕುತ್ತಿದೆ. ಬಸವಣ್ಣನವರನ್ನು ಮೂದೇವರ ಮೂಲ ಸ್ಥಾನದಲ್ಲಿರಿಸಿದ್ದಾಳೆ. ಮನುಷ್ಯನೇ ದೇವರಾಗುವ ಬಗೆ ಹೇಗೆಂಬುದನ್ನು ಬಸವಣ್ಣನವರು ಸ್ವಯಂ ನಡೆದು ತೋರಿಸಿಕೊಟ್ಟಿದ್ದನ್ನು ಸೂಚಿಸುತ್ತಾಳೆ.

ಹಮ್ಮು ಬಿಮ್ಮಳಿದ ಅನವರತ ಶಿವ ನೀನು;
ಎನ್ನ ಕರಸ್ಥಲದ ಕಳೆ ನೀನು;
ಎನ್ನ ಮನೋಮಧ್ಯದ ಸ್ವಯಂಜ್ಯೋತಿ ನೀನು;
ಅಮಲೇಶ್ವರ ಲಿಂಗದ ಅನುವಿನ ಕಳೆ ನೀನು;
ಸಂಗನಬಸವಣ್ಣಾ *–ಆಯ್ದಕ್ಕಿ ಮಾರಯ್ಯ*

ಅಹಂಕಾರರಹಿತ ಬಸವಣ್ಣನಂಥವರು ಮನೋಮಧ್ಯದ ಜ್ಯೋತಿಯಾದಾಗ ಮಾತ್ರ ಜಗತ್ತಿನ ಅರಿವಾಗುವುದು. ಆಯ್ದಕ್ಕಿ ಮಾರಯ್ಯನವರಂಥ ಕಾಯಕ ಜೀವಿಗಳು ಬಸವಣ್ಣನವರ ಹೃದಯಸ್ಪರ್ಶದಿಂದ ಅರಿವಿನ ಶ್ರೀಮಂತಿಕೆ ಗಳಿಸಿದ್ದು ವಚನ ಚಳವಳಿ ವೈಶಿಷ್ಟ್ಯವಾಗಿದೆ.

❑

ಬಸವಣ್ಣನವರು ಹಾಗೂ ಕಾಯಕತತ್ವ

●

ಡಾ. ಸೋಮನಾಥ ಯಾಳವಾರ

ಬದುಕಿನ ಎಲ್ಲ ರಂಗಗಳಲ್ಲಿ ಸಮನ್ವಯ ಕಾಣುವ ದೃಷ್ಟಿ ಬಸವಣ್ಣನವರದು. ಇಹಪರಗಳ ಸಮನ್ವಯ, ಭಕ್ತಿ-ಜ್ಞಾನ-ಕ್ರಿಯೆಗಳ ಸಮನ್ವಯ, ಆಚಾರ-ವಿಚಾರಗಳ ಸಮನ್ವಯ, ನಡೆ-ನುಡಿಗಳ ಸಮನ್ವಯ ಸಾಧನೆಯೇ ಬಸವತತ್ತ್ವ. ವ್ಯಷ್ಟಿ-ಸಮಷ್ಟಿಗಳ ಸಮನ್ವಯವನ್ನು ಬಸವಣ್ಣನವರು ತುಂಬಾ ಸೂಕ್ಷ್ಮವಾಗಿಯೇ ಪರಿಶೀಲಿಸಿದರು. ಸಮಾಜದಲ್ಲಿ ವ್ಯಕ್ತಿ ಪ್ರಧಾನ. ವ್ಯಕ್ತಿ ದೊಡ್ಡವನಾದರೆ ಸಮಾಜ ದೊಡ್ಡದಾಗುತ್ತದೆ. ಸಾಮಾಜಿಕ ಪರಿಸರ ವ್ಯಕ್ತಿಯ ಹಿತಕ್ಕೆ ಪೋಷಕವಾಗಿರಬೇಕು. ಆದರೆ ಸಾಮಾಜಿಕ ಒಳಿತಿನ ಒಟ್ಟು ದೃಷ್ಟಿಯಲ್ಲಿ ವ್ಯಕ್ತಿ ಒಂದು ಅಂಶ ಮಾತ್ರ. ಸಾಮಾಜಿಕ ಹಿತಕ್ಕಾಗಿ ವ್ಯಕ್ತಿ ತನ್ನ ಹಿತವನ್ನು ಸಮರ್ಪಿಸಬೇಕು. ಸಾಮೂಹಿಕ ಒಳಿತಿಗಾಗಿ ವೈಯಕ್ತಿಕ ಹಿತವನ್ನು ಬಿಟ್ಟು ಕೊಡುವುದು ಉದಾತ್ತವಾದ ದೃಷ್ಟಿ. ಆದರೆ ಇಲ್ಲಿ ವ್ಯಕ್ತಿ-ಸಮಾಜ ಇವೆರಡೂ ಪರಸ್ಪರ ವಿರುದ್ಧವಲ್ಲ. ಸಮಾಜ ವ್ಯಕ್ತಿ ಉದ್ಧಾರಕ್ಕೆ ಕಾರಣವಾಗುವಂತೆ, ವ್ಯಕ್ತಿಯ ಉದ್ಧಾರ ಸಮಾಜದ ಹಿತಕ್ಕೆ ಬುನಾದಿಯಾಗಬೇಕು. ಒಂದರಿಂದ ಇನ್ನೊಂದು ಹೀಗೆ ಪೋಷಕವಾಗಿ ಪೂರ್ಣತೆಯತ್ತ ಸಾಗುವ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸೂತ್ರಗಳನ್ನು ಬಸವಣ್ಣನವರು ರಚಿಸಿದರು. ಇದೆಲ್ಲದರ ಕೇಂದ್ರ ಶಕ್ತಿಯಾಗಿ ಬೆಳೆದ ತತ್ವವೇ ಕಾಯಕತತ್ವ.

'ಕಾಯಕ'ದ ಪರಿಕಲ್ಪನೆ ಶರಣರು ರೂಪಿಸಿದ ಹೊಸ ಪರಿಕಲ್ಪನೆ. ಸೈದ್ಧಾಂತಿಕ ತಳಹದಿಯ ಮೇಲೆ ರೂಪಿತಗೊಂಡಿರುವ ಇದು, ಸಮಾಜ ವ್ಯವಸ್ಥೆಯಲ್ಲಿ ಆರ್ಥಿಕ ಸಮಾನತೆಯನ್ನು ತರಲು ಇಟ್ಟ ಮೊದಲ ಹೆಜ್ಜೆಯಾಗಿದೆ. ನಿಜವಾದ ಆರ್ಥಿಕ ಸಮಾನತೆಯೆಂದರೆ ಸಮಾನವಾದ ದುಡಿಯುವ ಹಕ್ಕಿನ ಜತೆಗೆ, ಸಮಾನವಾದ ಸಂಪಾದನೆ ಮತ್ತು ಸಮಾನವಾದ ರಾಜಕೀಯ ಅಧಿಕಾರ ಪಡೆಯುವುದೇ ಆಗಿದೆ.

ಈ ಹಿನ್ನೆಲೆಯಲ್ಲಿ 'ಕಾಯಕ' ಎನ್ನುವ ಮಾತು ಇಂಥ ಒಂದು ತತ್ತ್ವವಾಗಿ ನಿಂತು, ಸುವ್ಯವಸ್ಥಿತ ಸುಖೀಸಮಾಜಕ್ಕೆ ಭದ್ರವಾದ ನೆಲೆಯನ್ನೊದಗಿಸುವ ಮಾಂತ್ರಿಕ ಶಕ್ತಿಯಾಯಿತು. ಸಾಮಾಜಿಕವಾಗಿ ಬೇರೂರಿದ್ದ ಮೇಲು-ಕೀಳುಗಳ ವಿಷಮತೆಯನ್ನು ತೊಡೆದುಹಾಕುವುದರೊಂದಿಗೆ ವೃತ್ತಿ ಗೌರವವನ್ನು ಬೆಳೆಸಿತು. ಅಂತೆಯೇ ಬಸವಣ್ಣನವರು-

ಸೆಟ್ಟಿಯೆಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ
ಡೋಹರನೆಂಬೆನೆ ಕಕ್ಕಯ್ಯನ
ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯ.

ಎಂದು ತಿಳಿಸುತ್ತಾನೆ. 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ –ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಇದು ಕಾರಣ ಕೂಡಲಸಂಗಮದೇವಾ ಲಿಂಗಸ್ಥಲವನರಿದವನೇ ಕುಲಜನು' ಎಂದು ಹೇಳುವಲ್ಲಿ, ಬಸವಣ್ಣನವರು ವೃತ್ತಿ ಗೌರವವನ್ನು ಸಾರುತ್ತಾರೆ. ಜೀವನೋಪಾಯಕ್ಕೆ ಕೈಕೊಂಡ ಈ ಎಲ್ಲ ವೃತ್ತಿಗಳೂ ಗೌರವಯುತವಾದವುಗಳು. ಅವುಗಳಲ್ಲಿ ಹೆಚ್ಚು ಕಡಿಮೆಗಳಿಲ್ಲ. ವೃತ್ತಿಗಳಿಂದಲೇ ಜಾತಿಗಳು ಏರ್ಪಡುವುದಿಲ್ಲವೆಂದು ಅವರು ಹೇಳುತ್ತಾರೆ. 'ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆ' ಎನ್ನುವ ಬಸವಣ್ಣನವರು, ಪ್ರತಿಯೊಬ್ಬರೂ ಅವರವರ ಅನ್ನವನ್ನು ಗಳಿಸಲು ದುಡಿಯಬೇಕು; ಸಮಾಜಕ್ಕೆ ಸೋಮಾರಿತನ ಮತ್ತು ಮೈಗಳ್ಳತನದಿಂದ ಹೊರೆಯಾಗದೆ, ತಮ್ಮ ಪಾಲಿನ ಕೆಲಸವನ್ನು ಮಾಡಬೇಕು; ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಲಿಂಗಕ್ಕೆ ಶ್ರೇಷ್ಠ ಎಂದು ಕಾಯಕದ ಮಹತ್ತ್ವವನ್ನು ಸಮಾಜಕ್ಕೆ ಮನದಟ್ಟು ಮಾಡಿಕೊಟ್ಟರು. ನಿಜವಾಗಿಯೂ ಬಸವಣ್ಣನವರ ಈ ಕಾಯಕದ ಪರಿಕಲ್ಪನೆ ಸರ್ವೋದಯ ಸಮಾಜಕ್ಕೆ ದೊಡ್ಡ ವರ ಎನ್ನಬಹುದು. Dignity of labour ತತ್ವ ಇದರಲ್ಲಿ ಅಡಗಿರುವುದು ಮುಖ್ಯ ಅಂಶ. ಬಸವಣ್ಣನವರು ಈ ಮೂಲಕ ಸಣ್ಣ ಪುಟ್ಟ ವೃತ್ತಿಗಳಿಗೂ ಗೌರವವನ್ನು ತಂದುಕೊಡುವುದ ರೊಂದಿಗೆ, ಅವರಲ್ಲಿ ಸ್ವಾವಲಂಬನೆ ಹಾಗೂ ಸ್ವಾಭಿಮಾನಗಳನ್ನು ಬೆಳೆಸಿದರು. ಇದು ಅಂದಿನ ಕಾಯಕ ಜೀವಿಗಳಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಿತು.

ಜಗದ ಜೀವಿಗಳ ಬಾಳಿನಲ್ಲಿ ಕಾಯಕ ನಿರಂತರವಾಗಿ ನಡೆಯಬೇಕು. ಕಾಯಕದಲ್ಲಿ ಮೇಲು–ಕೀಳು ಭಾವನೆಗಳು ಬರಬಾರದು. ಸಮಾಜದಲ್ಲಿರುವ ಎಲ್ಲ ವ್ಯಕ್ತಿಗಳೂ ಸ್ವಾವಲಂಬಿಯಾಗಬೇಕು. ಬಸವಣ್ಣನವರ ಸಮಾಜ ಸೃಷ್ಟಿಯಲ್ಲಿ ಆಲಸ್ಯತನಕ್ಕೆ ಸ್ಥಾನವಿಲ್ಲ. ಕಾಯವು ಕೈಲಾಸವಾಗಬೇಕಿದ್ದರೆ, ಆ ಕಾಯವು ಕಾಯಕದಲ್ಲಿ ತನ್ಮಯವಾಗಬೇಕು.

ಇದನ್ನೇ ಶರಣರು 'ಕಾಯವೇ ಕೈಲಾಸ'ವೆಂದು ಹಾಗೂ 'ಕಾಯಕವೇ ಕೈಲಾಸ'ವೆಂದೂ ಸಾರಿದರು. ಯಾವ ವ್ಯಕ್ತಿಯೂ ಒಂದು ನಿಮಿಷ ಕೂಡಾ ಆಲಸ್ಯದಿಂದ ಇರಬಾರದು. 'ನಿಮಿಷದ ಉದಾಸೀನ ಕೆಡಿಸಿತ್ತು' ಎಂಬುದು ಬಸವಣ್ಣನವರ ಅಭಿಮತ. ಅಂದರೆ ಎಲ್ಲ ವರ್ಗದಲ್ಲಿಯೂ ಕಾಯಕ ನಡೆಯಲೇಬೇಕು. ಹೆಣ್ಣಿರಲಿ–ಗಂಡಿರಲಿ, ಅರಸನಿರಲಿ–ಆಳಿರಲಿ, ಮಗುವಿರಲಿ–ವೃದ್ಧನಿರಲಿ ಎಲ್ಲರು ತಮ್ಮ ತಮ್ಮ ಕಾಯಕವನ್ನು ನಡೆಸಬೇಕು. ಸರ್ವಾರ್ಪಣಭಾವದ ಕಾಯಕ ಶ್ರೇಷ್ಠವಾದುದು. ಅದು ವ್ಯಕ್ತಿಯ ಆತ್ಮಕಲ್ಯಾಣದೊಂದಿಗೆ ಸಮಾಜದ ಲೋಕಕಲ್ಯಾಣವನ್ನು ಪೂರೈಸುತ್ತದೆ. ಈ ಹಿನ್ನೆಲೆಯಲ್ಲಿ ವ್ಯಷ್ಟಿ–ಸಮಷ್ಟಿಗಳ ಸಮನ್ವಯದ ಸಂಕೇತವಾಯಿತು. ಈ ಕಾಯಕತತ್ವ ವ್ಯಕ್ತಿಯ ಆರ್ಥಿಕ ಬಲವನ್ನು ಹೆಚ್ಚಿಸಿ ಅವನನ್ನು ಸ್ವಾವಲಂಬಿಯನ್ನಾಗಿಸಿದ ಇದು ಆ ಮೂಲಕವೇ ಸಮಾಜದ ಸದೃಢ ವಿಕಾಸಕ್ಕೂ ಬುನಾದಿ ಹಾಕಿತು.

'ಕಾಯಕ'ವೆಂಬುದು ಬಸವಣ್ಣನವರ ದೃಷ್ಟಿಯಲ್ಲಿ ಕೇವಲ ವಸ್ತುಗಳನ್ನು ಉತ್ಪಾದಿಸುವ ಅಥವಾ ಸೇವೆಯ ಕ್ರಿಯೆಯಾಗಿರಲಿಲ್ಲ. ಅದು ವ್ಯಕ್ತಿಯ ಆತ್ಮಗೌರವವನ್ನು ರಕ್ಷಿಸುವ ಮತ್ತು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಪ್ರಕ್ರಿಯೆಯೂ ಆಯಿತು. ಕಾಯಕವನ್ನು ಇನ್ನೊಬ್ಬರಿಂದ ಹೇಳಿಸಿಕೊಂಡು ಮಾಡುವಂತಹದ್ದಲ್ಲ. ಅದು ನಿರಂತರ ನಡೆಯುವ ಲಿಂಗಪೂಜೆ. ಅದನ್ನು ತನುಮುಟ್ಟಿ ಮನಮುಟ್ಟಿ ಅವರೇ ಮಾಡಬೇಕೆನ್ನುತ್ತಾರೆ ಬಸವಣ್ಣನವರು.

'ಹಸಿವಾದಡುಂಬುದನು, ಸತಿಯ ಸಂಭೋಗವನು
ಆನಾಗಿ ನೀ ಮಾಡೆಂಬವರುಂಟೆ?
ಮಾಡೂದು, ಮಾಡೂದು ಮನಮುಟ್ಟಿ
ಮಾಡೂದು, ಮಾಡೂದು ತನುಮುಟ್ಟಿ
ತನುಮುಟ್ಟಿ ಮನಮುಟ್ಟದಿರ್ದಡೆ
ಕೂಡಲಸಂಗಮದೇವನೇತರಲ್ಲಿಯೂ ಮೆಚ್ಚ.

ದೇಹ ಮತ್ತು ಮನಸ್ಸಿನ ಸಮತೋಲನವನ್ನು ಕಾಪಾಡುವ ಮತ್ತು ಅವುಗಳನ್ನು ಪರಿಶುದ್ಧಗೊಳಿಸುವ ಶಕ್ತಿ ಕಾಯಕತತ್ವದಲ್ಲಿದೆ. ಕಾಯಕವು ಕಾಯಕವನ್ನೇ ಕೈಲಾಸ ಮಾಡುತ್ತದೆ. ಕಾಯಕ ಜೀವಿಗಳಿಗೆ 'ಕೈಲಾಸವೆಂಬುದೊಂದು ಹಾಳುಬೆಟ್ಟ'ವೆನಿಸುತ್ತದೆ. ಹೀಗಾಗಿ ಕಾಯಕವು ಐಹಿಕ ಬದುಕಿಗೆ ಆಧಾರವಾಗುವುದಲ್ಲದೆ ತನುಮನಗಳನ್ನು ಪವಿತ್ರವಾಗಿಸುವ ಸಾಧನಾಮಾರ್ಗವೆನ್ನುತ್ತಾರೆ ಬಸವಣ್ಣ. ಅಂತೆಯೇ ಇದನ್ನು ತನುಮುಟ್ಟಿ ಮನಮುಟ್ಟಿ ಮಾಡಬೇಕು. ಅವರೇ ಹೇಳುವ ಆಳುತನ ಕಾಯಕದ ದೃಷ್ಟಾಂತವನ್ನಿಲ್ಲಿ ಗಮನಿಸಬಹುದು.

'ಸಮಚಿತ್ತವೆಂಬ ನೇಮದ ಹಲಗೆ ಹಿಡಿದು
ಶಿವಬಿತ್ತುವೆಂಬ ಕೂರಲಗ ಕೊಂಡು
ಶರಣಾರ್ಥಿಯೆಂಬ ತ್ರವಗಲಿತಡೆ
ಆಳುತನಕ್ಕೆ ದೆಸೆಯಪ್ಪೆ ನೋಡಾ.
ಮಾರಂಕ ಜಂಗಮ ಮನೆಗೆ ಬಂದಲ್ಲಿ ಇದಿರೆತ್ತಿ ನಡೆವುದು,
ಕೂಡಲ ಸಂಗಮದೇವನನೊಲಿಸುವಡಿದು ಚಿಹ್ನೆ.'

ಸಮಭಾವ, ಶಿವಭಾವ ಮತ್ತು ಸಮರ್ಪಣಾಭಾವ ಪರಿಶುದ್ಧ ಕಾಯಕದ ಲಕ್ಷಣಗಳು. ಕರ್ಮವೆನಿಸದ ಎಲ್ಲ ಶ್ರಮಗಳು ಕಾಯಕಗಳು. ಬಸವಣ್ಣನವರ ದೃಷ್ಟಿಯಲ್ಲಿ ಕರ್ಮಕ್ಕೂ ಮತ್ತು ಕಾಯಕ್ಕೂ ಅಪಾರ ವ್ಯತ್ಯಾಸವಿದೆ. ಕರ್ಮವು ಸಂಪ್ರದಾಯ ಮತ್ತು ಜಡತ್ವದ ಪ್ರತೀಕವಾದರೆ, ಕಾಯಕವು ಪ್ರಗತಿಪರ ಮತ್ತು ಜಂಗಮದ ಪ್ರತೀಕ. ಕರ್ಮ ಪುರೋಹಿತ ಮತ್ತು ರಾಜಶಾಹಿಯ ಪರವಾಗಿದ್ದರೆ, ಕಾಯಕ ಜನಸಂಸ್ಕೃತಿಯ ಪರವಾಗಿದೆ. ಕಾಯಕ ತತ್ವವು ಕ್ರಿಯಾಶೀಲ ವಾಗುತ್ತಲೇ ಜಡದಿಂದ ದೂರ ಉಳಿಯಿತು. ವೈಚಾರಿಕತೆಯಿಂದ ಸಂಪ್ರದಾಯವನ್ನು ಕತ್ತರಿಸಿ, ಆಚಾರ–ವಿಚಾರವನ್ನು ಬೆಳೆಸಿತ್ತು. ಹೀಗಾಗಿ ಇದು ಗುರು–ಲಿಂಗ–ಜಂಗಮಗಳಿಗಿಂತ ಶ್ರೇಷ್ಠವಾಯಿತು. ಪೂಜೆ–ಪುನಸ್ಕಾರಗಳಷ್ಟು ಮಹತ್ವ ಪಡೆಯಿತು. ಅಂತೆಯೇ ಬಸವಣ್ಣನವರು.

'ನಾನು ಆರಂಭವ ಮಾಡುವೆನಯ್ಯಾ, ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು

ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲ ಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು
ನಿಮ್ಮ ಸೊಮ್ಮಿಂಗೆ ಸಲಿಸುವನು...'

ಎನ್ನುತ್ತಾರೆ.

ಕಾಯಕವು ತನು–ಮನದ ಸಹಜ ವ್ಯಾಪಾರ. ತ್ರಿವಿಧ ದಾಸೋಹದಿಂದಲೇ ಕಾಯಕ ಕ್ರಿಯೆ ಜರುಗಬೇಕು. ಸರ್ವಾರ್ಪಣಾಭಾವ ಅಲ್ಲಿ ಮುಖ್ಯ. 'ನಾನೆಂಬ–ಹಂಗಿರದಲ್ಲಿ ನಾನುಂಡೆನಾದರೆ ಎನಗದೇ ದಂಡ' ಎಂಬ ಸಿದ್ಧಾಂತ ಶರಣರದು. 'ಮಾಡಿದೆನೆಂಬುದು ಮನದಲ್ಲಿ ಹೊಳೆಯಬಾರದು'. ಮಾಡುವುದೆಲ್ಲವೂ ಗುರುಲಿಂಗ ಜಂಗಮಕ್ಕೆ ಸಂಬಂಧಿಸಿದ ಅಂದರೆ ಜ್ಞಾನ, ಧರ್ಮ ಮತ್ತು ಸಮಾಜಕ್ಕೆ ಸಲುವಳಿಯಾಗಬೇಕೆನ್ನುವುದು ಬಸವಣ್ಣನವರ ಹೇಳಿಕೆ. ಕಾಯಕದ ಪ್ರತಿಫಲ ೩ ಭಾಗದಲ್ಲಿ ಹಂಚಿಕೆಯಾಗಬೇಕೆನ್ನುತ್ತಾರೆ ಬಸವಣ್ಣ. ಕಾಯಕದ ಆರಂಭ ಗುರು (ಜ್ಞಾನ) ಸೇವೆಗಾಗಿ, ಕಾಯಕದ ವ್ಯವಹಾರ ಲಿಂಗ (ಧರ್ಮ) ಸೇವೆಗಾಗಿ, ಕಾಯಕದ ಪರಸೇವೆ ಜಂಗಮ (ಸಮಾಜ) ಸೇವೆಗಾಗಿ ಸಲ್ಲಬೇಕಲ್ಲವೇ? ಇದು ಕಾಯಾ, ವಾಚಾ, ಮನಸಾ ನಡೆವ ವ್ಯಾಪಾರವಾಗಿರುವುದರಿಂದ ತನುವಿನ ಕ್ರಿಯೆಯೆಲ್ಲವೂ ಇಲ್ಲಿ ಧರ್ಮದ ಕ್ರಿಯೆಯಾಗುತ್ತವೆ. ಆಗ ದೇಹವೇ ದೇವಾಲಯವಾಗುತ್ತದೆ. ಅಂಗಕ್ರೀ ಲಿಂಗಕ್ರೀಯಾಗುವುದು. ಈ ಪ್ರಜ್ಞೆಯಿಂದ ಮಾಡುವ ಎಲ್ಲ ಕಾಯಕಗಳು ಕಾಯಕ ತತ್ವವೆನಿಸಿ ವ್ಯಷ್ಟಿ–ಸಮಷ್ಟಿಯ ಸಮನ್ವಯತೆಯನ್ನು ಸಾಧಿಸುತ್ತವೆ.

'ಕಾಯಕ' ಎಂಬ ಮಾತಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ನೀತಿಯ ಎಲ್ಲ ಅಂಶಗಳು ಸಮಷ್ಟಿ ಹಿತದ ಹಿನ್ನೆಲೆಯಲ್ಲಿ ಅಡಕಗೊಂಡಿವೆ. ಈ ತತ್ವವು ಸಾಮಾಜಿಕ ಅಸಮಾನತೆಯನ್ನು ಹೊಡೆದುಹಾಕಿದ್ದಲ್ಲದೆ, ಸಂಪತ್ತಿನ ಉತ್ಪಾದನೆ ಮತ್ತು ಹಂಚಿಕೆಗಳೆರಡನ್ನೂ ನೈತಿಕ ತಳಹದಿಯ ಮೇಲೆ ನಿಯಂತ್ರಿಸಿತು. 'ಕಾಯದ ಮಾಡುವೆನೆನ್ನ ಕಾಯ 'ಕೆಡುವನ್ನಕ್ಕ' ಎಂಬಂತಹ ಆತ್ಮವಿಶ್ವಾಸ ಹಾಗೂ ಪ್ರಾಮಾಣಿಕತೆಯನ್ನು ಬೆಳೆಸಿತು. ಅಷ್ಟೇ ಅಲ್ಲ ನನಗೆ, ಮಡದಿ ಮಕ್ಕಳಿಗೆ, ಎಂದು ಸ್ವಾರ್ಥಿಯಾಗಿ ಚಿಂತಿಸುವ ದುಡಿತವನ್ನೂ ಈ ತತ್ವವು ದೂರಮಾಡಿತು.

'ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ ಮಕ್ಕಳಿಗೆಂದು
ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ
ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ
ಎಂಬ ಶೈಲಿಯ ಬಸವಣ್ಣನೋದುವನು
ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹೆನೆಂದು ನುಡಿವರಯ್ಯಾ ಪ್ರಮಥರು
ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ
ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ
ಸಲೆ ಕೈಕೂಲಿಯ ಮಾಡಿಯಾದಡೆಯೂ

ನಿಮ್ಮ ನಿಲುವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ
ಕುದಿದೆನಾದಡೆ, ತಲೆದಂಡ ಕೂಡಲಸಂಗಮದೇವಾ.'

ಎಂಬ ಬಸವಣ್ಣನವರ ಈ ವಚನವು 'ಕಾಯಕ'ದ ಸ್ವರೂಪವನ್ನು ಸೊಗಸಾಗಿ ಬಿಚ್ಚಿ ತೋರಿಸುತ್ತದೆ. ವ್ಯಕ್ತಿ ಕಾರ್ಯಪ್ರವೃತ್ತನಾಗುವುದು ತನಗೆ, ತನ್ನವರಿಗಷ್ಟೇ ಎಂದಾದರೆ, ಅದು ಸ್ವಾರ್ಥಕ್ಕೆ ಮೂಲ. ಅದರಿಂದ ಅಹಂಕಾರ ಆವರಿಸಿ, ಅದು ಸಮಾಜದಲ್ಲಿ ಆರ್ಥಿಕ ಅಸಮಾನತೆಯನ್ನು ಹಾಗೂ ವರ್ಗ ಸಮಸ್ಯೆಯನ್ನೂ ಹುಟ್ಟುಹಾಕುತ್ತದೆ. ಹಣ ಸಂಗ್ರಹಿಸುವ ದಾಹ ಹೆಚ್ಚಿ, ಇದೇ ಮುಂದೆ ಸಾಮಾಜಿಕ ಸಮಸ್ಯೆಯನ್ನು ನಿರ್ಮಾಣ ಮಾಡುತ್ತದೆ. ಆದ್ದರಿಂದ ಅದನ್ನೂ ಹಂಚಿಕೆ ಮಾಡುವ ವ್ಯವಸ್ಥೆಯನ್ನೂ ಬಸವಣ್ಣನವರು ಪ್ರತಿಪಾದಿಸಿದರು. ಅಗತ್ಯವಾದುದಕ್ಕಿಂತ ಹೆಚ್ಚಿನದನ್ನು ಸಂಗ್ರಹಿಸಿಟ್ಟುಕೊಳ್ಳದ ಅಸಂಗ್ರಹ ತತ್ವವೇ 'ದಾಸೋಹ'ವೆನಿಸಿತ್ತು. ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಮಾತ್ರ ಪಡೆಯವುದು ಕಾಯಕತತ್ವದ ಒಂದು ವ್ರತ ಹಾಗೂ ದೈಹಿಕ ಶ್ರಮದಿಂದ ಲಭ್ಯವಾದುದು ಮಾತ್ರ ಪವಿತ್ರವೆಂಬುದು ಬಸವಣ್ಣನವರ ಅಭಿಮತ. ಅನ್ಯಾಯದ ಹಣಕ್ಕೆ ಬಾಯಿಚಪ್ಪರಿಸುವ ಹಾಗೂ ಅದನ್ನು ಪಡೆಯುವುದೇ ಬುದ್ಧಿವಂತಿಕೆಯ ಲಕ್ಷಣ ವಾಗಿರುವ ಇಂದಿನ ದಿನಮಾನಕ್ಕೆ, 'ಬಸವಣ್ಣ'ನ ಈ ಸಿದ್ಧಾಂತ ಅಪ್ರಸ್ತುತವೆನಿಸಬಹುದು. ಡಿಸ್‌ಕೌಂಟ್ ವ್ಯಾಪಾರ ಹಾಗೂ ಲಾಟರೀ ಜಗತ್ತಿನಲ್ಲಿರುವ ನಮಗೆ, ಬಸವ ಸಂಸ್ಕೃತಿಯ 'ಕಾಯಕ'ದ ಬಗ್ಗೆಹೇಳುವುದು ಅಪಹಾಸ್ಯವೆನ್ನಿಸಬಹುದು. ಆದರೆ ಸಾಮಾಜಿಕ ವ್ಯವಸ್ಥೆಯ ಪುನರ್ ನಿರ್ಮಾಣಕ್ಕೆ ಇಂದಲ್ಲ ಮುಂದೆ ಕೈಹಾಕಿದಾಗ ನಾವು ಬಸವಣ್ಣನ ಈ ತತ್ವವನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ ಎಂಬುದನ್ನು ಎಲ್ಲ ವಿಚಾರವಂತರು ಹೇಳುವ ಮಾತೆನ್ನಬಹುದು.

ಸತ್ಯ ಶುದ್ಧ ಕಾಯಕದಿಂದ ವ್ಯಕ್ತಿಯ ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣ ಹಾಗೂ ಲೋಕಕಲ್ಯಾಣ ಸಾಧಿತವಾಗುತ್ತದೆಂಬುದು ಬಸವಣ್ಣನವರ ನೀತಿ. ಸಕಲ ಜೀವಾತ್ಮರಿಗೆ ಲೇಸನ್ನುಂಟು ಮಾಡುವುದು ಮತ್ತು ಯಾವುದೇ ಭೇದವಿಲ್ಲದೆ ಜೀವಾತ್ಮರನ್ನು ಕಾಣುವ ಸಮಾಜವನ್ನು ಸೃಷ್ಟಿಸುವುದು 'ಕಾಯಕತತ್ವ'ದ ಉದ್ದೇಶ. ಹೀಗಾಗಿ ಭಕ್ತಿಯ ಚಲನಶೀಲತೆ ಇದರ ಉಸಿರಾಗಿ, ಸಮಾನತೆಯ ದೃಢಸಂಕಲ್ಪಶಕ್ತಿ ಈ ತತ್ವದ ಸಂಸ್ಕೃತಿಯೆನಿಸಿತ್ತು. ಅಂತೆಯೇ, ಅವರು ಗೌರವಿಸುತ್ತಿದ್ದುದು ಕಾಯಕವನ್ನೇ ಹೊರತು, ಕಾಯಕದ ಹಿಂದಿರುವ ವ್ಯಕ್ತಿಯ ಜಾತಿಯನ್ನಲ್ಲ. ಕಾಯಕವನ್ನು ಜಾತಿಯ ಹಿನ್ನೆಲೆಯಲ್ಲಿ ಕಾಣಬಾರದೆನ್ನುವ ಬಸವಣ್ಣನವರು.

'ದೇವ ಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದೊಡೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ ತಲೆದಂಡ ತಲೆದಂಡ
ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದಡೆ
ನಿಮ್ಮ ರಾಣಿವಾಸದಾಣೆ.

ಎಂದು ಪ್ರಮಾಣ ಮಾಡುತ್ತಾರೆ. ಕಾಯಕದಲ್ಲಿ ಜಾತಿಭೇದವಿಲ್ಲ, ಮೇಲು-ಕೀಳು ಸಲ್ಲ ಎಂಬುದು ಬಸವಣ್ಣನ ಸ್ಪಷ್ಟೋಕ್ತಿ. ಅವರಿಗೆ ಕಾಯಕವೆಂಬುದು ಆರಾಧನೆ. 'ಆರಾಧನೆಯ ಮಾಡಿದಡೆ ಅಮೃತದ ಬೆಳಸು', 'ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು'

ಎನ್ನುತ್ತಾರೆ. ಕಾಯಕವೇ ಪೂಜೆ ಎನ್ನುವ ಸದ್ಭಾವನೆ ಬಸವಣ್ಣನವರದು. ಇದನ್ನು ನಿಷ್ಠೆಯಿಂದ ಮಾಡಬೇಕು. ಹಾಗಿಲ್ಲವಾದರೆ 'ಹೊಸತಿಲ ಪೂಜಿಸಿ ಹೊಡವಂಟು ಹೋದ ಒಕ್ಕಲಿತಿಯಂತಾಯಿತ್ತು' ಎಂದು ಉಪಮಿಸುತ್ತಾರೆ. ಕೀರ್ತಿಗಾಗಿ ಮಾಡೋದು, ಇದಲ್ಲ. ಹಾಗೆ ಮಾಡುವವನ 'ಧನವು ವೃಥಾ ಹೋಯಿತಲ್ಲಾ' ಎಂದೂ ವ್ಯಥಿಸುತ್ತಾರೆ. ತನು–ಮನವನ್ನು ಬಳಲಿಸುವುದರ ಜೊತೆಗೆ, ನಿರಹಂಕಾರದ ನಿಷ್ಠೆಯೂ ಇಲ್ಲಿರಬೇಕೆಂಬುದು ಬಸವಣ್ಣನ ವಿಚಾರ. 'ಕೃಷಿ ಕಾಯಕ ದಿಂದಾದಡೇನು?

> **"ತನು ಮನ ಬಳಲಿಸಿ ತಂದು ದಾಸೋಹವ ಮಾಡುವ**
> **ಪರಮ ಸದ್ಭಕ್ತನ ಪಾದವ ತೋರಯ್ಯ ತಂದೆ"**

ಎನ್ನುವಲ್ಲಿ ಇದನ್ನು ಗುರುತಿಸಬಹುದು. ಶ್ರಮಶುದ್ಧತೆ, ಪ್ರಾಮಾಣಿಕ ನಿಷ್ಠೆ, ಕಾಯಕದ ಪ್ರಮುಖ ಲಕ್ಷಣಗಳಾಗಿದ್ದವು. ಚನ್ನಬಸವಣ್ಣನ ಮಾತಿನಲ್ಲಿ ಹೇಳುವುದಾದರೆ, 'ಕಾಯಕವೆಂಬುದು– 'ತನು ಮನ ಬಳಲಿಸಿ ತಂದು ದಾಸೋಹವ ಮಾಡುವುದು' ಅಂದರೆ ಜೀವನ ನಿರ್ವಹಣೆಗೆ ದೇಹ ಮನಸ್ಸುಗಳ ಶ್ರಮದಿಂದ ದ್ರವ್ಯವನ್ನು ಸಂಪಾದಿಸಿ, ದಾಸೋಹವನ್ನು ಮಾಡಬೇಕು. ತಾನು ಮಾಡುವ ವೃತ್ತಿಯನ್ನು ಶ್ರದ್ಧೆ–ಭಕ್ತಿಗಳಿಂದ ನೆರವೇರಿಸಬೇಕೆಂಬುದೇ ಕಾಯಕ ತತ್ವದ ಬಹುಮುಖ್ಯ ಅಂಶ. ವೃತ್ತಿಗೆ ತಾತ್ವಿಕ ಬುನಾದಿ ಹಾಕುವುದರಿಂದ ಅದರ ನಿರ್ವಹಣೆಯಲ್ಲಿ ವ್ಯಕ್ತಿಯ ನೈತಿಕ ಹೊಣೆಗಾರಿಕೆ ಹೆಚ್ಚಿ, ಮಾಡುವ ಕೆಲಸದಲ್ಲಿ ಆಧ್ಯಾತ್ಮಿಕೋನ್ನತಿ ಸಾಧ್ಯವಾಗುತ್ತದೆ ಎಂಬುದು ಬಸವಣ್ಣನವರ ಆಶಯವಾಗಿತ್ತು. ಇದರಿಂದ ಕಾಯಕದ ಬಗ್ಗೆ ಸಮಾಜದಲ್ಲಿ ಪೂಜ್ಯತೆಯ ಭಾವ ಮೂಡಿಸಿದರು. ಈ ರೀತಿ ಕಾಯಕ ತತ್ವದಿಂದ ಸಾಮಾಜಿಕ–ಆರ್ಥಿಕ ನೆಲೆಗಳಿಗೆ ಆಧ್ಯಾತ್ಮಿಕ ಹಿನ್ನೆಲೆಯನ್ನೊದಗಿಸಿದ್ದರಿಂದ ವೃತ್ತಿಗೆ ಹಾಗೂ ಶ್ರಮಕ್ಕೆ ಸಮಾಜಮುಖಿ ಮಹತ್ವ ಪ್ರಾಪ್ತವಾಯಿತೆನ್ನಬಹುದು.

ಕಾಯಕವು ಜೀವನೋಪಾಯ ಹಾಗೂ ಆಧ್ಯಾತ್ಮಿಕ ಸಿದ್ಧಿಗಳಿಗೆ ಒಂದು ಸಾಧನ ವೆನಿಸಿದ್ದರಿಂದ, ಈ ತತ್ವ ಪರಿಪೂರ್ಣವಾಗುವುದು ಅದು ದಾಸೋಹ ತತ್ವದಲ್ಲಿ ಪರ್ಯವಸಾನವಾದಾಗ ಮಾತ್ರ. ದಾಸೋಹವೆಂದರೆ ದಾನವಲ್ಲ; ಇನ್ನೊಬ್ಬರಿಗೆ ನೀಡುವ ಊಟವಲ್ಲ; ಅದು ಅಹಂಕಾರರಹಿತವಾದ ವಿನೀತಭಾವದ ಕೊಡುಗೆ, 'ಮಾಡಿದೆನೆಂಬುದು ಮನದಲ್ಲಿಲ್ಲದಿರುವುದು'. ತನು ಮನ ಧನ ದಾಸೋಹಕ್ಕೆ ಸವೆಯಬೇಕೆಂಬುದು ಇಲ್ಲಿ ಮುಖ್ಯವಾದುದು. ಅಂದರೆ ಕಾಯಕದಿಂದ ಬಂದದ್ದು ಮಾತ್ರ ದಾಸೋಹಕ್ಕೆ ಸಲ್ಲುತ್ತದೆ ಎಂಬುದನ್ನು ಇಲ್ಲಿ ಗಮನಿಸಬಹುದು. ಅದನ್ನೇ ಬಸವಣ್ಣನವರು 'ಮಾಡುವ ನೀಡುವ ಭಕ್ತನ ಕಂಡಡೆ ನಿಧಿ ನಿಧಾನವ ಕಂಡಂತಾಯಿತ್ತು', 'ಮಾಡುವ ನೀಡುವ ನಿಜಗುಣವುಳ್ಳಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಾ' ಎಂಬಂತಹ ಅನೇಕ ವಚನಗಳಲ್ಲಿ ಕಾಯಕ ಹಾಗೂ ದಾಸೋಹ ತತ್ವಗಳನ್ನು ಸೊಗಸಾಗಿ ಪ್ರತಿಪಾದಿಸುತ್ತಾರೆ.

ಒಟ್ಟಿನಲ್ಲಿ ಕಾಯಕ ಹಾಗೂ ದಾಸೋಹ ತತ್ವಗಳು ಲಿಂಗವಂತ ಪಾರಿಭಾಷಿಕ ಪದಗಳಾಗಿದ್ದು, ಅವು ವ್ಯಕ್ತಿಯ ಉದ್ಧಾರದೊಂದಿಗೆ, ಆರ್ಥಿಕ ಭದ್ರತೆ ಹಾಗೂ ಸಾಮಾಜಿಕ ಕಲ್ಯಾಣವನ್ನುಂಟು ಮಾಡುವ ನಿತ್ಯ ಬದುಕಿನ ವೃತ್ತಿಗಳೆನಿಸಿದವು. ಅವುಗಳಲ್ಲಿ ತುಂಬಾ ವೈವಿಧ್ಯತೆಗಳಿದ್ದವು. ಆದರೂ ಎಲ್ಲವೂ ಸಮಾನವಾದವುಗಳಾಗಿದ್ದವು. ಬಸವಣ್ಣನು ಕಾಸುವ, ಬೀಸುವ, ಹಾಸನಿಕ್ಕುವ, ವೇದವನೋದುವ, ಹೊಳೆದಾಟಿಸುವ, ಮಡಿಮಾಡುವ, ನುಲಿ

ತಯಾರಿಸುವ, ಅಕ್ಕಿ ಆರಿಸುವ, ಕಿನ್ನರಿ ಬಾರಿಸುವ, ನಗಿಸಿ ನಲಿಯುವ, ಡಕ್ಕೆಯ ಬಾರಿಸುವ, ಬೊಕ್ಕಸ ಕಾಯುವ, ಕೃಷಿ ಮಾಡುವ, ಹಡಪಿಗತನದ, ಮಾದಿಗತನದ, ಪರಿಮಳ ದ್ರವ್ಯ ಸಿಂಪಡಿಸುವ, ವೇಷ ಹಾಕಿಕೊಳ್ಳುವ, ಸುಂಕ ವಸೂಲು ಮಾಡುವ, ಗಾಳ ಹಾಕುವ, ಕನ್ನದ ಕಾಯಕದ, ಉಗ್ಗಡಿಸುವ ಮೊದಲಾದ ವಿವಿಧ ರೀತಿಯ ಕಾಯಕಗಳನ್ನು ಹಾಗೂ ಕಾಯಕ ಜೀವಿಗಳನ್ನು ತಮ್ಮ ಅನೇಕ ವಚನಗಳಲ್ಲಿ ಸ್ಮರಿಸಿದ್ದಾರೆ. ಒಟ್ಟಿನಲ್ಲಿ ಬಸವಣ್ಣನವರ ಕಾಯಕ ನಿಷ್ಠೆ ಗುರು–ಲಿಂಗ–ಜಂಗಮರಿಗೆ ಮೀಸಲಾಗಿದ್ದು, ಆ ತತ್ತ್ವಗಳನ್ನೊಳಗೊಂಡ ಜನಸಮೂಹದತ್ತ ಮುಖ ಮಾಡಿರುವುದನ್ನು ಗುರುತಿಸಬಹುದು. ಬಸವಣ್ಣನವರ ಆಧ್ಯಾತ್ಮಿಕ ಸಾಧನೆಯ ಹಲವಾರು ವಚನಗಳು ಆ ಅನುಭವವನ್ನು ಕಟ್ಟಿಕೊಡುವಾಗ, ಒಳನೋಟದಲ್ಲಿ ಕಾಯಕತತ್ವದ ರೂಪಕಗಳೇ ಆಗಿರುವವು. ಬಹುಪಾಲು ವಚನಕಾರರ ಹೆಸರಿನ ಹಿಂದಿರುವ ವಿಶೇಷಣವು ಅವರ ಕಾಯಕವನ್ನೇ ಸೂಚಿಸುತ್ತಿದ್ದು, ಶರಣರು ಕಾಯಕಕ್ಕೆ ನೀಡಿದ ಪ್ರಾಶಸ್ತ್ಯದ ಸಂಕೇತವದು. ಹೆಚ್ಚು ಶರಣರು ಅವರ ಅಂಕಿತನಾಮಗಳಿಗಿಂತ ಅವರ ಕಾಯಕ ಹೆಸರಿನಿಂದಲೇ ಪ್ರಖ್ಯಾತರೆನಿಸಿದ್ದಾರೆ. ಈ ದೃಷ್ಟಿಯಲ್ಲಿ ಬಸವಣ್ಣನವರು ಭಕ್ತಿ ಮತ್ತು ಭಂಡಾರಿ ಕಾಯಕದವರೆಂಬುದು ಎದ್ದುಕಾಣುವ ವಿಷಯ ತಾನೆ? ಒಟ್ಟಿನಲ್ಲಿ ಕಾಯಕ ಯಾವುದೇ ಆಗಿದ್ದರೂ ಅದು ನ್ಯಾಯ ಸಮ್ಮತವಾಗಿದ್ದು, ಅದರಿಂದ ನಮಗೆ ತೃಪ್ತಿಯಿರಬೇಕೆಂಬುದು ಬಸವಣ್ಣನವರ ಅನಿಸಿಕೆ. ಹೀಗಾಗಿ ಕಾಯಕ ತತ್ವಕೇವಲ ಒಂದು ಸಿದ್ಧಾಂತವಾಗಿರದೆ ಅದೊಂದು ಜೀವನ ವಿಧಾನವೆನಿಸಿತು. ಬಸವಣ್ಣನವರ ಈ ಸಾಧನೆ ಉಳಿದ ಶರಣರಿಗೆ ಮಾರ್ಗದರ್ಶನ ನೀಡಿತು. ಅವರು ತಮ್ಮ ಕಾಯಕವನ್ನೇ ಆಧ್ಯಾತ್ಮಿಕ ಸಾಧನೆಯನ್ನಾಗಿ ಪರಿವರ್ತಿಸಿ, ಅದನ್ನು ಸಾಂಕೇತಿಕ ಪರಿಭಾಷೆಯಿಂದ ವಚನಗಳಲ್ಲಿ ಅಭಿವ್ಯಕ್ತಗೊಳಿಸಿ ವಚನ ಚಳವಳಿಗೆ ಒಂದು ಹೊಸ ರೂಪವನ್ನೇ ಕೊಟ್ಟರು. ಇಂತಹ ಕಾಯಕ ಚಳವಳಿಯನ್ನು ಸಮಾಜದಲ್ಲಿ ಸೃಷ್ಟಿಸಲು ಸಾಧ್ಯವಾದುದು ಬಸವಣ್ಣನವರ ಬಹುದೊಡ್ಡ ಸಾಧನೆ ಎನ್ನಬಹುದು. ಇದರಿಂದಾಗಿ ನೂರಾರು ಶರಣರು ತಮ್ಮ ಕಾಯಕವನ್ನು ನಿರ್ವಹಿಸುತ್ತಲೇ ಒಂದು ಕಡೆ ಸಾಮಾಜಿಕ ಸಮಾನತೆ; ಇನ್ನೊಂದು ಕಡೆ ಆಧ್ಯಾತ್ಮಿಕ ಮಹತ್ವ, ಎರಡನ್ನೂ ಸಾಧಿಸಿದರು. ಈ ಎರಡಕ್ಕೂ ಮೂಲವಾದ ಅರ್ಥವ್ಯವಸ್ಥೆಯನ್ನೂ ಅದು ಸರಿಪಡಿಸಿರುವುದು ಗಮನಾರ್ಹ ಸಂಗತಿ. ಕಾಯಕ ಸತ್ಯ ಶುದ್ಧವಾಗಿರುವುದರ ಜೊತೆಗೆ, ಅದರ ಫಲ, ಸಮಾಜಕ್ಕೂ ಸೇರಬೇಕೆಂಬುದು ಬಸವನ ಈ ತತ್ವವನ್ನು ಗಾಂಧೀಜಿಯವರ 'ಧರ್ಮದರ್ಶಿತ್ವ' (trusteeship) ಕ್ಕೆ ಕೆಲವರು ಹೋಲಿಸುತ್ತಾರೆ. 'ಧರ್ಮದರ್ಶಿತ್ವ'ವು ಕಾರ್ಯಸಾಧ್ಯವಲ್ಲದ ಆದರ್ಶವೆಂಬ ವಿಮರ್ಶೆಯೂ ಬಂದಿದೆ. ಆದರೆ ಬಸವಣ್ಣನ ಕಾಯಕತತ್ವ'ವು ವ್ಯಾವಹಾರಿಕವಾದ ಕಾರ್ಯರೂಪದಲ್ಲಿ ಅಡಕವಾಗಿರುವುದನ್ನು ಗಮನಿಸಬಹುದು. ಆತನ ಕಾಯಕ ತತ್ವದ ಬಹುಮುಖ್ಯ ಅಂಶಗಳೆಂದರೆ, ಇದು ಕೇವಲ ಒಂದು ಉದ್ಯೋಗವಲ್ಲ. ಉಪಾಶನೆಯನ್ನೊಳಗೊಂಡ ಉದ್ಯೋಗ. ಆ ಉಪಾಸನೆಯೇ ದಾಸೋಹ. 'ಕಾಯಕ'ದೊಂದಿಗೆ 'ದಾಸೋಹ' ಇಲ್ಲಿ ಬೆರೆತಿದೆ. ಹೀಗಾಗಿ ಇವೆರಡೂ ಒಂದೇ ತತ್ವನಾಣ್ಯದ ಎರಡು ಮುಖಗಳು. ಅಂತೆಯೇ ಉದ್ಯೋಗ+ ದಾಸೋಹ = ಕಾಯಕವೆಂಬುದೇ ಬಸವಣ್ಣನ ಸೂತ್ರ. ಇಲ್ಲಿ ಕಾಯಕವೆನ್ನುವುದು ಕೇವಲ ದುಡಿದು ಗಳಿಸುವುದಿಲ್ಲ', ದುಡಿದದ್ದನ್ನು ಬಳಸುವುದೂ ಆಗಿದೆ. ಈ ಹಿನ್ನಲೆಯಲ್ಲಿ ಬಸವಣ್ಣನವರು ಹೇಳುವ 'ವಿವಿಧ ದಾಸೋಹ'ವೆಂಬುದು ವ್ಯಷ್ಟಿ–ಸಮಷ್ಟಿಗಳ

ಸಮನ್ವಯದ ಸಂಕೇತವಾದ ಅರ್ಥಪೂರ್ಣ ಮಾತಾಯಿತು. ಉತ್ಪಾದನೆಯ ಮೂಲವನ್ನು ಸಾಮಾಜೀಕರಣಗೊಳಿಸುವದರೊಂದಿಗೆ, ಆ ಮೂಲಕ ಶೋಷಣೆಯನ್ನು ತೆಗೆದು ಹಾಕಿದ ಈ ವ್ಯವಸ್ಥೆ ಇಂದಿಗೂ ಮಾದರಿಯಾಗಿದೆ. ಇದನ್ನು ವ್ಯವಸ್ಥಿತವಾಗಿ ಜಾರಿಯಲ್ಲಿ ತರಲು ಬಸವಣ್ಣನವರು ಆ ಕಾಲದ ಪರಿಸರಕ್ಕನುಗುಣವಾಗಿ 'ಲಿಂಗ'ವನ್ನು ಇದರ ಕೇಂದ್ರಬಿಂದು ವಾಗಿಸಿಕೊಂಡದ್ದು ಒಂದು ಅದ್ಭುತ ಯೋಜನೆ ಎನ್ನಬೇಕು. ಇಂದಿನ ಆಧುನಿಕ ಸರ್ವೋದಯ ಸಮಾಜ ನಿರ್ಮಾಣಕ್ಕೆ ಬುನಾದಿಯಾಗಬಲ್ಲ ಒಂದು ಮಹತ್ವದ ಯೋಜನೆಯನ್ನು ಬಸವಣ್ಣನವರು ಈ 'ಕಾಯಕತತ್ವ'ದ ಮೂಲಕ ನೀಡಿದ್ದಾರೆ ಎನ್ನಬಹುದು.

ಬಸವಣ್ಣನವರ ಅನುಪಮ ದಾಂಪತ್ಯ ಜೀವನ

●

ಡಾ. ವಿ. ಕಮಲಮ್ಮ

ಬಸವಣ್ಣನವರ ದಾಂಪತ್ಯ ಜೀವನ ಅಪರೂಪವಾದುದು. ಅವರದು ದೈವಿಕ ದಾಂಪತ್ಯ, ಉಪಮಾತೀತ ದಾಂಪತ್ಯ ಸಾಮಾನ್ಯ ಜನರಿಗೆ ಅನುಸರಿಸಲು ಕಷ್ಟಸಾಧ್ಯವಾಗಿರುವ ಅಸಾಧಾರಣ ಆದರ್ಶ ದಾಂಪತ್ಯವಾಗಿದೆ.

ಲೌಕಿಕ ಜೀವನದಲ್ಲಿ ಸಾಮಾನ್ಯವಾಗಿ ಕುಟುಂಬದಲ್ಲಿ ಪತ್ನಿಯು, ಪತಿಯನ್ನು ತನ್ನವನೆಂದು ತಿಳಿಯುವಂತೆ ಪತಿಯ ತಂದೆ, ತಾಯಿ, ಸೋದರ, ಸೋದರಿ, ಬಂಧುಗಳೂ ತನ್ನವರೆಂಬ ವಸ್ತುಸ್ಥಿತಿಯನ್ನು ತಿಳಿದು, ಎಲ್ಲರನ್ನೂ ಪ್ರೀತಿಸುವ, ಗೌರವಿಸುವ ಮನೋಭಾವವಿದ್ದಲ್ಲಿ, ಆ ಮನೆಯಲ್ಲಿ ಶಾಂತಿ ನೆಲಸುತ್ತದೆ. ಅವರದು ಅನುಕೂಲ, ಅನ್ಯೋನ್ಯ ದಾಂಪತ್ಯವಾಗುವುದನ್ನು ಲೋಕದಲ್ಲಿ ನಿತ್ಯ ಕಾಣುವ ದೃಶ್ಯ. ಆದರೆ ಬಸವಣ್ಣನವರ ಸಂಸಾರ ಎಂದರೆ ಇಡೀ ಪ್ರಪಂಚದಲ್ಲಿರುವ ಮಾನವರೊಂದೇ ಅಲ್ಲದೆ, ಸಕಲ ಜೀವಾತ್ಮರೂ ಆತನ ಬಂಧುಗಳು ಆಗಿರುವರು. 'ಸಕಲ ಜೀವಾತ್ಮರಿಗೆ ಲೇಸನೇ ಬಯಸಬೇಕೆನ್ನುವ, ಸಮಾಜದ ಏಳ್ಗೆಗಾಗಿ ದುಡಿಯಬೇಕೆನ್ನುವ, ಅಸಾಮಾನ್ಯ, ಅಪರೂಪ, ಉಪಮಾತೀತ ವ್ಯಕ್ತಿತ್ವವುಳ್ಳವರು. ಇಂತಹ ವ್ಯಕ್ತಿಯ ಪತ್ನಿಯರಾಗಿ ನೀಲ, ಗಂಗ ಇಬ್ಬರೂ ಪತಿಯ ಮಾರ್ಗದಲ್ಲಿ ನಡೆದು, ಸಮಾಜ ಕಲ್ಯಾಣದ ಕಾರ್ಯದಲ್ಲಿ ಭಾಗವಹಿಸಿ, ಆತ್ಮಕಲ್ಯಾಣವನ್ನು ಮಾಡಿಕೊಂಡ ಸತಿಯರು. ಕಾರಣಿಕ ಪುರುಷನಾದ, ದೈವಾಂಶ ಸಂಭೂತನಾದ, ಲೋಕಕಲ್ಯಾಣಕ್ಕಾಗಿ ಜನಿಸಿದ ಬಸವಣ್ಣನವರ ಎರಡು ಕಣ್ಣುಗಳು ಆತನ ಇಬ್ಬರು ಮಡದಿಯರು. ಕಣ್ಣು ಎರಡಾದರೂ ದೃಷ್ಟಿ ಒಂದೇ ಇರುವಂತೆ ಇವರದು ದೇಹ ಎರಡಾದರೂ ಪ್ರಾಣ ಒಂದೇ, ಭಾವ ಒಂದೇ, ಗುರಿ ಒಂದೇ ಆಗಿರುವುದು. ಅತ್ಯುತ್ತಮ ವ್ಯಕ್ತಿಯಾಗಿ ಉನ್ನತ ಗುರಿಯುಳ್ಳ ಬಸವಣ್ಣನವರನ್ನು ಪತಿಯಾಗಿ ಪಡೆದ ಗಂಗಾಂಬಿಕೆಯು ಪತಿಯಾಜ್ಞೆಯಲ್ಲಿ ಚರಿಪ ಸತಿಗೇಕೆ ಪ್ರತಿಜ್ಞೆಯು ಪತಿಯಾಜ್ಞೆ ಪಾಲನೆಯಲ್ಲಿ ನಿಷ್ಠೆಯಿಟ್ಟು ನಡೆವ ಪತಿಭಕ್ತೆ, ಮತ್ತು ಆಚಾರವಂತೆಯಾಗಿರುವಳು. 'ಬಸವನ ಅನುಭವದಿಂದ ವಿವರವ ಕಂಡು ವಿಚಾರ ಪತ್ನಿಯಾದೆನಯ್ಯಾ' ಎನ್ನುವ ನೀಲಾಂಬಿಕೆಗೆ ಪತಿಯು ಸರ್ವಸ್ವವಾಗಿರುವನು. ಬಸವಣ್ಣನವರು ಭಕ್ತಿ ಭಂಡಾರಿ ಬಸವಣ್ಣ ಎಂದೇ ಪ್ರಸಿದ್ಧಿ. ಈತನು ಪುರಾಣ ಪುರುಷ, ಯುಗಪುರುಷ, ಮಾನವತಾವಾದಿ, ಭಾರತದ ಪ್ರಪ್ರಥಮ ವಿಚಾರವಾದಿ, ಸಮಾಜ ಸುಧಾರಕ, ಶ್ರೇಷ್ಠ ವಚನಕಾರ, ದಯಾನಿಧಿ,

ಅಹಿಂಸಾವಾದಿ, ನಡೆದಂತೆ ನುಡಿಯುವವ, ಸಕಲ ಜೀವಿಗಳಿಗೆಲ್ಲಾ ಲೇಸನ್ನು ಬಯಸಿದ ಅತ್ಯುತ್ತಮ ವ್ಯಕ್ತಿ.

ಇವರನ್ನು ಕುರಿತು ಅಂದಿನ ಸಮಕಾಲೀನ ಶರಣರು ವಚನಕಾರರು, ಹೃದಯ ತುಂಬಿ ಗುಣಗಾನ ಮಾಡಿರುವರು. ಇವರ ಚರಿತ್ರೆಯನ್ನೊಳಗೊಂಡ ಪುರಾಣಗಳು, ಕಾವ್ಯಗಳು, ನಾಟಕಗಳು, ಕಾದಂಬರಿಗಳು, ಕಥೆಗಳು, ಸಂಶೋಧನಾತ್ಮಕ ಲೇಖನಗಳು, ಎಂಫಿಲ್., ಪಿಹೆಚ್.ಡಿ. ಪ್ರಬಂಧಗಳು ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಬರುತ್ತಿವೆ. ಇವರ ಬಗೆಗಿನ ಕೃತಿಗಳು ಎಷ್ಟಿವೆ ಎಂಬುದನ್ನು ಕುರಿತ, ಒಂದು ಕೃತಿಯೇ ಪ್ರಕಟವಾಗಿದೆ. ಇವರನ್ನು ಕುರಿತು, ಇವರ ಸಮಕಾಲೀನ ವಚನಕಾರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಅಂತಹ ವಚನಗಳೇ ಕೃತಿರೂಪದಲ್ಲಿ ಬಂದಿದೆ. ಅಕ್ಕಮಹಾದೇವಿಯು ತನ್ನದೊಂದು ವಚನದಲ್ಲಿ '....ಬಸವಣ್ಣನು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಬಂದು ವೀರಶೈವ ಮಾರ್ಗವನರಪುವುದಕ್ಕೆ ಬಾವನ್ನ ವಿವರವನೊಳಕೊಂಡು ಚರಿಸಿದನು ಅದೆಂತೆಂದೊಡೆ, ಗುರುಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಿಧಾರಕನು, ಪಂಚಾಕ್ಷರಿ ಭಾಷಾ ಸಮೇತನು, ಲಿಂಗಾಂಗಸಂಬಂಧಿ ನಿತ್ಯ ಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ, ಪಾದೋದಕ ಪ್ರಸಾದ ಗ್ರಾಹಕನು, ಗುರುಭಕ್ತಿ ಸಂಪನ್ನನು, ಏಕಲಿಂಗ ನಿಷ್ಠಾಪರನು, ಚರಲಿಂಗಲೋಲುಪ್ತನು, ಶರಣ ಸಂಗಮೈಶ್ವರ್ಯನು, ತ್ರಿವಿಧಕ್ಕೆ ಆಯತನು, ತ್ರಿಕರಣಶುದ್ಧನು, ತ್ರಿವಿಧ ಲಿಂಗಾಂಗ ಸಂಬಂಧಿ, ಅನ್ಯದೈವ ಸ್ಮರಣೆಯ ಹೊದ್ದ, ಭವಿಸಂಗವ ಮಾಡ, ಭವಿ ಪಾಕವ ಕೊಳ್ಳ, ಪರಸತಿಯ ಬೆರಸ, ಪರಧನವನೊಲ್ಲ, ಪರನಿಂದೆಯನಾಡ, ಅನೃತವನುಡಿಯ, ಹಿಂಸೆಯಮಾಡ, ತಾಮಸ ಭಕ್ತಸಂಗವ ಮಾಡ, ಗುರು-ಲಿಂಗ-ಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದವೆಲ್ಲ ಸಮರ್ಪಿಸಿ, ಪ್ರಸಾದ ಮುಂತಾಗಿ ಭೋಗಿಸುವ, ಜಂಗಮ ನಿಂದೆಯ ಸೈರಿಸ, ಪ್ರಸಾದ ನಿಂದೆಯ ಕೇಳ, ಅನ್ಯರನಾಶೆಗೆಯ್ಯ, ಪಾತ್ರಾಪಾತ್ರವನರಿದೀವ ಚತುರ್ವಿಧ ಪದವಿಯ ಹಾರ, ಅರಿಷಡ್ವರ್ಗಕ್ಕಳುಕ, ಕುಲಾದಿ ಮದಂಗಳ ಬಗೆಗೊಳ್ಳ, ದ್ವೈತಾದ್ವೈತವ ನುಡಿವನಲ್ಲ, ಸಂಕಲ್ಪ ವಿಕಲ್ಪವ ಮಾಡುವವನಲ್ಲ, ಕಾಲೋಚಿತವ ಬಲ್ಲ. ಕ್ರಮಯುಕ್ತನಾಗಿ, ಷಟ್‌ಸ್ಥಲಭರಿತ, ಸರ್ವಾಂಗಲಿಂಗಿ, ದಾಸೋಹ ಸಂಪನ್ನ' ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ ಮೆರೆದಿರುವನೆಂದು[೧] ವರ್ಣಿಸಿರುವಳು. ಇಂತಹ ಶ್ರೇಷ್ಠ ಗುಣ ಶೀಲವಂತನಾದ ಬಸವಣ್ಣನನ್ನು ಪತಿಯಾಗಿ ಪಡೆದ ತಾವು ಧನ್ಯರೆಂದು ಆತನ ಪತ್ನಿಯರಿಬ್ಬರೂ ಹೇಳಿರುವರು.

ಇದೇನೊ ಮೀರಿ ತೋರುವ ಮೂರುತಿ
ಪುಷ್ಪ ಗುಂಪಿನಲ್ಲಿ ಕಾಣದೆ ಹೋಗಿದೆ
ಇದೇನೊ ಮೀರಿ ತೋರುವ ಮೂರುತಿ
ಕರದಲ್ಲಿಯ ಲಿಂಗದಂತೆ ಉಲುಹದ ಸ್ಥಿತಿ ತೋರುತ್ತದೆ
ಇಂತಪ್ಪ ಮೂರ್ತಿಯ ಕಂಡು
ಗಂಗಾಪ್ರಿಯ ಕೂಡಲಸಂಗಜ್ಜನ ಶರಣನ
ಸತಿಯಳು ಧನ್ಯಳಾದಳು[೨]......

ಎಂದು ಗಂಗಾಂಬಿಕೆ ವ್ಯಕ್ತಪಡಿಸಿದರೆ, ನೀಲಾಂಬಿಕೆಯು ಬಸವಣ್ಣನವರನ್ನು ಕುರಿತು-

ಎನಗೆ ಲಿಂಗವು ನೀವೆ ಬಸವಯ್ಯಾ
ಎನಗೆ ಸಂಗವು ನೀವೆ ಬಸವಯ್ಯಾ

ಎನಗೆ ಪ್ರಾಣವು ನೀವೆ ಬಸವಯ್ಯಾ
ಎನಗೆ ಪ್ರಸಾದವು ನೀವೆ ಬಸವಯ್ಯಾ
ಎನಗೆ ಪ್ರಭೆಯ ಮೂರ್ತಿಯು ನೀವೆ ಬಸವಯ್ಯಾ
ಎನಗೆ ಸಂಗಯ್ಯನು ನೀವೆ ಬಸವಯ್ಯಾ[೩]

ಎಂದು ಹೇಳಿರುವಲ್ಲಿ ನೀಲಾಂಬಿಕೆಗೆ ಸರ್ವಸ್ವವೂ ಪತಿ ಬಸವಣ್ಣನವರೇ ಆಗಿರುವುದು ಸ್ಪಷ್ಟ. "ಪರಿಣಾಮ ಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ ಬಳಿಕ, 'ಸಂಗಯ್ಯನ ಹಂಗು ನಮಗೇತಕಯ್ಯಾ ಬಸವಾ" ಎಂದಿರುವಲ್ಲಿ ಸತಿ ನೀಲಾಂಬಿಕೆಗೆ, ಸಕಲವೂ ಪತಿ ಬಸವಣ್ಣನಾದಾಗ, ಸಂಗಯ್ಯ ಅರ್ಥಾತ್ ಭಗವಂತನ ಹಂಗು ತನಗಿಲ್ಲ, ತನ್ನ ಪತಿಯಲ್ಲಿಯೇ ಭಗವಂತನನ್ನು ಕಂಡಿರುವುದಾಗಿ ಹೇಳಿರುವಲ್ಲಿ ಪತಿಯ ಅಪರೂಪ ವ್ಯಕ್ತಿತ್ವವನ್ನು ವ್ಯಕ್ತಮಾಡಿರುವಳು. ಗಂಗಾ, ನೀಲಾ ಇವರಿಬ್ಬರೂ ಅಪ್ರತಿಮ ಸುಂದರಿಯರು. ಭೀಮ ಕವಿಯ ಬಸವ ಪುರಾಣದಲ್ಲಿ, ಗಂಗಾಂಬಿಕೆಯ ರೂಪವನ್ನೂ, ಗಾಂಭೀರ್ಯವನ್ನೂ ಅರ್ಥವತ್ತಾಗಿ ವರ್ಣಿಸಿರುವರು.

ಕ್ಷಿತಿಗೆ, ಲಕ್ಷ್ಮಿಗೆ, ರೋಹಿಣಿಗೆ, ಭಾ–
ರತಿಗೆ, ರತಿಗೆ, ಪುಲೋಮಜೆಗರುಂ
(ಅರುಂಧತಿ) ಧತಿಗೆ, ಸೀತೆಗೆ, ಜಾಹ್ನವಿಗೆ ರವಿಸತಿಗೆ ನೂರುಮಡಿ
ಧೃತಿ, ಸಿರಿಪ್ರಭೆ, ಜಾಣ್ಮೆ, ರೂಪೋ
ನ್ನತಿ ಪತಿವ್ರತದಾಚರಣೆ ಸಂ
ತತ ಪವಿತ್ರ ತೇಜವೆಂಬಿವರಿಂದ ಗಂಗಾಯಿ[೪]

ಎಂಬಲ್ಲಿ ಗಂಗಾಬಿಕೆಯು ಧೈರ್ಯ, ಸಂಪತ್ತು, ಪ್ರಭೆ, ಜಾಣ್ಮೆ, ರೂಪ, ಉನ್ನತಿ, ಪತಿವ್ರತಾಚರಣೆ, ಪವಿತ್ರತೆ ಮೊದಲಾದ ಅತ್ಯುತ್ತಮ ಗುಣಗಳಿಂದ ಕೂಡಿರುವುದನ್ನು ಕವಿ ಮನಸಾರೆ ಹೊಗಳಿರುವನು. ನೀಲಾಂಬಿಕೆಯನ್ನು ಕುರಿತು ಬಸವಣ್ಣನವರೇ ತಮ್ಮದೊಂದು ವಚನದಲ್ಲಿ "ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳ ಚೆಲುವೆ" ಎಂದು ವರ್ಣಿಸಿರುವಲ್ಲಿ ಆಕೆಯು ಅಪೂರ್ವ ಸೌಂದರ್ಯವತಿಯಾಗಿರುವುದನ್ನು ಗಮನಿಸಬೇಕು. ಇಬ್ಬರೂ ರಾಜವೈಭೋಗದಲ್ಲಿ ಬೆಳೆದವರು. ಗಂಗಾಂಬಿಕೆ ಬಲದೇವ ಮಂತ್ರಿಯ ಮಗಳಾದರೆ, ನೀಲಾಂಬಿಕೆ ಬಿಜ್ಜಳನ ಸಾಕು ತಂಗಿ (ಸಿದ್ಧರಾಮೇಶ್ವರನ ಮಂತ್ರಗೋಪ್ಯದಲ್ಲಿಯೂ ಈ ವಿಚಾರವಿದೆ. ಸಿದ್ಧರಸ ಮಂತ್ರಿಯ ಮಗಳು ಹಾಗೂ ಬಿಜ್ಜಳನ ಸಾಕುತಂಗಿ ಎಂದು ಸಿಂಗಿರಾಜ ಕವಿಯು ಹೇಳಿರುವನು) ಯಾಗಿರುವಳು. ಇವರಿಬ್ಬರೂ ರಾಜ್ಯ ಸಂಪತ್ತು, ಧನಸಂಪತ್ತು, ರೂಪ ಸಂಪತ್ತುಗಳ ಜೊತೆಯಲ್ಲಿ ಸದ್ಗುಣಶೀಲ ಸಂಪತ್ತುಗಳಿಂದ ಕೂಡಿದ ಇವರು ಬಸವಣ್ಣನವರ ಗುಣಶೀಲಗಳಿಗೆ, ಔನ್ನತ್ಯಕ್ಕೆ ಮೆಚ್ಚಿರುವುದು ಸಹಜವಿದೆ. ಬಸವಣ್ಣನವರು "ಪರವಧುವನು ಮಹಾದೇವಿಯೆಂಬೆ, ಅನ್ಯವಧುವೆಂಬುದುನಿಮ್ಮ ರಾಣಿವಾಸ, ಮೊಲೆಯೆಂಬ ಭಾವತಪ್ಪಿ ಅಪ್ಪಿದವರ ತಲೆಯ ಕೊಂಬ ಕೂಡಲ ಸಂಗಮದೇವಾ, ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದರೆ ತುಡುಗುಣಿತನದಲ್ಲಿ ಪರವಧುವ ನೋಡುವ ಸರಸ ಬೇಡ ಕಾಣಿರಣ್ಣಾ, ಪರಧನ, ಪರಸ್ತ್ರೀಯೆಂಬೀ ಜೂಬಿಗಂಜುವೆ, ಮುನ್ನಂಜದ ರಾವಣನೇ ವಿಧಿಯಾದ, ಅಂಜುವೆನಯ್ಯಾ ಕೂಡಲ ಸಂಗಮದೇವಾ! ಒಲ್ಲೆನಯ್ಯಾ ಪರಸತಿಯ ಸಂಗವ" ಎನ್ನುವಲ್ಲಿ ಪರಸ್ತ್ರೀಯಲ್ಲಿ ದೈವತ್ವವನ್ನು ಕಂಡ ಮಹನೀಯನಾಗಿರುವನು ಹಾಗೂ

ಶೀಲವಂತನಾಗಿರುವನು. "ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ ಅನಾಚಾರವೇ ನರಕ, ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದಡೆ ನರಕ, ನುಡಿದರೆ ಶಿವಮೆಚ್ಚಿ ಅಹುದಹುದೆನಬೇಕು" ಎಂಬ ಬಸವಣ್ಣನವರ ನುಡಿಯಲ್ಲಿ ಅವರ ಹಿರಿಯ ವ್ಯಕ್ತಿತ್ವ ಮನಸೆಳೆಯುವುದು, ನಿಸ್ಸೀಮ ಭಕ್ತನಾದ ಬಸವಣ್ಣನವರು, "ನೀನೊಲಿದಡೆ ಕೊರಡು ಕೊನರುವುದಯ್ಯಾ, ನೀನೊಲಿದಡೆ ಬರಡು ಹಯನಹುದಯ್ಯಾ, ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ, ನೀನೊಲಿದಡೆ ಸಕಲ ಪಡಿಪದಾರ್ಥ ಇದಿರಲಿರ್ಪುವು ಕೂಡಲ ಸಂಗಮದೇವಾ"[೫] ಎಂದು ದೇವರ ಅಪಾರ ದಯಾಗುಣವನ್ನು ನಂಬಿರುವರು. ವ್ಯಕ್ತಿಯು ತನ್ನ ಸದ್ಗುಣಗಳಿಂದ ಭಗವಂತನಿಗೆ ಪ್ರಿಯನಾಗುವನು, ಎಂಬುದನ್ನು ಬಸವಣ್ಣನವರು– "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ". ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಲಯಲುಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ಇದೇ ನಮ್ಮ ಕೂಡಲ ಸಂಗಮದೇವರ ನೊಲಿಸುವ ಪರಿ.[೬] ಎಂದು ಸರಳವಾಗಿ, ಸುಂದರವಾಗಿ ವಿವರಿಸಿರುವರು. ಇಂತಹ ಸದ್ಗುಣ ಸಂಪನ್ನನಾದ, ಅನುಪಮ ಭಕ್ತನಾದ ಬಸವಣ್ಣನವರನ್ನು ಕುರಿತು, 'ಭಕ್ತಿಯ ಬೆಳೆಸಿರಿ ಬಸವಯ್ಯಾ' ಎಂದು ಚೆನ್ನಬಸವಣ್ಣನೂ 'ಭಕ್ತಿರೂಪನು ಬಸವ, ನಿತ್ಯರೂಪನು ಬಸವ, ಮತ್ತಾನಂದ ಸ್ವರೂಪನು ಬಸವಣ್ಣನು' ಎಂದು ಸಿದ್ಧರಾಮನು, ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ, ಎತ್ತೆತ್ತ ನೋಡಿದಡೆ ಅತ್ತತ್ತ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯಾ ಎಂದು ಮಡಿವಾಳ ಮಾಚಯ್ಯನು ವರ್ಣಿಸಿರುವರು. ಆದರೆ ಬಸವಣ್ಣನವರು, "ಎನ್ನಲ್ಲಿ ಭಕ್ತಿ ಸಾಸಿವೆಯ ಷಡ್ಭಾಗದಿನಿತಿಲ್ಲ" ಎಂದು ನುಡಿದಿರುವ ವಿನಮ್ರ ಸ್ವಭಾವದವರು. ಭಕ್ತಿ ಸುಭಾಷೆಯ ನುಡಿವೆ, ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ಪೂರೈಸುವೆ ಎನ್ನುವ ಹಿರಿಯ ವ್ಯಕ್ತಿತ್ವ, ಘನತೆವುಳ್ಳ ಶ್ರೇಷ್ಠವ್ಯಕ್ತಿ ಬಸವಣ್ಣನವರು.

ಬಸವಣ್ಣನವರು ಸಮಾಜ ಸುಧಾರಣೆಗಾಗಿ ಹಮ್ಮಿಕೊಂಡ, ಕಾಯಕ, ದಾಸೋಹ, ಭಕ್ತಿಮಾರ್ಗ, ಅನುಭವ ಮಂಟಪದಲ್ಲಿ ನಿತ್ಯ ನಡೆಯುವ ಆಧ್ಯಾತ್ಮಿಕ ಚರ್ಚೆ, ಮನೆಯಲ್ಲಿ ನಿತ್ಯ ನಡೆಯುವ ದಾಸೋಹ ಮೊದಲಾದ ದೊಡ್ಡ ದೊಡ್ಡ ಕಾರ್ಯಗಳು ಸುಸೂತ್ರವಾಗಿ ನಡೆಯಲು ಗಂಗಾಂಬಿಕೆ, ನೀಲಾಂಬಿಕೆ ಪತಿಯ ಜೊತೆಯಲ್ಲಿ ಸದಾ ದುಡಿಯುತ್ತಿದ್ದರು. ಪತಿಯ ಯಾವ ಕಾರ್ಯದಲ್ಲೂ ಕುಂದುಬಾರದಂತೆ, ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು. ಬಸವಣ್ಣನವರ ಕುಟುಂಬದಲ್ಲಿ ಸುಖ, ಶಾಂತಿ ಇತ್ತು. ಅನುಕೂಲ ದಾಂಪತ್ಯ ಅವರದಾಗಿತ್ತು. ಈ ಬಗ್ಗೆ ವಚನಗಳಲ್ಲಾಗಲೀ, ಕಾವ್ಯಗಳಲ್ಲಾಗಲೀ, ಶಾಸನಗಳಲ್ಲಾಗಲೀ ಭಿನ್ನ ಅಭಿಪ್ರಾಯವೇ ಕಂಡುಬಂದಿಲ್ಲ. "The whole family of Basaveswara was breeathing the spirit of religion. His sister Nagalambike was seeker after a new path of salvation, his nephew Channa Basavanna was knowledge incarnate, his wives Gangambike and Nilambike were the ardent followers of Basaveswara in all his undertakings, his son Balasangayya was sangameswara incarnate and himself a Bhaktibandari. Indeed it was an ideal family full of divine spirit.[7]

ಎಂದು ಹೇಳಿರುವ ಆರ್.ಸಿ. ಹಿರೇಮಠ್ ಅವರ ಹೇಳಿಕೆಯಲ್ಲಿ ಬಸವಣ್ಣನವರ ಅನುಪಮ, ಅಸಾಧಾರಣ ಆದರ್ಶ ದಾಂಪತ್ಯ ಒಡಮೂಡಿದೆ.

ಲೌಕಿಕ ಮತ್ತು ಪಾರಮಾರ್ಥಗಳೆರಡನ್ನೂ ಸಮನ್ವಯಗೊಳಿಸಿ, ಆತ್ಮಸಿದ್ಧಿ ಸಾಧಿಸಬಹುದೆಂದು ನಡೆದು ನುಡಿದಿದ್ದಾರೆ. ಬಸವಣ್ಣನವರು "ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ"ಯಾದ ಶರಣ. ಸಂಸಾರದಲ್ಲಿದ್ದು ಆಧ್ಯಾತ್ಮ ಮಾರ್ಗದಲ್ಲಿ ಮುಂದುವರೆಯುತ್ತಾ ತನ್ನ ಪತ್ನಿಯರು, ಅಕ್ಕ, ಸೋದರಳಿಯ ಇತರ ಶರಣರು ಎಲ್ಲರನ್ನೂ ಪಾರಮಾರ್ಥಿಕ 'ಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ನೀಡಿರುವರು. ಬಸವಣ್ಣನವರ ಸೋದರಿ ಅಕ್ಕನಾಗಮ್ಮ, ಸೋದರನ ಮಹಾಮನೆಯಲ್ಲಿ ನಡೆಯುತ್ತಿದ್ದ ದಾಸೋಹ ಕಾರ್ಯದಲ್ಲಿ, ನೀಲಮ್ಮ ಗಂಗಮ್ಮನವರೊಟ್ಟಿಗೆ ಸಹಕರಿಸುತ್ತಾ ನಿಷ್ಠೆಯಿಂದ ಆ ಮಹಾಕಾರ್ಯದಲ್ಲಿ ಭಾಗವಹಿಸುತ್ತಿದ್ದಳು. ಅವರಲ್ಲಿಯ ಒಕ್ಕಟ್ಟು, ಪರಸ್ಪರ ಪ್ರೀತಿ, ವಿಶ್ವಾಸ, ಐಕಮತ್ಯ ಇವುಗಳು ಅನುಕರಣೀಯವಾದವು. ನೀಲಮ್ಮನಿಗೆ ಅಕ್ಕನಾಗಮ್ಮ, ಪತಿಯ ಸೋದರಿಯಾದರೂ, ಆಕೆಯ ಪ್ರೀತಿಯಲ್ಲಿ, ಮಾರ್ಗದರ್ಶನದಲ್ಲಿ ಆಕೆಯನ್ನು ತಾಯಿಯೆಂದೇ ತಿಳಿದಿರುವುದು ಗಮನಾರ್ಹ.

ಎನಗೆ ಹಾಲೂಟವ ನಿಕ್ಕುವ ತಾಯೆ
ಎನಗೆ ಪರಿಣಾಮವ ತೋರುವ ತಾಯೆ
ಪರಮ ಸುಖದೊಳಿಪ್ಪ ತಾಯೆ
ಪರವಸ್ತುವ ನಂಬಿದ ತಾಯೆ
ಬಸವನ ಗುರುತಾಯೆ
ಸಂಗಯ್ಯನಲ್ಲಿ ಸ್ವಯಲಿಂಗಿಯಾದೆಯಾ ಅಕ್ಕನಾಗಮ್ಮ ತಾಯೆ[೮]

ಎಂಬ ವಚನದಲ್ಲಿ ಅಕ್ಕನಾಗಮ್ಮ ಮತ್ತು ನೀಲಾಂಬಿಕೆ, ಅತ್ತಿಗೆ ನಾದಿನಿಯರ ಸಂಬಂಧ, ಅನ್ಯೋನ್ಯತೆ, ಗೌರವ ಮೊದಲಾದವು ಅನುಕರಣೀಯವಾಗಿದೆ. ನಾಗಮ್ಮ, ಹಾಲೂಟವನ್ನಿಡುವ ಸಂದರ್ಭದಲ್ಲಿ ಲೌಕಿಕ ವಿಷಯಗಳಲ್ಲಿ ತಾಯಿಯಾಗಿಯೂ, ಪರಿಣಾಮವ ತೋರುವ ಸಂದರ್ಭದಲ್ಲಿ ಪಾರಮಾರ್ಥಿಕ ಮಾರ್ಗದರ್ಶನ ನೀಡುವ ತಾಯಿಯಾಗಿಯೂ ನಡೆದುಕೊಂಡಿರುವುದು ಗಮನೀಯ. ಜಗದ್ಗುರುವಾದ ಬಸವಣ್ಣನವರಿಗೆ ಅಕ್ಕನಾಗಮ್ಮ ಗುರುಸ್ಥಾನದಲ್ಲಿ, ತಾಯಿಯ ಸ್ಥಾನದಲ್ಲಿ ನಿಂತು, ಆತನ ಮೇಲ್ಮೆಗೆ ಕಾರಣವಾದ ನಾಗಲಾಂಬಿಕೆ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆದು, 'ಸಂಗಯ್ಯನಲ್ಲಿ ಸ್ವಯಂಲಿಂಗಿ'ಯಾಗಿ ಮುಕ್ತಿಯನ್ನು ಹೊಂದಿರುವಳು. ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಅಮೂಲ್ಯ ವಚನ ಸಾಹಿತ್ಯದ ರಕ್ಷಣೆಯಲ್ಲಿ ಮುಂದಾಳುತನ ವಹಿಸಿ, ಕಾಪಾಡಿದುದು ಇವಳ ಶ್ರೇಷ್ಠತೆಗೆ ನಿದರ್ಶನವಾಗಿದೆ. ಇಂದಿಗೂ ಉಳವಿಯಲ್ಲಿ ಇವಳ ಸಮಾಧಿ ಇದ್ದು, ಅದು ಪೂಜ್ಯನೀಯ ಸ್ಥಳವಾಗಿದೆ. ಇವಳ ಸಮಕಾಲೀನ ಶರಣರಾದ ಕೋಲಶಾಂತಯ್ಯ, ಮರುಳ ಶಂಕರದೇವ, ಆಯ್ದಕ್ಕಿ ಲಕ್ಕಮ್ಮ, ನೀಲಮ್ಮ ಮೊದಲಾದವರು ಇವಳನ್ನು ತುಂಬ ಅಕ್ಕರೆಯಿಂದ ಕೊಂಡಾಡಿರುವರು. ಅಲ್ಲಮಪ್ರಭುಗಳು ಬಸವಣ್ಣನವರನ್ನು ಕುರಿತು "ಸತಿಯ ಕಂಡು ಬ್ರತಿಯಾದ ಬಸವಣ್ಣ, ಬ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ, ಬ್ರಹ್ಮಚಾರಿಯಾಗಿ ಭವಗೆಟ್ಟನಯ್ಯ ಬಸವಣ್ಣ, ಗುಹೇಶ್ವರ ನಿಮ್ಮಲ್ಲಿ ಬ್ರಹ್ಮಚಾರಿಯಾದವ ಬಸವಣ್ಣನೊಬ್ಬನೇ" ಎಂಬ ವಚನದಲ್ಲಿ

ಬಸವಣ್ಣನವರು ಭೋಗ, ಯೋಗಗಳೆರಡನ್ನೂ ಸಮನ್ವಯಗೊಳಿಸಿ, ಆಧ್ಯಾತ್ಮಸಾಧನೆಗೆಯ್ಯುವಲ್ಲಿ ಯಶಸ್ವಿಯಾಗಿದ್ದಾರೆ ಎನ್ನುವುದನ್ನು ವಿವರಿಸಿರುವರು.

ಬಸವಣ್ಣನವರು ಸಂಸಾರದಲ್ಲಿದ್ದರೂ ಅವರ ಮನಸ್ಸು ಸದಾಕಾಲ ಕೂಡಲ ಸಂಗಮ ದೇವನನ್ನೇ ಧ್ಯಾನಿಸುತ್ತಿತ್ತು. ಅವರು ಆಡುವ ಮಾತಿನಲ್ಲಿ, ನೋಡುವ ನೋಟದಲ್ಲಿ, ಕೇಳುವ ಶಬ್ದಗಳಲ್ಲಿ ಶಿವನ ಮಹಿಮೆಯೇ ತುಂಬಿರುತ್ತಿತ್ತು. ಮಧುವಿನ ಸುತ್ತಲೂ ಸದಾಕಾಲ ದುಂಬಿ ಸುತ್ತುವ ಹಾಗೆ ಅವರ ಮನಸ್ಸು ಸದಾ ಶಿವನನ್ನೇ ಧ್ಯಾನಿಸುತ್ತಿತ್ತು.

ವಚನದಲ್ಲಿ ನಾಮಾಮೃತ ತುಂಬಿ
ನಯನದಲ್ಲಿ ಮೂರುತಿ ತುಂಬಿ
ಮನದಲ್ಲಿ ನಿಮ್ಮ ನೆನಹು ತುಂಬಿ
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ
ಕೂಡಲ ಸಂಗಮದೇವಾ ನಿಮ್ಮ ಚರಣ ಕಮಲದೊಳಗಾನು ತುಂಬಿ[೧೦]

ಎನ್ನುವಲ್ಲಿ ಅವರು ಸದಾ ಕೂಡಲ ಸಂಗಮನಾಥನನ್ನು ಧ್ಯಾನಿಸುತ್ತಿದ್ದರು ಎಂಬುದು ವ್ಯಕ್ತವಾಗಿದೆ. ಸಂಸಾರದಲ್ಲಿದ್ದು. ಆಧ್ಯಾತ್ಮದಲ್ಲಿ ಮಹೋನ್ನತಿಯನ್ನು ಸಾಧಿಸಿದ ಬಸವಣ್ಣನವರು 'ಸಂಸಾರ ಯೋಗಿ' ಯಾಗಿರುವರು. ಇವರ ಪತ್ನಿಯರೂ ಸಂಸಾರಿಗಳಾಗಿದ್ದು, ಆಧ್ಯಾತ್ಮಿಕ ಸಂಪನ್ನೆಯರಾಗಿರುವರು. ಪರಮ ವೈರಾಗ್ಯಮೂರ್ತಿ ಅಲ್ಲಮಪ್ರಭುಗಳು. ಇವರನ್ನು ಕುರಿತು, "ಪತಿಯ ಸೇವಿಸಿ ಲಿಂಗಧ್ಯಾನದಲ್ಲಿಪ್ಪುದು ಅತ್ಯಂತ ಘನ, ಬಸವನ ಸತಿ ಸತಿಯಳಲ್ಲ, ಬಸವನ ಸತಿ ಲೋಕದ ಹೆಣ್ಣಲ್ಲ, ಬಸವನ ಸತಿ ಗುಹೇಶ್ವರ ಲಿಂಗದ ಪ್ರಾಣಲಿಂಗ ಕೇಳಾ" ಎಂದಿರುವಲ್ಲಿ, "ಸಂಸಾರಯೋಗಿ" ಬಸವನ ಪತ್ನಿಯರೂ "ಸಂಸಾರಯೋಗಿಣಿ"ಯರಾಗಿರುವುದು ವ್ಯಕ್ತವಾಗಿದೆ. ಬಸವಣ್ಣನವರ ಪತ್ನಿಯಾದ ಕಾರಣ ತಾನು ಶರಣರ ಮುಕ್ತಿಮಾರ್ಗದಲ್ಲಿ ನಡೆದು ಹೆಣ್ಣಾಗಿ ಹುಟ್ಟಿದ್ದರೂ ಪತಿಯ ಮಾರ್ಗದರ್ಶನದಲ್ಲಿ ನಡೆದು, ಮುಕ್ತಿಯನ್ನು ಪಡೆಯಲು ಸಾಧ್ಯವಾಯಿತೆಂದು ನೀಲಾಂಬಿಕೆ ತಿಳಿಯಪಡಿಸಿರುವಳು.

ಎನ್ನ ನಾಮ ಹೆಣ್ಣು ನಾಮವಲ್ಲವಯ್ಯಾ
ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ
ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ
ಎನಗೆ ಹೆಣ್ಣು ನಾಮವಿಲ್ಲಯ್ಯಾ[೧೧]

ಎಂದು ವಿವರಿಸಿರುವ ವಚನದಲ್ಲಿ ನೀಲಾಂಬಿಕೆ ಬಸವಣ್ಣನಂತಹ ಶ್ರೇಷ್ಠ ಗುಣವಂತನ ಪತ್ನಿಯಾದುದರಿಂದಲೇ ತಾನು ಆಧ್ಯಾತ್ಮಿಕತೆಯಲ್ಲಿ ಸಾಧನೆ ಮಾಡಲು ಸಾಧ್ಯವಾಯಿತೆಂದು ಸ್ಪಷ್ಟವಾಗಿ ಹೇಳಿರುವಳು. "ಎನಗೆ ಬಸವಣ್ಣನೆ ಗುರುವಾದನಯ್ಯಾ, ಬಸವನ ಅನುಭವದಿಂದ ವಿವರವ ಕಂಡು ವಿಚಾರ ಪತ್ನಿಯಾದೆನಯ್ಯಾ, ನಾನು ಬಸವಯ್ಯನ ಮನೆಯ ತೊತ್ತಿನ ಮಗಳು, ಪರಿಣಾಮ ಮೂರ್ತಿ ಬಸವರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇತಕಯ್ಯಾ ಬಸವಾ, ಭಕ್ತಿಸ್ಥಲ ಶುಭಸೂಚನೆಯಾಯಿತ್ತು ಬಸವನಲ್ಲಿ ಎನಗೆ, ಅನು ಸುಖಸಂಯೋಗಿಯಾದೆ ನಿಮ್ಮಲ್ಲಿ ಬಸವಾ, ಎನಗೆ ಹೆಸರಳಿಯಿತ್ತು ಕುರುಹಳಿಯಿತ್ತು ಬಸವಾ, ಸಂಗಯ್ಯ ನಿನ್ನೊಳಡಗಿ ನೀನೆನ್ನೊಳಗಲು, ನೀನೆನ್ನಲ್ಲಿ ಅಡಗಿ, ನಾನಿನ್ನಲ್ಲಿ ಅಡಗಿ, ನಾನಿನ್ನ ಮನದ ಅರಿವನರಿದು ಉಭಯವಿಲ್ಲವೆಂದೆನೆಂದೆ ಬಸವಾ, ಸುಖದ ಸಮಯಾಚಾರವ ಕಂಡು ನಿಜದಲ್ಲಿ ನಿಂದವಳಾನುನಾನಯ್ಯ ಬಸವಾ, ಮನ ವಿಶ್ರಾಂತಿಯನೆಯ್ದಿ

ವಿಚಾರದನುಭವನರಿದು, ವಿವೇಕದಿಂದಾನು ವಿಶೇಷ ಸುಖವ ಕಂಡೆನಯ್ಯಾ, ಸಂಗಯ್ಯಾ ಬಸವನಿಂದಲೇ" ಎಂಬ ನೀಲಾಂಬಿಕೆಯ ನುಡಿಗಳಲ್ಲಿ, ಆಕೆಗೆ ಪತಿಯಲ್ಲಿದ್ದ ಪ್ರೇಮ, ಗೌರವ, ವಿಶ್ವಾಸ, ವ್ಯಕ್ತವಾಗಿರುವುದಲ್ಲದೆ, ಆಕೆಗೆ ಪತಿಯೇ ಸರ್ವಸ್ವವಾಗಿರುವುದು, ಪತಿಯಲ್ಲಿಯೇ ಲಿಂಗವನ್ನು ಕಂಡಿರುವುದು, ಪತಿಯ ಸಹಾಯದಿಂದಲೇ ತಾನು ವಿಚಾರಪತ್ನಿಯಾದುದನ್ನು ತಿಳಿಯಪಡಿಸಿರುವಳು.

ಮಡದಿ ಎನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನ ಎನಗೆ
ಉಭಯದ ಕುಳವ ಹರಿದು ಬಸವಂಗೆ ಶಿಶುವಾದೆನು
ಬಸವನೆನ್ನ ಶಿಶುವಾದನು[೧೨]

ಎಂಬ ನೀಲಾಂಬಿಕೆಯ ವಚನವು ಅವರ ಅನ್ಯೋನ್ಯ, ಮಧುರ, ಆದರ್ಶ ದಾಂಪತ್ಯಕ್ಕೆ ನಿದರ್ಶನ. ನೀಲಾಂಬಿಕೆಗೆ ಬಸವಣ್ಣನವರು ಪತಿಯ ಸ್ಥಾನದಲ್ಲಿದ್ದು ಸತಿಗೆ ಸರ್ವ ಸ್ವಾತಂತ್ರ್ಯ ನೀಡಿ ವಿಚಾರ ಪತ್ನಿಯಾಗುವಂತೆ ಸಹಕರಿಸಿರುವನು. ಗುರುವಿನ ಸ್ಥಾನದಲ್ಲಿದ್ದು ಆಧ್ಯಾತ್ಮಿಕವಾಗಿ ಮಾರ್ಗದರ್ಶನ ನೀಡಿರುವರು, ತಂದೆ ತಾಯಿಯ ಸ್ಥಾನದಲ್ಲಿದ್ದು ಆತ್ಮೀಯತೆಯಿಂದ ತಪ್ಪಿ ನಡೆಯದಂತೆ ಎಡವಿ ಬೀಳದಂತೆ ಎಚ್ಚರಿಕೆಯಿಂದ ಶಿಶುವನ್ನು ನೋಡಿಕೊಂಡಂತೆ ನೋಡಿಕೊಂಡಿರುವನು. ಹಾಗೆಯೇ ಪತ್ನಿಯೂ ತಂದೆ ತಾಯಿಯ ಸ್ಥಾನದಲ್ಲಿದ್ದು, ಪತಿಯನ್ನು ಶಿಶುವಿನೋಪಾದಿಯಲ್ಲಿ ಆತನ ಬೇಕು ಬೇಡಗಳನ್ನು ಪೂರೈಸಿರುವಳು. ಪತಿ ಬಸವಣ್ಣನವರಲ್ಲಿ (ಲಿಂಗ) ಭಗವಂತನನ್ನೇ ಕಂಡುಕೊಂಡು ಅಪೂರ್ವ ಪತ್ನಿಯಾಗಿ ಇಲ್ಲಿ ಕಂಡು ಬಂದಿರುವಳು. ಗಂಗಾಂಬಿಕೆಯಾದರೋ ಸರ್ವಶ್ರೇಷ್ಠಳಾದ ವ್ಯಕ್ತಿ. ತನ್ನ ಪತಿಯಾದುದರಿಂದ ಪತಿಯಾಜ್ಞೆಯಲ್ಲಿ ನಡೆವ ಸತಿಗೆ ಬೇರೆ ಪ್ರತಿಜ್ಞೆಯ ಅವಶ್ಯಕತೆ ಇಲ್ಲ ಎಂದಿರುವಳು.

ಪತಿಯಾಜ್ಞೆಯಲ್ಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯು
ಪ್ರತಿಜ್ಞೆಯು ಪತಿಕರದಲ್ಲಿ ಪೋಪದಿರೆಯಾತನೆಯಲ್ಲವೆ?
ಇವಳ ಲಿಂಗನಿಷ್ಠೆ ಇವಳಿಗೆ
ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ
ಗಂಗಾ ಪ್ರಿಯ ಕೂಡಲ ಸಂಗಮದೇವಾ[೧೩]

ಎನ್ನುವ ಗಂಗಾಂಬಿಕೆಯ ವಚನದಲ್ಲಿ ಬಸವನ ಸತಿಯಾದ ತನಗೆ, ಆತನ ಆಜ್ಞೆಯಂತೆ ನಡೆಯುವುದೇ ತನಗೆ ಮುಖ್ಯವೆಂದು, ಸತಿ ನೀಲಾಂಬಿಕೆಗೆ ಲಿಂಗ ನಿಷ್ಠೆ ಎಂದಿರುವಳು. ನೀಲಾಂಬಿಕೆ "ಪರಿಣಾಮಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ" ಎನ್ನುವಲ್ಲಿ ಅಂಗೈಯಲ್ಲಿಯ ಲಿಂಗದಲ್ಲಿಯೇ ತನ್ನ ಪತಿಯ ದೈವತ್ವರೂಪವನ್ನು ಕಂಡು, ಲಿಂಗನಿಷ್ಠೆಯಲ್ಲಿ ಸಾಧನೆ ಮಾಡಿ ಲಿಂಗಪ್ರಾಣಿಯಾಗಿರುವಳು.

ಬಸವಣ್ಣನವರು ಹಮ್ಮಿಕೊಂಡ ಕಾರ್ಯಬಾಹುಲ್ಯವನ್ನು, ಶ್ರೇಷ್ಠ ವ್ಯಕ್ತಿತ್ವವನ್ನು ನೀಲಾಂಬಿಕೆ ಒಂದು ವಚನದಲ್ಲಿ ಅರ್ಥವತ್ತಾಗಿ, ಸಂಗ್ರಹವಾಗಿ, ಸರಳವಾಗಿ ನಿರೂಪಿಸಿರುವಳು. "ಜಗದಾದಿ ಸೃಷ್ಟಿಯನನುಮಾಡುವುದಕ್ಕೆ ಕರ್ತನಾದ ನಮ್ಮ ಬಸವಯ್ಯನು, ಕೈಲಾಸವನೆ ಕಲ್ಯಾಣವ ಮಾಡಿದಾತ ನಮ್ಮ ಬಸವಯ್ಯನು, ಆ ಕೈಲಾಸವೇ ಕಲ್ಯಾಣವಾಗಲಾ ಕಲ್ಯಾಣಕ್ಕೆ, ಪ್ರಮಥಗಣಂಗಳ, ರುದ್ರಗಣಂಗಳ, ಅಮರಗಣಂಗಳ, ಪುರಾತನಗಣಂಗಳ, ಪುಣ್ಯಗಣಂಗಳ,

ಮಹಾಗಣಂಗಳ, ಮುಖ್ಯಗಣಂಗಳ, ಮಹಾಲಿಂಗೈಕ್ಯಸಂಪನ್ನರಂ, ಭಕ್ತಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂಬ, ಆಚಾರಾದಿ ಮಹಾಲಿಂಗಸಂಪನ್ನರಂ, ಷಟ್‌ಸ್ಥಲಪ್ರಸಾದ ಪ್ರಸನ್ನರೂಪ, ಆದಿಮುಕ್ತರಂ, ಅನಾದಿಮುಕ್ತರಂ, ಅಜಾತರಂ, ಅಪ್ರಯಾಣರಂ, ಅನಿಮಿಷಲಿಂಗಾಂಗನಿರೀಕ್ಷಣರಂ, ತ್ರಿವಿಧವಿದೂರರಂ, ತ್ರಿವಿಧಲಿಂಗಾಂಗಮೂರ್ತಿಗಳ, ಅರ್ಪಿತಸಂಯೋಲಿಗರಂ, ಅಗಮವದು ಅನಾದಿಪರಶಿವಮೂರ್ತಿಗಳಂ, ಏಕಲಿಂಗನಿಷ್ಠಾಪರರುಮಪ್ಪ, ಮಹಾಪ್ರಮಥಗಣಂಗಳಂ, ತಂದು ನೆರಹಿದಾತ ನಮ್ಮ ಬಸವಯ್ಯನು, ಮರ್ತ್ಯಲೋಕವನೆ ಮಹಾಪ್ರಮಥರ ಬಿಡಾರವ, ಮಾಡಿದಾತ ನಮ್ಮ ಬಸವಯ್ಯನು, ಆದಿಯಸೃಷ್ಟಿಯನನಾದಿಯಸೃಷ್ಟಿಗೆ ತಂದು, ಅಜಾತನಬೀಡನಂಗದಲ್ಲಿ ನೆರಹಿದಾತ ನಮ್ಮ ಬಸವಯ್ಯನು, ಭಾವವಿಲ್ಲದ ಭ್ರಮೆಯ ಭ್ರಮೆಗೊಳಿಸಿ, ಭಾವಕ್ಕೆ ತಂದಾತ ನಮ್ಮ ಬಸವಯ್ಯ, ಬಯಲನೊಂದು ರೂಪಮಾಡಿ ಬಣ್ಣಕ್ಕೆ ತಂದು, ಆ ಬಣ್ಣವ ನಿಜದಲ್ಲಿ ನಿಲಿಸಿದಾತ ನಮ್ಮ ಬಸವಯ್ಯನು, ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ, ಇಚ್ಛೆಯನರಿದು ಅರ್ಪಿತವ ಮಾಡಿದಾತ ನಮ್ಮ ಬಸವಯ್ಯನು, ಅಂಗಸಂಗಿಗಳನಂತರಿಗೆ, ಅಂಗನೆಯರ ಅನುಭವದ ನಡಸಿದಾತ ನಮ್ಮ ಬಸವಯ್ಯನು, ಮೂವತ್ತಾರುಸಾವಿರ ಮಹೇಶ್ವರರಿಗೆ ಮುಖಮೂರ್ತಿಯಾಗಿ, ಅರ್ಪಿತಪ್ರಸಾದವನನುಭವಿಸಿದಾತ ನಮ್ಮಬಸವಯ್ಯನು, ಹನ್ನೆರಡುಸಾವಿರ ರಾಣಿಯರ, ಅಂಗವನರ್ಪಿತಪ್ರಸಾದಿಗಳ ಮಾಡಿದಾತ ನಮ್ಮ ಬಸವಯ್ಯನು, ಎಂಬತ್ತೆಂಟುಪವಾಡಮಂ ಗೆದ್ದು, ಮುನ್ನೂರರುವತ್ತು ಸತ್ತ ಪ್ರಾಣವನೆತ್ತಿ ಮೆರೆದು, ಪರಸಮಯವನಳಿದಾತ ನಮ್ಮ ಬಸವಯ್ಯನು, ಇಪ್ಪತ್ತೈದುಸಾವಿರ ಚಾರ್ವಾಕರಂ ನೆಗ್ಗಿಲೊತ್ತಿ, ಅಪ್ರತಿಮ ಶಿವಜಗಣಂಗಳ ಮಹಾತ್ಮೆಯಂ, ಮೆರೆದಾತ ನಮ್ಮ ಬಸವಯ್ಯನು, ಪ್ರಣವದ ಬೀಜವ ಬಿತ್ತಿ, ಪಂಚಾಕ್ಷರಿಯ ಬೆಳೆಯ ಬೆಳೆದು, ಪರಮಪ್ರಸಾದವನೊಂದು ರೂಪಮಾಡಿ ಮೆರೆದು, ಭಕ್ತಿಫಲವನುಂಡಾತ ನಮ್ಮ ಬಸವಯ್ಯನು, ಚೆನ್ನಬಸವನೆಂಬ ಪ್ರಸಾದಿಯ ಪಡೆದು, ಅನುಭವಮಂಟಪವನನುಮಾಡಿ, ಅನುಭವಮೂರ್ತಿಯಾದ ನಮ್ಮ ಬಸವಯ್ಯನು, ಅರಿವ ಸಂಪಾದಿಸಿ ಆಚಾರವನಂಗಂಗೊಳಿಸಿ, ಏಳುನೂರೆಪ್ಪತ್ತು ಅಮರಗಣಂಗಳ, ಅನುಭವಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು, ಆ ಅನುಭವದಲ್ಲಿ ಐಕ್ಯಪ್ರಸಾದವನಂಗಂಗೊಂಡು, ಮಂತ್ರ ನಿರ್ಮಂತ್ರವಾದಾತ ನಮ್ಮ ಬಸವಯ್ಯನು, ಭಕ್ತಿ ಸ್ಥಲವನಳಿದು ಭಾವವಡಗಿ ಬಟ್ಟಬಯಲಕೂಡಿ, ಸಂಗಯ್ಯನಲ್ಲಿ ಸ್ವಯಲಿಂಗಿಯಾದ ನಮ್ಮ ಬಸವಯ್ಯನು[೧೪]" ಬಸವಣ್ಣನವರ ಮಹಾಮನೆಯಲ್ಲಿ ನಿತ್ಯ ನಡೆಯುತ್ತಿರಲಾದ ಸಹಸ್ರಾರು ಜನಕ್ಕೆ ನಡೆಯಬೇಕಾದ ಹಿರಿಯಕಾರ್ಯದಲ್ಲಿ ಬಸವನ ಮಡದಿಯರು ನಿಷ್ಠೆ, ಶ್ರದ್ಧೆ, ಭಕ್ತಿ, ಗೌರವ ಭಾವದಿಂದ ಆ ಕಾರ್ಯವನ್ನು ಯಶಸ್ವಿ ಯಾಗುವಂತೆ ಭಾಗವಹಿಸಿರುವರು. ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ವಿದ್ವತ್ ಗೋಷ್ಠಿಯಲ್ಲಿ, ಅನುಭವ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ಅನೇಕ ಜನಪದ ಕವಿಗಳು, ಗಣದಾಸಿ ವೀರಣ್ಣ, ಕಿನ್ನರಿ ಬ್ರಹ್ಮಯ್ಯ, ಸಿದ್ಧರಾಮ ಮೊದಲಾದ ಶರಣರು, ಅನೇಕ ಕವಿಗಳು ತಮ್ಮ ಕಾವ್ಯಗಳಲ್ಲಿ ನೀಲಮ್ಮನ ವಿಚಾರಗಳನ್ನು ಕುರಿತು ವಿವರಿಸಿರುವರು. ಹರಹರನ ಬಸವರಾಜ ದೇವರರಗಳೆ, ಭೀಮಕವಿಯ ಬಸವಪುರಾಣ, ಸಿಂಗಿರಾಜಪುರಾಣ, ಷಡಕ್ಷರಿಯ ಬಸವರಾಜ ವಿಜಯಂ, ಸಿದ್ಧನಂಜೇಶ ವಿರಚಿತ ಗುರುರಾಜ ಚಾರಿತ್ರ, ಚನ್ನಪ್ಪ ಕವಿಯ ಶರಣ ಲೀಲಾಮೃತ, ಉತ್ತರದೇಶದ ಬಸವಲಿಂಗ ವಿರಚಿತ ಬಸವೇಶ್ವರ ಪುರಾಣ ಕಥಾ ಸಾಗರ

ಮೊದಲಾದವುಗಳಲ್ಲಿ ಗಂಗಾಂಬಿಕೆಯ ವಿಚಾರಗಳಿವೆ. ಮುಖಬೋಳು ಸಿದ್ಧರಾಮನ (೧೫೯೨) ಷಡ್‌ಸ್ಥಲ ತಿಲಕದಲ್ಲಿ, ನೀಲಾಂಬಿಕೆ, ಗಂಗಾಂಬಿಕೆಯನ್ನು ಸ್ತುತಿಸಿದ ರೀತಿ, ಅವರ ಅನುಕೂಲದಾಂಪತ್ಯದ ಬಗ್ಗೆ ವಿವರಣೆ ಇದೆ.

ಧರ್ಮಮೇ ಬಸವ, ಧರ್ಮಾನುಕೂಲತೆಯರೇ
ಎಮ್ಮ ನೀಲಮ್ಮ ಗಂಗಮ್ಮ, ನಿತ್ಯಮೆ ಬಸವ
ಯೆಮ್ಮ ನೀಲಮ್ಮ ಗಂಗಮ್ಮನೇ ನಿತ್ಯಾನು ಪಾಲತೆಯರಾ ಬಸವನೆ
ನಿರ್ಮಲ ಸುತತ್ತ್ವ, ನೀಲಮ್ಮ ಗಂಗಮ್ಮನೇ
ತನ್ರಹಾ ತತ್ತ್ವಾದಿ ದೇವತೆಯರಾಗಿಂತು
ಸನ್ಮತದಿ ದಾಸೋಹವೆಂಬ ಸಾಮ್ರಾಜ್ಯ ಸಂಪತ್ತನಾಳುತ್ತಿದ್ದರು[೧೫]

ಎಂಬ ವರ್ಣನೆಯಲ್ಲಿ ಬಸವಣ್ಣನವರು ನಡೆಸುತ್ತಿದ್ದ ದಾಸೋಹ ಮಹಾಕಾರ್ಯದಲ್ಲಿ ನೀಲ, ಗಂಗಾ ಪತ್ನಿಯರು ತುಂಬ ನಿಷ್ಠೆಯಿಂದ ನಿರ್ವಹಿಸುತ್ತಿದ್ದರು ಎನ್ನುವುದನ್ನು ಕವಿ ತುಂಬಿ ಅರ್ಥವತ್ತಾಗಿ ವಿವರಿಸಿರುವನು. ಮಾನವರಾಗಿ ಹುಟ್ಟಿ ಹಂತ ಹಂತವಾಗಿ ಕಷ್ಟಗಳನ್ನು ಎದುರಿಸುತ್ತಾ ಭಕ್ತಿ ಮಾರ್ಗದಲ್ಲಿ ನಡೆದು, ಉನ್ನತ ಗುರಿಯನ್ನು ಸಾಧಿಸಿರುವರು, ಬಸವೇಶ್ವರನು–

ಸುಖ ಬಂದಡೆ ಪುಣ್ಯದ ಫಲವೆನ್ನೆನು
ದುಃಖ ಬಂದಡೆ ಪಾಪದ ಫಲವೆನ್ನೆನು
ನೀ ಮಾಡಿದೊಡೆಯಿತ್ತೆಂದೆನ್ನೆನು
ಕರ್ಮಕ್ಕೆ ಕರ್ತುವೇ ಕಡೆಯೆಂದೆನ್ನೆನು
ಉದಾಸೀನವಿಡಿದು ಶರಣೆನ್ನೆನು
ಕೂಡಲ ಸಂಗಮದೇವಾ ನೀ ಮಾಡಿದುಪದೇಶವು ಎನಗೀಪರಿಯಲಿ
ಸಂಸಾರವ ಸವೆಯೆ ಬಳಸುವೆನು[೧೬]

ಎಂದಿರುವಲ್ಲಿ, ಸಂಸಾರದಲ್ಲಿ ನಡೆಯುವ ಎಲ್ಲ ಕ್ರಿಯೆಗಳು ಭಗವಂತನ ಅನುಗ್ರಹವೆಂದು ಸ್ವೀಕರಿಸುವ ಹೃದಯವಂತಿಕೆ ಅವರದಾಗಿದೆ. ಸಂಸಾರದಲ್ಲಿಯ ಕಷ್ಟಗಳಿಗೆ ಹೆದರುವ ಸ್ವಭಾವವೂ ಅವರದಲ್ಲ.

ನಾಳೆ ಬಪ್ಪುದು ನಮಗಿಂದೆ ಬರಲಿ
ಇಂದು ಬಪ್ಪುದು ನಮಗೀಗಲೇ ಬರಲಿ
ಇದಕಾರಂಜುವರು, ಇದಕಾರಳುಕುವರು?
'ಜಾತಸ್ಯ ಮರಣಂ ಧ್ರುವಂ' ಎಂಬುದಾಗಿ
ನಮ್ಮ ಕೂಡಲಸಂಗಮದೇವರು ಬರೆದ ಬರಹವ ತಪ್ಪಿಸುವಡೆ
ಹರಿಬ್ರಹ್ಮಾದಿಗಳಿಗಳವಲ್ಲ[೧೭]

ಎಂದು ನುಡಿದಿರುವ ಧೈರ್ಯಶಾಲಿ. ಜೀವನದಲ್ಲಿ ಕಷ್ಟಸುಖಗಳನ್ನು ಸಮದೃಷ್ಟಿಯಿಂದ ಅನುಭವಿಸುತ್ತಾ, ಜೀವನಕ್ಕಾಗಿ ಯಾರನ್ನೂ ಬೇಡದೆ ಎಲ್ಲವನ್ನೂ ಧೈರ್ಯವಾಗಿ ಎದುರಿಸುವ ಸ್ವಭಾವ ಅವರದು.

ಕಾಯದ ಕಳವಳಕ್ಕಂಜಿ 'ಕಾಯಯ್ಯಾ' ಎನ್ನೆನು
ಜೀವನೋಪಾಯಕ್ಕೆ 'ಈಯಯ್ಯಾ' ಎನ್ನೆನು
'ಯದ್ ಭಾವಂತದ್ ಭವತಿ' ಉರಿಬರಲಿ ಸಿರಿಬರಲಿ

ಬೇಕು ಬೇಡೆನ್ನೆನಯ್ಯಾ
ಆನು ನಿಮ್ಮ ಹಾರೆನು, ಮಾನವರ ಬೇಡೆನು
ಆಣೆ ನಿಮ್ಮಾಣೆ ಕೂಡಲ ಸಂಗಮದೇವಾ[೧೮]

ಎನ್ನುವ ವಚನದಲ್ಲಿ ಜೀವನವನ್ನು ಇದ್ದದ್ದು ಇದ್ದ ಹಾಗೇ ಅನುಭವಿಸುವ ಬೇಕೆನ್ನುವುದನ್ನು ವ್ಯಕ್ತಪಡಿಸಿರುವರು.

ಗಂಗಾಂಬಿಕೆಗೆ ಸಿದ್ಧರಸ ಎಂಬ ಹೆಸರಿನ ಮಗನಿದ್ದನೆಂದು, ನೀಲಾಂಬಿಕೆಗೆ ಬಾಲಸಂಗಯ್ಯ ಎಂಬ ಹೆಸರಿನ ಮಗನಿದ್ದನೆಂದು ತಿಳಿದುಬರುತ್ತದೆ. ಇವರಿಬ್ಬರೂ ಸಣ್ಣ ವಯಸ್ಸಿನಲ್ಲಿಯೇ ಮೃತರಾದರೆಂದು ಕಾವ್ಯಗಳು ಸೂಚಿಸುತ್ತವೆ. ಗಂಗಾಂಬಿಕೆ ತನ್ನದೊಂದು ವಚನದಲ್ಲಿ ಅವಳ ಕಂದ ಬಾಲಸಂಗ ಎಂದು ನುಡಿದುದನ್ನು ಇಲ್ಲಿ ಸ್ಮರಿಸಬೇಕು. ಬಸವಣ್ಣನವರ ವಚನ ಒಂದರಲ್ಲಿ "ಸಂಗಮದೇವಾ ನಿಮ್ಮ ಹೆಸರ ಚಿಕ್ಕಸಂಗಯ್ಯನಿದ್ದಾನೆ, ನೀನು ಜಂಗಮರೂಪವಾಗಿ ಬಂದು ಆತನ ಹಿಡಿದು, ಎನ್ನ ಮುಂದೆ ಹೆಡಗುಡಿಯ ಕಟ್ಟಿ ಚಿನಿಖಂಡವ ಮಾಡಿ, ಬಾಣಸವ ಮಾಡುವಲ್ಲಿ, ಎನ್ನ ಉದರದಲ್ಲಿ ಬಂದ ಪುತ್ರನೆಂದು ಮಾಯಕ್ಕೆ ನಾನು ಮರುಗಿದೆನಾದಡೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ ಮನದೊಡೆಯ ನೀನೆ ಬಲ್ಲೆ"[೧೯] ಎಂದು ಮಗನ ಹೆಸರು ಚಿಕ್ಕಸಂಗಯ್ಯ ಎಂಬುದನ್ನು ವ್ಯಕ್ತಪಡಿಸಿರುವನು.

ಭವಬಂಧನದಲ್ಲಿ ಸಿಲುಕಿ, ನೀಲಮ್ಮ ಪುತ್ರಶೋಕದಿಂದ ನರಳಿದ ಸಂದರ್ಭದಲ್ಲಿ, ಆಕೆಯ ಸೋದರಳಿಯ ಷಟ್‌ಸ್ಥಲ ಚಕ್ರವರ್ತಿ ಎಂದು ಪ್ರಸಿದ್ಧಿ ಪಡೆದ ಚೆನ್ನಬಸವಣ್ಣನವರು ಆಕೆಗೆ ಭವಬಂಧನ ಕಷ್ಟಗಳಿಂದ ಪಾರಾಗಲು ಶಿವಮಂತ್ರವನ್ನು ಬೋಧಿಸಿರುವರು.

ಅಡವಿಯಲ್ಲಿ ಕಣ್ಣುಗೆಟ್ಟ ಪಶುವಿನಂತೆ ನಾನು ಪ್ರಳಾಪಿಸುತ್ತಿದ್ದೆನಯ್ಯಾ
ಕಡು ದುಃಖದಿಂದ ಮರುಗಲು, ಶರಣ ಚನ್ನಣ್ಣನರಿದು
ಶಿವಶಿವಾ ಎಂಬ ಮಂತ್ರವನರುಹಿ
ಅಳಲುವ ಬಳಕೆಯ ಕಳೆದನಯ್ಯಾ
ಸಂಗಯ್ಯನಲ್ಲಿ ಚೆನ್ನಬಸವಣ್ಣಂಗೆ ನಮೋ ನಮೋ ಎನುತಿದ್ದೆನು[೨೦]

ಎಂಬ ವಚನದಲ್ಲಿ ನೀಲಮ್ಮನು, ಚೆನ್ನಬಸವಣ್ಣನವರಿಗೆ ತನ್ನ ನಮನಗಳನ್ನು ಸಲ್ಲಿಸಿರುವಳು. ನೀಲಮ್ಮನಿಗೆ ಕಡುದುಃಖದ ಸಂದರ್ಭದಲ್ಲಿ ಈ ರೀತಿ ಆಧ್ಯಾತ್ಮದ ಮಾರ್ಗದ ಕಡೆಗೆ ದಾರಿತೋರಿಸಿ, ಆ ಕುಟುಂಬದಲ್ಲಿ ಶಾಂತಿಗೆ ಭಂಗ ಬರದಂತೆ ನೋಡಿಕೊಂಡಿರುವುದು, ಧೈರ್ಯ ತುಂಬಿರುವುದು, ಅನುಸರಿಸಲು ಯೋಗ್ಯವಾದುದಾಗಿದೆ. ಗಂಗಾಂಬಿಕೆಯೂ ತನಗಾದ ಪುತ್ರಶೋಕದ ಸಂದರ್ಭದಲ್ಲಿ

ಒಂದು ಹಾಳ ಭೂಮಿಯ ಹುಲಿ ಬಂದು
ಎನ್ನ ಎಳಗರುವ ಭಕ್ಷಿಸಿತಲ್ಲಾ!
ಆ ಹುಲಿ ಹಾಳಿಗೆ ಹೋಗದು
ಆ ಹುಲಿ ಎಳೆಗರುವ ಕಂಡು ಜನನಿಯಾಯಿತು
ಇದನೇನೆಂಬೆ ಗಂಗಾಪ್ರಿಯ ಕೂಡಲಸಂಗಮದೇವಾ?[೨೧]

ಎಂದು ತುಂಬ ದುಃಖಪಟ್ಟಿರುವಳು. ತನ್ನ ಪತಿ ಬಸವೇಶ್ವರನು 'ಅವಳ ಕಂದ ಬಾಲಸಂಗ, ನಿನ್ನಕಂದ ಚನ್ನಲಿಂಗ ಎಂದು ಹೇಳಿದರಮ್ಮಾ ಎನ್ನ ಒಡೆಯರು' ಎಂದು ಸಮಾಧಾನ ಪಡಿಸಿದುದು ವ್ಯಕ್ತವಾಗಿದೆ. ಗಂಗಾಂಬಿಕೆಯು ತನ್ನ ಪತಿ ಬಸವಣ್ಣನವರು ಲೌಕಿಕವಾಗಿ

ಬಿಜ್ಜಳರಾಜನ ಅರಮನೆಯಲ್ಲಿ ಗುರುತರವಾದ ಜವಾಬ್ದಾರಿಯುತ ಕೆಲಸವನ್ನು ನಿರ್ವಹಿಸುತ್ತಾ, ಆಧ್ಯಾತ್ಮಿಕ ಮಾರ್ಗದಲ್ಲಿಯೂ ನಡೆದುದನ್ನು ತುಂಬ ಮೆಚ್ಚಿಕೊಂಡಿರುವಳು.

ಸಾಂದ್ರವಾಗಿ ಹಗರಣ ಭಕ್ತಿಯ ಮಾಳ್ಪನೆಂತೊ
ಮಾದಲಾಂಬಿಕಾ ನಂದನನು?
ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯ ನೋಳ್ಪನೆಂತೊ
ಮಾದರಸನ ಮೋಹದ ಮಗನು?
ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿಅನುಗೆಯ್ವನೆಂತೊ
ಗಂಗಾಪ್ರಿಯ ಕೂಡಲಸಂಗನ ಶರಣ ಚೆನ್ನ?[೨೨]

ಸಮಾಜ ಕಲ್ಯಾಣವನ್ನೇ ತನ್ನ ಬಾಳಿನ ಗುರಿಯಾಗಿಟ್ಟುಕೊಂಡ ಶರಣ ಬಸವಣ್ಣನವರು, ಪತಿಯ ಉತ್ತಮ ಮಾರ್ಗವನ್ನೇ ನಿಷ್ಠೆಯಿಂದ ಅನುಸರಿಸುವ ಪತ್ನಿಯರು ನೀಲಾಂಬಿಕೆ ಗಂಗಾಂಬಿಕೆಯರು, ಬಸವಣ್ಣನವರಿಗೆ ಹಾಗೂ, ಅವರ ಪತ್ನಿಯರಿಗೆ ಗುರು, ತಾಯಿ ಸ್ಥಾನದಲ್ಲಿ ನಿಂತ ನಾಗಾಲಾಂಬಿಕೆ, ಬಸವಣ್ಣನವರ ಅಳಿಯ ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು, ಇವರೆಲ್ಲರೂ ಶ್ರೇಷ್ಠ ಶರಣ ಶರಣೆಯರು, ವಿದ್ಯಾವಂತರು, ವಚನಕಾರರು, ಗುಣವಂತರು, ಅನುಪಮ ಭಕ್ತರು, ಇವರೆಲ್ಲರ ಗುರಿ, ಸಮಾಜಕಲ್ಯಾಣ. ಇಂತಹ ಆತ್ಮೀಯ ಜನರಿಂದ, ಶರಣ ಶರಣೆಯರಿಂದ ಕೂಡಿದ ಬಸವಣ್ಣನವರ ಮಹಾಮನೆಯಲ್ಲಿ ನಿತ್ಯ ದಾಸೋಹ ನಡೆಯುತ್ತಿತ್ತು. ಇವರ ಗೃಹ ಆದರ್ಶವಾಗಿತ್ತು. ಇವರ ದರ್ಶನಕ್ಕಾಗಿ ಭಾರತದ ಮೂಲೆ ಮೂಲೆಯಿಂದ ಭಕ್ತರು ಬರುತ್ತಿದ್ದರು. ಬಸವಣ್ಣನವರ ಗೃಹಕ್ಕೆ ಬಂದ ಸಿದ್ಧರಾಮೇಶ್ವರನು, ರೋಮಾಂಚನಗೊಂಡು, ಆ ಮಹಾಮನೆಯನ್ನು ಇಂತು ವರ್ಣಿಸಿರುವನು. "(ನಿಮ್ಮ) ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದರೆ, ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು. ಆ ಮನೆಗೆ ತಲೆವಾಗಿ ಹೊಕ್ಕವರೆಲ್ಲರೂ ನಿಜಲಿಂಗಪದಮಂ ಪಡೆದರು, ಆ ಗೃಹವ ನೋಡಬೇಕೆಂದು ನಾನು ಹಲವುಕಾಲ ತಪಿಸಿದ್ದೆನು" ಎನ್ನುವಲ್ಲಿ ಬಸವಣ್ಣನವರು ತನ್ನ ಕುಟುಂಬದವರೊಂದಿಗೆ ವಾಸಿಸುವ ಮನೆ, ಆಲಯದಂತಿತ್ತು ಎಂದು ಸೂಚ್ಯವಾಗಿ ಸಿದ್ಧರಾಮನು ವರ್ಣಿಸಿರುವನು.

ಒಮ್ಮೆ ಬಸವಣ್ಣನವರ ಮನೆಗೆ ಕಳ್ಳನೊಬ್ಬ ಬರುವನು. ನೀಲಾಂಬಿಕೆಯು ಧರಿಸಿದ್ದ ಆಭರಣಗಳನ್ನು ಕದಿಯಲು ಪ್ರಯತ್ನಿಸಿದಾಗ ಆಕೆ ಹೆದರಿ ಕೂಗಿಕೊಳ್ಳುತ್ತಾಳೆ. ಬಸವಣ್ಣನವರು ಎಚ್ಚತ್ತು ಪರಿಸ್ಥಿತಿಯನ್ನು ಕ್ಷಣದಲ್ಲಿ ಅರ್ಥಮಾಡಿಕೊಳ್ಳುವರು. ಕಳ್ಳನಿಗೆ ಕಳ್ಳತನ ಮಾಡಬೇಕೆಂಬ ಮನಸ್ಸಾಗಿ ತನ್ನ ಮನೆಗೆ ನುಗ್ಗಲು, ತನ್ನಲ್ಲಿರುವ ಸಂಪತ್ತೇಕಾರಣ ಎಂದು ಗ್ರಹಿಸಿದನೇ ಹೊರತು ಕಳ್ಳನನ್ನು ದೂಷಿಸಲಿಲ್ಲ. ಅದಕ್ಕೆ ಬದಲಾಗಿ, ತನ್ನ ಪತ್ನಿಯನ್ನೆ ತೆಗಳುವರು. ಆಕೆಯನ್ನು ಕುರಿತು– "ಒಡನಿರ್ದ ಸತಿಯೆಂದು ನೆಚ್ಚಿದೆನಯ್ಯಾ, ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ, ಅಯ್ಯೋ ಎಮ್ಮಯ್ಯನ ಕೈನೊಂದಿತು, ತೆಗೆದುಕೊಡಾ ಎಲೆ ಚಾಂಡಲಗಿತ್ತಿ, ಕಳ್ಳನ ಮನೆಗೊಬ್ಬ ಬಲುಗುಳ್ಳ ಬಂದೊಡೆ, ಕೂಡಲ ಸಂಗಮದೇವನಲ್ಲದೆ ಮತ್ತಾರೂ ಅಲ್ಲ[೨೩]". ಎಂದು ಹೇಳುವರು. ಪತಿಯ ಮಾತಿನಂತೆ, ನೀಲಾಂಬಿಕೆ ಕಳ್ಳನ ಕೈಗೆ ಆಭರಣ ಗಳನ್ನು ತೆಗೆದುಕೊಡುವಳು. ಕಳ್ಳತನದಿಂದ ದೋಚಿಕೊಂಡು ಹೋಗಲು ಬಂದಿದ್ದ ಕಳ್ಳನಿಗೆ ತಬ್ಬಿಬ್ಬಾಗಿರಬೇಕು. ಬಸವಣ್ಣನವರ ದರ್ಶನದಿಂದ, ಅವರ ಸ್ವಭಾವದಿಂದ, ಕಳ್ಳನ ಮನಸ್ಸು ಪರಿವರ್ತನೆಯಾಗಿ, ಆತನು ಶಿವಭಕ್ತನಾದನು ಎಂದು ಕಾವ್ಯಗಳಲ್ಲಿಯೂ ವಿವರಣೆ ಇದೆ.

ಲೌಕಿಕ ಜೀವನದಲ್ಲಿದ್ದು ಇವರು ಭಕ್ತರಾಗಿ, ಆಧ್ಯಾತ್ಮಿಕ ಮಾರ್ಗದಲ್ಲಿ ನಡೆದು ಷಟ್‌ಸ್ಥಲವನ್ನು ಸಾಧಿಸಿರುವರು. ಶಿವಭಕ್ತರೆಲ್ಲರೂ ಸಮಾನತೆ ಎಂದು ಬಸವಣ್ಣನವರು ಸಮಾಜದಲ್ಲಿ ಸರ್ವಸಮಾನತೆಯನ್ನು ತಂದರು. ಶಿವಭಕ್ತರಾದ ಹರಳಯ್ಯ ಮತ್ತು ಮಧುವಯ್ಯ ಭಕ್ತರ ಕುಟುಂಬದಲ್ಲಿ ಅಂತರ್ ಜಾತೀಯ ವಿವಾಹ ನಡೆದು, ಕಲ್ಯಾಣದಲ್ಲಿ ಕ್ರಾಂತಿ ಯಾಗುವುದು. ಭಕ್ತರ ಅಪಮಾನವಾಗುವುದು. ಇದರಿಂದ ಬಹುನೊಂದ ಬಸವಣ್ಣ ಕಪ್ಪಡಿ ಸಂಗಮಕ್ಕೆ ಹೊರಟು ಹೋಗುವನು. ಆ ಸಮಯದಲ್ಲಿ ಬಸವಣ್ಣನವರ ಜೊತೆ ಶರಣ ಹಡಪದಪ್ಪಣ್ಣ ಮಾತ್ರ ಇದ್ದನು. ಮುಂದೆ ಬಸವಣ್ಣನವರು ತಮ್ಮ ಮಡದಿಯರಾದ ನೀಲಾಂಬಿಕೆ ಮತ್ತು ಗಂಗಾಂಬಿಕೆ ಇವರನ್ನು ಕಪ್ಪಡಿ ಸಂಗಮನಾಥನಲ್ಲಿಗೆ ಬರಬೇಕೆಂದು ಅಪ್ಪಣ್ಣನ ಕೂಡ ಹೇಳಿ ಕಳುಹಿಸುವರು. ಆ ಸಂದರ್ಭದಲ್ಲಿ ನೀಲಾಂಬಿಕೆ ಹಾಡಿದ ಒಂದು ಪದ್ಯದಿಂದ ಅನೇಕ ವಿಷಯಗಳು ತಿಳಿದುಬರುತ್ತವೆ.

ನೋಡು ನೋಡು ನೋಡು ನೋಡು ನೋಡು ಲಿಂಗವೇ।
ನೋಡು ಬಸವಯ್ಯ ಮಾಡಿದಾಟವ ॥ಪಲ್ಲವಿ॥

ಹರಳಯ್ಯ ಮಧುವಯ್ಯನವರಿಗೆ ಎಳೆಹೂಟ
ಮರುಳ ಬಿಜ್ಜಳನು ಕೊಟ್ಟನಂತೆ
ಇರಬಾರದಲ್ಲೀಗ ಶರಣರಿಗರುಹೆಂದು
ಅರಸು ಬಸವರಾಜಪೇಳ್ದನಂತೆ ॥೧॥

ನುಡಿಯನಾಲಿಸು ಬೇಗ ಕೆಡೆವುದು ಕಲ್ಯಾಣ
ಒಡೆಯ ಸಂಗಮನೊಳು ಬೆರೆವನಂತೆ
ತಡ ಮಾಡಬೇಡಿರಿ, ಮಡದಿಯರಿಗರುಹೆಂದು
ಬಡೆಯ ಬಸವರಾಜ ನುಡಿದನಂತೆ ॥೨॥

ಅಲ್ಲಿಗೆಯೆಮ್ಮನ್ನು ಬರಹೇಳಿದನಂತೆ
ಅಲ್ಲಿರ್ವ ಸಂಗಯ್ಯ ಈತನಲ್ಲವೇ?
ಅಲ್ಲಲ್ಲಿ ಎಂತೆಂದೂ ಉಭಯ ಸಂದೇಹವೇಕೆ?
ಬಲ್ಲ ಮಹತ್ಮರಿಗೆ ಗುಣವೇ? ನೀನು ॥೩॥

ಅಪ್ಪಣ್ಣಯ್ಯಗಳೆನ್ನ ಕರೆಯಬಂದೋದರೆ
ಕಪ್ಪಡಿ ಸಂಗಮನಾಥ ಕೇಳೋ
ಪುಷ್ಪಕ್ಕೆ ಪರಿಮಳ ಬೆಳೆದಂತೆ ತಾಯ ಎನ್ನ
ಅಪ್ಪಿದ ಲಿಂಗ ಮಾತನಾಡೋ ॥೪॥

ಸಂಗನ ಬಸವಯ್ಯನೆಂತೆಂಬ ನಿರುತಕ್ಕೆ
ಹಿಂಗದೆ ಕರವೆತ್ತಿ ಪೊಗಳುತಿರೆ
ಸಂಗನ ಬಸವನು ಆತನೋ ಈತನೋ? ಎ
–ನ್ನಂಗಯ್ಯದ ಲಿಂದ ಮಾತನಾಡೋ–೨ ॥೫॥

ಎಂಬಲ್ಲಿ ಬಸವಣ್ಣನವರು ಮಡದಿಯರಿಬ್ಬರನ್ನೂ ಕಪ್ಪಡಿಗೆ ಬರಹೇಳಿದ್ದು ಸಂಗಯ್ಯನನ್ನು ನೀಲಾಂಬಿಕೆ ತಾನು ತನ್ನ ಇಷ್ಟಲಿಂಗದಲ್ಲಿಯೇ ಕಾಣುತ್ತಿರುವುದಾಗಿ ಆಕೆ ಹೇಳಿದುದು, ಮೊದಲಾದುವು ಕಂಡುಬರುತ್ತವೆ. 'ಅಲ್ಲಿರುವ ಸಂಗಯ್ಯ ಇಲ್ಲಿಲ್ಲವೇ?" ಎಂದು ಬಸವಣ್ಣನವರ ಕರೆಗೆ ನೀಲಮ್ಮ ಕೊಟ್ಟ ಉತ್ತರ ಆಕೆ ಆಧ್ಯಾತ್ಮಿಕತೆಯಲ್ಲಿ ಸಂಪಾದಿಸಿದ ಉನ್ನತಿ ಸ್ಪಷ್ಟವಿದೆ. ಭಗವಂತ ಸರ್ವಾಂತರ್ಯಾಮಿಯಾಗಿರುವಾಗ, ಕೂಡಲ ಸಂಗಮಕ್ಕೆ, ಸಂಗಯ್ಯನನ್ನು ಕಾಣಲು ಹೋಗಬೇಕೆ. ಎನ್ನುವುದು ಆಕೆಯ ಪ್ರಶ್ನೆಯಾಗಿದೆ.

ಶಿವತತ್ವವ ಕಾಣದ ಮುನ್ನ
ಅನುಭವ ತತ್ವವ ಕಾಣಲಾಯಿತ್ತಯ್ಯಾ ಬಸವಾ
ಆನು ಅನುಭವಶೀಲವನರಿದು
ಮುಕ್ತ್ಯಂಗನೆಯಾದೆನಯ್ಯಾ ಬಸವಾ
ಮುಕ್ತ್ಯಂಗನೆಯಾಗಿ ನಿಜದಲ್ಲಿ ನಿಲಲು
ಬಸವನ ಕುರುಹು ಕಾಣಬಂದಿತ್ತು
ಆ ಬಸವನ ಕುರುಹ ತಿಳಿದು
ಇಷ್ಟಮೂರ್ತಿಯ ನಿಷ್ಠೆಯನರಿವೆನಯ್ಯಾ ಸಂಗಯ್ಯ[೨೫]

ಎಂದಿರುವಲ್ಲಿ ನೀಲಮ್ಮ ಶ್ರೇಷ್ಠ ಅನುಭಾವಿಯಾಗಿ, ಮುಕ್ತ್ಯಾಂಗನೆಯಯಾಗಿ ಭಕ್ತಿಮಾರ್ಗದಲ್ಲಿ ಉನ್ನತ ಸ್ಥಿತಿ ಹೊಂದಿರುವುದು ವ್ಯಕ್ತವಾಗಿದೆ. ಬಸವಣ್ಣನವರ ಕರೆಗೆ, 'ಅಲ್ಲಿರುವ ಸಂಗಯ್ಯ ಇಲ್ಲಿಲ್ಲವೆ?' ಎಂದು ನುಡಿದರೂ, ನೀಲಮ್ಮನು ಅಪ್ಪಣ್ಣನವರೊಂದಿಗೆ ಸಂಗಮದ ಕಡೆಗೆ ಹೊರಡುವಳು. ತಂಗಡಗಿ ಗ್ರಾಮಕ್ಕೆ ಬಂದಾಗ, ಬಸವಣ್ಣನವರು ಶಿವೈಕ್ಯರಾದ ವಿಷಯ ತಿಳಿದು ಬರುವುದು. ಈ ಸಮಾಚಾರವನ್ನು ಕೇಳಿದ ಕೂಡಲೇ, ಲಿಂಗಪ್ರಾಣಿಯಾದ ನೀಲಾಂಬಿಕೆಯು ತನ್ನ ಲಿಂಗದಲ್ಲಿಯೇ ಬಯಲಾದಳು. ಈ ಗ್ರಾಮವು ಸಂಗಮದಿಂದ ಎರಡು ಮೈಲುಗಳ ದೂರದಲ್ಲಿ ಇದೆ. ಇಂದಿಗೂ ಆ ಸ್ಥಳದಲ್ಲಿ ನೀಲಾಂಬಿಕೆಯ ಸಮಾಧಿ ಇದೆ. ನಿತ್ಯ ಪೂಜೆಗಳು ನಡೆಯುತ್ತವೆ. ಬಸವೇಶ್ವರರ ಜಾತ್ರೆಯಲ್ಲಿ ಇಂದಿಗೂ, ಮೊದಲು ಬಸವಣ್ಣನವರ ಪಲ್ಲಕ್ಕಿಯನ್ನು ತಂಗಡಿಗಿಗೆ ತೆಗೆದುಕೊಂಡು ಬರುತ್ತಾರೆ. ಇದು ಶರಣ ದಂಪತಿಗಳಾದ ಇವರ ಆದರ್ಶ ದಾಂಪತ್ಯದ ಗುರುತಾಗಿದೆ.

ಬಸವೇಶ್ವರನು ಮಾಡಬಯಸಿದ ಸಮಾಜಕಲ್ಯಾಣದ ಆಶಯವನ್ನು ಒಳಗೊಂಡ ಅಮೂಲ್ಯ ವಚನ ಸಾಹಿತ್ಯ, ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಹಾಳಾಗಬಾರದೆಂದು, ಗಂಗಾಂಬಿಕೆ ಅವುಗಳನ್ನು ರಕ್ಷಣೆ ಮಾಡುವ ಹಿರಿಯ ಜವಾಬ್ದಾರಿಯನ್ನು ಹೊತ್ತು, ಚನ್ನಬಸವಣ್ಣ, ಅಕ್ಕನಾಗಮ್ಮ, ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ, ಮೊದಲಾದವರೊಡನೆ ಉಳವಿಯತ್ತ ನಡೆಯುವಳು. ವಿಶ್ವ ಸಾಹಿತ್ಯದ ಕೊಡುಗೆಯಾದ ವಚನಸಾಹಿತ್ಯದ ರಕ್ಷಣೆ ಮಾಡುವ ಕಾರ್ಯದಲ್ಲಿ ಭಾಗವಹಿಸಿದ ವೀರವನಿತೆ. ವಚನ ಸಾಹಿತ್ಯದ ಸೌರಭವನ್ನು ಅನುಭವಿಸುತ್ತಿರುವ ಜನರೆಲ್ಲರೂ ಗಂಗಾಂಬಿಕೆಗೂ ಋಣಿಯಾಗಿರುವರು. ಇಂದಿಗೂ ಹುಬ್ಬಳ್ಳಿಯ ಹತ್ತಿರ ಮಲಪ್ರಭಾನದಿಯ ದಂಡೆಯಲ್ಲಿ ಆಕೆಯ ಸಮಾಧಿ ಇದೆ. ಪುಣ್ಯಕ್ಷೇತ್ರವಾಗಿ ಕಂಗೊಳಿಸುವ ಆ ಸ್ಥಳಕ್ಕೆ ಜನರು ದರ್ಶನ ಭಾಗ್ಯ ಪಡೆಯಲು ಹೋಗುತ್ತಿರುವರು. ಪತಿಯಾಜ್ಞೆಯಂತೆ ನಡೆಯುವ ಪತ್ನಿಯಾಗಿ ಗಂಗಾಂಬಿಕೆ,

ಪತಿಯಲ್ಲಿ ಸಾಕ್ಷಾತ್ ಸಂಗಮನಾಥನನ್ನೇ ಕಂಡ ನೀಲಾಂಬಿಕೆ, ಜನಪ್ರಿಯ, ಶ್ರೇಷ್ಠ ಶರಣೆಯರಾಗಿ ಇಂದಿಗೂ ಪೂಜಿಸಲ್ಪಡುತ್ತಿರುವರು.

ನೀಲಾಂಬಿಕೆ, ಗಂಗಾಂಬಿಕೆಯರು ಕವಿ ಹೃದಯವುಳ್ಳವರಾಗಿದ್ದು, ತಮ್ಮ ಅನುಭವಗಳನ್ನು ಅನಿಸಿಕೆಗಳನ್ನು ವಚನರೂಪದಲ್ಲಿ ಅಭಿವ್ಯಕ್ತಗೊಳಿಸಿರುವರು. ಶರಣ ಸಿದ್ಧರಾಮೇಶ್ವರನು ತನ್ನ ವಚನವೊಂದರಲ್ಲಿ, "ನೀಲಮ್ಮನ ವಚನ ಹನ್ನೊಂದು ಸಾವಿರ, ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾವಿರ, ಎಮ್ಮಕ್ಕ ನಾಗಾಯಿಯ ವಚನ ಮೂರು ಲಕ್ಷದ ತೊಂಭತ್ತಾರು ಸಾವಿರ."[೨೬] ಎಂದಿರುವಲ್ಲಿ ನೀಲಮ್ಮನು ೧೧,೦೦೦ ವಚನಗಳನ್ನು ಬರೆದಿದ್ದರೆ, ೨೮೮ ಮಾತ್ರ ಉಪಲಬ್ಧವಿವೆ. ಗಂಗಾಂಬಿಕೆಯು ಲಕ್ಷದ ಎಂಟುಸಾವಿರ ವಚನಗಳನ್ನು ಬರೆದಿದ್ದರೇ, ಬರೀ ಒಂಬತ್ತು ಮಾತ್ರ ಉಪಲಬ್ದವಿರುವುದು ದುರದೃಷ್ಟಕರ. ಇವರ ವಚನಗಳಲ್ಲಿ ಕಾವ್ಯಾಂಶಗಳು ಅಷ್ಟಾಗಿ ಇಲ್ಲ. ನೀಲಮ್ಮನ ವಚನಗಳಲ್ಲಿ, ಪತಿಯೇ ಆಕೆಗೆ ಸರ್ವಸ್ವನಾಗಿದ್ದನೆಂಬುದು ಅನೇಕ ವಚನಗಳಲ್ಲಿ ವ್ಯಕ್ತಪಡಿಸಿರುವಳಲ್ಲದೆ, ಆಕೆ ಪೂಜಿಸುವ ಲಿಂಗದಲ್ಲಿಯೂ ಪತಿಯನ್ನು ಕಂಡಿರುವಳು. ಪತಿ ಬಯಲಾದ ವಿಷಯ ಕೇಳಿದ ಕೂಡಲೇ ನೀಲಾಂಬಿಕೆಯೂ, "ಎಲೆ ಅಯ್ಯಾ ಬಸವಾ ಕರಸ್ಥಲ ಬಯಲಾಯಿತ್ತೆನಗೆ, ಕರಸ್ಥಲ ಮನಸ್ಥಲವಾಯಿತ್ತು. ಬಸವಾ, ಸಂಗಯ್ಯ ಬಸವ ಹೋದನತ್ತ, ನಾನಡಗಿದೆನಯ್ಯಾ ನಿಮ್ಮತ್ತಲಿ"[೨೭] ಎಂದು ಬಯಲಾದುದು ವ್ಯಕ್ತವಾಗಿದೆ. ನೀಲಮ್ಮನು ಬರೆದ ಏಳು ಸ್ವರವಚನಗಳು, ಒಂದು ಕಾಲಜ್ಞಾನ ಕೃತಿಯೂ ಉಪಲಬ್ಧವಿದೆ. ಕವಿ ಚರಿತೆಕಾರರು ಸೂಚಿಸಿರುವ, 'ಪ್ರಸಾದ ಸಂಪಾದನೆ' ಆಕೆಯದಾಗಿದೆ ಎಂದು ಅಬಿಪ್ರಾಯವಿದೆ. 'ಸಂಗಯ್ಯಾ' 'ಸಂಗನ ಬಸವ', 'ಸಂಗ' ಎಂಬ ಅಂಕಿತಗಳು ನೀಲಾಂಬಿಕೆಯ ವಚನಾಂಕಿತಗಳಾಗಿವೆ. ಗಂಗಾಂಬಿಕೆಯ ಉಪಲಬ್ದವಿರುವ ಒಂಬತ್ತು ವಚನಗಳಲ್ಲಿ ಅಕೆಯ ವೈಯಕ್ತಿಕ ವಿಚಾರಗಳು, ಬಸವಣ್ಣನವರ ಬಗೆಗೆ ಅವರ ತಂದೆಯ ಹೆಸರು ಮಾದರಸ, ತಾಯಿಯ ಹೆಸರು ಮಾದಲಾಂಬಿಕಾ ಎಂಬ ಚಾರಿತ್ರಿಕ ಸತ್ಯಾಂಶಗಳು, ಆಕೆಯ ಪತಿ ಬಸವಣ್ಣನವರ ಬಗೆಗಿನ ಗೌರವ ಆಕೆಗಿದ್ದ ಶರಣ ಸತ್ಸಂಗ ವಿಷಯ–ಇವುಗಳೆಲ್ಲಾ ಒಡಮೂಡಿವೆ. ಈಕೆಯ ವಚನಗಳ ಅಂಕಿತ "ಗಂಗಾಪ್ರಿಯ ಕೂಡಲ ಸಂಗಮದೇವಾ" ಎಂದು. ಗಂಗಾಂಬಿಕೆಯು ಶ್ರೇಷ್ಠ ಶರಣೆ, ಪತಿವ್ರತೆ, ವಚನಕಾರ್ತಿ, ಬಸವಣ್ಣನವರ ಪ್ರಿಯಪತ್ನಿ.

ಬಸವಣ್ಣನವರು ತಮ್ಮದೊಂದು ವಚನದಲ್ಲಿ 'ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೀತಂಗಳ ಹಾಡಿ ಹಾಡಿ[೨೮]" ಎಂದು ನುಡಿದಿದ್ದರೂ. ಅವರು ಬರೆದ ವಚನಗಳಲ್ಲಿ ೧೪೧೪ ವಚನಗಳು ಮಾತ್ರ ಉಪಲಬ್ದವಿದೆ. ಕೂಡಲ ಸಂಗಮದೇವಾ ಎನ್ನುವುದು ಇವರ ವಚನಗಳ ಅಂಕಿತವಾಗಿದೆ. ವಚನ ಸಾಹಿತ್ಯ ಎಂದ ಕೂಡಲೆ ಮೊಟ್ಟಮೊದಲ ಜನರೆಲ್ಲರಿಗೂ ಜ್ಞಾಪಕಕ್ಕೆ ಬರುವುದು ಬಸವಣ್ಣನವರ ಹೆಸರು. ಶ್ರೇಷ್ಠ ವಚನಕಾರರಾದ ಇವರ ವಚನಗಳಲ್ಲಿ ಭಕ್ತಿರಸ ತುಂಬಿ ತುಳುಕುತ್ತದೆ. ಷಟ್‌ಸ್ಥಲ ಪಂಚಾಚಾರ, ಅಷ್ಟಾವರಣ ಎಂಬ ವೀರಶೈವ ತತ್ತ್ವಗಳನ್ನು ಕುರಿತ ವಿಚಾರಗಳು. ಶರಣ ಸತಿ–ಲಿಂಗಪತಿ ಭಾವ, ಕಾಯಕ ಸಿದ್ಧಾಂತ–ಇವುಗಳ ಬಗ್ಗೆ ವಿವರಣೆ ಇದೆ. "ಒಂದು ಸಾಹಿತ್ಯ ಕೃತಿಯ ಅಧ್ಯಯನವೆಂಬುದು ಅಲ್ಲಿ ಹುದುಗಿರುವ ವ್ಯಕ್ತಿ ಶೋಧ, ಸಮಾಜಶೋಧ, ಲೋಕಸಂದೇಶ ಶೋಧ ಮತ್ತು ಸೌಂದರ್ಯಶೋಧವಾಗಿದೆ. ಈ

ನಾಲ್ಕೂ ನೆಲೆಗಳ ಅಧ್ಯಯನಕ್ಕೆ ವಸ್ತುವಾಗುವ ಶಕ್ತಿ ಬಸವಣ್ಣನವರ ವಚನಗಳಿಗಿವೆ."[೨೯] ಎಂಬ ಎಂ.ಎಂ. ಕಲಬುರ್ಗಿಯವರ ಮಾತಿನಲ್ಲಿ ಬಸವಣ್ಣನವರ ಹಿರಿಯ ವ್ಯಕ್ತಿತ್ವವೆಲ್ಲ ಅಡಗಿದೆ.

ಅಯ್ಯಾ ನಾನು ದಾಸೋಹವ ಮಾಡುವೆನಲ್ಲದೆ ಸಮಯವನರಿಯೆ
ಅಯ್ಯಾ ನಾನು ಭಕ್ತಿಯ ಮಾಡುವೆನಲ್ಲದೆ ಭಾವವನರಿಯೆ
ಸ್ಥಳ ಕುಳವ ವಿಚಾರಿಸಿದಡೆ ಎನ್ನಲ್ಲಿ ಏನೂ ಹುರುಳಿಲ್ಲ
ನಿಮ್ಮ ಶರಣರ ಸೋಂಕಿನಲ್ಲಿ ಶುದ್ಧನಾದೆನು[೩೦]

ಎಂದು ನುಡಿದಿರುವ ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ' ಎಂದು ವಿನಮ್ರವಾಗಿ ನುಡಿದಿರುವಲ್ಲಿ ಅವರ ಹಿರಿಯತನ ವ್ಯಕ್ತವಾಗಿದೆ.

ಶರಣ ದಾಂಪತ್ಯದಲ್ಲಿ, ಷಟ್‌ಸ್ಥಲ ಮಾರ್ಗದಲ್ಲಿ ನಡೆಯುತ್ತಾ, ಪತಿ–ಪತ್ನಿಯರಿಬ್ಬರೂ ಸತಿಯರಾಗಿ, ಲಿಂಗಪತಿಯಲ್ಲಿ ಐಕ್ಯರಾಗುವರು. ಬಸವಣ್ಣನವರ ವಚನಗಳಲ್ಲಿ ಶರಣಸತಿ ಲಿಂಗಪತಿ ಭಾವವುಳ್ಳ ವಚನಗಳು ಬಹು ಸುಂದರವಾಗಿವೆ.

ಸಂಸಾರವೆಂಬ ಶ್ವಾನನಟ್ಟಿ, ಮೀಸಲ ಬೀಸರವ ಮಾಡದಿರಯ್ಯಾ
ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ
ನೀವಲ್ಲದೆ ಮತ್ತೇನನೂ ಅರಿಯೆನು
ಕನ್ಯೆಯಲಿ ಕೈವಿಡಿದೆನು, ನಿಮ್ಮಲ್ಲಿ ನೆರೆದೆನು
ಮನ್ನಿಸು ಕಂಡಾ ಮಹಾಲಿಂಗವೇ
ಸತಿಯಾನು ಪತಿ ನೀನಯ್ಯಾ
ಮನೆಯಒಡೆಯ ಮನೆಯ ಕಾಯ್ದಿಪ್ಪಂತೆ
ನೀವೆನ್ನ ಮನವ ಕಾಯ್ದಿಪ್ಪಗಂಡನು
ನಿಮಗೋತ ಮನವವನನ್ಯಕ್ಕೆ ಹರಿಸಿದಡೆ
ನಿಮ್ಮ ಅಭಿಮಾನಹಾನಿ ಕೂಡಲಸಂಗಮದೇವಾ[೩೧]

ಎನ್ನುವಲ್ಲಿ ಸತಿಯಾದ ಬಸವಣ್ಣನವರು ಲಿಂಗಪತಿಯನ್ನು ಆರಾಧಿಸಿ, ಆತನಲ್ಲಿ ಸೇರಲು, ಚಿತ್ತದಲ್ಲಿ ಸದಾ ಆತನ ಧ್ಯಾನ ಮಾಡುತ್ತಿರುವುದು ವ್ಯಕ್ತವಾಗಿದೆ. ಮತ್ತೊಂದು ವಚನದಲ್ಲಿ ಬಸವಣ್ಣನವರು, ತನ್ನ ಲಿಂಗಪತಿಗೆ ಇಷ್ಟವಾಗುವ ಹಾಗೆ ಸಿಂಗರಿಸಿಕೊಂಡು, ಆತನ ಒಲಿವಿಗಾಗಿ ಹಂಬಲಿಸಿರುವ ರೀತಿ ಮನಸೆಳೆಯುತ್ತದೆ.

ಅರಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತೆ – ಆನಿದ್ದೆನಯ್ಯಾ
ವಿಭೂತಿಯನೆ ಪೂಸಿ ರುದ್ರಾಕ್ಷಿಯನೆ ಕಟ್ಟಿ
ಶಿವ, ನಿಮ್ಮೊಲವಿಲ್ಲದಂತೆ ಆಸಿದ್ದೆನಯ್ಯಾ!
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹಯ್ಯ ಕೂಡಲಸಂಗಮದೇವಾ[೩೨]
ಲಿಂಗಪತಿಯಲ್ಲಿ ಐಕ್ಯವಾದುದೂ ಒಂದು ವಚನದಲ್ಲಿ ವ್ಯಕ್ತವಾಗಿದೆ.
ಘನಗಂಭೀರ ಮಹಾಘನದೊಳಗೆ
ಘನಕ್ಕೆ ಘನವಾಗಿದ್ದೆನಯ್ಯಾ
ಕೂಡಲ ಸಂಗಮದೇವಯ್ಯನೆಂಬ
ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ ಶಬ್ದ

ಮುಗ್ಧವಾದುದನೇನೆಂಬೆನಯ್ಯಾ[೩೩]
ಎಂದೂ,
ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇವರನೋಡಾ!
ಬೆಳಗಿಗೆ ಬೆಳಗು ಸಿಂಹಾಸನವಾಗಿ
ಬೆಳಗು ಬೆಳಗು ಕೂಡಿದ ಕೂಟವ
ಕೂಡಲ ಸಂಗಯ್ಯ ತಾನೆ ಬಲ್ಲ[೩೪]

ಎನ್ನುವಲ್ಲಿ ಶರಣ ಬಸವಣ್ಣನವರು ಸಾಕ್ಷಾತ್ ಪರಶಿವನಲ್ಲಿ ಸೇರಿರುವುದು ವ್ಯಕ್ತವಾಗಿದೆ.

ಬಸವಣ್ಣನವರ ದೈವಿಕ ದಾಂಪತ್ಯ, ಜನರಲ್ಲಿ ಪೂಜ್ಯ ಭಾವನೆಯನ್ನು ಮೂಡಿಸಿದೆ. ಮಾನವರಾಗಿ ಹುಟ್ಟಿ ಲೌಕಿಕ ದಾಂಪತ್ಯ ಜೀವನವನ್ನು ನಡೆಸುತ್ತ, ಶರಣಸತಿ-ಲಿಂಗಪತಿ ಭಾವದಿಂದ ಭಗವಂತನಲ್ಲಿ ಐಕ್ಯರಾದ ಶ್ರೇಷ್ಠಶರಣ ದಂಪತಿಗಳಿವರು. ಇಂದಿಗೂ ಜನರಿಂದ ಪೂಜಿತರಾಗಿದ್ದಾರೆ.

ಗ್ರಂಥಋಣ

೧. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ೨೦೦೧.
೨. ಶಿವಶರಣೆಯರ ವಚನ ಸಂಪುಟ, (ಸಂ) ಡಾ. ವೀರಣ್ಣ ರಾಜೂರ, ೨೦೦೧.
೩. ಸಿದ್ಧರಾಮೇಶ್ವರ ವಚನ ಸಂಪುಟ, (ಸಂ) ಡಾ. ಎಸ್. ವಿದ್ಯಾಶಂಕರ, ೨೦೦೧.
೪. ವಚನ ಧರ್ಮಸಾರ, ಎಂ.ಆರ್. ಶ್ರೀನಿವಾಸ ಮೂರ್ತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೬೮.
೫. ಕನ್ನಡ ಸಾಹಿತ್ಯ ಇತಿಹಾಸ, ರಂ.ಶ್ರೀ. ಮುಗಳಿ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೬೬.

೧. ಶಿವಶರಣೆಯರ ವಚನ ಸಂಪುಟ (ಸಂ) ವೀರಣ್ಣ ರಾಜೂರ, ಪುಟ-೧೧೩, ೧೧೪, ವಚನ - ೩೭೮.
೨. ಅದೇ, ಪುಟ-೨೩೮, ವಚನ-೨.
೩. ಶಿವಶರಣೆಯರ ವಚನ ಸಂಪುಟ, (ಸಂ) ವೀರಣ್ಣ ರಾಜೂರ, ಪುಟ-೨೭೬, ವಚನ -೭೭.
೪. ಭೀಮಕವಿಯ ಬಸವ ಪುರಾಣ, ಸಂಧಿ-೪, ಪದ್ಯ-೩೦.
೫. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ಪುಟ-೧೯, ವಚನ-೬೬.
೬. ಅದೇ, ಪುಟ-೫೯, ವಚನ-೨೩೫.
೭. Basaveswara a commemoration, Volume 1967, Sri Basaveswara - A Bibliography, Page-25-26, R.C. Hiremath
೮. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ಪುಟ-೨೭೬, ವಚನ-೭೯.
೯. ಅಲ್ಲಮಪ್ರಭುದೇವರ ವಚನ ಸಂಪುಟ, (ಸಂ) ಡಾ. ಬಿ.ವ್ಹಿ. ಮಲ್ಲಾಪುರ, ಪುಟ-೪೫೬, ವಚನ-೮೭೧.
೧೦. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ಪುಟ-೧೧೮, ವಚನ-೪೯೨.
೧೧. ಶಿವಶರಣೆಯರ ವಚನ ಸಂಪುಟ (ಸಂ) ವೀರಣ್ಣ ರಾಜೂರ, ಪುಟ-೨೮೪, ವಚನ-೧೨೦.
೧೨. ಅದೇ, ಪುಟ-೩೦೭, ವಚನ-೨೨೪.
೧೩. ಅದೇ, ಪುಟ-೨೩೯, ವಚನ-೬.
೧೪. ಶಿವಶರಣೆಯರ ವಚನ ಸಂಪುಟ, (ಸಂ) ವೀರಣ್ಣ ರಾಜೂರ, ಪುಟ - ೨೬೭-೨೩೮, ವಚನ-೪೪.
೧೫. ಮುಖಬೋಳು ಸಿದ್ಧರಾಮನ ಷಟ್‌ಸ್ಥಲ ತಿಲಕ, ಸಂಧಿ-೪, ಪದ್ಯ-೮೧.
೧೬. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ಪುಟ-೧೭೪, ವಚನ-೯೯೫.
೧೭. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ಪುಟ-೧೭೪, ವಚನ-೯೯೭.೩.
೧೮. ಅದೇ, ಪುಟ-೧೭೪, ವಚನ-೯೯೬.

೧೯. ಅದೇ, ಪುಟ–೩೦೧, ವಚನ–೧೧೧
೨೦. ಅದೇ, ಪುಟ–೨೫೯, ವಚನ–೧೩.
೨೧. ಅದೇ, ಪುಟ–೨೩೮, ವಚನ–೩.
೨೨. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ಪುಟ–೨೪೦, ವಚನ–೯.
೨೩. ಅದೇ, ಪುಟ–೩೦೦, ವಚನ–೧೪೮.
೨೪. ಬಸವಪಥ, ಸಂ–೧೬, ಸಂ–೪, ೧೯೯೫.
೨೫. ಶಿವಶರಣೆಯರ ವಚನ ಸಂಪುಟ, (ಸಂ) ವೀರಣ್ಣ ರಾಜೂರ, ಪುಟ–೩೧೭, ವಚನ–೨೬೬.
೨೬. ಸಿದ್ಧರಾಮೇಶ್ವರ ವಚನ ಸಂಪುಟ, (ಸಂ) ಡಾ. ಎಸ್. ವಿದ್ಯಾಶಂಕರ, ಪುಟ–೪೬೧, ವಚನ–೧೬೧೨.
೨೭. ಶಿವಶರಣೆಯರ ವಚನ ಸಂಪುಟ, (ಸಂ) ವೀರಣ್ಣ ರಾಜೂರ, ಪುಟ–೨೭೬, ವಚನ–೯೬.
೨೮. ಬಸವಣ್ಣನವರ ವಚನ ಸಂಪುಟ, (ಸಂ) ಡಾ.ಎಂ.ಎಂ. ಕಲಬುರ್ಗಿ, ಪುಟ–೨೭೧, ವಚನ–೧೦೦೭.
೨೯. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ಪ್ರಸ್ತಾವನೆ, ಪುಟ–೧೭.
೩೦. ಅದೇ, ಪುಟ–೨೬೬, ವಚನ–೨೯.
೩೧. ಅದೇ, ಪುಟ–೧೨೨, ವಚನ–೫೦೫.
೩೨. ಬಸವಣ್ಣನವರ ವಚನ ಸಂಪುಟ, (ಸಂ) ಡಾ. ಎಂ.ಎಂ. ಕಲಬುರ್ಗಿ, ಪುಟ–೬೭, ವಚನ–೨೭೦.
೩೩. ಅದೇ, ಪುಟ–೨೫೩, ವಚನ–೯೫೮.
೩೪. ಅದೇ, ಪುಟ–೨೫೩, ವಚನ–೯೫೯.

❐

ಬಸವಣ್ಣನವರು

●

ಡಾ. ಎಂ.ಎಸ್. ಪಾಟೀಲ

ಕನ್ನಡ ನೆಲದ ಮೇಲೆ ಪ್ರಥಮ ಸಮಾಜೋ ಧಾರ್ಮಿಕ ಆಂದೋಲನವೊಂದು ೧೨ನೇ ಶತಮಾನದಲ್ಲಿ ಜರುಗಿತು. ಬಸವಣ್ಣನವರು ಈ ಆಂದೋಲನದ ನಾಯಕ ವ್ಯಕ್ತಿ. ಬಸವಣ್ಣ ಬಾಳಿದ್ದು ಬದುಕಿದ್ದು ಕನ್ನಡ ನಾಡಿನಲ್ಲಿ, ಬರೆದದ್ದು ಕನ್ನಡ ಭಾಷೆಯಲ್ಲಿ. ಈ ಮಿತಿಯೇ ಅವರನ್ನು ಜಾಗತಿಕ ವ್ಯಕ್ತಿಯನ್ನಾಗಿಸಲಿಲ್ಲ, ಇದೊಂದು ದುರಂತ. ನ್ಯಾಯವಾಗಿ ಬಸವಣ್ಣನವರಿಗೆ ಜಾಗತಿಕ ಪ್ರಸಿದ್ಧಿ ಈ ಹಿಂದೆಯೂ ಸಿಕ್ಕಿಲ್ಲ, ಇಂದಿಗೂ ಸಿಕ್ಕಿಲ್ಲ. ಬಸವಣ್ಣನವರ ಕುರಿತು ಕನ್ನಡ ಸಾಹಿತ್ಯದಲ್ಲಿ ಬೇಕಾದಷ್ಟು ಬರೆಹ ಬಂದಿದೆ ಮತ್ತೊಬ್ಬ ಯಾವ ಕನ್ನಡಿಗ ದಾರ್ಶನಿಕರ ಕುರಿತು ಇಷ್ಟೊಂದು ಸಾಹಿತ್ಯ ರಚನೆ ಆಗಿಲ್ಲ. ಕನ್ನಡದ ಯಾವ ಧಾರ್ಮಿಕ ಮಹಾಪುರುಷರು ಇವರಷ್ಟು ಬೆಳೆಯಲಿಲ್ಲ. ಜಾಗತಿಕ ಸಂಸ್ಕೃತಿಗೆ ಘನತೆಯನ್ನು ತಂದು ಕೊಡುವವರೆಂದರೆ, ತಮ್ಮ ವ್ಯಕ್ತಿತ್ವವನ್ನು ಉದಾತ್ತೀಕರಿಸಿಕೊಂಡ ಯುಗಪುರುಷರು. ಈ ಎರಡನ್ನು ಸಾಧಿಸಿಕೊಂಡ ಬಸವಣ್ಣನವರು ಕೇವಲ ಮಹಾಪುರುಷರಾಗದೆ, ಯುಗಪುರುಷರಾಗದೆ ಸಮಗ್ರ ಯುಗಪುರುಷರೆಂದು ಕರೆಯಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಯುಗಪುರುಷರು ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಹೀಗೆ ಒಂದೊಂದು ಕ್ಷೇತ್ರದಲ್ಲಿ ಯುಗಪುರುಷರಾಗಬಹುದು. ಆದರೆ ಬಸವಣ್ಣ ಈ ಎಲ್ಲಾ ಕ್ಷೇತ್ರಗಳಿಗೂ ಯುಗಪುರುಷನಾಗಿ ಬದುಕಿದ್ದು ಇತಿಹಾಸ. ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಬಸವಣ್ಣನವರು ಯುಗಪುಷರಾಗಿದ್ದಾರೆ ಅಲ್ಲದೆ ಅವರೊಬ್ಬ ಸಮಗ್ರ ಯುಗಪುರುಷರೆಂದು ಗುರುತಿಸಿದ ಡಾ. ಕಲಬುರ್ಗಿಯವರ ಆಲೋಚನೆ ಬಸವಣ್ಣನವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಪಂಪಯುಗ ಕನ್ನಡ ಸಾಹಿತ್ಯದಲ್ಲಿ ಸುವರ್ಣಯುಗವೆಂದು ಕರೆಯಿಸಿಕೊಂಡರೆ, ಬಸವಯುಗ ವಜ್ರಯುಗವೆಂದು ಕರೆಯಿಸಿಕೊಳ್ಳುತ್ತದೆ. ಬಸವಪೂರ್ವ ಯುಗ ರಾಜಸತ್ತೆಯ ಪತನ ಮತ್ತು ವೈಭವದ ಕಾಲವೆಂದು ಗುರುತಿಸುತ್ತೇವೆ. ಸಮಾಜವನ್ನು ನಿಯಂತ್ರಿಸುವ ರಾಜಸತ್ತೆಯ ವ್ಯವಸ್ಥೆಯಲ್ಲಿ ಅನೇಕ ಮಾರ್ಗಗಳು ನಿರ್ಮಾಣವಾಗಿ ಒಂದು ಮತ್ತೊಂದನ್ನು ಶೋಷಿಸುವುದರಲ್ಲಿ ಜೀವನ ವ್ಯವಸ್ಥೆಯೇ ತಪ್ಪಿಹೋಗಿತ್ತು. ಈ ಎಲ್ಲಾ ಅನ್ಯಾಯಗಳನ್ನು ಕಂಡ ಬಸವಣ್ಣನವರು ಸಾಮಾಜಿಕ ವ್ಯವಸ್ಥೆಗೆ ಒಂದು ಹೊಸ ತಿರುವನ್ನು ಕೊಡುವುದಕ್ಕಾಗಿ ಮತ್ತು ಸಾಮಾಜಿಕ ಸಮತೋಲನ ನಿರ್ಮಿಸುವುದಕ್ಕಾಗಿ ತಮ್ಮನ್ನು ತಾವು ಸಿದ್ಧಗೊಳಿಸಿಕೊಂಡರು.

ಬಸವಣ್ಣನವರ ಜನ್ಮ ಗ್ರಾಮ ಬಾಗೇವಾಡಿ. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಡಾ. ಎಂ.ಎಂ. ಕಲಬುರ್ಗಿಯವರು ಹೇಳುವಂತೆ ಬಹುಶಃ ಈ ಕುಟುಂಬ ಮಂಡಿಗೆ ಗ್ರಾಮದಿಂದ ಬಾಗೇವಾಡಿಗೆ ಬಂದಿರುವ ಸಾಧ್ಯತೆ ಇದೆ. ಅರ್ಜುನವಾಡ ಶಾಸನ ಹೇಳುವಂತೆ ಬಸವಣ್ಣನವರ ತಂದೆ ಮಾದರಾಜ ತರ್ದವಾಡಿ ಮಧ್ಯ ಗ್ರಾಮವಾದ ಈ ಬಾಗೇವಾಡಿಯ ಪುರವರಾಧೀಶ್ವರ. ತಾಯಿ ಮಾದಲಾಂಬಿಕೆ, ಇವಳು ಬಲದೇವ ದಂಡನಾಯಕನ ತಂಗಿ. ಇಂಥ ಒಂದು ಶ್ರೀಮಂತ ಕೌಟುಂಬಿಕ ಹಿನ್ನೆಲೆ ಬಸವಣ್ಣನವರಿಗೆ ಇತ್ತು. ಇದರೊಂದಿಗೆ ಆಗಾಧ ಪಾಂಡಿತ್ಯ ಮತ್ತು ಪ್ರತಿಭೆಗಳು ಬಸವಣ್ಣನವರಲ್ಲಿದ್ದವು. ಬಸವಣ್ಣ ಹುಟ್ಟುವುದಕ್ಕಿಂತ ಮೊದಲೆ ಕರ್ನಾಟಕವನ್ನು ಅಗ್ರಹಾರ ಸಂಸ್ಕೃತಿ ಮತ್ತು ದೇವಾಲಯ ಸಂಸ್ಕೃತಿಗಳು ಆಳುತ್ತಲಿದ್ದವು. ಅಗ್ರಹಾರ ಸಂಸ್ಕೃತಿ ಮೂಲತಃ ಕರ್ಮನಿಷ್ಟವಾದದ್ದು. ವಿಚಾರ ಮಾಡಿದರೆ ಸಾಮಾಜಿಕವಾಗಿ ವರ್ಣಭೇದಗಳನ್ನು ನಿರ್ಮಾಣ ಮಾಡುವಂತಹದ್ದು. ದೇವಾಲಯ ಸಂಸ್ಕೃತಿಯು ಅಗ್ರಹಾರ ಸಂಸ್ಕೃತಿಯನ್ನೆ ಹೆಚ್ಚುಕಡಿಮೆ ಹೋಲುತ್ತಿತ್ತು. ಬಸವಣ್ಣನವರು ಹುಟ್ಟು ಹೋರಾಟಗಾರರು. ತಮ್ಮ ಬಾಲ್ಯದಲ್ಲಿಯೇ ಚಲನಶೀಲವಲ್ಲದ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದವರು. ಅಗ್ರಹಾರ ಸಂಸ್ಕೃತಿಯನ್ನು ತೊರೆದು ದೇವಾಲಯ ಸಂಸ್ಕೃತಿಯ ಕಡೆಗೆ ತಿರುಗಿದವರು. ಬದಲಾವಣೆಗೆ ಸಾಧ್ಯವಾಗುವಂತಹ, ಸಾಧ್ಯವಾಗಬಹುದಾದಂತಹ ದೇವಾಲಯ ಸಂಸ್ಕೃತಿ ಅವರನ್ನು ಆಕರ್ಷಿಸಿರಬಹುದು. ಹೀಗಾಗಿ ಕೂಡಲಸಂಗಮಕ್ಕೆ ಬಂದು ಸೇರಿಕೊಂಡರು. ಜಾತವೇದ ಮುನಿಗಳು ಅವರ ಗುರುಗಳು. ಬಸವಣ್ಣನವರು ಕರ್ಮದ ನೆಲೆಯಿಂದ ಧರ್ಮದ ನೆಲೆಗೆ ಬಂದಂತಾಯಿತು. ಇದು ಬಸವಣ್ಣನವರ ಬದುಕಿನ ಒಂದು ಮಹತ್ತರ ಹೆಜ್ಜೆ.

ಕೂಡಲ ಸಂಗಮ ಬಸವಣ್ಣನವರ ಸಾಧನೆಯ ರಂಗ. ಅಧ್ಯಯನ-ಚಿಂತನ, ಇವುಗಳ ಮೂಲಕ ತಮ್ಮ ವ್ಯಕ್ತಿತ್ವಕ್ಕೊಂದು ಸ್ವರೂಪ ನೀಡಿಕೊಂಡರು. ಕೂಡಲಸಂಗಮ ಅನೇಕಾರ್ಥದಲ್ಲಿ ಸಾಮಾಜಿಕ ಆಂದೋಲನದ ಮುಖವಾಣಿಯಾಯಿತು. ಮೇಲಾಗಿ ಕೂಡಲಸಂಗಮ ಅವರಿಗೆ ಸುಶಿಕ್ಷಿತ ಶಿಕ್ಷಣ ನೀಡಿದ ಕ್ಷೇತ್ರವಾಯಿತು. ಒಂದರ್ಥದಲ್ಲಿ ಅಂಗ ಗುಣಗಳನ್ನು ಕಳೆದುಕೊಂಡು, ಲಿಂಗ ಗುಣಗಳನ್ನು ಬಸವಣ್ಣನವರು ಅಲ್ಲಿ ಮೈಗೂಡಿಸಿಕೊಂಡರು. ಹೀಗಾಗಿ ಬಸವಣ್ಣನವರು ಇಲ್ಲಿ ನಮಗೆ ಹೊಸ ಮನುಷ್ಯರಾಗಿ ತೋರುತ್ತಾರೆ. ಕೂಡಲಸಂಗಮದಲ್ಲಿ ಅಕ್ಷರದ ಮೂಲಕ ನಾನು ಬದುಕಬಹುದು, ಏನನ್ನೂ ಸಾಧಿಸಬಹುದು ಎನ್ನುವ ಸಾಧ್ಯತೆಗಳನ್ನು ಬಸವಣ್ಣನವರು ತೋರಿಸಿಕೊಡುತ್ತಾರೆ. ಒಂದರ್ಥದಲ್ಲಿ ಕೃಷ್ಣೆ ಮತ್ತು ಮಲಪ್ರಭೆಯ ನೀರನ್ನು ಕುಡಿದ ಬಸವಣ್ಣನವರು ತಮ್ಮ ವ್ಯಕ್ತಿತ್ವಕ್ಕೆ ಒಂದು ಘನತೆ ಮತ್ತು ಗಾಂಭೀರ್ಯತೆ ಸ್ಥಾಪಿಸಿಕೊಂಡದ್ದು ಇಲ್ಲಿಯೇ. ಮಂಡಲಾಧಿಪತಿಯಾದ ಬಿಜ್ಜಳ ಅರಸನಲ್ಲಿ ಕರಣಿಕ ವೃತ್ತಿಯನ್ನು ಪ್ರಾರಂಭಿಸಿದರು. ತದನಂತರ ಬಿಜ್ಜಳ, ಚಕ್ರವರ್ತಿಯಾಗುವುದರೊಂದಿಗೆ ಬಸವಣ್ಣನವರು ಬಿಜ್ಜಳನೊಂದಿಗೆ ಕಲ್ಯಾಣಕ್ಕೆ ಬರುತ್ತಾರೆ. ಅಲ್ಲಿಗೆ ಬಂದು ಭಂಡಾರದ ಮಂತ್ರಿಯಾಗುತ್ತಾರೆ. ಕಲ್ಯಾಣ ಬಸವಣ್ಣನವರ ಬದುಕಿನ ಸೃಜನಶೀಲ ಸ್ಥಳವಾಗುತ್ತದೆ. ಬಾಗೇವಾಡಿಯಲ್ಲಿ ಅಂಗದೇಹಿಯಾಗಿದ್ದ ಬಸವಣ್ಣನವರು ಕೂಡಲಸಂಗಮಕ್ಕೆ ಬಂದು ಲಿಂಗದೇಹಿಯಾಗುತ್ತಾರೆ. ಕಲ್ಯಾಣಕ್ಕೆ ಬಂದ ಬಸವಣ್ಣನವರು ಜಂಗಮ ದೇಹಿಯಾಗುವುದು ಅವರ ವ್ಯಕ್ತಿತ್ವದ ದೊಡ್ಡ ಮೈಲಿಗಲ್ಲು. ಇಲ್ಲಿ 'ಜಂಗಮ' ಎಂದರೆ 'ಸಮಾಜ'. ಇಲ್ಲಿ ಬಸವಣ್ಣನವರು ವ್ಯಕ್ತಿ ನೆಲೆಯಿಂದ ಸಮಾಜ ನೆಲೆಗೆ ಬರುವುದರ ಮೂಲಕ ಸಮಾಜಮುಖಿಯಾಗುತ್ತಾರೆ.

ಕಲ್ಯಾಣದಲ್ಲಿ ಬಸವಣ್ಣನವರು ಶರಣ ಸಮುದಾಯದ ಸಂಘಟನೆಗೆ ತಮ್ಮನ್ನು ತೊಡಗಿಸಿಕೊಂಡು ಯಶಸ್ವಿಯಾಗುತ್ತಾರೆ. ಕೆಳವರ್ಗದ ಜನರಿಗೆ ಸ್ಫೂರ್ತಿಯಾಗಿ ನಿಂತು ಅವರಿಗೆ ಧ್ವನಿಯಾಗುವದಲ್ಲದೆ, ಅವರಿಗೆ ಧ್ವನಿ ನೀಡುತ್ತಾರೆ. ಶರಣ, ಶರಣೆಯರು ಈ ಆಂದೋಲನದ ಧ್ವನಿಯಾಗಿ, ಶಕ್ತಿಯಾಗಿ ನಿಂತುಕೊಳ್ಳುವುದೇ ಒಂದು ಸೋಜಿಗ. ನೋಯುವ ಹಲ್ಲಿಗೆ ನಾಲಿಗೆ ಪದೆ ಪದೆ ತಾಕುತ್ತದೆ ಎಂಬ ಗಿರೀಶ ಕಾರ್ನಾಡರ ಹೇಳಿಕೆ ಇಲ್ಲಿ ಮನನೀಯವಾಗಿದೆ. ಏಕೆಂದರೆ ಆ ಯುಗದ ಮನುಷ್ಯ ಪ್ರಯತ್ನದ ಸಾಧ್ಯಾಸಾಧ್ಯತೆಗಳನ್ನು ಕಾಣುವಂತಾಗುತ್ತದೆ. ಲಿಂಗವನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ಮನುಷ್ಯ ಏನನ್ನು ಸಾಧಿಸಲಿಕ್ಕೆ ಸಾಧ್ಯ ಎಂದು ತೋರಿಸುವ ಕಾಲ ಅದಾಗಿತ್ತು. ಬಸವಣ್ಣನವರು ಈ ನೆಲೆಯಲ್ಲಿ ದೊಡ್ಡ ಸಾಧನೆಯನ್ನು ಮಾಡಿದರು. ಬಸವಣ್ಣನವರ ಇನ್ನೊಂದು ಸ್ಮರಣೀಯ ಕೆಲಸವೆಂದರೆ ಅನುಭವ ಮಂಟಪದ ಸ್ಥಾಪನೆ, ಅನುಭವಗಳನ್ನು ಆಧಾರವಾಗಿಟ್ಟುಕೊಂಡು ಅವರು ರಚಿಸಿದ ವಚನ, ಎಲ್ಲಾ ಕಾಲಕ್ಕೂ ಅಧ್ಯಯನ ಯೋಗ್ಯ. "ನಾನು ಹೇಳಬೇಕೆಂಬ ಮಾತು ನಿಮಗೆ ತಿಳಿಯಬೇಕೆಂಬ ನಿಯಮವಿಲ್ಲ, ಯಾವನಿಗೆ ತಿಳಿಯಬೇಕಾಗಿದೆಯೋ ಅವನಿಗೆ ತಿಳಿದರೆ ಸಾಕು" ಎಂಬರ್ಥದಲ್ಲಿ ಶರಣರು ತಮ್ಮ ದೇವರೊಂದಿಗೆ ಮಾತನಾಡಿಕೊಂಡ ಪರಿ ಇದು. ಹೀಗೆ ಬರಹದ ಮೂಲಕ ಬಸವಣ್ಣನವರು ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸಿದರು. ಬದಲಾವಣೆ ಜೀವಂತಿಕೆಯ ಲಕ್ಷಣ. ವಚನ ಎನ್ನುವುದು ಕಲೆ ಅಲ್ಲ, ಅದು ಕ್ರಿಯಾ ಮೂಲ ಕಲೆ. ಬಸವಣ್ಣನವರು ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣ ಕಾರ್ಯದಲ್ಲಿ ಬಹುಮಟ್ಟಿಗೆ ತಮ್ಮನ್ನು ತೊಡಗಿಸಿಕೊಂಡು ಜಂಗಮ ಸೇವೆಯೇ ದೇವರ ಸೇವೆ ಎಂಬ ಮಾನವೀಯ ಸಿದ್ಧಾಂತವನ್ನು ರೂಪಿಸಿಕೊಟ್ಟರು. ಬಾಗೇವಾಡಿಯಲ್ಲಿ ಕರ್ಮದಿಂದ ಧರ್ಮಕ್ಕೆ, ಕೂಡಲಸಂಗಮದಲ್ಲಿ ಅಂಗದಿಂದ ಲಿಂಗಕ್ಕೆ, ಕಲ್ಯಾಣದಲ್ಲಿ ಲಿಂಗದಿಂದ ಜಂಗಮಕ್ಕೆ ಸಾಗಿ ಬಂದಿರುವ ಬಸವಣ್ಣನವರ ಹೆಜ್ಜೆಗಳು ಅನುಪಮ. ಸಮಾಜ ಸೇವೆಯಲ್ಲಿ ಬಸವಣ್ಣನವರು ಸಾಧಿಸಿದ್ದು ಇವತ್ತಿಗೂ ಪ್ರಸ್ತುತವೆನಿಸುತ್ತದೆ. ವರ್ಗಭೇದ, ವರ್ಣಭೇದ, ಲಿಂಗಭೇದ, ಇವೆಲ್ಲವುಗಳನ್ನು ಬಸವಣ್ಣನವರು ನಿರಾಕರಿಸಿದರು. ಪಟ್ಟಭದ್ರ ಹಿತಾಸಕ್ತಿಗಳನ್ನು ಬಸವಣ್ಣನವರು ಸಾರಾಸಗಟಾಗಿ ತಿರಸ್ಕರಿಸಿದರು.

ಬಸವಣ್ಣನವರು ಭಾಷೆಯನ್ನು ಪವಿತ್ರಗೊಳಿಸುವುದರೊಂದಿಗೆ, ಲಿಂಗವಿಲ್ಲದ ಶಬ್ದ ಅದು ಸೂತಕವೆಂದು ಹೇಳಿದರು. ಭಕ್ತಿಗೆ ಅಂಟಿರುವ ಮಾಲಿನ್ಯವನ್ನು ದೂರಿಕರೀಸಿದರು ಹೀಗಾಗಿ ಭಾಷೆಯ ದುರ್ಬಳಕೆ ತಪ್ಪಿಹೋಯಿತು. ಭಕ್ತನ ನುಡಿಯ ನಡುವೆ ಸಂಗಮನಿರಬೇಕು ಎಂಬ ಭಾವನೆ ಬಸವಣ್ಣನವರದು. ವೀರಶೈವ ಸಿದ್ಧಾಂತವನ್ನು ಬಸವಣ್ಣನವರು ಹುಟ್ಟು ಹಾಕುವುದರ ಮೂಲಕ ವ್ಯಕ್ತಿ ಜೀವನದ ಪಾವಿತ್ರ್ಯತೆಗೆ ದಿಕ್ಸೂಚಿಯಾಗುತ್ತಾರೆ. ವ್ಯಕ್ತಿ ಶುದ್ಧೀಕರಣಕ್ಕೂ ಸಮಾಜ ಶುದ್ಧೀಕರಣಕ್ಕೂ ಅವರ ಪ್ರಯತ್ನ ಮುಂದುವರೆಯುತ್ತದೆ. ವ್ಯಕ್ತಿಯ ಒಳಗಡೆ ಇರುವ ವಿಕಾರಗಳನ್ನು ಹಾಗೂ ಸಮಾಜದ ನಡುವೆ ಇರುವ ಅವಿಚಾರಗಳನ್ನು ತೊಡೆದು ಹಾಕುವಲ್ಲಿ ಬಸವಣ್ಣನವರು ಮಾಡಿದ ಪ್ರಯತ್ನ ಅನನ್ಯ. ಸಾಮಾಜಿಕವಾಗಿ ನೋವುಂಡ ದುರ್ಬಲ ವರ್ಗವನ್ನು ಬಸವಣ್ಣನವರು ಎತ್ತಿ ಹಿಡಿಯುವುದರ ಮೂಲಕ ಸಮಗ್ರ ಸಾಮಾಜಿಕ ಬೆಳವಣಿಗೆಗೆ ಕಾರಣೀಭೂತರಾಗುತ್ತಾರೆ. 'ಲಿಂಗ ವ್ಯಸನಿ, ಜಂಗಮ ಪ್ರೇಮಿ' ಎಂದು ಹೇಳಿದ

ಬಸವಣ್ಣನವರು ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯ ಎಂದು ಹೇಳುತ್ತ ಜಂಗಮ ದಾಸೋಹಕ್ಕೆ ಒತ್ತು ಕೊಡುತ್ತಾರೆ.

ಸಾಮಾಜಿಕ ಸಮಾನತೆ ಬರಬೇಕಾದರೆ ಸಮಾಜದ ಎಲ್ಲರೂ ಆರ್ಥಿಕವಾಗಿ ಸಬಲರಾಗಬೇಕು, ಅರ್ಥಮಂತ್ರಿಯಾದ ಬಸವಣ್ಣನವರು ಈ ಸೂಕ್ಷ್ಮತೆಯನ್ನು ಅರಿತುಕೊಂಡು ಕಾಯಕ ಸಿದ್ಧಾಂತವನ್ನು ಪ್ರಚುರಗೊಳಿಸಿದರು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಉತ್ಪಾದಕ ಘಟಕವಾಗಬೇಕು, ಅನುತ್ಪಾದಕ ಘಟಕವಾಗಬಾರದು. ಅಂತೆಯೇ ಸ್ವತಃ ಬಸವಣ್ಣನವರು 'ಬೇಡುವವರಿಲ್ಲದೆ ಬಡವನಾದೆನಯ್ಯ' ಎಂದು ಹೇಳಿದ ಮಾತನ್ನು ನಮ್ಮ ಲಕ್ಷ್ಯಕ್ಕೆ ತೆಗೆದುಕೊಂಡರೆ ಅಂದಿನ ಸಮಾಜ ಎಷ್ಟು ಸುಭಿಕ್ಷುವಾಗಿತ್ತು ಎನ್ನುವುದನ್ನು ಅರಿತುಕೊಳ್ಳಬಹುದು. ರಾಜ್ಯದ ಭಂಡಾರ ಅದು ರಾಜನದಲ್ಲ, ಅದು ಪ್ರಜೆಗಳದು, ಎನ್ನುವುದನ್ನು ಅರ್ಥೈಸಿಕೊಂಡಿದ್ದರು. ಗುರುವಿಗೆ ತನು ದಾಸೋಹ, ಲಿಂಗಕ್ಕೆ ಮನಸ್ಸಿನ ದಾಸೋಹ, ಜಂಗಮಕ್ಕೆ ಧನ ದಾಸೋಹ ಇದು ಬಸವಣ್ಣನವರು ರೂಪಿಸಿದ ಶರಣ ಸಿದ್ಧಾಂತ. ಬಸವಣ್ಣನವರ ಸಾಮಾಜಿಕ ಸಿದ್ಧಾಂತ ಕಾರ್ಲ್‌ಮಾರ್ಕ್ಸ್ ಅರ್ಥದ ಸಿದ್ಧಾಂತಕ್ಕೆ ತೌಲನಿಕವಾಗಿ ಸಮಾನವೆನಿಸುತ್ತವೆ. ಬಸವಣ್ಣನವರ ಪ್ರಜಾಸತ್ತೆಯ ಸಿದ್ಧಾಂತ ಯಾವ ಕಾಲಕ್ಕೂ ಪ್ರಸ್ತುತವೆನಿಸುತ್ತದೆ. ಕಾಯಕದ ಮೂಲಕ ಗಳಿಕೆಯ ಮಾರ್ಗ, ದಾಸೋಹದ ಮೂಲಕ ಬಳಕೆಯ ಮಾರ್ಗ ಇವು ಬಸವಣ್ಣನವರು ರೂಪಿಸಿದ ಜೀವನ ಮೌಲ್ಯಗಳು. ಕಲ್ಯಾಣ ರಾಜ್ಯವನ್ನು ಕಟ್ಟುವ ಸದಾಶಯದ ಹಿನ್ನೆಲೆಯಲ್ಲಿ ಬಸವಣ್ಣನವರ ಸಿದ್ಧಾಂತಗಳನ್ನು ಅಧ್ಯಯನ ಮಾಡಬೇಕಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಬಸವಣ್ಣನವರು ಒಬ್ಬ ಸಾಂಸ್ಕೃತಿಕ ವೀರರಾಗಿ ನಮಗೆ ಕಾಣಿಸುತ್ತಾರೆ. ಬಸವಣ್ಣನವರ ಈ ಎಲ್ಲಾ ಸಾಮಾಜಿಕ ಚಿಂತನೆಗಳನ್ನು ಹೊತ್ತು ನಿಂತ ವಚನ ಸಾಹಿತ್ಯ ಮಾನವ ಪ್ರಪಂಚಕ್ಕೆ ಆದರ್ಶವಾಗಿವೆ. ದೈನಂದಿನ ಬದುಕಿನ ದಾರಿದೀಪಗಳಿವು.

ವಚನಗಳನ್ನು ಸಾಹಿತ್ಯದ ಹಾಗೂ ಧರ್ಮದ ದೃಷ್ಟಿಯಿಂದ ನೋಡುವ ಕಾಲ ಮುಗಿದಿದೆ. ಅವುಗಳನ್ನು ಸಾಮಾಜಿಕ ನೆಲೆಯಿಂದ ಅಧ್ಯಯನ ಮಾಡಿದಷ್ಟು ಅವುಗಳ ಅರ್ಥಸ್ಫುಟತ್ವವಾಗುತ್ತದೆ, ಕೇವಲ ಅವು ಕಾಲ ಬದ್ಧವಾದವುಗಳಲ್ಲ, ಕಾಲವನ್ನು ಮೀರಿದ ಕಾಲಾತೀತ ಸಂವೇದನೆಗಳನ್ನು ಇಲ್ಲಿ ಗುರುತಿಸಲಿಕ್ಕೆ ಸಾಧ್ಯವಿದೆ. ಬಸವಣ್ಣನವರು ಭಾವನೆಗಳನ್ನು ಕಲಾತ್ಮಕಗೊಳಿಸಲು ಹೊರಟ ಕವಿಗಳಲ್ಲದಿದ್ದರೂ ಒಬ್ಬ ಶ್ರೇಷ್ಠ ಕವಿಯೆಂದೇ ಅರ್ಥೈಸಬಹುದು. ಜೀವನವನ್ನು ಸುಂದರಗೊಳಿಸಲು ಹೋರಾಡಿದ ಸಂತರು ಬಸವಣ್ಣನವರು. 'ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂದು ಹೇಳಿದ ಬಸವಣ್ಣನವರು ಒಂದು ಕಾವ್ಯ ಧೋರಣೆ ಅವರ ಮುಂದೆ ಸ್ಪಷ್ಟವಾಗಿತ್ತೆಂಬುದು ವಿದಿತವಾಗುತ್ತದೆ. ಒಂದು ಸಾಮಾಜಿಕ ಬದ್ಧತೆ ಅಥವಾ ಸಾಮಾಜಿಕ ಹೊಣೆಗಾರಿಕೆ ಬಸವಣ್ಣನವರಲ್ಲಿದ್ದಿತು ಈ ಎರಡು ಹೊಣೆಗಳನ್ನು ಅವರು ಸಮರ್ಥವಾಗಿ ನಿರ್ವಹಿಸಿದರು. ಬಸವಣ್ಣನವರ ದೊಡ್ಡ ಮೌಲ್ಯವೆಂದರೆ, ಆತ್ಮಶೋಧ. ವ್ಯಕ್ತಿ ತನ್ನ ದೌರ್ಬಲ್ಯಗಳನ್ನು ತಾನೇ ಗುರುತಿಸಿಕೊಂಡು ತನ್ನನ್ನು ತಾನು ತಿದ್ದಿಕೊಳ್ಳುವುದು ಅತ್ಯಂತ ಶ್ರೇಷ್ಠ. ಇದನ್ನೇ ನಾವು 'Self Evaluation' ಎಂದು ಕರೆಯುವುದು. ಬಸವಣ್ಣನವರು ತಮ್ಮ ಒಳಗಿನ ಪ್ರಪಂಚವನ್ನು ಸಾಧ್ಯಂತವಾಗಿ ನೋಡಿಕೊಳ್ಳುತ್ತಾ, ತೋಡಿಕೊಳ್ಳುತ್ತಾ ಬಂದಿದ್ದಾರೆ.

ಅವರ ಮನಸ್ಸಿನ ಪ್ರತಿ ಎಳೆಗಳು ಅವರ ಬರೆಹಗಳಲ್ಲಿ ವ್ಯಕ್ತವಾಗಿವೆ. ಅಂತೆಯೇ ಬಸವಣ್ಣನವರು ಒಬ್ಬ ಸಜ್ಜನ ಶರಣರಾಗಿ ತೋರುತ್ತಾರೆ.

ಬಸವಣ್ಣನವರು ಸಮಾಜ ವಿಮರ್ಶೆಯನ್ನು ಕೈಗೆತ್ತಿಕೊಂಡು, ಅನ್ಯಾಯವನ್ನು ಪ್ರತಿಭಟಿಸುವ, ನ್ಯಾಯವನ್ನು ಪ್ರತಿಪಾದಿಸುವ ನೆಲೆಯನ್ನು ಅಲ್ಲಿ ಕಾಣಬಹುದು. ಒಬ್ಬ ಸಮಾಜ ವಿಜ್ಞಾನಿಯಾಗಿ ಈ ಸಮಾಜವನ್ನು ವಿಶ್ಲೇಷಣೆಗಾಗಿ ಕೈಗೆತ್ತಿಕೊಳ್ಳುತ್ತಾರೆ. 'ಆನು ಈ ಬಿಜ್ಜಳಂಗೆ ಅಂಜುವೆನೇ' ಎಂದು ಬೊಟ್ಟಿಟ್ಟು ಅರಸನ ವಿಮರ್ಶೆಮಾಡುವುದು ಸಾಮಾನ್ಯ ಮಾತಲ್ಲ. ದಯವೇ ಧರ್ಮದ ಮೂಲ, ಸತ್ಯ ನುಡಿಯುವುದೇ ಸ್ವರ್ಗ, ಉಳ್ಳವರು ಶಿವಾಲಯ ಮಾಡುವರು, ನುಡಿದರೆ ಲಿಂಗ ಮೆಚ್ಚಬೇಕು ಇಂತಹ ಮೌಲ್ಯಗಳು ಬಸವಣ್ಣನವರ ವಚನಗಳಲ್ಲಿ ಹಾಸುಹೊಕ್ಕಾಗಿವೆ. ಬಸವಣ್ಣನವರ ವಚನಗಳು ಸುಂದರವಾದ ಭಾವಗೀತೆಗಳು, ಮತ್ತೆ ಮತ್ತೆ ಓದಿಸಿಕೊಳ್ಳುವ ಅವರ ವಚನಗಳು ಪುಣ್ಯಸ್ನಾನದಂತೆ. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಸಾಮಾಜಿಕ ಸಿದ್ಧಾಂತ ಪದೆ ಪದೆ ಚಪ್ಪರಿಸುವಂತೆ ಮಾಡುತ್ತದೆ. ಪರಿಸರದೊಂದಿಗೆ ಸ್ಪಂದಿಸಿದ ಅವರ ರೀತಿ, ಆಂದೋಲನದ ಮೂಲಕ ಹೊಸ ಆಲೋಚನೆಗಳ ಆವಿಷ್ಕಾರ ಇವೆಲ್ಲ ಬಸವಣ್ಣನವರ ಪ್ರತಿ ಮಗ್ಗುಲುಗಳನ್ನು ನಮಗೆ ಪರಿಚಯಿಸುತ್ತವೆ. ಪಾಪದ ಲೆಕ್ಕ ಚುಕ್ತಾ ಮಾಡುವ ಪೂಜೆ ಬೇಡವೆನ್ನುವರು. ಬಸವಣ್ಣನವರು, ವಿಚಾರ ವಿಲ್ಲದ ಆಚಾರಗಳನ್ನು ತೊಡೆದು ಹಾಕಿದರು, ಕೀಳು ದೇವರುಗಳ ಉಪಾಸನೆಯನ್ನು ತಟಸ್ಥಗೊಳಿಸಿದರು.

ಸ್ತ್ರೀಯರಿಗೆ ಸ್ವಾತಂತ್ರ್ಯಕೊಡುವುದಷ್ಟೇ ಅಲ್ಲದೆ, ಹೆಂಡತಿ ಗಂಗಾಬಿಕೆ ಮತ್ತು ನೀಲಾಂಬಿಕೆಯರನ್ನು ಪೂಜ್ಯಭಾವನೆಯಿಂದ ಕಂಡದ್ದುಂಟು. ಬಸವಣ್ಣನವರು ತಾವು ಒಬ್ಬರೆ ಆಂದೋಲನದಲ್ಲಿ ದುಮುಕಲಾರದೆ ತಮ್ಮ ಇಡೀ ಕುಟುಂಬವನ್ನು ಆಂದೋಲನದಲ್ಲಿ ತೊಡಗಿಸಿದರು. ಗಂಗಾಂಬಿಕೆ, ನೀಲಾಂಬಿಕೆ, ಸಹೋದರಿ ನಾಗಲಾಂಬಿಕೆ ಅಳಿಯ ಚನ್ನಬಸವಣ್ಣ ಇವರೆಲ್ಲರೂ ಆಂದೋಲನದ ಮುಖ್ಯ ಭಾಗವಾಗಿದ್ದರು ಎಂಬುದು ಐತಿಹಾಸಿಕ ಸತ್ಯ. ಬಸವಣ್ಣನವರ ಕುರಿತು ಬಸವಯುಗದ ನಂತರ ಬಂದ ಸಾಹಿತ್ಯ ಬೇಕಾದಷ್ಟಿದೆ, ಬೆಟ್ಟದಷ್ಟಿದೆ. ಬಸವಣ್ಣನವರ ಕುರಿತು ಬಸವ ಸಮಕಾಲೀನ ಶರಣರು ಆಡಿದ ಮಾತುಗಳು ಬಸವಣ್ಣನವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಗಳಾಗಿವೆ. ಬಹುಶಃ ಕನ್ನಡದಲ್ಲಿ ಬಸವಣ್ಣನವರು ಕುರಿತು ಬಂದಂತಹ ಸಾಹಿತ್ಯರಾಶಿ ಯಾರನ್ನೂ ಕುರಿತುಬಂದಿಲ್ಲ. ಬಸವಣ್ಣನವರ ಕುರಿತು ಅಧ್ಯಯನ, ಸಂಶೋಧನೆ ನಡೆಯುತ್ತಿದ್ದರೂ, ಇನ್ನೂ ಬಸವಣ್ಣನವರನ್ನು ಅರ್ಥಮಾಡಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ, ಸಾಧ್ಯವಾಗುವುದೂ ಇಲ್ಲ. ಏಕೆಂದರೆ ಎಲ್ಲವನ್ನು ಬಿಟ್ಟುಕೊಟ್ಟವರ ಕುರಿತು ಎಲ್ಲವನ್ನು ಕಟ್ಟಿಕೊಳ್ಳಬೇಕೆನ್ನುವ ನಮಗೆ ಬಸವಣ್ಣನವರು ಹಾಗೂ ಇತರ ಶರಣರು ಅರ್ಥವಾಗುವುದಾದರೂ ಹೇಗೆ?

❑

ಬಸವ ಮತ್ತು ಅವನ ಹೋರಾಟ: ಒಂದು ವಿವೇಚನೆ

●

ಡಾ. ಎಂ.ಬಿ. ಹೂಗಾರ

ಮಹಾಪುರುಷರ ಬದುಕು ಹೋರಾಟಮಯವಾಗಿರುತ್ತದೆ. ಬಸವಣ್ಣನವರ ಜೀವನವೂ ಹೋರಾಟಮಯವಾಗಿತ್ತು. ಮನುಷ್ಯ ಏನನ್ನಾದರೂ ವಿಶೇಷವಾದುದನ್ನು ಸಾಧಿಸಬೇಕಾದರೆ ಹೋರಾಟ ಅನಿವಾರ್ಯ. ಸಾಮಾನ್ಯರಿಗೂ ಅಸಾಮಾನ್ಯರಿಗೂ ಇರುವ ಪ್ರಮುಖ ವ್ಯತ್ಯಾಸವೆಂದರೆ ಸಾಮಾನ್ಯರು ಕಂದಾಚಾರ ಪರಂಪರೆ ಅಂಧಶ್ರದ್ಧೆ, ಇವುಗಳ ವಿರುದ್ಧ ಹೋರಾಡದೆ ಹರಿಯುವ ನದಿಯತ್ತ ಸಾಗುತ್ತಾರೆ. ಅಸಾಮಾನ್ಯರು ಹೋರಾಡುತ್ತಾರೆ; ಮತ್ತು ಹರಿಯುವ ನದಿಯ ವಿರುದ್ಧ ದೆಸೆಯುತ್ತ ಈಸುತ್ತಾರೆ; ಬಸವಣ್ಣನವರು ಎರಡು ಘಟ್ಟಗಳಲ್ಲಿ ಹೋರಾಟಮಾಡಿದ್ದನ್ನು ನಾವು ಗುರುತಿಸಬಹುದು. ಒಂದು ಹೊರಗಿನ ತಮ್ಮ ಸುತ್ತಮುತ್ತಲಿನ ಸಮಾಜದ ವಿರುದ್ಧ; ಇನ್ನೊಂದು ತಮ್ಮ ಒಳಗಿನ ಮನಸ್ಸಿನಲ್ಲಿ ನಡೆಯುವ ತುಮುಲಗಳ ವಿರುದ್ಧ ಒಂದರ್ಥದಲ್ಲಿ ಅಂತರಂಗ ಹೋರಾಟ ಹಾಗೂ ಬಹಿರಂಗ ಹೋರಾಟವನ್ನು ಮಾಡಿದ್ದಾರೆ! ಇವೆರಡರ ಹೋರಾಟದಿಂದಲೇ ವ್ಯಕ್ತಿ ರೂಪುಗೊಳ್ಳುತ್ತಾನೆ.

ಬಸವಣ್ಣ ಹುಟ್ಟು ಹೋರಾಟಗಾರ ಅವನ ಸಾಧನೆ ಬಾಲ್ಯದಿಂದಲೇ ಆರಂಭವಾಗಿದ್ದರೂ ಅದು ನಿರ್ದಿಷ್ಟ ಗುರಿಯೊಡನೆ ಆರಂಭವಾದುದು ಕಪ್ಪಡಿ ಸಂಗಮದಲ್ಲಿಯೇ. ಮುಂದೆ ತಮ್ಮ ಜೀವನದ ಹಂಬಲವಾದ ಪರಮಾತ್ಮನ ಸಾಕ್ಷಾತ್ಕಾರವಾಗುವ ತನಕ ಅಪಾರವಾದ ಮಾನಸಿಕ ತುಮುಲಯಾತನೆಯನ್ನು ಏಳು–ಬೀಳುಗಳನ್ನು ಅನುಭವಿಸಿದರು. ಬಸವಣ್ಣನವರು ಲೋಕದ ಡೊಂಕ ತಿದ್ದುವುದರ ಜೊತೆಗೆ ತಮ್ಮ ಮನದ ಡೊಂಕನ್ನು ತಿದ್ದಿಕೊಂಡಿದ್ದಾರೆ.

ಎನ್ನ ಚಿತ್ತವು ಅತ್ತಿಯಹಣ್ಣು ನೋಡಯ್ಯ
ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ

ಎಂದು ಹೇಳುವುದರ ಮೂಲಕ ಮನಸ್ಸಿನ ಚಂಚಲತೆಯನ್ನು ಅದರ ಆಸೆ ಆಮಿಷತ್ವದ ಗುಣವನ್ನು ಹಳಿಯುವುದರೊಂದಿಗೆ ಶುಚಿಯಾಗುತ್ತಾನೆ. ಮನ ಶುಚಿಯಾಗಿರದ ಸ್ಥಿತಿಯನ್ನು ಇನ್ನೂ ಪರಿಣಾಮಕಾರಿಯಾಗಿ ಹೇಳುತ್ತಾನೆ ಈ ವಚನದಲ್ಲಿ.

ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?

ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲಾ ಕೂಡಲಸಂಗಮದೇವ

ಮನೆಯ ಯಜಮಾನ ಇಲ್ಲದಿರೆ ಮನೆ ಅಸ್ತವ್ಯಸ್ತ ಅಲ್ಲಿ ಹುಲ್ಲುಹುಟ್ಟುವುದು ಕಸ ಬೀಳುವುದು ಸರ್ವೇಸಾಮಾನ್ಯ. ಮನದ ಒಡೆಯನ ವಾಸಕ್ಕೆ ಮನಸ್ಸು ಯೋಗ್ಯವಾಗದಿದ್ದರೆ ಅಲ್ಲಿ ಆ ಅಧಿಪತಿಯ ವಾಸವಾದರೂ ಹೇಗಾದೀತು! ಮರ್ಕಟನಂತಹ ಮನ ಎತ್ತಬೇಕಾದತ್ತ ಸಂಚರಿಸುವದು. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಮನಸ್ಸು ಪ್ರಪಂಚದಲ್ಲಿ ರಮಿಸುವದು. ಇಂದ್ರಿಯ ಸುಖಕ್ಕೆ ಹಾತೊರೆಯುವುದು. ಈ ಮನಸ್ಸನ್ನು ಅಂಕಿತದಲ್ಲಿಟ್ಟುಕೊಂಡು ಜೀವನ ಹಸನಗೊಳಿಸುವುದರತ್ತ ಬಸವಣ್ಣ ಪ್ರಯತ್ನ ಮಾಡಿದ್ದನ್ನು ನಾವು ಕಾಣುತ್ತೇವೆ. ಮೊದಲು ನಮ್ಮ ನಮ್ಮ ಲೋಪದೋಷಗಳನ್ನು ತಿದ್ದಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು.

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವ

ಬಸವಣ್ಣನವರ ಈ ವಚನ ಸ್ವಾನುಭವದ ಪ್ರತೀಕವಾಗಿದೆ. ಅವರು ಮಂಗಳವೇಡೆ, ಕಲ್ಯಾಣಗಳಲ್ಲಿ ಮಹಾಧಾರ್ಮಿಕ ಸುಧಾರಣೆಗಳಿಗೆ ಕೈಹಾಕಿ ಸಮಾಜವನ್ನು ತಿದ್ದಲು ಆರಂಭಿಸುವ ಮೊದಲು ತಮ್ಮನ್ನು ತಾವು ತಿದ್ದಿಕೊಂಡರು.

ಬಸವಣ್ಣ ಪರಮಾತ್ಮನ ದರ್ಶನಕ್ಕಾಗಿ ಭಕ್ತಿಯ ಹಾದಿಯನ್ನು ಹಿಡಿದರು. ಭಕ್ತಿಪಥ ಬಸವಣ್ಣನವರಿಗೆ ತುಂಬ ಪ್ರಿಯವಾದುದು. ಭಗವಂತ ನಾದ ಪ್ರಿಯನಲ್ಲ; ವೇದಪ್ರಿಯನಿಲ್ಲ ಭಕ್ತಿಪ್ರಿಯನೆಂಬುದನ್ನು ಮನಗಂಡಿದ್ದರು.

ಭಕ್ತಿಯ ಸಾಧನೆಯು ಅಷ್ಟೇನು ಸುಲಭವಾದುದಲ್ಲ. ಶುದ್ಧಮನಸ್ಸಿನಿಂದ, ವಿನಯದಿಂದ, ದಾಸೋಹ ಮನೋಭಾವದಿಂದ ಸರ್ವಸಮರ್ಪಣಾ ಬುದ್ಧಿಯಿಂದ ಸದಾ ಪರಮಾತ್ಮನಿಗಾಗಿ ಹಂಬಲಿಸುವುದು ಮನಸ್ಸನ್ನು ಭಗವಂತನಲ್ಲಿ ತೊಡಗಿಸುವುದು ತುಂಬ ಕಷ್ಟವಾದುದು. ಬಸವಣ್ಣನು ಭಗವಂತನಲ್ಲಿಯೇ ತಂದೆಯನ್ನು ತಾಯಿಯನ್ನು ಕಾಣುತ್ತಾನೆ.

ಭಗವಂತನ ದರ್ಶನಕ್ಕಾಗಿ ಬಹುವಾಗಿ ಹಾತೊರೆದರು ಬಸವಣ್ಣನವರು ಅವನ ಸಾನ್ನಿಧ್ಯಕ್ಕಾಗಿ ಹಪಾಪಿಸುತ್ತಾರೆ.

ಅಯ್ಯಾ ಅಯ್ಯಾ ಎಂದು ಕರೆವುತ್ತಲಿದ್ದೇನೆ
ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ
'ಓ' ಎನ್ನಲಾಗದೆ ಅಯ್ಯಾ
ಆವಾಗಲೂ ನಿಮ್ಮುವ ಕರೆಯುತ್ತಲಿದ್ದೇನೆ

'ಓ' ಏನ್ನದೆ ಮೌನವೇ ಕೂಡಲ ಸಂಗಮದೇವಾ ಎಂದು ಹಲುಬಿ ಪ್ರಪಂಚದ ಘೋರ ಭೀಕರತೆಯಲ್ಲಿ ಸಿಕ್ಕು ಒದ್ದಾಡುತ್ತಿದ್ದ ಸ್ಥಿತಿಯನ್ನು ಬಸವಣ್ಣ ತನ್ನ ವಚನವೊಂದರಲ್ಲಿ ಹೀಗೆ ಹೇಳಿದ್ದಾನೆ.

ಕೆಸರಲ್ಲಿ ಬಿದ್ದ ಪಶುವಿನಂತಾನು
ದೆಸೆದೆಸೆಗೆ ಬಾಯಬಿಡುತ್ತಿದ್ದೇನಯ್ಯ

ಅಯ್ಯೋ! ಆರಯ್ವವರಿಲ್ಲ ಅಕಟಕಟಾ!
ಪಶುವೆಂದೆನ್ನ ಕೂಡಲಸಂಗಮದೇವ
ಕೊಂಬ ಹಿಡಿದೆತ್ತುವನ್ನಕ್ಕ
ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
ಅಂಬೇ ಅಂಬೇ ಎಂದು ಕರೆಯುತ್ತಲಿದ್ದೇನೆ
ಅಂಬೇ ಅಂಬೇ ಎಂದು ಒರಲುತ್ತಲಿದ್ದೇನೆ
ಕೂಡಲಸಂಗಮದೇವ 'ಬಾಳು ಬಾಳೆಂ' ಬನ್ನಕ್ಕ

ತಮ್ಮನ್ನು ತಾವು ಪಶುವೆಂದು ಭಾವಿಸಿದರು. ಕೆಸರಲ್ಲಿ ಬಿದ್ದ ಪಶು ನಾನು ಎಂದುಕೊಂಡರು ಅಡವಿಯಲ್ಲಿ ದಿಕ್ಕುಗೆಟ್ಟು ಕೂಗಿಡುತ್ತ ದಿಕ್ಕು ದಿಕ್ಕಿಗೆ ಅಲೆಯುವ ಪಶು ನಾನು ಎಂದುಕೊಂಡನು. ತನ್ನನ್ನು ತಾನೇ ಸಂಸ್ಕರಣಗೊಳಿಸಿಕೊಳ್ಳುತ್ತ ವ್ಯಕ್ತಿ ಹೇಗೆ ಉದಾತ್ತವಾಗ 'ಬೇಕೆಂಬುದನ್ನು ಬಸವಣ್ಣನವರ ಜೀವನ ಚರಿತ್ರೆಯಿಂದ ಅರಿಯಬಹುದಾಗಿದೆ.

ಬಸವಣ್ಣನವರು ಪುರಾತನ ಶರಣರನ್ನು ನೆನೆದರು. ಸಿಂಧುಬಲ್ಲಾಳ ವಧುವನ್ನು ಶಿವನಿಗೆ ಕೊಟ್ಟುದ, ಸಿರಿಯಾಳ ಮಗನ ಮಾಂಸದ ಅಡಿಗೆ ಮಾಡಿ ನೀಡಿದ್ದು ದಾಸಿಮಯ್ಯನ ಬಟ್ಟೆಯನ್ನು ಜಂಗಮವೇಷಧಾರಿಯಾದ ಶಿವ ಹರಿದು ಹಾಕಿದರೂ ದಾಸಿಮಯ್ಯ ಶಾಂತಚಿತ್ತದಿಂದ ಇದ್ದುದು ಪುರಾತನರ ಅಚಲ ನಿಷ್ಠೆಗೆ ಉದಾಹರಣೆಗಳು ತನ್ನಲ್ಲಿಯೂ ಈ ನಿಷ್ಠೆ ನೆಲೆಸಲೆಂದು ಬಯಸಿದ್ದ ಬಸವಣ್ಣ.

ಬಸವಣ್ಣನವರು ತಮ್ಮ ಲೌಕಿಕ ಜೀವನದಲ್ಲಿ ಅನೇಕ ಕಷ್ಟಗಳನ್ನು ಎದುರಿಸಿದರು. ಸಮಾಜವನ್ನು ತಿದ್ದಲು ಹೊರಟ ಅವರಿಗೆ ಅನೇಕ ನೋವಿನ ಅನುಭವಗಳಾಗಿದ್ದರೂ ಅವರು ಕಂಗೆಡಲಿಲ್ಲ. ಭಗವಂತ ತನುವನಲ್ಲಾಡಿಸಿ ನೋಡಲಿ ಮನವ ಅಲ್ಲಾಡಿಸಿನೋಡಲಿ ಯಾವುದಕ್ಕೂ ಬಸವಣ್ಣನವರು ಅಂಜಿದವರಲ್ಲ. ಬಸವಣ್ಣನವರಿಗೆ ಸಂಸಾರ ಪರಮಾರ್ಥ ಸಾಧನೆಗೆ ಆತಂಕವಾಗಿರಲಿಲ್ಲ ಹೊರತು ಅದು ಪಾರಲೌಕಿಕಕ್ಕೆ ಮೆಟ್ಟಿಲಾಗಿತ್ತು. "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು" ಬಸವಣ್ಣನಲ್ಲಿಯೂ ತಾನು ಕೊಡುವವನೆಂಬ ಅಭಿಮಾನ ಮೂಡಿದ ಸಂದರ್ಭದಲ್ಲಿ ಪ್ರಭುದೇವ, ಚನ್ನಬಸವಣ್ಣ ಮಡಿವಾಳ ಮಾಚಿದೇವ ಇವರೆಲ್ಲ ಬಸವಣ್ಣನನ್ನು ಮುಗ್ಧ ಮಗುವಿನಂತೆ ನೋಡಿಕೊಂಡು ಅವರ ತಪ್ಪುಗಳನ್ನು ತಿದ್ದಿದರು.

ಬಸವಣ್ಣನವರು ತಮ್ಮ ಅಂತರಂಗವನ್ನು ಶುದ್ಧಪಡಿಸಿಕೊಂಡರು. ಶಿವನಲ್ಲಿ ಅಚಲ ನಿಷ್ಠೆ ನಂಬುಗೆಯನ್ನಿಟ್ಟಿದ್ದರು. ಇವರ ಸಾಧನೆ ಬಹಿರಂಗದಿಂದ ಕ್ರಮೇಣ ಅಂತರಂಗಕ್ಕೆ ತಿರುಗಿತು. ಸಾಧಕ ಪರಮಾತ್ಮನ ಸಾನಿಧ್ಯ ಪಡೆಯಬೇಕಾದರೆ ಹಲವು ಕಷ್ಟನಷ್ಟವನ್ನು ಅನುಭವಿಸಿ ನಿರಾಸೆಯ ಕತ್ತಲಲ್ಲಿ ಮುಳುಗಿ ಹತಾಶನಾಗುವುದು ಸಹಜ. ಬಸವಣ್ಣನವರೂ ಈ ಸ್ಥಿತಿಯನ್ನು ಅನುಭವಿಸಿದ್ದಾರೆ.

ಭಗವಂತ ಇಲ್ಲಿಯವರೆಗೆ ಅವರ ಹೃದಯದಲ್ಲೇ ನಿಧಾನದಂತೆ ಇದ್ದ. ಅಂಗೈ ಮೇಲೆ ಇದ್ದ ಇಷ್ಟಲಿಂಗವು ಭಾವಲಿಂಗವಾಗಿ ಪರಮಾತ್ಮ ತನ್ನಿಂದ ಹೊರಗೆ ಇಲ್ಲ ತನ್ನಲ್ಲೇ ಇದ್ದಾನೆಂಬ ಅರಿವಾಯಿತು. ಮುಂದೆ ತನ್ನ ಒಳಗಿನ ಬೆಳಗನ್ನು ಹೊರಗೂ ಕಂಡಾಗ ಆತನಿಗೆ ಆದ ಆನಂದ ಅಷ್ಟಿಷ್ಟಲ್ಲ.

ಎತ್ತೆತ್ತ ನೋಡಿದತ್ತ ನೀನೇ, ದೇವಾ;
ಸಕಲ ವಿಸ್ತಾರದ ರೂಹು ನೀನೇ ದೇವಾ;
ವಿಶ್ವ ತಶ್ಚಕ್ಷು ನೀನೇ ದೇವಾ ವಿಶ್ವತೋಮುಖ ನೀನೇ, ದೇವಾ
ವಿಶ್ವತೋ ಬಾಹು ನೀನೇ ದೇವಾ;
ವಿಶ್ವತಃ ಪಾದ ನೀನೇ, ದೇವಾ; ಕೂಡಲ ಸಂಗಮದೇವಾ

ಜಗದ ತುಂಬೆಲ್ಲ ವ್ಯಾಪಿಸಿದ ಭಗವಂತನ 'ನೋಟವನಂತ ಸುಖ, ಕೂಟ ಪರಮ ಸುಖ'ವಾಗಿ ನದಿಯೊಳಗೆ ನದಿ ಬೆರೆಸಿದನುಭವವಾಯಿತು ಬಸವಣ್ಣನವರಿಗೆ.

ಬಸವಣ್ಣನವರ ಸಾಧನೆ ದ್ವೈತದಿಂದ ಆರಂಭವಾಗಿ ಅದ್ವೈತದ ಆನಂದದಲ್ಲಿ ಸಮ್ಮಿಳಿತ ವಾದುದನ್ನು ನಾವು ಕಾಣುತ್ತೇವೆ. ಪಶುವಾನು ಪಶುಪತಿ ಆತವೆಂದು ಹೇಳುತ್ತ ಶರಣ ಸತಿ ಲಿಂಗ ಪತಿಯೆಂಬುದನ್ನು ನಂಬಿ ಬಾಳುತ್ತಾನೆ. ಸತಿಪತಿ ಭಾವದಿಂದ ಪರಮಾತ್ಮನನ್ನು ಸುಲಭವಾಗಿ ಗೆಲ್ಲಬಹುದೆಂದು ಹೇಳುತ್ತಾರೆ. ೧೨ನೇ ಶತಮಾನದ ವೀರಶೈವ ಸಾಧಕರೆಲ್ಲರಲ್ಲಿ ಈ ಭಾವವಿದ್ದುದನ್ನು ನಾವು ಕಾಣುತ್ತೇವೆ. ಉರಿಲಿಂಗದೇವ, ಗಜೇಶಮಸಣಯ್ಯ, ಅಕ್ಕಮಹಾದೇವಿ ಬಸವಣ್ಣ ಇವರೆಲ್ಲ 'ಲಿಂಗಪತಿ'ಯ ಸೇವಕಸತಿಯರು. ಪರಮಾತ್ಮನ ಸಾಧನೆಗೆ ಅವನೊಡನೆ ಬೆರೆಯುವ ಬಯಕೆಗೆ ತೀವ್ರ ಪ್ರಯತ್ನ. ಆತನ ಒಲುಮೆ ಎಂದಾದೀತೆಂಬ ಹಂಬಲ ನಿರಂತರ ಬಸವಣ್ಣನವರ ಈ ವಚನ ಅವರು ಪರಮಾತ್ಮನ ಕರುಣೆಗೆ ಸಾರಿ ಕಾಯುವ ಸ್ಥಿತಿಯನ್ನು ವರ್ಣಿಸುತ್ತದೆಯಲ್ಲದೆ; ಗಂಡನ ಪರಿಯನ್ನು ಇನ್ನೂ ಪರಿಣಾಮಕಾರಿಯಾಗಿ ಇದು ನಿರೂಪಿಸುತ್ತದೆ.

ಬಸವಣ್ಣ ತನ್ನ ಅಂತರಂಗದ ಮನೆಯನ್ನು ಶೃಂಗರಿಸಿ ಕಿಚ್ಚಿಲ್ಲದ ಬೇಗೆಯಲ್ಲಿ ಬಸವಳಿದು ಕಂಗಳೇ ಪ್ರಾಣವಾಗಿ ಕಾಯುತ್ತಿದ್ದುದಾಗಿ ಹೇಳಿಕೊಂಡಿದ್ದಾನೆ.

ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ!
ಅಂಗವಿದ್ಯೆಯನೊಲ್ಲ;
ಕಣ್ಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ;
ಕೈಯ ತೊಳೆದಲ್ಲದೆ ಮುಟ್ಟಲೀಯ
ಕಾಲ ತೊಳೆದಲ್ಲದೆ ಹೊದ್ದಲೀಯ!
ಇಂತೀ ಸರ್ವಾಂಗ ತಲೆದೊಳೆದ ಕಾರಣ
ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ

ಬಸವಣ್ಣ ಹೀಗೆ ಸತಿಪತಿಭಾವದಿಂದ ಕೂಡಲಸಂಗಮನಾಥನಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡ ಪ್ರಾರಂಭದಲ್ಲಿದ್ದ ದ್ವೈತಭಾವವಳಿದು ತಾನೇ ಆತ ಆತನೇ ತಾನು ಆಗಿ ಕರ್ಪೂರ ಉರಿಯಕಂಡಂತೆ ಉಪ್ಪಿನಗೊಂಬಿ ಸಮುದ್ರ ಹೊಕ್ಕಂತಹ ಭಾವ ಅವನಲ್ಲಿ ಬಂದಿದೆ.

ಏನೆಂಬೆ ಏನೆಂಬೆ ಒಂದೆರಡಾದುದ?
ಏನೆಂಬೆ ಏನೆಂಬೆ ಎರಡೊಂದಾದುದ?
ಏನೆಂಬೆ ಏನೆಂಬೆ ಅವಿರಳಘನವ
ಮಹಾದಾನಿ ಕೂಡಲಸಂಗಮ ದೇವಯ್ಯ ತಾನೇಬಲ್ಲ

ಎರಡು ಒಂದಾದ ಪರಿಯ ಹೇಳಲು ಬಾರದು ಬಸವಣ್ಣ 'ಏನೆಂಬೆ ಏನೆಂಬೆ' ಎಂದು ಹೇಳುವುದರಲ್ಲಿಯೇ ಹೇಳಬಾರದ ಧ್ವನಿಯಿದೆ? ಇದು ಶಬ್ದ ಮುಗ್ಧ ಸ್ಥಿತಿ. ಅತ್ಯುಚ್ಚ ಅನುಭವ.

ಬಸವಣ್ಣನೂ ಕೂಡ ಬುದ್ಧನಂತೆ ಜಗತ್ತಿಗಾಗಿ ದುಡಿಯಲು ಸಿದ್ಧನಾದವ. ತನಗೊದಗಿದ ಅತ್ಯುಚ್ಚ ಅನುಭವದಲ್ಲಿಯೇ ಮಗ್ನವಾಗಿ ಬಿಡದೆ ಲೋಕಕಲ್ಯಾಣಕ್ಕಾಗಿ ಶ್ರಮಿಸಿದ.

ಬಸವಣ್ಣ ನಮ್ಮಂತೆಯೇ ಹುಟ್ಟಿ ಬೆಳೆದವ. ಮನುಷ್ಯ ಸಹಜವಾದ ದೌರ್ಬಲ್ಯಗಳು ಅವನಲ್ಲಿಯೂ ಇದ್ದವು. ವಿಷಯಾದಿಗಳು ಅವನನ್ನೂ ಬಾಧಿಸುತ್ತಿರುವುದರಿಂದಲೇ ಆತ ವಿಷಯವೆಂಬ ಹಸುರನ್ನು ಎನ್ನ ಮುಂದೆ ಪಸರಿಸದಿರಯ್ಯ ಪಶುವೇನ ಬಲ್ಲುದು ಹಸುರೆಂದೆಳಸುವುದು ಎಂದು ಹೇಳಿದ್ದಾನೆ. ಬಸವಣ್ಣ ಮನುಷ್ಯನಾಗಿ ಹುಟ್ಟಿಬಂದು ಮನುಷ್ಯತ್ವವನ್ನು ಮೀರಿ ಬೆಳೆದ. ವಿಷಯಾದಿಗಳನ್ನು ಜಯಿಸಿದ.

ಬಸವಣ್ಣನವರ ವ್ಯಕ್ತಿತ್ವದಲ್ಲಿ ಗಮನಿಸಬೇಕಾದ ಇನ್ನೊಂದು ಅತ್ಯಂತ ಮಹತ್ವದ ಸಂಗತಿಯೆಂದರೆ ಅವರು ಮೊದಲು ತಮ್ಮ ಆತ್ಮವಿಮರ್ಶೆಮಾಡಿಕೊಳ್ಳುವ ಗುಣಹೊಂದಿದ್ದುದು. ಮೊದಲು ತಮ್ಮನ್ನು ತಿದ್ದಿಕೊಳ್ಳಲು ಪ್ರಯತ್ನಿಸಿದರು. ಲೋಕದ ಡೊಂಕ ನೀವೇಕೆ ತಿದ್ದುವಿರಿ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ ಎಂದು ಹೇಳಿದ್ದು ತಮ್ಮ ಸ್ವಾನುಭವದಿಂದಲೇ ತನ್ನಲ್ಲಿರುವ ಲೋಪ-ದೋಷಗಳನ್ನು ಜನ ಎತ್ತಿ ತೋರಿದರೆ ನಿಜವಾಗಿ ಅವರೇ ತಮ್ಮ ಬಂಧುಗಳೆಂದು ಭಾವಿಸುತ್ತಿದ್ದರು.

ಹೊಯಿದವರೆನ್ನ ಹೊರೆದವರೆಂಬೆನು
ಬಯಿದವರೆನ್ನ ಬಂಧುಗಳೆಂಬೆನು
ನಿಂದಿಸಿದವರೆನ್ನ ತಾಯಿತಂದೆಗಳೆಂಬೆ
ಆಳಿಗೊಂಡವರೆನ್ನ ಆಳ್ದರೆಂಬೆ
ಕೊಂಡಾಡಿದವರೆನ್ನ ಹೊನ್ನಶೂಲದಲಿಕ್ಕಿದವರು
ಕೂಡಲ ಸಂಗಮದೇವಾ

ಎಂದು ಹೇಳಿದ್ದಾರೆ ಇದು ಒಂದರ್ಥದಲ್ಲಿ ಎಚ್ಚರಿಕೆ ಸಾಧಕ ಹೊಗಳಿಕೆಗೆ ಒಳಗಾಗದೆ ತೆಗಳಿಕೆಗೆ ಬೀಳದೆ ಸಮಚಿತ್ತದಿಂದ ತನ್ನ ಗುರಿಯತ್ತ ಸಾಗಬೇಕೆಂಬುದನ್ನು ತುಂಬ ಮಾರ್ಮಿಕವಾಗಿ ಬಸವಣ್ಣ ಇಲ್ಲಿ ಹೇಳಿದ್ದಾನೆ.

ಬಸವಣ್ಣನವರ ವ್ಯಕ್ತಿತ್ವದ ಇನ್ನೊಂದು ಮುಖ್ಯ ಅಂಶವೆಂದರೆ ಅವರ ವಿನಯ. 'ಶರಣ' ಎಂದು ಯಾರಾದರೂ ಕರೆದರೆ ಶರಣು ಶರಣಾರ್ಥಿ ಎನ್ನುವವ. ಭಕ್ತಿಯ ಭಂಡಾರಿ. ಭಕ್ತರು ಇವರ ಮನೆಯಲ್ಲಿ ಲಿಂಗ ಪೂಜಾರ್ಚನೆಯಲ್ಲಿ ತೊಡಗಿದ್ದರೆ ಈತ ಹೊರಗೆ ನಿಂತು 'ಸಂಬೋಳಿ ಸಂಬೋಳಿ' ಎಂದು ಬಾಗಿಲು ಕಾಯುತ್ತಿದ್ದ. ಅಯ್ಯಾ ಎಂದೊಡೆ ಸ್ವರ್ಗ ಎಲವೋ ಎಂದೊಡೆ ನರಕ; ಮೃದು ವಚನವೇ ಸಕಲ ಜಪಂಗಳಯ್ಯ ಮೃದು ವಚನಗಳೇ ಸಕಲ ತಪಂಗಳಯ್ಯಾ ಎಂಬ ಧೋರಣೆ ಅವರದು. ಮನೆಗೆ ಬಂದವರನ್ನು ಅತ್ಯಂತ ವಿನಯದಿಂದ ಮಾತನಾಡಿಸುವವರು. ಇತರರಿಗೂ ಹಾಗೆ ಇರುವಂತೆ ಬೋಧಿಸಿದರು.

'ಏನಿ ಬಂದಿರಿ ಹದುಳವಿದ್ದಿರಿ' ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೇ?
ಕುಳ್ಳಿರೆಂದರೆ ನೆಲಕುಳಿ ಹೋಹುದೇ?
ಒಡನೆ ನುಡಿದರೆ ಶಿರಹೊಟ್ಟೆಯೊಡೆವುದೇ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ
ಕೆಡಹಿ ಮೂಗಕೊಯ್ಯದೆ ಮಾಣ್ಬನೆ ಕೂಡಲಸಂಗಮ ದೇವನು!

ಮನೆಗೆ ಬಂದ ಅತಿಥಿಗಳೊಂದಿಗೆ ಮಾತನಾಡುವ ವ್ಯವಹರಿಸುವ ರೀತಿಯನ್ನು ಬಸವಣ್ಣ

ಇಲ್ಲಿ ಹೇಳಿದ್ದಾನೆ. ಯಾರ ಮನಸ್ಸು ನೋಯಬಾರದು. ನಮ್ಮ ಮಾತು 'ನುಡಿದರೆ ಮುತ್ತಿನ ಹಾರದಂತೆ ಇರಬೇಕು' ಎಂಬ ಆಶಯ ಬಸವಣ್ಣನವರದು. ಹೀಗೆ ಲೋಕವನ್ನೂ ತಮ್ಮನ್ನೂ ತಿದ್ದಿಕೊಳ್ಳುತ್ತಲೇ ಅನುಪಮ ಸಿದ್ಧಿಯನ್ನು ಸಾಧಿಸಿದರು.

ಬಸವಣ್ಣನಲ್ಲಿ ಶ್ರೇಷ್ಠನಾಯಕನಲ್ಲಿ ಇರಬೇಕಾದ ಎಲ್ಲ ಗುಣಗಳಿದ್ದವು. ವಿನಯ, ತ್ಯಾಗ, ನಿಷ್ಠೆ, ಭಕ್ತಿ, ಮುಕ್ತ ಮನಸ್ಸು ಮೃದುತ್ವ, ಸೇವಾಮನೋಭಾವ ಇವುಗಳಿಂದಾಗಿ ನಾಡಿನ ಹಲವು ಮಹಂತರುಗಳನ್ನು ಇವರು ಆಕರ್ಷಿಸಿದರು. ಈ ಲೋಕದಲ್ಲಿದ್ದುಕೊಂಡೇ ಏನೆಲ್ಲ ಸಾಧಿಸ ಬಹುದೆಂಬುದನ್ನು ತೋರಿಸಿಕೊಟ್ಟರು ಮರ್ತ್ಯಲೋಕಕ್ಕೆ ಸ್ವರ್ಗಲೋಕಕ್ಕೆ ಬಸವಣ್ಣ ನಿಚ್ಚಣಿಕೆಯಾದರು ಆದ್ದರಿಂದ ಲಕ್ಷಾಂತರ ಭಕ್ತರು ಅನುಭವ ಮಂಟಪದಲ್ಲಿ ಸೇರಿ ಆತ್ಮಜ್ಞಾನಕುರಿತು ಚಿಂತನ ನಡೆಸಿದರು. ಬಸವಣ್ಣನ ಮುಖಂಡತ್ವದಲ್ಲಿ ಕರ್ನಾಟಕದಲ್ಲಿ ಜರುಗಿದ ಈ ಸಮಗ್ರ ಕ್ರಾಂತಿ (Total revelution) ಇತರರಿಗೆ ಮಾದರಿಯಾಗಿದೆ!

❑

ಬಸವಣ್ಣನವರು ಮತ್ತು ಸ್ತ್ರೀ ಸಮಾಜ

●

ಡಾ. ಬಸವರಾಜ ಪೋಲಿಸ ಪಾಟೀಲ್

ಸ್ತ್ರೀ ತನ್ನ ಹುಟ್ಟಿನಿಂದ ಸಾವಿನವರೆಗೆ ತಂದೆ-ತಾಯಿ ಪತಿ, ಮಕ್ಕಳ ಆಶ್ರಯದಲ್ಲಿ ಬಾಳಬೇಕಾದ್ದರಿಂದ ಅವಳಿಗೆ ಸ್ವಾತಂತ್ರ್ಯ ಯಾಕೆ ಬೇಕೆಂದು ಪ್ರಶ್ನಿಸಿದವರು ಒಬ್ಬರಾದರೆ, ಅವಳ ಬುದ್ಧಿ ಮೊಳಕಾಲ ಕೆಳಗೆಂದು ಗೇಲಿ ಮಾಡಿಕೊಂಡು ಬಂದವರು ಇನ್ನೊಬ್ಬರು- ಇಂಥವರ ಮಧ್ಯದಲ್ಲೂ ಪ್ರಾಚೀನ ಸ್ತ್ರೀ ಬದುಕಿಕೊಂಡು ಬಂದಿದ್ದಾಳೆ. ಮಗುವಿನ ಸರ್ವತೋಮುಖ ಏಳ್ಗೆಗೆ ಕಂಕಣಬದ್ಧಳಾಗಿ ಶ್ರಮಿಸುವುದನ್ನು ಕಂಡೂ ಈ ರೀತಿ ಮಾತನಾಡಿದ್ದಾರೆ. ಆಕೆ ಪುರುಷನ ಅರ್ಧಾಂಗಿಯಾದರೂ ಅವಳಿಗೆ ಅರ್ಧ ಹಕ್ಕು ಕೊಟ್ಟು ನೋಡುವ ಹಿರಿಮೆ ಪುರುಷ ಪ್ರತಿಷ್ಠೆಗೆ ಸರಿಬರಲಿಲ್ಲವೆನಿಸುತ್ತದೆ.

ಮೈತ್ರೇಯಿ, ಗಾರ್ಗೇಯಿಯಂತಹ ಪ್ರತಿಭಾನ್ವಿತ ಮಹಿಳೆಯರು ಬಾಳಿಹೋದ ನಾಡಿನಲ್ಲಿಯೇ ನಮ್ಮ ಸ್ತ್ರೀಯರು ಸ್ತ್ರೀ ಸ್ವಾತಂತ್ರ್ಯದಿಂದ ವಂಚಿತರಾದುದು ವಿಪರ್ಯಾಸ. ಹಲವು ಋಷಿಗಳು, ಕವಿಗಳು, ಮಹಾರಾಜರು ತಮ್ಮ ತಮ್ಮ ಪತ್ನಿಯರ ಪ್ರೇರಣೆಯಿಂದ ನಾಡಿನುದ್ದಕ್ಕೂ ಖ್ಯಾತಿ ಗಳಿಸಿದ ಐತಿಹಾಸಿಕ ಆಧಾರಗಳು ಸಾಕಷ್ಟಿವೆ. ಅವರ ಏಳ್ಗೆಯ ಹಿನ್ನೆಲೆಯಲ್ಲಿ ಸ್ತ್ರೀಯರು ನರ-ನಾಡಿಯಾಗಿ ಮಿಡಿದಿದ್ದಾರೆ. ಎಲೆಮರೆಯ ಕಾಯಿಯಂತೆ ಅವರ ವ್ಯಕ್ತಿತ್ವ ವಿಕಾಸದಲ್ಲಿ ದುಡಿದಿದ್ದಾರೆ.

ಭಾರತೀಯ ಸ್ತ್ರೀಯರ ಆದರ್ಶಕ್ಕೆ ಹೆಸರಾದ ಸೀತೆ, ದ್ರೌಪದಿಯರು ಇಂದಿಗೂ ನಮಗೆಲ್ಲ ಪ್ರಾತಃಸ್ಮರಣೀಯರಾಗಿ ಉಳಿದಿದ್ದಾರೆ. ನಾಟ್ಯಕಲೆಗೆ ಹೆಸರಾಗಿ ಬೆಳೆದ ಪಟ್ಟದ ರಾಣಿ ಶಾಂತಲಾದೇವಿ, ಶೂರ-ವೀರತನಕ್ಕೆ ಹೆಸರಾದ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ ಪ್ರಖ್ಯಾತರೆನಿಸಿದ್ದಾರೆ, ಸ್ತ್ರೀ ಶಿರೋಮಣಿಗಳಾದ ಕಾರಿಕಾಲಮ್ಮೆ, ಆಂಡಾಳ್, ಲಲ್ಲೇಶ್ವರಿ, ಮೀರಾಬಾಯಿ, ಅಕ್ಕಮಹಾದೇವಿ ಮುಂತಾದವರು ಅನುಭಾವ ಕವಯಿತ್ರಿಯರಾಗಿ ಬಾಳಿ ಬೆಳಗಿದ್ದಾರೆ. ಇತ್ತೀಚಿನ ಇಂದಿರಾಗಾಂಧಿಯಂಥ ಹಲವು ಸ್ತ್ರೀಯರು ಪುರುಷ ಸಾಮರ್ಥ್ಯವನ್ನು ಮೀರಿ ತಮ್ಮ ವ್ಯಕ್ತಿತ್ವವನ್ನು ತೋರಿಸಿದ್ದಾರೆ. ಹೀಗೆ ಇವರೆಲ್ಲ ಪ್ರತಿಭೆ, ಕವಿತ್ವ, ರಾಜಕೀಯ ನೈಪುಣ್ಯ, ಶಕ್ತಿ-ಸಾಹಸದಲ್ಲಿ ಹೆಚ್ಚು ಹೆಸರಾದವರು. ಇವರ ಈ ಸಾಧನೆಯಿಂದ ಅವರ ಪತಿಯಂದಿರರಿಗೂ ಒಂದು ವಿಶೇಷತೆ ಬಂದಿತು.

ಜನಪದ ಸಾಹಿತ್ಯ ಸೃಷ್ಟಿಯಲ್ಲಿನ ಸಿಂಹಪಾಲು ಹೆಣ್ಣುಮಕ್ಕಳ ಹಾಡುಗಳಿಗೆ ಸೀಮಿತ ವಾಗುತ್ತದೆ. ವಿವಿಧ ಸಂಪ್ರದಾಯ, ಸಂದರ್ಭಗಳಿಗೆ ತಕ್ಕಂತೆ ಹಾಡು ರಚಿಸುವ, ಕಲಾತ್ಮಕವಾಗಿ ಹೇಳುವ ನೈಪುಣ್ಯವನ್ನು ಹೆಣ್ಣುಮಕ್ಕಳು ಸಾಧಿಸಿಕೊಂಡು ಬಂದಿದ್ದಾರೆ. ಅನಾಮಧೇಯವಾದ ಹಾಡುಗಳೆಲ್ಲ ಹೆಣ್ಣಿನ ನಿರಾಡಂಬರತೆಗೆ ಸಾಕ್ಷಿಯಾಗಿ ನಿಂತಿವೆ. ನೂರಾರು ನುಡಿಗಳ ಹಾಡುಗಳನ್ನು ತುದಿನಾಲಿಗೆಯ ಮೇಲಿಟ್ಟು ಒಂದಕ್ಷರವೂ ಮುಕ್ಕಾಗದಂತೆ ಸುಂದರವಾಗಿ ಹೇಳುವ ಅಗಾಧ ಜ್ಞಾಪಕಶಕ್ತಿಯುಳ್ಳ ಸ್ತ್ರೀಯರು ಈಗಲೂ ನಮ್ಮಲ್ಲಿದ್ದಾರೆ. ಹಾಡುಗಳ ರಚನೆಯಲ್ಲಿ ಸ್ತ್ರೀಯ ಪ್ರತಿಭೆ ಗರಿಗೆದರಿದ್ದುದು ಇಲ್ಲಿ ಸ್ಪಷ್ಟವಾಗುತ್ತದೆ.

ಸಮಾಜದ ವಿವಿಧ ರಂಗಗಳಲ್ಲಿ ಸ್ತ್ರೀ ಸಾಕಷ್ಟು ಪ್ರಗತಿಪರ ಕಾರ್ಯ ಮಾಡಿದರೂ ಸ್ವತಂತ್ರವಾಗಿ ಅಭಿವ್ಯಕ್ತಿಸುವ, ಸಮಾಜದ ಹೊರಗಡೆ ಬಂದು ತಿಳಿಸುವ ಅವಕಾಶ ದೊರೆಯದೇ ಹೋಯಿತು. ಉಸಿರುಗಟ್ಟುವ ವಾತಾವರಣದಲ್ಲಿ ತನ್ನ ಭಾವನೆಗಳಿಗೆ ಕಡಿವಾಣ ಹಾಕಿಕೊಂಡು ಬಂದಳು.

ಆದರಿಂದು ಅವಳಿಗೆ ವಾತಾವರಣ ತಿಳಿಯಾಗಿದೆ. ತನ್ನ ಅನಿಸಿಕೆಗಳನ್ನು ನೇರವಾಗಿ ಹೇಳುವ ಮುಕ್ತ ಅವಕಾಶ ಲಭ್ಯವಾಗಿದೆ. ಸರ್ವಾಂಗ ಸುಂದರವಾಗಿ ಬೆಳೆಯುವ ಸದಾವಕಾಶ ಸಮಾಜ ಇಂದು ಕಲ್ಪಿಸಿಕೊಟ್ಟಿದೆ. ಉದ್ಯೋಗದಲ್ಲಿ ಮೀಸಲಾತಿ, ಆಸ್ತಿಯಲ್ಲಿ ಹಕ್ಕು, ವರದಕ್ಷಿಣೆ ನಿಷೇಧ ಹೀಗೆ ಹಲವು ಸುವರ್ಣಾವಕಾಶಗಳು ದೊರೆತು ಪುರುಷನ ಸರಿಸಮಾನವಾಗಿ ಆಕೆಯೂ ಬೆಳೆಯುತ್ತಿದ್ದಾಳೆ.

ಆಧುನಿಕ ಸ್ತ್ರೀಗೆ ಇಂತಹ ವೈಚಾರಿಕ ಸ್ವಾತಂತ್ರ್ಯ ಲಭಿಸುವುದಕ್ಕೆ ಹನ್ನೆರಡನೆಯ ಶತಮಾನದ ಬಸವಣ್ಣನವರ ನೇತೃತ್ವದ ಕ್ರಾಂತಿಯೇ ಪ್ರಮುಖ ಕಾರಣ. ಅಂದಿನ ಅವರ ಮುಂಚೂಣಿಯಲ್ಲಿನ ಹೋರಾಟ ಸ್ತ್ರೀ ಸಮಾಜ ರಚನೆಗೆ ಎಂತಹ ಪೂರಕ ಎಂದರಿಯುವುದೇ ಪ್ರಸ್ತುತ ಲೇಖನದ ಉದ್ದೇಶ.

ಬಸವಣ್ಣನವರು ಮತ್ತು ಸ್ತ್ರೀ ಸಮಾಜ

ಪರವಧುವನು ಮಹಾದೇವಿ ಎಂದು ಕಾಣುವ, ಪರಸ್ತ್ರೀ ಎಂಬ ಜೂಬಿ ಗಂಜುವ, ಪರಸ್ತ್ರೀಯರ ಬೇಟಕ್ಕೆಳಸದ, ತುಡುಗುಣಿತನದಲ್ಲಿ ಪರವಧುವ ನೋಡದ ಮನೋಭಾವ ಮೂಡಬೇಕೆನ್ನುವ ಪರಿಶುದ್ಧವಾಣಿ ಬಸವಣ್ಣನವರಿಂದ ಹೊರಹೊಮ್ಮಿ ಕ್ರಿಯೆಗಿಳಿಯಿತು. ಇಂತಹ ನೆಲೆಗಟ್ಟಿನ ಮೇಲೆ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡ ಅವರು ಈ ಹಿನ್ನೆಲೆಯಲ್ಲಿ ಸ್ತ್ರೀ ಜನಾಂಗದ ಕಣ್ಣಾಗಿ ನಿಂತರು. ಅಂಧಕಾರದಲ್ಲಿದ್ದ ಸ್ತ್ರೀ, ಸಮಾಜದ ಬಾಳಿಗೆ ಅಣ್ಣನಾಗಿ ಕಂಗೊಳಿಸಿದರು.

ಆ ಸಮಾಜ ರಚನೆಯ ಕೆಲಸಕ್ಕೆ 'ಅನುಭವ ಮಂಟಪ' ಕೇಂದ್ರ ಸ್ಥಳವಾಯಿತು. ಇಲ್ಲಿನ ಮುಕ್ತ ಚರ್ಚೆಯಲ್ಲಿ ಭಾಗವಹಿಸುವ ಹಕ್ಕು ಅವರಿಗೆ ಬಸವಣ್ಣನವರಿಂದ ಲಭ್ಯವಾಯಿತು. ಬಸವಣ್ಣ ಬೆಳಗಿದ ಅನುಭವ ಮಂಟಪದ ಬೆಳಕಿನಲ್ಲಿ ಸ್ತ್ರೀಯರು ತಮ್ಮ ನೈಜ ಸ್ವರೂಪದ ವ್ಯಕ್ತಿತ್ವವನ್ನು ಪ್ರಕಟಿಸಿದರು.

ಬಸವಣ್ಣನವರ ಸ್ತ್ರೀ ಸಮಾಜ ರಚನೆಯ ದ್ಯೋತಕವಾಗಿ ಮಹಾದೇವಿಯಕ್ಕ, ಅಕ್ಕನಾಗಮ್ಮ, ನಾಗಲಾಂಬಿಕೆ, ಗಂಗಾಂಬಿಕೆ, ಮಹಾದೇವಿಯಮ್ಮ, ಮುಕ್ತಾಯಕ್ಕ, ಸತ್ಯಕ್ಕ,

ಲಕ್ಕಮ್ಮ, ಬೊಂತಾದೇವಿ, ಗೊಗ್ಗವ್ವೆ, ರೇಮ್ಮವ್ವೆ, ರೇಕಮ್ಮ, ಕಾಳವ್ವೆ; ಮಸಣಮ್ಮ, ವೀರಮ್ಮ, ಗುಡ್ಡವ್ವೆ, ಅಕ್ಕಮ್ಮ, ಸೂಳೆ ಸಂಕವ್ವೆ ಮುಂತಾದ ಶರಣೆಯರು ಅರಳಿ ಬಂದರು. ಅವರ ಆಧ್ಯಾತ್ಮಿಕ ಸಾಧನೆಯ ಪ್ರತಿರೂಪವೇ ವಚನಗಳಾಗಿ ಹೊರಬಂದವು. ಇವರಲ್ಲಿ ಹಲವರು ಪ್ರತಿಭಾನ್ವಿತ ವಚನಕಾರ್ತಿಯರಾಗಿ, ನೂರಾರು ವಚನಗಳನ್ನು ರಚಿಸಿ, ವಚನ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಯನ್ನು ಕೊಟ್ಟಿದ್ದಾರೆ. ಬಸವಣ್ಣನವರು ಅನುಭವ ಮಂಟಪದಲ್ಲಿ ಸ್ತ್ರೀಯರಿಗೆ ಪ್ರವೇಶಾವಕಾಶ ನೀಡಿದ್ದರ ಪ್ರತಿಫಲ ಇದು.

'ಸಮಾಜದಲ್ಲಿ ಹೆಣ್ಣಿಗೆ ಕೊಟ್ಟ ಸ್ಥಾನ–ಮಾನ ಆ ಸಮಾಜದ ಸಂಸ್ಕೃತಿಯ ದಿಕ್ಸೂಚಿ' ಎಂದು ಹೇಳುವ ಆಂಗ್ಲ ಕವಿಯ ಮಾತಿನಲ್ಲಿ ಬಸವಣ್ಣನವರು ರಚಿಸಿದ ಸ್ತ್ರೀ ಸಮಾಜದ ತತ್ವವೇ ಅಡಗಿದೆ. ಹೆಣ್ಣು ಪುರುಷನ ಅಸ್ತಿತ್ವದ ಒಂದು ಭಾಗ. ದೇವರು ಮೊದಲು ಪುರುಷನನ್ನು ಸೃಷ್ಟಿಸಿದ. ಅವನ ಒಂಟಿತನ ಸಹಿಸದೆ ಒಬ್ಬ ಸಂಗಾತಿ ಬೇಕೆಂದು ಆತನ ಎಡಭಾಗದ ಎಲುಬನ್ನು ಹೊರದೆಗೆದು, ಚೆಂದುಳ್ಳ ರೂಪುಕೊಟ್ಟು, ರೂಪಸಿಯಾದ ಹೆಣ್ಣಾಗುವಂತೆ ಅದಕ್ಕೆ ಜೀವ ತುಂಬಿದ ಎನ್ನುವ ಕಥೆ ಕಲ್ಪಿತವೆನಿಸಿದರೂ ಹೆಣ್ಣು–ಗಂಡಿನ ಜೀವನದ ಸಾಮರಸ್ಯವನ್ನು ಬಹು ಅರ್ಥಪೂರ್ಣವಾಗಿ ವರ್ಣಿಸುತ್ತದೆ.

ಇವೆರಡೂ ಒಂದೇ ಜೀವದ ಎರಡು ಭಾಗಗಳಂತಿವೆ. ಒಂದೇ ನಾಣ್ಯದ ಎರಡು ಮುಖಗಳಂತಿವೆ. ಸಂಸಾರ ಬಂಡಿಗೆ ಎರಡು ಗಾಲಿಗಳಂತೆ ಅವರ ಜೀವನ ಒಂದರೊಡನೊಂದು ಹಾಸುಹೊಕ್ಕಾಗಿ ಬೆಳೆದಿದೆ. ಈ ಎಲ್ಲದರ ಮರ್ಮವನ್ನರಿತಿದ್ದ ಬಸವಣ್ಣ ಸ್ತ್ರೀಗೆ ಸಮಾಜದಲ್ಲಿ ಒಳ್ಳೆಯ ಸ್ಥಾನ ದೊರೆಯಬೇಕೆಂದು ಹೋರಾಡಿ ಯಶ ಕಂಡ. ಅವರ ಏಳಿಗೆಗೆ, ಭವಿಷ್ಯ ನಿರ್ಮಾಣಕ್ಕೆ ಹಗಲಿರುಳು ದುಡಿದ. ಆ ಪರಿಣಾಮವಾಗಿ ಹೆಣ್ಣು ಪುರುಷನ ನಿಜವಾದ ಅರ್ಧಾಂಗಿಯಾಗುವಂತಾಯಿತು.

ಬಸವಣ್ಣ ಮುಂತಾದ ಶರಣರನ್ನು ಕಾಣಲು ಅಕ್ಕಮಹಾದೇವಿ ಕಲ್ಯಾಣಕ್ಕೆ ಬಂದಾಗ ಅವಳನ್ನು ನೋಡಿ ಬಸವಣ್ಣನವರು ಹಿರಿ ಹಿರಿ ಹಿಗ್ಗುವರು. ಅವಳ ಪರಿಚಯ ಅಲ್ಲಮಪ್ರಭುವಿಗೆ ಮಾಡಿಕೊಡುತ್ತ;

ಕಾಯದ ಲಜ್ಜೆಯ ಕಲ್ಪಿತವ ಕಳೆದು
ಜೀವನ ಲಜ್ಜೆಯ ಮೋಹವನಳಿದು
ಮನದ ಲಜ್ಜೆಯ ನೆನಹ ಸುಟ್ಟು
ಭಾವದ ಕೂಟ ಬತ್ತಲೆಯೆಂದರಿದು
ತವಕ ಸ್ನೇಹ ವ್ಯವಹಾರಕ್ಕೆ ಹೊಗದು
ಎನ್ನ 'ಹೆತ್ತ ತಾಯಿ ಮಹಾದೇವಿಯಕ್ಕ'ನ
ನಿಲವ ನೋಡಯ್ಯಾ ಪ್ರಭುವೆ.

ಎಂದು ಉತ್ಸಾಹ ತುಂಬಿ ಅವಳ ಬಗ್ಗೆ ಹೇಳಿದರೂ ಅದು ಇಡೀ ಸ್ತ್ರೀ ಜನಾಂಗವನ್ನು ಕುರಿತು ಪರಿಚಯಿಸಿದಂತಾಗಿದೆ.

ಸ್ತ್ರೀ ಕೇವಲ ಭೋಗದ ವಸ್ತುವಲ್ಲ; ಜೀವನದ ಮುನ್ನಡೆಗೆ ಕಾರಣೀಭೂತಳಾಗಿ, ತಾಯಿಯಾಗಿ ಕೈಹಿಡಿದು ನಡೆಸುವ ಅವಳ ಹೃದಯ ವೈಶಾಲ್ಯವನ್ನು ಕಂಡು 'ಎನ್ನ ಹೆತ್ತ ತಾಯಿ' ಎಂದು ಹೇಳುವ ವಿಭೂತಿ ಪುರುಷರಿವರು.

ಪ್ರತಿ ಪುರುಷ ಮಹಿಳೆಯರನ್ನೂ ಗೌರವಾದರಗಳಿಂದ ಕಾಣಬೇಕು, ಅವಳ ಏಳ್ಗೆಯನ್ನು ಕಣ್ತುಂಬ ನೋಡುವ ಮನೋಭಾವ ಬೆಳೆಸಿಕೊಳ್ಳಬೇಕೆಂದು ಬಯಸಿದವರು ಬಸವಣ್ಣನವರು. ಅವರ ಸ್ತ್ರೀ ಸಮಾಜ ರಚನೆಗೆ ಇದು ಮುಖ್ಯ ತಳಪಾಯವಾಯಿತು.

ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳ ಪ್ರಸಂಗ ಇಲ್ಲಿ ಸ್ಮರಣೀಯ, ಗಂಡನು ತಪ್ಪು ದಾರಿ ತುಳಿದಾಗ ಸತಿ ಅವನನ್ನು ತಿದ್ದಿ ಸುಮಾರ್ಗಕ್ಕೆ ಎಳೆದದ್ದು ಲಕ್ಕಮ್ಮಳ ವ್ಯಕ್ತಿತ್ವವನ್ನು ಸ್ಫುಟಗೊಳಿಸುತ್ತದೆ. ಬಸವಣ್ಣನವರ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ದಿನ ನಿತ್ಯ ತರುವುದಕ್ಕಿಂತ ಹೆಚ್ಚಿಗೆ ತಂದಾಗ ವಿಚಾರಶೀಲ ಸ್ತ್ರೀಯಳಾದ ಲಕ್ಕಮ್ಮ ಪತಿಯ ತಪ್ಪನ್ನು ಗುರುತಿಸುತ್ತಾ, ಆತನ ಅರಿವಿನ ಕಣ್ಣಾಗುತ್ತಾಳೆ. "ಅಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಗುಂಟೆ ಅಯ್ಯಾ.... ಈಸಕ್ಕಿಯಾಸೆ ನಿಮಗೇಕೆ?"

ಭಕ್ತರು ಕಾಯಕವೆಂದು ದಾಯದಾರಿಕೆಯಲ್ಲಿ ತಂದು
ದಾಸೋಹ ಮಾಡಬಹುದೆ?
ಒಮ್ಮನವ ತಂದು ಒಮ್ಮನದಲ್ಲಿಯೆ ಮಾಡಿ
ಇಮ್ಮನವಾಗದ ಮುನ್ನವೆ
ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ ಸಲಬೇಕು ಮಾರಯ್ಯಾ

ಎಂದು ತಿಳಿಹೇಳಿದಾಗ, ಪತಿ ಮಾರಯ್ಯನಿಗೆ ಜ್ಞಾನೋದಯವಾಗುತ್ತದೆ. ಹೆಚ್ಚಿಗೆ ತಂದ ಅಕ್ಕಿಯನ್ನು ಒಯ್ದು ಚೆಲ್ಲಿ ಬರುವನು. ಇದು ಬಸವಣ್ಣ ಸ್ಥಾಪಿಸಿದ ಸ್ತ್ರೀ ಸಮಾಜ ರಚನೆಯ ಯಶಸ್ಸಿನ ಸಂಕೇತ.

ಅಕ್ಕನಾಗಮ್ಮನಂತೂ ತನ್ನೆಲ್ಲ ಬೌದ್ಧಿಕ ಸಹಾಯ-ಸಹಕಾರಗಳನ್ನು ಬಸವಣ್ಣನಿಗೆ ನೀಡಿ ಆತನ ಸಮಾಜ ಸುಧಾರಣೆಗೆ ಚೇತನ ಶಕ್ತಿಯಾಗಿ ಮಿಡಿದಿದ್ದಾಳೆ. ಅವಳ ವಿಚಾರಗಳನ್ನು ತನ್ನ ವಿಚಾರಕ್ಕೆ ಅಳವಡಿಸಿಕೊಂಡು ಬಸವಣ್ಣ ಮುಂದುವರಿದಿದ್ದಾನೆ. ತಮ್ಮನ ಅಗಾಧ ವ್ಯಕ್ತಿತ್ವ, ಸಾಧನೆಯನ್ನು ಕಣ್ಣಾರೆ ಕಂಡು ಅಕ್ಕನಾಗಮ್ಮ ಬಹು ಅಭಿಮಾನ ತಳೆದಿದ್ದಾಳೆ. ಆಕೆಯ ದೃಷ್ಟಿಯಲ್ಲಿ ಬಸವಣ್ಣ ತಮ್ಮನಾಗಿರದೆ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಭಾವಿಸುತ್ತಾಳೆ. 'ಬಸವನ ಬೆಸಲಾದ ಬಾಣತಿ ನಾನಯ್ಯ' ಎಂದು ಭಾವಪೂರ್ಣಳಾಗುತ್ತಾಳೆ. ಅವನನ್ನು ಎಷ್ಟು ಕೊಂಡಾಡಿದರೂ ಅವಳಿಗೆ ತೃಪ್ತಿಯಿಲ್ಲ.

ಬಸವನ ಮುಖಸೆಜ್ಜೆ, ಬಸವನ ಅಮಳೋಕ್ಯ
ಬಸವನ ನಾನೆತ್ತಿ ಮುದ್ದಾಡಿಸುವೆನು
ಬಸವಾ, ಸಂಗನಬಸವಿದೇವಾ ಜಯತು
ಬಸವಾ, ಸಂಗನ ಬಸವಿದೇವಾ ಜಯತು
ಬಸವಗೂ ಎನಗೂ ಭಾವ ಭೇದವಿಲ್ಲ,
ಬಸವಗೂ ಎನಗೂ ರಾಸಿಕೂಟವುಂಟು
ಬಸವನ ಬೆಸಲಾದ ಬಾಣತಿ ನಾನಯ್ಯಾ
ಬಸವಾ! ಬಸವಾ! ಬಸವಾ!

ಬಸವಣ್ಣ ಅಕ್ಕನಾಗಮ್ಮನಿಗೆ ಕೇವಲ ತಮ್ಮನಾಗಿರದೆ, ಗುರುವಿನ ಸ್ಥಾನದಲ್ಲಿ ಕಂಗೊಳಿಸುತ್ತಿದ್ದ. ಆತನಿಂದ ಪಡೆದ ಅರಿವಿನ ಪ್ರತಿಫಲ ಎನ್ನುವಂತೆ ದಿವ್ಯಜ್ಞಾನಿ ಚೆನ್ನಬಸವಣ್ಣ ಅಕ್ಕನಾಗಮ್ಮಳ ಮಗನಾಗಿ ಜನಿಸಿ ಬರುತ್ತಾನೆ. ಬಸವಣ್ಣನವರ ಬಾಲ್ಯದಿಂದ, ಅವರ ವ್ಯಕ್ತಿತ್ವ ವಿಕಾಸದ

ಕೊನೆಯ ಹಂತದವರೆಗೂ ಜೊತೆಗೂಡಿ ಬಂದವಳು ಅಕ್ಕನಾಗಮ್ಮ. 'ಕರ್ಮಲತೆಯಂತಿರುವ ಜನ್ನಿವಾರಮಂ ಬಿಸುಟು' ಮನೆಯಿಂದ ಬಸವಣ್ಣ ಹೊರಬಿದ್ದಾಗ ಆತನ ಜೊತೆಯಲ್ಲಿಯೇ ನಾಗಮ್ಮ ಮನೆ ಹೊರಗಾಗುತ್ತಾಳೆ. ತಮ್ಮನ ಸಾಧನೆಯ ಪ್ರತಿ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಬರುತ್ತಾಳೆ.

ಕಲ್ಯಾಣ ಕ್ರಾಂತಿ ಜರುಗಿ, ಬಸವಣ್ಣ ಕಲ್ಯಾಣಬಿಟ್ಟು ಕಪ್ಪಡಿ ಸಂಗಮಕ್ಕೆ ಹೋಗುವಾಗ, ಕರುವನ್ನು ಕಳೆದುಕೊಂಡು ಹಂಬಲಿಸುವ ಹಸುವಿನ ಸ್ಥಿತಿ ಅಕ್ಕನಾಗಮ್ಮನದಾಗುತ್ತದೆ. ಆ ಸಂದರ್ಭದಲ್ಲಿ ಆಕೆ ನುಡಿದ ವಚನಗಳು ಕಂಗಳೇ ಕರಗಿ ನೀರಾಗುವಂತಿವೆ.

ಎಲೆ ಅಯ್ಯಾ ಪರಮ ಗುರುವೆ
ಆಹಾ! ಎನ್ನ ಅಂತರಂಗದ ಜ್ಯೋತಿಯೇ
ಎಂದು ಕಳವಳಿಸುವ ಅಕ್ಕ ನಾಗಮ್ಮನ ಸ್ಥಿತಿ ಕರುಣಾಮಯವಾಗಿದೆ.

ಸ್ತ್ರೀಯರಿಗೆ ಸ್ವಾತಂತ್ರ್ಯ ಲಭಿಸಬೇಕೆಂದು ಬಸವಣ್ಣನವರು ಕೇವಲ ಬಾಯಿಮಾತಿನಲ್ಲಿ ಗಗನಕ್ಕೆ ಏಣಿ ಹಾಕುವ ಕೆಲಸ ಮಾಡಲಿಲ್ಲ. ಅದನ್ನು ತಮ್ಮ ಸ್ವಂತ ಜೀವನದಲ್ಲಿ ಪ್ರಾಯೋಗಿಕವಾಗಿ ತಂದು ತೋರಿಸಿದರು.

ಹೀಗಾಗಿ ಅವರ ಸ್ತ್ರೀ ಸಮಾಜ ರಚನೆಗೆ ಅವರ ಮನೆಯೇ ಕಾರ್ಯ ಕ್ಷೇತ್ರವಾಯಿತು. ಬಸವಣ್ಣನವರ ಇಬ್ಬರು ಸತಿಯರು ನೀಲಾಂಬಿಕೆ ಮತ್ತು ಗಂಗಾಂಬಿಕೆ ಅವರ ಉದ್ದೇಶ ರಚನೆಯ ಮುಂಚೂಣಿಯಲ್ಲುಳಿಯುತ್ತಾರೆ. ತಮ್ಮ ಸಾಧನೆಯ ತತ್ವವನ್ನು ಇವರ ವ್ಯಕ್ತಿತ್ವದಲ್ಲಿ ಬಸವಣ್ಣನವರು ಕಾಣುತ್ತಾರೆ. ಅವರು ಹೊತ್ತು ವಿಕಾಸದ ತುತ್ತತುದಿಯ ಫಲವಾಗಿ ಇವರು ಕಂಗೊಳಿಸುತ್ತಾರೆ. ಅಷ್ಟೇ ಬಸವಣ್ಣನವರು ತಮ್ಮ ಕೀರ್ತಿಶಿಖರ ಮುಟ್ಟುವಲ್ಲಿ ನೀಲಾಂಬಿಕೆ ಅವರ ಜೀವನದಲ್ಲಿ ತೈಲವಾಗಿ, ಜ್ಯೋತಿಯಾಗಿ ಬೆಳಗಿದ್ದಾಳೆ.

ಒಂದು ದಿನ ಶರಣರ ವೇಷದಲ್ಲಿ ಕಳ್ಳನೊಬ್ಬ, ರಾತ್ರಿ ನೀಲಾಂಬಿಕೆ, ಬಸವಣ್ಣ ಮಲಗಿರುವಾಗ ಮೆಲ್ಲಗೆ ಬಂದು ನೀಲಾಂಬಿಕೆಯ ವಜ್ರದೋಲೆಗಳಿಗೆ ಕೈ ಹಾಕಿದಾಗ ಆಕೆ ಎಚ್ಚರಗೊಂಡು ಕಳ್ಳ ಕಳ್ಳ ಎಂದು ಚೀರಿಕೊಳ್ಳುತ್ತಾಳೆ. ಆಗ ಬಸವಣ್ಣ.

ಒಡನಿರ್ದ ಸತಿಯೆಂದು ನೆಚ್ಚಿರ್ದೆನಯ್ಯಾ
ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯ
ಅಯ್ಯೋ ನಮ್ಮಯ್ಯನ ಕೈ ನೊಂದಿತು
ತೆಗೆದು ಕೊಡಾ ಎಲಾ ಚಾಂಡಾಲಗಿತ್ತಿ

ಎಂದು ಗದರಿಸುತ್ತಾ, 'ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಆತ ಕೂಡಲಸಂಗಮದೇವನಲ್ಲದೆ ಬೇರಲ್ಲ' ಕೊಟ್ಟುಬಿಡು 'ಸಂಗನ ಕರಂ ನೊಂದುದು' ಎಂದು ಕೋಪಿಸಿಕೊಳ್ಳುತ್ತಾನೆ. ಆ ಕ್ಷಣವೇ ಓಲೆಗಳನ್ನು ಬಿಚ್ಚಿಕೊಡುತ್ತಾಳೆ.

ಹರಿಹರನ ರಗಳೆಯಲ್ಲಿ ಒಂದು ಘಟನೆ ಹೀಗೆ ಬರುತ್ತದೆ: ಸಂಗಮನಾಥ ವಿಟಜಂಗಮನ ವೇಷದಲ್ಲಿ ಬಂದು "ನಾನು ಹೆಂಗೂಸಿಲ್ಲದೆ ಒಂದಿರುಳೂ ಇರುವವನಲ್ಲ. ನನಗಿಂದು ಹೆಣ್ಣುಬೇಕು" ಎನ್ನುತ್ತಾನೆ. ಬೇಡಿದವರಿಗೆ ಬೇಡಿದ್ದನ್ನು ಕೊಡುವ ಬಸವಣ್ಣನ ಭಾಷೆಯ ಸತ್ವಪರೀಕ್ಷೆ ನಡೆಯುತ್ತದೆ. ಅಂದು ಊರೊಳಗೆ ಒಬ್ಬರೂ ಪುಣ್ಯಾಂಗನೆಯರು ದೊರೆಯುವದಿಲ್ಲ. ತನ್ನ ಸತಿ ಮಾಯಿದೇವಿಯನ್ನೇ (ನೀಲಲೋಚನೆ) ಕೊಡುವೆನೆಂದು ಬಸವಣ್ಣ ವಿಚಾರಿಸುತ್ತಾ

ಬರುತ್ತಾನೆ. ಈ ಕಡೆ ಆಕೆಯೂ "ಊರೊಳಗೆ ಪುಣ್ಯಾಂಗನೆಯರಿಲ್ಲ ದಿರ್ದೊಡೆನ್ನಂ ಜಂಗಮಕ್ಕೆ ಬಸವರಾಜಂ ಕೊಟ್ಟಲ್ಲದೆ ಮಾಣನೆಂದು ಸಿಂಗರಿಸಿಕೊಂಡು ಬಸವನ ಬರವಂ ಕಾದಿರ್ಪ ಸಮಯದೊಳು ಬಸವನು ಬರಲು ಇದಿರು ಬಂದು ನಡೆ ಬಸವ ಮನೋರಥಮಂ ಮಾಡಿದಪೆನೆಂದು ಹೇಳುತ್ತಾಳೆ. ಪತಿ ಹೇಳುವ ಮೊದಲೇ ಆಕೆ ಆತನ ಮನಸ್ಸಿನ ಇಂಗಿತವನ್ನರಿಯುತ್ತಾಳೆ. ವಿಟಜಂಗಮನ ಕೋಣೆಯನ್ನು ನೀಲಾಂಬಿಕೆ ಪ್ರವೇಶಿಸಿದಾಗ, ವಿಟಜಂಗಮ ಸಂಗಮನಾಥನಾಗಿ ಆಕೆಯನ್ನು 'ತಾಯೆ' ಎಂದು ಬಾಗುವಲ್ಲಿ ಪರ ಸ್ತ್ರೀಯರನ್ನು ಯಾವ ರೀತಿ ಕಾಣಬೇಕೆನ್ನುವುದರ ಇನ್ನೊಂದು ಪರಿಚಯ ಇಲ್ಲಿ ನಮಗಾಗುತ್ತದೆ.

ಬಸವಣ್ಣನ ದಾಸೋಹ ಕಾರ್ಯದಲ್ಲಿ ಅವಿರತವಾಗಿ ದುಡಿದ ನೀಲಾಂಬಿಕೆ ಅಂದಿನ ಎಲ್ಲ ಜಂಗಮರಿಗೆ, ಶರಣ-ಶರಣೆಯರಿಗೆ ತಾಯಿಯಂತಿದ್ದಳು. ಸಿದ್ಧರಾಮ. ಅಕ್ಕಮಹಾದೇವಿ ಮುಂತಾದವರು ಆಕೆಯನ್ನು ತಾಯಿಯೆಂದು ಗೌರವಿಸಿದ್ದಾರೆ. ಜನಪದ ಹಾಡುಗಳಂತೂ ಇವಳನ್ನು ಮಹಾಶರಣೆಯೆಂದು ಬಣ್ಣಿಸಿವೆ. ಶ್ರೀಸಾಮಾನ್ಯರ ಮುಗ್ಧ ಮನಸ್ಸಿನ ಮೇಲೆ ನೀಲಾಂಬಿಕೆಯ ವ್ಯಕ್ತಿತ್ವ ಅಚ್ಚಳಿಯದೆ ಉಳಿದಿದೆ. ನೀಲಾಂಬಿಕೆ ಅಂದಿನ ಶ್ರೇಷ್ಠ ಅನುಭಾವಿಗಳಲ್ಲಿ ಒಬ್ಬಳಾಗಿದ್ದಳು ಎನ್ನುವುದಕ್ಕೆ ಒಬ್ಬ ಶರಣ ಈ ರೀತಿ ಹೇಳುತ್ತಾನೆ.

ಪ್ರಭುವಿನ ವಾದದಿಂದ ವೈರಾಗ್ಯ ಸಂಪತ್ತು
ಬಸವನ ವಾದದಿಂದ ಭಕ್ತಿ ಸಂಪತ್ತು
ಚೆನ್ನಬಸವನ ವಾದದಿಂದ ಶಿವಪ್ರಸಾದ ಸಂಪತ್ತು
ಮಡಿವಾಳಯ್ಯನ ವಾದದಿಂದ ಜ್ಞಾನ ಸಂಪತ್ತು
ನೀಲಮ್ಮನ ವಾದದಿಂದ ಲಿಂಗಪೂಜೆಯ ಸಂಪತ್ತು"

ಒಂದು ಮನೆಯಲ್ಲಿನ ಸ್ತ್ರೀಯರು ಅಂದು ಒಬ್ಬರಿಗೊಬ್ಬರು ಹೇಗೆ ಸಮರಸದಿಂದ ಬಾಳುತ್ತಿದ್ದರು ಎನ್ನುವುದಕ್ಕೆ ಅಕ್ಕನಾಗಮ್ಮ ಐಕ್ಯವಾದ ವಿಷಯ ತಿಳಿದು ನೀಲಾಂಬಿಕೆ ಪ್ರಲಾಪಿಸುವ ಪ್ರಸಂಗ;

ಎನಗೆ ಹಾಲೂಟವನಿಕ್ಕುವ ತಾಯೆ
ಎನಗೆ ಪರಿಣಾಮ ತೋರುವ ತಾಯೆ
ಪರಮ ಸುಖದೊಳಗಿಪ್ಪ ತಾಯೆ
ಪರವಸ್ತುವ ನಂಬಿದ ತಾಯೆ
ಬಸವನ ಗುರು ತಾಯೆ
ಸಂಗಯ್ಯನಲ್ಲಿ ಸ್ವಯಂ ಲಿಂಗಿಯಾದೆಯಾ
ಅಕ್ಕನಾಗಮ್ಮ ತಾಯೆ!

ಇಲ್ಲಿ ಅವರು ತಮ್ಮ ಕೌಟುಂಬಿಕ ಸಾಮರಸ್ಯ ಕಾಪಾಡಿಕೊಂಡು ಬರುವುದರ ಜೊತೆಗೆ ಅವರಲ್ಲಿನ ವೈಚಾರಿಕ ಪ್ರಜ್ಞೆಯ ಅರಿವೂ ನಮಗಾಗುತ್ತದೆ.

ಬಸವಣ್ಣನವರು ತಮ್ಮ ಜೀವಿತದ ಕೊನೆಯ ದಿನಗಳನ್ನು ಕಳೆಯಲು ಕೂಡಲ ಸಂಗಮದ ಕಡೆಗೆ ಹೊರಟಾಗ ಎದಿರು ಬಂದ ಹಡಪದ ಅಪ್ಪಣ್ಣನನ್ನು ಕುರಿತು, ನೀಲಾಂಬಿಕೆಯನ್ನು ಅಲ್ಲಿಗೆ ಕರೆತರಲು ಹೇಳಿ ಹೋಗುತ್ತಾರೆ. ಆತ ಬಂದು ಈ ವಿಷಯ ತಿಳಿಸಿದಾಗ, ತನ್ನ ಪ್ರಾಣದಂತಿರುವ ಪತಿಯ ಅಗಲುವಿಕೆಯಿಂದ ನೀಲಾಂಬಿಕೆ ಆಘಾತಕ್ಕೊಳಗಾಗುತ್ತಾಳೆ.

ಅಟ್ಟಡವಿಯಲ್ಲಿ ಬಿಟ್ಟು ಹೋದಿರಿ ಬಸವಯ್ಯ
ನಟ್ಟ ನಡುಗ್ರಾಮವ ಕೆಡಿಸಿ ಹೋದಿರಿಬಸವಯ್ಯ

ಎಂದು ದುಃಖಿಸುತ್ತಾಳೆ. ಪತಿ ಬರಲು ತಿಳಿಸಿದನೆಂದು ಒಮ್ಮೆಲೆ ಸಿದ್ಧಳಾಗಿ ಹೋಗದೆ ತನ್ನ ವ್ಯಕ್ತಿತ್ವವ ಮೆರೆಯುತ್ತಾಳೆ.

ಅಂಗೈಯಲ್ಲಿನ ಲಿಂಗವನ್ನು ಸಂಬೋಧಿಸುತ್ತ,
ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯ ಮಾಡಿದಾಟವ
ಅಲ್ಲಿಗೆನ್ನನು ಬರಹೇಳಿದರಂತೆ
ಇಲ್ಲಿ ತಾವಿಲ್ಲದೆ ಸಂಗಯ್ಯನು
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು
ಬಲ್ಲ ಮಹಾತ್ಮರಿಗಿದು ಗುಣವೆ?

ಎಲ್ಲವನ್ನೂ ತಿಳಿದ ಬಸವಣ್ಣನಿಗೇಕೆ ಈ ಭೇದ ಬಂದಿತೆಂದು ತನ್ನ ಲಿಂಗದಲ್ಲಿಯೇ ಐಕ್ಯಳಾಗುತ್ತಾಳೆ. ಇದು ಬಸವಣ್ಣ ನಡೆಸಿದ ಆಕೆಯ ಸತ್ವ ಪರೀಕ್ಷೆಯೂ ಆಗಿರಬಹುದು. ಆದರೆ ನೀಲಾಂಬಿಕೆಯ ಮನಸ್ಸಿನ ಪಕ್ವತೆ, ವಿಚಾರಶೀಲತೆ ಮಾಸುವುದಿಲ್ಲ.

ಬಸವಣ್ಣ ಸ್ತ್ರೀ ಸಮಾಜ ರಚನೆಯನ್ನು ಈ ಅರ್ಥದಲ್ಲಿ ಸ್ಥಾಪಿಸಿದ. ಸ್ತ್ರೀಯರಿಗೆ ವೈಚಾರಿಕ ಸ್ವಾತಂತ್ರ್ಯ ಲಭಿಸಬೇಕೆಂದು ಹೇಳಿದ. ಆದರಿಂದು ಅದು ಆಧುನಿಕ ಬೆಡಗು-ಬಿನ್ನಾಣಗಳಿಗೆ ಮಾರುಹೋಗಿ ಸ್ವೇಚ್ಛಾಚಾರವೇ ಸ್ವಾತಂತ್ರ್ಯ ಎನ್ನುವತ್ತ ವಾಲುತ್ತಿದೆ. ಇದು ದುರದೃಷ್ಟಕರ. ಆತ ಸ್ಥಾಪಿಸಿದ ಭದ್ರ ವೈಚಾರಿಕ ಸ್ತ್ರೀ ಸಮಾಜ ರಚನೆ ನಾಶವಾಗಿ ಹೋಗದಂತೆ, ಮೊದಲಿನ ಸತ್ವದಲ್ಲುಳಿಯುವಂತೆ ನೋಡಿಕೊಳ್ಳುವುದು ಇಂದಿನ ನಮ್ಮ ಕರ್ತವ್ಯಗಳಲ್ಲಿ ಒಂದಾಗಿದೆ.

❑

ಬಸವಣ್ಣನವರ ಆರ್ಥಿಕ ಧೋರಣೆ

●

ಡಾ. ಜಯಶ್ರೀ ದಂಡೆ

ಹಣ, ಸ್ಥಾನಮಾನ, ಅಧಿಕಾರ ಯಾರಿಗೆ ಬೇಡ? ಸಹಜವಾಗಿಯೇ ಎಲ್ಲರೂ ಅಪೇಕ್ಷಿಸುವ ಸಂಗತಿಗಳಿವು. ಹಾಗೆ ಬಯಸಿದ ಮಾತ್ರಕ್ಕೆ ಈ ಮೂರನ್ನೂ ದಕ್ಕಿಸಿಕೊಳ್ಳಲು, ಸಾಧ್ಯವೆ? ಎಂಬ ಪ್ರಶ್ನೆಯೂ ಜೊತೆಗೆ ಕಾಣಿಸಿಕೊಳ್ಳುತ್ತದೆ. ವರ್ಣವ್ಯವಸ್ಥೆಯಾಧಾರಿತ ಕಾಲವೊಂದಿತ್ತು. ಜನ್ಮಜಾತವಾಗಿಯೇ ಈ ಮೂರು ಮೇಲ್ವರ್ಗದವರಿಗೆ ದೊರಕುತ್ತಿದ್ದವು. ಹಣ, ಸ್ಥಾನಮಾನ, ಅಧಿಕಾರಗಳ ಗಳಿಕೆಗಾಗಿ ಕಷ್ಟಪಡಬೇಕಾದ ಪ್ರಮೇಯವೇ ಅವರಿಗೆ ಎದುರಾಗಲಿಲ್ಲ. ಈ ಎಲ್ಲ ಅನುಕೂಲತೆಯುಳ್ಳ ಮನೆತನದಲ್ಲಿಯೇ ಬಸವಣ್ಣನವರು ಜನಿಸಿದರು. ಪರಚಿಂತೆ ಇಲ್ಲದ ಆ ಕಾಲದಲ್ಲಿ ಸರ್ವಾನುಕೂಲತೆಯುಳ್ಳ ಕುಟುಂಬದಲ್ಲಿ ಜನಿಸಿ, ಹುಟ್ಟುತ್ತಲೇ ಸ್ಥಾನಮಾನ, ಅಧಿಕಾರ, ಹಣಕ್ಕೆ ಒಡೆಯರಾಗಿಯೂ ಏನೂ ಇಲ್ಲದ ಬಹುಸಂಖ್ಯಾತರ ಬದುಕಿನ ದಾರುಣತೆಯ ಬಗ್ಗೆ ಆಲೋಚಿಸಿದರಲ್ಲ, ಇದು ಅವರ ದೊಡ್ಡತನ ಮತ್ತು ಅವರ ಜೀವದಯಾಪರತೆಯ ಗುಣ. ತಾನೊಬ್ಬ, ತನ್ನವರು ಸುಖದಿಂದ ಇದ್ದೇವೆ ಸಾಕು, ಬೇರೆಯವರ ಗೊಡವೆ ನಮಗೇಕೆ ಬೇಕೆಂದು ಬಸವಣ್ಣನವರ ಮನಸ್ಸು ಅಷ್ಟಕ್ಕೇ ತೃಪ್ತಿಗೊಂಡಿದ್ದರೆ, ದೇಸೀ ಚಿಂತನೆಯುಳ್ಳ ಅಪರೂಪದ ಸಾಹಿತ್ಯ ಪ್ರಕಾರವಾಗಲಿ, ಸುಂದರ ಸ್ವಯಂಸಂಪೂರ್ಣ ಸಮಾಜವಾಗಲಿ ನಿರ್ಮಾಣವಾಗುತ್ತಿರಲಿಲ್ಲವೇನೋ!! ಏಕೆ ಈ ಮಾತಿಗೆ ಬರಬೇಕಾಯಿತೆಂದರೆ ಸ್ಥಾನಮಾನ, ಅಧಿಕಾರ, ಹಣದೊಂದಿಗೆ ಸಾಹಿತ್ಯ ನಿರ್ಮಿತಿಯ ಸ್ವತ್ತು ಮೇಲು ವರ್ಗದವರಿಗೇ ಮೀಸಲಾಗಿತ್ತು. ಅವರ ಪ್ರತಿಭೆಯನ್ನು ದಾಖಲಿಸಲು ರಾಜನ ಆಶ್ರಯ ಸಿಗುತ್ತಿತ್ತು. ರಾಜರು ಆಯ್ಕೆ ಮಾಡುವ ಪ್ರತಿಭಾ ಪರೀಕ್ಷೆಯ ಪಟ್ಟಿಯಲ್ಲಿ ಸಾಮಾನ್ಯ ವರ್ಗದವರ ಹೆಸರುಗಳು ಸೇರ್ಪಡೆಯಾಗುತ್ತಿರಲಿಲ್ಲ. ವಾಸ್ತವ ಬದುಕಿನ ದುರಂತದ, ಸುಖದ ಕ್ಷಣಗಳ ಅರಿವುಳ್ಳವರು ಪಂಡಿತನ ನಡುವಿನ ಅಭಿವ್ಯಕ್ತಿ ಸ್ವಾತಂತ್ರದಿಂದ ದೂರ ಉಳಿದರು. ಮೇಲ್ವರ್ಗದವರ ರಕ್ಷಣೆಯ ಹೊಣೆಗಾರಿಕೆ ಮಾತ್ರ ಇವರ ಮೇಲಿತ್ತು. ಆಸಮಾನತೆ ಬಸವಣ್ಣನವರ ಎಳೆಯ ಮನಸ್ಸಿನ ಮೇಲೆ ಬರೆಯೆಳೆದಂತೆನಿಸಿತು. ಸ್ವತಂತ್ರ ಅಭಿವ್ಯಕ್ತಿಗೆ ಬಂಧನವೆ? ದುಡಿಯುವ ವರ್ಗದವರೇ ಬಡವರೆ? ಅವರಿಗೆ ಸಮಾಜದಲ್ಲಿ ಸ್ಥಾನಮಾನವೇ ಇಲ್ಲವೆ? ಎಂದು ಚಿಂತಿಸತೊಡಗಿದರು. ಸಮಾಜ ಬಾಂಧವರನ್ನು ಇದರಿಂದ ಮುಕ್ತ ಗೊಳಿಸಲೇಬೇಕೆಂಬ ಛಲದಿಂದ ದಿಟ್ಟ ಹೆಜ್ಜೆಯನ್ನಿಟ್ಟರು.

ಉಳ್ಳವರ ಶೋಷಣೆಯೇ ಸಮಾಜದ ಏರುಪೇರಿಗೆ ಕಾರಣ ಎಂಬುದನ್ನರಿಯಲು ಬಸವಣ್ಣನವರಿಗೆ ಹೆಚ್ಚು ದಿನ ಹತ್ತಲಿಲ್ಲ. ಸ್ಥಾನಮಾನ, ಅಧಿಕಾರಕ್ಕಿಂತ ಹಣವೇ ಹೆಚ್ಚು ಪ್ರಭಾವಶಾಲಿಯಾದುದೆಂಬುದೂ ಅವರಿಗೆ ಗೊತ್ತಿತ್ತು. ದುಡ್ಡಿದ್ದವರಾರೇ ಆಗಿರಲಿ ಅವರು ದೊಡ್ಡಪ್ಪಗಳೇ. ಹಣದ ಈ ಗತ್ತು ಗಮ್ಮತ್ತು ಯಾವ ಕಾಲಕ್ಕೂ ಇದ್ದದ್ದೇ. ಇಂಥ ಸಂಕೀರ್ಣ, ವಿಷಮ ಪರಿಸ್ಥಿತಿಯಲ್ಲಿ ಇಲ್ಲದವರ, ಸಾಮಾನ್ಯರ ದನಿ ತಾವು ಆಗದೇ ಹೋದರೆ ಅವರೆಲ್ಲ ತಮ್ಮ ಮೌನ ಸಮಾಧಿಯಲ್ಲಿಯೇ ಹೂತುಹೋಗುತ್ತಾರೆ ಎನಿಸತೊಡಗಿತು. ಯೋಚಿಸಿದರೆ ಸಾಲದು ಅದು ಕ್ರಿಯೆಗೆ ಇಳಿಯಬೇಕು ಎಂದು ಬಸವಣ್ಣನವರು ನಿರ್ಧರಿಸಿಕೊಂಡರು. ಅವರಾಡುವ ಮಾತುಗಳು ಮುತ್ತು ಆದವು. ಸ್ಫಟಿಕದಂತೆ ಪಾರದರ್ಶಕವಾದವು. ತಮ್ಮ ಮೂರ್ಖತನಕ್ಕೆ ಸಾಮಾನ್ಯರು ನಾಚಿ ನೀರಾದರು. ಬಸವಣ್ಣನವರು ಸಾತ್ವಿಕ ಚಿಂತನೆಯನ್ನು ಅಹುದಹುದೆಂದು ಸ್ವೀಕರಿಸಿದರು.

ಸಮಾಜದ ಆರ್ಥಿಕ ಸ್ಥಿತಿಗತಿಯನ್ನು ಗಮನಿಸಿದ ಬಸವಣ್ಣನವರು ವಾಸ್ತವ ಮತ್ತು ತಾತ್ವಿಕ ನೆಲೆಗಳೆರಡರ ಮೂಲಕ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಜನರಲ್ಲಿ ವೈಚಾರಿಕತೆಯನ್ನು ಮೂಡಿಸಲು ಮುಂದಾದರು. ಲೌಕಿಕಕ್ಕೆ ಅಂಟಿಕೊಂಡು ಬಂದ ವಾಸ್ತವದ ಅರಿವಿಲ್ಲದೇ ಆರ್ಥಿಕ ಸಮಾನತೆಯ ತಾತ್ತ್ವಿಕ ಸಿದ್ಧಾಂತವನ್ನು ಜಾರಿಯಲ್ಲಿ ತರಲು ಸಾಧ್ಯವಾಗುವುದಿಲ್ಲ ಎಂಬುದು ಬಸವಣ್ಣನವರಿಗೆ ಚೆನ್ನಾಗಿ ತಿಳಿದಿತ್ತು. ಆ ಪಥದ ಜಾಡಿನಲ್ಲಿ ತಮ್ಮ ವೈಚಾರಿಕತೆಯ ಆಲೋಚನೆಗಳನ್ನು ವಿಸ್ತೃತಗೊಳಿಸಿಕೊಂಡು ಮಂಡಿಸಿದರು. ಅರ್ಥ ಚಿಂತನೆಗೆ ಉದಾತ್ತತೆಯನ್ನು ತಂದುಕೊಟ್ಟರು.

ಅರ್ಥದ ವಾಸ್ತವ ಅಥವಾ ಕೌಟುಂಬಿಕ ನೆಲೆ

ಪ್ರತಿಯೊಬ್ಬರು ತಾವು ಕಷ್ಟಪಟ್ಟು ಸಂಪಾದಿಸುವುದು ತಮ್ಮನ್ನು ಮತ್ತು ತಮ್ಮನ್ನು ನಂಬಿದ ಜೀವಗಳನ್ನು ರಕ್ಷಿಸುವುದಕ್ಕಾಗಿ ಎಂಬುದು ಸತ್ಯ. ತಮ್ಮ ವಾಸ್ತವ ಬದುಕಿನ ಅಸಹಾಯಕತೆಯನ್ನು ಮುಚ್ಚಿಕೊಳ್ಳುವುದಕ್ಕಾಗಿ ಸದಾ ಪ್ರಯತ್ನಶೀಲರಾಗಿರುತ್ತಾರೆ. ಯಾವಾಗ ಅವರ ಪ್ರಯತ್ನಕ್ಕೆ ಪ್ರತಿಫಲ ಸಿಗಬೇಕಾದಷ್ಟು ಸಿಗುವುದಿಲ್ಲವೋ ಆವಾಗ ವ್ಯಕ್ತಿ ಬೇರೆ ಮಾರ್ಗವನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ತನ್ನನ್ನು ನೋಡಿ ನಗುತ್ತಿರುವ ಜನರ ಕಣ್ಣು ಕುಕ್ಕಿಸಬೇಕೆಂದು ಕೊಳ್ಳುತ್ತಾನೆ. ಹೊಟ್ಟೆಗೆ ಅನ್ನ ಸಿಗದಿದ್ದರೂ ಸರಿಯೇ, ವೇಷದಿಂದಾದರೂ ಜನರನ್ನು ಮೋಸಗೊಳಿಸಬೇಕೆಂದುಕೊಳ್ಳುತ್ತಲೇ ಮೊದಲ ತಪ್ಪು ಹೆಜ್ಜೆಯನ್ನಿಡುತ್ತಾನೆ. ಹೊರಗಿನ ಥಳುಕಿನ ಪ್ರಪಂಚ ತನಗೆಷ್ಟು ಸುಖ ಕೊಡಬಲ್ಲುದು? ಎಂಬುದರತ್ತ ಗಮನ ಹರಿಸುವುದೇ ಇಲ್ಲ. ಅಂತರಂಗದ ಎಚ್ಚರದ ಕರೆಗಂಟೆಗೆ ಓಗೊಡುವುದೇ ಇಲ್ಲ. ಇಂಥ ಬಹಿರಾಡಂಬರದ ಜನರ ನಡೆಯನ್ನು ಕಂಡು ಬಸವಣ್ಣನವರು ಮಮ್ಮಲ ಮರುಗಿದರು. ಜನರ ಮೌಢ್ಯತೆಯನ್ನು ನೋಡಿ ಕನಿಕರಿಸಿದರು. ಎಷ್ಟೋ ಸಾರಿ ಅಂತರಂಗದ ಶ್ರೀಮಂತಿಕೆಯುಳ್ಳ ಜನರಿಗೆ ಮೈಮುಚ್ಚಿಕೊಳ್ಳುವ ಮೂಲ ಸೌಲಭ್ಯವೂ ಇರುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವರು ಬಡವರೆ? ದರಿದ್ರರೆ? ಅಲ್ಲ, ಬೇರೆಯವರು ತಮ್ಮ ಸ್ಥಿತಿ ನೋಡಿ ಹೀಯಾಳಿಸಬಹುದೆಂದು ಊಹಿಸಿ, ಕುಗ್ಗಿ ಹೋಗಬೇಕಾಗಿಲ್ಲ. ವೇಷದಿಂದಲೇ ಸಮಾಜದಲ್ಲಿ ಮಾನಮನ್ನಣೆ ಗೌರವ ದೊರಕುತ್ತದೆ, ಕಣ್ಣೆತ್ತಿ ತಮ್ಮನ್ನು ನೋಡುತ್ತಾರೆಂಬ ಭ್ರಮೆಯೊಳಗೆ

ತೇಲಿ ಹೋಗುವುದೂ ಬೇಕಾಗಿಲ್ಲ. ತಮ್ಮನ್ನು ನೋಡಲೇ ಇಲ್ಲ ಎಂಬ ಚಿಂತೆಯ ಚಿತೆಯಲ್ಲಿ ದಗ್ಧವಾಗಿ ಹೋಗುವುದೂ ಬೇಡ. ಅಂತರಂಗದ ಶ್ರೀಮಂತಿಕೆಯ ಘನತೆ ಬಹಿರಾಡಂಬರ ಜೀವಿಗಳಿಗೆ ಸಿಗುವುದಿಲ್ಲ. ಹೃದಯ ಶ್ರೀಮಂತರಲ್ಲಿ ತೋರಿಕೆಯ ಬದುಕಿಗೆ ಬೇಕಾಗುವ ಚಂಚಲ ಸ್ವಭಾವದ ಧನ ಇರಲಿಕ್ಕಿಲ್ಲ. ಅಂದ ಮಾತ್ರಕ್ಕೆ ಅವರು ಬಡವರಾಗಲು ಸಾಧ್ಯವಿಲ್ಲ ಎಂಬ ಅರಿವನ್ನು ಜನರಲ್ಲಿ ಬಿಂಬಿಸಲು ಪ್ರಯತ್ನಿಸಿದರು.

ಸ್ವಂತ ಪರಿಶ್ರಮವಿಲ್ಲದ ಎಷ್ಟೋ ಜನರಲ್ಲಿ ಧನ ಗುಡ್ಡೆ ಗುಡ್ಡೆಯಾಗಿ ಬಂದು ಬಿದ್ದಿರುತ್ತದೆ. ಅದು ಯಾವ ಮೂಲದಿಂದ ಬಂದುದು ಎನ್ನುವುದರತ್ತಲೂ ಯೋಚಿಸಬೇಕಾಗುತ್ತದೆ. ಧನವುಳ್ಳವರೇ ಮೊದಲು ಈ ಕುರಿತು ಪ್ರಶ್ನಿಸಿಕೊಳ್ಳಬೇಕು. ತಮ್ಮ ಪೂರ್ವಜರು ಹೇಗಾದರೂ ಇಷ್ಟು ಹಣವನ್ನು ಸಂಪಾದಿಸಿದರೋ? ಸ್ವತಃ ದುಡಿಮೆಯಿಂದ ಇಷ್ಟು ಹಣವನ್ನು ಕೂಡಿಡಲು ಸಾಧ್ಯವಾಗಬಹುದೆ? ಹಾಗಾದರೆ ಆ ಹಣ ಹೇಗೆ ಬಂತು? ಎಂದು ಆಲೋಚಿಸಿದರೆ, ಸಮಾಜದಲ್ಲಿ ಆರ್ಥಿಕ ಅಸಮಾನತೆಗೆ ಕಾರಣವೇನೆಂಬುದು ಅವರಿಗೆ ಸಿಗುತ್ತದೆ. ಆದರೆ ಹಣವಿದ್ದವರಿಗೆ ಇವೆಲ್ಲ ಅಮುಖ್ಯ. ತಮ್ಮ ಆ ಕ್ಷಣದ ಸುಖವೇ ಅವರಿಗೆ ಮುಖ್ಯ. ಎಲ್ಲರೂ ಹೀಗೇ ಇರುವುದಿಲ್ಲ. ಕೆಲವರಾದರೂ ಸದ್ಧರ್ಮದಲ್ಲಿಯೇ ಹಣವನ್ನು ಗಳಿಸಿರುತ್ತಾರೆ. ಆಗ ಮಕ್ಕಳು ತಪ್ಪುತ್ತಾರೆ. ತಮ್ಮ ಕಾಯವನ್ನು ದಂಡಿಸದೇ ಪಡೆದ ಅರ್ಥ ಅದಾಗಿರುವುದರಿಂದ, ಅದನ್ನು ವೆಚ್ಚ ಮಾಡುವಾಗ ಇಂಥವರ ಮನಸ್ಸು ಹಿಂಜರಿಯುವುದೇ ಇಲ್ಲ. ಏಕೆಂದರೆ ಅದರ ಬೆಲೆ ಅವರಿಗೆ ತಿಳಿಯದು. 'ಸದ್ಧರ್ಮದ ಪಿತನ ಫಲ ಮಕ್ಕಳಿಂದ ಅಧರ್ಮಕ್ಕೆ' ಬಳಕೆಯಾಗುವುದೊಂದು ದುರಂತವೇ ಸರಿ! ಇಂಥವರಿಗೆ ಮುಂಬರುವ ಕರಾಳ ದಿನಗಳ ಅರಿವಾಗಲಿ, ಪರಿಚಯವಾಗಲಿ ಇರುವುದಿಲ್ಲ. ಮದೋನ್ಮತ್ತರಾಗಿ ಧನವನ್ನು ಅನಾಚಾರಕ್ಕೆ ವೆಚ್ಚ ಮಾಡುತ್ತಾರೆ. ಇಂಥವರ ನಡೆಯನ್ನು ಬಸವಣ್ಣನವರು "ಹಲವು ಕಾಲ ಕೋಟಲೆಗೊಂಡು ಒಟ್ಟಿದ ಹಿದಿರೆಯು ಒಂದು ಮಿಡುಕರಲ್ಲಿ ಬೇವಂತೆ" ಎಂದು ಟೀಕಿಸುತ್ತಾರೆ. ಅಂದರೆ ಬಂದು ಕುಳ್ಳಿನ ಬಣವೆಗೆ ಕಿಡಿಬಿದ್ದರೆ ಆಗುವ ಪರಿಣಾಮಕ್ಕೂ ಪೂರ್ವಜರು ಕೂಡಿಟ್ಟ ಹಣವನ್ನು ಅನಾಚಾರಕ್ಕೆ ಬಳಸಿಕೊಳ್ಳುವ ಮಕ್ಕಳ ವರ್ತನೆಯ ಪರಿಣಾಮಕ್ಕೂ ಯಾವುದೇ ವ್ಯತ್ಯಾಸವಿಲ್ಲ ವೆಂಬುದನ್ನು ಮನವರಿಕೆ ಮಾಡಿಕೊಡುತ್ತಾರೆ. ಹಣದ ಬಗ್ಗೆ ಅರಿವು ಬರಬೇಕಾದರೆ ಪ್ರತಿಯೊಬ್ಬರೂ ಕಾಯಕದಲ್ಲಿ ನಿರತರಾಗಬೇಕು. ಕಾಯಕ ತನು ಮನ ಭಾವ ಪರಿಶುದ್ಧತೆಯಿಂದ ನಡೆಯಬೇಕು. ಉದ್ದಂಡತನವನ್ನು ಕಾಯಕದಲ್ಲಿ ಅಸ್ತ್ರವನ್ನಾಗಿ ಬಳಸಿಕೊಳ್ಳಬಾರದು. ಶಿವನ ಸೊಮ್ಮು ಶಿವನಿಗೆ ಅರ್ಪಿತವಾಯಿತು. ಎಂಬ ಸಮರ್ಪಣಾಭಾವ ಬೇಕು. ಈ ಗುಣ ಲೌಕಿಕ ಬದುಕಿನ ಆದರ್ಶ ಎನ್ನುವುದನ್ನು ನಂಬಬೇಕೆನ್ನುತ್ತಾರೆ.

ಸಮಾಜದ ಮೌಢ್ಯತೆಯ ಪರಿಚಯವೂ ಬಸವಣ್ಣನವರಿಗಿತ್ತು. ಎಷ್ಟೋ ಜನರು ಕಾಯಕ ಮಾಡದೇ ನಂಬಿಕೆಯ ಮೇಲೆ ಬದುಕ ಬಯಸುತ್ತಾರೆ. ಹಸ್ತಸಾಮುದ್ರಿಕಾ ಶಾಸ್ತ್ರವನ್ನು ನಂಬುತ್ತಾರೆ. ಅಂಗೈಯಲ್ಲಿರುವ ಅರ್ಥಗೆರೆಯನ್ನು ನೋಡುತ್ತಲೇ ರಟ್ಟೆಯ ಬಲವನ್ನು ಮರೆಯುತ್ತಾರೆ. ಹಸ್ತಸಾಮುದ್ರಿಕಾ ಶಾಸ್ತ್ರ ತೋರಿಸುವ ಅರ್ಥರೇಖೆ ನಿಚ್ಚಳವಾಗಿದೆಯೆಂದ ಮಾತ್ರಕ್ಕೆ ಸಂಪತ್ತಿನ ಕಾಯಕ ಮಾಡದೇ ಬಂದು ಮನೆಯಲ್ಲಿ ಸಂಗ್ರಹವಾಗಬಹುದೆ? ಇದೆಲ್ಲ ಭ್ರಮೆಯಲ್ಲವೆ? ಆಯುಷ್ಯವಿರುವವರೆಗೆ ಕಾಯಕವನ್ನು ಮಾಡುತ್ತ ಹೋದರೆ ಕೈಯಲ್ಲಿ ಅರ್ಥರೇಖೆ ಇಲ್ಲದಿದ್ದರೂ ಫಲ ತಾನಾಗಿಯೇ ದೊರಕುತ್ತದೆ. ಈ ಅರಿವು ಎಲ್ಲರಿಗೂ ಬೇಕು.

ರೇಖೆಯಷ್ಟನ್ನೇ ನಂಬಿ ಕಾಯಕ ನಿವೃತ್ತರಾಗಿ ಕುಳಿತುಕೊಳ್ಳುವುದು ಯಾರಿಗೂ ಶ್ರೇಯಸ್ಸಲ್ಲ ಎಂಬ ಸತ್ಯದ ಅರಿವನ್ನು ಬಸವಣ್ಣನವರು ಮಾಡಿಕೊಡುತ್ತಾರೆ. ಮೌಢ್ಯವನ್ನು ಹೋಗಲಾಡಿಸಲು ಪ್ರಯತ್ನಿಸುತ್ತಾರೆ.

'ಹಣವೆಂದರೆ ಹೆಣವೂ ಬಾಯಿ ತೆರೆಯುತ್ತದೆಯಂತೆ' ಹಣದ ಆಸೆಯೇ ಅಂತಹದು. ಅತಿಯಾಸೆಯಿಂದ ಹಣದ ಗಳಿಕೆಗಾಗಿ ಅನಾಚಾರದ ಮಾರ್ಗ ತುಳಿಯುವವರ ಅಸಹಾಯಕತೆಯ ಅರಿವು ಬಸವಣ್ಣನವರಿಗಿದೆ. ಅನಾಚಾರದ ಸುಖ ಶಾಶ್ವತವಲ್ಲ. ಆ ಪಥವನ್ನು ನಿರಾಕರಿಸಿ ಸತ್ಪಥವನ್ನು ತುಳಿಯಿರಿ ಎಂದು ಎಚ್ಚರಿಸುತ್ತಾರೆ. 'ಹೊನ್ನು' ತನ್ನದೆಂಬ ಆಸೆಯಿಂದ ಹೊರಬರಬೇಕು. ಅಳಿಮನದ ಧನದಾಸೆಯನ್ನು ಬಿಡಬೇಕು. ತಾನು ಗಳಿಸಿದ ಧನ ಕೇವಲ ತನ್ನ ಸತಿ ಸುತ ಮಾತಾಪಿತರಿಗೆ ಮೀಸಲಾಗಿರುತ್ತದೆ ಎಂಬುದೇನೋ ನಿಜ. ಆದರೆ ಆ ಆಸೆಯಿಂದ ಹೊರ ಬರುವ ದಾರಿಯನ್ನೂ ಹುಡುಕಿಕೊಳ್ಳಬೇಕಾಗುತ್ತದೆ. ಧನವನ್ನು ದಾಸೋಹಕ್ಕೆ ಸಮರ್ಪಿಸಿದಾಗ ಆಸೆ ಮತ್ತು ಅಂಜಿಕೆ ಇಲ್ಲವಾಗುತ್ತದೆ ಎಂದು ಹೇಳುತ್ತ ಧನದಾಸೆಯನ್ನು ದೂರ ಮಾಡಲು ಬಸವಣ್ಣನವರು ಪ್ರಯತ್ನಿಸಿದರು.

ಧನದ ಮೇಲಿರುವ ಅತಿಯಾದ ಲೋಭವೂ ಒಳ್ಳೆಯದಲ್ಲ. ಲೋಭ ಅತಿಯಾದಾಗ ಮನುಷ್ಯ ಮತಿಭ್ರಮಣೆಗೊಳಗಾಗುತ್ತಾನೆ. ಧನಲೋಭವಂತೂ ಮುಂದುಗೆಡಿಸಿ ಕಾಡುತ್ತದೆ. ಮನುಷ್ಯ ಆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವೆನೆಂದುಕೊಳ್ಳುವುದೇ ಇಲ್ಲ. ಅತಿಯಾದ ಲೋಭಿಗೆ ವಾಸ್ತವದ ಅರಿವನ್ನು ಮೂಡಿಸುವುದೇ ಬಸವಣ್ಣನವರ ಗುರಿಯಾಗಿದೆ.

ಧನಲೋಭಿಗಳ ಇನ್ನೊಂದು ಮುಖದ ಪರಿಚಯವನ್ನು ಬಸವಣ್ಣನವರು ಮಾಡಿಕೊಡುತ್ತಾರೆ. ಅರ್ಥವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳದೆ, ಹೆಂಡತಿ ಮಕ್ಕಳಿಗಾಗಲಿ, ಬಂಧುಗಳಿಗಾಗಲಿ, ಹೆತ್ತವರಿಗಾಗಲಿ ವಿನಿಯೋಗಿಸದೆ, ತಾವೂ ಅನುಭವಿಸದೇ ಯಾರಿಗೆ ಗೊತ್ತಾಗದಂತೆ ಹೂಳಿಡಬಯಸುತ್ತಾರೆ. ಆದರೆ ಪ್ರಕೃತಿ ಮುನಿಸಿಕೊಂಡು ಪ್ರಳಯವುಂಟಾದರೆ ಹೂಳಿಟ್ಟ ಅರ್ಥ ಅನರ್ಥವಾಗಿ ಹರಿದುಕೊಂಡು ಹೋಗುತ್ತದೆ. ಯಾರಿಗೂ ಪ್ರಯೋಜನಕ್ಕೆ ಬರಲಿಲ್ಲ ಲೋಭಿಗಳ ಹೂಳಿಟ್ಟ ಹಣ. ಈ ದುಷ್ಪರಿಣಾಮದ ಸಂಗತಿಯನ್ನು ಲೋಭಿಗಳಿಗೆ ತಿಳಿಸುತ್ತಾ ಅಸಂಗ್ರಹ ನೀತಿಯನ್ನನುಸರಿಸುತ್ತ ತೃಪ್ತರಾಗಿರಬೇಕೆಂದು ಬಸವಣ್ಣನವರು ಹೇಳುತ್ತಾರೆ:

ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡಗುವಿರಿ.
ಆಯುಷ್ಯ ತೀರಿ ಪ್ರಳಯ ಬಂದರೆ ಆ ಅರ್ಥವನುಂಬವರಿಲ್ಲ;
ನೆಲನಗಿದು ಮಡುಗದಿರಾ, ನೆಲ ನುಂಗಿದರುಗುಳುವುದೆ?
ಕಣ್ಣಲ್ಲಿ ನೋಡಿ, ಮಣ್ಣಲ್ಲಿ ನೆರಹಿ ಉಣ್ಣದೇ ಹೋಗದಿರಾ.

ಗಳಿಸಿದ ಅರ್ಥವನ್ನು ಯಾವುದಕ್ಕೂ ಬಳಸದೆ, ದಿನಕ್ಕೆ ನೂರೋ ಸಾವಿರ ಸಾರಿಯೋ ನೋಡಿ ನೋಡಿ ತೃಪ್ತಿಪಟ್ಟರೆ ಅದು ಕಣ್ಣಿಗಷ್ಟೆ ತೃಪ್ತಿಯಾದಂತಲ್ಲವೆ? ನೋಡಿದ ಮಾತ್ರದ ಒಡಲು ತೃಪ್ತಿಗೊಳ್ಳುವಂತಿದ್ದರೆ ಜಗದ ವ್ಯವಹಾರವೇ ಬೇರೆಯಾಗುತ್ತಿತ್ತು. ಆಯುಷ್ಯವೃದ್ಧಿ ಆರೋಗ್ಯದಿಂದ ಲಭ್ಯವಾಗುತ್ತದೆಯೋ ಹೊರತು, ಉಣ್ಣದೇ ತಂದುಕೊಂಡ ಅನಾರೋಗ್ಯದಿಂದಲ್ಲ. ಅನಾರೋಗ್ಯ ದೇಹ ಪ್ರಳಯದ ಲಕ್ಷಣ. ಪ್ರಕೃತಿ ಪ್ರಳಯದ ಭೀತಿ ಇನ್ನೊಂದು ತೆರನಾದುದು. ಮೊನ್ನೆ ಮೊನ್ನೆ ಡಿಸೆಂಬರ್ ೨೬ರಂದು ಸಂಭವಿಸಿದ 'ಸುನಾಮಿ'ಯಂಥ ಪ್ರಳಯಾಂತಕಾರಿಕ್ಷಣವನ್ನು ನೆನೆಸಿಕೊಂಡರೆ, ಬಸವಣ್ಣನವರು ೯೦೦ ವರ್ಷಗಳ ಹಿಂದೆ

ಹೇಳಿರುವುದು ಎಷ್ಟು ಸತ್ಯ ಎನಿಸದೇ ಇರದು. ಅರ್ಥವಿದ್ದಾಗ ಅದನ್ನು ಸತ್ಪಾತ್ರಕ್ಕೆ ಸಲ್ಲಿಸಬೇಕು. ತನಗೆ ಸಾತ್ವಿಕ ಆಹಾರಕ್ಕಾಗಿ ಬಳಸಿಕೊಳ್ಳಬೇಕು. ಅಂದಾಗ ಅರ್ಥಲೋಭದಿಂದ ಹೊರಬರಲು ಸಾಧ್ಯವಾಗುತ್ತದೆ.

ವೈಯಕ್ತಿಕವಾಗಿ ತನಗೆದುರಾಗುವ ಸಮಸ್ಯೆ, ತೊಂದರೆಗಳೇನೇ ಇದ್ದರೂ ಅರ್ಥದಲ್ಲಿ ಮಾತ್ರ ವಂಚನೆಯ ಗುಣವನ್ನು ತೋರಿಸಬಾರದು. ಇದ್ದುದರಲ್ಲಿಯೇ ಹಂಚಿಕೊಂಡು ಉಣ್ಣುವ ಆದರ್ಶವನ್ನು ಬೆಳೆಸಿಕೊಳ್ಳಬೇಕು. ಕೈಲಾಗದ ಹೇಡಿಗಳಿಗೆ ಹಿಂಜರಿಕೆಯ ಮನಸ್ಸು ಇರುತ್ತದೆ. ಭವವೆಂಬ ರಣರಂಗಕ್ಕೆ ಕಾಲಿರಿಸಿ ಆಗಿದೆ. ಕಾಲಿಟ್ಟಾದ ಬಳಿಕ ಧೈರ್ಯಗುಂದಿದರೆ ಅವರನ್ನೆಂತು ವೀರರೆನ್ನಲಾದೀತು? ಹಾಗೆಯೇ ದಾಸೋಹ ಜೀವಿಯ ಪವಿತ್ರ ನಡೆಯೂ ಕೂಡ. ತಮ್ಮ ತಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳಲು, ನೈತಿಕ ಜವಾಬ್ದಾರಿಯನ್ನುಳಿಸಿ ಕೊಳ್ಳಲು ಅವರವರ ಮುಂದಿರುವ ದಾರಿ ಬಹಳ ದುರ್ಗಮವಾದುದು. ಹಾಗೆಂದು ಬದುಕಿಗೆ ಬೆನ್ನು ತೋರಿಸಬೇಕಾಗಿಲ್ಲ. ಪ್ರಾಮಾಣಿಕ ಪರಿಶುದ್ಧ ಚಿತ್ತದ ಕಾಯಕದ ಫಲವನ್ನು ವಂಚನೆಯಿಲ್ಲದೇ ಅರ್ಪಿಸಿ ಗೆಲ್ಲುವಂತೆ ಮಾಡೆಂದು ಬಸವಣ್ಣನವರು ಪ್ರಾರ್ಥಿಸುತ್ತಾರೆ. ಧನದಲ್ಲಿ ವಂಚನೆಯುಳ್ಳವರು ಧನವಂಚಕರು, ಡಾಂಭಿಕರು, ಯುಕ್ತಿಶೂನ್ಯರು, ಶರಣರಾದವರು ಮಾತ್ರ ಎಂದೂ ಧನದಲ್ಲಿ ವಂಚನೆಯನ್ನು ಅರಿಯರು. ಇದಕ್ಕೆ ದಾಸ, ಸಿರಿಯಾಳರೇ ಸಾಕ್ಷಿ. ಕೂಡಲಸಂಗನ ಬಯಕೆಯ ಭಂಡಾರಕ್ಕೆ ನಾನೂ ಶುದ್ಧನಾಗಿರುವಂತೆ ಮಾಡು, ನನ್ನ ಧನದಲ್ಲಿ ವಂಚನೆಯೆಂಬುದಿಲ್ಲ ಎಂದು ಸಮರ್ಥಿಸಿಕೊಳ್ಳುತ್ತಾರೆ.

ಶಿವಭಕ್ತರ ಅಂತರಂಗ ಶುದ್ಧವಾಗಿರುವುದರಿಂದ ಅಲ್ಲಿ ವಿಕಾರ ಇರುವುದಿಲ್ಲ. ಶರಣ ತಾನು ಕಾಯಕ ಮಾಡಿ ಸಂಪಾದಿಸಿದ ಧನವನ್ನು ಜಂಗಮಕ್ಕೆ ಸಮರ್ಪಿಸುವುದರಿಂದಾಗಿ ಅಲ್ಲಿ ವಿಕಾರ ಹಿಂದೆ ಸರಿಯುತ್ತದೆ. ಸಾತ್ವಿಕ ಸಮರ್ಪಣೆ ಇಲ್ಲಿದೆ. ಶರಣ ಧನವಿಕಾರಿಯಾಗದೇ ಜಂಗಮ ವಿಕಾರಿಯಾಗಿರುತ್ತಾನೆ (ಅಂದರೆ ಜಂಗಮಕ್ಕೆ ಧನವನ್ನು ಅರ್ಪಿಸಬೇಕೆಂಬ ಚಿಂತನೆಯಲ್ಲಿಯೇ ಕಾಲಕಳೆಯುತ್ತಾನೆ).

ತಂದೆ ತಾಯಿ ಗಳಿಸಿದ ಧನ, ಸಂಪತ್ತು, ಆಸ್ತಿ ಎಲ್ಲಕ್ಕೂ ಮಕ್ಕಳೇ ಒಡೆಯರು. ತಂದೆಯ ಸುಖಕ್ಕೆ ಮಾತ್ರ ತಾವು ಯಜಮಾನರು ಎಂದುಕೊಳ್ಳದೆ ಮಕ್ಕಳು ತಂದೆಯ ದುಃಖಕಾಲದಲ್ಲಿಯೂ ಸಮಾನವಾಗಿಯೇ ಭಾಗಿಯಾಗಬೇಕೆಂಬುದರತ್ತ ಆಲೋಚಿಸ ಬೇಕಾಗುತ್ತದೆ. ಇದು ತೀರ ಲೌಕಿಕವಾದ ವಿಷಯ. ಬಸವಣ್ಣನವರು ಇದರಾಚೆಯ ವಿಷಯದತ್ತಲೂ ಗಮನಸೆಳೆಯುತ್ತಾರೆ. ಪರಶಿವ ಮತ್ತು ಚಿತ್‌ಶಕ್ತಿಯರ ಮಗನಾದ ಇಷ್ಟಲಿಂಗವೇ ತಮ್ಮ ಧನಕ್ಕೆ ಒಡೆಯನೆಂದು ಹೇಳುತ್ತಾರೆ. ಬಹಳ ಎಚ್ಚರದಿಂದಲೇ ಬಸವಣ್ಣನವರು ಸಂದರ್ಭೋಚಿತವಾಗಿ ಪದಗಳನ್ನು ಬಳಸುತ್ತಾರೆ. ಮಕ್ಕಳು (ಹೆಣ್ಣು+ಗಂಡು ಸೇರಿಯೇ) ಲೌಕಿಕ ಧನಕ್ಕೆ ಒಡೆಯರಾಗುವಂತೆ, 'ಇಷ್ಟಲಿಂಗ'ವೆಂಬ ಮಗ ಲೌಕಿಕ ಅಲೌಕಿಕಗಳೆರಡಕ್ಕೂ ಒಡೆಯನಾಗಿರುವುದು ಇಲ್ಲಿನ ವಿಶೇಷ.

ದುಡಿಯದೇ ಧನ ಸಂಪಾದಿಸುವವರ ಮೂಲಗಳು ಬೇರೆಯೇ ಆಗಿರುತ್ತವೆ. ಬೆವರಿನ ಬೆಲೆಯ ಅರಿವಿಲ್ಲದವರ ಧನ ಹಿಂಸಾಮೂಲದಿಂದಲೋ ದುಡಿದವರನ್ನು ಮರುಗಿಸಿ ಅವರಿಗೆ ಸೇರಬೇಕಾದುದನ್ನು ಕಬಳಿಸುವುದರಿಂದಲೋ ಬಂದುದಾಗಿರುತ್ತದೆ. ಹೀಗೆ ಮಾಡುವುದು ಪಾಪ ಎಂದು ಅವರಿಗೆ ತಿಳಿದಿರುತ್ತದೆ. ಆ ಪಾಪ ಪರಿಹಾರಕ್ಕಾಗಿ ಧರ್ಮಕಾರ್ಯಕ್ಕೆ

ಬಳಸಿಕೊಳ್ಳಲು ಮುಂದಾಗುತ್ತಾರೆ. ಅದು ಅವರ ಪ್ರಾಯಶ್ಚಿತ್ತದ ಅರ್ಪಿತವಾಗುತ್ತದೆ. ಅವರಿಗೇನೋ ಸತ್ಪಾತ್ರಕ್ಕೆ ಸಲ್ಲಿಸುತ್ತಿದ್ದೇವೆಂಬ ಭ್ರಮೆ ಇರುತ್ತದೆ. ಆದರೆ ಅದು ಸತ್ಪಾತ್ರಕ್ಕೆ ಸಲ್ಲುವುದೇ ಇಲ್ಲ. ದುಡಿಯದೇ, ಕಾಯಕಮಾಡದೇ ಬಂದ ಅರ್ಥ ವ್ಯರ್ಥವೇ! ವ್ಯರ್ಥವಾಗಿ ಪೋಲಾಗಬಾರದೆಂದರೆ ಪರಿಶುದ್ಧ ಪ್ರಾಮಾಣಿಕ ಕಾಯಕದಲ್ಲಿ ನಿರತರಾಗಬೇಕು. ಕಾಯಕದಿಂದ ಬಂದುದು ವೃಥಾ ಹೋಗುವುದಿಲ್ಲ. ಶರಣರಿಗಲ್ಲದೇ ಬೇರೆ ಯಾವುದಕ್ಕೂ ಬಳಸಲ್ಪಡುವುದಿಲ್ಲ. ಈ ಎಚ್ಚರ ಧನಪಿಶಾಚಿಗಳಾದವರಿಗೆ ಇರಲೇಬೇಕಾಗುತ್ತದೆ.

ಧನ ಹಪಹಪಿಯ ಜೊತೆಗೆ ಕೀರ್ತಿವಾರ್ತೆಯ ಭ್ರಾಂತಿಯೂ ಸೇರಿರುತ್ತದೆ. ಕೀರ್ತಿವಾರ್ತೆಗಳೆಲ್ಲ ಅವರಿಗೆ ಹೊನ್ನಶೂಲ. ಸಮಾಜದಲ್ಲೂ ಈ ಗುಣವನ್ನು ಬಿತ್ತಿ ಬೆಳೆಸಲು ಬಸವಣ್ಣನವರು ಪ್ರಯತ್ನಿಸಿದರು. ಮನುಷ್ಯ ಮನಸ್ಸಿನ ದೌರ್ಬಲ್ಯವಾದ ಕೀರ್ತಿಯ ಗೀಳಿನಿಂದ ಹೊರಬರಬೇಕೆನ್ನುತ್ತಾರೆ. ಹಣವನ್ನು ನೀರಿನಂತೆ ಬಳಸಿದರೆ ತಾನಾಗಿಯೇ ಕೀರ್ತಿ ಬರುತ್ತದೆ ಎಂದುಕೊಳ್ಳುತ್ತಾರೆ. ಈ ಉದ್ದೇಶಕ್ಕಾಗಿ ಹಣ ಗಳಿಕೆ ಆಗಬಾರದು ಎನ್ನುತ್ತಾರೆ. ಬಸವಣ್ಣನವರು ಬಲಿ, ಕರ್ಣ, ಖಚರ, ಶಿಬಿ ಮುಂತಾದವರೆಲ್ಲ ಕೀರ್ತಿವಾರ್ತೆಗಾಗಿಯೇ ಭೂಮಿ, ಕವಚ, ಅಸ್ಥಿ, ಮಾಂಸ ಮೊದಲಾದವವನ್ನು ಅರ್ಪಿಸಿದರೆಂದು ಹೇಳುತ್ತಾರೆ. ಇದೆಲ್ಲ ವೃಥಾ ಹೋದಂತಲ್ಲವೆ? ಎಂದು ಪ್ರಶ್ನಿಸುತ್ತಾರೆ. ಪರ್ಯಾಯವಾಗಿ ದಾನ ಸಂಸ್ಕೃತಿಯ ಅಂತರಂಗವನ್ನು ಇಲ್ಲಿ ತೆರೆದಿಟ್ಟಿದ್ದಾರೆ. ಶರಣರು ಅನುಪಮ ಚರಿತರು. ಕೀರ್ತಿವಾರ್ತೆಯಿಂದ ಅವರು ಬಹಳ ದೂರ ಇರುವವರು ಎಂದೂ ಹೇಳಿದ್ದಾರೆ. ಶರಣರದು ದಾಸೋಹ ಸಂಸ್ಕೃತಿ.

ಲೌಕಿಕ ಆಸೆ ಮುಂದುಗೊಂಡಿದ್ದವರ ಸ್ವಭಾವ ಇರುವೆಗಿಂತ ಭಿನ್ನವಾದುದೇನಲ್ಲ. ಸಕ್ಕರೆ, ಬೆಲ್ಲ, ಸಿಹಿ ಇದ್ದಲ್ಲಿ ಇರುವೆಗಳು ಹೇಗೆ ಮುತ್ತಿಕೊಳ್ಳುತ್ತವೆಯೋ ಹಾಗೆಯೇ ದುಡ್ಡಿದ್ದವರನ್ನು ಎಲ್ಲರೂ ಬಂದು ಮುತ್ತಿಕೊಳ್ಳುತ್ತಾರೆ. ಕಹಿ ಅನುಭವಗಳಿಂದ ನಲುಗಿ ಹೋಗುವವರತ್ತ ಕಣ್ಣೆತ್ತಿ ನೋಡುವವರೂ ಇರುವುದಿಲ್ಲ. ಈ ವ್ಯವಸ್ಥೆಯ ಅರಿವು ಬಸವಣ್ಣನವರಿಗಿತ್ತು. ತನು ಮನ ಧನ ಸಮರ್ಪಣೆ ಕೂಡ ಕಂಡ ಕಂಡವರಿಗೆ ಆಗಬಾರದು. ಸಮರ್ಪಿಸುವವ ಮತ್ತು ಸಮರ್ಪಿಸಿಕೊಳ್ಳುವವ ಇಬ್ಬರಲ್ಲೂ ಪರಿಶುದ್ಧತೆ, ಪ್ರಾಮಾಣಿಕತೆ ಇರಬೇಕಾಗುತ್ತದೆ. ಆಗಲೇ ಅರ್ಪಣೆಗೆ ಬೆಲೆ ಇರುತ್ತದೆ. ತ್ರಿವಿಧ ದಾಸೋಹಸಂಪನ್ನ ಎನಿಸಿಕೊಳ್ಳುವ ಮುಂಚೆ ದಾಸೋಹಸೇವೆಯನ್ನು ಕಾಡಿ ಬೇಡುವವರಿಗೆ, ಲಂಪಟರಿಗೆ ಮಾಡಬಾರದೆಂಬ ಛಲವೂ ಶರಣರಿಗೆ ಇರಬೇಕಾಗುತ್ತದೆ. ಕೊಡುವವರನ್ನು ಕಂಡು ಬೇಡುವವರ ಪಟ್ಟಿ ದೊಡ್ಡದಾಗುತ್ತಲೇ ಸಾಗುತ್ತದೆ. ಅಂಥ ನಿಷ್ಪ್ರಯೋಜಕರಿಗೆ ಧನವನ್ನು ಅರ್ಪಿಸದಿರುವುದೇ ಮೇಲು. ತಮಗರ್ಪಿತವಾದ ಧನವನ್ನು ಮತ್ತೆ ಸಮಾಜಕ್ಕೆ ಸದ್ವಿನಿಯೋಗಿಸುವ ಸದಾಚಾರಿಗಳಿಗೆ ಮಾತ್ರ ಕೊಡಬೇಕೆಂಬ ನಿಯಮವನ್ನು ಬಸವಣ್ಣನವರು ಹಾಕುತ್ತಾರೆ. ಕೊಡುವವರ ಮುಗ್ಧತೆಯನ್ನು ದುರುಪಯೋಗಪಡಿಸಿಕೊಳ್ಳಲು ಹವಣಿಸುವವರ ಸಾನ್ನಿಧ್ಯದಲ್ಲಿರಬಾರದೆಂಬ ಎಚ್ಚರಿಕೆಯನ್ನು ಕೊಡುತ್ತಾರೆ.

ಭಕ್ತರ ನಿಷ್ಠೆಯನ್ನು ಪರೀಕ್ಷಿಸುವುದಕ್ಕೋಸ್ಕರ ನಂಬಿದ ದೇವರು ವೇಷಧಾರಿಯಾಗಿ ಬರುತ್ತಾನೆಂದು ಸಾಮಾನ್ಯವಾಗಿ ನಂಬುತ್ತಾರೆ. ಭಕ್ತರ ಮನಸ್ಸನ್ನು ಒರೆದೊರೆದು ನೋಡುವ ಹಲವಾರು ಸಂದರ್ಭಗಳ ಸಂಗತಿಗಳು ಮೇಲಿಂದ ಮೇಲೆ ಪ್ರಸ್ತಾಪವಾಗುತ್ತಲೇ ಇರುತ್ತವೆ. ಈ ಕುರಿತಾಗಿಯೂ ಬಸವಣ್ಣನವರು ಯೋಚಿಸುತ್ತಾರೆ. ಭಕ್ತರು ಎಂಥ ಸಂದರ್ಭಗಳಲ್ಲಿಯೂ

ಹಿಂಜರಿಯಬಾರದು. ಎಂಥ ಪರೀಕ್ಷೆಯಲ್ಲಿಯೂ ಸೋಲನ್ನು ನಿರೀಕ್ಷಿಸಬಾರದು. ಸದಾ ಸದಾಚಾರಿಗಳಾಗಿ ಕಾರ್ಯೋನ್ಮುಖರಾಗಬೇಕು. ಧನವನಲ್ಲಾಡಿಸಿ ನೋಡಿದ ಕೂಡಲೇ ಸ್ತಂಭೀಭೂತರಾಗಬಾರದು. ಭಕ್ತರ ನಿಸ್ಸೀಮತೆಯನ್ನು ಪರೀಕ್ಷಿಸಲು ಮುಂದಾದ ಶಿವ ಅವರ ನಿಶ್ಚಲ ಮನಸ್ಸಿನ ಪರಿಚಯವನ್ನು ಸಮಾಜಕ್ಕೆ ಮಾಡಿಕೊಡುತ್ತಿರುವನೆಂದುಕೊಳ್ಳಬೇಕು. ಒಲುಮೆಯಿಂದ ಜಂಗಮ ದಾಸೋಹಕ್ಕೆ ಧನವನ್ನು ಅರ್ಪಿಸದಿದ್ದರೆ ಅದು ಭಕ್ತರ ತಪ್ಪು. ಪರೀಕ್ಷೆಯ ಪರಿಣಾಮವೂ ಒಲುಮೆಯಲ್ಲಿಯೇ ಕೊನೆಗೊಳ್ಳಬೇಕೆನ್ನುತ್ತಾರೆ ಬಸವಣ್ಣನವರು.

ಅರ್ಥದ ತಾತ್ತ್ವಿಕನೆಲೆ

ಚಿತ್ತಮನ ಬುದ್ಧಿ ಶುದ್ಧವಾಗಿದ್ದ ಶರಣರೆಂದೂ ತಪ್ಪುವುದಿಲ್ಲ. ಏಕೆಂದರೆ ಅವರು ಧನದಲ್ಲಿ ಶುಚಿತ್ವವನ್ನು ಸಂಪಾದಿಸಿಕೊಂಡಿರುತ್ತಾರೆ. ತಮಗೆದುರಾಗಬಹುದಾದ ಹಲವಾರು ಸಮಸ್ಯೆಗಳಿಗೆ ಹೆದರಿ ಅನಾಚಾರದ ದಾರಿಯನ್ನು ಅವರೆಂದೂ ತುಳಿಯುವುದೇ ಇಲ್ಲ. ಧನದಲ್ಲಿ ಶುಚಿತ್ವ ಇರುವುದರಿಂದ ಅವರಿಗಿದು ಸಿದ್ಧಿಸಿತು. ಧನದಲ್ಲಿ ಶುಚಿತ್ವ, ಪ್ರಾಣದಲ್ಲಿ ನಿರ್ಭಯ ಯಾರಿಗೆ ಇರುತ್ತದೆಯೋ ಅವರು ನಿಷ್ಠಾವಂತರಾಗಿರುತ್ತಾರೆ. ನಿಧಾನ ತಪ್ಪಿ ಬಂದರೆ ಅತ್ಯಂತ ಸಂತೋಷದಿಂದ ಅದನ್ನು ಸ್ವೀಕರಿಸಿದರೆ ಅದು ಲೌಕಿಕ. ನಿರಾಕರಿಸಿದರೆ ಅದು ಪಾರಮಾರ್ಥಿಕ. ನಮ್ಮ ನಮ್ಮ ನಡೆ-ನುಡಿಯ ಶುಚಿತ್ವದಲ್ಲಿಯೇ ಅವು ಪ್ರಕಟವಾಗುತ್ತಿರುತ್ತವೆ. ಲೌಕಿಕದ ಅಳಿಯಾಸೆಯಿಂದ ಹೊರಬಂದಾಗಲೇ ಇದು ಸಾಧ್ಯವಾಗುತ್ತದೆ. ಶರಣರು ಪ್ರಾಣಕ್ಕೆ ಅಪಾಯ ಬಂದಾಗಲೂ ದಿಟವೆಂದು ಅಲಗನ್ನು ಬಿಡಬಾರದು. ಶುಚಿತ್ವವನ್ನು ಸಂಪಾದಿಸಿಕೊಂಡ ಶರಣರಿಗೆ ದೊರಕೊಂಡ ಸಿದ್ಧಾಂತವಿದು ಎನ್ನುತ್ತಾರೆ ಬಸವಣ್ಣನವರು.

ತನು ಮನ ಧನದಲ್ಲಿ ನಿಷ್ಠರಾದವರ ಬಾಗಿಲಿಗೆ ಹೋದರೆ ಯಾವ ಅಪಾಯ ಇರುವುದಿಲ್ಲ. ಮನಸ್ಸು ಶುದ್ಧವಾಗಿದ್ದಲ್ಲಿ ಮಾತ್ರ ಇದು ಸಾಧ್ಯ. ಜಂಗಮದಲ್ಲಿ ಕುಲವನರಸಬಾರದು. ಬಂದ ಜಂಗಮ ಬಡವ ಶೀಮಂತನೆಂದು ಭಿನ್ನವನ್ನೆಣಿಸಬಾರದು. ಅವರೊಳಗಿನ ಚೈತನ್ಯ, ಅನುಭಾವ, ಪರಿಶುದ್ಧವಾದ ನಡೆ-ನುಡಿಗೆ ಬೆಲೆಕೊಟ್ಟು ಅವರನ್ನು ಗೌರವಿಸಬೇಕು. ಅವರಿಗೆ ತನುಮನ ಧನವನ್ನು ಸಮರ್ಪಿಸಬೇಕು. ಬಸವಣ್ಣನವರು 'ಧನ ಮತ್ತು ಜಂಗಮ' ಎರಡರಲ್ಲೂ ನಿಷ್ಠೆಯಿದ್ದವರ ಕೆರಹನ್ನು ತಲೆಯ ಮೇಲೆ ಹೊತ್ತಿರುತ್ತೇನೆ ಎಂದು ಹೇಳಿಕೊಳ್ಳುತ್ತಾರೆ. ಅವರ ಮನಸ್ಸಿನ ಸೂಕ್ಷ್ಮತೆಯನ್ನು ಅಷ್ಟೇ ಸೂಕ್ಷ್ಮವಾಗಿಯೇ ಗಮನಿಸಬೇಕಾಗುತ್ತದೆ. ಒಂದೆಡೆ ಕಾಯಕದಲ್ಲಿ ಶುದ್ಧಿಯನ್ನು ಬೆಂಬಲಿಸುತ್ತ ಅದರಿಂದ ಬರುವ ಧನದಲ್ಲಿ ನಿಷ್ಠರಾಗಿರಲು ಪ್ರೇರಿಸುತ್ತ, ಆ ನಿಷ್ಠೆಯನ್ನು ಸೂತಕ ಸಮಾಜಕ್ಕೆ ಬಳಸದೇ, ಶುಚಿತ್ವ ಸಮಾಜಕ್ಕೆ ವಿನಿಯೋಗಿಸಬೇಕೆನ್ನುತ್ತಾರೆ. ವರ್ಣವ್ಯವಸ್ಥೆಯ ನಿರಾಕರಣೆಯ ತುಡಿತವೂ ಧನನಿಷ್ಠೆಯಲ್ಲಿರಬೇಕು.

ಭಕ್ತರು ದೇವರ ನಡುವಿನ ಸಂಬಂಧ ಅಪರೂಪದ್ದು. ಭಕ್ತರು ತಮ್ಮ ಭಕ್ತಿಗೆ ಪ್ರತಿಯಾಗಿ ಬೇಡಿಕೆಯನ್ನು ಇಟ್ಟುಕೊಂಡಿರುತ್ತಾರೆ. ಆದರೆ ಶರಣರು ಫಲಕ್ಕಾಗಿ ಕಾಯಬೇಕಾಗುವುದಿಲ್ಲ. ಪೂಜಿಸಿದ ಫಲ ಆಗಿಂದಾಗಲೇ ಅವರಿಗೆ ಸಿಗುತ್ತದೆ. ಈ ಅರಿವನ್ನು ಮೂಡಿಸಲು ಬಸವಣ್ಣನವರು ಸದಾ ಸಿದ್ಧರಾಗಿದ್ದರು. ಕೊಟ್ಟು ಪಡೆಯುವ ಕ್ರಿಯೆಯಲ್ಲಿ ನಿಜವಾದ ನಿಷ್ಠೆ ಇರುವುದಿಲ್ಲ. ಶರಣರ ನಿಷ್ಠೆಯ ಪರಿ ಬೇರೆಯೇ. ಅವರಲ್ಲಿಯೇ ದೇವರಿದ್ದಾನೆ. ಅಷ್ಟೇ ಅಲ್ಲ,

ಅವರೇ ದೇವರು. ಹೀಗಾಗಿ ದೇವರಲ್ಲಿ ನಿಷ್ಠೆ ಕಳೆದುಕೊಳ್ಳುವುದೆಂದರೆ ತಮ್ಮ ಮೇಲಿನ ನಿಷ್ಠೆಯನ್ನು ತಾವೇ ಕಳೆದುಕೊಂಡಂತೆ. ಇಷ್ಟಲಿಂಗವಿದ್ದವರಿಗೆ ಯಾವ ಚಡಪಡಿಕೆಯೂ ಇರುವುದಿಲ್ಲ. ಉಸಿರುಸಿರಲ್ಲೂ ನಿಷ್ಠೆ ಆತ್ಮಗೌರವ ತುಂಬಿಕೊಂಡಿರುತ್ತದೆ. ತಾವಷ್ಟೇ ಅಲ್ಲ ತಮ್ಮ ಮನೆಗೆ ಬಂದವರನ್ನು ಲಿಂಗವೆಂದೇ ನಂಬಬೇಕು. ಆಗ ಬಂದವರಿಗೆ ಉಪಚರಿಸುವುದೆಂದರೆ ಲಿಂಗಕ್ಕೆ ಉಪಚರಿಸಿದಂತೆ. ತೃಪ್ತಿಪಡಿಸಿದರೆ ತೃಪ್ತರಾದಂತೆ. ಈ ಅರಿವು ಎಲ್ಲರಲ್ಲೂ ಜಾಗ್ರತವಾದರೆ ನಿಷ್ಠೆ ತಾನಾಗಿಯೇ ಇಮ್ಮಡಿಗೊಳ್ಳುತ್ತ ಹೋಗುತ್ತದೆ. 'ಲಿಂಗಕ್ಕೆ ಉಂಬ ಬಾಯಿ ಜಂಗಮ' ಅಲ್ಲವೆ? ಧರ್ಮವನ್ನರ್ಪಿಸುವಾಗಲೂ ಈ ನಿಷ್ಠೆ ಅಲ್ಲಿರಬೇಕು. ಆಗ ಸಹಜವಾಗಿಯೇ ಲೌಕಿಕ ಚಿಂತನೆಯೇ ತಾತ್ತ್ವಿಕ ಚಿಂತನೆಯಾಗಿ ಮಾರ್ಪಡುತ್ತದೆ. ಶರಣರು ಶರಣರಲ್ಲಿ ಗುಣವನ್ನು ಅರಸದೇ, ಅರ್ಥದಲ್ಲಿ ನಿಷ್ಠೆಯನ್ನು ಕಳೆದುಕೊಳ್ಳದೇ ಇರಬೇಕು. ಸಮಾಜ ತನ್ನನ್ನು ನೋಯಿಸಿತು. ನಿಂದಿಸಿತು ಎಂದು ಖಿನ್ನರಾಗಬಾರದು. ತಿಳಿಯದೇ ಆಡಿದ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು. ತಮ್ಮ ನಿಷ್ಠೆಗೆ ತಾವು ಚ್ಯುತಿ ತಂದುಕೊಂಡರೆ ಅದರಿಂದ ತಮಗೇ ಹಾನಿ ಎಂದುಕೊಳ್ಳಬೇಕೆಂದು ಹೇಳುತ್ತಾ ಸಾಮಾನ್ಯರ ಆಲೋಚನೆಗಳನ್ನು ವಿಸ್ತೃತಗೊಳಿಸಲು ಬಸವಣ್ಣನವರು ಪ್ರಯತ್ನಿಸಿದರು.

ಎಲ್ಲವೂ ನನ್ನದೇ ನನ್ನಿಂದಲೇ ಎಂಬ ಅಹಂಮಿಕೆ ಇರುತ್ತದೆ. ಅದನ್ನೂ ಬಸವಣ್ಣನವರು ಪ್ರಶ್ನಿಸುತ್ತಾರೆ.

ಅರ್ಥಪ್ರಾಣ ಅಭಿಮಾನ ನಿಮ್ಮದೆಂಬಿರಿ,
ಒತ್ತಿನೋಡಿದರೆ ಮುಟ್ಟಲೀಯಿರಿ.

ನಮ್ಮವೆಂದು ಭಾವಿಸಿದ ವಸ್ತುಗಳ ಸಮರ್ಪಕ ಬಳಕೆಯಾಗಬೇಕು. ಹೇಳುವುದು ಯಾವಾಗಲೂ ಸುಲಭ. ಅದರಂತೆ ನಡೆದುಕೊಳ್ಳುವುದು ಕಠಿಣ. ಅಂಥ ವೇಷಧಾರಿಗಳ ನಿಲವನ್ನು ಬದಲಾಯಿಸಬೇಕಾದ ಅನಿವಾರ್ಯತೆಯನ್ನು ಶರಣರು ಎದುರಿಸಬೇಕಾಗಿತ್ತು. ಆಗ ಬಸವಣ್ಣನವರು ನಮ್ಮದೆಂಬುದು ಯಾವುದೂ ಇಲ್ಲ ಎಂದು ಹೇಳುತ್ತಾರೆ. 'ತನುಮನ ಧನ ಒಡಲು ಒಡವೆ ಹಡೆದರ್ಥ' ಎಲ್ಲವೂ ನನ್ನದೆಂದು ಬೀಗದೇ ಎಲ್ಲವೂ ನಿನ್ನದೆಂದು ಅರ್ಪಿಸಿ ನಿರಾಳವಾಗಬೇಕು. ಆದಾಗಲೂ ನನ್ನದೆಂಬ ಅಹಂಮಿಕೆ ಮುಂದೆ ಬಂದು ಕಾಡುತ್ತಿರುತ್ತದೆ. ಅದಕ್ಕೆಂದೂ ಓಗೊಡಬಾರದು. ಬರಿಯ ಮಾತಿನಿಂದ ಹೇಳಿದರಾಗದು. ಅದು ನಿಜವಾಗಿಯೂ ನಿಮ್ಮದಾಗಬೇಕು ವೇಷಧಾರಿಗಳಿಂದ ಏನನ್ನೂ ಸಾಧಿಸಲಾಗದು. ಅವರಲ್ಲಿ ಬರೀ ನಾನೆಂಬುದು ತುಂಬಿಕೊಂಡಿರುತ್ತದೆ. ಎಲ್ಲವೂ ನಿನ್ನದೆಂದು ತುಟಿಯಂಚಿನಿಂದ ಹೇಳುವವರ ಅಂತರಂಗವನ್ನು ಬಗಿದು ನೋಡಬೇಕೆನಿಸುತ್ತದೆ ಬಸವಣ್ಣನವರಿಗೆ ಒಳಗು ಶುದ್ಧವಾದಾಗ ಮಾತ್ರ ಅವರು ಲಿಂಗವಂತ ಜಂಗಮವಂತರಾಗಲು ಸಾಧ್ಯ ಎಂದು ನಿಷ್ಠುರವಾಗಿಯೇ ಹೇಳುತ್ತಾರೆ. ವೀರಧೀರ ಸಮಗ್ರಾಹಕರಾದವರಿಗೆ ಮಾತ್ರ ಯಾವ ಭಯವಿರುವುದಿಲ್ಲ. ಏಕೆಂದರೆ ಅಲ್ಲಿ ತಮ್ಮದೆನ್ನುವುದು ಏನೂ ಇರುವುದಿಲ್ಲ. ಎಲ್ಲ ಪವಿತ್ರ ಭಾವನೆಯಿಂದಲೇ ಅರ್ಪಿತವಾಗುತ್ತದೆ. ತಮ್ಮದೆಂಬ ಅಹಂಕಾರ ಶರಣರಿಗೆ ಸಲ್ಲದು. ನಿಮ್ಮದೆಂದು ಅರ್ಪಿಸಿದ ಮೇಲೆ ಲೋಭ ಕಾಣಿಸದು. ಆ ವಿಚಾರ ಸುಳಿಯದೇ ಅರ್ಥದ ಅರ್ಪಣೆ ಆಗಬೇಕು. ತನುಮನ ಧನ ಎಂಬವು ಕಣ್ಣುಮುಚ್ಚಾಲೆ ಆಟವಿದ್ದಂತೆ. ಇದನ್ನು ಲೌಕಿಕದಾಚೆ ಬಳಸಿಕೊಳ್ಳುವುದು ಅಷ್ಟು ಸುಲಭವಾದುದಲ್ಲ. ನಮ್ಮದೆಂಬ ಭ್ರಮೆಯಿಂದ

ಹೊರಬಂದು, ಆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗದಂತಿರಲು ಬಸವಣ್ಣನವರು ಹೇಳುತ್ತಾರೆ. ತಮ್ಮನ್ನು ಹೀಗಿರಿಸಿ ಕಾಪಾಡಬೇಕೆಂದು ಸಂಗನಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

ನನ್ನದೆನ್ನುವುದು ವಿಕಾರ. ನಿನ್ನದೆನ್ನುವುದು ನಿರ್ವಿಕಾರ. ನನ್ನದೆಂಬ ಅಹಂನಿಂದ ದೂರಾದಾಗಲೇ ವಿಕಾರಗುಣಗಳು ದೂರವಾಗುತ್ತವೆ. ಧನದಲ್ಲಿ ನಿರ್ವಿಕಾರತೆಯನ್ನು ತಂದುಕೊಳ್ಳುವುದು ಅಷ್ಟು ಸುಲಭವಲ್ಲ. ಧನವೆಲ್ಲ ಸಂಗನದು ಎಂದುಕೊಂಡಾಗ ಮಾತ್ರ ನಿರ್ವಿಕಾರಭಾವ ಕಾಣಿಸುತ್ತದೆ. ಧನವು ಕೂಡ ನಿರ್ವಿಕಾರಿಗೇ ಸಲ್ಲಬೇಕು. ಶರಣರು ಎಂದೂ 'ಕಾಂಚನವೆಂಬ ನಾಯಿ'ಯನ್ನು ನಚ್ಚಿದವರಲ್ಲ.

ಪರಧನವನ್ನಂತೂ ಮುಟ್ಟುವುದೇ ಇಲ್ಲ. ಕಾಯಕ ಮಾಡದೇ ಬರುವ ಯಾವ ಮೂಲದ ಧನವೇ ಆಗಲಿ ಅದನ್ನು ಶರಣರು ನಿರಾಕರಿಸುತ್ತಾರೆ. 'ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ' ಎಂಬ ಭಾವ ಮನೋಶ್ರೀಮಂತಿಕೆ ಸಹಜವಾಗಿಯೇ ನಮಗೆ ದೊರಕೊಂಡಿರುವಾಗ, ನಿಧಿನಿಧಾನವೇ ನಮ್ಮಂತರಂಗದಲ್ಲಿರುವಾಗ ಬಹಿರಂಗದ, ಪರಧನದ ಚಿಂತೆ ಕಾಡಲು ಸಾಧ್ಯವೇ ಇಲ್ಲ. ಸುಳಿದರೂ ಧೈರ್ಯದಿಂದ ಅದನ್ನು ನಿರಾಕರಿಸಬೇಕೆನ್ನುತ್ತಾರೆ. ಪರಧನ ಯಾವಾಗಲೂ ಸರ್ವನಾಶಕ್ಕೆ ದಾರಿಮಾಡಿಕೊಡುತ್ತದೆ. ಪರಧನಕ್ಕಳುಪಿದರೆ ಸಂಗಯ್ಯ ಹಿಡಿಖಂಡ ಮಾಡಿ ಕೊಲ್ಲದೇ ಬಿಡನು. ಸಂಗಯ್ಯನಲ್ಲಿ ನಂಬಿಕೆಯಿದ್ದೂ ತನ್ನ ಬಹಿರಂಗದ ದಾರಿದ್ರ್ಯಕ್ಕೆ ಹೆದರಿ ಕುಗ್ಗಿಹೋಗಬಾರದು. ಪರಧನಕ್ಕೆಳಸಬಾರದು. ಹಾಗೇನಾದರೂ ಮಾಡಿದರೆ ಅಂದೇ ಅವರು ಸಂಗನ ಚರಣಕ್ಕೆ ದೂರವಾಗುತ್ತಾರೆ ಎನ್ನುತ್ತಾರೆ. ತೊರೆದು ಮಿಂದೆದ್ದು ಗಡಗಡ ನಡುಗುತ್ತ ಮಡಿಭಕ್ತಿಯನ್ನು ತೋರಿಸುವ ಸ್ವಾಮಿಗಳಿರಾ ಮೊದಲು ಪರಧನದಾಸೆಯಿಂದ ಹೊರ ಬನ್ನಿ ಎಂದು ಕರೆಕೊಡುತ್ತಾರೆ. ಪರಧನಕ್ಕೆಳೆಸುವವರೆಂತು ಶರಣರಾದಾರು? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. ಭವಭಾರಿಯಾದವರು ಹೀಗೆ ವಿಷಯಿಗಳಾಗಿ ನಡೆದುಕೊಳ್ಳುತ್ತಾರೆಯೇ ಹೊರತು ಶಿವಭಕ್ತರಲ್ಲ ಎಂದು ಹೇಳುತ್ತ ಧನದ ಪಾವಿತ್ರ್ಯತೆಯನ್ನು ಬಸವಣ್ಣನವರು ಪರಿಚಯಿಸಿಕೊಟ್ಟಿದ್ದಾರೆ.

ಪರಧನವನ್ನು ನಿರಾಕರಿಸುವ ಶರಣರ ಧನದಲ್ಲಿ ವಿಕಾರವಿರುವುದಿಲ್ಲ. ಏಕೆಂದರೆ ಅದು ಸಾತ್ವಿಕ ಮಾರ್ಗದಿಂದ ಬಂದುದಾಗಿರುತ್ತದೆ. ವಿನಿಯೋಗವೂ ಪವಿತ್ರವಾಗಿರುತ್ತದೆ. ಶರಣರ ಧನ ಗುರು ಲಿಂಗ ಜಂಗಮಕ್ಕೆ ಸವೆಯುವಂಥದ್ದು. ಈ ಭಾಷೆಗೆ ತಪ್ಪಿದ್ದೇ ಆದರೆ ತಮ್ಮ ಮೂಗನ್ನೇ ಕತ್ತರಿಸಿಕೊಳ್ಳುತ್ತೇನೆಂಬ ಎದೆಗಾರಿಕೆ ಬಸವಣ್ಣನವರದು. ಆದ್ಯರ ವಚನ ಪರುಷವಿದ್ದಂತೆ. ಅಲ್ಲಿ ಹುಡಿಯೆಂಬುದೇ ಇಲ್ಲ. ಅನ್ಯ ಸೋಂಕುಳ್ಳವರಿಗೆ ಅವರ ಧನವೆಂದೂ ಅರ್ಪಿತವಾಗುವುದಿಲ್ಲ. ಶರಣರ ಧನ ಕುಳಿತಲ್ಲೇ ಬಂದುದಲ್ಲ. ಬೇಡುವವರೂ ಎಚ್ಚರದಿಂದಲೇ ಧನವನ್ನು ಬೇಡಬೇಕಾಗುತ್ತದೆ. ಯಾರು ಕಾಯಕ ಯೋಗಿಗಳಾಗಿರುತ್ತಾರೆಯೇ ಅವರಲ್ಲಿಗೆ ಹೋಗಿ ಅವರ ಕಾಯಕದ ಪ್ರತಿಫಲದ ಮಿತಿಯನ್ನರಿತು ಕೇಳಬೇಕು. ಅತಿಯಾದ ಬೇಡಿಕೆಯನ್ನೊಡ್ಡಿ ಭಕ್ತರನ್ನು ನೋಯಿಸಬಾರದು. ಹಾಗೆ ಬೇಡಿದರೆ ಆಣೆಯೆನ್ನುತ್ತಾರೆ ಬಸವಣ್ಣನವರು. ಕಾಯಕ ಜೀವಿಗಳೆಂದೂ ಇಲ್ಲವೆನ್ನುವುದಿಲ್ಲ. ದ್ರವ್ಯವನ್ನೇ ಅರಿಯದವರಿಗೆ ಅವರ ಮಗನೇ ಐಶ್ವರ್ಯವಂತನಾಗಿ ಜನಿಸಿದಾಗ ಆಗುವ ಸಂತೋಷ ಬಸವಣ್ಣನವರಿಗೆ ಕೂಡಲಸಂಗಮದೇವ ಬಂದು ಬೇಡಿದಾಗ ಆಗಿದೆ. ಈ ಗುಣ ಎಲ್ಲರದಾಗಬೇಕೆಂದು ಬಯಸುತ್ತಾರೆ. ಕಾಯಕದಿಂದ ಬಂದ ದ್ರವ್ಯವನ್ನು ಮತ್ತೊಂದಕ್ಕೆ ಬಳಸಬಾರದೆಂದು

ಎಚ್ಚರಿಸುತ್ತಾರೆ. 'ಹೊನ್ನೆಂಬ ಕರ್ಮದ ಬಲೆಯಲ್ಲಿ ಸಿಲುಕಿದ ವಿಪ್ರ' ತಾವಲ್ಲ ಎಂದೂ ಸಮರ್ಥಿಸಿಕೊಳ್ಳುತ್ತಾರೆ ಬಸವಣ್ಣನವರು. ತಮ್ಮ ಪರಿಪೂರ್ಣ ನಿಷ್ಠೆ ಅರ್ಥದಲ್ಲಿ ಅಚಲವಾದುದೆಂಬುದನ್ನು ಎಲ್ಲರಿಗೂ ಪರಿಚಯಿಸಿಕೊಟ್ಟಿರುವರು.

ಧನದ ಅರ್ಪಣೆ ಸಮರ್ಥರಾದವರಿಗೆ ಸಲ್ಲಬೇಕೆಂಬುದನ್ನು ಬಸವಣ್ಣನವರು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ.

೧. ಕೂಡಲಸಂಗನ ಶರಣರಿಗೇ ಧನ ಸವೆಯಬೇಕು.

೨. ಜಂಗಮಕ್ಕೆ ಧನವ ಸವೆಸಬಲ್ಲವರೇ ಜಾಣರು.

೩. ತ್ರಿವಿಧ ದಾಸೋಹದ ಮೂಲಕ ಹಣ ಅರ್ಪಿತವಾಗಬೇಕು.

೪. ಪುರಾತನರೆಲ್ಲ ತನು–ಮನ ಧನವನಿತ್ತು ಲಿಂಗವನ್ನು ಕೂಡಿದರೆಂಬ ಅರಿವು ಬೇಕು.

೫. ಧನ ನಿಮ್ಮದೆಂದ ಮೇಲೆ ಮತ್ತೆ ಬೇರೆ ಧನದ ಅರ್ಪಣೆಯೆಂಬುದುಂಟೆ? ಎಂಬ ಭಾವವೂ ಬೇಕು.

೬. ಕಳ್ಳನಾಣ್ಯವನ್ನು ಅರ್ಪಿಸಬಾರದು.

೭. ಧನದ ಜೊತೆ ಮನವನ್ನೂ ಅರ್ಪಿಸಿ ಶುದ್ಧರಾಗಬೇಕು.

೮. ಗಣಾಡಂಬರದವರಿಗೆ ಧನ ಸಮರ್ಪಣೆ ಆಗಬಾರದು.

ಧನವನ್ನು ಇರಿಸಿದರೆ ಭವ ಬರುವುದು ತಪ್ಪುವದಿಲ್ಲ. ಸಂಗ್ರಹಬುದ್ಧಿ ಶರಣರಿಗೆ ಇರಬಾರದು. ಒಡನೆಯೇ ಸಮರ್ಪಿಸಿ ಧನ್ಯರಾಗಬೇಕು. ಆಯುಷ್ಯವುಂಟೆಂದು ಧನವ ಮಡುಗಿದರೆ ಆಗುವ ದುರಂತದ ಪರಿಚಯವನ್ನು ಬಸವಣ್ಣನವರು ಮಾಡಿಕೊಟ್ಟರು. ಹಣಕೂಡಿಟ್ಟರೆ ಮಾಯಾಪಾಶ ಬಿಡದು. ಅದು ಮನ ಬಂದೆಡೆ ಎಳೆದೊಯ್ಯುತ್ತದೆ. ಅದರ ಸೆಳೆತಕ್ಕೆ ಒಳಗಾಗದೇ ಅಂದಂದಿನ ಪ್ರತಿಫಲ ಅಂದಂದೇ ಸವೆಯುವಂತಾಗಬೇಕು. ಅಸಂಗ್ರಹ ನೀತಿಯೊಂದೇ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ತರುವ ಸೂತ್ರ ಎಂದು ಘೋಷಿಸಿದರು.

ಪುಣ್ಯ ಮಾರ್ಗದಿಂದ ಧನ ಸಂಪಾದನೆ ಹಾಗೂ ವಿನಿಯೋಗ ಒಟ್ಟೊಟ್ಟಿಗೇ ನಡೆಯಬೇಕು. ಅರ್ಥಕ್ಕೆ ಸದ್ಭಕ್ತರೇ ಒಡೆಯರು. ಇದಕ್ಕೆ ಕೂಡಲಸಂಗನೇ ಪ್ರಮಾಣ. ತನು ಮನ ಧನ ಮೂರಕ್ಕೆಯೂ ಶರಣರೇ ಒಡೆಯರು. ಅರ್ಥ ಎನ್ನುವುದು ಬಾಳ ಬಾಯಧಾರೆಯಿದ್ದಂತೆ ತನು ಮನ ಧನ ಎಂಬವು ಸದಾ 'ಮೂಗಿನ ಮೇಲೆ ನೇತಾಡುತ್ತಿರುವ' ಮೂರು ಕತ್ತಿಗಳು. ಯಾವಾಗ ಇರಿಯುತ್ತವೆಯೋ ಹೇಳಲಿಕ್ಕೆ ಆಗದು. ಶರಣರು ಇವುಗಳಿಂದ ಯಾವಾಗಲೂ ದೂರವಿರುತ್ತಾರೆ. ಹೀಗೆ ನಡೆದುಕೊಳ್ಳುವಲ್ಲಿಯೇ ಅವರಿಗೆ ಯಶಸ್ಸಿದೆ ಅವರಲ್ಲಿರುವ ಪ್ರಾಮಾಣಿಕತೆ, ಪರಿಶ್ರಮ ಮತ್ತು ವಿನಯವೇ ಅವರನ್ನು ಶ್ರೀಮಂತರನ್ನಾಗಿಸುತ್ತದೆ. ಶರಣರು 'ಅಭಿಮಾನಧನ'ರಾಗಿ ಬದುಕ ಬೇಕೆಂಬುದೇ ಬಸವಣ್ಣನವರ ಆರ್ಥಿಕ ಧೋರಣೆಯ ಮುಖ್ಯ ಆಶಯ.

ಆಕರ ಕೃತಿಗಳು

೧. ಬಸವಣ್ಣನವರ ವಚನ ಸಂಪುಟ : ಸಂ. ಡಾ. ಎಂ.ಎಂ. ಕಲಬುರ್ಗಿ, ಪ್ರ: ಕರ್ನಾಟಕ ಸರ್ಕಾರದ ಪರವಾಗಿ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.

೨. ಶರಣರ ಆರ್ಥಿಕ ಚಿಂತನೆ, ಡಾ. ಜಯಶ್ರೀದಂಡೆ, ಸದ್ಭಾವಗೋಷ್ಠಿ, ಗದ್ದುಗೆಮಠ, ಕಲಬುರ್ಗಿ–೧, ೧೯೯೮.

❑

ಬಸವಣ್ಣ ಮತ್ತು ಪ್ರಸ್ತುತ ಸಾಮಾಜಿಕ ಸಂದರ್ಭ

●

ಡಾ. ಬಸವರಾಜ ಸಬರದ

ಪ್ರಸ್ತುತ ಸಾಮಾಜಿಕ ಸಂದರ್ಭ, ಸಮಸ್ಯೆಗಳ ಸುಳಿಯಲ್ಲಿ ಮುಳುಗಿಹೋಗಿದೆ. ಜಾತಿ ಜಗಳ, ಅಸಮಾನತೆ, ಪ್ರತ್ಯೇಕತೆ, ಮಹಿಳಾ ಶೋಷಣೆಯಂತಹ ಜ್ವಲಂತ ಸಮಸ್ಯೆಗಳು ಈಗ ಮತ್ತಷ್ಟು ಉರಿಯತೊಡಗಿವೆ. ಅಧಿಕಾರದ ಲಾಲಸೆಗಾಗಿ, ರಾಜಕೀಯವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡ ಅನೇಕ ಮುಖಂಡರೇ ಇಂತಹ ಜ್ವಲಂತ ಸಮಸ್ಯೆಗಳ ಮರುಹುಟ್ಟಿಗೆ ಕಾರಣರಾಗಿದ್ದಾರೆ. ಪರಿಸರ ದಿನನಿತ್ಯ ಮಾಲಿನ್ಯವಾಗತೊಡಗಿದೆ. ನಿಸರ್ಗ ಸಮತೋಲವನ್ನು ಕಳೆದುಕೊಳ್ಳತೊಡಗಿದೆ. ವಿದ್ಯಾವಂತರೆನ್ನಿಸಿಕೊಂಡವರ ನಡುವೆಯೂ ಕೋಮು ಗಲಭೆಗಳು ಹೆಚ್ಚ ತೊಡಗಿವೆ.

ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಅನೇಕ ಚಿಂತಕರ ಚಿಂತನೆಗಳು ಮಾರ್ಗ ತೋರಿಸಬಲ್ಲವುಗಳಾಗಿವೆ. ಈ ದೇಶದ ಪ್ರಮುಖ ಚಿಂತಕರಾದ ಬುದ್ಧ–ಬಸವ–ಅಂಬೇಡ್ಕರ್–ಲೋಹಿಯಾ–ಗಾಂಧಿ–ಪೆರಿಯಾರ್ ಈ ಮುಂತಾದವರ ವಿಚಾರಗಳು ಇಂದಿಗೂ ನಮ್ಮನ್ನು ಚಿಂತನೆಗೆ ತೊಡಗಿಸುತ್ತವೆ. ಬುದ್ಧನ ಜೀವನ ಪ್ರೀತಿ, ಬಸವಣ್ಣನ ಮುಗ್ಧತೆ, ಅಂಬೇಡ್ಕರ್‌ನ ಹೋರಾಟ, ಗಾಂಧೀಜಿಯ ಸರಳತೆ, ಲೋಹಿಯಾನ ನಿಷ್ಠುರತೆ ಮತ್ತೆಮತ್ತೆ ನಮ್ಮ ಚಿಂತನೆಯ ಮೂಸೆಯಲ್ಲಿ ಮೂಡಿ ಬಂದಾಗ ಹೊಸ ಬೆಳಕು ಕಾಣಬಹುದಾಗಿದೆ.

ಪ್ರಸ್ತುತ ಸಾಮಾಜಿಕ ಸಂದರ್ಭದ ಅನೇಕ ಜ್ವಲಂತ ಸಮಸ್ಯೆಗಳಿಗೆ ಬಸವಣ್ಣನವರ ವಚನಗಳಲ್ಲಿ ಉತ್ತರವಿದೆ. ಹನ್ನೆರಡನೇ ಶತಮಾನದಲ್ಲಿ ವಚನ ಚಳವಳಿಯನ್ನು ಹುಟ್ಟು ಹಾಕಿ, ಸಹಸ್ರಾರು ನೊಂದ ಜೀವಿಗಳ ದನಿಯಾಗಿ ನಿಂತ ಬಸವಣ್ಣ ಬದುಕಿನ ಅನೇಕ ನಿಷ್ಠುರತೆಗಳನ್ನು ತನ್ನ ವಚನಗಳ ಮೂಲಕ ತಿಳಿಸಿದ್ದಾನೆ. ಅಲ್ಲಿಯ ಅನೇಕ ವಿಚಾರಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಇಂದಿನ ಪ್ರಮುಖ ಸಮಸ್ಯೆಗಳಿಗೆ ಬಸವಣ್ಣನ ಅನೇಕ ವಚನಗಳು ಹೇಗೆ ಪರಿಹಾರ ನೀಡಬಲ್ಲವೆಂಬುದನ್ನು ಚರ್ಚಿಸುವುದು ಈ ಲೇಖನದ ಪ್ರಮುಖ ಉದ್ದೇಶವಾಗಿದೆ.

ಬುದ್ಧ ರಾಜಮನೆತನದಲ್ಲಿ ಹುಟ್ಟಿ ರಾಜವೈಭವವನ್ನು ತಿರಸ್ಕರಿಸಿದರೆ, ಬಸವಣ್ಣ ರಾಜಸತ್ತೆಯಲ್ಲಿದ್ದುಕೊಂಡೇ ಅದನ್ನು ನಿರ್ಲಕ್ಷಿಸಿದ. ಬುದ್ಧನ ದಯೆ, ಬಸವಣ್ಣನಲ್ಲಿ ಧರ್ಮವಾಗಿ ಪಲ್ಲವಿಸಿದರೆ, ಬಸವಣ್ಣನ ದಲಿತ ವಿಮೋಚನಾ ಚಳವಳಿ ಅಂಬೇಡ್ಕರ್‌ನಲ್ಲಿ ಚಿಗುರೊಡೆದು ನಿಲ್ಲುತ್ತದೆ. ಈ ದೇಶದಲ್ಲಿ ಬುದ್ಧ–ಬಸವ–ಅಂಬೇಡ್ಕರ್ ಇವರೆಲ್ಲ ಹೊಸ ವ್ಯವಸ್ಥೆಯ ನಿರ್ಮಾಣಕ್ಕಾಗಿ ಪ್ರಯತ್ನಿಸಿದವರಾಗಿದ್ದಾರೆ. ಮಾರ್ಕ್ಸ್‌ನ ಆರ್ಥಿಕ–ರಾಜಕೀಯ

ಸಿದ್ಧಾಂತ ಈ ದೇಶದ ಚಿಂತಕರಲ್ಲಿ ಮಾರ್ಕ್ಸ್ ಹೇಳುವ ರೂಪದಲ್ಲಿ ಕಾಣಿಸದಿದ್ದರೂ, ಅದಕ್ಕೆ ಸರಿಸಮಾನವಾದ ವಿಚಾರಗಳು ಈ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅರಳಿ ನಿಂತಿರುವುದನ್ನು ಗಮನಿಸಬಹುದಾಗಿದೆ.

ಈ ದೇಶದ ವೈರುಧ್ಯ ಸಂಸ್ಕೃತಿಯನ್ನು ಮೊಟ್ಟಮೊದಲ ಬಾರಿಗೆ ಪ್ರಶ್ನಿಸಿ ಸ್ಪಷ್ಟಸಂಸ್ಕೃತಿಯನ್ನು ರೂಪಿಸಿದ ವ್ಯಕ್ತಿ ಬಸವಣ್ಣ. ಯಜಮಾನ ಸಂಸ್ಕೃತಿಯನ್ನು ವಿರೋಧಿಸುತ್ತಲೇ ಸಮ ಸಂಸ್ಕೃತಿಯನ್ನು ಬೆಳೆಸಿದ ಬಸವಣ್ಣ ಈ ದೇಶದ ನಿಜವಾದ ಸಂಸ್ಕೃತಿಯ ವಾರಸುದಾರನಾದ. ಜೀವನ ವಿಧಾನದ ಅನೇಕ ಮಜಲುಗಳನ್ನು ಸಮಾನತೆಯ ಹಿನ್ನೆಲೆಯಲ್ಲಿ ಸರಳೀಕೃತಗೊಳಿಸಿ ಸ್ಪಷ್ಟ ಸಂಸ್ಕೃತಿ ಮೂಡಿಬರಲು ಬಸವಣ್ಣ ಕಾರಣನಾದ. ನಮ್ಮ ಸಂಸ್ಕೃತಿಯನ್ನು ಸ್ಪಷ್ಟವಾಗಿ ತಿಳಿಯದ ಹೊರತು ನಮ್ಮ ಜೀವನದ ನೆಲೆಗಳನ್ನರಿಯದ ಹೊರತು ನಮಗೆ ಮುಂದೆ ಹೋಗಲಿಕ್ಕಾಗುವುದಿಲ್ಲ. ಈ ಸಂಸ್ಕೃತಿಯ ಗರ್ಭದಲ್ಲಿರುವ ಧರ್ಮ–ದೇವರು–ದೇವಸ್ಥಾನ–ಹಬ್ಬ–ದಿಬ್ಬಣ–ಮದುವೆ–ಸಂಸಾರ–ಕರ್ಮ ಇವೆಲ್ಲವುಗಳಿಗೆ ಬಸವಣ್ಣ ಮೊಟ್ಟ ಮೊದಲ ಬಾರಿಗೆ ಸ್ಪಷ್ಟವಾದ ಮತ್ತು ಸರಳವಾದ ಉತ್ತರಗಳನ್ನು ನೀಡಿದ. ಕೈಲಾಸ, ಮುಕ್ತಿ, ಸ್ವರ್ಗ–ನರಕಗಳ ಸ್ಪಷ್ಟ ಪರಿಕಲ್ಪನೆಯನ್ನು ಕೊಟ್ಟ. ಬಸವಣ್ಣ ಸಂಸ್ಕೃತಿಗೆ ನೀಡಿದ ವ್ಯಾಖ್ಯೆ ನಮಗಿಂದಿಗೂ ಪ್ರಸ್ತುತವೆನಿಸುತ್ತದೆ. ಇಂಡಿಯಾ ದೇಶದ ಯಜಮಾನ ಸಂಸ್ಕೃತಿಯ ಗೋಸುಂಬೆತನವನ್ನು ತಿಳಿಯದೆ, ಬಸವಣ್ಣನ ಸಮಸಂಸ್ಕೃತಿಯ ನೆಲೆಗಳನ್ನು ಅರ್ಥೈಸಿಕೊಳ್ಳದೆ, ನಾವಿಂದು ನಮ್ಮ ಜ್ವಲಂತ ಸಮಸ್ಯೆಗಳಿಗೆ ಉತ್ತರ ಹುಡುಕಲಾರೆವು.

ಯಾವ ವೇದಶಾಸ್ತ್ರ ಆಗಮಗಳು ಈ ದೇಶವನ್ನು ದಿಕ್ಕು ತಪ್ಪಿಸಿದ್ದವೋ ಅವುಗಳನ್ನು ಬಸವಣ್ಣ ಸ್ಪಷ್ಟವಾಗಿ ವಿರೋಧಿಸಿದ. ಅವತಾರಗಳ ಕಲ್ಪನೆಯನ್ನು ಕಿತ್ತು ಹಾಕಿದ. ವರ್ಣಪದ್ಧತಿಯನ್ನು ತಳ್ಳಿಹಾಕಿದ. ಪುನರ್ಜನ್ಮವಿಲ್ಲವೆಂದು ಸ್ಪಷ್ಟಪಡಿಸಿದ. ಕಾಯಕವೇ ಕೈಲಾಸವೆಂದು ಹೇಳಿದ, ಸ್ವರ್ಗ–ನರಕಗಳು ಬೇರಿಲ್ಲ ಅವೆಲ್ಲ ಇಲ್ಲಿಯೇ ಇವೆಯೆಂದು ತೋರಿಸಿದ. ಅನೇಕ ದೇವರುಗಳ ಹಾವಳಿಯನ್ನು ತಪ್ಪಿಸಿ ಏಕದೇವೋಪಾಸನೆಗೆ ಹಚ್ಚಿದ. ಸುಲಿಗೆಯ ಕೇಂದ್ರಗಳಾಗಿದ್ದ ದೇವಾಲಯಗಳನ್ನು ತಿರಸ್ಕರಿಸಿ, ದೇಹವೇ ದೇಗುಲವಾಗಿ ಬೆಳೆಯುವ ಪರಿಯನ್ನು ಕಲಿಸಿದ. ದ್ವೇಷ ಸ್ವಾರ್ಥಕ್ಕೆ ಬದಲು, ದಯೆ–ಮಾನವೀಯತೆಯನ್ನು ಮುಡಿಸಿದ. ಮೃದುವಚನವೇ ಸಕಲ ಜಪತಪಗಳೆಂದು ಹೇಳಿದ, ಸದುವಿನಯವೇ ಸದಾಶಿವನ ಒಲುಮೆಯೆಂದು ಸಾರಿದ. ಬಸವಣ್ಣನ ಇಂತಹ ಅನೇಕ ಅಮೂಲ್ಯ ವಿಚಾರಗಳು ಇಂದಿನ ಬದುಕಿಗೆ ತುಂಬಾ ಅನಿವಾರ್ಯವಾಗಿವೆ. ಈ ವಿಚಾರಗಳನ್ನು, ಈ ನುಡಿಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡಿದ್ದರೆ, ಕೋಮುವಾದ, ಜಾತಿಜಗಳ, ಭಯೋತ್ಪಾದನೆ ನಿತ್ಯದ ಹಿಂಸೆ, ಪ್ರತ್ಯೇಕತೆ, ವೈಷಮ್ಯ, ಅಸಮಾನತೆಯಂತಹ ಸಮಸ್ಯೆಗಳು ನಮ್ಮನ್ನಿಂದು ಈ ರೀತಿಯಾಗಿ ಕಾಡುತ್ತಿರಲಿಲ್ಲ.

ದಯೆಯೇ ಪ್ರಧಾನವಾಗಿರುವ ಬಸವಣ್ಣನ ನುಡಿಗಳು ತಾಯಿಯ ಸವಿನುಡಿಯಷ್ಟೇ ಸಿಹಿಯಾಗಿವೆ. ಎಂತಹ ಘೋರ ಪ್ರತಿಭಟನೆಯೂ ಕೂಡ ಬಸವಣ್ಣನ ವಚನಗಳಲ್ಲಿ ಸಂಯಮದ ಕಟ್ಟನ್ನು ಹರಿದು ಹೋಗುವುದಿಲ್ಲ. ಅರಸರ ಮನೆಯಲ್ಲಿ ಅರಸಿಯಾಗಿರುವುದಕ್ಕಿಂತ ಭಕ್ತರ ಮನೆಯಲ್ಲಿ ತೊತ್ತಾಗಿರುವುದೇ ಲೇಸೆಂದು ತಿಳಿದು ಕೊಂಡ ಬಸವಣ್ಣ ಅರಸೊತ್ತಿಗೆಯನ್ನು ನಿರ್ಲಕ್ಷಿಸುವ ವಿಷಯದಲ್ಲಿ ಸೈದ್ಧಾಂತಿಕ ಹಿನ್ನೆಲೆಯಿದೆ. ಅರಸ ಅಂತಸ್ತು ರಾಜಸತ್ತೆ ಇವುಗಳ ಬೆಡಗಿಗಿಂತ ತೊತ್ತು ಗುಡಿಸಲು ಸಾಮಾನ್ಯ ಇವುಗಳ ಹೆಚ್ಚು ಮೌಲಿಕವಾಗಿ

ಕಾಣುತ್ತವೆ. ಬಸವಣ್ಣನ ಈ ಸರಳ ನುಡಿ ಇಂದು ನಮಗರ್ಥವಾಗಿದ್ದರೆ ಕುರ್ಚಿಗಾಗಿ ಬಡಿದಾಡುವ, ಮಂತ್ರಿಪದವಿಗಾಗಿ ಏನೆಲ್ಲವನ್ನೂ ಮಾರುವ ದಿವಾಳಿತನ ನಮಗಿಂದು ಬರುತ್ತಿರಲಿಲ್ಲ.

ಮೌಢ್ಯತೆಯ ನಿವಾರಣೆ :

ಮೌಢ್ಯತೆ ಈ ದೇಶದ ದೊಡ್ಡ ಸಮಸ್ಯೆಯಾಗಿದೆ. ಬಸವಣ್ಣನ ಸಂದರ್ಭದಲ್ಲಿದ್ದ ಮೌಢ್ಯತೆಗೂ, ಇಂದಿನ ಮೌಢ್ಯತೆಗೂ ಹೆಚ್ಚಿನ ಅಂತರವಿಲ್ಲ. ಅಂದು ಇದೇ ಮತ-ಧರ್ಮಗಳೇ ಮನುಷ್ಯ-ಮನುಷ್ಯರ ನಡುವೆ ಅಡ್ಡಗೋಡೆಗಳಾಗಿ ನಿಂತಿವೆ. ಅಂತೆಯೇ ಪ್ರಸ್ತುತ ಸಮಾಜದ ಸಂದರ್ಭದಲ್ಲಿಯೂ ಬಸವಣ್ಣನ ಧಾರ್ಮಿಕ ವಿಚಾರಗಳು ಮೌಢ್ಯತೆಯನ್ನು ವಿರೋಧಿಸುವ ನುಡಿಗಳು ತುಂಬಾ ಮುಖ್ಯವಾಗುತ್ತವೆ.

ಇಂದಿಗೂ ಕೂಡ ಅನೇಕ ಮಠಗಳು-ಪೀಠಗಳು ಸುಲಿಗೆಯ ಕೇಂದ್ರಗಳಾಗಿವೆ. ಸ್ವರ್ಣಮಂದಿರಗಳಲ್ಲಿ ಬಂದೂಕುಗಳು ತುಂಬಿದ್ದರೆ, ಮಠ-ಮಾನ್ಯಗಳಲ್ಲಿ ಗೋಮುಖ ವ್ಯಾಘ್ರರಿದ್ದುದು ಕಾಣುತ್ತದೆ. ಅನೇಕ ದೇವಸ್ಥಾನಗಳು ರಾಜಕೀಯ ಕಾರಸ್ಥಾನದ ಕೇಂದ್ರಗಳಾಗಿದ್ದರೆ; ಅನೇಕ ಮೌಢ್ಯಾಚರಣೆಗಳು ಮನುಷ್ಯರನ್ನೇ ಕಿತ್ತು ತಿನ್ನತೊಡಗಿವೆ. ರಾಜಸ್ಥಾನದ ಸತಿಪದ್ಧತಿ, ಚಂದ್ರಗುತ್ತಿಯ ಬೆತ್ತಲೆಸೇವೆ, ಕುದುರೆಮೋತಿ ಪ್ರಕರಣ, ಪುರಿಸ್ವಾಮಿಯ ತುತ್ತೂರಿ ಇಂತಹ ಅನೇಕ ಪ್ರಸಂಗಗಳು ಇಪ್ಪತ್ತನೆಯ ಶತಮಾನದ ಈ ಆಧುನಿಕ ಸಂದರ್ಭದಲ್ಲಿಯೂ ಭಾರತೀಯನನ್ನು ತಲೆತಗ್ಗಿಸುವಂತೆ ಮಾಡಿವೆ. ಸಾಕ್ಷರತೆ ಹೆಚ್ಚಿ, ಅರಿವು ಮೂಡಿ, ಮೌಢ್ಯತೆ ನಿವಾರಣೆಯಾಗಬೇಕಾದದ್ದು, ಇಂದಿನ ಪ್ರಮುಖ ಅನಿವಾರ್ಯ ವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಇಂತಹುದೇ ಸಮಸ್ಯೆಗಳನ್ನೆದುರಿಸಿದ ಬಸವಣ್ಣನವರು ತಮ್ಮ ಜೀವನಾನುಭವದಿಂದ ಹೇಳಿದ ನುಡಿಗಳು ಇಂದಿಗೂ ಪ್ರಸ್ತುತವೆನಿಸುತ್ತವೆ.

> **"ಆಗಳೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು;**
> **ಹೋಗೆಂದಡೆ ಹೋಗವು ಕೆಲವು ದೈವಂಗಳು;**
> **ನಾಯಿಗಿಂದ ಕರಕಷ್ಟ ಕೆಲವು ದೈವಂಗಳು.**
> **ಲೋಗರ ಬೇಡಿಕೊಂಡುಂಬ ದೈವಂಗಳು**
> **ತಾವೇನ ಕೊಡುವವು ಕೂಡಲಸಂಗಮದೇವಾ?** *(ವಚನ : ೫೫೩)*

> **"ಅರಗುತಿಂದು ಕರಗುವ ದೈವವ**
> **ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?**
> **ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?**
> **ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?"** *(ವಚನ: ೧೫೬)*

ಮರ, ಮಣ್ಣು, ಕಲ್ಲು, ಮಡಕೆಗಳೇ ಅಂದಿನ ಪ್ರಧಾನ ದೈವಗಳಾಗಿದ್ದವು. ಈ ದೈವಂಗಳು ಇಂದು ಬೇರೆ ರೂಪ ಪಡೆದು ದೊಡ್ಡ ದೊಡ್ಡ ದೇವಾಲಯಗಳಲ್ಲಿ ವಿಜೃಂಭಿಸತೊಡಗಿವೆ. ದೇವಸ್ಥಾನಗಳನ್ನು ನಡೆಸುವದು ಇಂದು ದೊಡ್ಡ ಉದ್ಯಮವಾಗಿ ಬೆಳೆದಿದೆ. ದೇವತೆಗಳಲ್ಲಿಯೂ

ಅನೇಕ ಗ್ರೇಡ್‌ಗಳಿವೆ. ಬಸವಣ್ಣ ಹೇಳಿ ಹೋಗಿ ಎಂಟು ನೂರು ವರ್ಷಗಳೇ ಗತಿಸಿದರೂ ಮತ್ತೆ ಅದೇ ಹಳೇ ಪದ್ಧತಿಗಳೇ ಹೊಸ ರೂಪ ತೊಟ್ಟುಕೊಂಡು ಮುಂದುವರೆದಿವೆ.

"ಹಾವಾಡಿಗನು ಮೂಕೊರತಿಯು – ತನ್ನ ಕೈಯಲ್ಲಿ ಹಾವು –
ಮಗನ ಮದುವೆಗೆ ಶಕುನವ ನೋಡ ಹೋದಾಗ,
ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
ಶಕುನ ಹೊಲ್ಲೆಂಬ ಚದುರನ ನೋಡಾ!
ತನ್ನ ಸತಿ ಮೂಕೊರತಿ– ತನ್ನ ಕೈಯಲ್ಲಿ ಹಾವು!
ತಾನು ಮೂಕೊರೆಯ!
ತನ್ನ ಭಿನ್ನವರಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಕೂಡಲ ಸಂಗಮದೇವಾ?" *(ವಚನ : ೧೦೫)*

"ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ;
ರಾಶಿ ಕೂಟ ಗಣಸಂಬಂಧವುಂಟೆಂದು ಹೇಳಿರಯ್ಯಾ;
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ;
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ;" *(ವಚನ : ೮೩)*

ಅಂದಿನ ಸಮಾಜದಲ್ಲಿ ಈ ಶಕುನ ನೋಡುವದು, ಚಂದ್ರಬಲ–ತಾರಾಬಲ ನೋಡುವದು, ರಾಶಿಕೂಟಗಳನ್ನೆಣಿಸುವದು ಹೇಗಿತ್ತೊ, ಇಂದಿನ ಸಮಾಜದಲ್ಲಿಯೂ ಅದು ಮುಂದುವರೆದಿದೆ. ಅದಕ್ಕೆ ಬಸವಣ್ಣನವರು, ತುಂಬಾ ತಾರ್ಕಿಕವಾಗಿ ವಿವೇಚಿಸುವ ಅನೇಕ ನುಡಿಗಳು ನಮಗಿಂದಿಗೂ ಬಹಳ ಮುಖ್ಯವೆನಿಸುತ್ತವೆ. ಇಂದಿನ ವೈಜ್ಞಾನಿಕ ಸಂದರ್ಭದಲ್ಲಿಯೇ ಇಷ್ಟೆಲ್ಲಾ ಮೌಢ್ಯತೆಯಿರುವಾಗ, ಯಜಮಾನ ಸಂಸ್ಕೃತಿಯ ಆ ಕತ್ತಲು ದಿನಗಳಲ್ಲಿ ಜನ ಹೇಗೆ ಮೌಢ್ಯತೆಯಿಂದ ತೊಳಲಾಡುತ್ತಿದ್ದರೆಂಬುದನ್ನು ಬಸವಣ್ಣ ತಮ್ಮ ಅನೇಕ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಹಿಳಾ ವಿಮೋಚನೆ :

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಮೊಟ್ಟ ಮೊದಲ ಮಹಿಳಾ ವಿಮೋಚನೆ ಕಾಣಿಸುವದು ಹನ್ನೆರಡನೆಯ ಶತಮಾನ ವಚನ ಚಳವಳಿಯ ಸಂದರ್ಭದಲ್ಲೆಂದು ಹೇಳಬಹುದು. ಬಸವಣ್ಣನ ವಿಚಾರಧಾರೆಯ ಬೆಳಕಿನಲ್ಲಿ ಅನೇಕ ಮಹಿಳೆಯರು ವಚನಕಾರ್ತಿಯರಾಗಿ ಬೆಳಗಿದರು. ಯಾವ ಧರ್ಮದಿಂದ ಮಹಿಳೆ ಅಸ್ಪೃಶ್ಯಳಾಗಿದ್ದಳೋ, ಬಸವಣ್ಣನ ಕಾಲಕ್ಕೆ ಅದೇ ಮಹಿಳೆ ಧರ್ಮಕ್ಕೆ ಅನಿವಾರ್ಯವಾದಳು. ಅಕ್ಕಮಹಾದೇವಿಯಂತಹ ಮಹಿಳೆಯರು ಅಂದಿನ ಚಳವಳಿಯಲ್ಲಿ ಕೇವಲ ವಚನಕಾರ್ತಿಯರಾಗಿದ್ದರೆಂಬುದಕ್ಕಿಂತ, ಅವರು ಆ ಚಳವಳಿಗೆ ಅನಿವಾರ್ಯ ಅಂಗವಾಗಿದ್ದರು, ಪ್ರಮುಖ ಸೆಲೆಯಾಗಿದ್ದರೆಂಬುದು ಹೆಚ್ಚು ಮಹತ್ವದ ವಿಷಯವಾಗುತ್ತದೆ.

ಇಂದಿನ ಸಂದರ್ಭದಲ್ಲಿಯೂ ಮಹಿಳಾ ಶೋಷಣೆ ನಿಂತಿಲ್ಲ. ಇಂತಹ ಶೋಷಣೆಯ ವಿರುದ್ಧ ಹೋರಾಡುವ ಅನೇಕ ಮಹಿಳಾ ಸಂಘಟನೆಗಳು ಇಂದಿಗೂ ಇವೆ. ಆದರೆ ಬಸವಣ್ಣ ರೂಪಿಸಿದ ಮಹಿಳಾ ವಿಮೋಚನೆ ಇಂದಿಗೂ ಆದರ್ಶನೀಯವೆನಿಸುತ್ತದೆ. ಮಹಿಳಾ

ಶೋಷಣೆಗೆ ಮೂಲಭೂತವಾಗಿ ಕಾರಣವಾಗಿರುವದು ಈ ಸಮಾಜ ವ್ಯವಸ್ಥೆ. ಆದ್ದರಿಂದ ನಿಜವಾದ ಮಹಿಳಾ ಹೋರಾಟ ನಡೆಯಬೇಕಾಗಿರುವದು ಈ ವ್ಯವಸ್ಥೆಯಲ್ಲಿರುವ ಅಸಮಾನತೆಯ ವಿರುದ್ಧವಾಗಿದೆ. ಆದರೆ ಇಂದಿನ ಅನೇಕ ಮಹಿಳಾ ಸಂಘಟನೆಗಳು ಕೇವಲ ಪುರುಷ ದ್ವೇಷಿಗಳಾಗಿ ಮೂಲ ಸಮಸ್ಯೆಗಳನ್ನೆ ಮರೆಯುತ್ತವೆ. ಇಂದಿನ ಕೆಲ ಮಹಿಳೆಯರು ಆರ್ಥಿಕ ಸಮಾನತೆಯನ್ನು ಹೊಂದಿದ್ದರೂ ಸಾಮಾಜಿಕ ಸಮಾನತೆಯನ್ನು ಪಡೆಯುವದಾಗಿಲ್ಲ, ಸಾಂಸ್ಕೃತಿಕ ಸಮಾನತೆಯನ್ನು ಸಾಧಿಸುವುದಾಗಿಲ್ಲ. ಆದರೆ ಬಸವಣ್ಣನವರ ಮಹಿಳಾ ಹೋರಾಟದ ಗುರಿ ಸಾಂಸ್ಕೃತಿಕ-ಆರ್ಥಿಕ-ಸಾಮಾಜಿಕ ಸಮಾನತೆಯನ್ನು ಪಡೆಯುವದಾಗಿತ್ತು. ಬಸವಣ್ಣ ಕೇವಲ ತಾನೊಬ್ಬನೇ ಬೆಳೆಯದೆ ಇತರ ವಚನಕಾರರನ್ನು ಮಾತ್ರ ಬೆಳೆಸದೇ, ಅನೇಕ ಅಸಂಖ್ಯಾತ ವಚನಕಾರ್ತಿಯರನ್ನು ಬೆಳೆಸಿದ, ಅನೇಕ ಹೋರಾಟಗಾತಿಯರನ್ನು ಹುಟ್ಟುಹಾಕಿದ. ಕೆಲವು ವಚನಕಾರ್ತಿಯರಂತೂ ಬಸವಣ್ಣನನ್ನು ಪ್ರಶ್ನಿಸುವ ಹಂತದವರೆಗೂ ಬೆಳೆದು ನಿಂತರು.

'ಬಸವಣ್ಣನೇ ತನಗೆ ದಾರಿದೀಪ' ವೆಂದು ಅಕ್ಕಮಹಾದೇವಿ ಹೇಳಿದರೆ, 'ಎನ್ನ ಭಾವಕ್ಕೆ ಗುರುವಾದನಯ್ಯ ಬಸವಣ್ಣ'ನೆಂದು ಮುಕ್ತಾಯಕ್ಕ ಹೇಳುತ್ತಾಳೆ. 'ಎನ್ನ ಸ್ಥೂಲ ತನುವೆ ಬಸವಣ್ಣನಯ್ಯಾ' ಎಂದು ಕದಿರ ರೆಮ್ಮವ್ವೆ ಹೇಳಿದರೆ, 'ಗುರುವಿಂಗೆ ಗುರುವಾಗಿ ಎನಗೆ ಗುರುವಾದನಯ್ಯಾ ಬಸವಣ್ಣನು' ಎಂದು ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಕೃತಜ್ಞತೆ ಸೂಚಿಸುತ್ತಾಳೆ.

> **"ಆಸೆಯೆಂಬುದು ಅರಸಿಂಗಲ್ಲದೆ**
> **ಶಿವಭಕ್ತರಿಗುಂಟೆ ಅಯ್ಯಾ?**
> **ರೋಷವೆಂಬುದು ಯಮದೂತರಿಗಲ್ಲದೆ**
> **ಅಜಾತರಿಗುಂಟೆ ಅಯ್ಯಾ**
> **ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ**
> **ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯಾ"**

(ವಚನ : ೭೩ ಇಪ್ಪತ್ತೇಳು ಶಿವಶರಣೆಯರ ವಚನಗಳು)

> **"ಗಂಡು ಮೋಹಿಸಿ ಹೆಣ್ಣ ಹಿಡಿದಡೆ,**
> **ಅದು ಒಬ್ಬರ ಒಡವೆ ಎಂದು ಅರಿಯಬೇಕು.**
> **ಹೆಣ್ಣು ಮೋಹಿಸಿ ಗಂಡಹಿಡಿದಡೆ,**
> **ಉತ್ತರವಾವುದೆಂದರಿಯ ಬೇಕು."**

(ವಚನ : ೧೮೮ : ಇಪ್ಪತ್ತೇಳು ಶಿವಶರಣೆಯರ ವಚನಗಳು)

ಆಯ್ದಕ್ಕಿ ಲಕ್ಕಮ್ಮ ಅತಿಯಾಸೆಯಿಂದ ಅಕ್ಕಿ ಬಳಿದುಕೊಂಡು ಬಂದ ತನ್ನ ಪತಿ ಮಾರಯ್ಯನಿಗೆ ಬುದ್ಧಿಹೇಳಿದರೆ, ಗೊಗ್ಗವ್ವೆ ಗಂಡು-ಹೆಣ್ಣಿನ ನಡುವಿರುವ ಅಸಮಾನತೆಯನ್ನು ಎತ್ತಿ ತೋರಿಸಿ ಇಡೀ ವ್ಯವಸ್ಥೆಯನ್ನೇ ಪ್ರಶ್ನಿಸುತ್ತಾಳೆ. ರೆಮ್ಮವ್ವೆ, ರೇಕಮ್ಮ, ಸತ್ಯಕ್ಕ, ಗಂಗಮ್ಮ, ರೇಚವ್ವೆ, ಸೋಮಮ್ಮ, ಗುಡ್ಡವ್ವೆ, ಸಂಕವ್ವೆ, ಕಾಳವ್ವೆ ಈ ಮುಂತಾದ ವಚನಕಾರ್ತಿಯರು ಮಹಿಳಾ ವಿಮೋಚನೆಯ ಸೈದ್ಧಾಂತಿಕ ತತ್ತ್ವಗಳನ್ನು ರೂಪಿಸುತ್ತ, ಬಸವಣ್ಣ ಕಲ್ಪಿಸಿಕೊಟ್ಟ ಅವಕಾಶಕ್ಕಾಗಿ ಕೃತಜ್ಞರಾಗಿದ್ದಾರೆ. ಸ್ತ್ರೀ ಮೇಲು ಪುರುಷ ಮೇಲು ಎಂದು ಬಡಿದಾಡುವ

ಇಂದಿನ ಸಂದರ್ಭದಲ್ಲಿ ಈ ಮಹಿಳೆಯರ ವಚನಗಳು ನಿಜವಾದ ದಿಕ್ಕನ್ನು ತೋರಿಸುವಂತಹವುಗಳಾಗಿವೆ. ಇಂತಹ ಅನೇಕ ವಚನಕಾರ್ತಿಯರನ್ನು ಬೆಳಕಿಗೆ ತಂದ ಬಸವಣ್ಣ ನಿಜವಾದ ಮಹಿಳಾ ವಿಮೋಚನೆಯ ಹರಿಕಾರನಂತೆ ಕಾಣುತ್ತಾನೆ.

ಅಸ್ಪೃಶ್ಯತಾ ನಿವಾರಣೆ:

ಅಸ್ಪೃಶ್ಯತೆ ಈ ದೇಶದ ಒಂದುಜ್ವಲಂತ ಸಮಸ್ಯೆ. ಪಶು–ಪಕ್ಷಿ–ಪ್ರಾಣಿಗಳೊಂದಿಗೆ ಮುದ್ದಾಡುವ ಮನುಷ್ಯ ತನ್ನಂತೆಯೇ ಇರುವ ಮನುಷ್ಯನನ್ನು 'ಅಸ್ಪೃಶ್ಯ'ನನ್ನಾಗಿಸಿ ದೂರ ಇಟ್ಟದ್ದು ಈ ವ್ಯವಸ್ಥೆಯ ದೊಡ್ಡ ದುರಂತ. ಈ ನಾಡಿನಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ ಎಲ್ಲರೂ ಮನುಷ್ಯರಂತೆ ಬಾಳಲು ಸೈದ್ಧಾಂತಿಕ ನೆಲೆಯಲ್ಲಿ ಹೋರಾಟ ಮಾಡಿದ ವ್ಯಕ್ತಿ ಬಸವಣ್ಣ. ವಚನಕಾರರ ಹೋರಾಟ ನಡೆದು ನೂರು ವರ್ಷಗಳಾದವು. ಇಂದಿಗೂ ಅಸ್ಪೃಶ್ಯತೆ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಅಂತೆಯೇ ಈ ಸಮಸ್ಯೆಯ ಬಗೆಗೆ ಬಸವಣ್ಣ ಅಂದು ಆಲೋಚಿಸಿದ ವಿಚಾರಗಳೆಲ್ಲಾ ಇಂದಿಗೂ ರೆಲೆವೆಂಟ್ ಎನಿಸುತ್ತವೆ.

ದಲಿತನಾಗಿ ಹುಟ್ಟಿ ದಲಿತರಿಗಾಗಿ ಹೋರಾಟ ನಡೆಸುವದು ಸುಲಭ, ಆದರೆ ದಲಿತೇತರನಾಗಿ ಹುಟ್ಟಿ ದಲಿತಪರ ಹೋರಾಟದ ಮುಂಚೂಣಿಯಲ್ಲಿರುವದು ತುಂಬಾ ಕಷ್ಟದ ಕೆಲಸ. ಬಸವಣ್ಣ ಇಂತಹ ಕಷ್ಟದ ಸವಾಲುಗಳನ್ನು ಎದುರಿಸಿದ. ಬ್ರಾಹ್ಮಣನಾಗಿ ಹುಟ್ಟಿದ ಬಸವಣ್ಣ, ವೀರಶೈವನಾಗಿ ಬೆಳೆದು, ದಲಿತನಾಗಿ ಬದುಕಿದ್ದು ಎಲ್ಲರಿಗೂ ಸರಳವಾದದ್ದಲ್ಲ. ಮಾನಸಿಕವಾಗಿ ದಲಿತನಾಗುವ ಕ್ರಿಯೆ ತುಂಬಾ ಕಷ್ಟಕರವಾದುದು. ಒಂದು ಕಡೆ ಸಾಂಪ್ರದಾಯಿಕ ಜನ ಮತ್ತು ರಾಜಸತ್ತೆ ಮತ್ತೊಂದು ಕಡೆ ಪ್ರಗತಿಪರ ಸಿದ್ಧಾಂತ ಹಾಗೂ ದುಡಿವ ವರ್ಗದ ಜನ. ಇವರೆಡರಲ್ಲಿ ಬಸವಣ್ಣ ಆಯ್ಕೆ ಮಾಡಿಕೊಂಡಿದ್ದು, ಈ ದಲಿತರನ್ನು, ದುಡಿವವರನ್ನು, ದಯೆಯಿದ್ದವರನ್ನು

ದಲಿತ ಜನಾಂಗದಲ್ಲಿ ಹುಟ್ಟಿ ದಲಿತಪರ ಹೋರಾಟದಲ್ಲಿ ತೊಡಗಿರುವವನಿಗೆ ಎರಡು ಅವಕಾಶಗಳಿರುತ್ತವೆ. ಆತ ತನ್ನ ಜನತೆಯ ನೋವನ್ನು ಆಳಕ್ಕಿಳಿದು ವಿಶ್ಲೇಷಿಸಬಹುದು; ಅವರ ಮೌಢ್ಯ–ಸ್ವಾರ್ಥ–ಮಿತಿಗಳನ್ನು ಕುರಿತು ಟೀಕಿಸಬಹುದು. ಈ ಎರಡನೆಯ ಅವಕಾಶ ದಲಿತೇತರನೊಬ್ಬ ದಲಿತರ ನಾಯಕನಾದಾಗ ಸಿಗುವುದಿಲ್ಲ. ಅಂತೆಯೇ ಬಸವಣ್ಣ ದಲಿತರ ಮೌಢ್ಯದ ಬಗೆಗಾಗಲಿ, ಅವರ ಮಿತಿಗಳ ಬಗೆಗಾಗಲಿ ಎಲ್ಲಿಯೂ ಹೇಳುವುದಿಲ್ಲ. ಆದರೆ ಅದೇ ಅಂಬೇಡ್ಕರ್‌ಗೆ ಆ ಅವಕಾಶವಿದೆ. ದಲಿತರ ಅಜ್ಞಾನ, ಮೌಢ್ಯ–ಮಿತಿಗಳನ್ನು ಕುರಿತು ಅಂಬೇಡ್ಕರ್ ಅವರು ಹೇಳಿದಂತೆ ಬೇರೆ ಯಾರೂ ಹೇಳಿಲ್ಲ. ಒಳ್ಳೆಯವರು–ಕೆಟ್ಟವರು ಎಲ್ಲ ಜಾತಿ ಜನಾಂಗಗಳಲ್ಲಿಯೂ ಇರುತ್ತಾರೆ. ಈ ಸತ್ಯವನ್ನು ಸ್ಪಷ್ಟಪಡಿಸುವ ಅವಕಾಶ ಯಾವುದೇ ಜಾತಿಯಲ್ಲಿ ಹುಟ್ಟಿಬಂದ ಹೋರಾಟಗಾರನಿಗೂ ಇರಬೇಕು. ಆದರೆ ಅದು ಈ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಾಧ್ಯವಾಗಿದೆ. ಒಬ್ಬ ವ್ಯಕ್ತಿ ಎಷ್ಟೇ ಹೋರಾಟಗಾರನಾಗಿರಲಿ, ಕ್ರಾಂತಿಕಾರಿಯಾಗಿರಲಿ, ಪ್ರಗತಿಪರನಾಗಿರಲಿ ಮತ್ತೆ ಆತನ ಜಾತಿಯೊಂದಿಗೆ ತಳಕು ಹಾಕಿ ನೋಡುವ ಸಣ್ಣತನ ಯಾವಾಗಲೂ ಇದೆ.

ಈ ದೇಶದಲ್ಲಿ ದಲಿತರ ಮೊಟ್ಟ ಮೊದಲ ದನಿಯಾಗಿ ನಿಂತಾತ ಬಸವಣ್ಣ. ಹಿಂದೆಂದೂ ನಡೆಯದೇ ಇದ್ದ ಹೋರಾಟವೊಂದನ್ನು ಹುಟ್ಟುಹಾಕಿದ; ಆ ಮೂಲಕ ದಲಿತರ

ಬೆಳವಣಿಗೆಗಾಗಿ ಶ್ರಮಿಸಿದ; ದಲಿತ ಜನಾಂಗದಿಂದ ಬಂದ ಶರಣರನ್ನು ತನ್ನ ಅಪ್ಪ-ಬೊಪ್ಪನೆಂದು ಅಪ್ಪಿಕೊಂಡ. ಯಾವ ದಲಿತ ಜನಾಂಗ ಶತಮಾನಗಳಿಂದಲೂ ಕತ್ತಲೆಯಲ್ಲಿತ್ತೊ, ಅಂತಹ ಜನರ ಮುಖಂಡತ್ವದಲ್ಲಿ ಬಸವಣ್ಣ ಚಳವಳಿ ಕಟ್ಟಿದ. ಯಾರು ಧರ್ಮ-ಸಮಾಜದಿಂದ ದೂರವಿದ್ದರೋ, ಅಂತಹವರನ್ನು ಧರ್ಮದ ಸಮಾಜದ ಪ್ರಮುಖ ಅಂಗವನ್ನಾಗಿ ಮಾಡಿದ. ವರ್ಣಾಶ್ರಮದ ವ್ಯವಸ್ಥೆಯಲ್ಲಿ, ಸಾಂಪ್ರದಾಯಿಕವಾದ ಗೊಂಡಾರಣ್ಯದಲ್ಲಿ, ರಾಜಸತ್ತೆಯ ಹಿಡಿತದಲ್ಲಿ ಆಧ್ಯಾತ್ಮ-ಧರ್ಮವನ್ನುಳಿಸಿಕೊಂಡೂ ಬಸವಣ್ಣ ದಲಿತರನ್ನು ಬೆಳೆಸಿದ-ಬೆಳಗಿಸಿದ. ಚೆನ್ನಯ್ಯನನ್ನು ಅಪ್ಪನೆಂದ, ಕಕ್ಕಯ್ಯನನ್ನು ಬೊಪ್ಪನೆಂದ; ಕಿನ್ನರ ಬೊಮ್ಮಯ್ಯನನ್ನು ಅಣ್ಣನೆಂದ. ಕಕ್ಕಯ್ಯನ ಮನೆಯಲ್ಲಿ, ಚನ್ನಯ್ಯ-ದಾಸಯ್ಯರ ಮನೆಯಲ್ಲಿ ಭಕ್ತಿಯನ್ನು ಬೇಡಿದೆ" – ಎಂದು ವಿನಮ್ರವಾಗಿ ಹೇಳಿದ. ತಾನು ಬಾಣನವರವ, ಮಯೂರ-ಕಾಳಿದಾಸರವ ಎಂದು ಹೆಮ್ಮೆಯಿಂದ ಹೇಳಿಕೊಂಡ. 'ಎಮ್ಮ ತಾಯಿ ನಿಂಬವ್ವೆ, ನೀರನೆರೆದುಂಬಳು ಎಮ್ಮಯ್ಯ ಚನ್ನಯ್ಯ ರಾಯಕಂಪಣವ ಹೊರುವ' ಎಂದು ಸಾರಿ ಹೇಳಿದ. 'ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು ಬೆರಣಿ ಆರಿಸಲು ಹೋಗಿ ಸಂಗವ ಮಾಡಿದಾಗ ಹುಟ್ಟಿದ ಮಗ ನಾನು' ಎಂದು ವಿವರಿಸಿದ. ತೊಂಬತ್ತು ಕೋಟಿ ದೇವತೆಗಳೆಲ್ಲಾ ಮಾದಾರ ಚೆನ್ನಯ್ಯನ ಮಕ್ಕಳೆಂದು ತಿಳಿಸಿದ.

ಇವೆಲ್ಲಾ ವಚನಗಳನ್ನು ನೋಡಿದಾಗ ಬಸವಣ್ಣ ಎಂತಹ ಎತ್ತರಕ್ಕೇರಿದ್ದನೆಂಬುದು ಸ್ಪಷ್ಟವಾಗುತ್ತದೆ. ಬಸವಣ್ಣ ಮಾನಸಿಕವಾಗಿ ದಲಿತನಾಗಿ ಬೆಳೆದ ಪರಿ ಈ ವಚನಗಳಲ್ಲಿ ಕಾಣುತ್ತದೆ. ಯಾವ ಜನಾಂಗ ಶತಮಾನಗಳಿಂದ ಶೋಷಣೆಗೊಳಗಾಗಿ ನಿರ್ಲಕ್ಷಿಸಲ್ಪಟ್ಟಿತ್ತೋ ಅಂಥವರೇ ನಿಜವಾದ ಶರಣರೆಂದು, ಅಂಥವರ ಮುಂದಾಳತ್ವದಲ್ಲಿ ಚಳವಳಿಯನ್ನು ಕಟ್ಟಿದ್ದು, ಬಸವಣ್ಣನ ವಿಶಾಲತೆಗೆ, ಮಾನವೀಯತೆಗೆ, ಸಮಾನತೆಗೆ ಹಿಡಿದ ಕನ್ನಡಿಯಾಗಿದೆ.

ಬಸವಣ್ಣ ಇಷ್ಟೆಲ್ಲಾ ಹೇಳಿದ ನಂತರವೂ, ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಟ ಮಾಡಿದ ನಂತರವೂ ಜನ ಮತ್ತೆ ಆತನ ಕುಲದ ಹಿನ್ನೆಲೆಯಲ್ಲಿ ಆತನನ್ನು ನೋಡಿದಾಗ 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ' ಎಂದು ನಮ್ರವಾಗಿ ಕೇಳಿಕೊಳ್ಳುತ್ತಾನೆ. ಹೊಲೆಯ ಹೊಲಬಿಗವಾದಡೆ ಆತನ ಹೊರೆಯಲಿಪ್ಪುದೇ ಲೇಸೆಂದು ಸ್ಪಷ್ಟಪಡಿಸುತ್ತಾನೆ. ಸುಮಾರು ಮೂವತ್ತು ವಚನಗಳಲ್ಲಿ ಬಸವಣ್ಣ ದಲಿತವರ್ಗದ ಶರಣರನ್ನು ಕುರಿತು, ಚೆನ್ನಯ್ಯನನ್ನು ಕುರಿತು ಪ್ರಸ್ತಾಪಿಸುತ್ತಾನೆ. ಈ ಎಲ್ಲ ವಚನಗಳಲ್ಲಿ ಬಸವಣ್ಣ ತುಂಬಾ ಭಾವುಕನಂತೆ ಕಂಡರೂ ಕೂಡ, ಆತ ದಲಿತ ಸಮುದಾಯಕ್ಕಾಗಿ ಹೋರಾಡಿದ ಶ್ರೇಯಸ್ಸು, ಇಂದಿಗೂ ಆದರ್ಶಪ್ರಾಯವಾಗಿದೆ.

> **"ಹೊಲೆಯೊಳಗೆ ಹುಟ್ಟಿ ಕುಲವನರಸುವೆ,**
> **ಎಲವೊ, ಮಾತಂಗಿಯ ಮಗ ನೀನು!**
> **ಸತ್ತು ದನೆಳೆವನೆತ್ತಣ ಹೊಲೆಯ?**
> **ಹೊತ್ತು ತಂದು ನೀವು ಕೊಲುವಿರಿ.**
> **ಶಾಸ್ತ್ರವೆಂಬುದು ಹೋತಿಂಗೆ ಮಾರಿ**
> **ವೇದವೆಂಬುದು ನಿಮಗೆ ತಿಳಿಯದು".** *(ವಚನ : ೫೩೫)*

ಬಸವಣ್ಣನ ಇಂತಹ ಅನೇಕ ವಚನಗಳನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ

ಉಲ್ಲೇಖಿಸಬಹುದು. ಹೊಲೆತನವೆಂದರೆ ಯಾವುದು, ನಿಜವಾದ ಹೊಲೆಯನಾರು ಎಂದು ಸ್ಪಷ್ಟಪಡಿಸಿದ ಬಸವಣ್ಣ ಮುಂತಾದ ವಚನಕಾರರು ದಲಿತರ ಸಮಾನತೆಯ ಬದುಕಿಗಾಗಿ ಶ್ರಮಿಸಿದರು. ವ್ಯಾಸ–ಮಾರ್ಕಂಡೇಯ, ಮಾತಂಗಿ–ಮಂಡೋದರಿ; ಅಗಸ್ತ್ಯ–ದೂರ್ವಾಸ–ಕಶ್ಯಪ–ಕೌಂಡಿನ್ಯ ಈ ಮುಂತಾದವರ ಸಾಧನೆಯನ್ನು ಅವರು ಹುಟ್ಟಿಬಂದ ಕುಲವನ್ನು ಜನತೆಯೆದುರಿಗೆ ಮುಂದಿಟ್ಟ ಬಸವಣ್ಣ ಹುಟ್ಟಿಗೂ–ಸಾಧನೆಗೂ ಯಾವ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದ. ಬಸವಣ್ಣನ ಹೋರಾಟದ ಅಂತಿಮ ಗುರಿಯೇ ದಲಿತರಿಗೆ–ದುಡಿವವರಿಗೆ ಸಮಾನತೆಯ ಬದುಕನ್ನು ಕೊಡುವದಾಗಿತ್ತು. ಈ ಸತ್ಯವನ್ನರ್ಥೈಸಿಕೊಂಡಾಗ, ನಮಗೆ ದಲಿತ ವಿಮೋಚನೆಗೆ ಸಂಬಂಧಿದಂತೆ ಅಂಬೇಡಕರ್‌ನಂತೆ ಬಸವಣ್ಣನೂ ಅತ್ಯಂತ ಪ್ರಮುಖನಾಗಿ ಕಾಣುತ್ತಾನೆ. ಬಸವಣ್ಣನ ಮುಗ್ಧತೆಯನ್ನು, ಆತನ ಆಂತರಿಕ ತಳಮಳವನ್ನು, ಆತನ ದಲಿತ ಕಾಳಜಿಯನ್ನು ಇಂದಿನ ದಲಿತ ಬಂಧುಗಳು–ದುಡಿವವರ್ಗದವರು ಅರ್ಥಮಾಡಿಕೊಳ್ಳ ಬೇಕಾಗಿದೆ. ಬಸವಣ್ಣನ ಅನುಯಾಯಿಗಳೆಂದು ಹೇಳಿಕೊಳ್ಳುತ್ತ ದಲಿತರಿಗೆ ಮಲತಿನ್ನಿಸಿದ ಜಾತಿವಾದಿಗಳೂ ಬಸವಣ್ಣನ ವ್ಯಕ್ತಿತ್ವವನ್ನು ಮತ್ತೊಮ್ಮೆ ತಿಳಿದುಕೊಳ್ಳಬೇಕಾಗಿದೆ; ಆತನ ವಚನಗಳನ್ನು ನೆನಪಿಸಿಕೊಳ್ಳಬೇಕಾಗಿದೆ.

ಪರಿಸರ ರಕ್ಷಣೆ :

ಪರಿಸರ ಇಂದು ಮಲಿನವಾಗತೊಡಗಿದೆ. ಗಿಡ–ಮರಗಳು ನಾಶವಾಗತೊಡಗಿವೆ. ಕಾಡುಗಳೆಲ್ಲಾ ಬಯಲಾಗತೊಡಗಿವೆ. ಜನತೆಯಲ್ಲಿ ಪರಿಸರಪ್ರಜ್ಞೆಯನ್ನು ಬೆಳೆಸಿ, ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುವದು ಇಂದು ಎಂದಿಗಿಂತಲೂ ಹೆಚ್ಚು ಅನಿವಾರ್ಯವಾಗಿದೆ. ಈ ಬಗೆಗೆ ಅನೇಕ ಪರಿಸರವಾದಿಗಳು ಪ್ರಯತ್ನಿಸುತ್ತಲೇ ಇದ್ದಾರೆ. ಕೇಂದ್ರ ಸರಕಾರ ಇದಕ್ಕಾಗಿಯೇ ಒಂದು ಸಚಿವಾಲಯ ಹೊಂದಿದೆ. ಆದರೆ ಹನ್ನೆರಡನೆಯ ಶತಮಾನದಲ್ಲಿದ್ದ ಬಸವಣ್ಣ ಅಂದಿನ ಸಂದರ್ಭದಲ್ಲಿಯೇ ಪರಿಸರದ ಬಗೆಗೆ ಅಗಾಧ ಕಾಳಜಿಯನ್ನು ವ್ಯಕ್ತಪಡಿಸಿದ್ದಾನೆ. ಪರಿಸರ ರಕ್ಷಣೆಯಿಂದ ಮಾತ್ರ ಮನುಷ್ಯ ಬದುಕಬಲ್ಲನೆಂಬ ವೈಜ್ಞಾನಿಕ ಸತ್ಯವನ್ನು ಬಸವಣ್ಣ ತನ್ನ ಅನೇಕ ವಚನಗಳಲ್ಲಿ ಹೇಳಿದ್ದಾನೆ. ಪರಿಸರ–ಪ್ರಕೃತಿಯೊಂದಿಗೆ ತನ್ನ ಜೀವನಾನುಭವಗಳನ್ನು ಕಟ್ಟಿಕೊಡುವ ಬಸವಣ್ಣ ಸಕಲ ಜೀವರಾಶಿಗಳಿಗೂ ಲೇಸನ್ನು ಬಯಸುತ್ತಾ, ಹೂ–ಮರ–ಗಿಡ–ಬಳ್ಳಿಗಳ ಬಗೆಗೆ ಅಪಾರ ಪ್ರೀತಿಯನ್ನು ವ್ಯಕ್ತಪಡಿಸುತ್ತಾನೆ.

> **"ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದಡೆ**
> **ಮೇಲೆ ಪಲ್ಲವಿಸಿತ್ತು ನೋಡಾ!....."** *(ವಚನ : ೪೨೦)*

> **"ಮರನ ಹೂವ ಕೊಯಿದು ಮರಕ್ಕೇರಿಸಿ**
> **ನದಿಯುದಕವ ನದಿಗರ್ಪಿತವ ಮಾಡಿ,**
> **ಕರುವನಗಲಿಸಿ ತಾಯ ಮರುಗಿಸಿ**
> **ಮೊಲೆವಾಲ ಕರೆದುಣಬೇಡವೋ!....** *(ವಚನ : ೮೯೯)*

ಮೊದಲಿನ ವಚನದಲ್ಲಿ ಲಿಂಗ–ಜಂಗಮ ಪದಗಳ ಅರ್ಥವನ್ನು ಸ್ಪಷ್ಟಪಡಿಸಿದ್ದಾನೆ. ಇಂತಹ ಪದಗಳನ್ನು ವಿವರಿಸುವಾಗ ಆತ ಬಳಿಸಿಕೊಳ್ಳುವದು ಪರಿಸರದ ವಸ್ತುಗಳನ್ನು,

ಮರಗಳಿಗೆ ಬಾಯಿಯಿರುವದು ಬೇರುಗಳಲ್ಲಿ, ಅಂತೆಯೇ ತಳಕ್ಕೆ ನೀರ ನೆರೆದರೆ ಅದು ಮೇಲೆ ಚಿಗುರೊಡೆಯುತ್ತದೆ. ಅಂತೆಯೇ ಲಿಂಗದ ನಿಜವಾದ ಬಾಯಿಯೆಂದರೆ ಜಂಗಮ. ಜಂಗಮವೆಂದರೆ ಲೇಸನ್ನು ಬಯಸುವ ಜೀವ. ಮರ ಫಲವನ್ನು ನೀಡುತ್ತದೆ, ಜಂಗಮ ಸಕಲರಿಗೂ ಲೇಸು ಬಯಸುತ್ತಾನೆ. ಪ್ರಕೃತಿಯ ಈ ಎರಡೂ ಸಾಧ್ಯತೆಗಳನ್ನು ಬಸವಣ್ಣ ಸಮೀಕರಿಸುವ ಪರಿ ತುಂಬಾ ಅರ್ಥಪೂರ್ಣವಾಗಿದೆ. ನೀಡುವ-ಪಡೆಯುವ ಈ ಎರಡು ಕ್ರಿಯೆಗಳು ಇಲ್ಲಿ ತುಂಬಾ ಮುಖ್ಯವಾಗುತ್ತವೆ. ಇವೆರಡೂ ಕ್ರಿಯೆಗಳಲ್ಲಿ ಸಮಾನ ಸಂಬಂಧವಿದೆ. ನೀಡುವ ಕ್ರಿಯೆ ನಿಂತಾಗ ಪಡೆಯುವ ಕ್ರಿಯೆ ತಾನಾಗಿಯೇ ನಿಲ್ಲುತ್ತದೆ. ಪರಸ್ಪರ ಕೊಡುಕೊಳ್ಳುವಿಕೆಯ ಈ ಸಮಾನತೆಯ ತತ್ತ್ವವನ್ನು ಬಿಂಬಿಸುತ್ತ ಬಸವಣ್ಣ ಪರಿಸರ ರಕ್ಷಣೆಗೆ ಒತ್ತುಕೊಡುತ್ತಾನೆ.

ಎರಡನೆಯ ವಚನವಂತೂ ತುಂಬಾ ಮಾರ್ಮಿಕವಾಗಿದೆ. ಅದನ್ನೇ ತೆಗೆದುಕೊಂಡು ಅದಕ್ಕರ್ಪಿಸುವುದು, ಅರ್ಪಣಾಭಾವವಾಗಲಾರದು. ಆದರೆ ಇಂದಿನ ಸಂದರ್ಭದಲ್ಲಿ ಕೇವಲ ಪರಿಸರದಿಂದ ಪಡೆಯುವುದಾಗುತ್ತದೆಯೇ ಹೊರತು, ಅದನ್ನು ಬೆಳೆಸುವ ಕ್ರಮ ಹೆಚ್ಚಾಗಿ ಕಾಣುತ್ತಿಲ್ಲ.

"ಮರಗಿಡಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು
ಪ್ರಾಣವ ಕೊಂಡುಂಡು, ಶರೀರವ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ" *(ವಚನ : ೧೨೨೨)*

ಈ ವಚನದಲ್ಲಂತೂ ಬಸವಣ್ಣನ ಪರಿಸರದ ಕಾಳಜಿ ದಟ್ಟವಾಗಿ ಕಾಣಿಸುತ್ತದೆ. ಮರ-ಗಿಡ-ಬಳ್ಳಿಗಳಿಂದ ಬರುವ ಧಾನ್ಯ-ಫಲಗಳನ್ನೆಲ್ಲಾ ತರಿದುತಂದು ತಿಂದು, ಶರೀರವನ್ನು ಬೆಳೆಸಿದರೆ ಸಾಲದು. ಅದರ ಜೊತೆಗೆ ಗಿಡ-ಬಳ್ಳಿಗಳನ್ನು ಬೆಳೆಸಬೇಕಾಗುತ್ತದೆ. ಒಂದು ಮರದ ಫಲವನ್ನು ಪಡೆದು ಹೋಗುವದು ಸ್ವಾರ್ಥವಾದರೆ, ಫಲ ಪಡೆದ ದಿನ ಒಂದು ಮರ ನೆಡಿಸಿ ಬೆಳೆಸುವದು ಸಮತೋಲನವಾಗುತ್ತದೆ. ಇಂತಹ ಸಮತೋಲನದ ವಿಚಾರವನ್ನು ಬಸವಣ್ಣ ತನ್ನ ಈ ವಚನದಲ್ಲಿ ಬಹಳ ಸುಂದರವಾಗಿ ಹೇಳಿದ್ದಾನೆ. ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಎಲ್ಲ ಜೀವರಾಶಿಗಳನ್ನು ಗಮನದಲ್ಲಿಟ್ಟುಕೊಂಡು, ಈ ಕೊಡುವ-ಪಡೆಯುವ ಸಮೀಕರಣ ಸೂತ್ರವನ್ನು ಹೇಳುತ್ತ ಪರಿಸರ ಪ್ರಜ್ಞೆಯನ್ನು ಪ್ರಕಟಿಸುವ ಬಸವಣ್ಣ ಇಂದಿಗೂ ಪ್ರಸ್ತುತವಾಗುತ್ತಾನೆ.

ದುಡಿಯುವ ಹಕ್ಕು :

ದುಡಿಯುವ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಬೇಕೆಂದು ಸರಕಾರ ಪ್ರಯತ್ನಿಸ ತೊಡಗಿದೆ. ಈ ವಿಚಾರವನ್ನು ಬಸವಣ್ಣ ಹನ್ನೆರಡನೆಯ ಶತಮಾನದಲ್ಲಿಯೇ – ಆಚರಣೆಗೆ ತಂದಿದ್ದ. ವಚನ ಚಳವಳಿಯಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರೂ ದುಡಿಯುತ್ತಿದ್ದರು. ಬಸವಣ್ಣ ಮತ್ತು ವಚನ ಚಳವಳಿಯ ಎರಡು ಕ್ರಾಂತಿಕಾರಕ ಸಾಧನೆಗಳೆಂದರೆ, ಒಂದು ಕಾಯಕತತ್ವ ಮತ್ತೊಂದು ದಾಸೋಹ ತತ್ವ.

'ಕಾಯಕ' ವೆಂಬ ಪದಕ್ಕೆ ಬಸವಣ್ಣನ ಚಳವಳಿಯಲ್ಲಿ ವಿಶಿಷ್ಟ ಅರ್ಥವಿದೆ. ಅದು ಕೇವಲ ದುಡಿಮೆಯಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಮಾಡುವ ಕೆಲಸವೂ ಅದಲ್ಲ. ಅಲ್ಲಿ ಶ್ರದ್ಧೆ ಇದೆ, ಪವಿತ್ರತೆಯಿದೆ, ನಿಶ್ವಾರ್ಥವಿದೆ; ದೇವರನ್ನು ಕಾಣುವ ಪರಿ ಇದೆ, ಪ್ರಾಮಾಣಿಕ ನಿಷ್ಠೆಯಿದೆ. ಪ್ರತಿಯೊಬ್ಬರಿಗೂ ದುಡಿಯುವ ಹಕ್ಕು ಲಭಿಸಿದಾಗ ಎಲ್ಲರೂ ಸ್ವತಂತ್ರವಾಗಿ ಬದುಕಬಲ್ಲರು. ಆಗ ದೇಶಕ್ಕೆ ಬಡತನವೆಂಬುದೇ ಬರಲಾರದು. ಬಸವಣ್ಣ ಹೇಳಿದ ಕಾಯಕತತ್ವದ ಕಾಲ ಮುಗಿದು ಎಂಟು ಶತಮಾನಗಳೇ ಗತಿಸಿದ್ದರೂ ಇಂದಿಗೂ ಕೂಡ ದುಡಿಯುವ ಹಕ್ಕು ಮೂಲಭೂತ ಹಕ್ಕಾಗಿಲ್ಲ. ಈ ಕಾರಣದಿಂದ ಬಸವಣ್ಣ ಹೇಳಿರುವ ಕಾಯಕತತ್ವಕ್ಕೆ ಸಂಬಂಧಿಸಿದ ವಚನಗಳೆಲ್ಲಾ ಇಂದಿಗೂ ಅನಿವಾರ್ಯವೆನಿಸುತ್ತವೆ.

ದುಡಿಮೆ ಮನುಷ್ಯನಲ್ಲಿ ಬದುಕಿನ ಭರವಸೆಯನ್ನು ಮೂಡಿಸುತ್ತದೆ; ಆಲಸ್ಯವನ್ನು ಹೊಡೆದೋಡಿಸುತ್ತದೆ. ದುಡಿಮೆಯಿಂದುಂಟಾದ ಶ್ರಮ, ಆ ಶ್ರಮದಿಂದುಂಟಾಗುವ ವಿಶ್ರಾಂತಿ ನಿಜವಾದ ಕೈಲಾಸದ ಸುಖವನ್ನು ಕೊಡುತ್ತದೆ. ಆ ಕಾರಣದಿಂದಲೇ ಆಗ ಕಾಯಕ ಕೈಲಾಸವಾಗಿ ಕಂಡಿತು. ದುಡಿಮೆಗೆ ಗೌರವ–ನಿಷ್ಠೆ–ನಿಸ್ವಾರ್ಥ ಮೂಡಿ ಬಂದಾಗ ಅದು ಕಾಯಕವಾಗುತ್ತದೆ. ಕಾಯಕ ಇಹಲೋಕ ಜೀವನದ ಬಗೆಗೆ ಆಸಕ್ತಿಯನ್ನುಂಟುಮಾಡುತ್ತದೆ. ಪರವನ್ನುಳಿಸಿಕೊಂಡೇ ಐಹಿಕ ಜೀವನಕ್ಕೆ ಇದರಿಂದ ಹೊಸ ತಿರುವು ಲಭಿಸಿತು. ಇಲ್ಲಿಯ ಅಸಮಾನತೆಗೆ ಜಾತಿ ವ್ಯವಸ್ಥೆ ಕಾರಣವಾದಂತೆ, ಆ ಜಾತಿಗಳಿಗೆ ಅಂಟಿದ ವೃತ್ತಿಗಳಿಗೂ ಈ ತರತಮಭಾವ ಇತ್ತು. ಈ ತಾರತಮ್ಯವನ್ನು ಬಸವಣ್ಣ ಮತ್ತು ಇತರ ವಚನಕಾರರು ಸಾಮೂಹಿಕವಾಗಿ ಕಿತ್ತುಹಾಕಿದರು. ಅಂತೆಯೇ ಬಸವಣ್ಣನವರ ಕಾಯಕತತ್ವಕ್ಕೆ ವಿಶಾಲ ಅರ್ಥಲಭಿಸಿತು. ಅವರು ಆಚರಣೆಗೆ ತಂದ ಕಾಯಕತತ್ವ ದುಡಿಮೆಯ ಶ್ರಮಕ್ಕೆ ಗೌರವವನ್ನು ಕೊಡುತ್ತ ಮೂಲಭೂತವಾಗಿ ವೃತ್ತಿಗಳ ಮೂಲಕವೇ ಹುಟ್ಟಿದ ಜಾತಿವ್ಯವಸ್ಥೆಯನ್ನು ಅಳಿಸಿಹಾಕಲು ಸಹಾಯಕವಾಯಿತು. ನಿಷ್ಠೆ–ಪ್ರಾಮಾಣಿಕ ದುಡಿಮೆಯಿಂದ ಹಣ ಸಂಪಾದನೆಮಾಡುವದು ಕಾಯಕದ ಮೊದಲನೆಯ ಭಾಗ. ಹಾಗೆ ಸಂಪಾದಿಸಿದ ಹಣದಲ್ಲಿ ತನಗೆ ಅಂದಿಗೆ ಬೇಕಾದಷ್ಟನ್ನು ಮಾತ್ರ ಉಳಿಸಿಕೊಂಡು ಉಳಿದದ್ದನ್ನು ದಾಸೋಹದ ಮೂಲಕ ಸಕಲರಿಗೂ ವಿನಿಯೋಗಿಸುವದು – ಅದರ ಎರಡನೆಯ ಪ್ರಮುಖಭಾಗ. ಅಂತೆಯೇ ಕಾಯಕ–ದಾಸೋಹ ತತ್ವಗಳು ಒಂದಕ್ಕೊಂದು ಪೂರಕವಾಗಿವೆ. ಜೀವನೋಪಾಯದ ಜತೆಗೆ ಆತ್ಮಸಿದ್ಧಿಯ ಸಾಧನವೂ ಇದಾದುದರಿಂದ ಮೇಲು–ಕೀಳುಗಳಿಗೆ ಇಲ್ಲಿ ಅವಕಾಶವೇ ಇಲ್ಲದಂತಾಯಿತು.

"ದೇವ ಸಹಿತ ಭಕ್ತ ಮನೆಗೆ ಬಂದಡೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ! ನಿಮ್ಮ ಪುರಾತನರಾಣೆ! ತಲೆದಂಡ! ತಲೆದಂಡ!" *(ವಚನ : ೪೫೨)*

ಎನ್ನುವ ಬಸವಣ್ಣನ ಈ ವಚನ ಇದನ್ನೇ ಹೇಳುತ್ತದೆ. ಕಾಯಕವಾವುದೆಂದು ಕೇಳುವ ಪ್ರಶ್ನೆಯೇ ಅಲ್ಲಿ ಬರುತ್ತಿರಲಿಲ್ಲ. ಎಲ್ಲ ಕಾಯಕಕ್ಕೂ ಗೌರವ ಸಮಾನತೆಯನ್ನು ಬಸವಣ್ಣ ಕಲ್ಪಿಸಿದ.

ಇನ್ನೊಂದು ಮುಖ್ಯ ಸಂಗತಿಯೆಂದರೆ ಶರಣರಿಗೆ ಈ ಕಾಯಕವೇ ದೊಡ್ಡ ಅನುಭಾವವಾಯಿತು. "ಕೂಡಲ ಸಂಗನ ಶರಣರ ಅನುಭಾವ ಮಡಿವಾಳನ ಕಾಯಕದಂತೆ" (ವಚನ : ೬೫೩) ಎಂದು ಹೇಳುವ ಬಸವಣ್ಣನ ಈ ವಚನದಲ್ಲಿಯೇ ಅದರ ಸ್ಪಷ್ಟತೆ ಇದೆ.

ವಚನಕಾರರು ಒಬ್ಬೊಬ್ಬರು ಒಂದೊಂದು ಕಾಯಕವನ್ನು ಮಾಡುತ್ತಿದ್ದರು. ಕಾಯಕದಿಂದ ಮೇಲು-ಕೀಳು ಭಾವನೆ ಅವರಲ್ಲಿ ಹುಟ್ಟಲಿಲ್ಲ. ಅವರ ಹೆಸರುಗಳೇ ಆ ವೃತ್ತಿಯನ್ನು ಸೂಚಿಸುತ್ತವೆ. ಕಾಯಕದ ಹೆಸರನ್ನು ಅಡ್ಡ ಹೆಸರಿನಂತೆ ಬಳಸಿಕೊಳ್ಳುವದು ಅಭಿಮಾನದ ವಿಷಯವಾಗಿ ಕಂಡಿತು. ಅಂತೆಯೇ ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ದನಗಾಹಿ ರಾಮಣ್ಣ, ಸೂಳೆ ಸಂಕವ್ವೆ, ಮೋಳಿಗೆ ಮಾರಯ್ಯ, ಕಿನ್ನರಿ ಬೊಮ್ಮಯ್ಯ ಹೀಗೆ ಅನೇಕ ವಚನಕಾರರ ಹೆಸರನ್ನು ಉಲ್ಲೇಖಿಸಬಹುದು. ಬಸವಣ್ಣ ಸಾರಿದ ಕಾಯಕತತ್ವ ನಾವು ಬಯಸುವ ದುಡಿಮೆಯ ಹಕ್ಕಿಗಿಂತ ಶ್ರೇಷ್ಠವಾದುದೆಂಬ ಸತ್ಯ ತಿಳಿದಾಗ ಬಸವಣ್ಣ ಇನ್ನೂ ಅನಿವಾರ್ಯವಾಗುತ್ತಾನೆ.

ಸಮತಾವಾದ

ಸಮತಾವಾದದ ಬಗೆಗೆ ಅನೇಕ ವಿಚಾರಗಳಿವೆ. ಅನೇಕ ಮನಸ್ಸುಗಳು ಇಲ್ಲಿ ಸಮತಾವಾದವನ್ನು ತರಲು ಪ್ರಯತ್ನಿಸಿವೆ. ಅವರ ದಾರಿಗಳು ಬೇರೆ ಬೇರೆಯಾದರೂ ಅವರ ಕಾಳಜಿ ಪ್ರಯತ್ನಗಳೆಲ್ಲ ಒಂದೇ ಯಾಗಿವೆ. ಇವತ್ತಿನ ಸಾಮಾಜಿಕ ಸಂದರ್ಭದಲ್ಲಿ ಸಮತಾವಾದದ ಬಗೆಗೆ ಅನೇಕ ಮಾತುಗಳು ಕೇಳಿಬರುತ್ತವೆ. ಮಾರ್ಕ್ಸ್ ಹೇಳುವ ಆರ್ಥಿಕ ಸಮಾನತೆಯ ತತ್ವ ಇಂದು ಜಗತ್ತಿನಾದ್ಯಾಂತ ಜನಪ್ರಿಯತೆಯನ್ನು ಪಡೆದಿದೆ. ಬಸವಣ್ಣ ಹೇಳಿದ ದಾಸೋಹ ತತ್ವದಲ್ಲಿಯೂ ಮಾರ್ಕ್ಸ್‌ನ ಅನೇಕ ವಿಚಾರಗಳು ಸಾಮ್ಯತೆಯನ್ನು ಪಡೆಯುತ್ತವೆ.

ಕಾಯಕತತ್ವದ ಇನ್ನೊಂದು ಮುಖವೇ ದಾಸೋಹ ತತ್ವ. ಇದರ ಮೂಲಕವೇ ಬಸವಣ್ಣ ಸಮತಾವಾದ ತರಲು ಪ್ರಯತ್ನಿಸಿದ. ಎಲ್ಲರೂ ಪ್ರಾಮಾಣಿಕವಾಗಿ ನೀತಿಯಿಂದ ದುಡಿಯುವದು ಕಾಯಕತತ್ವವಾದರೆ, ದುಡಿದ ಫಲವನ್ನು ಎಲ್ಲರೂ ಸಮಾನತೆಯಿಂದ ಪ್ರೀತಿಯಿಂದ ಹಂಚಿಕೊಂಡು ತಿನ್ನುವುದು ದಾಸೋಹತತ್ವ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣ ಹೇಳಿದ ಸಮತಾವಾದವನ್ನು ಇಪ್ಪತ್ತನೆಯ ಶತಮಾನದಲ್ಲಿ ಮಾರ್ಕ್ಸ್ ವೈಜ್ಞಾನಿಕ ರೀತಿಯಲ್ಲಿ ಹೇಳಿದ. ಇಬ್ಬರ ಮೂಲಭೂತ ಕಾಳಜಿ-ಉದ್ದೇಶ ಒಂದೇ ಯಾಗಿತ್ತೆಂಬುದು ಬಹಳ ಮುಖ್ಯವಾದ ಸಂಗತಿ.

ದಾನ ಸಂಸ್ಕೃತಿ ಇರುವ ಈ ವ್ಯವಸ್ಥೆಯಲ್ಲಿ ಬಸವಣ್ಣ ದಾಸೋಹ ಸಂಸ್ಕೃತಿಯನ್ನು ಜಾರಿಗೆ ತಂದ. ಇದು ಇಡೀ ವ್ಯವಸ್ಥೆಯನ್ನೇ ಪಲ್ಲಟಗೊಳಿಸಿದ ಪ್ರಮುಖ ಸಾಧನೆ. ದಾನ ಜನಸಮೂಹದಲ್ಲಿ ಸದಾ ಅಸಮಾನತೆಯನ್ನು ಹುಟ್ಟಿಸುತ್ತದೆ. ಅಲ್ಲಿ ಕೊಡುವವನೊ-ಪಡೆಯುವವನೊಬ್ಬಬ್ಬ. ಕೊಡುವವನ ಕೈ ಮೇಲಾಗಿ, ಪಡೆಯುವವನ ಕೈ ಕೆಳಗಾಗಿ ಮೇಲು-ಕೀಳು ವ್ಯವಸ್ಥೆ ಸದಾ ಜೀವಂತವಾಗಿರುತ್ತದೆ. ಅಹಂಭಾವವನ್ನು ಬೆಳೆಸುವ, ಅಂತಸ್ತನ್ನು ಉಳಿಸುವ 'ದಾನ'ದಂತಹ ಪದ್ಧತಿಯನ್ನು ತಿರಸ್ಕರಿಸಿದ ವಚನಕಾರರು ಸಮಾನತೆಯನ್ನು ಹೇಳುವ ಜೀವನ ಪ್ರೀತಿಯನ್ನು ಕಲಿಸುವ 'ದಾಸೋಹ'ವನ್ನು ಜಾರಿಯಲ್ಲಿ ತಂದರು. ದಾನದ ಬದಲು ದಾಸೋಹ ಬಂದಾಗ ಕೊಡುವವನ ಅಹಂಭಾವ, ಪಡೆವವನ ಕೀಳರಿಮೆ ಎರಡೂ ಇಲ್ಲವಾಗುತ್ತವೆ. ದೇವಾಲಯದ ಬದಲು ದೇಹಕ್ಕೆ, ಪರದ ಬದಲು ಇಹಕ್ಕೆ ಅಲ್ಲಿ

ಸಲ್ಲುವವರಿಗಿಂತ ಇಲ್ಲಿ ಸಲ್ಲುವವರಿಗೆ ಪ್ರಾಮುಖ್ಯತೆಯನ್ನು ಕೊಟ್ಟ ಬಸವಣ್ಣ ದಾಸೋಹದ ಮಹತ್ವವನ್ನು ವಿವರಿಸುತ್ತಲೇ ದಾನದ ಪರಂಪರೆಯನ್ನು ನಿಲ್ಲಿಸಿದ.

"ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ!
ವೇದ ಘನವೆಂಬೆನೆ ? ಪ್ರಾಣವಧೆಯ ಹೇಳುತ್ತಿದೆ!
ಶ್ರುತಿ ಘನವೆಂಬೆನೆ ? ಮುಂದಿಟ್ಟರಸುತ್ತಿದೆ!
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವನ!" *(ವಚನ: ೨೦೮)*

"ದಾಸೋಹವೆಂಬ ಸೋಹೆಗೊಂಡು ಹೋಗಿ
ಗುರುವ ಕಂಡೆ, ಲಿಂಗವಕಂಡೆ, ಜಂಗಮವ ಕಂಡೆ, ಪ್ರಸಾದವ ಕಂಡೆ
ಇಂತೀ ಚತುರ್ವಿಧ ಸಂಪನ್ನನಾದೆ, ಕಾಣಾ
ಕೂಡಲಸಂಗಮದೇವಾ" *(ವಚನ : ೭೭೮)*

ಇವೆರಡೂ ವಚನಗಳಲ್ಲಿ ದಾಸೋಹ ತತ್ವದ ಪ್ರಾಮುಖ್ಯತೆಯನ್ನು ಹೇಳುವದರ ಜತೆಗೆ ಸಮತಾವಾದದ ನಿಜವಾದ ಅರ್ಥವನ್ನು ಬಿಂಬಿಸಲಾಗಿದೆ. ವೇದ--ಶಾಸ್ತ್ರ-ಶ್ರುತಿಗಳ ಕಾರ್ಯವನ್ನು ವಿವರಿಸಿ ಅವುಗಳೊಂದಿಗೆ ದಾಸೋಹ ತತ್ವವನ್ನು ಹೋಲಿಸಿ ನೋಡಿ ಹೇಳುವ ಬಸವಣ್ಣನ ಈ ನುಡಿಗಳು ದಾಸೋಹತತ್ವದ ಬಗೆಗೆ ವೈಜ್ಞಾನಿಕ ಸತ್ಯವನ್ನು ತಿಳಿಸುತ್ತವೆ. ಇದುವರೆಗಿನ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭವನ್ನು ಪ್ರಶ್ನಿಸುವುದರ ಮೂಲಕ ಸಮತಾವಾದದ ಹೊಸತತ್ವವೊಂದನ್ನು ನಿರೂಪಿಸುವ ಬಸವಣ್ಣನವರ ಈ ವಚನದಲ್ಲಿ ಅನಂತ ಅರ್ಥವಿದೆ.

ಸಾಮೂಹಿಕ ದುಡಿಮೆಯಿಂದ ಬಂದ ಫಲದಲ್ಲಿ ಎಲ್ಲರೂ ಸರಿಸಮಾನರಾಗಿ ಹಂಚಿಕೊಂಡು ತಿಂದಾಗ ಸಿಗುವ ಆನಂದ ಅವಿಸ್ಮರಣೀಯವಾದುದು. ಆದುದರಿಂದ ದಾಸೋಹದಲ್ಲಿಯೇ ಗುರು-ಲಿಂಗ-ಜಂಗಮ-ಪ್ರಸಾದಗಳಿರುತ್ತವೆಯೆಂದು ಬಸವಣ್ಣ ಎರಡನೇ ವಚನದಲ್ಲಿ ಹೇಳಿರುವದು ಸತ್ಯವೆನಿಸುತ್ತದೆ.

ದಾಸೋಹತತ್ವದಿಂದ ಅನೇಕ ಸಮಸ್ಯೆಗಳು ಏಕಕಾಲಕ್ಕೆ ಪರಿಹಾರವಾಗುತ್ತವೆ. ನಾನು ಗಳಿಸಿದೆನೆಂಬ ಹಮ್ಮು ಹೋಗಿ ನಾವು ಪಡೆದದ್ದೆಂಬ ವಿನಯ ಬರುತ್ತದೆ. ಎಲ್ಲರೂ ಒಂದೇ ಕಡೆ ಪ್ರಸಾದ ಸ್ವೀಕರಿಸುವುದರಿಂದ ವರ್ಣವ್ಯವಸ್ಥೆಯಿಂದುಂಟಾದ ಜಾತಿಭೇದ ಹೊರಟುಹೋಗುತ್ತದೆ. ವಂಶಪಾರಂಪರ್ಯವಾಗಿ ಬಂದದ್ದೆಲ್ಲ ಸಮಾಜಕ್ಕೆ ಸೇರಿ, ಇಡೀ ಆದಾಯವೆಲ್ಲ ಜನಸಮೂಹದ್ದಾಗುತ್ತದೆ. ಆಗ ಸಮಾಜದ ಮೇಲೆ ನಿಷ್ಠೆ ಬೆಳೆದು ಸಾರ್ವಜನಿಕ ಹಿತಕ್ಕೆ ಪ್ರಾಧಾನ್ಯತೆ ಸಿಗುತ್ತದೆ. ಇಂತಹ ಸಮತಾವಾದದ ತಾತ್ವಿಕ ನೆಲೆ ಇಂದು ತೀರ ಅಗತ್ಯವಾಗಿದೆ.

ಆತ್ಮಶೋಧನೆ

ಸಮಾಜದ ಬೆಳವಣಿಗೆಗೆ ಸಮಾಜ ವಿಮರ್ಶೆ ಅನಿವಾರ್ಯವಾದರೆ, ವ್ಯಕ್ತಿ ಬೆಳವಣಿಗೆಗೆ ಆತ್ಮವಿಮರ್ಶೆ ಅಥವಾ ಆತ್ಮಶೋಧನೆ ತುಂಬಾ ಅನಿವಾರ್ಯವಾದುದು. ವ್ಯಕ್ತಿ ಬೆಳೆಯಲಾರದೆ, ಸಮಾಜ ಬೆಳೆಯಲಾರದು. ವ್ಯಕ್ತಿ-ವ್ಯಕ್ತಿಗಳ ತಪ್ಪು-ಮಿತಿಗಳೇ ಸಮಾಜದ

ಮಿತಿಗಳೂ ಆಗಿರುತ್ತವೆ. ಆದ್ದರಿಂದ ಸಮಾಜ ವಿಮರ್ಶೆಗೆ ಮೊದಲು ಆತ್ಮವಿಮರ್ಶೆ ಅನಿವಾರ್ಯವಾಗುತ್ತದೆ.

ಪ್ರಸ್ತುತ ಸಮಾಜ ವ್ಯವಸ್ಥೆಯಲ್ಲಿ ಈ ಆತ್ಮಶೋಧನೆ ಅಥವಾ ಆತ್ಮವಿಮರ್ಶೆ ಕಡಿಮೆಯಾಗ ತೊಡಗಿದೆ. ಪ್ರತಿಯೊಬ್ಬರೂ ತಮ್ಮ ತಪ್ಪುಗಳನ್ನು ಮುಚ್ಚಿಟ್ಟು ಇತರರ ಕಡೆ ಕೈ ಮಾಡಿ ತೋರಿಸುತ್ತಿದ್ದಾರೆ. ಸರಕಾರದ ವ್ಯವಸ್ಥೆ ಭ್ರಷ್ಟವಾಗಿದೆಯೆಂದು ಪ್ರಜೆಗಳು ಹೇಳಿದರೆ; ಭ್ರಷ್ಟಪ್ರಜೆ ಗಳಿಂದ ಮಾತ್ರ ಭ್ರಷ್ಟಸರಕಾರ ಹುಟ್ಟುತ್ತದೆಂದು ಸರಕಾರದ ಅಧಿಕಾರಿಗಳು ಹೇಳುತ್ತಾರೆ. ತಮ್ಮ ತಪ್ಪನ್ನು ಇನ್ನೊಬ್ಬರ ಮೇಲೆ ಹಾಕಿ ಗೊಂದಲವೆಬ್ಬಿಸುವ ಸ್ಥಿತಿ ಬೆಳೆಯತೊಡಗಿದೆ. ಇಂತಹ ಸಂದರ್ಭದಲ್ಲಿ ಬಸವಣ್ಣ ಹೇಳಿದ ಆತ್ಮವಿಮರ್ಶೆಯ ನುಡಿಗಳು ಇಂದು ಹೆಚ್ಚು ಉಪಯುಕ್ತವೆನಿಸುತ್ತವೆ.

ಬಸವಣ್ಣ ತನ್ನ ಅನೇಕ ವಚನಗಳಲ್ಲಿ ಆತ್ಮಶೋಧನೆ ಮಾಡಿಕೊಂಡಿದ್ದಾನೆ. ಅದು ಕೇವಲ ಬಸವಣ್ಣನ ಆತ್ಮಶೋಧನೆಯಾಗಿರದೆ ಅಂದಿನ ಇಡೀ ಸಮಾಜ ವ್ಯವಸ್ಥೆಯ ಆತ್ಮಶೋಧನೆ ಯಾಗಿದೆ. ಸಮಾಜ ಮಾಡುವ ತಪ್ಪುಗಳನ್ನು ತನ್ನ ಮೇಲೆ ಹಾಕಿಕೊಂಡು, ತನ್ನ ಮೂಲಕ ವಿಮರ್ಶೆಗೆ ತೊಡಗುವ ಬಸವಣ್ಣನ ದೊಡ್ಡಗುಣ ಇಂದು ಸರ್ವರಿಗೂ ಆದರ್ಶವಾಗಿದೆ.

ಆತ್ಮಶೋಧನೆಯಿಂದ ಮನುಷ್ಯ ಬೆಳೆಯುತ್ತಾನೆ. ಈ ಕ್ರಿಯೆ, ಕನ್ನಡಿಯಂತೆ ತನ್ನ ಗುಣಗಳನ್ನೆಲ್ಲ ಮುಂದಿಟ್ಟು ತೋರಿಸುತ್ತದೆ. ತನ್ನಲ್ಲೇ ತಾನು ಹುಡುಕಿಕೊಂಡರೆ, ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದು ತಿಳಿಯುತ್ತದೆ. ಪ್ರತಿಯೊಬ್ಬ ಮನುಷ್ಯನೂ ತನ್ನನ್ನು ತಾನೇ ವಿಮರ್ಶಿಸಿಕೊಂಡರೆ, ಸಮಾಜವನ್ನು ವಿಮರ್ಶಿಸುವ ಅಗತ್ಯವೇ ಇರುವುದಿಲ್ಲ. ಇಂತಹ ಒಂದು ಅಮೂಲ್ಯ ವಿಚಾರವನ್ನು ಕೊಟ್ಟ ಬಸವಣ್ಣ, ಆತ್ಮಶೋಧನೆಯ ಮೂಲಕ ಆತ್ಮಜ್ಞಾನದ ಬೆಳವಣಿಗೆಯನ್ನು ಹೇಳಿದ್ದಾನೆ.

> **"ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ;**
> **ವಿಚಾರಿಸಿದಡೆ ಏನೂ ಹುರುಳಿಲ್ಲವಯ್ಯಾ!"** *(ವಚನ : ೨೯)*

> **"ಅಂದಣವನೇರಿದ ಸೊಣಗನಂತೆ**
> **ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು**
> **ಸುಡು! ಸುಡು! ಮನವಿದು ವಿಷಯಕ್ಕೆ ಹರಿವುದು"** *(ವಚನ : ೩೪)*

> **"ಮಸಿಯನೇಸು ಕಾಲ ಬೆಳಗಿದಡೆ ಬಿಳಿದಾಗಬಲ್ಲುದೆ**
> **ಕರ್ಮಸ್ಥಿತಿ ಬೆನ್ನ ಬಿಡದು"** *(ವಚನ : ೩೮೨)*

ಮನಸ್ಸು-ದೇಹಗಳ ವಿಕಾರ ಸ್ಥಿತಿಯನ್ನು ಬಸವಣ್ಣ ಇಲ್ಲಿ ಹೇಳಿದ್ದಾನೆ. ಇವು ಕೇವಲ ಬಸವಣ್ಣನ ಮನಸ್ಸು-ದೇಹಗಳಾಗಿರದೆ ಇಡೀ ವ್ಯವಸ್ಥೆಯ ಮನಸ್ಸು-ದೇಹಗಳಾಗಿವೆ. ಇಂತಹ ವಿಷಯಂಗಳಿಗೆಳಸುವ ದೇಹ-ಮನಸ್ಸುಗಳನ್ನು ಬೆಳೆಸಲು ಅರಿವು-ಆಲೋಚನೆ ತುಂಬಾ ಅವಶ್ಯವೆಂದು ಬಸವಣ್ಣ ಹೇಳಿದ.

ಆತ್ಮಶೋಧನೆ ಮನುಷ್ಯನಿಗೆ ಬದುಕಿನ ವಿನಯವನ್ನು ಕಲಿಸುತ್ತದೆ; ಅಹಂ ಭಾವವನ್ನು ಮುರಿಯುತ್ತದೆ. ಆತ್ಮಶೋಧನೆಯಿಲ್ಲದ್ದಕ್ಕಾಗಿಯೇ ಇಂದು ಅನೇಕ ಸಮಸ್ಯೆಗಳು ಹುಟ್ಟಿಕೊಂಡಿವೆ. ಸಮಸ್ಯೆಗಳ ಹುಟ್ಟಿಗೆ ಮೂಲ ಕಾರಣವಾಗುವ ಅಜ್ಞಾನ, ಮೌಢ್ಯ, ಅಹಂಭಾವ, ಸ್ವಾರ್ಥ, ಸಣ್ಣತನ, ಸೇಡು, ಸಿಟ್ಟು ಈ ಎಲ್ಲ ದುರ್ಗುಣಗಳು ಆತ್ಮಶೋಧನೆಯಿಂದ ದೂರವಾಗುತ್ತವೆ.

ಆತ್ಮಶೋಧನೆಯ ಕ್ರಿಯೆಯಲ್ಲಿ ವ್ಯಕ್ತಿ ತನಗೆ ತಾನೆ ಗುರುವಾಗುವದರಿಂದ ಸಂಯಮ ಮೂಡುತ್ತದೆ.

ಆತ್ಮಶೋಧನೆಯಿದ್ದಲ್ಲಿ ಹಿಂಸೆ ಇರುವುದಿಲ್ಲ, ಯುದ್ಧಗಳಿರುವುದಿಲ್ಲ, ಶೋಷಣೆ ಇರುವುದಿಲ್ಲ. ಇಂತಹ ಪ್ರಮುಖ ವಿಧಾನವನ್ನು ಕಲಿಸಿಕೊಟ್ಟ ಬಸವಣ್ಣ ಆತ್ಮಶೋಧನೆಯ ಮೂಲಕ ಸಮಾಜದ ಕಣ್ಣು ತೆರೆಸಿದ. ಬಸವಣ್ಣನಂತೆ ಆತ್ಮಶೋಧನೆ ಮಾಡಿಕೊಂಡವರು ಮತ್ತೊಬ್ಬರಿಲ್ಲ. ಅನೇಕ ವಚನಗಳಲ್ಲಿ ಕಾಣುವ ಬಸವಣ್ಣ ಈ ಆತ್ಮಶೋಧನೆ, ಪ್ರಸ್ತುತ ಸಾಮಾಜಿಕ ಸಂದರ್ಭಕ್ಕೂ ಅನ್ವಯವಾದಾಗ ಖಂಡಿತಾ ಹೊಸಬೆಳಕು ಕಾಣುತ್ತದೆ.

ರಾಜಸತ್ತೆಯ ನಿರಾಕರಣೆ

ಬಸವಣ್ಣ ರಾಜಸತ್ತೆಯ ಸಮೀಪವಿದ್ದೂ ಅದನ್ನು ನಿರಾಕರಿಸಿದ್ದು ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ತುಂಬಾ ಮುಖ್ಯವೆನಿಸುತ್ತದೆ. ಶತಮಾನಗಳ ಚರಿತ್ರೆಯನ್ನು ನೋಡಿದಾಗ, ರಾಜಸತ್ತೆಗಾಗಿ ಬಡಿದಾಡಿದವರುಂಟು, ತಂದೆ-ಮಕ್ಕಳು ಪರಸ್ಪರ ಕೊಲೆ ಮಾಡಿದ್ದುಂಟು; ರಾಜಸತ್ತೆಯ ದುರ್ಲಾಭ ಪಡೆದವರುಂಟು; ಆದರೆ ರಾಜಸತ್ತೆಯ ಹತ್ತಿರವಿದ್ದೂ ಅದರ ಜನವಿರೋಧಿ ನಿಲುವುಗಳಿಗಾಗಿ ನಿರಾಕರಿಸಿದವರು ತುಂಬಾ ವಿರಳ. ಬಸವಣ್ಣ ಅಂತಹ ವಿರಳರಲ್ಲಿ ಪ್ರಮುಖನಾಗಿದ್ದಾನೆ.

ಬಸವಣ್ಣ ಸಮಾಜವ್ಯವಸ್ಥೆಯನ್ನು ಧರ್ಮದ ಮೂಲಕ ಸುಧಾರಿಸಲು ಪ್ರಯತ್ನಿಸಿದ, ಹೀಗಾಗಿ ಆತನಿಗೆ ರಾಜಕೀಯ ಅಷ್ಟೊಂದು ಮೂಲಭೂತವಾದ, ಕ್ಷೇತ್ರವಾಗಲಿಲ್ಲ. ಬಸವಣ್ಣ ಬಿಜ್ಜಳನ ರಾಜ್ಯದಲ್ಲಿ ಮಂತ್ರಿಯಾಗಿದ್ದ, ಪ್ರಾರಂಭದಲ್ಲಿ ಬಿಜ್ಜಳನಿಗೆ ತುಂಬಾ ಆಪ್ತನೂ ಆಗಿದ್ದ. ರಾಜಕೀಯದ ಮೂಲಕವೇ ಬದಲಾವಣೆ ತರುವುದು ಆತನ ಉದ್ದೇಶವಾಗಿದ್ದರೆ, ಖಂಡಿತಾ ಅನುಭವ ಮಂಟಪದಂತಹ ಸಂಸ್ಥೆಯನ್ನು ಆತ ಕಟ್ಟುತ್ತಿರಲಿಲ್ಲ, ಶರಣ ಸಮೂಹವನ್ನು ಸಂಘಟಿಸುತ್ತಿರಲಿಲ್ಲ. ಧರ್ಮ ಸಮ್ಮತವಲ್ಲದ ರಾಜಕೀಯ ಅಮುಖ್ಯವೆಂದು ಆತ ತಿಳಿದಿದ್ದ. ಅಂತೆಯೇ, ತುಂಬಾ ಸ್ವಾಭಿಮಾನಿಯಾದ ಬಸವಣ್ಣ ರಾಜಸತ್ತೆಯನ್ನು ನಿರಾಕರಿಸಿ ಹೊರಬರ ಬೇಕಾಯಿತು. ಬಸವಣ್ಣನಿಗೆ ಮಂತ್ರಿಪದವಿಯೆಂಬುದು ನಿಷ್ಠೆಯ ಕಾಯಕವಾಗಿತ್ತೇ ಹೊರತು ರಾಜ ಸತ್ತೆಯ ವೈಭವವಾಗಿರಲಿಲ್ಲ.

ರಾಜನಿಗಿಂತ ರಾಜ್ಯ ಮುಖ್ಯವೆಂಬುದು ಆತನ ಸ್ಪಷ್ಟ ತಿಳುವಳಿಕೆಯಾಗಿತ್ತು. ಆ ರಾಜ್ಯದ ಜನಸಮೂಹವೇ ಅದರ ಹಕ್ಕು ದಾರರೆಂಬುದನ್ನೂ ಆತ ಮನಗಂಡಿದ್ದ. ರಾಜಸತ್ತೆಯ ಅಧಿಕಾರ ಒಬ್ಬನಲ್ಲಿದ್ದರೇನು; ಹಲವರಲ್ಲಿದ್ದರೇನು; ಅಂದರೆ ರಾಜನಲ್ಲಿದ್ದರೇನು, ಪ್ರಜೆ ಗಳಲ್ಲಿದ್ದರೇನು ಅದು ಮುಖ್ಯವಾದ ಸಂಗತಿಯಲ್ಲ; ಆ ಅಧಿಕಾರದ ಬಳಕೆ ಜನ ಸಮೂಹಕ್ಕಾಗಿದ್ದು ಅದರ ಆಶಯ ಜನಪರವಾಗಿರಬೇಕೆಂಬುದು ಬಸವಣ್ಣನ ಸ್ಪಷ್ಟ ನಿಲುವಾಗಿತ್ತು. ಅಂತೆಯೇ ಆತ ರಾಜಸತ್ತೆಯಲ್ಲಿದ್ದುಕೊಂಡೇ; ಅದನ್ನು ಜನ ಸಮೂಹದತ್ತ ಕೊಂಡೊಯ್ಯಲು ಪ್ರಯತ್ನಿಸಿದ. ರಾಜಸತ್ತೆಯಲ್ಲಿ ಬಸವಣ್ಣನ ಈ ನಂಬಿಕೆ ಕಾರ್ಯಗತವಾಗದೇ ಇದ್ದಾಗ, ಅದನ್ನು ನಿರಾಕರಿಸಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿ ಕೂಡಲಸಂಗಮಕ್ಕೆ ಹೊರಟುಹೋದ. ಮೌಲ್ಯಗಳಿಗಾಗಿ ಬದ್ಧರಾಗಿರುವ ಹೋರಾಟಗಾರರು ಮಾತ್ರ ಇಂತಹ ಅರ್ಥಪೂರ್ಣ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲರು.

"ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ
ನೆಲನಾಳ್ವನ ಹೆಣನೆಂದಡೆ ಒಂದಡಿಕೆಗೆ ಕೊಂಬವರಿಲ್ಲ ನೋಡಯ್ಯಾ!"

(ಬ.ವ. ೧೫೮)

"ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ;" *(ಬ.ವ. ೩೫೫)*

"ಅರಸು ವಿಚಾರ ಸಿರಿಯ ಶೃಂಗಾರ ಸ್ಥಿರವಲ್ಲ ಮಾನವಾ
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು\, ನೋಡಾ" *(ಬ.ವ. ೬೨೪)*

"ಅರಸು ಮುನಿದಡೆ ನಾಡೊಳಗಿರಬಾರದಯ್ಯಾ
ಗಂಡ ಮುನಿದಡೆ ಹೆಂಡತಿ ಇರಬಾರದಯ್ಯಾ." *(ಬ.ವ. ೮೨೪)*

ಹೀಗೆ ಬಸವಣ್ಣನಿಗೆ ಅರಸನ ಬಗೆಗೆ-ಅರಸೊತ್ತಿಗೆಯ ಬಗೆಗೆ ಸ್ಪಷ್ಟ ತಿಳುವಳಿಕೆಯಿತ್ತು. ರಾಜಕೀಯ ಬದಲಾವಣೆ ಬಸವಣ್ಣನ ಉದ್ದೇಶವಾಗದೇ ಇದ್ದುದರಿಂದಲೇ ಕಲ್ಯಾಣ ಕಟುಕರ ಪಾಲಾಯಿತು; ವಚನ ಚಳವಳಿ ದಿಕ್ಕು ತಪ್ಪಿತು; ಶರಣರು ಚಲ್ಲಾಪಿಲ್ಲಿಯಾಗಿ ಹೊರಟು ಹೋದರು. ಅಂದಿನ ಸಂದರ್ಭದಲ್ಲಿ ರಾಜಸತ್ತೆಯ ಕೈ ಮೇಲಾಗಿ, ವಚನಕಾರರ ಹೋರಾಟ ಯಶಸ್ವಿಯಾಗದಿದ್ದರೂ ಕೂಡ ಬಸವಣ್ಣ ಮುಂತಾದ ಶರಣರು ಅಂತಹ ಬಿಕ್ಕಟ್ಟಿನ ಸಂದರ್ಭದಲ್ಲಿಯೇ ತೆಗೆದುಕೊಂಡ ನಿರ್ಣಯಗಳು, ಇಟ್ಟ ಹೆಜ್ಜೆಗಳು ಪ್ರಸ್ತುತ ಸಂದರ್ಭಕ್ಕೂ ಆದರ್ಶ ಪ್ರಾಯವಾಗಿವೆ. ಬಸವಣ್ಣನ ಒಂದೊಂದು ನುಡಿಯೂ ಇಂದು ಮಹತ್ವದ್ದಾಗಿ ಕಾಣಲು ಮುಖ್ಯ ಕಾರಣ, ವಚನಕಾರರ ಹೋರಾಟದ ಆಶಯ ಜನಪರವಾಗಿತ್ತೆಂದು ಸ್ಪಷ್ಟವಾಗಿ ಹೇಳಬಹುದು.

ವ್ಯಾಧ ಹೊಡೆದು ತರುವ ಮೊಲದ ದೇಹಕ್ಕೂ, ನೆಲನಾಳುವ ಅರಸನ ದೇಹಕ್ಕೂ ತುಲನೆ ಮಾಡುವ ಬಸವಣ್ಣ 'ಮೊಲನಿಂದ ಕರಕಷ್ಟ ನರನ ಬಾಳುವೆ' ಎಂದು ನುಡಿಯುವಲ್ಲಿ ಆಧ್ಯಾತ್ಮವನ್ನು ಮೀರಿದ ಸತ್ಯವಿದೆ. ಅರಸನ ಆಸ್ಥಾನದಲ್ಲಿದ್ದು ಆತನ ವಿಚಾರಗಳನ್ನು ಕೇಳಿ, ಆತನ ಮುನಿಸನ್ನು ಕಂಡು ಸ್ವಾನುಭವದ ಮೂಲಕ ಬಂದ ಬಸವಣ್ಣನ ನುಡಿಗಳು ಕೇವಲ ಸತ್ಯಗಳಾಗಿರದೆ, ಕಾಲಗತಿಯಲ್ಲಿ ಚಿಂತನೆಗೆ ಅರ್ಹವಾದ ಮಂಥನಗಳಾಗಿವೆ. ಅರಸರ ಮನೆಯಲ್ಲಿ ಅರಸಿಯಾಗಿರುವುದಕ್ಕಿಂತ, ಭಕ್ತರ ಮನೆಯಲ್ಲಿ ತೊತ್ತಾಗಿರುವುದೇ ಒಳ್ಳೆಯದೆಂದು ತಿಳಿದ ಬಸವಣ್ಣನಂತಹ ವಚನಕಾರ, ಹೋರಾಟಕ್ಕೆ ಧರ್ಮದ ಸ್ಪರ್ಶ ಕೊಡುವುದರ ಮೂಲಕ ಅದನ್ನು ಅರ್ಥ ಪೂರ್ಣಗೊಳಿಸುತ್ತಾನೆ. ಸ್ಥಿರವಲ್ಲದ ಅರಸನ ವಿಚಾರಗಳನ್ನು ಅಸ್ಥಿರವಾದ ಸಿರಿಯ ಶೃಂಗಾರಕ್ಕೆ ಹೋಲಿಸುತ್ತಾನೆ. ಅರಸು ಮುನಿದಡೆ ನಾಡೊಳಗಿರಬಾರದೆಂದು ಹೇಳುತ್ತಲೇ ಕಲ್ಯಾಣಬಿಟ್ಟು ಹೊರಡುತ್ತಾನೆ.

ಬಸವಣ್ಣನಂತಹ ಶರಣರು ರಾಜಸತ್ತೆಯ ಸಮೀಪವಿದ್ದುಕೊಂಡೇ ಅದರ ಮಿತಿಗಳನ್ನರಿತು ಕೊಂಡದ್ದು, ಆ ಮೂಲಕ ಉಂಟಾದ ಅರಿವಿನಿಂದ ಕೇವಲ ಯಶಸ್ಸಿಗಾಗಿ ಹೋರಾಡದೆ ಮೌಲ್ಯಗಳಿಗಾಗಿ ಬದ್ಧರಾದದ್ದು ಇಂದು ತುಂಬಾ ಮುಖ್ಯವೆನಿಸುತ್ತದೆ. ಮನುಷ್ಯನಿಗೆ ರಾಜಸತ್ತೆಯ ಸೌಲಭ್ಯವಿಲ್ಲದಿದ್ದಾಗ, ಅಂತಹ ಅವಕಾಶವಿರದೇ ಇದ್ದಾಗ ರಾಜಸತ್ತೆಯನ್ನು ಒಂದು ಭಾಗವಾಗಿದ್ದುಕೊಂಡು ಅಲ್ಲಿಯ ಸೌಲಭ್ಯ-ಸವಲತ್ತು-ಸುಖಗಳಿಗೆ ಬಲಿಯಾಗದೆ; ತಾನು ನಂಬಿದ ಮೌಲ್ಯಗಳಿಗೆ ಹೊಡೆತಬಿದ್ದಾಗ, ತನ್ನ ಹೋರಾಟದ

ಸಿದ್ಧಾಂತಗಳಿಗೆ ಧಕ್ಕೆ ಬಂದಾಗ ಅಂತಹ ರಾಜಸತ್ತೆಯನ್ನೇ ತಿರಸ್ಕರಿಸಿ ರಾಜ್ಯಬಿಟ್ಟು ಹೊರಟುಹೋದ ಬಸವಣ್ಣ ನಿಜವಾದ ನಿಷ್ಠಾವಂತ ಹೋರಾಟಗಾರನಾಗಿ ಕಾಣುತ್ತಾನೆ. ಇಂದಿನ ಪ್ರತಿಯೊಬ್ಬ ರಾಜ ಕಾರಣಿಯೂ ಬಸವಣ್ಣನ ಈ ನಿಷ್ಠೆಯನ್ನು-ಸೈದ್ಧಾಂತಿಕ ಸ್ಪಷ್ಟತೆಯನ್ನು ಅದಕ್ಕೆ ಸಂಬಂಧಿಸಿದ ಬದ್ಧತೆಯನ್ನು ತಿಳಿದುಕೊಳ್ಳಬೇಕಾಗಿದೆ.

"ಅರಸನ ಕಂಡು ಪುರುಷನ ಮರೆದಡೆ
ಮರನನೇರಿ ಕಯ್ಯ ಬಿಟ್ಟಂತಾದೆನಯ್ಯಾ". *(ಬ.ವ. ೪೨೫)*

"ಆನೆ ಅಂಕುಶಕ್ಕುಂಜುವದೆ ಅಯ್ಯಾ,
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ?
ಆನೀ ಬಿಜ್ಜಳಂಗಂಜುವೆನೆ, ಅಯ್ಯಾ ಕೂಡಲಸಂಗಮದೇವಾ...." *(ಬ.ವ. ೭೩೯)*

ಅರಸ-ಅರಸೊತ್ತಿಗೆಯ ಆಕರ್ಷಣೆ ಕಂಡು ಮನೆಯ ಪುರುಷನನ್ನೇ ಮರೆತರೆ, ಹೇಗೆ ಗರತಿಯೊಬ್ಬಳು ಎರಡಕ್ಕೂ ದೂರವಾಗುವಳೋ ಹಾಗೆ ಅರಸೊತ್ತಿಗೆಯನ್ನು ನಂಬಿದವರ ಪಾಡಾಗುತ್ತದೆಯೆಂಬುದನ್ನು ಇಲ್ಲಿ ತುಂಬಾ ಮಾರ್ಮಿಕವಾಗಿ ಹೇಳಿದ್ದಾರೆ. ಎರಡನೆಯ ವಚನದಲ್ಲಿ ಆನೆಯಂಕುಶದ ಪ್ರತಿಮೆ ತುಂಬಾ ಅರ್ಥಪೂರ್ಣವಾಗಿ ಬೆಳೆದು ನಿಂತು ಅಗಾಧ ಪರಿಣಾಮವನ್ನುಂಟುಮಾಡುತ್ತದೆ. "ಆನೀ ಬಿಜ್ಜಳಂಗಂಜುವೆನೆ" ಎನ್ನುವಂತಹ ನುಡಿ ಬಸವಣ್ಣನ ಬದುಕಿನ ಸ್ವಾಭಿಮಾನದ ಸಂಕೇತವಾಗಿದೆ. ಅರಸನನ್ನು-ಅರಸೊತ್ತಿಗೆಯನ್ನೂ ಕಂಡು ಶರಣರು ಅಂಜಲಿಲ್ಲ-ಹಿಂಜರಿಯಲಿಲ್ಲ ನಿಜ. ಆದರೆ ಅಷ್ಟೇ ಪ್ರಮುಖವಾದ ವೈಪರೀತ್ಯವೆಂದರೆ, ಹಾಗೆ ಖಾಯಮ್ಮಾಗಿ ಅಂಜದೇ ಇರುವ ಸ್ಥಿತಿಯನ್ನೂ ಅವರು ಶೋಧಿಸಲಿಲ್ಲ. ಬೇರೆಯವರು ಅಂದರೆ ಇವರ ಪಾಲಿಗೆ ಭವಿಗಳಾದವರು ಅರಸನಿಗೆ ನಿಷ್ಠೆಯನ್ನು ತೋರಿಸಿದರೆ, ಶರಣರು ತಮ್ಮ ಇಷ್ಟದೈವಕ್ಕೆ ನಿಷ್ಠರಾದರು. 'ಕೂಡಲಸಂಗಮದೇವಾ ನಿನಗಂಜುವೆನಲ್ಲದೆ ಬಿಜ್ಜಳಂಗಲ್ಲ' ಎಂದು ಹೇಳಿದರೇ ಹೊರತು ಅಂಜಿಕೆಯ ಸ್ಥಿತಿಯೆನ್ನೇ ಹೋಗಲಾಡಿಸುವ ಆಮೂಲಾಗ್ರವಾದ ರಾಜಕೀಯ ವ್ಯವಸ್ಥೆಯ ಬದಲಾವಣೆಗೆ ಅವರು ಕರೆ ಕೊಡಲಿಲ್ಲ. ಇದು ವಚನ ಚಳವಳಿಯ ಮಿತಿಯೆಂದೆನಿಸಿದರೂ ಬಸವಣ್ಣ ಮುಂತಾದ ವಚನಕಾರರು ಅರಸೊತ್ತಿಗೆಯನ್ನು ನಿರ್ಲಕ್ಷಿಸಿ ಮುನ್ನಡೆದದ್ದು ತುಂಬಾ ಮುಖ್ಯವೆನಿಸುತ್ತದೆ. ಸ್ವಾಭಿಮಾನಿಯಾದ ವ್ಯಕ್ತಿ ತಾನು ನಂಬಿದ ಮೌಲ್ಯಗಳಿಗಾಗಿ-ಆತ್ಮಗೌರವಕ್ಕಾಗಿ ಏನೆಲ್ಲವನ್ನೂ ತಿರಸ್ಕರಿಸಬಲ್ಲನೆಂಬುದಕ್ಕೆ ವಚನ ಚಳವಳಿಯೊಂದು ದೊಡ್ಡ ಉದಾಹರಣೆಯಾಗಿದೆ.

ಸ್ವಾಭಿಮಾನ:

ಬಸವಣ್ಣ ಮತ್ತು ಇತರ ಶರಣರು ಸ್ವಾಭಿಮಾನವನ್ನು ಒಂದು ಮೌಲ್ಯವನ್ನಾಗಿ ಆಚರಣೆಗೆ ತಂದರು. ಆತ್ಮಗೌರವಕ್ಕೆ ಮಹತ್ವದ ಸ್ಥಾನಕೊಟ್ಟರು. ಶರಣರ ಹೋರಾಟ ಅಸಫಲವಾದಂತೆ ಕಂಡರೂ ಅವರು ಸೃಷ್ಟಿಸಿದ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಅಹಂಭಾವವನ್ನು ಅಳಿಸುತ್ತಲೇ ಆತ್ಮಗೌರವವನ್ನು ಬೆಳೆಸಿದ ಶರಣರು ದುರಭಿಮಾನವನ್ನು ತ್ಯಜಿಸುತ್ತಲೇ ಸ್ವಾಭಿಮಾನವನ್ನು ಬೆಳೆಸಿದರು. ಪ್ರತಿಯೊಬ್ಬ ಶರಣನಿಗೂ ತಾನು ನಂಬಿದ ಶರಣತತ್ವ ಹಾಗೂ ಆತ್ಮಗೌರವ ತುಂಬಾ ಪ್ರಮುಖವಾದ ಮೌಲ್ಯಗಳಾಗಿದ್ದವು.

ಬಸವಣ್ಣನವರಂತೂ ತುಂಬಾ ಸ್ವಾಭಿಮಾನಿ. ಅರಸೊತ್ತಿಗೆಯ ಪರಿಸರದಲ್ಲಿದ್ದೂ ಸಂನ್ಯಾಸಿಯಂತೆ ವರ್ತಿಸಿದ ವ್ಯಕ್ತಿ. 'ಎನಗಿಂತ ಕಿರಿಯರಿಲ್ಲ'ವೆನ್ನುವ ವಿನಯವನ್ನು ವ್ಯಕ್ತಪಡಿಸುತ್ತಲೇ 'ಆನೊಲಿದಂತೆ ಹಾಡುವೆನಯ್ಯ' ಎನ್ನುವ ಸ್ವಾಭಿಮಾನವನ್ನು ಪ್ರಕಟಿಸಿದರು. ಬೇರೆಯವರು ಒಲಿಯುವಂತೆ ಹಾಡುವುದು ಸುಲಭ, ಆದರೆ ಸ್ವಾಭಿಮಾನಿಯಾದವನಿಗೆ ತಾನೊಲಿದಂತೆ ಹಾಡುವುದು ತುಂಬಾ ಕಷ್ಟ.

ತನ್ನನ್ನು ತಾನು ನಂಬದ ವ್ಯಕ್ತಿ–ಸ್ವಾಭಿಮಾನಿಯಾಗದ ಮನುಷ್ಯ ಮಹತ್ತರವಾದದ್ದನ್ನು ಸಾಧಿಸಲಾರ. ಸ್ವಾಭಿಮಾನಿಯಾದವ ಮಾತ್ರ ಇಲ್ಲಿ ಹೊಸದನ್ನು ಶೋಧಿಸಿದ್ದಾನೆ. ಸ್ವಾಭಿಮಾನ ಮನುಷ್ಯನ ಗೌರವದ ಸಂಕೇತ. ಸ್ವಾಭಿಮಾನದಂತಹ ಮೌಲ್ಯವನ್ನು ಎತ್ತಿಹಿಡಿದ ಶರಣರಿಗೆ ಮರಣವೇ ಮಹಾನವಮಿಯಾಗಿ ಕಂಡಿತು.

ಬಸವಣ್ಣನಂತಹ ವಿಶಿಷ್ಟ ಸ್ವಭಾವದ ವ್ಯಕ್ತಿ, ಚರಿತ್ರೆಯಲ್ಲಿ ತುಂಬಾ ವಿರಳ. ನೋಡಲು ತುಂಬಾ ಸರಳವಾಗಿ ಕಾಣಬಹುದಾದ ಈ ಮನುಷ್ಯ ಮೂಲದಲ್ಲಿ ತುಂಬಾ ಸ್ವಾಭಿಮಾನಿ. ಅಂತಹ ಸ್ವಾಭಿಮಾನವಿದ್ದುರಿಂದಲೇ ಬಸವಣ್ಣ ಮಂತ್ರಿ ಪದವಿಯನ್ನು ತ್ಯಜಿಸಿ, ಅರಸೊತ್ತಿಗೆಯನ್ನು ನಿರಾಕರಿಸಿ, ಅರಸನನ್ನು ನಿರ್ಲಕ್ಷಿಸಿ ಕೂಡಲಸಂಗಮದತ್ತ ಹೊರಟ. ಮಂತ್ರಿ ಪದವಿ ಬಸವಣ್ಣನಿಗೆ ಅಧಿಕಾರ ನಡೆಸುವ ತಂತ್ರವಾಗಿರಲಿಲ್ಲ. ಪಾಲಿಗೆ ಬಂದ ಪವಿತ್ರವಾದ ಕಾಯಕವಾಗಿತ್ತು. ಅಂತೆಯೇ ಆತ ಅದರೊಳಗಿದ್ದೂ ಇಲ್ಲದಂತಿದ್ದ.

> **"ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ;**
> **ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯಾ;"** *(ಬ.ವ. ೬೯೮)*

> **"ನ್ಯಾಯನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ;**
> **ಲೋಕವಿರೋಧಿ, ಶರಣನಾರಿಗಂಜುವನಲ್ಲ".** *(ಬ.ವ. ೭೫೩)*

ಸ್ವಾಭಿಮಾನಿಯಾದವರಿಂದ ಮಾತ್ರ ಇಂತಹ ವಚನಗಳು ಸಾಧ್ಯ. ಉಳಿದ ಜನರಂತೆ ಕೇವಲ ಹೊಟ್ಟೆಗಾಗಿ ದುಡಿಯುವುದು ಶರಣರ ಜೀವನವಾಗಿರಲಿಲ್ಲ. 'ಹಾಳುಗೆಟ್ಟೋಡುವ ಆಳು ನಾನಲ್ಲ' ಎನ್ನುವಲ್ಲಿಯ ಆತ್ಮಸ್ಥೈರ್ಯ ಮೆಚ್ಚುವಂತಹದಾಗಿದೆ. ನ್ಯಾಯ ಸತ್ಯದಂತಹ ಮೌಲ್ಯಗಳಿಗೆ ಬಸವಣ್ಣನಂತಹ ಶರಣರು ಎಷ್ಟು ನಿಷ್ಠುರರಾಗಿದ್ದರೆಂದರೆ, ಪ್ರಾಣಹೋದರೂ ಅವರು ಅನ್ಯಾಯದಿಂದ ಬದುಕಲಿಲ್ಲ. ದಯೆಯೇ ಧರ್ಮದ ಮೂಲವೆಂದು ಹೇಳಿದ ಬಸವಣ್ಣ ದಾಕ್ಷಿಣ್ಯಪರನು ನಾನಲ್ಲವೆಂಬ ಮಾತನ್ನೂ ಹೇಳುತ್ತಾನೆ. ದಯೆಯನ್ನುಳಿಸಿಕೊಂಡೇ ನಿರ್ದಾಕ್ಷಿಣ್ಯವಾಗಿ ಹೋರಾಡುವುದು ತುಂಬಾ ಕಷ್ಟದ ಕೆಲಸ. ಬಸವಣ್ಣನಂತಹ ವ್ಯಕ್ತಿಯಿಂದ ಮಾತ್ರ ಇಂತಹ ಸಮನ್ವಯ ಸಾಧ್ಯ. 'ಶರಣನಾರಿಗಂಜುವನಲ್ಲ' ಎನ್ನುವ ನುಡಿ, ವಚನ ಚಳವಳಿಯುದ್ದಕ್ಕೂ ಕಂಡುಬರುತ್ತದೆ. ಬಸವಣ್ಣನ ನೇತೃತ್ವದಲ್ಲಿ ಅಂತರ್ಜಾತಿ ವಿವಾಹ ವಾದಾಗ ಮಧುವಯ್ಯ–ಹರಳಯ್ಯನವರ ಕಣ್ಣು ಕೀಳಿಸಿ ಎಳೆ ಹೊಟೆ ಕಟ್ಟೆಳಿಸಿದರೂ ಶರಣರು ಸ್ವಾಭಿಮಾನವನ್ನು ಬಿಟ್ಟುಕೊಟ್ಟಿಲ್ಲ. ಈ ಪ್ರಸಂಗ ಚರಿತ್ರೆಯಲ್ಲಿ ಹಸಿರಾಗಿಯೇ ಉಳಿದಿದೆ.

'ಲೋಕ ವಿರೋಧಿ' ಎನ್ನುವ ಮಾತು ಇನ್ನೂ ಗಮನ ಸೆಳೆಯುತ್ತದೆ. ಜಾತೀಯತೆ–ಭ್ರಷ್ಟತೆ–ಮೌಢ್ಯತೆಯಿಂದ ಕೂಡಿದ ಲೋಕಕ್ಕೆ ವಿರೋಧಿಯಾದಾಗಲೇ ಆ ಲೋಕವನ್ನು ಹೊಸದಾಗಿ ಕಟ್ಟಲು ಸಾಧ್ಯ. ಲೋಕದ ಬಹುಸಂಖ್ಯಾತ ಜನ ಸಂಪ್ರದಾಯ ವಾದಿಗಳೂ–

ಮೂಢರೂ ಆದಾಗ ಅಂಥವರಿಗೆ ಮೆಚ್ಚಿಗೆಯಾಗುವ ವ್ಯಕ್ತಿ ನಿಜಕ್ಕೂ ಮೂಲದಲ್ಲಿ ಜನವಿರೋಧಿ ನಿಲುವಿನವನಾಗಿರುತ್ತಾನೆ. ಬಸವಣ್ಣ ನಿಜವಾದ ಜನಪರ ಆಶಯ ಹೊಂದಿದ್ದರಿಂದಲೇ ಆ ಸಾಂಪ್ರದಾಯಿಕ ಲೋಕಕ್ಕೆ ವಿರೋಧವಾಗಿ ಕಂಡ.

**"ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೆಂತು ಮಾಡುವರು?
ನಮ್ಮ ಕುನ್ನಿಗೆ ಕೂಸ ಕೊಡಬೇಡ;
ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ!
ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ...."** *(ಬ.ವ. ೭೫೨)*

**"ಊರಮುಂದೆ ಹಾಲಹಳ್ಳ ಹರಿವುತ್ತಿರಲು
ಒರೆಯಾವಿನ ಬೆನ್ನಲಿ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮ ದೇವರುಳ್ಳನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ."** *(ಬ.ವ. : ೭೫೪)*

ಸ್ವಾಭಿಮಾನಿಯಾದವ ಸಮಾಜದ ಬದಲಾವಣೆಗಾಗಿ, ಜನಸಾಮಾನ್ಯರ ನಿಜವಾದ ಬೆಳವಣಿಗೆಗಾಗಿ ಲೋಕವಿರೋಧಿಯಾಗಬೇಕಾಗುತ್ತದೆ. ಹೀಗಾದಾಗ ಉಂಟಾಗುವ ಪರಿಣಾಮವನ್ನು ಎದುರಿಸಲೂ ಸಿದ್ಧವಾಗಿರಬೇಕಾಗುತ್ತದೆ. ಆದ್ದರಿಂದ ಸ್ವಾಭಿಮಾನಿ ಯಾಗುವುದು ಅಷ್ಟೊಂದು ಸುಲಭವಲ್ಲ. ಬದುಕಿನ ಹೋರಾಟಗಾರನಲ್ಲಿ ಮಾತ್ರ ಸ್ವಾಭಿಮಾನ ಜೀವಂತ ಉಳಿಯಲು ಸಾಧ್ಯ. ಸಾಂಪ್ರದಾಯಿಕ ವ್ಯವಸ್ಥೆಯನ್ನು ಎದುರುಹಾಕಿಕೊಂಡ ನಂತರ ಸಾಮಾಜಿಕ ಕೌಟುಂಬಿಕ ಸಮಸ್ಯೆಗಳನ್ನು ಎದುರಿಸಲು ಸಿದ್ಧವಾಗಿರಬೇಕಾಗುತ್ತದೆ. 'ನಮ್ಮ ಕುನ್ನಿಗೆ ಕೂಸ ಕೊಡಬೇಡ' ಎನ್ನುವಂತಹ ನುಡಿ ಇದನ್ನೇ ಹೇಳುತ್ತದೆ. ಆನೆಯ ಮೇಲೆ ಹೋಗುವವರನ್ನು ನಾಯಿ ಕಚ್ಚಲಾರದೆಂಬ ಲೌಕಿಕ ಸತ್ಯ ಅವರೆದುರಿಗೆ ಸ್ಪಷ್ಟವಾಗಿದೆ. ಸಾಂಪ್ರದಾಯಿಕ ಗುಣವುಳ್ಳ ಜನ ನಾಯಿಯಂತೆ ಬೊಗಳಿದರೂ, ತಾತ್ಪೂರ್ತಿಕವಾದ ತೊಂದರೆ ಕೊಟ್ಟರೂ ಅದಕ್ಕಿಂತ ಹೆಚ್ಚಿನದನ್ನು ಅವರು ಮಾಡಲಾರರು. 'ಬಿಜ್ಜಳನ ಭಂಡಾರವೆನಗೇ ಕಯ್ಯಾ' ಎನ್ನುವ ಬಸವಣ್ಣನ ಪ್ರಾಮಾಣಿಕ ನುಡಿ ಗಮನಿಸುವಂತಹದು. ಇದು ಅವರ ಸ್ವಾಭಿಮಾನ ಗುಣಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

**"ದಾಸನಂತೆ ತವನಿಧಿಯ ಬೇಡುವನಲ್ಲ
ಚೋಳನಂತೆ ಹೊನ್ನಮಳೆಯ ಕರೆಸೆಂಬವನಲ್ಲ;
ಅಂಜದಿರು! ಅಂಜದಿರು! ಅವರಂದದವ ನಾನಲ್ಲ!"** *(ಬ.ವ. ೭೬೦)*

**"ಅಯ್ಯಾ, ನೀನೆಂದಡೆ ಎಂಬೆನು
ನಿನ್ನ ಹಂಗೇನು ಹರಿಯೇನು?
ನಿನ್ನ ಮುಖದಲ್ಲಿ ಒಂದಗುಳು ಸವೆಯದು."** *(ಬ.ವ. ೮೪೦)*

ಸ್ವಾಭಿಮಾನಿಯಾದ ಶರಣನಿಗೆ ಯಾರ ಹಂಗೂ ಇರದೆಂಬುದಕ್ಕೆ ಶರಣರ ಬದುಕೇ ಸಾಕ್ಷಿಯಾಗಿದೆ. ಬಸವಣ್ಣನ ಸ್ವಾಭಿಮಾನ ಎಂತಹ ಪ್ರಬಲವಾದುದೆಂದರೆ, ದೇವರಿಂದಲೂ ಏನನ್ನೂ ಬೇಡದ ರೀತಿಯದು. ದಾಸನಂತೆ, ಚೋಳನಂತೆ ಹೊನ್ನು ಸಂಪತ್ತನ್ನು ದೇವರಿಂದ

ಬಸವಣ್ಣ ಬಯಸುವುದಿಲ್ಲ. 'ಅಂಜದಿರು! ಅಂಜದಿರು!' ಎಂದು ದೇವರಿಗೆ ಸಂಬೋಧಿಸುವ ರೀತಿ ಕುತೂಹಲಕಾರಿಯಾದುದು. ಬಸವಣ್ಣನ ದೇವರು ಜನಸಾಮಾನ್ಯರ ಪ್ರತಿನಿಧಿಯಂತೆ ಕಾಣುತ್ತಾನೆ. ಸುಮ್ಮನೆ ಯಾರಿಂದಲೂ ಏನೂ ಪಡೆಯದೆ ತತ್ವನಿಷ್ಠೆಯ ಕಾಯಕ ಹಾಕಿಕೊಟ್ಟ ಬಸವಣ್ಣನ ಸ್ವಾಭಿಮಾನ ಉದಾತ್ತವಾದುದು. ಬಸವಣ್ಣ ಅಂತಹ ಸ್ವಾಭಿಮಾನಿಯಾಗಿದ್ದರಿಂದಲೇ ಶರಣರೂ ಸ್ವಾಭಿಮಾನಿಗಳಾಗಿದ್ದರು. ಬಸವಣ್ಣನ ಸ್ವಾಭಿಮಾನ ಇಹಲೋಕದ ಜನರಿಗೆ ಗೊತ್ತಾಗುತ್ತಲೇ, ಪರದ ದೇವರುಗಳಿಗೂ ತಿಳಿದದ್ದು ಗಮನಿಸಬೇಕಾದ ಸಂಗತಿಯೆನಿಸುತ್ತದೆ.

'ಸ್ವಾಭಿಮಾನ' ಶರಣರ ಆದರ್ಶ ಮೌಲ್ಯ. ಪ್ರಸ್ತುತ ಸಂದರ್ಭದಲ್ಲಿ ಈ ಮೌಲ್ಯ ಸಮಾಜದಲ್ಲಿ ಬಳಕೆಯಾದರೆ ಇಂದಿನ ಅನೇಕ ಜ್ವಲಂತ ಸಮಸ್ಯೆಗಳು ಬಗೆಹರಿಯಲು ಸಾಧ್ಯ. ಭ್ರಷ್ಟತೆ ಇಂದಿನ ಪ್ರಮುಖ ರೋಗ. ನಿಷ್ಠೆಯಿಲ್ಲದ, ನಿಸ್ವಾರ್ಥವಿಲ್ಲದ ಇಂದಿನ ಬದುಕಿನಲ್ಲಿ ಸ್ವಾಭಿಮಾನದಂತಹ ಮೌಲ್ಯ ತಿಳಿದರೆ; ನಿಜಕ್ಕೂ ಭ್ರಷ್ಟತೆ–ಲಂಚಗುಳಿತನ–ಪರಧನದ ವ್ಯಾಮೋಹ, ಅನ್ಯಾಯದ ಗಳಿಕೆ ನಿಲ್ಲ ಬಲ್ಲವು. ಇಂದಿನ ಸಾಮಾಜಿಕ ಬದುಕಿಗೆ ಬಸವಣ್ಣನವರು ಹಾಕಿಕೊಟ್ಟ ಮೌಲ್ಯಗಳು ತುಂಬಾ ಅನಿವಾರ್ಯವಾಗಿವೆ.

ಬಂಡಾಯ ಮನೋಭಾವ

ಬಸವಣ್ಣ ಭಕ್ತನಾಗಿದ್ದಂತೆ ಬಂಡಾಯಗಾರನೂ ಆಗಿದ್ದ. ಕನ್ನಡ ಸಾಹಿತ್ಯದಲ್ಲಿ ನಿಜವಾದ ಬಂಡಾಯ ಪರಂಪರೆ, ವಚನ ಚಳವಳಿಯಿಂದಲೇ ಪ್ರಾರಂಭವಾಗುತ್ತದೆ. 'ಬಂಡಾಯ'ದಂತಹ ಆಶಯ ಒಂದು ಮೌಲ್ಯವಾಗಿ–ಮನೋಧರ್ಮವಾಗಿ ಇತ್ತೀಚಿನ ದಶಕಗಳಲ್ಲಿ ಬೆಳೆದು ಬಂದಿದೆಯಾದರೂ ಅದರ ಮೂಲ ನೆಲೆಗಳನ್ನು ವಚನ ಚಳವಳಿಯ ಸಂದರ್ಭದಲ್ಲಿಯೇ ಗುರುತಿಸಬಹುದಾಗಿದೆ.

'ಬಂಡಾಯ'ದಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳು. ಒಂದು ಆಂತರಿಕ ಬಂಡಾಯ ಮತ್ತೊಂದು ಬಾಹ್ಯರೀತಿಯ ಬಂಡಾಯ. ಬಸವಣ್ಣನಲ್ಲಿ ಈ ಎರಡೂ ಬಂಡಾಯಗಳು ಏಕಕಾಲಕ್ಕೇ ನಡೆದಿರುವುದನ್ನು ಕಾಣಬಹುದಾಗಿದೆ. ಮನದೊಳಡಗಿರುವ ಸ್ವಾರ್ಥದಾಸೆಗಳ ವಿರುದ್ಧ ಬಂಡೇಳುವ ಮನಸ್ಸು ಹೆಚ್ಚು ಆರೋಗ್ಯಕರವಾದುದು. ಇಂತಹ ಮನಸ್ಸುಗಳಿಂದ ಪ್ರಾರಂಭವಾದ ಸಾಮಾಜಿಕ ಬಂಡಾಯಕ್ಕೆ ಹೆಚ್ಚು ಮಹತ್ವವಿದೆ. ವಚನಕಾರರು ಅದರಲ್ಲಿ ಬಸವಣ್ಣನಂಥವರು ಪ್ರಾರಂಭದಲ್ಲಿ ತಮ್ಮಲ್ಲಿರಬಹುದಾದ ಸಾಂಪ್ರದಾಯಿಕ ನೆಲೆಗಳ ವಿರುದ್ಧ ಮೊದಲು ಬಂಡಾಯವೆದ್ದರು. ಅಂತೆಯೇ ಅವರಿಗೆ ಸಮಾಜದ ಸ್ಥಾಪಿತ ನಿಲುವುಗಳ ವಿರುದ್ಧ ಬಂಡೇಳಲು ಅನುಕೂಲವಾಯಿತು.

ಬಸವಣ್ಣನ ಬದುಕೇ ಒಂದು ಬಂಡಾಯವಾಗಿದೆ. ಬಂಡಾಯದ ಅನೇಕ ಮಾದರಿಗಳು ಬಸವಣ್ಣನ ಬಾಳಿನಲ್ಲಿ ಸಿಗುತ್ತವೆ. ವೈದಿಕ ಧರ್ಮವನ್ನು ತೊರೆದು ಜನಿವಾರವನ್ನು ಹರಿದು ಬರುವುದೇ ಬಸವಣ್ಣನ ಮೊದಲ ಬಂಡಾಯ ಗುಣವಾಗಿದೆ. ಅಲ್ಲಿಂದ ಆತ ಸಾಂಪ್ರದಾಯಿಕ ವಾದದ್ದನ್ನೆಲ್ಲ ಪ್ರಶ್ನಿಸುತ್ತ, ಪ್ರತಿಭಟಿಸುತ್ತ, ತಿರಸ್ಕರಿಸುತ್ತ ಮುಂದೆ ಸಾಗುವ ಕ್ರಿಯೆ ನಿಜವಾದ ಜನಪರ ಮೌಲ್ಯಗಳ ಹುಡುಕಾಟವಾಗುತ್ತದೆ. ತನ್ನ ಮನಸ್ಸನ್ನೇ ತಾನು ಒರೆಗೆ ಹಚ್ಚಿಕೊಳ್ಳುವುದು, ತನ್ನನ್ನು ತಾನೇ ಪರೀಕ್ಷೆಗೊಡ್ಡಿಕೊಳ್ಳುವುದು, ಪ್ರಾಮಾಣಿಕವಾಗಿ ಆತ್ಮಶೋಧನೆ ನಡೆಸಿಕೊಳ್ಳುವುದು ಬಸವಣ್ಣನ ಆಂತರಿಕ ಬಂಡಾಯದ ಮಗ್ಗಲುಗಳಾದರೆ; ಸಾಮಾಜಿಕ ಅಸಮಾನತೆಯ

ವಿರುದ್ಧ ಜಾತೀಯತೆಯ ವಿರುದ್ಧ, ಮೌಢ್ಯದ ವಿರುದ್ಧ ಹೋರಾಡುವುದು ಬಾಹ್ಯ ರೀತಿಯ ಬಂಡಾಯದ ಪ್ರಯತ್ನಗಳಾಗಿವೆ.

ಸ್ವವಿಮರ್ಶೆಯ ಮೂಲಕ ಆಂತರಿಕ ಬಂಡಾಯ ನಡೆದರೆ; ಸಮಾಜ ವಿಮರ್ಶೆಯ ಮೂಲಕ ಬಾಹ್ಯ ಬಂಡಾಯ ನಡೆಯುತ್ತದೆ. ಬಸವಣ್ಣನಷ್ಟು ಸ್ವವಿಮರ್ಶೆಮಾಡಿಕೊಂಡವರು ಬಹಳ ವಿರಳ. ಇಂದಿಗೂ ಕೂಡ ನಮ್ಮಲ್ಲಿ ಆಂತರಿಕ ಬಂಡಾಯವಿಲ್ಲದ್ದಕ್ಕಾಗಿ, ಬಾಹ್ಯ ಬಂಡಾಯಕ್ಕೆ ಬೆಲೆಯಿಲ್ಲದಂತಾಗುತ್ತದೆ. ಇದನ್ನು ಸ್ಪಷ್ಟವಾಗಿ ಅರಿತ ಬಸವಣ್ಣನಂಥವರು ವಿಮರ್ಶೆ ಸ್ವವಿಮರ್ಶೆಯ ಮೂಲಕ ಬಂಡಾಯದ ಮೌಲ್ಯವನ್ನು ಹೆಚ್ಚಿಸುತಾರೆ. ತನ್ನ ಮೂಲಕವೇ ಸಮಾಜವನ್ನು ವಿಮರ್ಶಿಸುವ ಬಸವಣ್ಣನ ರೀತಿ ವಿನೂತನವಾದುದು.

"ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ;
ವಿಚಾರಿಸಿದಡೆ ಏನೂ ಹುರುಳಿಲ್ಲವಯ್ಯಾ!" *(ಬ.ವ. ೨೯)*

"ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆ ಎನ್ನ ಬಾಳುವೆ!
ಸಂಸಾರಸಂಗವ ಬಿಡದು ನೋಡೆನ್ನ ಮನವು;" *(ಬ.ವ. ೩೫)*

"ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ–
ಎನ್ನ ಬಿಡು ತನ್ನ ಬಿಡು ಎಂಬುದು ಕಾಯವಿಕಾರ;
ಎನ್ನ ಬಿಡು ತನ್ನ ಬಿಡು ಎಂಬುದು ಮನೋವಿಕಾರ." *(ಬ.ವ. ೩೬)*

ಬಸವಣ್ಣನ ಆತ್ಮಶೋಧನೆಗೆ ಸಂಬಂಧಿಸಿದ ಇಂತಹ ಅನೇಕ ವಚನಗಳನ್ನು ಉದಾಹರಿಸಬಹುದು. ಅತ್ತಿಯ ಹಣ್ಣಿನಂತಹ ಚಿತ್ತದ ಬಗೆಗೆ, ಅಸ್ಥಿರತೆಯ ಬಗೆಗೆ, ವಿಕಾರಗಳ ಬಗೆಗೆ ಮೊದಲು ಪ್ರಶ್ನೆಗಳನೆತ್ತಿ ವಿಚಾರ ವಾದಕ್ಕಳವಡಿಸುವುದು ನಿಜವಾದ ಪ್ರಾರಂಭಿಕ ಬಂಡಾಯವಾಗುತ್ತದೆ. ಸ್ವವಿಮರ್ಶೆಯನ್ನು ಮಾಡಿಕೊಳ್ಳಬಲ್ಲ ಮನಸ್ಸು ಮಾತ್ರ ಎತ್ತರವಾಗಿ ಬೆಳೆದು ನಿಲ್ಲುತ್ತದೆ. ಇಲ್ಲಿ ಯಾರ ಮೇಲೂ ಸಿಟ್ಟಿಲ್ಲ, ಯಾವುದರ ಮೇಲೂ ದ್ವೇಷವಿಲ್ಲ. ಮನದಲ್ಲಿಯೇ ಮನೆ ಮಾಡಿರುವ ವೈರಿಗಳತ್ತ ತೀವ್ರ ದೃಷ್ಟಿಯಿದೆ, ಆಳವಾದ ಚಿಂತನವಿದೆ. ಹೀಗೆ ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುವ, ವಿಮರ್ಶಿಸಿಕೊಳ್ಳುವ, ಹುಡುಕಿಕೊಳ್ಳುವ ಮನಸ್ಸು ಮಾತ್ರ ಹೊಸದನ್ನು ಸಾಧಿಸಬಲ್ಲದು. ಪ್ರಾಮಾಣಿಕವಾದ ಈ ಸಂಶಯವೇ ಮುಂದಿನ ದಾರಿಗೆ ಬೆಳಕು ತೋರಬಲ್ಲದು. ಬಸವಣ್ಣನಲ್ಲಿ ಇಂತಹ ಆಂತರಿಕ ಬಂಡಾಯ ಪ್ರಾರಂಭದ ಅನೇಕ ವಚನಗಳಲ್ಲಿ ಕಾಣಿಸುತ್ತದೆ.

"ಎರೆದಡೆ ನನೆಯದು ; ಮರೆದಡೆ ಬಾಡದು
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ.
ಕೂಡಲ ಸಂಗಮದೇವಾ,
ಜಂಗಮಕ್ಕೆರೆದಡೆ ಸ್ಥಾವರ ನನೆಯಿತ್ತು." *(ಬ.ವ. ೧೯೯)*

ಇದು ಬಸವಣ್ಣನ ಆಂತರಿಕ ಸ್ಫೋಟಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಲಿಂಗಾರ್ಚನೆ ಮಾಡಿ–ಮಾಡಿ, ನೀರನ್ನೆರೆದೂ ಎರೆದೂ ಅದು ಪರಿಣಾಮವನ್ನುಂಟು ಮಾಡದಿದ್ದಾಗ ಒಡಲಿಂದ ಬಂದ ನೈಜ ನುಡಿಯಿದು. ನಿಸ್ತೇಜವಾದದ್ದು ನಿರ್ಜೀವವಾದದ್ದು ಎಷ್ಟು ಎರೆದರೂ ನೆನೆಯುವುದಿಲ್ಲ, ಬಿಟ್ಟರೆ ಬಾಡುವುದಿಲ್ಲವೆಂಬ ಸತ್ಯ ತಿಳಿದಾಗ ಬಸವಣ್ಣ 'ಜಂಗಮಕ್ಕೆರೆದಡೆ

ಸ್ಥಾವರ ನೆನೆಯಿತ್ತು' ಎಂದು ಹೇಳುತ್ತ, ಜಂಗಮದ ಮೂಲಕ ಜೀವನದ ಜೀವಂತಿಕೆಯನ್ನು ಹೆಚ್ಚಿಸುತ್ತಾನೆ. ಅಂತೆಯೇ ವಚನ ಚಳವಳಿಯಲ್ಲಿ 'ಜಂಗಮ'ಕ್ಕೆ ಮಹತ್ವದ ಸ್ಥಾನವಿದೆ. ಚಲನಶೀಲ ಗುಣವೇ ನಿಜವಾದ 'ಜಂಗಮ' ಕ್ರಿಯಾಶೀಲತೆಯೇ ಅದರ ಪ್ರಧಾನ ಲಕ್ಷಣ. ಹೀಗೆ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲವೆಂಬ ತತ್ವವನ್ನು ಕಂಡುಕೊಳ್ಳುವುದರ ಮೂಲಕ ಬಸವಣ್ಣ ಹೊಸ ಬಂಡಾಯವನ್ನು ಹುಟ್ಟು ಹಾಕುತ್ತಾನೆ.

"ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ,
ವೃಥಾಯ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ!
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ,
ಹಾರುವೆನಯ್ಯಾ ಶರಣರ ಬರವ ಗುಡಿಗಟ್ಟಿ". *(ಬ.ವ. ೭೧೫)*

ಇಲ್ಲಿಯ ಬಂಡಾಯವಿರುವುದು ಕೆಡುಕ ಹಾರುವನ ವಿರುದ್ಧ. ಶತಮಾನಗಳಿಂದ ಸಮಾಜದ ಜನತೆಯನ್ನು ಕರ್ಮದ ಬಲೆಯಲ್ಲಿ ಸಿಲುಕಿಸಿ, ಸದಾ ಭಯವನ್ನು ಹುಟ್ಟಿಸಿ ಆ ಭಯದ ನೆರಳಲ್ಲಿಯೇ ಜನತೆ ತತ್ತರಿಸಿಹೋಗುವಂತೆ ಮಾಡಿದ ಜನ ವಿರೋಧಿ ಶಕ್ತಿಯನ್ನು ಬಸವಣ್ಣ 'ಕೆಡುಕ ಹಾರುವ'ನೆಂದು ಕರೆದಿದ್ದಾನೆ. ತಾನು ಅಂತವನಲ್ಲವೆಂಬುದನ್ನು ಸ್ಪಷ್ಟಪಡಿಸುವುದರ ಮೂಲಕ ಚಳವಳಿಯ ತೀವ್ರತೆಗೆ ಸ್ಪಷ್ಟತೆ ಮೂಡಿಸಿದ್ದಾನೆ. ಎರಡನೇ ಸಾಲಿನಲ್ಲಿ ಬಳಕೆಯಾದ 'ಹಾರುವ' ಪದ ಸ್ಥಗಿತತೆಯ ಸಂಕೇತವಾದರೆ ಮೂರು ಮತ್ತು ನಾಲ್ಕನೆಯ ಸಾಲಿನಲ್ಲಿ ಬಂದಿರುವ 'ಹಾರುವ' ಪದ ಕ್ರಿಯಾಶೀಲತೆಯ ದ್ಯೋತಕವಾಗಿ ಬಂದಿದೆ. ಇಂತಹ ಅನೇಕ ಸ್ಪಷ್ಟತೆಗಳನ್ನು ತರುವುದರ ಮೂಲಕ ಬಸವಣ್ಣ ಅರ್ಥಪೂರ್ಣ ಬಂಡಾಯಗಾರನಾಗಿ ಕಾಣುತ್ತಾನೆ.

ಶತಮಾನಗಳ ಶೋಷಣೆಗೆ ವೇದ-ಪುರಾಣ-ಶಾಸ್ತ್ರ-ಆಗಮಗಳ ತಪ್ಪುಗ್ರಹಿಕೆಗಳೇ ಕಾರಣ ವಾಗಿರುವುದರಿಂದ ಬಸವಣ್ಣ ಅಂಥವುಗಳನ್ನು ನೇರವಾಗಿ ತಿರಸ್ಕರಿಸುತ್ತಾನೆ. "ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕಕ್ಕೆ ಬೆನ್ನಬಾರ ನೆತ್ತುವೆ, ಆಗಮದ ಮೂಗ ಕೊಯಿವೆ ನೋಡಯ್ಯಾ" ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಬ್ರಾಹ್ಮಣನನ್ನೇ ದೈವವೆಂದು ನಂಬಿದ ಕಾರಣ ಎಂತಹ ಅನಾಹುತಗಳಾಗಿವೆಯೆಂಬುದನ್ನು ಉದಾಹರಣೆ ಸಹಿತ ವಿವರಿಸುತ್ತಾನೆ.

"ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಗೌತಮನಿಗೆ ಗೋವಧೆಯಾಗಿತ್ತು
ಬ್ರಾಹ್ಮಣನ ದೈವವೆಂದು ನಂಬಿದ ಕಾರಣ
ಬಲಿಗೆ ಬಂಧನವಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ದಕ್ಷಂಗೆ ಕುರಿದಲೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಪರಶುರಾಮ ಸಮುದ್ರಕೆ ಗುರಿಯಾದ.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ನಾಗಾರ್ಜುನನ ತಲೆ ಹೋಯಿತ್ತು." *(ಬ.ವ. ೫೭೯)*

ಹೀಗೆ ಬ್ರಾಹ್ಮಣನನ್ನು ದೈವವೆಂದು ನಂಬಿ ಪೂಜಿಸುತ್ತ ಭಯದ ನೆರಳಲ್ಲಿ ತತ್ತರಿಸುತ್ತಿರುವಂತರಿಗೆ ಬಸವಣ್ಣನ ಈ ವಚನದಲ್ಲಿ ಸ್ಪಷ್ಟ ಉತ್ತರವಿದೆ. ಮೊದಲು ವಿವೇಚಿಸಿ, ವಿಷಯ ಸಂಗ್ರಹಿಸಿ ಶೋಷಣೆಯ ಮೂಲವನ್ನು ಹುಡುಕುತ್ತಾ, ಅದಕ್ಕೆ ಕಾರಣವನ್ನು ಹುಡುಕುವ ಬಸವಣ್ಣನ ಒಟ್ಟು ಧೋರಣೆಯೇ ಜನಪರವಾದದ್ದಾಗಿದೆ. ಬ್ರಾಹ್ಮಣರನ್ನು ನಂಬಿದಂತೆ ಪುರಾಣಗಳನ್ನೂ ನಂಬದಿರಲು ಆತ ಹೇಳುತ್ತಾನೆ. ಆದಿ ಪುರಾಣ ಅಸುರರಿಗೆ ಮಾರಿಯಾದರೆ, ವೇದ ಪುರಾಣ ಹೋತಿಂಗೆ ಮಾರಿಯಾಗಿದೆ. ರಾಮ ಪುರಾಣ ರಕ್ಕಸರಿಗೆ ಮಾರಿಯಾದರೆ, ಭಾರತ ಪುರಾಣ ಗೋತ್ರಕ್ಕೆ ಮಾರಿಯಾಗಿದೆ. ಹೀಗೆ ಎಲ್ಲ ಪುರಾಣಗಳೂ ಹೇಗೆ ವ್ಯರ್ಥವಾಗಿವೆಯೆಂಬುದನ್ನು ಸ್ಪಷ್ಟಪಡಿಸಿದ ಬಸವಣ್ಣ ಪುರಾಣ–ಇತಿಹಾಸಗಳಿಗೆ ಸಂಬಂಧಿಸಿದಂತೆ, ದೇವರು–ಮನುಷ್ಯರಿಗೆ ಸಂಬಂಧಿಸಿದಂತೆ, ಸ್ವರ್ಗ–ನರಕಗಳಿಗೆ ಸಂಬಂಧಿಸಿದಂತೆ ಮೊದಲ ಬಾರಿಗೆ ಸ್ಪಷ್ಟವಾದ ಚಿತ್ರಣವನ್ನು ಕೊಟ್ಟ ವಚನಕಾರ.

"ಹುಟ್ಟಿಸುವಾತ ಬ್ರಹ್ಮನೆಂಬರು,
ರಕ್ಷಿಸುವಾತ ವಿಷ್ಣುವೆಂಬರು ನೋಡಾ,
ಬ್ರಹ್ಮ ತನ್ನ ಶಿರವನೇಕೆ – ಹುಟ್ಟಿಸಲಾರ?
ವಿಷ್ಣು ತನ್ನ ಮಗನನೇಕೆ ರಕ್ಷಿಸಲಾರ? *(ಬ.ವ. ೫೪೬)*

"ವಿಷ್ಣು ಬಲ್ಲಿದನೆಂಬೆನೆ?
ದಶಾವತಾರದಲ್ಲಿ ಭಂಗಬಟ್ಟುದಕ್ಕೆ ಕಡೆಯಿಲ್ಲ!
ಬ್ರಹ್ಮ ಬಲ್ಲಿದನೆಂಬೆನೆ?
ಶಿರಹೋಗಿ ನಾನಾವಿಧಿಯಾದ.
ವೇದಬಲ್ಲಿತ್ತೆಂಬೆನೆ?
ನಾನಾ ಮುಖದಲ್ಲಿ ಸ್ತುತಿಯಿಸಿತ್ತಲ್ಲದೆ
ಲಿಂಗದ ನಿಲುಕಡೆಯ ಕಾಣದು!
ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದರ್ರೇ!
ಪುರಾಣ ಬಲ್ಲಿತ್ತೆಂಬೆನೆ? ಪೂರ್ವರ್ರೇ!
ಆಗಮ ಬಲ್ಲಿತ್ತೆಂಬೆನೆ? ವಾಯ ಹೊಂದಿತ್ತು!" *(ಬ.ವ. ೫೫೦)*

ಇಂತಹ ಅನೇಕ ವಚನಗಳ ಮೂಲಕ ಬಸವಣ್ಣ ಬಂಡಾಯವೆದ್ದಿದ್ದಾನೆ. ಶತಮಾನಗಳಿಂದ ನಂಬಿ ಪೂಜಿಸುತ್ತಾ, ನಿರಂತರವಾದ ಶೋಷಣೆಗೊಳಗಾಗುತ್ತಾ ಬಂದ ಜನತೆಗೆ ಬಸವಣ್ಣ ಇಲ್ಲಿ ಸ್ಪಷ್ಟ ಉತ್ತರ ನೀಡಿದ್ದಾನೆ. ಬ್ರಹ್ಮ–ವಿಷ್ಣು–ವೇದ–ಪುರಾಣ–ಆಗಮ–ಶಾಸ್ತ್ರ ಇವುಗಳಿಗಿದ್ದ ಪೂಜ್ಯ ಭಾವನೆಯನ್ನು ಹೊಡೆದು ಹಾಕಿ, ನೈಜ ಭಾವನೆಯನ್ನು ಮೂಡಿಸಿದ್ದಾನೆ. ಏನನ್ನೂ ಅರಿಯದ ಮುಗ್ಧ ಜನತೆಗೆ ವೇದ–ಶಾಸ್ತ್ರದ ಭಯ ಹುಟ್ಟಿಸಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದವರ ಹೂರಣವನ್ನು ಹೊರ ಹಾಕಿದ್ದಾನೆ. ವ್ಯಾಸ ಬೋಯತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ. ಮಂಡೋದರಿ ಕಪ್ಪೆಯ ಮಗಳು ಎಂಬುದನ್ನು ಸ್ಪಷ್ಟಪಡಿಸಿ ಕುಲಾಚಾರ ಮಾಡುವವರಿಗೆ ತಕ್ಕ ಉತ್ತರಕೊಟ್ಟಿದ್ದಾನೆ. ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿನ್ಯ ನಾವಿದನೆಂದು ವಿವರಿಸಿ ಹೇಳಿ ಜಾತಿಯನ್ನರಸಬಾರದೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಹೊಲೆಗಂಡಲ್ಲದೆ ಪಿಂಡದ ನೆಲೆದಾಶ್ರಯವಿಲ್ಲವೆಂದು ಹೇಳಿ ಜಾತಿ–ಸೂತಕವನ್ನು ಕಿತ್ತೊಗೆದಿದ್ದಾನೆ.

"ಭಕ್ತರ ಕಂಡರೆ ಬೋಳರಪ್ಪಿರಯ್ಯಾ;
ಸವಣರ ಕಂಡರೆ ಬತ್ತಲೆಯಪ್ಪಿರಯ್ಯಾ;
ಹಾರುವರ ಕಂಡರೆ ಹರಿನಾಮವೆಂಬಿರಯ್ಯಾ,
ಅವರವರ ಕಂಡಡೆ ಅವರವರಂತೆ.
ಸೂಳೆಗೆ ಹುಟ್ಟಿದವರ ಎನಗೆ ತೋರದಿರಯ್ಯಾ
ಕೂಡಲ ಸಂಗಮದೇವರ ಪೂಜಿಸಿ, ಅನ್ಯ ದೈವಂಗಳಿಗೆರಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ!" *(ಬ.ವ. ೧೦೩)*

ಪ್ರಸ್ತುತ ಸಾಮಾಜಿಕ ಸಂದರ್ಭಕ್ಕೆ ಬಸವಣ್ಣನ ಈ ವಚನ ಹೆಚ್ಚು ಸೂಕ್ತವಾಗುತ್ತದೆ. ಸಮಯಕ್ಕೆ ಸರಿಯಾಗಿ ಕೊಡೆ ಹಿಡಿಯುವವರ ಸಂಖ್ಯೆಯೇ ಅಧಿಕವಾಗುತ್ತಿರುವ ಈ ಸಂದರ್ಭದಲ್ಲಿ ಈ ವಚನ ಮತ್ತೆ ಮತ್ತೆ ಆಲೋಚನೆಗೆ ಹಚ್ಚುತ್ತದೆ. ಅವರವರ ಕಂಡರೆ ಅವರವರಂತೆ, ನಡೆಯುವವರು ಅಂದಿಗೂ ಇದ್ದರು, ಇಂದಿಗೂ ಇದ್ದಾರೆ. ಆದರೆ ಬಸವಣ್ಣ ಇಂಥವರನ್ನು ಸೂಳೆಗೆ ಹುಟ್ಟಿದವರು ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಇಂಥವರನ್ನು ತೋರದಿರೆಂದು ಬೇಡುತ್ತಾನೆ. ಒಂದು ದೈವಕ್ಕೆ, ಒಂದು ಸಿದ್ಧಾಂತಕ್ಕೆ, ಒಂದು ವಿಚಾರಕ್ಕೆ ಬದ್ಧರಾಗುವದು ಎಷ್ಟು ಮಹತ್ವದ್ದೆಂಬುದು ಇದರಿಂದ ತಿಳಿದುಬರುತ್ತದೆ. ಹೀಗೆ ಬದ್ಧತೆ ಇರಲಾರದವರು ಎಲ್ಲಿಯೂ ನಿಲ್ಲದೆ ನಿರುಪಯೋಗಿಯಾಗುತ್ತಾರೆಂಬ ಸತ್ಯ ಇದರ ಹಿಂದೆ ಇದೆ.

ಬಸವಣ್ಣನ ಬಂಡಾಯ ರೊಚ್ಚಿಗೆಬ್ಬಿಸುವಂತಹದಲ್ಲ. ಅದು ವಿಡಂಬನೆಯ ಮೂಲಕವೇ ಸಮಾಜ ಬದಲಾವಣೆಯನ್ನು ಬಯಸುತ್ತದೆ. ಬಸವಣ್ಣನ ಯಾವ ಬಂಡಾಯದ ನುಡಿಯಲ್ಲಿಯೂ ದ್ವೇಷವಿಲ್ಲ. ಸಿಟ್ಟಿದೆ, ಸೆಡವಿದೆ, ಅಲ್ಲಲ್ಲಿ ರೋಷವಿದೆ, ಇಲ್ಲಿಯ ಅಜ್ಞಾನವನ್ನು ಕಂಡು ಬೇಸರವಿದೆ, ಮೌಢ್ಯತೆಯನ್ನು ನೋಡಿ ಅನುಕಂಪವಿದೆ. ಬಸವಣ್ಣನವರ ಬಂಡಾಯದ ಉದ್ದೇಶ ಈ ಸಮಾಜ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಹೊಡೆದೋಡಿಸುವದ್ದಾಗಿದ್ದರಿಂದ ಇಲ್ಲಿ ಯಾರಿಗೂ ಅಹಿತವಾಗುವಂತಹ ನುಡಿಯಿರಲು ಸಾಧ್ಯವಿಲ್ಲ. ಬಸವಣ್ಣನ ಸಿಟ್ಟು ಸೆಡುವು ಇರುವುದು ಮೊದಲು ತನ್ನ ಮೇಲೆ ನಂತರ ಸಮಾಜ ವ್ಯವಸ್ಥೆಯ ಮೇಲೆ. ಇಂತಹ ಮಾನವೀಯ ಹೋರಾಟಗಾರನ ಬಂಡಾಯದ ಗುಣ ಪ್ರಸ್ತುತ ಸಂದರ್ಭಕ್ಕೆ ತುಂಬಾ ಅನಿವಾರ್ಯವಾಗಿದೆ.

ಮಾನವೀಯತೆ

ಇವತ್ತಿನ ಸಾಮಾಜಿಕ ಸಂದರ್ಭದಲ್ಲಿ ಎಲ್ಲ ಕ್ಷೇತ್ರದಲ್ಲಿಯೂ ಬೆಳವಣಿಗೆಯಾಗಿದೆ. ಆದರೆ ಮಾನವೀಯ ಮೌಲ್ಯಗಳು ಮಾತ್ರ ನಿರೀಕ್ಷಿಸಿದಂತೆ ಬೆಳೆದುಬಂದಿಲ್ಲ. ಮನುಷ್ಯ ಏನೆಲ್ಲ ಆಗಬಹುದು ಆದರೆ ಮನುಷ್ಯನಾಗಿ ಬದುಕುವದು ಕಷ್ಟ. ಬಸವಣ್ಣನ ವ್ಯಕ್ತಿತ್ವದ ಘನತೆ ಇರುವದು ಇಲ್ಲಿಯ. ಮಾನವೀಯ ಮೌಲ್ಯಗಳ ಹರಿಕಾರನಂತೆ ಕಾಣುವ ಬಸವಣ್ಣ ಮನುಷ್ಯ ಪ್ರಯತ್ನದ ಗೌರವದ ಸಂಕೇತವಾಗಿ ಕಾಣುತ್ತಾನೆ. ಇಂದಿನ ಸಮಾಜದಲ್ಲಿ ಈರ್ಷೆ–ವೈಷಮ್ಯ–ಪ್ರತ್ಯೇಕತೆ ತಾಂಡವವಾಡುತ್ತಲಿವೆ. ದೇಶದ ವಿವಿಧೆಡೆ ನಡೆಯುತ್ತಿರುವ ಹಲ್ಲೆಗಳು, ಪಂಜಾಬ್–ಕಾಶ್ಮೀರಗಳಲ್ಲಿ ನಿತ್ಯವೂ ಉಗ್ರಗಾಮಿಗಳ ಗುಂಡಿಗೆ ಆಹುತಿಯಾಗುತ್ತಿರುವ ದೇಹಗಳು ಇಂದು ಆಶ್ಚರ್ಯ ಹುಟ್ಟಿಸದ, ನಿತ್ಯ ನಡೆಯುವ ಸಂಗತಿಗಳಾಗಿವೆ.

ಮನುಷ್ಯ ತನ್ನನ್ನು ತಾನರಿತರೆ, ಸಮಾಜವ್ಯವಸ್ಥೆಯಲ್ಲಿ ತನ್ನನ್ನು ಮನುಷ್ಯನಂತೆ ಗುರುತಿಸಿಕೊಂಡರೆ ಇಂತಹ ಸಮಸ್ಯೆಗಳೇಳುವುದಿಲ್ಲ. ಆದರೆ ಇಂದು ದೇಶವೇ ಉರಿಯತೊಡಗಿದೆ. ಇಂತಹ ಸಂದರ್ಭದಲ್ಲಿ ಈ ದೇಶದ ವಿಚಾರವಾದಿಗಳ – ಚಿಂತಕರ ಆಲೋಚನೆಗಳು ತುಂಬಾ ರೆಲೆವೆಂಟ್ ಆಗಿ ಕಾಣಿಸುತ್ತವೆ.

ದಯೆಯೇ ಧರ್ಮದ ಮೂಲವೆಂದು ಹೇಳಿದ ಬಸವಣ್ಣ ಮಾನವೀಯತೆಯನ್ನು ವಿಸ್ತರಿಸಿದ. ಮನುಷ್ಯರ ನೋವನ್ನು ಮನುಷ್ಯರೇ ಅರ್ಥೈಸಿಕೊಳ್ಳಬೇಕಾದ ಸತ್ಯವನ್ನು ಸಾರಿದ. ಜಾತಿ, ವರ್ಗ, ಅಂತಸ್ತು, ದೇಶ, ಭಾಷೆ, ಲಿಂಗ, ವಯಸ್ಸು ಈ ಮುಂತಾದ ಭಿನ್ನತೆಯ ಗೋಡೆಗಳನ್ನು ಕಟ್ಟಿ ಮನುಷ್ಯ–ಮನುಷ್ಯನನ್ನು ದ್ವೇಷಿಸುವುದು, ಸೇಡುತೀರಿಸಿಕೊಳ್ಳುವುದು ಇತಿಹಾಸದುದ್ದಕ್ಕೂ ಕಾಣುತ್ತದೆ. ಆದರೆ ಮನುಷ್ಯನಲ್ಲಿ ಮಾನವೀಯ ಮೌಲ್ಯಗಳು ಬೆಳೆದು ನಿಂತರೆ ಈ ಸೇಡು ಅಹಂಕಾರ–ಅಸಮಾನತೆ ಅಳಿದು ಹೋಗುತ್ತವೆ. ಈ ಸತ್ಯವನ್ನು ಬಸವಣ್ಣ ಅನೇಕ ಲೌಕಿಕ ಉದಾಹರಣೆಗಳ ಮುಖಾಂತರ ಸ್ಪಷ್ಟಪಡಿಸಿದ. ಮನುಷ್ಯ ಪ್ರಾಣಿಗಳಿಗಿಂತಲೂ ಕೀಳಾಗಿ ಬದುಕುವ ಸ್ಥಿತಿಯನ್ನು ವಿಡಂಬಿಸಿದ, ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವ ಪರಿಯನ್ನು ವಿವರಿಸಿ ಹೇಳಿದ.

> **"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ;**
> **ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ."** *(ವಚನ : ೬೨)*
> **"ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?**
> **ಕೋಳಿ ಒಂದು ಕುಟಕ ಕಂಡಡೆ ಕೂಗಿಕರೆಯದೆ ತನ್ನ ಕುಲವನೆಲ್ಲವ?"** *(ವಚನ : ೪೩೭)*

ಇಂತಹ ಅನೇಕ ವಚನಗಳ ಮುಖಾಂತರ ಬಸವಣ್ಣ ಮನುಷ್ಯನಲ್ಲಿ ಮಾನವೀಯ ಪ್ರಜ್ಞೆಯನ್ನು ಮೂಡಿಸಿದ. "ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯ ಎಂದು ವಿವರಿಸಿ ಹೇಳಿದ. ಕೂಡಿಬದುಕುವ–ಹಂಚಿಕೊಂಡು ತಿನ್ನುವ ಕಾಗೆ ಕೋಳಿಗಳ ಉದಾಹರಣೆಯನ್ನು ಕೊಟ್ಟು ಮನುಷ್ಯನಾದವ ಕಾಗೆ–ಕೋಳಿಗಳಿಗಿಂತಲೂ ಕಡೆಯಾದರೆ ಹೇಗೆ? ಎಂದು ಪ್ರಶ್ನಿಸುವುದರ ಮೂಲಕ ಮನುಷ್ಯನ ಮಾನವೀಯತೆಯನ್ನು ಜಾಗೃತಗೊಳಿಸಿದ. ಮನುಷ್ಯತ್ವವನ್ನು ಮರೆತು ಅಹಂಕಾರದ ಮದದಲ್ಲಿ ಮೆರೆಯುವಂತವರನ್ನು ಕಂಡು ತೀವ್ರವಾಗಿ ವಿಡಂಬಿಸಿದ.

> **"ಏನಿ ಬಂದಿರಿ, ಹದುಳವಿದ್ದಿರೆ ಎಂದಡೆ**
> **ನಿಮ್ಮ ಮೈಸಿರಿ ಹಾರಿಹೋಹುದೆ?**
> **ಕುಳ್ಳಿರೆಂದಡೆ ನೆಲ ಕುಳಿಹೋಹುದೆ?**
> **ಒಡನೆ ನುಡಿದಡೆ ಸಿರ ಹೊಟ್ಟೆಯೊಡೆವುದೆ?**
> **ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ**
> **ಕೆಡಹಿ ಮೂಗಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವ"** *(ವಚನ : ೨೪೧)*

ಇಂತಹ ಅನೇಕ ವಚನಗಳು ಇಂದಿನ ಸಾಮಾಜಿಕ ಸಂದರ್ಭಕ್ಕೆ ತೀರಾ ಅಗತ್ಯವಾಗಿವೆ. ಬದುಕಿನ ಅದಮ್ಯತೆಯನ್ನು ಹೇಳಿದ ಬಸವಣ್ಣ ಅದರ ನೆಲೆಗಳನ್ನೂ ಗುರುತಿಸಿದ. ಜೀವನೋತ್ಸಾಹದ ಜತೆಗೆ ಜೀವನ ಪ್ರೀತಿಯನ್ನೂ ಕಲಿಸಿದ. ಮಾನವೀಯ ಮೌಲ್ಯಗಳು ಬೆಳೆದಾಗ ಮಾತ್ರ ಮನುಷ್ಯ ಸಂಸ್ಕೃತಿ ಬೆಳೆಯಬಲ್ಲದು. ಕೇವಲ ಆರ್ಥಿಕ ಸಾಮಾಜಿಕ ಸಮಾನತೆ ಬಂದಾಕ್ಷಣ ಮನುಷ್ಯ ಎತ್ತರಕ್ಕೇರಲಾರ. ಮಾನವೀಯತೆ ಬೆಳೆದಾಗ ಮಾತ್ರ ಇದು

ಸಾಧ್ಯ. ಇಂತಹ ಮಾನವೀಯ ಮೌಲ್ಯಗಳನ್ನು ಸ್ಥಾಪಿಸಿ ಮನುಷ್ಯನಿಗೆ ಬೆಲೆ ಕೊಟ್ಟ ಬಸವಣ್ಣನ ವಿಚಾರಗಳು ಇಂದಿಗೂ ಸ್ವಾಗತಾರ್ಹವಾಗಿವೆ.

ಇಂದಿನ ಸಾಮಾಜಿಕ ಅನಿವಾರ್ಯತೆಗಳನ್ನು ಲೆಕ್ಕ ಹಾಕುತ್ತ ಬಸವಣ್ಣನ ಸಾಧನೆಗಳನ್ನು ಧ್ಯಾನಿಸುತ್ತ ಹೋದ ಹಾಗೆಲ್ಲ, ಅನೇಕ ಜ್ವಲಂತ ಸಮಸ್ಯೆಗಳಿಗೆ ಬಸವಣ್ಣನಲ್ಲಿ ಉತ್ತರ ದೊರೆಯುತ್ತವೆ. ಇಂದು ಜಗತ್ತು ಸಣ್ಣದಾಗಿದೆ. ವಿಜ್ಞಾನ ಬೆಳೆದು ನಿಂತಿದೆ. ಆದರೆ ಮನುಷ್ಯ ದಿನದಿಂದ ದಿನಕ್ಕೆ ಯಾಂತ್ರಿಕವಾಗುತ್ತಿದ್ದಾನೆ, ಸ್ವಾರ್ಥಿಯಾಗುತ್ತಿದ್ದಾನೆ. ಬಸವಣ್ಣನವರ ಈ ವಿಚಾರಗಳನ್ನು ಮತ್ತೆ ಮತ್ತೆ ಮೆಲುಕು ಹಾಕಿದರೆ ಖಂಡಿತಾ ಬದಲಾವಣೆ ಸಾಧ್ಯ.

ಬಸವಣ್ಣ ಪ್ರಮುಖವಾಗಿ ಮನಸ್ಸು ಕಟ್ಟುವ ಕೆಲಸವನ್ನು ಮಾಡಿದ. ಮಾನವೀಯತೆಯನ್ನು ಬೆಳೆಸುವುದೇ ನಿಜವಾದ ಹೋರಾಟವೆಂದು ತಿಳಿದುಕೊಂಡ. ಅಧಿಕಾರ–ಅಂತಸ್ತುಗಳ ಸಮಾನತೆಗಿಂತ ಸಾಂಸ್ಕೃತಿಕವಾದ ಸಮಾನತೆ ದೊಡ್ಡದೆಂದು ಭಾವಿಸಿದ. ಇಂತಹ ಸಂಸ್ಕೃತಿ ಯಾವ ಕಾನೂನುಗಳಿಂದಲೂ ಬೆಳೆಯಲಾರದೆಂಬುದನ್ನು ತಿಳಿದುಕೊಂಡ ಆತ ಮನುಷ್ಯರಲ್ಲಿ ಅರಿವು ಮೂಡಿಸುವುದರ ಮೂಲಕ ಈ ಸಾಧನೆ ಸಾಧ್ಯವೆಂದು ಮನಗಂಡ. ಆತನ ಆಧ್ಯಾತ್ಮ ಮನುಷ್ಯನಲ್ಲಿ ಅರಿವನ್ನು ವಿಸ್ತರಿಸುವ ಅಸ್ತ್ರವಾಗಿತ್ತೇ ವಿನಃ ಶತಮಾನಗಳ ಗೂಢತೆಯಾಗಿರಲಿಲ್ಲ. ಬಸವಣ್ಣ ಬದುಕಿ ಹೋಗಿ ಎಂಟು ನೂರು ವರ್ಷಗಳೇ ಕಳೆಯುತ್ತ ಬಂದರೂ ಆತನ ತತ್ವಗಳ ಆಚರಣೆ ನಮ್ಮಲ್ಲಿ ಸರಿಯಾಗಿ ನಡೆದಿಲ್ಲ. ಪ್ರಸ್ತುತ ಸಾಮಾಜಿಕ ಸಂದರ್ಭ ಬಸವಣ್ಣನವರಂತಹ ವಿಚಾರವಾದಿಗಳ ವಿಚಾರಗಳೊಂದಿಗೆ ಮತ್ತೆ ಬೆಳೆಯಬೇಕಾಗಿದೆ ಬೆಳಗಬೇಕಾಗಿದೆ–

❑

---

* ಇಲ್ಲಿ ಬಳಸಲಾದ ಬಸವಣ್ಣನವರ ವಚನಗಳನ್ನು ಡಾ.ಆರ್.ಸಿ. ಹಿರೇಮಠ ಅವರು ಸಂಪಾದಿಸಿರುವ "ಬಸವಣ್ಣನವರ ವಚನಗಳು" ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

* ಪ್ರಕಟನೆ : 'ಬಸವಪಥ' ಬೆಂಗಳೂರು, ಜುಲೈ. ೧೯೯೦.

ಬಸವಣ್ಣನವರು ನಿರ್ಮಿಸ ಬಯಸಿದ ಸಮಾಜ

ಡಾ. ಎಚ್.ಟಿ. ಪೋತೆ

"ನಮ್ಮ ಸಮಾಜದ ವ್ಯವಸ್ಥೆಯಲ್ಲಿ ಏಳು ಜನರಲ್ಲಿ ಒಬ್ಬನನ್ನು ಅಸ್ಪೃಶ್ಯನೆಂದು ಪರಿಗಣಿಸುವ ಪರಿಪಾಠವಿದೆ. ಅಸ್ಪೃಶ್ಯ ಎನಿಸಿಕೊಂಡವನನ್ನು ಸಾಮಾಜಿಕ ಬದುಕಿನಿಂದ ದೂರವಿಡುವುದೇ ಈ ಆಚರಣೆಯ ಗುರಿ. ಇದು ಆರೋಗ್ಯದ ಕಾರಣದಿಂದ ಹುಟ್ಟಿದ್ದಲ್ಲ. ಸಾಮಾಜಿಕ ಕಾರಣದಿಂದ ಹುಟ್ಟಿದ್ದು. ಸಾವಿರಾರು ವರ್ಷಗಳ ಇತಿಹಾಸವಿರುವ ಅಸ್ಪೃಶ್ಯತೆ, ವರ್ಣ ವ್ಯವಸ್ಥೆಯ ಹುಟ್ಟಿನ ನಂತರ ಜಾರಿಗೆ ಬಂದಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಎಲ್ಲ ಜಾತಿಗಳಲ್ಲೂ ಕೆಲವರು ಆ ಜಾತಿಯ ಕಟ್ಟುಪಾಡುಗಳನ್ನು ಮುರಿದರು. ಆದ್ದರಿಂದ ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಯಿತೆಂಬ ಅಭಿಪ್ರಾಯವಿದೆ. ಜನಾಂಗ ಘರ್ಷಣೆಯಲ್ಲಿ ಸೆರೆಸಿಕ್ಕವರು, ಗೋಮಾಂಸ ಭಕ್ಷಣೆಯನ್ನು ಮುಂದುವರೆಸಿದವರು ಅಸ್ಪೃಶ್ಯರಾದರು ಎಂಬ ಅಭಿಪ್ರಾಯವೂ ಇದೆ. ಹೀಗೆ ಅನೇಕ ಕಾರಣಗಳಿಂದ ಆರಂಭವಾದ ಈ ಪದ್ಧತಿ ಆಧುನಿಕ ಸಮಾಜದಲ್ಲಿ ಮುಂದುವರೆಸಿದವರು ಅಸ್ಪೃಶ್ಯರಾದರು ಎಂಬ ಅಭಿಪ್ರಾಯವೂ ಇದೆ. ಹೀಗೆ ಅನೇಕ ಕಾರಣಗಳಿಂದ ಆರಂಭವಾದ ಈ ಪದ್ಧತಿ ಆಧುನಿಕ ಸಮಾಜದಲ್ಲಿ ಮುಂದುವರೆಯುತ್ತಿರುವುದು ನಮ್ಮ ನಾಗರಿಕ ಪ್ರಜ್ಞೆಗೆ ಎಸೆದ ಸವಾಲು. ಸಂಪೂರ್ಣ ಅರ್ಥಹೀನವಾಗಿರುವ ಅಸ್ಪೃಶ್ಯತೆ ಈಗ ಒಂದು ಪದ್ಧತಿಯಲ್ಲ, ಪಿಡುಗು. ಹುಟ್ಟಿನ ಕಾರಣದಿಂದ ಮನುಷ್ಯನ ವ್ಯಕ್ತಿತ್ವವನ್ನು ನಿರ್ಧರಿಸುವ ಈ ಪದ್ಧತಿ ಮಾನವತಾವಾದಿಗಳಿಂದ ಖಂಡಿಸಲ್ಪಟ್ಟಿದೆ. ಮಾನವ ಜನಾಂಗದಲ್ಲಿ ತರತಮ ಭಾವವನ್ನು ಉಂಟುಮಾಡುವ ಪ್ರವೃತ್ತಿಯೇ ಅಸ್ಪೃಶ್ಯತೆಯ ಮೂಲ. ಈ ಅಸಮಾನತೆಯ ಪ್ರವೃತ್ತಿಯನ್ನು ತೀವ್ರವಾಗಿ ವಿರೋಧಿಸಿದವರಲ್ಲಿ ಬುದ್ಧನು ಮೊದಲಿಗ. ಆತ ಜಾತಿ, ವರ್ಣವನ್ನು ಪರಿಗಣಿಸದೆ ಎಲ್ಲರಿಗೂ ತನ್ನ ಧರ್ಮದಲ್ಲಿ ಪ್ರವೇಶವನ್ನು ಕೊಟ್ಟನು. ಇದು ನಮ್ಮ ಶ್ರೇಣೀಕರಣಗೊಂಡ ಸಮಾಜ ವ್ಯವಸ್ಥೆಯ ಮೇಲೆ ನಡೆದ ಮೊದಲ ದಾಳಿ. ಕಸ ಗುಡಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಉಳಿದವರೆಲ್ಲ ಕೀಳಾಗಿ ಕಂಡಾಗ ಬುದ್ಧನು ಆ ವ್ಯಕ್ತಿಯನ್ನು ಗೌರವಿಸಿದ ಸಂಗತಿ ಜನಜನಿತವಾಗಿದೆ. ಅವನ ಶಿಷ್ಯ ಆನಂದನು ಅಮ್ರಪಾಲಿ ಎಂಬ ಚಾಂಡಾಲ ಮಹಿಳೆಯಿಂದ ನೀರನ್ನು ಸ್ವೀಕರಿಸಿ ಕುಡಿದ ಘಟನೆಯೂ ಅಷ್ಟೇ ಪ್ರಸಿದ್ಧವಾಗಿದೆ. ಈ ಬಗೆಯ ಉದಾರವಾದಿ ಧೋರಣೆಯನ್ನು ಆಗಿನ ಕಾಲಕ್ಕೆ ದೊಡ್ಡ ಪ್ರಮಾಣದ ಸುಧಾರಣೆ ಎಂದೇ ಭಾವಿಸಬಹುದು".[೧] ಅಸ್ಪೃಶ್ಯತೆ ಮತ್ತು ಕನಿಷ್ಠ ಶ್ರೇಷ್ಠತೆಯನ್ನು

ಹೋಗಲಾಡಿಸಲು ಶ್ರಮಿಸಿದ ಮೊದಲ ಪ್ರಯತ್ನ ಇದಾದರೆ, ಎರಡನೆಯ ಪ್ರಯತ್ನ ಬಸವಾದಿ ಶರಣರದು.

ಕನ್ನಡದ ನೆಲದಲ್ಲಿ ಹುಟ್ಟಿದ ವೀರಶೈವ ಚಳವಳಿ ಬುದ್ಧನ ಸಿದ್ಧಾಂತವನ್ನೇ ಹೋಲುವಂತಹದ್ದಾಗಿದೆ. "ಸಂಪ್ರದಾಯಸ್ಥ ಬ್ರಾಹ್ಮಣವಾದಿ ಸಿದ್ಧಾಂತಕ್ಕೆ ವಿರುದ್ಧವಾಗಿ ಬೆಳೆದ ಈ ಚಳವಳಿ ಮೂರ್ತಿ ಪೂಜೆಯನ್ನು ಹಾಗೂ ಜಾತಿ ಆಧಾರಿತ ಸಮಾಜವನ್ನು ಖಂಡಿಸಿತು. ವೀರಶೈವ ಚಳವಳಿಯು ಹುಟ್ಟಿನಿಂದ ಜಾತಿಯ ವ್ಯತ್ಯಾಸಗಳನ್ನು ತಿರಸ್ಕರಿಸುತ್ತಾ ಭ್ರಾತೃತ್ವವನ್ನು ಎತ್ತಿ ಹಿಡಿಯಿತು. ಆದರೆ ವೀರಶೈವ ಧರ್ಮವು ಯಾವ ಬ್ರಾಹ್ಮಣ ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿತ್ತೋ, ಅದೇ ತರಹದ ಹುಟ್ಟು ಹಾಗೂ ಶುದ್ಧಿಯ ಆಧಾರದ ಮೇಲೆ ಸಾಮಾಜಿಕ ಪ್ರತ್ಯೇಕತೆಯನ್ನು ಬೆಳೆಸಿಕೊಂಡಿತು."[೨]

ಈ ವೈಫಲ್ಯಕ್ಕೆ ಬಸವಾದಿ ಶರಣರು ಕಾರಣರಾಗುವುದಿಲ್ಲ. ಅನಂತರದಲ್ಲಿ ಬಂದ ಆ ಪಂಥದ ಅನುಯಾಯಿಗಳು ಅದನ್ನು ದಿಕ್ಕುತಪ್ಪಿಸಿದರು. ಕೆಲ ಮಠಮಾನ್ಯಗಳು ಸಹ ಶರಣರ ನಿಜವಾದ ತತ್ವಗಳನ್ನು ಪ್ರತಿಪಾದಿಸದೆ ಮೌಢ್ಯ, ಸಂಪ್ರದಾಯ, ವರ್ಣ ಜಾತಿ ಸಂಕೋಲೆಗಳನ್ನು ಎತ್ತಿ ಹಿಡಿಯುತ್ತ ಸಾಗಿದ್ದರ ಫಲವಾಗಿಯೇ ಸ್ವಾತಂತ್ರ್ಯ ಪೂರ್ವದ ಅಂದರೆ, ೧೮ನೇ ಶತಮಾನದಲ್ಲಿ ಪೂನಾವನ್ನು ಆಳುತ್ತಿದ್ದ ಪೇಶ್ವೆಗಳ ಕಾಲದ ಸಾಮಾಜಿಕ ಸ್ಥಿತಿಗತಿಯ ಕುರಿತು ಒಂದಷ್ಟು ವಿಚಾರಗಳನ್ನು ಮೆಲುಕು ಹಾಕುವುದರ ಮೂಲಕ ಬಸವಣ್ಣ ನಿರ್ಮಿಸ ಬಯಸಿದ ಸಮಾಜದ ವಿಚಾರಗಳ ಮೇಲೆ ಬೆಳಕು ಚೆಲ್ಲುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

ಪೇಶ್ವೆಗಳ ಕಾಲದಲ್ಲಿ ಆಡಳಿತಕ್ಕೊಳಪಟ್ಟಿದ್ದ ಕನ್ನಡದ ಮುಂಬೈ ಕರ್ನಾಟಕ ಪ್ರದೇಶವೂ ಒಂದಾಗಿದೆ. ಪುಣೆ ಪೇಶ್ವೆಗಳ ಆಡಳಿತದ ಕೇಂದ್ರ ಸ್ಥಳವಾಗಿತ್ತು. ಅಲ್ಲಿ ಅಸ್ಪೃಶ್ಯರಿಗೆ ಸ್ವತಂತ್ರವಾಗಿ ಬದುಕುವ ಹಕ್ಕನ್ನು ನಿರಾಕರಿಸಲಾಗಿತ್ತು. ಒಬ್ಬ ಅಸ್ಪೃಶ್ಯ ವರ್ಗದ ವ್ಯಕ್ತಿ ನಿಸ್ಸಂಕೋಚವಾಗಿ ಮೈಚಳಿಬಿಟ್ಟು ಊರು ಕೇರಿಯಲ್ಲಿ ಓಡಾಡುವಂತಿರಲಿಲ್ಲ. ಅಸ್ಪೃಶ್ಯ ವರ್ಗದ ಯಾವುದೇ ವ್ಯಕ್ತಿ ಊರ ಪ್ರವೇಶ ಮಾಡಬೇಕಾದರೆ ಅವರಿಗೆ ಇಂತಹದೆ ಸಮಯವೆಂದು ನಿಯಮ ಹಾಕಿದ್ದರು. ಆ ನಿಯಮದ ಪ್ರಕಾರ ದಿನದ ಹಗಲು ಹನ್ನೆರಡು ಗಂಟೆಗೆ ಮಾತ್ರ ಊರ ಪ್ರವೇಶ ಮಾಡಬೇಕಾಗುತ್ತಿತ್ತು. ಆಗ ಕೈಯಲ್ಲಿ ಒಂದು ಬಡಿಗೆ, ಬೆನ್ನಿಗೆ ಮುಳ್ಳು ಬಾರಿಗೆ, ಕೊರಳಲ್ಲಿ ಟೆಂಗಿನ ಪರಟೆ ಕಟ್ಟಿಕೊಂಡು ಜಾಡ ಮಾಲಿ ಬರುತ್ತಿದ್ದೇನೆ, ಹೊಲೆಯ ಬರುತ್ತಿದ್ದಾನೆ. ದಯಮಾಡಿ ದಾರಿ ಬಿಡಿ ಎಂದು ಕೂಗಿಕೊಂಡು ಹೋಗಬೇಕಾಗುತ್ತಿತ್ತು. ಒಂದು ವೇಳೆ ಅಪ್ಪಿತಪ್ಪಿ ಯಾರಾದರೂ ಮೇಲು ಕುಲದವರು ಎದುರಿಗೆ ಬಂದರೆ ಅಸ್ಪೃಶ್ಯನಾದ ವ್ಯಕ್ತಿ ದೂರ ಸರಿದು ನೆಲದ ಮೇಲೆ ಅಡ್ಡ ಮಲಗಬೇಕು. ಆತನಿಗೆ ಉಗುಳು ಬಂದರೆ ಕೊರಳಲ್ಲಿ ಕಟ್ಟಿಕೊಂಡ ಪರಟೆಯಲ್ಲಿಯೇ ಉಗಳಬೇಕು. ಯಾಕೆಂದರೆ, ಅಸ್ಪೃಶ್ಯನು ಉಗುಳಿದ ಉಗುಳು ಮೇಲು ಜಾತಿಯ ಜನ ತುಳಿದರೆ ಮೈಲಿಗೆಯಾಗುತ್ತದೆ, ಅನ್ನುವ ಕಾರಣಕ್ಕಾಗಿ ಕೊರಳ ಪರಟೆಯಲ್ಲಿಯೇ ಉಗುಳ ಬೇಕಾಗುತ್ತಿತ್ತು. ಬೆನ್ನಿಗೆ ಬಾರಿಗೆ ಕಟ್ಟಿಕೊಂಡ ಕಾರಣವೇನೆಂದರೆ, ಅಸ್ಪೃಶ್ಯನು ನಡೆದ ಹೆಜ್ಜೆಯ ಮೇಲೆ ಯಾರಾದರೂ ಹೆಜ್ಜೆ ಇಟ್ಟರೆ ಮೈಲಿಗೆಯಾಗುತ್ತದೆ ಎನ್ನುವುದರಿಂದ ಅವನು ನಡೆದ ದಾರಿಯ ಹೆಜ್ಜೆಗಳನ್ನು ಬೆನ್ನಿಗೆ ಕಟ್ಟಿಕೊಂಡ ಬಾರಿಗೆಯಿಂದ ಅಳಿಸುತ್ತ ಹೋಗಬೇಕಾಗುತ್ತಿತ್ತು. ಇನ್ನು ಮೂರನೆಯ ಕಾರಣ, ಹಗಲು ಹನ್ನೆರಡು ಗಂಟೆಗೆ ಊರ ಪ್ರವೇಶ ಮಾಡುವುದು. ಅಸ್ಪೃಶ್ಯನಾದವನು ಊರ ಪ್ರವೇಶವನ್ನು ಬೆಳಗಿನ ಜಾವ ಇಲ್ಲವೆ

ಸಾಯಂಕಾಲ ಮಾಡಿದರೆ ಸೂರ್ಯನ ಬಿಸಿಲಿನಿಂದ ದಲಿತನ ನೆರಳು ಉದ್ದುದ್ದ ಬೀಳುವುದರಿಂದ, ಆ ನೆರಳು ಯಾರಿಗಾದರೂ ತಾಕಿದರೆ, ಸ್ಪರ್ಶಮಾಡಿದರೆ ಮೈಲಿಗೆಯಾಗುತ್ತದೆ ಎನ್ನುವ ಕಾರಣಕ್ಕೆ ಹಗಲು ಹನ್ನೆರಡು ಗಂಟೆಗೆ ಊರ ಪ್ರವೇಶ ಮಾಡಬೇಕಾಗುತ್ತಿತ್ತು. ಯಾಕೆಂದರೆ, ಸೂರ್ಯ ನೆತ್ತಿಯ ಮೇಲಿರುವುದರಿಂದ ಅವನ ನೆರಳು ಅವನ ಕಾಲಲ್ಲಿ ಬೀಳುತ್ತಿತ್ತು. ಅದಕ್ಕಾಗಿ ಸಮಯ ನಿಗದಿಮಾಡಿದ್ದರು. ಇಂತಹ ಕ್ರೂರ ಪದ್ಧತಿ ಪೇಶ್ವೆಗಳ ಕಾಲದಲ್ಲಿ ಚಾಲ್ತಿಯಲ್ಲಿತ್ತು. ಇದು ಬಸವ ಪೂರ್ವದಲ್ಲಿಯೂ ಹಾಗೂ ಆನಂತರದಲ್ಲಿಯೂ ಅನೂಚಾನವಾಗಿ ನಡೆದುಕೊಂಡು ಬಂದಿರುವಂತಹದ್ದು. ಈಗಲೂ ಇಂತಹ ಪದ್ಧತಿಗಳು ಅಲ್ಲಲ್ಲಿ ಚಾಲ್ತಿಯಲ್ಲಿವೆ. ಆದರೆ ಅದರ ರೂಪ ಬೇರೆ ಬೇರೆಯಾಗಿದೆ. ಇದಕ್ಕೆ ಪೂರಕವಾಗಿ ವಚನ ಚಳವಳಿಯಲ್ಲಿ ಸಂಬೋಳಿ ನಾಗಿದೇವ ಎನ್ನುವ ದಲಿತ ವಚನಕಾರನಿದ್ದ. ಅವನು ಇಂತಹ ಕ್ರೂರ ಪದ್ಧತಿಗೆ ಬಲಿಯಾದವ. ೧೨ನೆಯ ಶತಮಾನದಲ್ಲಿ ಆ ಪದ್ಧತಿಯನ್ನು ಧಿಕ್ಕರಿಸಿ ಶರಣ ಸಂಸ್ಕೃತಿಗೆ ಸೇರಿದವನಾಗಿದ್ದಾನೆ. ಊರ ಪ್ರವೇಶ ಮಾಡುವ ಅಸ್ಪೃಶ್ಯನನ್ನು 'ಸಂಬೋಳಿ' ಎಂದು ಕರೆಯುತ್ತಿದ್ದರು.

ಬ್ರಾಹ್ಮಣ ದೇವರ ಮುಖದಿಂದ ಹುಟ್ಟಿದ, ಕ್ಷತ್ರಿಯ ತೋಳುಗಳಿಂದ ಹುಟ್ಟಿದ, ವೈಶ್ಯನಾದವ ತೊಡೆಗಳಿಂದ ಹುಟ್ಟಿದ, ಶೂದ್ರನಾದವ ಪಾದಗಳಿಂದ ಜನಿಸಿದ. ಪಂಚಮರು ಅಸ್ಪೃಶ್ಯರೆನಿಸಿಕೊಂಡವರು ವರ್ಣಾತೀತರು ಹೀಗೆ ವೈದಿಕ ವ್ಯವಸ್ಥೆ ನಿಯಮಗಳನ್ನು ಮಾಡಿಕೊಂಡು ಅದನ್ನು ಎಲ್ಲರಿಗೂ ಬೋಧಿಸಿದೆ. ವರ್ಣಾಶ್ರಮ ಧರ್ಮದ ಈ ಅನಿಷ್ಠ ಸಾಮಾಜಿಕ ಪದ್ಧತಿಯನ್ನು ಶರಣರು ವಿರೋಧಿಸುವುದರ ಮೂಲಕ ಪರ್ಯಾಯ ಸಮಾಜ ಕಟ್ಟಿ ತೋರಿಸಿದರು. ವರ್ಣಾಶ್ರಮ ಧರ್ಮದ ಬೇರಿಗೇ ಶರಣರು ಕೊಡಲಿಯನಿಕ್ಕಿದರು. ಸಮಾನತೆಯ ಹಂದರದ ಮೇಲೆ ನವಸಮಾಜವನ್ನು ಕಟ್ಟುವ ಕನಸು ಕಂಡರು. ತಾವು ಕಂಡ ಕನಸನ್ನು ನನಸಾಗಿಸಲು ತಮ್ಮ ಜೀವಿತದುದ್ದಕ್ಕೂ ಶ್ರಮಿಸಿದರು.

ಮನುಷ್ಯನ ದೇಹದ ಅಂಗಾಂಗಗಳಲ್ಲೇ ಬಲ ಭಾಗ ಶ್ರೇಷ್ಠ ಎಡ ಭಾಗ ಕನಿಷ್ಟವೆಂದು ಹೇಳುವ ವೈದಿಕ ಪದ್ಧತಿಯ ವಿರುದ್ಧ ಬಸವಾದಿ ಶರಣರು ಸಮರಸಾರಿ ಸಮಾಜೋಧಾರ್ಮಿಕ ಕ್ರಾಂತಿ ಮಾಡಿದರು. ಅಂದಿನ ಸಾಮಾಜಿಕ ಬದುಕಿನಲ್ಲಿ ಹೊಸದೊಂದು ಸಂಚಲನವನ್ನುಂಟು ಮಾಡಿದರು. ಡಾಂಭಿಕ ಭಕ್ತಿಯನ್ನು ವಿರೋಧಿಸಿದರು. ನೀರ ಕಂಡಲ್ಲಿ ಮುಳುಗುವವರ, ಮರವ ಕಂಡಲ್ಲಿ ಸುತ್ತುವವರ ಭಕ್ತಿ ಅದು ನಿಜವಾದ ಭಕ್ತಿಯಲ್ಲವೆಂದೂ, ಅರ್ಥ ವಿಹೀನವಾದ ತೋರಿಕೆಯ ಡಾಂಭಿಕ ಆಚರಣೆಯೆಂದು ಶರಣರು ಸಾಮಾನ್ಯರಿಗೆ ತಿಳಿಹೇಳಿದರು. ಅಂದು ಜನತೆಯ ಮನಸ್ಸಿನಲ್ಲಿ ಮನೆಮಾಡಿಕೊಂಡಿದ್ದ, ರಕ್ತಗತವಾಗಿದ್ದ ಮೂಢನಂಬಿಕೆಗಳನ್ನು ಕಿತ್ತೆಸೆಯಲು ಶರಣರು ಕಂಕಣ ಬದ್ಧರಾದುದನ್ನು ಅವರ ವಚನಗಳಿಂದ ತಿಳಿಯುವೆವು. 'ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು, ದಿಟದ ನಾಗರ ಕಂಡಡೆ ಕೊಲ್ಲೆಂಬರು, ಉಂಬ ಜಂಗಮ ಬಂದಡೆ ನಡೆಎಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿವರು.'

ಧರ್ಮದ ಕುರಿತು ಇಲ್ಲಿಯವರೆಗೆ ವೈದಿಕರು ನಂಬಿಸಿದ ಅನೇಕ ನಂಬಿಕೆಗಳನ್ನು ಶರಣರು ವಿರೋಧಿಸಿದರು. ಅವುಗಳಿಗೆ ಅರ್ಥವೇ ಇಲ್ಲವೆಂದು ಪ್ರತಿವಾದಿಸಿದರು. ಬಸವಣ್ಣ ಧರ್ಮದ ತಿರುಳನ್ನು 'ದಯವಿಲ್ಲದ ಧರ್ಮವದೇವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ; ದಯವೇ ಧರ್ಮದ ಮೂಲವಯ್ಯಾ' ಎಂದು ಅದರ ಮಹತ್ವವನ್ನು ಎತ್ತಿಹೇಳಿದರು.

ಅಸ್ಪೃಶ್ಯರನ್ನು ಆ ಕಾಲದಲ್ಲಿ ಗುಡಿಯೊಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ. ಅಂತಹವರನ್ನು ಕರೆದು ಸಂತೈಸಿದರು. ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡುವೆ? ಬಡವನಯ್ಯ, ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರಹೊನ್ನ ಕಳಸವಯ್ಯ, ಕೂಡಲ ಸಂಗಮದೇವ, ಕೇಳಯ್ಯ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದು ಹೇಳುತ್ತ ಮನುಷ್ಯ ಸಂತತಿ ಜಂಗಮ ಸ್ವರೂಪಿ ಅದಕ್ಕೆ ಕೊನೆಯಿಲ್ಲ. ಕಟ್ಟಿದ ಕಟ್ಟಡ ಬಿದ್ದು ಹೋಗುತ್ತದೆ. ಆದ್ದರಿಂದ ನೀವು ಹಿರಿಯ ಮಾಹೇಶ್ವರರು ದೇಹವೇ ದೇಗುಲವೆಂದು ತಿಳಿದು ಆತ್ಮದಲ್ಲಿಯೇ, ನಿಮ್ಮ ಕಾಯದಲ್ಲಿಯೇ ದೇವರಿದ್ದಾನೆ ಎಂದು ಅಸ್ಪೃಶ್ಯರಲ್ಲಿ ಆತ್ಮವಿಶ್ವಾಸ ತುಂಬಿದವರು ಬಸವಣ್ಣನವರು. ವಿದ್ಯೆ, ಹಣ, ಅಂತಸ್ತು, ಅಧಿಕಾರ ಒಬ್ಬರಲ್ಲೇ ಕೂಡಿ ಬೀಳಬಾರದು, ಎಲ್ಲರಿಗೂ ಸಮಾನವಾಗಿ ಹಂಚಿಕೆ ಆಗಬೇಕು. ನೀರು ಸದಾ ಹರೀತಾ ಇದ್ದರೆ ಸ್ವಚ್ಛವಿರುತ್ತದೆ. ನಿಂತಲ್ಲೇ ನಿಂತರೆ ಕೊಳೆತು, ಮಲೆತು ನಾರುತ್ತದೆ. ಇದರಂತೆ ನಾವು ಸದಾ ಚಲನಶೀಲರಾಗಬೇಕೆಂದು ಬಸವಣ್ಣನವರು ನುಡಿದಿದ್ದಾರೆ. ಸ್ಥಾವರಕ್ಕೆ ಪ್ರಪಂಚದಲ್ಲಿ ಸ್ಥಾನವಿಲ್ಲ. ಅದು ನಾಶಹೊಂದುತ್ತದೆ. 'ಜಂಗಮ' ಅಂದರೆ ಚಲನಶೀಲವಾದುದುದಕ್ಕೆ ಅಂತ್ಯವಿಲ್ಲ. ಮಾನವ ಶರೀರ ಸದಾ ಚಲನಶೀಲವಾಗಬೇಕು. ಅದುವೇ ನಿಜವಾದ ದೇಗುಲ. ಕಲ್ಲು-ಮಣ್ಣುಗಳಿಂದ ಕಟ್ಟಿದ ದೇಗುಲ ಬಿದ್ದು ಹೋಗುತ್ತದೆ. ಅಲ್ಲಿಗೆ ಹೋಗಿ ಸಾಧಿಸುವುದು ಅದಕ್ಕಿಂತ ಶ್ರೇಷ್ಠವಾದ ದೇಗುಲ ಎಂದರೆ ದೇಹವೇ ಎಂದು ಸಾರಿದ್ದು ಅಪೂರ್ವವಾಗಿದೆ.

ಅಸ್ಪೃಶ್ಯರಲ್ಲಿ ಧೈರ್ಯ ತುಂಬಿದ್ದಲ್ಲದೆ ಅನುಭವ ಮಂಟಪದಲ್ಲಿ ಮಾದಾರ ಚೆನ್ನಯ್ಯ, ಧೂಳಯ್ಯ ದೊಡ್ಡಯ್ಯ, ಉರಿಲಿಂಗ ಪೆದ್ದಿ, ಕಾಳವ್ವೆ, ಸೂಳೆ ಸಂಕವ್ವೆ, ಕೆಂಭಾವಿ ಭೋಗಣ್ಣ, ಸಮಗಾರ ಹರಳಯ್ಯ, ಡೋಹಾರ ಕಕ್ಕಯ್ಯ, ಸಂಬೋಳಿ ನಾಗಿದೇವ ಹೀಗೆ ಅನೇಕ ತಳವರ್ಗದ ಅಸ್ಪರಶ್ಯರೆನಿಸಿಕೊಂಡವರನ್ನು ಬಸವಣ್ಣ ಬಾಚಿ ತಬ್ಬಿಕೊಂಡ. ಅನುಭವ ಮಂಟಪದಲ್ಲಿ ಅವರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟ. ಹರಳಯ್ಯ ದಂಪತಿಗಳು ಮಾಡಿದ ಚಪ್ಪಲಿಗಳನ್ನು ತನ್ನ ಮಸ್ತಕದ ಮೇಲಿರಿಸಿಕೊಂಡು ತನ್ನ ಶ್ರೇಷ್ಠ ಗುಣವನ್ನು ಮಾನವೀಯ ಮೌಲ್ಯವನ್ನು ಮೆರೆದ ವ್ಯಕ್ತಿ ಬಸವಣ್ಣ. ಆತನು ನಿಜಕ್ಕೂ ಮಾನವ್ಯದ ಮಂದಾರವನ್ನರಳಿಸಿದ ಮಹಾಪುರುಷ.

ಪುರುಷ ಮೇಲು, ಸ್ತ್ರೀ ಕೀಳು ಎಂದಲ್ಲದೆ ಮಾನವ ಮಾನವರಲ್ಲಿ ಭೇದವನ್ನುಂಟು ಮಾಡಲಿಕ್ಕೆ ಕಾರಣವಾಗಿದ್ದ ವೇದ ಆಗಮಗಳನ್ನು ಬಸವಣ್ಣ ವಿರೋಧಿಸುವ ರೀತಿ ಅನನ್ಯತೆಯಿಂದ ಕೂಡಿದೆ. ವೇದಕ್ಕೆ ಒರೆಯಕಟ್ಟುವೆ, ಶಾಸ್ತ್ರಕ್ಕೆ ನಿಗಳನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗಕೊಯಿವೆ ಎಂದು ಹೇಳುತ್ತಲೇ ಮಾದಾರ ಚೆನ್ನಯ್ಯನ ಮನೆಯ ಮಗನಾನಯ್ಯ ಎಂದು ನುಡಿಯುತ್ತಾನೆ. ತಳವರ್ಗದವರ ಜೊತೆ ಇರುವ ಬಸವಣ್ಣನ ಒಡನಾಟವನ್ನು ಸಹಿಸದವರಿಗೆ ಇದು ಉತ್ತರವಾಗಿತ್ತು. ಕುಲಗೋತ್ರಗಳಲ್ಲಿ ನಂಬಿಕೆ ಇಟ್ಟುಕೊಂಡವರಿಗೆ, ಮನುಷ್ಯ ವಿರೋಧಿಗಳಿಗೆ ಬಸವಣ್ಣನ ಈ ಚಿಂತನೆ ನುಂಗಲಾರದ ತುತ್ತಾಯಿತು. ಮುಂದುವರೆದು ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ ಎಂದು ತನ್ನನ್ನು ತಾನು ತಳ ವರ್ಗೀಕರಣಗೊಳಿಸಿಕೊಳ್ಳುವುದರ ಮೂಲಕ ಬಸವಣ್ಣ ದಲಿತ ಶೋಷಿತರ ಬದುಕಿನಲ್ಲಿ ಭರವಸೆಯನ್ನು, ಆಸೆಯನ್ನು ಮೂಡಿಸಿದ್ದಲ್ಲದೆ ಆತ್ಮವಿಶ್ವಾಸ ತುಂಬಿದ.

ಅಂದಿನ ಸಮಾಜದಲ್ಲಿ ಮಾತೆತ್ತಿದರೆ ಜಾತಿ, ಮತ, ಕುಲಗೋತ್ರಗಳ ಮೇಲಾಟದ ಸಂದರ್ಭದಲ್ಲಿ ಹುಟ್ಟು ಯಾವಾಗಲು ಶ್ರೇಷ್ಠವಲ್ಲ. ಒಳ್ಳೆಯ ಕೆಲಸ ಮಾಡುವುದರಿಂದ ಒಳ್ಳೆಯತನ ಬರುತ್ತದೆ. ಶ್ರೇಷ್ಠತೆ ದೊರೆಯುತ್ತದೆ. ಹುಟ್ಟು ಮಾನವನ ಶ್ರೇಷ್ಠತ್ವವನ್ನು ಅಳೆಯುವ ಸಾಧನವಲ್ಲ. ಹುಟ್ಟಿದ ಮೇಲೆ ಆತ ತೋರುವ ಗುಣಗಳಿಂದ ಆತನ ಶ್ರೇಷ್ಠತ್ವವನ್ನು ಅಳೆಯ ಬೇಕೆಂದುದು ಸ್ವಾಗತಾರ್ಹವಾಗಿದೆ. ಅದಕ್ಕಾಗಿ ಬಸವಣ್ಣ ಹೀಗೆ ಹೇಳುತ್ತಾನೆ. 'ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹಾರನೆಂಬೆನೆ ಕಕ್ಕಯ್ಯನ? ಮಾದಾರ ನೆಂಬೆನೆ ಚೆನ್ನಯ್ಯನ? ಆನು ಹಾರುವನೆಂದರೆ ಕೂಡಲ ಸಂಗಮ ನಗುವನಯ್ಯ ಎನ್ನುವಲ್ಲಿ ಹುಟ್ಟು ಶ್ರೇಷ್ಠವಲ್ಲವೆನ್ನುವುದು ಬಸವಣ್ಣನ ಈ ವಚನದಿಂದ ದಿಟವಾಗುತ್ತದೆ. ಆಧುನಿಕ ಯುಗದ ಈ ಸಂದರ್ಭದಲ್ಲಿ ಹುಟ್ಟೇ ಶ್ರೇಷ್ಠವೆಂದು ಹೇಳುವವರಿದ್ದಾರೆ. ಇಂಥವರ ಮತಿಗೆ ಕನಿಕರಿಸದೆ ಗತ್ಯಂತರವಿಲ್ಲ. ಜಾತ್ಯತೀತ ಮನೋಭಾವವನ್ನು ನಾವಿಂದು ಅಳವಡಿಸಿಕೊಳ್ಳಬೇಕು. ಅಂದಾಗಲೇ ನಾವು ನಿಜವಾದ ಬಸವಣ್ಣನ ವಾರಸುದಾರರಾಗುವೆವು.

ಅಂದಿನ ಕಾಲದಲ್ಲಿ ವಿವಿಧ ವೃತ್ತಿ ಮಾಡುವವರನ್ನು ಕೀಳಾಗಿ ಕಂಡು ನಿಂದಿಸುವವರಿಗೆ, ವರ್ತಿಸುವವರಿಗೆ ಬಸವಣ್ಣನವರು ನೀಡಿದ ಉತ್ತರ ಮಾರ್ಮಿಕವಾದುದು. ಚಪ್ಪಲಿ ಹೊಲೆಯವರನ್ನು ಇತರೆ, ವೃತ್ತಿ ಮಾಡುವವರನ್ನು ಕನಿಷ್ಟವೆಂದು ಭಾವಿಸುವವರಿಗೆ "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ ಹಾಸನಿಕ್ಕೆ ಸಾಲಿಗನಾದ, ವೇದವನೋದಿ ಹಾರುವನಾದ" ಎಂದು ಹೇಳುವುದರ ಮೂಲಕ ಸಮಾಜದಲ್ಲಿದ್ದ ವೃತ್ತಿ ಕೀಳರಿಮೆಯನ್ನು ಬಸವಣ್ಣ ಹೋಗಲಾಡಿಸಿದ. ಅಮೂಲಕ ವೃತ್ತಿಗೌರವವನ್ನು ತಂದುಕೊಟ್ಟ ಎಲ್ಲರೂ ಕುಡಿಯುವ ನೀರು, ಸೇವಿಸುವ ಗಾಳಿ, ಸುಡುವ ಬೆಂಕಿ ಒಂದೆಯಾಗಿದ್ದರೂ ತರತಮ ಭಾವ ಹೊಂದಿದವರನ್ನು ಕುರಿತು 'ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ, ಜಲವೊಂದೆ, ಶೌಚಾಚಮನಕ್ಕೆ ಕುಲವೊಂದೆ, ತನ್ನ ತಾನರಿದವಂಗೆ ಎಂದು ಹೇಳುವುದರ ಮೂಲಕ ಜಾತಿವಾದಿಗಳಿಗೆ ಚಾಟಿ ಏಟಿನಂತೆ ಅವರ ಅಂಧ ವಿಚಾರಗಳಿಗೆ ಸಾಣೆ ಹಿಡಿಯುವ ಕೆಲಸ ಬಸವಣ್ಣ ಮಾಡಿದ್ದಾನೆ.

ಸಮಾಜದಲ್ಲಿ ತಾಂಡವವಾಡುತ್ತಿದ್ದ ಜಾತಿ ವ್ಯವಸ್ಥೆಯನ್ನು ಕಂಡು ಮಮ್ಮಲ ಮರುಗಿದ ಬಸವಣ್ಣನವರು ಸುಮಾರು ಎಂಟುನೂರು ವರ್ಷಗಳ ಹಿಂದೆಯೇ ಸಮತಾ ಸಮಾಜದ ಕನಸು ಕಂಡವನಾಗಿದ್ದಾನೆ. ಜಾತಿ ರಹಿತ ವರ್ಗರಹಿತ, ವರ್ಣರಹಿತ ಸಮಾಜವನ್ನು ಕಟ್ಟುವ ಮಹೋನ್ನತ ಗುರಿಯನ್ನು ಹೊಂದಿದ್ದ ಬಸವಾದಿಶರಣರ ಸಮಾಜೋಧಾರ್ಮಿಕ ಚಳವಳಿಯ ಬಹುದೊಡ್ಡ ಸಾಧನೆ ಅಸ್ಪೃಶ್ಯರನ್ನು ಸಮಾಜದ ಮೇಲ್ವರ್ಗದ ಕಕ್ಷೆಗೆ ತೆಗೆದುಕೊಂಡಿದ್ದು. ಅವರಲ್ಲಿ ಆತ್ಮಸ್ಥೈರ್ಯವನ್ನು ಜಾಗೃತಗೊಳಿಸಿದ್ದು, ಸ್ತ್ರೀ ಸಮೂಹಕ್ಕೆ ಜ್ಞಾನ ಹಾಗೂ ಲಿಂಗಧಾರಣೆಯ ಅವಕಾಶ ಕಲ್ಪಿಸಿಕೊಟ್ಟಿದ್ದು ಈ ಎಲ್ಲ ಮಹತ್ವದ ಬದಲಾವಣೆಯನ್ನು ಶರಣ ಚಳವಳಿ ತಂದಿತು. ಅಂದಿನ ಜಾತಿ ವ್ಯವಸ್ಥೆಯ ಸಂದರ್ಭದಲ್ಲಿ ಸ್ತ್ರೀಗೆ ಕೊಟ್ಟ ಸಮಾನತೆ ಅಪೂರ್ವವಾದುದು. ಗಂಡು ಹೆಣ್ಣಿನ ನಡುವೆ ಸುಳಿವ ಆತ್ಮನಿಗೆ ಯಾವ ಭೇದಭಾವವೂ ಇಲ್ಲವೆಂದು ಪ್ರತಿಪಾದಿಸಿದ್ದು ಚಳವಳಿಯ ಮಹೋನ್ನತ ಆಶಯವಾಗಿತ್ತು.

ಕಾಯಕಕ್ಕೆ ಮೀಸಲಾದ ಮೋಳಿಗೆ ಮಾರಯ್ಯ ದಂಪತಿಗಳಿಗೆ, ದಾಸೋಹ ಮತ್ತು ಕಾಯಕದಲ್ಲಿ ಶ್ರೇಷ್ಠರಾದ ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ ದಂಪತಿಗಳ ಬೆನ್ನೆಲುಬಾಗಿ ನಿಂತವರು

ಬಸವಣ್ಣ. ಲಕ್ಕಮ್ಮ ನಿಜಕ್ಕೂ ಸ್ವಾಭಿಮಾನದ ಹೆಣ್ಣು ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವೇ ಘನ ಶಿವಭಕ್ತರಿಗೆ ಬಡತನವಿಲ್ಲ. ಎನಗೆ ಯಾರ ಹಂಗಿಲ್ಲವೆನ್ನುವ ದಿಟ್ಟ ಮಹಿಳೆ. ಮಾದಾರ ಧೂಳಯ್ಯನಂತಹವರೂ ವೃತ್ತಿಯಲ್ಲಿ ನಿರತರಾದಾಗ ಶಿವನನ್ನೇ ಗಣನೆಗೆ ತೆಗೆದುಕೊಂಡವರಲ್ಲ. ಕಾಯಕವೇ ಕೈಲಾಸವೆಂದು ಭಾವಿಸಿದರು. ಇಂಥ ಅನೇಕ ವಚನಕಾರರಲ್ಲಿ ಅದರಲ್ಲೂ ತಳವರ್ಗದಿಂದ ಬಂದವರಲ್ಲಿ ಸ್ವಾಭಿಮಾನದ ಬೀಜವನ್ನು ಬಿತ್ತಿದವರು ಬಸವಣ್ಣನವರು ಎನ್ನುವುದು ನಿಜಕ್ಕೂ ಸ್ತುತ್ಯಾರ್ಹವಾಗಿದೆ.

ಇವತ್ತಿನ ಅನೇಕ ಚಿಂತಕರು ಸಮಾಜವಾದದ ಚಿಂತನೆ ಮಾಡುವಾಗ, ಕಮ್ಯೂನಿಷ್ಟ ವಿಚಾರ ಬಂದಾಗ ನಾವೆಲ್ಲ ಬೇರೆಡೆ ಮುಖಮಾಡುವ ಪ್ರವೃತ್ತಿ ನಮ್ಮಲ್ಲಿ ಬೆಳೆದು ಬಂದಿದೆ. ಜಗತ್ತಿನ ಯಾವ ಮೂಲೆಯಲ್ಲೂ ಆಗದಂತಹ ಸಾಮಾಜಿಕ ಬದಲಾವಣೆ, ಕಾಯಕ ಪ್ರಜ್ಞೆ, ಮಾನವೀಯ ಮೌಲ್ಯಗಳ ಕುರಿತು ಮಹೋನ್ನತ ಚಿಂತನೆ ಬಸವಣ್ಣನವರ ನೇತೃತ್ವದಲ್ಲಿ ಕನ್ನಡದ ನೆಲದಲ್ಲಿ ನಡೆದಿರುವುದನ್ನು ಹಿತ್ತಲಗಿಡ ಮದ್ದಲ್ಲವೆನ್ನುವಂತೆ ಗೌಣವಾಗಿಸುವವರು ನಾವಾಗಿದ್ದೇವೆ. ರಷ್ಯನ್ ಕ್ರಾಂತಿ ಲೆನಿನ್ ಲಿಂಕನ್‌ರ ಚಿಂತನೆ ಕಡೆಗೆ, ಪಶ್ಚಿಮದ ದಿಕ್ಕಿಗೆ ನಾವು ಈಗಲೂ ಮುಖಮಾಡುತ್ತೇವೆ. ನಿಜಕ್ಕೂ ಅದು ನಮ್ಮ ಹೃದಯ ವೈಶಾಲ್ಯತೆಯ ಅಭಾವವೋ ಅಥವಾ ನಮ್ಮದೆನ್ನುವುದು, ದೊಡ್ಡದಲ್ಲವೆಂದು ಪರಿಭಾವಿಸುವ ಪ್ರವೃತ್ತಿಯೋ ನಮ್ಮಲ್ಲಿ ಬೆಳೆದು ಮನೆಮಾಡಿಕೊಂಡಿದೆಯೆಂದು ಖೇದದಿಂದ ಹೇಳಬಹುದು.

ಈ ಎಲ್ಲ ಜೀವಪರ ಅಂಶಗಳನ್ನು ಗಮನಿಸಿದಾಗ ಬಸವಣ್ಣ ಹೆಂಗರುಳಿನ ಸ್ವಭಾವದ ವ್ಯಕ್ತಿ ಎನ್ನುವುದು ಮನದಟ್ಟಾಗುತ್ತದೆ. ಆದ್ದರಿಂದಲೇ ನೊಂದವರ, ಬೆಂದವರ ಪರನಿಂತು ನವ ಸಮಾಜ ನಿರ್ಮಾಣ ಮಾಡಿದರು. ಅವರು ಆರಂಭಿಸಿದ ದಲಿತ ಚಳವಳಿ ಕರ್ನಾಟಕದಾದ್ಯಂತ ಹಬ್ಬಲಿಲ್ಲ. ಆ ಕ್ರಾಂತಿ ಜ್ಯೋತಿ ಅಲ್ಲಿಗೇ ತಣ್ಣಗಾಯಿತು. ಅತ್ಯಂತ ತೀವ್ರ ಚಳವಳಿಯಾಗಿ ಚಲನೆ ಸ್ವರೂಪದಲ್ಲಿದ್ದ ಆ ಚಳವಳಿ ಸ್ಥಾವರ ರೂಪಿಯಾಯಿತು. ಚಳವಳಿಯ ಮೂಲ ಉದ್ದೇಶವೆನಿಸಿದ್ದ ಜಾತ್ಯಾತೀತ ಭಾವನೆಯನ್ನು ಮೂಲೆ ಗುಂಪು ಮಾಡಿತು. ಆದರೆ, ಬಸವಣ್ಣ ನಿರ್ಮಿಸ ಬಯಸಿದ ಸಮ ಸಮಾಜದ ಕನಸು ಇಂದಿಗೂ ನಮಗೆ ಮಾದರಿಯಾಗಿದೆ. ಅವರು ನಿರ್ಮಿಸಬಯಸಿದ ಸಮಾಜ ಶೋಷಣೆ ರಹಿತ, ಜಾತ್ಯತೀತ, ಲಿಂಗ ತಾರತಮ್ಯ ರಹಿತ, ಮೌಢ್ಯ ರಹಿತವಾದುದಾಗಿದೆ. ನಿಜಕ್ಕೂ ಅವರು ಸಮಾನತೆಯ ಹಂದರದ ಮೇಲೆ ನವ ಸಮಾಜವನ್ನು ನಿರ್ಮಿಸುವ ಪಣತೊಟ್ಟು ಕಾರ್ಯ ಪ್ರವೃತ್ತರಾಗಿದ್ದರು, ಮತ್ತು ಆ ಮಾರ್ಗದಲ್ಲಿ ಮುನ್ನಡೆದರು. ಆದರೆ ಅಂಥ ಸಮಾಜವಿನ್ನೂ ನಿರ್ಮಾಣವಾಗಿಲ್ಲ. ಅಂಥ ಸಮಾಜ ನಿರ್ಮಾಣದ ಹೊಣೆ ಇಂದು ನಮ್ಮ-ನಿಮ್ಮ ಮೇಲಿದೆಯಲ್ಲವೇ? ಅಂತಹ ಸಮಾಜ ನಿರ್ಮಾಣವಾದಲ್ಲಿ ನಾವು ನಿಜಕ್ಕೂ ಬಸವಾನುಯಾಯಿಗಳಾಗುವೆವು.

❑

---

೧. ಸಿದ್ಧಲಿಂಗಯ್ಯ (ಲೇ), 'ಅಸ್ಪೃಶ್ಯತೆ ಮತ್ತು ಸಮಾಜದ ಹೊಣೆಗಾರಿಕೆ', ಮೊದಲು ಮಾನವನಾಗು, ಪುಟ ೧೭೫.

೨. ಆರ್.ಎನ್. ನಂದಿ (ಲೇ), 'ವೀರಶೈವ ಚಳವಳಿಯ ಹುಟ್ಟು', ಬಸವಣ್ಣನ ವಚನಗಳು, ಸಾಮಾಜಿಕ ಮುಖಾಮುಖಿ, ಪುಟ ೧೭.

ಬಸವಣ್ಣನವರ ಜಾನಪದ ಪ್ರಜ್ಞೆ

●

ಡಾ. ವೀರಣ್ಣ ದಂಡೆ

'ಬಸವಣ್ಣನವರನ್ನು ಜಾನಪದ ತಜ್ಞ'ರೆಂದು ಅನ್ನಬಹುದು. ಎಂಬ ಹಿರಿಯರೊಬ್ಬರ ಅಭಿಪ್ರಾಯವನ್ನು ತರುಣರೊಬ್ಬರು ಲೇವಡಿಮಾಡಿ ಬರೆದುದನ್ನು ಒಂದು ಕಡೆ ಓದಿದೆ. ಮಧುರಚೆನ್ನ, ಸಿಂಪಿ ಲಿಂಗಣ್ಣ, ಡಾ. ಎಂ.ಎಸ್. ಸುಂಕಾಪುರ, ಡಾ. ಗದ್ದಗಿಮಠ ಮುಂತಾದವರು ತಮ್ಮ ಕಾಲದ 'ಜಾನಪದ ತಜ್ಞ'ರೆ. ಅಂದಂದಿಗೆ ಸಾಧ್ಯವಾದ ಜಾನಪದ ಅಭ್ಯಾಸವನ್ನು ಸಾಧ್ಯವಾದಷ್ಟೂ ವೈಜ್ಞಾನಿಕವಾಗಿ ಮುಂದುವರೆಸಿದವರು ಇವರು. ಈ ಅರ್ಥದಲ್ಲಿ ಬಸವಣ್ಣನೂ ತನ್ನ ಕಾಲದ ಅತ್ಯಂತ ಪ್ರಾಯೋಗಿಕ ದೃಷ್ಟಿಯ 'ಜಾನಪದ ತಜ್ಞ'ನೇ.

ಬಸವಣ್ಣನವರಂಥ ಪ್ರತಿಭಾವಂತರು–ಏಕಕಾಲಕ್ಕೆ ಹಲವಾರು ಕ್ಷೇತ್ರಗಳಲ್ಲಿ ಪ್ರಮುಖರಾಗಿ ಕಾಣುತ್ತಾರೆ. ಆತ ಒಂದು ಮುಖದಿಂದ ಧಾರ್ಮಿಕ ಮಹಾಪುರುಷನಾಗಿ ನಿಲ್ಲುವುದು ನಮಗೆಲ್ಲ ತಿಳಿದ ವಿಷಯ. ಅಷ್ಟಕ್ಕೇ ಬಸವಣ್ಣ ಮಾಡಿದುದೆಲ್ಲ ಕೇವಲ ಧರ್ಮಕ್ಕಾಗಿ ಎಂದರೆ ತಪ್ಪಾಗುತ್ತದೆ. ಆತನ ಎಲ್ಲ ವಚನಗಳಲ್ಲಿ ಕೇವಲ ವೀರಶೈವ ಧರ್ಮ ಮತ್ತು ತತ್ವಗಳ ಪ್ರತಿಪಾದನೆಯನ್ನೇ ಕಂಡರೆ, ಬಸವಣ್ಣನನ್ನು ನಾವು ತೀರ ಕುಬ್ಜನನ್ನಾಗಿಸಿದಂತಾಗುತ್ತದೆ.

ಬಸವಣ್ಣನವರು ಜಾನಪದ ವಸ್ತುವನ್ನು ಸಂಗ್ರಹಿಸಿ ಪ್ರಕಟಿಸಬೇಕಿತ್ತು ಎಂದು ಭಾವಿಸುವುದು ತಪ್ಪಾಗುತ್ತದೆ. ಕೇವಲ ಜಾನಪದ ವಸ್ತುವಿನ ಸಂಗ್ರಹಣೆ ಮಾಡಿದರೆ ಸಾಲದು. ಆ ವಸ್ತುವಿನ ವಿಶ್ಲೇಷಣೆ ನಡೆದು, ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಸಂದರ್ಶಿಸಿ, ಜನಸಾಮಾನ್ಯರಿಗೆ ತಿಳಿಹೇಳುವ ಕೆಲಸವೂ ಅವಶ್ಯವಾಗಿ ನಡೆಯಬೇಕು. ಇದರಲ್ಲಿಯೇ ಜಾನಪದ ಅಭ್ಯಾಸದ ಮತ್ತು ಜಾನಪದ ತಜ್ಞನ ಸಾರ್ಥಕತೆ ಇದೆ. ಈ ಅರ್ಥದಲ್ಲಿ ಬಸವಣ್ಣ ಜಾನಪದ ತಜ್ಞರಿಗೆ ಒಬ್ಬ ಆದರ್ಶನಾಗಿ ನಿಲ್ಲುತ್ತಾನೆ.

ಏಕೆಂದರೆ ಆತ ತನಗೆ ತಿಳಿದುದನ್ನು ನೇರವಾಗಿ ಸಾಮಾನ್ಯರ ಮೇಲೆ ಹೇರಲು ಹೋಗುವುದಿಲ್ಲ ಅಥವಾ ತನ್ನ ಅಭಿಪ್ರಾಯಗಳನ್ನು ನೇರವಾಗಿ ಹೇಳಿ ಸುಮ್ಮನೆ ಕೂಡುವುದಿಲ್ಲ. ಬದಲಾಗಿ ಆತ ಜನಸಾಮಾನ್ಯರ ಜೀವನವನ್ನು ಕೂಲಂಕುಷವಾಗಿ ಅಭ್ಯಾಸ ಮಾಡುತ್ತಾನೆ. ಸಂಗತಿಗಳನ್ನು ವಿವರಿಸುತ್ತಾನೆ, ವಿಶ್ಲೇಷಿಸುತ್ತಾನೆ, ಅವರಲ್ಲಿ ಬದುಕಿಗೆ ಅವಶ್ಯವೆನಿಸುವದು ಯಾವುದು, ಅನವಶ್ಯಕವಾದುದು ಯಾವುದು ಎಂಬುದನ್ನು ತಿಳಿಹೇಳುತ್ತಾನೆ. ಹೀಗೆ ಹೇಳುವಲ್ಲಿ ಆತ ಬಳಸುವ ಭಾಷೆ ಜನ ಸಾಮಾನ್ಯರಿಗೆ ತಿಳಿಯಲಿ ಎನ್ನುವ ಎಚ್ಚರಿಕೆಯನ್ನು

ವಹಿಸಿರುತ್ತಾನೆ. ಹೀಗೆ ವಸ್ತು ಸಮಷ್ಟಿಯಿಂದ ಆಯ್ದುಕೊಂಡದ್ದು, ಭಾಷೆ ಜನಸಾಮಾನ್ಯರ ಬಳಕೆಯಲ್ಲಿರುವಂತಹದು. ಉದ್ದೇಶ ಜನಸಾಮಾನ್ಯರ ಬದುಕು ಹಸನು ಮಾಡುವುದು, ಹೇಳಿದ್ದೂ ಜನ ಸಾಮಾನ್ಯರಿಗಾಗಿ. ವ್ಯಷ್ಟಿಗಿಂತಲೂ ಸಮಷ್ಟಿ ಅಂಶಗಳೇ ಬಸವಣ್ಣನಲ್ಲಿ ಹೆಚ್ಚು ಕಾಣುವುದರಿಂದ ಇಂದಿನ ಜಾನಪದ ತಜ್ಞನೊಬ್ಬನು ಬಸವಣ್ಣನವರ ವಚನಗಳನ್ನು ಯಾವ ಮಗ್ಗುಲಿನಿಂದ ಪರೀಕ್ಷಿಸಿದರೂ ಅವನಿಗೆ ನಿರಾಶೆ ಕಾದಿರಲಾರದು.

ಅವರ ಬಹಳಷ್ಟು ವಚನಗಳು ದೃಶ್ಯಮಯವಾಗಿವೆ. ವೈಯಕ್ತಿಕ ಒತ್ತಡಗಳಿಂದ ಸೃಷ್ಟಿಗೊಂಡ ವಚನಗಳಲ್ಲೂ ನಿದರ್ಶನಗಳು ತೂರಿಬರುತ್ತವೆ. ನುಡಿಗಟ್ಟು, ಗಾದೆಗಳಂತೂ ನಿರರ್ಗಳ. ಸಹಜ ಮತ್ತು ಸಮಂಜಸ ಆವರಣದಲ್ಲಿ ಬಳಕೆಯಾಗುತ್ತವೆ. ಮೂಢನಂಬುಗೆ, ಅಂಧಾಚರಣೆಗಳನ್ನು ಬಹುಶಃ ಬಸವಣ್ಣನಷ್ಟು ಸೂಕ್ಷ್ಮವಾಗಿ ಗಮನಿಸಿದವರು ವಿರಳವೆಂದೇ ಹೇಳಬೇಕು.

ಎಲ್ಲಾ ವಚನಕಾರರಂತೆ ಬಸವಣ್ಣನಲ್ಲೂ ತನ್ನ ಆರಾಧ್ಯ ದೈವವನ್ನು ಅಂಕಿತವನ್ನಾಗಿ ಬಳಸುವುದನ್ನು ಕಾಣುತ್ತೇವೆ. ಮೂಲತಃ ಈ ತಂತ್ರವನ್ನು ಜನಪದ ಕಾವ್ಯದಲ್ಲಿ ಸಾರ್ವತ್ರಿಕವಾಗಿ ಕಾಣುತ್ತೇವೆ. ಒಬ್ಬ ಜನಪದ ಕವಿ ಅಥವಾ ಹಾಡುಗಾರ ಕೊನೆಗೆ ತನ್ನ ಆರಾಧ್ಯ ದೈವದ ಹೆಸರು ಉಲ್ಲೇಖಿಸುತ್ತಾನೆ. ಅದು ಅವನ ಅಂಕಿತನಾಮವಾಗುವುದರೊಂದಿಗೆ, ಆ ಆರಾಧ್ಯ ದೈವಕ್ಕೂ, ಸರ್ವಶಕ್ತನಾದ ಶಿವನಿಗೂ ತಾದಾತ್ಮ್ಯಗೊಳಿಸಿರುತ್ತಾರೆ. ಆರಾಧ್ಯ ದೈವದ ಹೆಸರೆಂದರೆ–ಶಿವನ ಹೆಸರು ಪಠಿಸಿದಂತೆ ಎಂಬ ಭಾವನೆ ಅಲ್ಲಿರುತ್ತದೆ. ಹೀಗೆ ಆರಾಧ್ಯ ದೈವದ ಮೂಲಕ ಶಿವನನ್ನು ಸ್ಮರಿಸುವ ಪರಿಯಿದು.

ವಚನಕಾರರು, ಸ್ಥಾವರವನ್ನು ನಂಬುವುದಿಲ್ಲ. ಆದರೆ ಅವರವರ ವಚನಾಂಕಿತ ಗಮನಿಸಿದರೆ ಅವೆಲ್ಲ ಅಲ್ಲಲ್ಲಿಯ ಸ್ಥಳೀಯ ಸ್ಥಾವರಗಳಾಗಿವೆ. ಅಂದರೆ ಮೊದಲಿಗೆ ತಮ್ಮ ಆರಾಧ್ಯ ದೈವವಾಗಿದ್ದ–ಕೂಡಲಸಂಗಮದೇವ, ಗುಹೇಶ್ವರ, ಚೆನ್ನಮಲ್ಲಿಕಾರ್ಜುನ ಮುಂತಾದವರೇ ಅವರವರಿಗೆ ಶಿವನನ್ನು ಕಾಣುವ ಮಾಧ್ಯಮಗಳಾಗಿ ಪರಿವರ್ತನೆ ಹೊಂದಿದವು.

ತಾವೆಲ್ಲ ಆಮೇಲೆ ವೈಜ್ಞಾನಿಕವಾಗಿ ದೇವರ ಅಸ್ತಿತ್ವವನ್ನು ಪ್ರಮೇಯಗಳ ಮೂಲಕ ಸ್ಪಷ್ಟಪಡಿಸಿದರೂ, ಅವರಾರೂ ತಮ್ಮ ಪೂರ್ವದ ದೈವಗಳ ಹೆಸರುಗಳನ್ನು ಬಿಡಲಿಲ್ಲ ವೆಂಬುದನ್ನು ಗಮನಿಸಬೇಕು. ಇದು ಎಲ್ಲರಂತೆ ಬಸವಣ್ಣನಲ್ಲೂ ಕಂಡು ಬರುವ ಜಾನಪದ ಪ್ರಜ್ಞೆಯ ಪ್ರತೀಕವಾಗಿದೆ.

ಬಸವಣ್ಣನವರಲ್ಲಿ ಕಾಣುವ ಜಾನಪದ ಪ್ರಜ್ಞೆಗೆ ಸಾಕ್ಷಿಯಾಗಿ ಅವರ ಒಂದು ವಚನಕ್ಕೂ, ಒಂದು ಜನಪದ ನುಡಿಗೂ ಎಷ್ಟೊಂದು ಹೋಲಿಕೆ ಇದೆ ಎಂಬುದನ್ನು ತೋರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಇದೊಂದು ಉದಾಹರಣೆ ಮಾತ್ರ, ಶೋಧಿಸಿ ತೆಗೆದರೆ– ಇನ್ನೂ ಅಗಾಧವಾದ ಜಾನಪದ ಸಂಗತಿಗಳು ಬಸವಣ್ಣನವರ ವಚನಗಳಲ್ಲಿ ದೊರಕಬಹುದಾಗಿದೆ.

ವಚನ :

ಧರೆಯ ಮೇಲೊಂದು ಹಿರಿದಪ್ಪ ಅಂಗಡಿಯನ್ನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ
ಒಮ್ಮನವಾದರೆ ಒಡನೆ ನುಡಿವನು
ಇಮ್ಮನವಾದರೆ ನುಡಿಯನು

ಕಾಣೆಯ ಸೋಲ ಅರ್ಧಕಾಣೆಯ ಗೆಲ್ಲ
ಜಾಣ ನೋಡವ್ವ ನಮ್ಮ ಕೂಡಲ ಸಂಗಮದೇವ

ಜನಪದ ನುಡಿ:

ಶಂಭುಲಿಂಗ ಸಾವುಕಾರ ಬಿಂಬ ಎಂಬ ಶಾರದಲ್ಲಿ
ನಂಬುಗಿಟ್ಟು ಕಟ್ಟುಶಾನ ಅಂಗಡಿಯೊ।
ಗುಂಬಗ್ಯಾನಿ ಅಂಗಡಿ ತುಂಬ ತರತರದ ಗೊಂಬಿಗಳು
ಗೊಂಬಿ ಮ್ಯಾಲ ಗೊಂಬಿ ಜಂಬುನೀಲ್ಗನ್ನಡಿಯೊ।

ಶಿವನು ನಮ್ಮ ದಿನನಿತ್ಯದ ವ್ಯವಹಾರ – ನಾವು ಗೈಯುವ ಪಾಪ–ಪುಣ್ಯಗಳನ್ನು ಈಕ್ಷಿಸುತ್ತಲಿದ್ದಾನೆ. ಅವನು ನಿಷ್ಪಕ್ಷಪಾತದಿಂದ ನ್ಯಾಯ–ಅನ್ಯಾಯವನ್ನು, ಧರ್ಮ ಅಧರ್ಮವನ್ನು ಲೆಕ್ಕಿಸುತ್ತಿರುವನು ಎಂಬುದನ್ನು ಒಬ್ಬ ಬಣಜಿಗನ ವ್ಯಕ್ತಿತ್ವ ಹಾಗೂ ಆತನ ಅಂಗಡಿಯ ವಾಸ್ತವಿಕವಾದ ಸುಂದರ ಚಿತ್ರಣವೊಂದನ್ನು ಕಲ್ಪಿಸಿ, ಸಾದೃಶ್ಯ ಕೊಟ್ಟು ವಿಷಯವನ್ನು ಸ್ಪಷ್ಟಪಡಿಸಲು ಈ ಮೇಲಿನ ವಚನ ಹಾಗೂ ಜನಪದ ಹಾಡಿನಲ್ಲಿ ಪ್ರಯತ್ನಿಸಲಾಗಿದೆ.

ಇಲ್ಲಿ ಬರುವ 'ಮಾದೇವಸೆಟ್ಟಿ', 'ಶಂಬುಲಿಂಗ ಸಾವುಕಾರ' ಎರಡೂ ಶಿವನನ್ನೇ ಕುರಿತಾಡಿದ ಮಾತುಗಳು. 'ಧರೆ', 'ಬಿಂಬ' ಎಂಬ 'ಶಾರ' ಸೃಷ್ಟಿ–ಭೂಮಿಯನ್ನು ನಿರ್ದೇಶಿಸುತ್ತವೆ. ಮನುಷ್ಯನ ದೇಹವನ್ನು 'ಅಂಗಡಿಗೆ' ಹೋಲಿಸಲಾಗಿದೆ. ದೇಹದ ಅವಯವಗಳನ್ನು 'ಗೊಂಬೆ'ಗಳೆಂದೂ, ಕಣ್ಣುಗಳನ್ನು 'ಜಂಬುನೀಲ್ಗನ್ನಡಿ'ಯೆಂದೂ ಸುಂದರವಾದ ಕಲ್ಪನೆಯನ್ನು ಮಾಡಲಾಗಿದೆ. ಈ ಅಂಗಡಿಯ ಒಡೆಯ ಶಿವನು. ಅವನು ಆತ್ಮರೂಪನಾಗಿ ದೇಹವೆಂಬ ಅಂಗಡಿಯ ಗದ್ದುಗೆಯ ಮೇಲೆ ಕುಳಿತುಕೊಂಡು, ನಮ್ಮ ಪಾಪ–ಪುಣ್ಯಗಳನ್ನು ತನ್ನದೇ ಆದ ಪಾಸಂಗಿನಲ್ಲಿಟ್ಟು ಅಳೆಯುತ್ತಿರುವನು. ಶಿವನಲ್ಲಿಟ್ಟ ಆತ್ಮವಿಶ್ವಾಸ–ನಂಬುಗೆಗಳೇ ನಮ್ಮನ್ನು ಕ್ಷಮಾರ್ಹರನ್ನಾಗಿಸಬಲ್ಲವು. ಆತ ನಿಷ್ಠುರಿ, ನಿಷ್ಪಕ್ಷಪಾತಿ. ಶಿವನು 'ಜಾಣ'ನು. 'ಗುಂಬಗ್ಯಾನಿ', ತರತರದ ಗೊಂಬೆಗಳಿಂದ ತುಂಬಿ ಸುಂದರವಾಗಿ ಕಾಣುವ 'ಅಂಗಡಿ'ಗೆ ಹೊಳೆಯುವ 'ನೀಲ್ಗನ್ನಡಿ'ಗಳಿಂದ ಶೃಂಗರಿಸಿ ಆಕರ್ಷಣೀಯವಾಗುವಂತೆ ಮಾಡಿದ್ದಾನೆ.

'ಮಾದೇವಶೆಟ್ಟಿ', 'ಶಂಭುಲಿಂಗ ಸಾವುಕಾರ' ಈ ಎರಡೂ ಪದಗಳು ಸಮಂಜಸವಾಗಿ, ಅಷ್ಟೇ ಜಾಗರೂಕತೆಯಿಂದ ಉಪಯೋಗಿಸಿದ ಪದಗಳು. ಶಿವನು ಸುಶಿಕ್ಷಿತರ ಬಾಯಲ್ಲಿ 'ಮಹಾದೇವ'ನಾದರೆ, ನಿರಕ್ಷಿರಗಳ ಮಾತಿನಲ್ಲಿ 'ಶಂಭುಲಿಂಗ'ನಾಗಿದ್ದಾನೆ. ಮಹಾದೇವ 'ಜಾಣ'ನಾದರೆ, ಶಂಭುಲಿಂಗ 'ಗುಂಬಗ್ಯಾನಿ'. ಆತ 'ಸೆಟ್ಟಿ', ಈಗ 'ಸಾವುಕಾರ', 'ಸೆಟ್ಟಿ', 'ಸಾವುಕಾರ' ಇವು ಶಿವನ ಶಾಶ್ವತ ಶ್ರೀಮಂತಿಕೆಯನ್ನು ವ್ಯಕ್ತಪಡಿಸುತ್ತವೆ. 'ಜಾಣ', 'ಗುಂಬಗ್ಯಾನಿ' ಶಿವನ ಸರ್ವಜ್ಞತ್ವವನ್ನು ತೋರ್ಪಡಿಸುತ್ತವೆ. ಹೀಗೆ ಭಾಷೆ ಬಳಕೆಯಾಗುವ ರೀತಿಯಲ್ಲಿ ಔಚಿತ್ಯಪೂರ್ಣವಾದ ಪ್ರಜ್ಞೆಯನ್ನು ಎರಡೂ ನುಡಿಗಳಲ್ಲಿಯೂ ಕಾಣುತ್ತೇವೆ.

'ಧರೆ' ಎಂಬ ಸಾಮಾನ್ಯ ಪದ ಬಳಸಿ ವಚನ ನಿರೂಪಣೆಗೊಂಡಿದೆ. ಜನಪದ ಕವಿ ಅದನ್ನು ಅಲಂಕಾರಿಕವಾಗಿ ಹೇಳಿದ್ದಾನೆ. ಈ ಸೃಷ್ಟಿ – ಭೂಮಿಯನ್ನು 'ಶಾರ' (ಪಟ್ಟಣ) ಎಂದು ಕಲ್ಪಿಸುವುದಷ್ಟೇ ಅಲ್ಲ, 'ಬಿಂಬ ಎಂಬ ಶಾರ' ಎಂದುದರಿಂದ ಧರೆಯ ನಶ್ವರತೆಯನ್ನು

ಸಾರಲಾಗಿದೆ. ಈ ಧರೆ (ಸೃಷ್ಟಿ) ಕೇವಲ ಛಾಯೆ ಎಂದು ಹೇಳುವಲ್ಲಿ 'ಪ್ರಪಂಚದಲ್ಲಿಯ ವಸ್ತುಗಳೆಲ್ಲ ವಾಸ್ತವಿಕವಾಗಿ ಸತ್ಯಸಂಗತಿಗಳಾಗಿರದೆ, ದೇವನಿರ್ಮಿತವಾದ ಸ್ವರ್ಗೀಯ ವಸ್ತುಸಂಗತಿಗಳಿಗೆ ಪ್ರತಿಛಾಯೆ' ಎನ್ನುವ ಪ್ಲೇಟೋನ ನುಡಿಯನ್ನು ಇಲ್ಲಿ ನೆನೆಯಬಹುದು. ಈ ರೀತಿ ಕಲ್ಪನೆ ಸೊಗಸಾಗಿ ಚಿತ್ರಣ ಕಳೆಗೊಂಡಿದೆ.

ವಚನದ 'ಹಿರಿದಪ್ಪ ಅಂಗಡಿಯನ್ನಿಕ್ಕಿ' ಎನ್ನುವ ಮಾತಿನಲ್ಲಿ ಅಂಗದ ಮಹತ್ವವನ್ನು ಹೇಳಲಾಗಿದೆ. 'ನಂಬಿಗಿಟ್ಟು ಕಟ್ಟುಶಾನ ಅಂಗಡಿಯೊ' ಎಂಬ ಜನಪದ ನುಡಿಯಲ್ಲಿ ಅಂಗದ ಅಸ್ತಿತ್ವದೊಂದಿಗೆ ಅದರ 'ಆಧಾರಶಕ್ತಿ'ಯನ್ನೂ ಹೇಳಲಾಗಿದೆ. 'ನಂಬಿಗಿ' ಎನ್ನುವ ಮೂಲ ಸೂತ್ರದ ಮೇಲೆ ಈ ಅಂಗಡಿ ನಿಂತಿದೆ. ಈ ಸೂತ್ರ ತಪ್ಪಿದಂದು ಅಂಗಡಿ ಉರುಳುವುದು ನಿರ್ಧಾರದ ಮಾತು. ನಾವು ಒಳ್ಳೆಯವರಿರುವವರೆಗೆ ನಮಗೆಲ್ಲರೂ ಒಳ್ಳೆಯವರು. ದೇವರನ್ನು ಕಾಣಲು ದೃಢನಂಬಿಗೆಯೇ ಮೂಲ. ಅವಿಶ್ವಾಸ, ಅಪನಂಬಿಕೆಗಳು ತಲೆದೋರಿದಂದು ನಾವು ಜೀವಿಸಿರುವುದೇ ದುಸ್ತರವಾಗುತ್ತದೆ. ಶಿವನ ಸಾನ್ನಿಧ್ಯವಂತೂ ಸಾಧ್ಯವಿಲ್ಲವಾಗುತ್ತದೆ. ನಮಗಂದೇ ಸೋಲುಂಟಾದಂತೆ.

ಪತ್ ಹ್ವಾದರ ಹೊತ್ತೇ ಹೋಯ್ತು
ಮಾತ ಪಿತ ಸತ್ತಂಗಾಯ್ತು
ಇಸ್ವಾಸ ಹ್ವಾದರ ಇಜಯ ಹೋಯ್ತು
ಈಶ್ವರ ನಿನ್ನ ಮನಿ ಎರವಾಯ್ತು।

ಎಂದು ಜನಪದ ಕವಿಯೊಬ್ಬ ವಿಶ್ವಾಸದ ಮಹತ್ವವನ್ನು, ಅದು ಕಳೆದುಕೊಂಡಾಗ ಉಂಟಾಗುವ ಸ್ಥಿತಿಯನ್ನು ಹೃದಯಂಗಮವಾಗಿ ಹಾಡಿದ್ದಾನೆ.

ಮೋಹಕವಾದ 'ನೀಲಿ ಬಣ್ಣದ ಕಣ್ಣು'ಗಳಿಗೆ 'ಜಂಬು ನೀಲ್ಗನ್ನಡಿ' ಎಂದು ಕೊಡುವ ಸಾದೃಶ್ಯ ಎಷ್ಟೊಂದು ಸಮಂಜಸವಾಗಿದೆ ಎಂಬುದನ್ನು ನೋಡಬೇಕು. 'ಜಂಬುನೀಲ' ಬಣ್ಣದ ಹಾಗೂ ಆಕಾರದ ಕಣ್ಣುಗಳು, ಹೊಳೆಯುವ 'ಕನ್ನಡಿ'ಗಳೂ ಹೌದು. ಈ 'ಕನ್ನಡಿಯಿಂದ' 'ಕನ್ನಡಿಯಲ್ಲಿಯೇ' ನಾವು ಒಂದು ಆಕಾರವನ್ನು ಕಾಣುವುದು. ಜನಪದ ಕವಿ ತಾನು ಅರಿತ ಸಾಮಾನ್ಯ ವಸ್ತುಗಳನ್ನೇ ಕಾವ್ಯದಲ್ಲಿ ತಂದು ಸಮರ್ಥವಾಗಿ ಚಿತ್ರಿಸಿದ್ದಾನೆನ್ನಬಹುದು.

ಇಂತಹದೇ ಇನ್ನೊಂದು ಹೋಲಿಕೆ 'ತರತರದ ಗೊಂಬೆಗಳು', ಅದೆಷ್ಟೋ ಗೊಂಬೆಗಳು ಒಬ್ಬ ಕುಶಲ ಕಲಾಕಾರನಿಂದಲೇ ನಿರ್ಮಿಸಲ್ಪಟ್ಟರೂ ಅವು ಒಂದರಂತೆ ಒಂದಿರದೆ 'ತರತರದವಾಗಿರುತ್ತದೆ.' ಅಂತೆಯೇ ದೇಹದ ಅವಯವಗಳೂ ಕೂಡ. ಕೀಲುಗೊಂಬೆಗಳ ಮಾಟ, ಚೆಲುವು, ಮಣಿತ–ಕುಣಿತಗಳನ್ನು ಕಂಡ ಕವಿಗೆ, ಅವಯವಗಳ ಮಾಟ–ಮಣಿತಗಳಲ್ಲಿ ಸಾಮ್ಯ ಕಂಡುಬಂದಿರಬೇಕು. ಸೂತ್ರದ ಗೊಂಬೆಗಳು ಸೂತ್ರಧಾರನ ಇಚ್ಛೆಯ ಮೇರೆಗೆ ಆತನ ಕೈಚಳಕದಿಂದ ಕುಣಿಯುವಂತಹವುಗಳು. ಗೊಂಬೆಗಳ ಕುಣಿತಕ್ಕೆ ಸೂತ್ರಧಾರ 'ಚೈತನ್ಯಶಕ್ತಿ'. ಅವಯವಗಳ ಚಲನವಲನವು ನಮ್ಮ ಇಚ್ಛೆಯನ್ನವಲಂಬಿಸದೆ. ನಾವು ಆಡಿಸಿದಂತೆ ಆಡುವ ಗೊಂಬೆಗಳಿವು. ಈ ರೀತಿ ತನಗೆ ಹೋಲಿಕೆಯಲ್ಲಿ ಚಂದ ಕಾಣಿಸಿದ ಎರಡು ವಸ್ತುಗಳನ್ನು ಜನಪದ ಕವಿ ಇಲ್ಲಿ ಹೊಂದಿಸಿದ್ದಾನೆ. ಹೀಗೆ ಈ ನುಡಿಗಳಲ್ಲಿ ಬರುವ ಸಾದೃಶ್ಯಗಳು ಅನುಭವದಲ್ಲಿ ಬಂದುಹೋದಂತಹವುಗಳು, ತೀರ ವಾಸ್ತವಿಕವಾದಂತಹವು ಗಳಾಗಿವೆ.

ಶಿವನು ದೇಹವೆಂಬ ಈ ಅಂಗಡಿಯಲ್ಲಿ ಮಾಲಿಕನಾಗಿ ಕುಳಿತುಕೊಂಡು ವ್ಯವಹಾರ ಮಾಡುತ್ತಿದ್ದಾನೆ. 'ಮಹಾದೇವ ಸೆಟ್ಟಿ'ಯ ನಿಷ್ಠುರತೆ ಹೇಳುವಲ್ಲಿ ಬಸವಣ್ಣನವರು ಶಿವನ ವ್ಯಕ್ತಿತ್ವವನ್ನು ಎರಡ್ಮೂರು ಮಾತುಗಳಲ್ಲಿಯೇ ಸಮರ್ಥವಾಗಿ ವ್ಯಕ್ತಪಡಿಸಿದ್ದಾರೆ. 'ಸೆಟ್ಟಿ' ಒಮ್ಮನಸ್ಸಿನಿಂದ ಮಾತನಾಡಿಸಿದರೆ ಮಾತ್ರ ಮಾತನಾಡುವನು, ನಮ್ಮೊಡನೆ ವ್ಯವಹರಿಸುವನು. ನಮ್ಮ ಮಾತುಗಳಲ್ಲಿ ಏರುಪೇರುಗಳಾದರೆ ಆತ ಕಿವಿಗೊಡಲಾರ. ಒಂದು ದುಡ್ಡು ಮೋಸದಿಂದ ಗಳಿಸುವುದಾಗಲಿ, ಮರವಿನಿಂದ ಅರ್ಧಕಾಸು ಹಾನಿಮಾಡಿಕೊಳ್ಳುವುದಾಗಲಿ ಎಂದೆಂದೂ ಮಾಡದ 'ಜಾಣಸೆಟ್ಟಿ' ಆತ. ನಾವು ಮೋಸ–ವಂಚನೆಗಳಿಂದ ದೂರಾಗಿ, 'ನಿರ್ಮಲ'ರಾಗಿ ನಿರಾಳ ಮನಸ್ಸಿನಿಂದ 'ಒಮ್ಮೆ' ಕೂಗಿದರೆ ಸಾಕು, ಶಿವ 'ಓ' ಕೊಟ್ಟು ಬಿಡುವನು. ಮಾಯೆಗೆ ತುತ್ತಾದವರಿಂದ ಶಿವನು ಬಲುದೂರ ಉಳಿಯುತ್ತಾನೆ. ಅವನಲ್ಲಿ ಜಾತಿ, ಮತ, ಪಂಥಗಳ ಭೇದವಿಲ್ಲ. ಸಣ್ಣವರು–ದೊಡ್ಡವರು, ಗಂಡು–ಹೆಣ್ಣು ಎಂಬ ತಾರತಮ್ಯವಿಲ್ಲ. ಅವನು ಒಬ್ಬರನ್ನು ಮೋಸಗೊಳಿಸುವುದೂ ಇಲ್ಲ; ತಾನು ಮೋಸ ಹೋಗುವುದೂ ಇಲ್ಲ. ಅಂತಲೇ ಆತ 'ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ' ಎಂದು ಬಸವಣ್ಣನವರು ಮನಮೆಚ್ಚಿ ನುಡಿದಿದ್ದಾರೆ.

ಜನಪದ ಕವಿ ಶಿವನ ವ್ಯಕ್ತಿತ್ವದ ಬಗ್ಗೆ 'ಗುಂಬಗ್ಯಾನಿ' ಎನ್ನುವ ಒಂದೇ ಒಂದು ಮಾತನ್ನು ಆಡಿದ್ದಾನೆ. 'ಗುಂಬಗ್ಯಾನಿ' ಎಂದರೆ 'ಆಳವಾದ ಜ್ಞಾನವುಳ್ಳವ', 'ಎಲ್ಲ ಬಲ್ಲವ' 'ಸರ್ವಜ್ಞ' ಎಂದು ಅರ್ಥವಾಗುತ್ತದೆ. ಅದಕ್ಕಾಗಿ 'ಗುಂಬಗ್ಯಾನಿ' ಎನ್ನುವುದು ಬಸವಣ್ಣನವರು ಹೇಳಿದ 'ಜ್ಞಾನ' ಪದದ ಅರ್ಥಶಕ್ತಿ ಪಡೆದು, ಶಿವನ ಇಡೀ ವ್ಯಕ್ತಿತ್ವವನ್ನೇ ದರ್ಶಿಸುವ ಶಕ್ತಿ ಪಡೆದಂತಿದೆ.

ಇಷ್ಟೆಲ್ಲವನ್ನು ನೋಡಿದಾಗ ಈ ಎರಡೂ ನುಡಿಗಳು ಒಂದಕ್ಕೊಂದು ಪ್ರಭಾವಿತವಾದಂತೆ ಭಾಸವಾಗುತ್ತದೆ. ವಚನದಲ್ಲಿ ಶಿವನ ವ್ಯಕ್ತಿತ್ವವನ್ನು ಚೆನ್ನಾಗಿ ಸಮರ್ಥಿಸಲಾಗಿದೆ. ಜನಪದ ಹಾಡಿನಲ್ಲಿ ಶಿವನ ವ್ಯಕ್ತಿತ್ವ ನಿರೂಪಣೆಯೊಂದಿಗೆ 'ಅಂಗಡಿ'ಯ (ದೇಹದ) ಸುಂದರ ಪರಿಚಯವಿದೆ. 'ಬಿಂಬ' ಹಾಗೂ 'ನಂಬಿಗಿ' ಪದಪ್ರಯೋಗಗಳಿಂದ ಜನಪದ ನುಡಿಗೊಂದು ಆಧ್ಯಾತ್ಮಿಕ ಹೊಳಹು ಬಂದಿದೆ. ಧರೆಯನ್ನು 'ಬಿಂಬ ಎಂಬ ಶಾರ' ಎಂದು, ದೇಹವನ್ನು 'ನಂಬಿಗಿಟ್ಟು ಕಟ್ಟಿಸಿದ ಅಂಗಡಿ' ಎಂದು, ದೇಹದ ಅವಯವಗಳನ್ನು 'ಗೊಂಬೆ'ಗಳೆಂದು, ಕಣ್ಣುಗಳನ್ನು 'ಜಂಬುನೀಲ್ಗನ್ನಡಿ' ಎಂದು ಊಹಿಸಿದ ಕಲ್ಪನೆಗಳು ಬಹು ಸುಂದರವಾಗಿ ಆಕರ್ಷಣೀಯವಾಗಿದೆ. 'ಶಂಬುಲಿಂಗ ಸಾವುಕಾರ', 'ಗುಂಬಗ್ಯಾನಿ' 'ಜಂಬುನೀಲ್ಗನ್ನಡಿ' ಈ ಪದಗಳು ಶುದ್ಧ ಜಾನಪದ ಶಬ್ದಗಳು. ಹೀಗಾಗಿ ವಚನ ಹಾಗೂ ಜನಪದ ಹಾಡು ಚಿತ್ರಿಸಿದ ಚಿತ್ರಣ, ಅದಕ್ಕಿರುವ ಉದ್ದೇಶ, ಹೊರಹೊಮ್ಮುವ ಭಾವ ಒಂದೇ ಬಗೆಯಾಗಿದೆ.

ಅನಾಮಧೇಯನೊಬ್ಬ ಸೃಷ್ಟಿಸಿದ ಒಂದು ಹಂತಿಹಾಡಿನ ನುಡಿಗೂ, ಬಸವಣ್ಣನವರು ಹೇಳಿದ ಒಂದು ವಚನಕ್ಕೂ ಇಷ್ಟೊಂದು ಸಾಮ್ಯವಿರುವುದು ಆಶ್ಚರ್ಯದ ಸಂಗತಿಯೇ. ಹುಡುಕಿ ತೆಗೆದರೆ ಇಂತಹ ಇನ್ನೂ ಅನೇಕ ಉದಾಹರಣೆಗಳು ದೊರಕಬಹುದಾಗಿದೆ. ಗಾದೆ, ಪಡೆನುಡಿಗಳಂತೂ ಸಾಕಷ್ಟು ಪ್ರಮಾಣದಲ್ಲಿ ಬಸವಣ್ಣನವರು ಬಳಸಿಕೊಂಡಿದ್ದಾರೆ. ಇದು ಬಸವಣ್ಣನಂತಹ ಒಬ್ಬ ವ್ಯಕ್ತಿಗೆ ಹೇಗೆ ಸಾಧ್ಯವಾಯಿತು ಎಂಬುದೊಂದು ಅದ್ಭುತ ಸಂಗತಿಯೆ. ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ. ವೇದೋಪನಿಷತ್ತುಗಳ ಅಭ್ಯಾಸ ಮಾಡಿ, ರಾಜಭಂಡಾರದ ಕರಣಿಕನಾಗಿ, ಕೊನೆಗೆ ಭಂಡಾರದ ಮಂತ್ರಿಯಾಗಿ ಮೆರೆದ – ಒಬ್ಬನಿಗೆ ಜನಪದದ

ಇಷ್ಟೊಂದು ನಿಕಟತೆ ಬಂದುದು, ಪ್ರಭಾವ ಬೀರಿದುದು ಸಾಮಾನ್ಯ ಮಾತೇನಲ್ಲ. ಇವೆಲ್ಲ ಆಗಲು ಬಸವಣ್ಣ ಜನಸಾಮಾನ್ಯರೊಂದಿಗೆ ಒಂದಾಗಿ ಬೆರೆತುದೇ ಕಾರಣವಾಯಿತೆಂದು ಹೇಳಬಹುದಾಗಿದೆ. ರಾಜಾಸ್ಥಾನದಲ್ಲಿ ಒಂದು ಮಹತ್ವದ ಹುದ್ದೆಯಲ್ಲಿದ್ದೂ, ಅಂತ್ಯಜರೊಂದಿಗೆ ಕೂಡಿ ಬೆರೆಯುವ ಗುಣ, ಸಾಹಸ, ಮನಸ್ಸು, ಧೈರ್ಯ ಬಸವಣ್ಣನವರಲ್ಲಿ ಏಕಕಾಲಕ್ಕೆ ತೋರುತ್ತವೆ. ಅದಕ್ಕಾಗಿಯೇ ಅವರಲ್ಲಿ ಅದ್ಭುತವಾದ 'ಜಾನಪದ ಪ್ರಜ್ಞೆ' ಕಾಣಿಸಿಕೊಳ್ಳಲು ಕಾರಣವಾಗಿದೆ.

ಅಷ್ಟೊಂದು ವರುಷಗಳ ಹಿಂದೆ, ಜನರೊಂದಿಗೆ ಬೆರೆತು, ಅವರ ಜನಜೀವನವನ್ನು ಅರಿತುಕೊಂಡು, ಸಾಮಾನ್ಯರಲ್ಲಿ ಕಾಣುವ 'ಸರಿ–ತಪ್ಪು'ಗಳನ್ನು ಹೇಳುವಷ್ಟು ದಟ್ಟ ಪರಿಚಯ ಪಡೆದ ಬಸವಣ್ಣ, ಸಾಮಾನ್ಯರ ವಿಚಾರಗಳನ್ನು ಆಚಾರ, ನಂಬಿಕೆಗಳನ್ನು ಉಲ್ಲೇಖಿಸುವ ಆತ, ತಾವು ನಂಬಿದ ದೇವರ ಕಲ್ಪನೆಯನ್ನೂ ಜನಪದದಿಂದಲೇ ರೂಪುಗೊಳಿಸಿಕೊಂಡಂತೆ ತೋರುತ್ತದೆ. ಹೀಗೆ ಎಲ್ಲಂದದಲ್ಲೂ ಜಾನಪದ ಪ್ರಭಾವಕ್ಕೆ ಒಳಗಾಗಿ, ಅದರಲ್ಲಿ ಸರಿಕಂಡುದನ್ನು ಬಳಸಿಕೊಂಡ ಬಸವಣ್ಣನವರಲ್ಲಿ 'ಜಾನಪದ ಪ್ರಜ್ಞೆ' ಹಾಸುಹೊಕ್ಕಾಗಿ ಕಾಣಿಸಿಕೊಳ್ಳುತ್ತದೆ. ಅದಕ್ಕಾಗಿ ಅವರೊಬ್ಬ ಆ ಕಾಲದ 'ಜಾನಪದತಜ್ಞ'ರೆಂದರೆ ತಪ್ಪೇನು ಆಗಲಿಕ್ಕಿಲ್ಲ.

❑

ಬಸವಣ್ಣನ ಪವಾಡಗಳ ಅಂತರಾರ್ಥ: ಒಂದು ವೈಚಾರಿಕ ನೋಟ

●

ಡಾ. ವ್ಹಿ.ಜಿ. ಪೂಜಾರ

ಬಸವಣ್ಣನಿಂದ ವೀರಶೈವ ಧರ್ಮಕ್ಕೆ ಜೀವಕಳೆ ಬಂದು ಒಂದು ಖಚಿತ ರೂಪ ಪ್ರಾಪ್ತವಾದುದಲ್ಲದೆ, ಅದರ ತತ್ವಗಳು ವಿಶ್ವಮಾನ್ಯತೆಯನ್ನು ಪಡೆಯುವಂತಾದುವು. ಮಹಾನುಭಾವನಾದ ಆತನ ವ್ಯಕ್ತಿತ್ವ ನುಡಿಯ ಸೀಮೆಗೆ ನಿಲುಕದಂಥದು. ಕಾವ್ಯಪುರಾಣಗಳ ವ್ಯಾಪ್ತಿಗೂ ಒಳಪಡದಂಥದು. ಆತನನ್ನು ಕುರಿತು ಕನ್ನಡ, ತೆಲುಗು ಭಾಷೆಗಳಲ್ಲಿ ವಿಪುಲ ಸಂಖ್ಯೆಯಲ್ಲಿ ಸಾಹಿತ್ಯ ಸೃಷ್ಟಿಯಾಗಿದೆ. 'ಕನ್ನಡದಲ್ಲಿಯಂತೂ ಯಾವ ಮಹಾತ್ಮರನ್ನೂ ಕುರಿತು ಇಷ್ಟು ವಿಪುಲವಾಗಿ ಸಾಹಿತ್ಯ ರಚನೆ ಯಾಗಿಲ್ಲ ವೆಂದೇ ಹೇಳಬೇಕು.'[1] ಆದರೆ, ಅವೆಲ್ಲ ಕಲ್ಪಿತಾಂಶಗಳಿಂದ ಕೂಡಿದ ಪುರಾಣ ಕೃತಿಗಳು. 'ಶುದ್ಧ ಚಾರಿತ್ರಿಕ ಅಂಶಗಳಿಗೆ ಅವು ಹೆಚ್ಚು ಗಮನಕೊಡದೆ ಬಸವಣ್ಣನವರನ್ನು ಕಂಡ ಭಾವ ಸತ್ಯಕ್ಕೆ ಕನ್ನಡಿ ಹಿಡಿದಿವೆ.'[2] ಆತನ ವೈಯಕ್ತಿಕ ಬದುಕಿನಲ್ಲಿ ಸಂಭವಿಸಿದ ಹಲವಾರು ಘಟನೆಗಳ ಸುತ್ತ ಕಲ್ಪನಾರಮ್ಯವಾದ ಕಥೆಗಳು ಮೆತ್ತಿಕೊಂಡು ಅವುಗಳನ್ನು ಅದ್ಭುತವಾಗಿಸಿವೆ ಬಸವಣ್ಣನನ್ನು ಒಬ್ಬ ಪವಾಡಪುರುಷ, ಅತಿಮಾನುಷ ವ್ಯಕ್ತಿಯನ್ನಾಗಿ ಮಾಡಿವೆ. ಸಾಮಾನ್ಯರ ದೃಷ್ಟಿಯಲ್ಲಿ ಆತ ಮಹಿಮಾವಂತ, ಅವತಾರಿ, ಇಷ್ಟೇ ಅಲ್ಲದೆ ದೇವರೇ ಆಗಿ ಪರಿಣಮಿಸಿದ್ದಾನೆ.

ಇಲ್ಲಿ ಬಸವಣ್ಣನು ಪವಾಡಪುರುಷನೇ? ಪವಾಡಗಳ ಬಗೆಗಿದ್ದ ಆತನ ದೃಷ್ಟಿ ಧೋರಣೆಗಳೇನು? ಅವು ಹೇಗೆ ಹುಟ್ಟಿಕೊಳ್ಳುವವು? ಎಂಬ ಪ್ರಶ್ನೆಗಳಿಗೆ ಉತ್ತರಿಸಲೆತ್ನಿಸಿದೆ ಹಾಗೂ ವೀರಶೈವ ಕಾವ್ಯ, ಪುರಾಣಗಳಲ್ಲಿ ಬಸವಣ್ಣನ ಕುರಿತಿದ್ದ ಪವಾಡ ಕಥೆಗಳನ್ನು ವೈಚಾರಿಕ ದೃಷ್ಟಿಯಿಂದ ಅಧ್ಯಯನ ಮಾಡಲು ಯತ್ನಿಸಿದೆ.

ಬಸವಣ್ಣನು ದೈವೀ ಶಕ್ತಿಯಲ್ಲಿ, ಸಂಗಮನಾಥನಲ್ಲಿ ಅನನ್ಯ ಶ್ರದ್ಧೆ, ಭಕ್ತಿಯನ್ನು ಇರಿಸಿದವನಾ ದರೂ ಮಾನವ ಪ್ರಯತ್ನ, ಶಕ್ತಿಯಲ್ಲಿಯೂ ಅಪಾರವಾದ ನಂಬಿಗೆಯನ್ನು ಇರಿಸಿದ ಮಾನವತಾವಾದಿ. ಆತನು ನಮ್ಮಂತೆಯೇ ಜನಿಸಿ ಮಹಾಮಾನವನಾಗಿ ಬದುಕಿದವ. ಆತನು ಮೂಢನಂಬಿಕೆ ಹಾಗೂ ಅರ್ಥಹೀನ ಸಂಪ್ರದಾಯಗಳನ್ನು ಒಪ್ಪಿಕೊಂಡವನಲ್ಲ. ಅತಿಮಾನುಷ (ಪವಾಡ)ವೆನ್ನುವ ಶಕ್ತಿಗಳನ್ನೂ ಪುರಸ್ಕರಿಸಿದವನಲ್ಲ. ಯೋಗ ಸಾಧನೆಯಿಂದ ಸಿದ್ಧಿಸುತ್ತವೆಯೆಂದು ನಂಬಲಾದ ಪವಾಡಗಳನ್ನೇನು ಪ್ರದರ್ಶಿಸಲಿಲ್ಲ. ಆತನು ಗತಿಸಿದ

ಅನಂತರ ಆತನ ಚರಿತ್ರೆಯಲ್ಲಿ ಅನೇಕ ಪವಾಡ ಕಥೆಗಳು ಸೇರಿಕೊಂಡವು. ಆತನು ಬದುಕಿದ್ದಾಗಲೇ ಆತನನ್ನು ಮಹಾದೇವಿಯಕ್ಕ ತನ್ನೊಂದು ವಚನದಲ್ಲಿ ದೇವರೆಂದು[೩] ಮಹಿಮಾಪುರುಷನೆಂದು ಕೊಂಡಾಡಿದ್ದಾಳೆ. ಆತನ ಸಮಕಾಲೀನ ಶರಣರೇ ಆತನನ್ನು ಸ್ತುತಿಸಿರುವಾಗ ಸಾಮಾನ್ಯ ಜನರಂತೂ ಸರಿಯೇ. ಇವರೆಲ್ಲರ ಸ್ತುತಿ ರೂಪದ ವಚನಗಳನ್ನು, ಹೊಗಳಿಕೆಗಳನ್ನು ಕೇಳಿ ವಿನಯಮೂರ್ತಿಯಾದ ಆತನಿಗೆ ಮುಜುಗರವಾಗಿರಬೇಕು. ಅದಕ್ಕೇ ಆತನು ಒಂದೆಡೆ:

> **'ಎಂಬತ್ತೆಂಟು ಪವಾಡವ ಮೆರೆದು**
> **ಹಗರಣದ ಚೋಹದಂತಾಯಿತ್ತೆನ್ನ ಭಕ್ತಿ'[೪]**

ಎಂದು ತನ್ನನ್ನೇ ತಾನು ವಿಡಂಬನೆಗೊಳಪಡಿಸಿಕೊಂಡಿದ್ದಾನೆ. ಆತನೇ ಪವಾಡ ಮೆರೆದೆನೆಂದು ನುಡಿದಿದ್ದಾನಲ್ಲ ಎಂದು ವಿದ್ವಾಂಸರೊಬ್ಬರು 'ಆ ಮಾತನ್ನು ಅವರ ಹಿರಿಯ ಜೀವನದಲ್ಲಿ ಅಲ್ಲಗಳೆಯಲಾಗದು... ಪವಾಡಗಳನ್ನು ಮೆರೆಯದ ಮಹಾಮಹಿಮರೇ ಇಲ್ಲ. ಬಸವಣ್ಣನವರ ಜೀವನದಲ್ಲಿ ಪವಾಡಗಳು ಅಧಿಕ ಸಂಖ್ಯೆಯಲ್ಲಿ ನಡೆದಿವೆ.'[೫] ಎಂದು ಅಭಿಪ್ರಾಯಪಟ್ಟಿದ್ದಾರೆ. ಇವರಂತೆಯೇ ನಮ್ಮ ಜನ ಭಕ್ತಿ, ಶ್ರದ್ಧೆಯಿಂದ ಆತನ ಕುರಿತಿದ್ದ ಪವಾಡಗಳನ್ನು ಎಣಿಸಲಿಕ್ಕೆ ಹೋಗುವರೇ ವಿನಾ ಅಣ್ಣನ ಇಂಗಿತವೇನಿತ್ತು? ಆತನ ವಚನದಲ್ಲಿ ವ್ಯಕ್ತಪಡಿಸಿದ ಅಂತರಾರ್ಥವೇನು? ಎಂಬುದನ್ನು ಅರಿತುಕೊಳ್ಳಲು ಯತ್ನಿಸರು. ಇಲ್ಲಿ ಬಸವಣ್ಣನು ತನ್ನ ಭಕ್ತಿ ಸಾಧನೆಗೆ ಪವಾಡಗಳು ಆತಂಕಕಾರಿಗಳಾದವು ಎಂದು ಅವನ್ನು ಹೀಗಳೆದಿದ್ದಾನೆಯೇ ವಿನಾ ಪವಾಡ ಮಾಡಿದ್ದಾನೆ ಎಂಬರ್ಥವಲ್ಲ. ಆತನ ಜೀವನ, ಸಾಧನೆ ಹಾಗೂ ಸಿದ್ಧಿಗಳನ್ನು ವ್ಯಕ್ತಪಡಿಸುವ ಅವನ ವಚನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದವರಿಗೆ ಅವನು ಪವಾಡಗಳಂತಹ ಅತಿಮಾನುಷ ಶಕ್ತಿಗಳನ್ನು ಪ್ರದರ್ಶಿಸುವಂಥ ವನಲ್ಲವೆಂಬುದು ತಿಳಿಯುತ್ತದೆ. ಬಸವಣ್ಣನ 'ಅನಂತರ ಬಂದ ಭಕ್ತರು ಅವರ ತಲೆಗೆ ನೂರಾರು ಪವಾಡಗಳನ್ನು ಕಟ್ಟಿದರಾದರೂ ಅವರು ಸ್ವತಃ ಪವಾಡ ವಿರೋಧಿಗಳು, ಪುರುಷ ಪ್ರಯತ್ನವಾದಿಗಳು'[೬] ಎಂಬುದನ್ನು ನಾವು ನೆನೆಯಲೇಬೇಕು. ಆತನು ಗತಿಸಿದ ಅನಂತರ ಅವನ ಚರಿತ್ರೆಯನ್ನು ಬರೆದ ವೀರಶೈವ ಕವಿಗಳು, ಪುರಾಣಕಾರರು ಸಾಂಪ್ರದಾಯಿಕವಾಗಿ ಸಾಮಾನ್ಯಜನ ನಂಬಿಕೊಂಡು ಬಂದ ಪವಾಡಗಳನ್ನು ಕಥೆಯ ರೂಪಕ್ಕಿಳಿಸಿ ಧಾರ್ಮಿಕ ಮಹಾಪುರುಷರ ಮಹಿಮೆ, ಅದ್ಭುತ ಶಕ್ತಿಗಳನ್ನು ಸಾರುವ, ಧರ್ಮದ ತತ್ವಗಳನ್ನು ಪ್ರಚುರಗೊಳಿಸುವ, ವಾಹಕಗಳ ರೂಪದಲ್ಲಿ ಅವುಗಳನ್ನು ಬಳಸಿಕೊಂಡರು. ಕನ್ನಡದಲ್ಲಿ ಮೊಟ್ಟಮೊದಲ ಬಾರಿ ಬಸವಣ್ಣನ ಚರಿತ್ರೆಯನ್ನು ಬರೆದ ಹರಿಹರ ತಮಿಳು ಪುರಾತನ ಶಿವಭಕ್ತರ ಮಾದರಿಯಲ್ಲಿ ಆತನ ಚರಿತ್ರೆಯನ್ನು ಬರೆದ. ಪಾಲ್ಕುರಿಕೆ ಸೋಮನಾಥನೂ ಹಾಗೆಯೇ ಪುರಾತನರ ಕಥೆಗಳನ್ನು ಬಸವಣ್ಣನ ಚರಿತ್ರೆಯಲ್ಲಿ ಹಾಸುಹೊಕ್ಕಾಗಿ ನೆಯ್ದ. ಹರಿಹರನ 'ಬಸವರಾಜದೇವರರಗಳೆ' ಹಾಗೂ ಪಾಲ್ಕುರಿಕೆ ಸೋಮನಾಥನ 'ತೆಲುಗು ಬಸವ ಪುರಾಣಮು'ಗಳಲ್ಲಿ ಚಿತ್ರಣಗೊಂಡ ಪವಾಡ ಕಥೆಗಳನ್ನು ಭೀಮಕವಿ, ಕೆರೆಯ ಪದ್ಮರಸ, ಲಕ್ಕಣ್ಣ ದಂಡೇಶ, ಸಿಂಗಿರಾಜ, ಅದೃಶ್ಯಕವಿ, ವಿರೂಪಾಕ್ಷಪಂಡಿತ, ಸಿದ್ಧನಂಜೇಶ, ಶಾಂತಲಿಂಗ ದೇಶಿಕ, ಬಸವ ಪವಾಡದ ಕರ್ತೃ, ಗುಬ್ಬಿಯ ಮಲ್ಲಣಾರ್ಯ ಹಾಗೂ ಚೆನ್ನಪ್ಪಕವಿ ಮುಂತಾದ ವೀರಶೈವ ಕವಿಗಳು ಲೀಲಾಜಾಲವಾಗಿ ವರ್ಣಿಸುವ ಸಂಗ್ರಹಿಸುವ, ಹಿಗ್ಗಿಸುವ ಹೆಚ್ಚಿಸುವ

ಕಾರ್ಯವನ್ನೆಸಗಿದರು. ಎಷ್ಟೋ ಬಾರಿ ಸಹಜವೆನ್ನಿಸುವ, ನಡೆದ ಘಟನೆಗಳೇ ಜನತೆಯ ಪುರಾಣಕಾರರ ದೃಷ್ಟಿಯಲ್ಲಿ ಪವಾಡಗಳಾಗಿ ಕಂಡವು. ಅವರ ಕೃತಿಗಳಲ್ಲಿ ಪವಾಡ ಕಥೆಗಳ ರೂಪತೊಟ್ಟು ವರ್ಣಿತಗೊಂಡವು. ಅಂಥವುಗಳಲ್ಲಿ ಕೆಲವು ಹೀಗಿವೆ: ಒಂದು ದಿನ ಬಸವಣ್ಣನ ಮನೆಗೆ ನುಗ್ಗಿದ ಕಳ್ಳನೊಬ್ಬ ಅವನ ಪತ್ನಿ ನೀಲಲೋಚನೆಯ ಕಿವಿಯೋಲೆ ಕಿತ್ತಿಕೊಳ್ಳಲು ಯತ್ನಿಸಿದ. ಆಗ ಆಕೆ ಎಚ್ಚೆತ್ತು ಕಳ್ಳ ಕಳ್ಳ ಎನ್ನಲು, ಬಸವಣ್ಣನು ಆ ಕಳ್ಳನನ್ನು ನೋಡಿ ಈತ ಕಳ್ಳನಲ್ಲ, ಸಾಕ್ಷಾತ್ ಸಂಗಮನಾಥನೇ ಇದ್ದಾನೆ, ತೆಗೆದುಕೊಡು ನಿನ್ನ ಓಲೆಗಳನ್ನು ಎಂದು ಹೇಳುವನು. ಆ ಕೂಡಲೇ ಆ ಕಳ್ಳ ಜಂಗಮನಾಗಿ ಬಿಡುವನು. ಕೊರಳಲ್ಲಿ ರುದ್ರಾಕ್ಷಿ, ಲಿಂಗ ಕಾಣಿಸುವವು.[೭] ಬಿಜ್ಜಳನ ಭಂಡಾರದಲ್ಲಿನ ಹಣವನ್ನು ಬಸವಣ್ಣನು ಜಂಗಮರಿಗೆ ಕೊಟ್ಟು ಅಪವ್ಯಯ ಮಾಡಿದ್ದಾನೆಂದು ಆತನ ಮೇಲೆ ಅಪವಾದ ಬಂದಾಗ ಅದನ್ನು ನಿರಾಕರಿಸುತ್ತ ಅವನು 'ಹಣವನ್ನು ನಾನು ಅಪವ್ಯಯ ಮಾಡಿಲ್ಲ, ಬೇಕಾದರೆ, ನೋಡಬನ್ನಿ' ಎಂದು ಬಿಜ್ಜಳ ಮುಂತಾದವರ ಎದುರಿಗೆ ಭಂಡಾರದಲ್ಲಿನ ಹಣವನ್ನು ಸ್ಪರ್ಶಿಸಿ ಅದನ್ನು ಇಮ್ಮಡಿ, ನೂರ್ಮಡಿ ಹೆಚ್ಚಿಸಿ ತೋರಿಸಿದನು.೮ ಬಸವಣ್ಣನ ಬಳಿ ಒಬ್ಬ ಜಂಗಮ ಬಂದು ಲಿಂಗಪೂಜೆಗೆ ಬಿಲ್ವಪತ್ರೆ ಬೇಕಾಗಿದೆ, ಈಗಿಂದೀಗಲೇ ಕೊಡು ಎಂದು ಬೇಡಲು, ಆ ಕೂಡಲೇ ಅವನು ಅಲ್ಲಿಯೇ ಇದ್ದ ಕೊರಡನ್ನು ಚಿಗುರಿಸಿ ಕೊಟ್ಟನು.೯ ಭಕ್ತನೊಬ್ಬ ಬಂದು ಬಸವಣ್ಣನಿಗೆ ಹಾಲಿನ ವ್ರತ ಹಿಡಿದಿದ್ದೇನೆ ಹಾಲು ಕೊಡಿರಿ ಎಂದು ಕೇಳಲು, ಆ ಕೂಡಲೇ ಬರಡು ಆಕಳ ಹಾಲನ್ನು ಕರೆದು ಕೊಟ್ಟನು.೧೦ ಇವೆಲ್ಲ ಕಥೆಗಳ ಹಿಂದೆ ಬಸವಣ್ಣನ ಭಕ್ತಿ ನಿಷ್ಠೆ, ಜಂಗಮ ಪ್ರೇಮ ಹಾಗೂ ದೈವೀ ಶಕ್ತಿಯಲ್ಲಿಟ್ಟ ನಂಬುಗೆ ಇರುವುದನ್ನು ಕಾಣುವೆವು. ಸಂಗಮನಾಥನ ಒಲುಮೆ ಆದರೆ ಏನೆಲ್ಲವನ್ನೂ, ಅಸಾಧ್ಯವಾದುದನ್ನೂ ಸಾಧ್ಯಮಾಡಿ ತೋರಿಸಬಹುದೆಂಬ ಅಚಲ ವಿಶ್ವಾಸವನ್ನು, ಆತ್ಮಸಾಕ್ಷಿ (confidence) ಯನ್ನು ಬಸವಣ್ಣನು ಹೊಂದಿದ್ದನೆಂದು ಅರ್ಥ ಮಾಡಬೇಕೇ ವಿನಾ ಶಬ್ದಶಃ ಅಥವಾ ವಾಚ್ಯಾರ್ಥದಲ್ಲಿ ಅಲ್ಲ. ಸಂಗಮನಾಥನ ಒಲುಮೆಗಾಗಿ ಹಂಬಲಿಸುವ ಭಕ್ತ ಹೃದಯ ಬಸವಣ್ಣನದು. ಇದರ ಅಂತರಾರ್ಥವನ್ನು ಗ್ರಹಿಸದೆ ಭಕ್ತಜನ ಬಸವಣ್ಣನ ಮೇಲಿನ ಅತಿಯಾದ ಶ್ರದ್ಧೆಯಿಂದ ಇಂಥ ಕಥೆಗಳನ್ನು ಕಟ್ಟಿ ವರ್ಣಿಸಿದ್ದುಂಟು. ಜನಸಾಮಾನ್ಯರಲ್ಲಿ ಜನ ಜನಿತವಾದ ಇಂಥ ಕಥೆಗಳನ್ನೇ ಪುರಾಣಿಕರು ಪುರಾಣಗಳಲ್ಲಿ ವರ್ಣಿಸಿದ್ದುಂಟು. ಇಂಥವೇ ವೀರಶೈವ ಪುರಾಣಗಳಲ್ಲಿ ಅಧಿಕ ಸಂಖ್ಯೆಯಲ್ಲಿ ವರ್ಣಿತಗೊಂಡು ಚರಿತ್ರೆಯ ರೂಪದಲ್ಲಿ ಮೇಲುಗೈ ಪಡೆದಿವೆ.

ಸಾಮಾನ್ಯವಾಗಿ ಇಂಥ ಕಥೆಗಳು ಹುಟ್ಟಿಕೊಳ್ಳುವುದು ಹೀಗೆ: ಮಹಾಪುರುಷನೊಬ್ಬ ಸಾಮಾನ್ಯ ಜನತೆಗೆ ಸಾಧಿಸಲು ಶಕ್ಯವಾಗದಂತಹ ಕಾರ್ಯಗಳನ್ನು ಸರಾಗವಾಗಿ ಮಾಡಿದಾಗ ಅವರು ಆತನನ್ನು ಅಸಾಧಾರಣ ಶಕ್ತಿಯುಳ್ಳವನೆಂದೂ ಮಹಿಮಾ ಪುರುಷನೆಂದೂ ಭಾವಿಸುತ್ತಾರೆ. ಅನಂತರ ಆತನ ವ್ಯಕ್ತಿತ್ವಕ್ಕೆ ಮಾರುಹೋಗಿ ಆತನನ್ನು ಪ್ರಶಂಸಿಸಲು ಪ್ರಾರಂಭಿಸುತ್ತಾರೆ. ಈ ರೀತಿಯ ಪ್ರಶಂಸೆ ಬರಬರುತ್ತ ಸಾಮಾನ್ಯ ಜನತೆಯ ಬಾಯಲ್ಲಿ ದಂತ ಕಥೆಗಳ ಐತಿಹ್ಯಗಳ ರೂಪ ಪಡೆದು ಪುನಃ ಕಥಿತಗೊಳ್ಳುತ್ತ ಅವರ ನಾಲಿಗೆಯ ಮೇಲೆ ಲಾಸ್ಯವಾಡುವವು. ಇದರಿಂದ ಜನತೆಯು ಆ ಮಹಾಪುರುಷನ ಬಗೆಗೆ ಭಕ್ತಿಗೌರವ ತಾಳಿ ಪವಾಡ ಕಥೆಗಳನ್ನು ಕಟ್ಟುವರು. ಅರ್ಥಾತ್ ಪವಾಡ ಕಥೆಗಳು ಪುರಾಣಕಾರನೊಬ್ಬನ ಸೃಷ್ಟಿಗಳಲ್ಲ, ಸಮಷ್ಟಿ ಪ್ರಜ್ಞೆಯ ಸೃಷ್ಟಿಗಳು, ಸಮಷ್ಟಿ ಪ್ರಜ್ಞೆಯ ಮುದ್ರೆಯನ್ನು ಒತ್ತಿಸಿಕೊಂಡೇ

ಇಂಥ ಕಥೆಗಳು, ಕಾವ್ಯ, ಪುರಾಣಗಳಲ್ಲಿ ವರ್ಣಿತಗೊಂಡಿವೆಯೆನ್ನಬಹುದು. "ಒಬ್ಬ ವ್ಯಕ್ತಿಯ ವಿಷಯದಲ್ಲಿ ಗೌರವ ಭಕ್ತಿ ಅಧಿಕವಾದಂತೆ ಅವನ ಆಚರಣೆಯ ಅಣುಗಳೆಲ್ಲ ಅದ್ರಿಯಾಗಿ ಕಾಣುತ್ತವೆ. ಆಗ ಚರಿತ್ರೆ ಪವಾಡದ ಸೋಗು ಹಾಕುತ್ತದೆ."[೧೧] ಈ ಮಾತು ಬಸವಣ್ಣನ ಚರಿತ್ರೆಯ ಕುರಿತೇ ಆಡಿರುವಂತಹದಾದರೂ ಎಲ್ಲಾ ಧಾರ್ಮಿಕ ಮಹಾಪುರುಷರಿಗೂ ಇದು ಅನ್ವಯವಾಗುವಂಥದೇ ಆಗಿದೆ. "The founders of all most all religions are at the centre of great miracle cycles"[೧೨] ಧಾರ್ಮಿಕ ಮಹಾಪುರುಷರ ಚರಿತ್ರೆಯೆಂದರೆ ಆ ಧರ್ಮದವರಿಗೆ ಅಚ್ಚುಮೆಚ್ಚು. ಇದು ಸಹಜ, ಅಷ್ಟೇ ಅಲ್ಲ. ಅವರು ಧಾರ್ಮಿಕ ಮಹಾಪುರುಷರ ಚರಿತ್ರೆಯನ್ನು ಪುರಾಣವಾಗಿಸಿ ಬಿಡುತ್ತಾರೆ. ಪುರಾಣವೆಂದಾಗ ಸಾಮಾನ್ಯ ಜನರಿಗೆ ಹಿಡಿಸುವ, ರುಚಿಸುವ ಇಂಥ ಪವಾಡ ಕಥೆಗಳನ್ನು ಸೇರಿಸಿ ವರ್ಣಿಸಬೇಕಾಗುತ್ತದೆ. ಇದೊಂದು ಭಾರತೀಯರ ಸಾಮಾನ್ಯ ದೃಷ್ಟಿಯೇ ಆಗಿದೆಯೆನ್ನಬಹುದು.

ವೀರಶೈವ ಕಾವ್ಯ, ಪುರಾಣಗಳುದ್ದಕ್ಕೂ ಪವಾಡ ಕಥೆಗಳು ಕಿಕ್ಕಿರಿದು ವರ್ಣಿತಗೊಂಡಿವೆ. ಅದರಲ್ಲೂ ಬಸವಣ್ಣನ ಚರಿತ್ರೆಯಲ್ಲಿ ಇವು ಹಾಸುಹೊಕ್ಕಾಗಿ ನೆಯ್ದುಕೊಂಡಿವೆ. ಇಂಥ ಪವಾಡ ಕಥೆಗಳೆಲ್ಲ ಅರ್ಥವಿಲ್ಲದುವೇ? ಇವೆಲ್ಲ ಮೂಢನಂಬುಗೆಯಿಂದ ಪ್ರೇರಿತವಾದಂಥವೇ? ಇವೆಲ್ಲ ಅವೈಜ್ಞಾನಿಕವಾದಂಥವೆಂದು ಸಾರಾಸಗಟಾಗಿ ತಳ್ಳಿಹಾಕಬೇಕೇ? ಅಥವಾ ಇವನ್ನು ನಂಬಬೇಕೆ? ಈ ಎಲ್ಲ ಪ್ರಶ್ನೆಗಳು ಇಂದು ನಮ್ಮೆದುರು ಧುತ್ತೆಂದು ನಿಲ್ಲುವವು. ಇಂದಿನ ವೈಜ್ಞಾನಿಕ ಯುಗದಲ್ಲಿದ್ದ ನಮಗೆ ಇಂಥ ಕಥೆಗಳನ್ನೆಲ್ಲ ವಸ್ತುನಿಷ್ಠ (ಶಬ್ದಶಃ) ವಾಗಿ ನಂಬಲಿಕ್ಕೆ ಆಗದು. ಆದರೆ ಈ ಕಥೆಗಳೆಲ್ಲ ಹುರುಳಿಲ್ಲದುವು. ಮೂಢನಂಬುಗೆಯಿಂದ ಬೆಳೆದುಕೊಂಡು ಬಂದಂಥವು, ಇವುಗಳಿಂದ ಯಾವ ಪ್ರಯೋಜನವೂ ಇಲ್ಲವೆಂದು ತಳ್ಳಿಹಾಕುವುದೂ ಸಿನಿಕತನವಾಗುತ್ತದೆ. ತಳ್ಳಿ ಹಾಕಿದ್ದೇ ಆದರೆ ಏಕಪಕ್ಷೀಯವಾದ ನಿರ್ಣಯವನ್ನು ತೆಗೆದುಕೊಂಡಂತಾಗುತ್ತದೆ.

ಮಾನವ ಕೇವಲ ಬುದ್ಧಿಜೀವಿಯಲ್ಲ, ಭಾವನಾಜೀವಿಯೂ ಆಗಿದ್ದಾನೆ. ಪವಾಡ ಕಥೆಗಳ ಹುಟ್ಟಿನ ಹಿಂದೆ ಮಾನವನ ಭಾವುಕ ಮನಸ್ಸೂ ಕೆಲಸ ಮಾಡಿರುತ್ತದೆ. ಇಂಥ ಗುಣ ಸಾಮಾನ್ಯ ಜನರಲ್ಲಿ ಅಂದರೆ ಅಶಿಕ್ಷಿತರಲ್ಲಿ ಹೆಚ್ಚು. ಅವರು ಧಾರ್ಮಿಕ ಮಹಾಪುರುಷರೆಂದರೆ ಪವಾಡ ಪುರುಷರೆಂದು ನಂಬಿ ಬಿಡುತ್ತಾರೆ. ಪವಾಡ ಮಾಡದವರು ಅದು ಹೇಗೆ ಧಾರ್ಮಿಕ ಪುರುಷರಾಗುತ್ತಾರೆ? ಎಂದು ಪ್ರಶ್ನಿಸುತ್ತಾರೆ. ಪವಾಡ ಕಥೆಗಳು ಹೆಚ್ಚೆಚ್ಚು ಧಾರ್ಮಿಕ ಮಹಾಪುರುಷರ ಚರಿತ್ರೆಯಲ್ಲಿ, ಪುರಾಣಗಳಲ್ಲಿ ಬರುವುದನ್ನು ಇಂಥ ಜನ ಬಯಸುತ್ತಾರೆ. ಸಿಸಿರೋ ಎಂಬ ತತ್ವಜ್ಞಾನಿ ಬಹುಶಃ ಇಂಥವರನ್ನೇ ದೃಷ್ಟಿಯಲ್ಲಿಟ್ಟುಕೊಂಡು 'Miracle stories are necessary for the piety of ignorant folk"[೧೩] ಎಂದು ನುಡಿದಂತಿದೆ. ಧಾರ್ಮಿಕ ಮಹಾಪುರುಷರ ವ್ಯಕ್ತಿತ್ವವನ್ನು ಗಹನವಾದ ಧಾರ್ಮಿಕ ತತ್ವಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ಪರಿಣಾಮಕಾರಿಯಾಗಿ ತಿಳಿಸಬೇಕಾದರೆ ನಮ್ಮ ಕವಿಗಳಗೆ ಪುರಾಣಕಾರರಿಗೆ ಪವಾಡ ಕಥೆಗಳ ಮಾಧ್ಯಮ ಅವಶ್ಯವೆನ್ನಿಸಿದಂತಿದೆ. ಈ ಉಪಕ್ರಮ ನಮಗಿಂದು ಅಷ್ಟಾಗಿ ಸಮಂಜಸವೆನ್ನಿಸದಿದ್ದರೂ ಅಂದು ಬಸವಣ್ಣನ ಚರಿತ್ರೆಯನ್ನು ಇಂಥ ಪವಾಡ ಕಥೆಗಳಿಂದ ಕಿಕ್ಕಿರಿದ ಪುರಾಣಕೃತಿಗಳೇ ಉಳಿಸಿಕೊಂಡು ಬಂದುದು ಗಮನಾರ್ಹವಾಗಿದೆ. ಒಮ್ಮೆಲೇ ನಮಗಿಂದು ಲಭ್ಯವಾದ ಅವನ ವಚನಗಳಿಂದ ಚರಿತ್ರೆಯನ್ನು ತಿಳಿಯಲಿಕ್ಕೆ

ಆಗುತ್ತಿರಲಿಲ್ಲ. ಆದ್ದರಿಂದ ಬಸವಣ್ಣನ ಕುರಿತಿದ್ದ ಪವಾಡ ಕಥೆಗಳು ಅರ್ಥವಿಲ್ಲದುವು ಅಲ್ಲ, ಅವುಗಳ ಅಂತರಾರ್ಥ ಹಾಗೂ ಅವು ಧ್ವನಿಸುವ ಸಾಂಕೇತಿಕ ಅರ್ಥಗಳನ್ನು ನಾವಿಂದು ವೈಚಾರಿಕ ದೃಷ್ಟಿಯಿಂದ ಅರಿಯಬೇಕಾಗಿದೆ. ಅವುಗಳನ್ನು ಮನೋವಿಜ್ಞಾನ, ಜಾನಪದ ವಿಜ್ಞಾನ ಹಾಗೂ ಮಾನವಿಕ ವಿಜ್ಞಾನಗಳಂಥ ಅನ್ಯಜ್ಞಾನ ಶಾಖೆಗಳ ಬೆಳಕಿನಲ್ಲಿಯೂ ಅಧ್ಯಯನ ಮಾಡಬೇಕಾಗಿದೆ. ಇಂಥ ಅಧ್ಯಯನದಿಂದ ಅವುಗಳ ಹಿಂದಿರುವ ಅಂತಸ್ಸತ್ವ, ಬಸವಣ್ಣನ ಮಹಾಮಾನವ ವ್ಯಕ್ತಿತ್ವ, ವೀರಶೈವ ಧರ್ಮದ ತತ್ವಗಳು, ಅವುಗಳ ಆಚರಣೆಯ ಮಹತಿ ಇವೆಲ್ಲ ಬೆಳಕಿಗೆ ಬರುವವು.

ಬಸವಣ್ಣನ ಕುರಿತಿದ್ದ ಪವಾಡ ಕಥೆಗಳಲ್ಲಿ ಸ್ಥೂಲವಾಗಿ ಅವನ ಮಹಾಮಾನವ ವ್ಯಕ್ತಿತ್ವವನ್ನು ಪ್ರದರ್ಶಿಸುವ ಪವಾಡ ಕಥೆಗಳು ಹಾಗೂ ವೀರಶೈವ ಧರ್ಮದ ತತ್ವ, ಆಚರಣೆ, ಪ್ರಗತಿಪರ ವಿಚಾರ ಮುಂತಾದವನ್ನು ಸಾಂಕೇತಿಕವಾಗಿ ಒಳಗೊಂಡ ಪವಾಡ ಕಥೆಗಳು ಎಂದು ಎರಡು ಪ್ರಕಾರಗಳನ್ನು ಮಾಡಬಹುದು.

೧. ಪವಾಡ ಕಥೆಗಳ ಹಿಂದಿರುವ ಬಸವಣ್ಣನ ಮಹಾಮಾನವ ವ್ಯಕ್ತಿತ್ವ

ವೀರಶೈವ ಕವಿಗಳು, ಪುರಾಣಕಾರರು ಬಸವಣ್ಣನನ್ನು ದೈವೀ ಪುರುಷನನ್ನಾಗಿಸಲು, ಜನಸಾಮಾನ್ಯರ ಮನೋಮಂದಿರದಲ್ಲಿ ಅವನನ್ನು ಒಬ್ಬ ದೇವತಾಮೂರ್ತಿಯಾಗಿ ಕಡೆದಿರಿಸಲು ಯತ್ನಿಸಿದ್ದು ಮೆಚ್ಚಬೇಕಾದ ಸಂಗತಿಯೇ. ಆದರೆ ಮಾನವ್ಯದ ಮಂದಾರವನ್ನರಳಿಸಿದ ಮಹಾಮಾನವನಾದ ಬಸವಣ್ಣನಿಗೆ ಇದು ಬೇಕಾಗಿರಲಿಲ್ಲ. ದೇವರಾಗುವುದಾಗಲಿ, ಹೊಗಳಿಸಿಕೊಳ್ಳುವುದಾಗಲಿ ಅವನ ಇಚ್ಛೆಗೆ ವಿರೋಧವಾದುದು. ಸಾಮಾನ್ಯ ಮಾನವನಾಗಿ ಮರ್ತ್ಯದಲ್ಲಿ ಬದುಕುವುದು, ಅದೂ ದುಃಖಿತರ, ಆರ್ತರ ಕಣ್ಣೀರನ್ನು ಒರೆಸಿ ಅವರ ಹಿತ ಬಯಸುತ್ತ, ಬದುಕುವುದು ಅವನಿಗೆ ಬೇಕಾಗಿತ್ತು. ಹಾಗೆ ಬದುಕಿದ ಅವನನ್ನು ಜನ ನಾನಾ ವಿಧವಾಗಿ ಸ್ತುತಿಸತೊಡಗಿದಂತಿದೆ. ಅಂಥವರಿಗೆ ಬಸವಣ್ಣನು 'ಹೊಗಳಿ ಹೊಗಳಿ ಎನ್ನನ್ನು ಹೊನ್ನಶೂಲದಲ್ಲಿಕ್ಕಿದರು' ಎಂದಿದ್ದಾನೆ. ತಾನು 'ಮಾವಿನಕಾಯಿಯಲ್ಲಿ ಎಕ್ಕೆಯ ಕಾಯಿ', 'ಎನಗಿಂತ ಕಿರಿಯರಿಲ್ಲ' 'ಬಾಗಿದ ತಲೆಯ ಮುಗಿದ ಕೈಯಾಗಿರಿಸು' ಎಂದೆಲ್ಲಾ ಬೇಡಿಕೊಂಡ. ಅವನು ಒಬ್ಬ ಆದರ್ಶ ಭಕ್ತನಾಗಿದ್ದನು. ದೀನ ದಲಿತರ ಕೆಳವರ್ಗದವರ ಹಾಗೂ ತುಳಿತಕ್ಕೆ ಒಳಗಾದವರ ಬಗ್ಗೆ ವಿಶೇಷ ಅನುಕಂಪ ತೋರಿದನು. ಅವನ ಅನುಕಂಪ ತೋರಿಕೆಯದಾಗಿರಲಿಲ್ಲ. ಕಷ್ಟದಲ್ಲಿ ಸಿಲುಕಿಕೊಂಡವರ ನೋವನ್ನು ನುಂಗಿ ನಡೆಯುವವರ ಪರವಾಗಿ ನಿಂತುಕೊಂಡು ಅವರೆಲ್ಲರ ನೋವಿಗೆ ಧ್ವನಿಯೊದಗಿಸಲು ಅವಿರತ ಶ್ರಮಿಸಿದನು. ಅವರ ಬಾಳನ್ನು ಹಸನುಗೊಳಿಸಿ, ಅವರನ್ನು ಮುಂದೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದನು. ಬಂಡವಾಳ ಶಾಹಿಗಳ ಹಾಗೂ ಜಾತಿವಾದಿ ಪಟ್ಟಭದ್ರರ, ಬಿಜ್ಜಳನ ವಿರುದ್ಧ ಪ್ರಜಾಪ್ರಭುತ್ವದ ಸಮರ ಸಾರಿ ಅದನ್ನು ಅಂದಿನ ಸಮಾಜದಲ್ಲಿ ನೆಲೆಗೊಳಿಸಲೆತ್ನಿಸಿದ್ದು ಸಾಮಾನ್ಯವಾದುದಲ್ಲ. ಅಂತರ್ಜಾತೀಯ ವಿವಾಹವನ್ನು ನೆರವೇರಿಸಿ ಎಲ್ಲರಲ್ಲೂ ಸಮಾನತೆ ಸೋದರತ್ವ ತರಲು ಶ್ರಮಿಸಿದನು. ಇವೆಲ್ಲ ಮಾನವೀಯ ಕಾರ್ಯಗಳು ವೀರಶೈವ ಕವಿಗಳಿಗೆ, ಪುರಾಣಕಾರರಿಗೆ ಅಗಾಧವಾದಂಥವು ಆಗಿ ತೋರಿದವು. ಅವರು ಈ ಎಲ್ಲ ಕಾರ್ಯಗಳಿಗೆ ಪವಾಡದ ಮುಖವಾಡ ತೊಡಿಸಿ ರಂಗುರಂಗಾಗಿಸಿ ವರ್ಣಿಸಿದರು. ಬಸವಣ್ಣನು ಮಾಡಿದ

ಪ್ರತಿಯೊಂದು ಕಾರ್ಯಗಳೂ ಅಂದು ಸಾಮಾನ್ಯ ಜನರಿಗೆ ಪವಾಡ ಸದೃಶವಾಗಿಯೇ ಕಂಡವು. ಅನೇಕ ಶರಣರೂ ಅವನ ಕಾರ್ಯಗಳನ್ನು ಪ್ರಶಂಸಿಸಿದುಂಟು. ಕೆಲ ಶರಣರು ರೂಪಕಮಯವಾದ ವಚನಗಳಿಂದ ಅವನನ್ನು ಸ್ತುತಿಸಿದ್ದುಂಟು. ಸಿದ್ಧರಾಮ ಅವನನ್ನು ಕುರಿತು ಹೀಗೆ ನುಡಿದಿದ್ದಾನೆ.

"ಕಾಲಿಲ್ಲದವಂಗೆ ಕಾಲುಕೊಟ್ಟೆ ಬಸವಾ
ಕಣ್ಣಿಲ್ಲದವಂಗೆ ಕಣ್ಣು ಕೊಟ್ಟೆ ಬಸವಾ
ಎನ್ನ ಕಣ್ಣು ಕಾಲಿಂಗೆ ನೀನೆಯಯ್ಯಾ ಬಸವಾ
ಕಪಿಲಸಿದ್ಧ ಮಲ್ಲಿನಾಥ"[೧೪]

ಇಲ್ಲಿ ಕಾಲು ಮತ್ತು ಕಣ್ಣು ಕ್ರಿಯೆ ಮತ್ತು ಜ್ಞಾನಗಳನ್ನು ಸೂಚಿಸುತ್ತವೆ. ಕ್ರಿಯೆ ಮತ್ತು ಜ್ಞಾನಗಳ ಸಾಮರಸ್ಯದ ಅರಿವು ನನಗೆ ಬಸವಣ್ಣನಿಂದ ಉಂಟಾಯಿತು ಎಂದು ಸಿದ್ಧರಾಮನು ನುಡಿದುದನ್ನು ಇಲ್ಲಿ ಅರಿಯಬಹುದು. ಬಸವಣ್ಣನು ಸಿದ್ಧರಾಮನಿಗೆ ಕ್ರಿಯೆ-ಜ್ಞಾನಗಳ ಬಗ್ಗೆ ಬೋಧಿಸಿ ಆತನನ್ನು ಒಬ್ಬ ಶರಣನನ್ನಾಗಿ ಮಾರ್ಪಡಿಸಿದನು. ಆಗ ಆತ ಭಕ್ತಿಯಿಂದ ರೂಪಕಮಯವಾದ ಈ ವಚನವನ್ನು ನುಡಿದ. ಇದನ್ನೇ ಪುರಾಣ ಕವಿಗಳು ಶಬ್ದಶಃ ಅರ್ಥಮಾಡಿ ಬಸವಣ್ಣನು ಕಾಲಿಲ್ಲದವರಿಗೆ ಕಾಲುಗಳನ್ನು[೧೫] ಕಣ್ಣಿಲ್ಲದವರಿಗೆ ಕಣ್ಣುಗಳನ್ನು[೧೬] ಕೊಟ್ಟನೆಂದು ವರ್ಣಿಸಿದ್ದಾರೆ. ಈ ವಚನದ ಅಂತರಾರ್ಥವನ್ನು ಗ್ರಹಿಸದೆ ವಾಚ್ಯಾರ್ಥವನ್ನು ಅವಲಂಬಿಸಿದರೆ ಹೀಗಾಗುತ್ತದೆ. ಕೈ, ಕಾಲು, ಕಣ್ಣು ಕೊಡಲು ಬಸವಣ್ಣನೇನು ಜಾದುಗಾರನಲ್ಲ. ಮಂತ್ರವಾದಿಯೂ ಅಲ್ಲ. ಅವನೂ ಒಬ್ಬ ಮಾನವನೇ. ಕೆಲ ಪುರಾಣಕಾರರು ಬಸವಣ್ಣನು ಸತ್ತವರನ್ನು ಬದುಕಿಸಿದನು.[೧೭] ಎಂದು ಬಣ್ಣಿಸಿದ್ದುಂಟು ಮಡಿದವರನ್ನು ಮತ್ತೆ ಬದುಕಿಸುವುದು ವೈಜ್ಞಾನಿಕವಾಗಿ ಅಸಾಧ್ಯ. ಬಸವಣ್ಣನು ಮಡಿದವರನ್ನು ಬದುಕಿಸಿದನೆಂದು ಹೇಳುವ ಪುರಾಣಕಾರರ ಹೇಳಿಕೆಯನ್ನು ನಾವಿಲ್ಲಿ ಶಬ್ದಶಃ ಸ್ವೀಕರಿಸದೆ ಇದರ ಹಿಂದಿರುವ ಅಂತರಾರ್ಥವನ್ನು ಅರಿಯಲು ಯತ್ನಿಸಬೇಕು. ಮಡಿದವರೆಂದರೆ ಮಡಿದಂತೆ ಇದ್ದ ಸಾಮಾನ್ಯಜನರಲ್ಲಿ ಆತ್ಮವಿಶ್ವಾಸ ಮತ್ತು ಜೀವಶಕ್ತಿಯನ್ನು, ಆತ್ಮಸ್ಥೈರ್ಯ ಧೈರ್ಯಗಳನ್ನು ತುಂಬಿದನು ಎಂದರ್ಥ. ಅಂದಿನ ಸಮಾಜದಲ್ಲಿದ್ದ ವೈದಿಕ ಕರ್ಮಠರ ಪಟ್ಟಭದ್ರರ ಹಿತಾಸಕ್ತಿಗೆ, ಶೋಷಣೆಗೆ ಒಳಗಾಗಿ ನಿರ್ಜೀವ ನರಪೇತಲಗಳಂತೆ ಬದುಕುತ್ತಿರುವವರನ್ನು ಕಂಡು ಬಸವಣ್ಣನ ಮನ ಅನುಕಂಪೆಯಿಂದ ಮಿಡಿಯಿತು. ಅವರ ಸಹಾಯಕ್ಕೆ ಧಾವಿಸಿ ಅವರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಸಬಲರಾಗಿಸಿ ಉದ್ಧಾರ ಮಾಡಿದನು. ಅವರ ಬದುಕಿನಲ್ಲಿ ಭರವಸೆ ತುಂಬಿ ಮುನ್ನಡೆಸಿದನು. ಹೀಗೆ ಮಾಡಿದಾಗ ಅವರನ್ನು ಬಸವಣ್ಣನು ಬದುಕಿಸಿದಂತೆಯೇ ಅಲ್ಲವೇ?

ದಲಿತರೆಂದು, ಸಂಬೋಳಿಗಳೆಂದು, ಅಸ್ಪೃಶ್ಯರೆಂದು ಉಚ್ಚವರ್ಗದವರಿಂದ ಕರೆಸಿಕೊಳ್ಳುತ್ತ ಹೀನಾಯವಾಗಿ ಒದೆ ತಿನ್ನುತ್ತ ಬಹುಕಾಲದಿಂದ ಉನ್ನತ ವರ್ಗದವರ ಸೇವೆಯನ್ನು ಬಾಯ್ಮುಚ್ಚಿಕೊಂಡು ಅವರ ಪಾದಸೇವೆಯನ್ನು ಮಾಡುತ್ತ ಬಂದವರ ಬಂಧವಿಮೋಚನೆಗೆ ಸ್ವಾತಂತ್ರ್ಯಕ್ಕೆ ಬಸವಣ್ಣನು ಹೋರಾಡಿದನು. ಇದಕ್ಕೊಂದು ಇಲ್ಲಿ ಪವಾಡ ಕಥೆಯ ನಿದರ್ಶನವನ್ನು ಕೊಡಬಹುದು. ಬಸವಣ್ಣನು ಒಂದು ದಿನ ಬಿಜ್ಜಳನ ಒಡ್ಡೋಲಗಕ್ಕೆ ಬರುತ್ತಿರುವಾಗ ದಾರಿಯಲ್ಲಿದ್ದ ಕಂಬಳಿ ನಾಗಿದೇವನ ಮನೆಗೆ ಹೋಗುವನು. ಅಲ್ಲಿ ಆತನ ಅಪೇಕ್ಷೆಯಂತೆ ಪ್ರಸಾದವನ್ನು ಸೇವಿಸುವನು. ಇದನ್ನು ತಿಳಿದ ಕೆಲ ಪುರೋಹಿತರು, ಕರ್ಮಠರು

ಬಿಜ್ಜಳನಿಗೆ ಕಿವಿಯೂದಿದರು ಚಾಡಿ ಹೇಳಿದರು. ಶ್ವಪಚರ ಮನೆಯಲ್ಲಿ ಹೊಕ್ಕು ಉಂಡುಬರುವ ಬಸವನನ್ನು ಅದು ಹೇಗೆ ನೀವು ಸಭೆಯಲ್ಲಿ ಸೇರಿಸಿಕೊಳ್ಳುವಿರಿ ಎಂದು ಬಿಜ್ಜಳನಿಗೆ ಕೇಳಿದರು. ಆಗ ಆತ ಇದನ್ನು ವಿಚಾರಿಸಿಕೊಳ್ಳುವೆನೆನ್ನುತ್ತ ಅಂದಿನ ಸಭೆಯನ್ನು ಹೊರಗೇ ನಡೆಸಬೇಕೆಂದು ನಿರ್ಧರಿಸಿ ಒಡ್ಡೋಲಗದಲ್ಲಿನ ಆಸನಗಳನ್ನು ಹೊರಗೆ ಹಾಕಿಸಿದನು. ಬಸವಣ್ಣನು ಅಲ್ಲಿಗೆ ಬರಲು ಬಿಜ್ಜಳ ಅವನನ್ನು ತಡೆದು, ಏನಿದು ಬಸವಣ್ಣ ನೀನು ಶ್ವಪಚರ ಮನೆಯಲ್ಲಿ ಹೊಕ್ಕು ಉಂಡುಬಂದುದಲ್ಲದೆ ಈ ಸಭೆಯನ್ನೂಹೊಲೆಗಲಿಸುವುದು ಉಚಿತವೇ? ಎಂದು ಪ್ರಶ್ನಿಸುವನು. ಆಗ ಬಸವಣ್ಣನು 'ನಾನು ಶಿವನನರಿಯದ ಹೊಲೆಯನ ಮನೆಯೊಳಗೆ ಹೊಕ್ಕು ಉಂಡಿಲ್ಲ' ಎನ್ನುವನು. ಏನಿದು ನಿನಗೆ ಶಿವಭಕ್ತಿ ತಲೆಗೇರಿದಂತಿದೆ. ಆ ಹೊಲೆಯ ಅದು ಹೇಗೆ ಶಿವಭಕ್ತನಾಗ್ತಾನೆ? ಹೊಲೆ–ಹದಿನೆಂಟು ಜಾತಿಗಳನ್ನೆಲ್ಲ ಒಂದು ಮಾಡಲು ಹೊರಟಿರುವಿ? ಇವು ಎಂದಾದರೂ ಒಂದಾಗುವವೇ? ಸುವರ್ಣ ಸಮಾನವಾದ ವಿಪ್ರಸಮಾಜದೊಡನೆ ಹೊಂದಿಕೊಂಡು ಹೋಗು ಎಂದೆಲ್ಲ ಬಿಜ್ಜಳ ಬುದ್ಧಿವಾದ ಹೇಳುತ್ತ, ಏನು ನಿನ್ನ ಆ ಶಿವಭಕ್ತನ ಮೈಯಲ್ಲಿ ಹಾಲು, ಇಲ್ಲಿ ನೆರೆದವರೆಲ್ಲರ ಮೈಯಲ್ಲಿ ರಕ್ತ ಹರಿತದೇನು? ಎಂದು ಪ್ರಶ್ನಿಸುವನು. ಬಸವಣ್ಣನು. ಹೌದೆನ್ನುವನು. ಹಾಗಾದರೆ ತೋರಿಸೆನ್ನಲು, ಅವನು ಆ ಕೂಡಲೇ ಕಂಬಳಿ ನಾಗಿದೇವನನ್ನು ಕರೆಸುವನು. ಸಭೆಯಲ್ಲಿಯೇ ಆತನ ಹೆಬ್ಬೆರಳನ್ನು ಒತ್ತುವನು. ಆಗ ಹಾಲಿನ ಹೊಳೆ ಹರಿಯತೊಡಗುವುದು.[೧೮] ಇಲ್ಲಿ ಆತನ ಹೆಬ್ಬೆರಳಿನಿಂದ ಹಾಲು ಹರಿಯಿತೋ? ಇಲ್ಲವೊ? ಇದು ಮುಖ್ಯವಲ್ಲ. ಒಬ್ಬ ಶ್ವಪಚನೂ ಶ್ರೇಷ್ಠ ಶಿವಭಕ್ತನಾಗಬಲ್ಲ ಎಂಬುದನ್ನು ಬಸವಣ್ಣನು ಎಂಟುನೂರು ವರ್ಷಗಳಷ್ಟು ಹಿಂದೆಯೇ ಸಾರಿದನು. ಇದನ್ನೇ ಪವಾಡಕಥೆ ತಿಳಿಸುತ್ತದೆ. ಈ ಕಥೆಯ ಹಿಂದೆ ಬಸವಣ್ಣನ ಮಹಾಮಾನವ ವ್ಯಕ್ತಿತ್ವ ಅನಾವರಣಗೊಂಡಿದೆ. ಮಾನವರೆಲ್ಲಾ ಒಂದು. ಮೇಲು–ಕೀಳು ಎಂಬುದಿಲ್ಲ. ಇದನ್ನೆಲ್ಲಾ ನಾವೇ ನಮ್ಮ ಸ್ವಾರ್ಥ ಹಿತಾಸಕ್ತಿ, ಸ್ವಲಾಭ ಸಮೃದ್ಧಿಗೋಸ್ಕರ ಮಾಡಿಕೊಂಡಿದ್ದೇವೆ. ಜಾತಿಗೋಡೆಗಳನ್ನು ಕಟ್ಟಿಕೊಂಡಿದ್ದೇವೆ ಎಂಬುದನ್ನು ಈ ಕಥೆ ಸ್ಪಷ್ಟಪಡಿಸಿದೆ.

ಕಳ್ಳರನ್ನು, ಹಗರಣಿಗರನ್ನು, ಕೊಲೆಗಡುಕರನ್ನು ಮೋಸಗಾರರನ್ನು ಹಾಗೂ ವೇಶ್ಯೆಯರನ್ನು ಬಸವಣ್ಣನು ಮಾನವೀಯ ದೃಷ್ಟಿಯಿಂದ ಕಂಡು ಅವರನ್ನು ಸನ್ಮಾರ್ಗಕ್ಕೆ ಹಚ್ಚಿದನು. ಅವರಲ್ಲಿರುವ ಕುಹಕ ಗುಣಗಳನ್ನು, ಅಜ್ಞಾನವನ್ನು ತಮ್ಮ ಸತ್ಸಂಗ, ಸತ್ತ್ರಭಾವಗಳಿಂದ ದೂರೀಕರಿಸಿ ಅವರನ್ನು ನಿಜವಾದ ಅರ್ಥದಲ್ಲಿ ಮಾನವರನ್ನಾಗಿಸಿದನು. ಅವರಿಗೆ ಬದುಕಿನಲ್ಲಿ ಭರವಸೆವುಂಟಾಗುವಂತೆ ಮಾಡಿ, ಪುನಃ ಅವರು ಹೊಸ ಬದುಕನ್ನು ಸಾಗಿಸಲು ಅವರನ್ನು ಅಣಿಗೊಳಿಸಿದುದು ಸಾಮಾನ್ಯವಾದುದಲ್ಲ. ಬಸವಣ್ಣನ ಸಹನೆ, ತಾಳ್ಮೆ ಬೆಟ್ಟದಷ್ಟು. ಎಂಥ ಕ್ರೂರಿಗಳೂ ಅವರೆದುರು ಸದ್ಗುಣಿಗಳಾಗಿ ಹೋಗುತ್ತಿದ್ದರು. ಆತನದು ಪರುಷಶಕ್ತಿ. ಮುಟ್ಟಿದ್ದೆಲ್ಲ ಚಿನ್ನ ಮಾಡುವ ಶಕ್ತಿ ಆತನಲ್ಲಿತ್ತೆನ್ನುವರು. ಇದನ್ನೇ ವಾಸ್ತವಾರ್ಥದಲ್ಲಿ ಅವನನ್ನು ಸಮಾಜ ಸುಧಾರಕನೆಂದು ಕರೆಯುವುದು. ಸಮಾಜ ಸುಧಾರಣೆಯ ಹಿನ್ನೆಲೆಯಲ್ಲಿ ಅವನ ಮಾನವಾನುಕಂಪೆ ಓತಪ್ರೋತವಾಗಿ ಹರಿದುದನ್ನು ಪುರಾಣಕಾರರು ಅವನನ್ನು ಕುರಿತಿದ್ದ ಅನೇಕ ಪವಾಡ ಕಥೆಗಳ ಮೂಲಕ ತೋರ್ಪಡಿಸಿದ್ದಾರೆ.

ಒಮ್ಮೆ ಬಸವಣ್ಣನ ದಾಸೋಹದ ಮನೆಯಲ್ಲಿನ ಕೆಲಗೋವುಗಳನ್ನು ಕಳ್ಳರು ಕದ್ದೊಯ್ಯುವರು. ಆಗ ಅವನು ಕರುಗಳು ತಾಯಿಯನ್ನು ಅಗಲಿ ಇರಬಾರದೆಂದು ಅವುಗಳನ್ನೂ ಆ ಕಳ್ಳರ ಬಳಿಗೆ

ಕಳಿಸಿಕೊಡುವನು. ಇದನ್ನು ತಿಳಿದ ಆ ಕಳ್ಳರು ಪಶ್ಚಾತ್ತಾಪ ಪಡುವರು. ಗೋವುಗಳನ್ನು ತಿರುಗಿ ತಂದುಕೊಟ್ಟು ಸದ್ಗುಣಿಗಳಾಗುವರು.[೧೯] ಕಳ್ಳರು ಬಸವಣ್ಣನ ಸತ್ತ್ರಭಾವಕ್ಕೆ ಒಳಗಾಗಿ ಸನ್ಮಾರ್ಗದಲ್ಲಿ ನಡೆಯುವರು. ಕಳ್ಳರ ಮನಸ್ಸನ್ನು ಹೇಗೆ ಪರಿವರ್ತಿಸಬೇಕೆಂಬುದನ್ನು ಬಸವಣ್ಣನು ಚೆನ್ನಾಗಿ ಅರಿತಿದ್ದನು. ಒಬ್ಬ ಮನುಷ್ಯ ಏಕೆ ಕಳ್ಳನಾಗುತ್ತಾನೆ? ಆತನಿಗೆ ಏನಾದರೂ ಕಡಿಮೆ ಬಿದ್ದಾಗ ತಾನೆ? ಅದನ್ನು ಆತನಿಗೆ ಕೊಟ್ಟುಬಿಟ್ಟರೆ ಆತ ಕಳ್ಳತನವನ್ನು ಬಿಟ್ಟುಬಿಡುವನು. ಇದರಂತೆ ಯಾವುದೇ ಸಮಸ್ಯೆ ಇರಲಿ, ಬಸವಣ್ಣನು ಅದರ ಆಳಕ್ಕಿಳಿದು ಪರಿಹರಿಸುತ್ತಿದ್ದನು. ಮನಃಪರಿವರ್ತನೆಯೇ ಎಲ್ಲ ಒಳ್ಳೆಯ ಕಾರ್ಯಗಳಿಗೆ ನಾಂದಿ ಎಂಬುದನ್ನು ಬಸವಣ್ಣನು ಚೆನ್ನಾಗಿ ಅರಿತಿದ್ದನು. ಮನುಷ್ಯನ ಮನಸ್ಸನ್ನು ಭೇದಿಸುವ ಮಹಾಮಾನವಶಕ್ತಿ, ಅಂತಃಕರುಣೆ ಅವನಲ್ಲಿ ಮಡುಗಟ್ಟಿದ್ದವು. ಅದಕ್ಕೇ ಅವನು ಎಂಥ ಕ್ರೂರ ಶಕ್ತಿಗಳಿಗೂ, ಕೊಲೆಗಡುಕರಿಗೂ ಹೆದರಲಿಲ್ಲ. ಕೊಲೆಗಡುಕರೇ ಕೊಲೆಮಾಡಲು ಬಂದು, ಮಾಡಲಾಗದೆ ಹೆದರಿ ಓಡಿದರು. ಅಂಥವರೂ ಸದ್ಗುಣಿಗಳಾದರು. ಅಂಥ ಒಂದು ಪ್ರಸಂಗ ಪವಾಡಕಥೆಯೊಂದರಲ್ಲಿ ವರ್ಣಿತಗೊಂಡುದನ್ನು ಕಾಣಬಹುದು. ಬಸವಣ್ಣನು ಒಂದು ದಿನ ಶಿವಯೋಗ ನಿದ್ರೆಯಲ್ಲಿದ್ದಾಗ ಅವನನ್ನು ಕೊಲೆಮಾಡಲು ಏಳು ಜನ ಜಂಗಮ ವೇಷದಾರಿ ಕೊಲೆಗಡುಕರು ಬರುವರು. ಅವರು ಬಸವಣ್ಣನನ್ನು ಇರಿಯಲು ಹೋದಾಗ ಆತನಿಗೆ ಎಚ್ಚರವಾಗುವುದು, ಆ ಕೂಡಲೇ 'ಶರಣು, ಶರಣು ಎಮ್ಮಾಳಿದರೆ' ಎನ್ನುತ್ತ ಅವರಿಗೆ ನಮಸ್ಕರಿಸುವನು. ಇದರಿಂದ ಆ ಕೊಲೆಗಡುಕರಿಗೆ ತಾವು ಮಾಡಲು ಬಂದ ಕಾರ್ಯ ಹೇಯವಾದುದೆನ್ನಿಸಿ ಪಶ್ಚಾತ್ತಾಪ ಪಡುವರು. ಅಂದಿನಿಂದ ಅವರು ಆ ಕೆಲಸ ಬಿಟ್ಟು ಕೊಟ್ಟು ಭಕ್ತರಾಗಿ ಬದುಕತೊಡಗುವರು, ಅವರಿಗೆ ಬಸವಣ್ಣನು ನಿಜಲಿಂಗದೇವ, ನಿಜಲಿಂಗ ಚಿಕ್ಕಯ್ಯ, ನಿಜಲಿಂಗ ಬಲ್ಲಯ್ಯ, ನಿಜಲಿಂಗ ಬಾಳಣ್ಣ, ನಿಜಲಿಂಗ ಕಲ್ಲಯ್ಯ, ನಿಜಲಿಂಗ ಚಾಮಯ್ಯ, ನಿಜಲಿಂಗ ಶಾಂತರೆಂದು ಹೆಸರಿಡುವನು.[೨೦] ಅವರ ಜೀವನದಲ್ಲಾದ ಇಂಥ ಮಹತ್ವದ ಮಾರ್ಪಾಟು ಅವರನ್ನು ಮಾನವರನ್ನಾಗಿಸಿ ಅವರಿಗೆ ಹೊಸ ಬದುಕನ್ನು ನೀಡಿತು. ದುಷ್ಟರ, ಕೊಲೆಗಡುಕರ, ಕಳ್ಳರ ಮನಸ್ಸನ್ನು ಪರಿವರ್ತಿಸುವ ಬಸವಣ್ಣನ ತಂತ್ರ, ಅವರ ಮಾನವೀಯ ವ್ಯಕ್ತಿತ್ವ ನಮಗಿಂದು ಅನುಕರಣೀಯವಾಗಿದೆ. ಆದರ್ಶಪ್ರಾಯವಾಗಿದೆ. ನಾವಿಂದು ಈ ತಂತ್ರ ಬಳಸಿದರೆ ನಮ್ಮ ನಮ್ಮಲ್ಲಿ ಅಸೂಯೆ, ದ್ವೇಷ, ಕಾದಾಟಗಳೆಲ್ಲ ಮಾಯವಾಗುತ್ತವೆ. ಜನ ಸನ್ಮಾರ್ಗದಲ್ಲಿ ಸುಖದಿಂದ ಬಾಳುವರು.

ಬಸವಣ್ಣನು ನಡೆಸುತ್ತಿದ್ದ ದಾಸೋಹದಲ್ಲಿ ಕೇವಲ ಭಕ್ತರಿಗಷ್ಟೇ ಪ್ರವೇಶವಿದ್ದುದನ್ನರಿತು ಒಮ್ಮೆ ಕೆಲ ಹಗರಣಿಗರು ಕರಿಯ ಎಳೆಯ ಬದನೆಕಾಯಿಗಳನ್ನು ಲಿಂಗಗಳಂತೆ ಅರಿವೆಯಲ್ಲಿ ಕಟ್ಟಿ ಕೊರಳಿಗೆ ಹಾಕಿಕೊಂಡು ಬರುವರು. ಬಸವಣ್ಣನು ಎಂದಿನಂತೆ ಭಕ್ತಿಪೂರ್ವಕವಾಗಿ ಅವರಿಗೆ ಸ್ವಾಗತ ಬಯಸುವನು. ಲಿಂಗಪೂಜೆಗೂ ಅಣಿಮಾಡಿ ಕೊಡುವನು, ಆಗ ಅವರು ಒಬ್ಬರ ಮುಖವನ್ನೊಬ್ಬರು ನೋಡತೊಡಗುವರು. ಬಸವಣ್ಣನು ಹೀಗೇಕೆ ನೋಡುವಿರಿ ಆಳಾದ ನನ್ನೊಡನೆ ಸರಸವೆ? ಸಂಗಮನಾಥಾ ಹೆದರುವರೆ? ಸೆಜ್ಜೆ ಉಪ್ಪರಿಸಿ ಎನ್ನುವನು. ದೇವರು ಇದ್ದದ್ದೇ ಆದರೆ ತಮ್ಮ ಮರ್ಯಾದೆ ಉಳಿಯುವದೆಂದು ಭಕ್ತಿಯಿಂದ ತಾವು ಕಟ್ಟಿಕೊಂಡು ಬಂದ ಬದನೆಕಾಯಿಗಳನ್ನು ಬಿಚ್ಚುವರು. ಆಗ ಅವೆಲ್ಲ ಲಿಂಗಗಳಾಗಿದ್ದುವು.[೨೧] ಅವರೆಲ್ಲರಿಗೂ ಆಶ್ಚರ್ಯವಾಯಿತು. ಬಸವಣ್ಣನ ಸಂಗಪ್ರಭಾವ, ಭಕ್ತಿನಿಷ್ಠೆ ಕಾರಣವಾಗಿ ಅವರ

ಮನಸ್ಸು ಪರಿವರ್ತನೆಯಾಯಿತು, ಅವರೆಲ್ಲ ಭಕ್ತರಾಗಿ ಬಿಡುವರು. 'ದೃಷ್ಟಿಯಂತೆ ಸೃಷ್ಟಿ' ಎನ್ನುವ ಹಾಗೆ ನಾವು ಹೇಗೆ ಇರುವೆವೋ ಹಾಗೆ ಜಗತ್ತು ನಮಗೆ ಪರಿಣಮಿಸುತ್ತದೆ. ಬಸವಣ್ಣನು ಎಲ್ಲೆಲ್ಲೂ ಶಿವನನ್ನೇ ಅರ್ಥಾತ್ ಲಿಂಗವನ್ನೇ ಕಂಡವನು, ಅವನದು ಶಿವಾನುಭವ ದೃಷ್ಟಿ, ಅವನಿಗೆ ಎಂದೂ ಕೆಟ್ಟದ್ದು ಕಾಣಿಸದು, ಕೆಟ್ಟದ್ದು ಇದ್ದರೂ ಅದು ಅವನಿಗೆ ಒಳ್ಳೆಯದಾಗಿಯೇ ಕಾಣುತ್ತದೆ. ಅವನ ಸ್ಪರ್ಶ, ನೋಟ, ನುಡಿಗಳೆಲ್ಲ ಪರುಷ ಸಮಾನವಾದುವು. ಅವನ ಸತ್ಸಂಗದಿಂದ ಎಂಥ ಕೆಟ್ಟವರೂ ಒಳ್ಳೆಯವರಾಗುವರು: ಸದ್ಗುಣಿಗಳಾಗುವರು, ಎಂಬುದನ್ನು ವ್ಯಕ್ತಪಡಿಸಿದೆ, ಈ ಪವಾಡಕಥೆ.

ವೇಷದಾರಿ ಜಂಗಮರನ್ನು ಸನ್ಮಾರ್ಗಕ್ಕೆ ಹಚ್ಚಿದಂತೆ ಬಸವಣ್ಣನು ವೇಶ್ಯೆಯರನ್ನೂ ಆ ಹೀನ ಕಾರ್ಯದಿಂದ ಮುಕ್ತಗೊಳಿಸಿ ಸದ್ ಗೃಹಿಣಿಗಳನ್ನಾಗಿಸಿದನು, ಶಿವಭಕ್ತೆಯರನ್ನಾಗಿಸಿದನು. ಆದರೂ ಎಲ್ಲರಂತೆ ಬಾಳಬೇಕೆಂಬ ಸದಾಶಯವನ್ನು ಹೊಂದಿದ್ದನು ಬಸವಣ್ಣನು. ವೇಶ್ಯೆಗಾರಿಕೆ ಮೊದಲಿನಿಂದಲೂ ನಡೆದುಕೊಂಡು ಬಂದಂಥ ಒಂದು ಅನಿಷ್ಟ ಪದ್ಧತಿ, ಹನ್ನೆರಡನೇ ಶತಮಾನದಲ್ಲಿ ಸೂಳೆ ಸಂಕವ್ವೆ, ನಿಂಬೆ, ಮಾಳಾದೇವಿ ಹಾಗೂ ಮಾಯಾದೇವಿ ಮುಂತಾದ ವೇಶ್ಯೆಯರಿದ್ದು, ಇವರೆಲ್ಲ ಈ ಕಸುಬನ್ನು ಬಿಟ್ಟು ಶಿವಭಕ್ತೆಯರಾಗಲು ಕಾರಣಕರ್ತರೆಂದರೆ ಬಸವಣ್ಣನೇ. ಅವನು ಈ ವೇಶ್ಯೆಯರನ್ನು ಅತ್ಯಂತ ಮಾನವೀಯ ದೃಷ್ಟಿಯಿಂದ ಕಂಡು ಅವರ ಉದ್ಧಾರದ ಬಗ್ಗೆ ಹಗಲಿರುಳು ಚಿಂತಿಸಿದನು. ಅವರೆಲ್ಲರ ಪರವಾಗಿ ನಿಂತುಕೊಂಡ ಸಂಗತಿ ಪವಾಡಕಥೆಗಳಿಗೆ ವಸ್ತುವಾಗಿದೆ. ಅಂಥ ಕೆಲ ಕಥೆಗಳನ್ನಿಲ್ಲಿ ನೋಡಬಹುದು: ಬಿಜ್ಜಳನು ಒಂದು ದಿನ ತನ್ನ ನಾಟಕ ಶಾಲೆಯಲ್ಲಿ ಬಸವಣ್ಣನಿಗೆ ಮೋಹಿನಿಯ ಪಾತ್ರವನ್ನು ತೋರಿಸುತ್ತಿರುವ ವೇಳೆಯಲ್ಲಿ ಆಕೆಯ ಕಲೆಯನ್ನು ಮೆಚ್ಚಿಕೊಂಡ ಜಂಗಮನೊಬ್ಬ ಆಕೆಗೆ ಲಿಂಬೆಯ ಹಣ್ಣೊಂದನ್ನು ಎಸೆಯುವನು. ಇದನ್ನು ಕಂಡು ಬಿಜ್ಜಳನು ಅಸಹ್ಯಪಟ್ಟುಕೊಂಡು ಆತನ ಮೇಲೆ ಕೋಪಗೊಳ್ಳುವನು. ಆಗ ಬಸವಣ್ಣನು ಆತನ ಕೋಪವನ್ನು ಶಾಂತಮಾಡಿ ಗುರು ಮೆಚ್ಚಿ ಲಿಂಗವನ್ನು ಕೊಟ್ಟಿದ್ದಾನೆ. ಎನ್ನುವನು. ಲಿಂಬೆ ಅದು ಹೇಗೆ ಲಿಂಗವಾಗುತ್ತದೆ ಎಂದಾಗ ಬಸವಣ್ಣನು ಅದನ್ನು ತರಿಸಿ ತೋರಿಸಲು, ಅದು ಲಿಂಗವಾಗಿದ್ದುದು ಕಂಡು ಬಂತು.[೨೨] ಮುಂದೆ ಈ ಪವಾಡಕಥೆ 'ಸಿಂಗಿರಾಜ ಪುರಾಣ'[೨೩], 'ರಾಘವಾಂಕ ಚರಿತ್ರೆ'[೨೪] ಮತ್ತು 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ'[೨೫]ಗಳಲ್ಲಿ ವಿಸ್ತೃತಗೊಂಡು ವರ್ಣಿತವಾಗಿದೆಯಲ್ಲದೆ ಬೇರೆ ತಿರುವು ಪಡೆದುದನ್ನು ಕಾಣುವೆವು. ಮುಖ್ಯವಾಗಿ ಇವುಗಳಲ್ಲಿ ವೇಶ್ಯೆಯರ ಮನಃ ಪರಿವರ್ತನೆ ನಡೆದುದನ್ನು ಕಾಣುವೆವು. ಜಂಗಮ ಕೊಟ್ಟ ಲಿಂಬೆಯ ಹಣ್ಣನ್ನು ಲಿಂಗವೆಂದೇ ಭಾವಿಸುವುದು, ಶಿವಪುರಾಣ ಕೇಳಿ ಶಿವಭಕ್ತೆಯರಾಗಬೇಕೆಂದು ಹಠಹಿಡಿದು ಕೂಡ್ರುವದು, ಈ ಎಲ್ಲ ಅಂಶಗಳು ಇಲ್ಲಿ ಎಡೆ ಪಡೆದು ನಾಟಕೀಯ ರೀತಿಯಲ್ಲಿ ಬೆಳವಣಿಗೆಯನ್ನು ಪಡೆದಿವೆ. ಲಿಂಬೆ ಕೊಳೆತು ಹೋಗುವಂಥದು ಅದು ಹೇಗೆ ಲಿಂಗವಾಗಬಲ್ಲುದು? ವೇಶ್ಯೆ ಅದು ಹೇಗೆ ಶಿವಭಕ್ತೆಯಾಗುತ್ತಾಳೆ? ಎಂದು ಬಿಜ್ಜಳ ಬಸವಣ್ಣನಿಗೆ ಪ್ರಶ್ನಿಸಲು, ಬಸವಣ್ಣನು ಸಾಧ್ಯವಿದೆಯೆಂದು ಆ ವೇಶ್ಯೆಯನ್ನು ಕರೆಸಿ ನೋಡಲು, ಆಕೆ ಪೂಜಿಸುತ್ತಿದ್ದ ಲಿಂಬೆಹಣ್ಣು ಲಿಂಗವಾಗಿದ್ದುದು ಕಂಡುಬಂತು, ಇಲ್ಲಿ ಲಿಂಬೆ ಲಿಂಗವಾಯಿತೋ ಇಲ್ಲವೋ? ಇದು ಮುಖ್ಯವಾಗದು. ಅಂದಿನ ಸಮಾಜದಲ್ಲಿ ವೇಶ್ಯೆಯರೂ ಶಿವಭಕ್ತೆಯರಾಗಬಲ್ಲರು, ಅವರೂ ಪುರುಷನ ಸಮಾನ ಧಾರ್ಮಿಕ ಕಾರ್ಯಗಳಲ್ಲಿ

ಭಾಗವಹಿಸಬಲ್ಲರು ಎಂಬುದನ್ನು ತೋರಿಸುವುದು ಈ ಕಥೆಯ ಧ್ಯೇಯವಾಗಿದೆ. ಈ ಕಥೆ ಬಸವಣ್ಣನ ಮಹಾಮಾನವ ವ್ಯಕ್ತಿತ್ವ, ಅವನ ಮಾನವಾನುಕಂಪೆಗಳನ್ನು ಧ್ವನಿಸಿದೆ. ಅವನ ಪ್ರಗತಿಪರ ವಿಚಾರಧಾರೆಗೆ ಇದೊಂದು ಶ್ರೇಷ್ಠ ನಿದರ್ಶನವಾಗಿದೆ. ಅವನ ಚರಿತ್ರೆಯಲ್ಲಿ ಹಾಸು–ಹೊಕ್ಕಾಗಿ ಬೆರೆತ ಇಂಥ ಅನೇಕ ಪವಾಡ ಕಥೆಗಳು ಅವನ ವ್ಯಕ್ತಿತ್ವದ ಹಲವು ಮುಖಗಳನ್ನು ನಮಗೆ ದರ್ಶನ ಮಾಡಿಸುತ್ತವೆ, ಆ ಕಥೆಗಳ ಹಿಂದಿರುವ ಅಂತರಾರ್ಥವನ್ನು ಅಂತಸ್ಸತ್ವವನ್ನು ನಾವು ಗ್ರಹಿಸಬೇಕಷ್ಟೇ.

ಬಸವಣ್ಣನು ಕಂಠಕ ಪರಿಹಾರಿ, ದಯಾಳು, ಕಷ್ಟಗಳಲ್ಲಿ ಸಿಲುಕಿಕೊಂಡವರನ್ನು ಎತ್ತಿಹಿಡಿಯುವಂಥವನು. ಎಲ್ಲರೂ ತಮ್ಮಂತೆ ಎಂದು ಬಗೆದು ನಡೆಯುವ ಅವನು ಪರರಿಗೆ ಆದ ನೋವು ಸಂಕಷ್ಟಗಳು ತನಗೇ ಆಗಿರುವವೆಂದು ಅವುಗಳ ಪರಿಹಾರಕ್ಕಾಗಿ ಶ್ರಮಿಸುವಂಥವನು, ಇದಕ್ಕೆ ನಿದರ್ಶನವಾಗಬಲ್ಲ ಗೊಲ್ಲಿತಿ ಪವಾಡ ಕಥೆಯೊಂದನ್ನಿಲ್ಲಿ ನೋಡಬಹುದು: ಒಂದು ದಿನ ಬಸವಣ್ಣನು ಓಲಗದಲ್ಲಿ ಕುಳಿತಾಗ ಒಮ್ಮಿಂದೊಮ್ಮೆಲೇ ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿ ಏನನ್ನೋ ಹಿಡಿಯುವಂತೆ ಮುಂದಕ್ಕೆ ಚಾಚಿ 'ಓ! ಹೋ! ಅಂಜದಿರು ಚೆಲ್ಲುವುದಿಲ್ಲ' ಎನ್ನುವನು, ಇದನ್ನು ಕೇಳಿ ಬಿಜ್ಜಳನು 'ಹೀಗೇಕೆ ಬಸವಾ, ಏನೋ ನಿನ್ನ ವರ್ತನೆಯಲ್ಲಿ ಬದಲಾವಣೆಯಾಗಿದೆ' ಎನ್ನುವನು, ಆಗ ಬಸವಣ್ಣನು ಇಲ್ಲಿಂದ ಅರ್ಧಗಾವುದ ದೂರದಲ್ಲಿ ಗೊಲ್ಲಿತಿಯೊಬ್ಬಳು ಮಜ್ಜಿಗೆ ಹರವಿ ಹೊತ್ತುಕೊಂಡು ಬರುವಾಗ ಆಕೆಯ ಕಾಲು ಜಾರಿತು. ಆಗ ಆಕೆ 'ಬಸವಾ ಬಸವಾ' ಎಂದು ನನ್ನನ್ನು ಕರೆದಳು, ಆದ್ದರಿಂದ ನಾನದನ್ನು ಕೇಳಿ ಇಲ್ಲಿ ಕೂತೇ ಕೈಚಾಚಿ ಬೀಳಲಿರುವ ಆಕೆಯ ಮಜ್ಜಿಗೆಯ ಹರವಿಯನ್ನು ಎತ್ತಿ ಹಿಡಿದೆನು ಎನ್ನುವನು, ಇದು ಹೇಗೆ ಸಾಧ್ಯ ಎನ್ನಲು ಬಸವಣ್ಣನು ಆ ಗೊಲ್ಲಿತಿಯನ್ನೇ ಸಭೆಗೆ ಕರೆಸುವನು. ಬಿಜ್ಜಳ ಆಕೆಯನ್ನು ವಿಚಾರಿಸಲು, ಆಕೆ ಹೌದೆನ್ನುತ್ತ ತಾನು ಜಾರಿದಾಗ ಕಾಲಿಗೆ ಹತ್ತಿದ ಕೆಸರನ್ನು ತೋರಿಸುವಳು. ಬಿಜ್ಜಳ ಇದನ್ನು ನಂಬಿ ಆಕೆಯನ್ನು ಕಳಿಸುವನು, ಬಸವಣ್ಣನ ಸರ್ವಾಂತರ್ಯಾಮಿ ವ್ಯಕ್ತಿತ್ವಕ್ಕೆ ಮಣಿದು ಅವನನ್ನು ಬಾಯ್ತುಂಬ ಕೊಂಡಾಡುವನು.[೨೬] ಇಲ್ಲಿ ಬಸವಣ್ಣನು ದಯಾಮಯಿ, ಸಾಮಾನ್ಯಜನ ಸಂಕಷ್ಟದಲ್ಲಿ ಸಿಲುಕಿಕೊಂಡಾಗ ಅವರ ಸಹಾಯಕ್ಕೆ ಧಾವಿಸುವಂತಹವನು ಎಂಬುದನ್ನು ಈ ಕಥೆ ಬಿಂಬಿಸುತ್ತದೆ. ಇನ್ನೊಬ್ಬರು ಕಷ್ಟದಲ್ಲಿ ಸಿಲುಕಿಕೊಂಡಾಗ ಅವರ ಸಹಾಯಕ್ಕೆ ಹೋಗಿ, ಕೈಲಾದ ಮಟ್ಟಿಗೆ ಅವರಿಗೆ ಒಳ್ಳೆಯದನ್ನು ಮಾಡುವುದು ನಿಜವಾದ ಮಾನವನ ಲಕ್ಷಣ. ಬಸವಣ್ಣನು ಮಂತ್ರಿಯಾಗಿದ್ದರೂ ಸಾಮಾನ್ಯ ಜನರಿಗೆ ಆದ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸುತ್ತ ಅವನು ಲಕ್ಷ್ಯ ಹರಿಸಿದ್ದು ಮಹತ್ವದ ಸಂಗತಿಯಾಗಿದೆ.

೨. ವೀರಶೈವ ತತ್ವಗಳನ್ನು ಸಾಂಕೇತಿಕಾರ್ಥದಲ್ಲಿ ಒಳಗೊಂಡ ಪವಾಡಕಥೆಗಳು

ವೀರಶೈವ ಧರ್ಮಕ್ಕೆ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ ಹಾಗೂ ಷಟ್‌ಸ್ಥಲವೇ ಆತ್ಮವೆಂದು ಕರೆಯುವುದುಂಟು. ಈ ತತ್ವಗಳನ್ನು ಬಸವಣ್ಣನು ತನ್ನ ನಿತ್ಯದ ಬದುಕಿನಲ್ಲಿ ಚಾಚೂ ತಪ್ಪದೇ ಅಳವಡಿಸಿಕೊಂಡು ನಡೆದವನು. ಇವು ಆಚರಣೆಯ ಮಹತ್ವವನ್ನು ತಮ್ಮ ನಡೆ–ನುಡಿಗಳ ಮೂಲಕ ಮನವರಿಕೆ ಮಾಡಿಕೊಟ್ಟವನು. ಹೀಗೆ ಧರ್ಮದ ತತ್ವಗಳಿಗೆ ಬದ್ಧನಾಗಿ ನಡೆದುಕೊಂಡುದನ್ನು ಪುರಾಣಕಾರರು ಸಾಮಾನ್ಯ ಜನತೆಗೆ

ತಿಳಿಸಲು ಪವಾಡ ಕಥೆಗಳನ್ನು ವಾಹಕಗಳ ರೂಪದಲ್ಲಿ ಬಳಸಿಕೊಂಡಿದ್ದಾರೆ. ಗಹನ (abstract) ವಾದ ಧಾರ್ಮಿಕ ತತ್ವಗಳು ಸಾಮಾನ್ಯ ಜನರಿಗೆ ಅರ್ಥವಾಗವು. ತಾರ್ಕಿಕ ಜಟಿಲತೆಯಿಂದ ಕೂಡಿದ ಆ ತತ್ವಗಳನ್ನು ನೇರವಾಗಿ ಹೇಳಿದರೆ ಅವು ಅವರಿಗೆ ಮುಗಿಲ ಮಲ್ಲಿಗೆಯಾಗುವವು. ಪಂಡಿತರಿಗೆ, ಸುಶಿಕ್ಷಿತರಿಗೆ ಮಾತ್ರ ಅವು ಅಂಗೈ ಹುಣ್ಣಿನಂತೆ ದೃಷ್ಟಿ ಮುಷ್ಟಿ ಗ್ರಾಹ್ಯವೆನ್ನುವಷ್ಟು ಸುಲಭವಾಗಿ ಅರ್ಥವಾಗುತ್ತವೆ. ಸಾಮಾನ್ಯ ಜನರಿಗಾದರೋ ಆ ಶಕ್ತಿ ಇರುವುದಿಲ್ಲ. ಆದುದರಿಂದ ಪುರಾಣಕಾರರು ಅವರಿಗೆ ಧಾರ್ಮಿಕ ತತ್ವಗಳು ಸುಲಭವಾಗಿ ಪರಿಣಾಮಕಾರಿಯಾಗಿ ತಿಳಿಯಲೆಂದು ಅಮೂರ್ತ ತತ್ವಗಳ ಸ್ಥಾನದಲ್ಲಿ ವಸ್ತು, ವ್ಯಕ್ತಿ ಹಾಗೂ ಘಟನೆಗಳನ್ನು ಬಳಸಿ ಸಾಂಕೇತಿಕತೆಯನ್ನುಳ್ಳ ಪವಾಡ ಕಥೆಗಳನ್ನು ಕಟ್ಟಿದ್ದುಂಟು. ಇದಕ್ಕೆ ಉದಾಹರಣೆಯಾಗಿ 'ಜಂಗಮಪ್ರಾಣಿ ಬಸವಣ್ಣ' ಎಂಬ ಪವಾಡ ಕಥೆಯನ್ನಿಲ್ಲಿ ನೋಡಬಹುದು: ಒಂದು ದಿನ ಬಸವಣ್ಣನು ಮಲಗಿಕೊಂಡಾಗ ಅವನನ್ನು ಕಾಣಲೆಂದು ಕೆಲ ಜಂಗಮರು ಬರುವರು. ದ್ವಾರಪಾಲಕ ಆಮೇಲೆ ಬನ್ನಿ, ಅವರು ಮಲಗಿಕೊಂಡಿದ್ದಾರೆ ಎಂದು ಹೇಳುವನು. ದೂರದಿಂದ ಬಂದ ಅವರಿಗೆ ನಿರಾಶೆಯಾಗುವುದು. ಹಾಗೆಯೇ ಹಿಂತಿರುಗಿ ಹೋಗಿಬಿಡುವರು. ಆ ಕೂಡಲೇ ಒಳಗಿದ್ದ ಬಸವಣ್ಣನ ಪ್ರಾಣವು ಅವರನ್ನು ಹಿಂಬಾಲಿಸಿ ಹೋಗುವುದು. ಕೆಲಸಮಯದ ನಂತರ ಅವನ ಪತ್ನಿ ನೀಲಲೋಚನೆ ಲಿಂಗಪೂಜೆಗೆ ವೇಳೆಯಾಗಿದೆ ಏಳಿ ಎಂದು ಎಚ್ಚರಿಸಬಂದಾಗ ಅವರ ಪ್ರಾಣ ಹೋದುದನ್ನರಿಯುವಳು. ಆಗ ಚೆನ್ನಬಸವಣ್ಣನೂ ಬಂದು ಹೀಗೇಕಾಯಿತು, ನಡೆದ ವಿಷಯವೇನೆಂದು ದ್ವಾರಪಾಲಕರನ್ನು ವಿಚಾರಿಸುವನು. ಜಂಗಮರು ಬಂದು ಹೋದ ವಿಷಯವನ್ನು ಆತ ತಿಳಿಸಲು, ಚನ್ನ ಬಸವಣ್ಣ ಆ ಜಂಗಮರನ್ನು ಹುಡುಕಿ ಮರಳಿ ಕರೆಸುವನು. ಆಗ ಬಸವಣ್ಣನ ಹೋದ ಪ್ರಾಣ ಬರುವುದು. ಅವರು ಎದ್ದು ಆ ಜಂಗಮರಿಗೆ ನಮಸ್ಕರಿಸುವರು.[೨೭]

'ಏಕಮೂರ್ತಿ ಸ್ತ್ರಯೋ ಭಾಗಾ ಗುರುರ್ಲಿಂಗಂ ತು ಜಂಗಮಃ
ಜಂಗಮಶ್ಚ ಗುರುರ್ಲಿಂಗಂ ತ್ರಿವಿಧಂ ಲಿಂಗಮುಚ್ಯತೇ'[೨೮]

ವೀರಶೈವ ಮತತತ್ವದಂತೆ ಒಂದೇ ಪರಶಿವವಸ್ತು. ಗುರು–ಲಿಂಗ–ಜಂಗಮ ಸ್ವರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆಯೆಂಬ ನಂಬುಗೆ. ಬಸವಣ್ಣನ ಪ್ರಾಣದಲ್ಲಿ ಶಿವಸ್ವರೂಪಿ ಜಂಗಮತ್ವದ ಸಾಮರಸ್ಯವಿದ್ದಿತೆಂಬುದು ಶಿವಾನುಭವಿಗಳಿಗೆ ಹೊಳೆದ ಸತ್ಯ. ಅವನು ಜಾಗ್ರತ್, ಸ್ವಪ್ನ ಹಾಗೂ ಸುಷುಪ್ತಿ ಈ ಮೂರೂ ಅವಸ್ಥೆಗಳಲ್ಲಿ ಗುರು–ಲಿಂಗ–ಜಂಗಮರನ್ನು ತನು–ಮನ–ಧನ ಪೂರ್ವಕವಾಗಿ ಆರಾಧಿಸುವಂಥವನು. ಬಸವಣ್ಣನ ಪ್ರಾಣ ಜಂಗಮರ ಹಿಂದೆ ಹೋಯಿತೆಂದರೆ ಏನರ್ಥ? ಅವನು ಜಂಗಮರನ್ನು ತನ್ನ ಪ್ರಾಣಕ್ಕಿಂತಲೂ ಮಿಗಿಲಾಗಿ ಆರಾಧಿಸುತ್ತಿದ್ದನು ಎಂದಲ್ಲವೇ? ಜಂಗಮರು ಮುನಿಸುಗೊಂಡರೆ, ನಿರಾಶೆ ಹೊಂದಿದರೆ ಅವನಿಗೆ ಪ್ರಾಣವೇ ಹೋದಂತಾಗುತ್ತಿತ್ತು ಎಂದು ಅರ್ಥವಿರಬೇಕು. ಇದು ಜನಸಾಮಾನ್ಯರಿಗೆ ಸುರೂಪ (concrete)ದಲ್ಲಿ ಕಥಿಸಲು ಅಸಾಧ್ಯವಾದ ಅಂಶವಾಗಿದೆ. ಅದಕ್ಕೆ ಪುರಾಣಕಾರರು ಇದನ್ನು ಈ ರೀತಿ ಸರಳಗೊಳಿಸಿ ಸಾಮಾನ್ಯರಿಗೆ ಬಸವಣ್ಣನ ಧ್ಯೇಯವನ್ನು ವಿಚಾರವನ್ನು ಪವಾಡಕಥೆಯ ಮೂಲಕ ತಿಳಿಸಲು ಮುಂದಾಗಿದ್ದಾರೆ. ಬಸವಣ್ಣನ ಜಂಗಮತತ್ವಕ್ಕೆ ಎಷ್ಟೊಂದು ಬದ್ಧನಾಗಿದ್ದನು ಎಂಬುದೂ ಈ ಕಥೆಯಿಂದ ವಿದಿತವಾಗುವುದು.

ವೀರಶೈವ ಧರ್ಮದ ಸೌಧ ಲಿಂಗ ತತ್ವದ ತಳಹದಿಯ ಮೇಲೆಯೇ ನಿಂತುಕೊಂಡಿದೆ.

'ಲಿಂಗ ಮದ್ಯ ಸರ್ವ ಜಗತ್' ಎನ್ನುವಂತೆ, ಬಸವಣ್ಣನು ಎಲ್ಲೆಲ್ಲೂ ಲಿಂಗವನ್ನೇ ಕಂಡನು. ಅವನದು ಶಿವದೃಷ್ಟಿ. ಹಿಂದೆಯೇ ನೋಡಿದಂತೆ ಅವನಿಗೆ ಹಗರಣಿಗರು, ಕಳ್ಳರು, ಕುಹಕಿಗಳು ಕಟ್ಟಿಕೊಂಡು ಬಂದ ಬದನೆಕಾಯಿಗಳು ಲಿಂಗಗಳಾಗಿಯೇ ಕಂಡವು. ವೇಶ್ಯೆಯರು ಲಿಂಬೆಹಣ್ಣು ಲಿಂಗವಾಗಿಯೆ ಕಾಣಿಸಿತು. ಒಮ್ಮೆ ಬಿಜ್ಜಳನು ಬಸವಣ್ಣನೊಂದಿಗೆ ಊರ ಮಧ್ಯದಲ್ಲಿ ಹಾಯ್ದು ಹೊರಟಾಗ, ಶಿವಭಕ್ತರೊಬ್ಬರ ಮನೆಯ ಮುಂದೆ ವಿಭೂತಿ ಲೇಪಿಸಿದ ಕುಂಬಳಕಾಯಿ ಒಟ್ಟಿದ್ದನ್ನು ನೋಡಿದ. ಆತ ವ್ಯಂಗ್ಯವಾಗಿ ಬಸವಣ್ಣನಿಗೆ ಏನು ಬಸವಾ ಇವರು ನಿನ್ನ ಶಿವಭಕ್ತರೇನು? ಎಂದು ಕೇಳಿದ. ಅದಕ್ಕೆ ಬಸವಣ್ಣನು ಹೌದೆನ್ನುವನು. ಹಾಗಾದರೆ ಇವರಿಗೆ ಲಿಂಗಗಳೇ ಇಲ್ಲವಲ್ಲ! ಇವರೇನು ಗರ್ಭಲಿಂಗಿಗಳೇ ಎಂದು ಕೇಳುವನು. ಹೌದು ಹೌದು ಬನ್ನಿ ತೋರಿಸುತ್ತೇನೆ ಎನ್ನುತ್ತ ಅವನು ಅವುಗಳನ್ನು ಒಡೆಯುವನು. ಒಳಗೆ ಲಿಂಗಗಳಿದ್ದವು.[೨೯] ಈ ಕಥೆ ಪುರಾಣಕಾರರ ಕೈಗಂಟೆಂಬುದು ಸ್ಪಷ್ಟ. ಲಿಂಗ ತತ್ವದ ಮೇಲ್ಮೆಯನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಇದು ಪ್ರೇರಿತಗೊಂಡಿದೆ. ಭವಿಬಿಜ್ಜಳ ಲಿಂಗವಂತರ ಆಚಾರಗಳನ್ನು, ನಡವಳಿಕೆಗಳನ್ನು ತುಚ್ಛವಾಗಿ ಕಂಡಾಗ ಆತನಿಗೆ ಆ ತತ್ವದ ಆಚರಣೆಯ ಮಹತ್ವವನ್ನು ಅರುಹುವ ಅವಶ್ಯಕತೆ ಉಂಟಾದಂತೆ ತೋರುತ್ತದೆ. ಅದಕ್ಕೇ ಈ ರೀತಿಯ ಪವಾಡ ಕಥೆಗಳು ಹುಟ್ಟಿಕೊಂಡಂತಿವೆ. ಕುಂಬಳ ಕಾಯಿಗಳಲ್ಲಿ ಲಿಂಗಗಳಿರಲಿ, ಬಿಡಲಿ, ಇದು ನಮಗೆ ಮುಖ್ಯವಲ್ಲ. ಭಕ್ತರ ಆಚರಣೆ ಮುಖ್ಯವಾದದ್ದೆಂದು ಈ ಕಥೆ ಸಾರುತ್ತದೆ.

ಒಮ್ಮೆ ಬಸವ ಬಿಜ್ಜಳರು ವೈಹಾಳಿಗೆಂದು ಹೊರಟಾಗ ಒಬ್ಬ ಶಿವಭಕ್ತ ಕಜ್ಜಾಯವೊಂದನ್ನು ತಂದು ಭಕ್ತಿಯಿಂದ ಬಸವಣ್ಣನಿಗೆ ಶಿವಪ್ರಸಾದವಿದೆ, ತೆಗೆದುಕೊಳ್ಳಿ ಎನ್ನುವನು. ಆಗ ಅದನ್ನು ಸ್ವೀಕರಿಸುವನು. ಸ್ವಲ್ಪ ಮುಂದೆ ಹೋಗಿ ಬಿಜ್ಜಳ ಒತ್ತಿನಂಗಡಿಯಿಂದ ಒಂದು ಕಜ್ಜಾಯ ತರಿಸಿ ಓ! ಬಸವಣ್ಣ ಇದನ್ನು ತಿನ್ನು ಎನ್ನುವನು. ಆಗ ಅವನು ಅದನ್ನು ನಾಯಿಗೆ ಹಾಕಿರಿ ಎನ್ನುವನು. ಹೀಗೇಕೆ ಬಸವಾ ಯಾವನೋ ಕೊಟ್ಟ ಕಜ್ಜಾಯ ಸ್ವೀಕರಿಸಿದಿ ಇದನ್ನು ಸ್ವತಃ ನಾನು ಕೊಡುತ್ತಿರುವೆ, ಒಲ್ಲೆನ್ನಬಹುದೆ? ಎನ್ನುವನು. ಅದಕ್ಕೆ ಅವನು ನೀವಿದನ್ನು ಪ್ರಸಾದ ಭಾವನೆಯಿಂದ ಕೊಡುತ್ತಿಲ್ಲ. ಆದ್ದರಿಂದ ಇದು ಹುಳಿತು ಹೋಗಿದೆ ಇದನ್ನು ತಿನ್ನಲು ನಾಯಿಯೇ ಬೇಕು, ನಾನಲ್ಲ ಎನ್ನುವನು. ಆಗ ಅದು ಹುಳಿತು ಹೋದುದು ತಿಳಿಯಿತು.[೩೦] ಈ ಕಥೆ ಪ್ರಸಾದ ತತ್ವದ ಮಹತ್ವವನ್ನು ಸಾರುತ್ತದೆ. ಪ್ರಸಾದವನ್ನು ಪವಿತ್ರ ಭಾವನೆಯಿಂದ ಕಂಡರೆ, ಸ್ವೀಕರಿಸಿದರೆ ವಿಷವಿದ್ದರೂ ಅದು ಅಮೃತವಾಗುವುದು. ಪ್ರಸಾದ ಭಾವನೆ ಇರದಿದ್ದರೆ ಅದು ಅಮೃತವಿದ್ದರೂ ವಿಷವಾಗುವುದು. ಇದಕ್ಕೊಂದು ನಿದರ್ಶನವಾಗಿ ಪವಾಡ ಕಥೆಯೊಂದನ್ನಿಲ್ಲಿ ನೋಡಬಹುದು: ಬಸವಣ್ಣನು ಭಕ್ತರಿಗಷ್ಟೇ ದಾಸೋಹ ಏರ್ಪಡಿಸಿ ಪ್ರಸಾದ ಕೊಡ್ತಾನೆ, ನಮಗೆ ಕೊಡ್ತಾ ಇಲ್ಲವೆಂದು ಕಬ್ಬಿಲರು ಬಿಜ್ಜಳನಿಗೆ ದೂರು ಕೊಡುವರು. ಬಿಜ್ಜಳ ಅವನನ್ನು ಕರೆಸಿ ಕಬ್ಬಿಲರಿಗೂ ಪ್ರಸಾದ ಕೊಡು ಎಂದು ಹೇಳುವನು. ಆಗಲಿ ಕೊಡುತ್ತೇನೆ ಎಂದು ಬಸವಣ್ಣನು ವಿಷವನ್ನು ಅರೆಸಿ ಕೊಪ್ಪರಿಗೆಯೊಂದರಲ್ಲಿ ತುಂಬಿಸುವನು. ಅದನ್ನು ಶಿವನಿಗರ್ಪಿಸಿ ಪ್ರಸಾಧ ತೆಗೆದುಕೊಳ್ಳ ಬನ್ನಿರಿ ಎಂದು ಅವರನ್ನು ಕರೆಯುವನು. ಇದನ್ನು ತಿಳಿದು ನಮಗಾದರೆ ವಿಷ, ಭಕ್ತರಿಗಾದರೆ ಅಮೃತಮಯ ಪ್ರಸಾದ ಕೊಡ್ತಾನೆ. ಇದು ಒಳ್ಳೆಯದು. 'ಜೀವವಿದ್ದರೆ ಕಾರಿಯ ಸೊಪ್ಪನ್ನಾದರೂ ತಿಂದು ಬದುಕೇವು. ವಿಷ ತಿಂದು ಸಾಯುವುದು ಬೇಡ ನಾವು ಬರುವುದಿಲ್ಲ' ಎಂದು ಹೇಳಿದರು. ಆಗ ಬಸವಣ್ಣನು ಆ

ವಿಷವನ್ನೇ ಭಕ್ತರಿಗೆ ಬಡಿಸಿದನು, ಭಕ್ತಿಯಿಂದ. ಪವಿತ್ರ ಭಾವನೆಯಿಂದ ಸ್ವೀಕರಿಸಿದ ಅವರಿಗೆ ಅದು ಅಮೃತ ಸಮಾನವಾದ ಪ್ರಸಾದವಾಗಿ ಪರಿಣಮಿಸಿತು.[೩೧] ನಾವು ಅದನ್ನು ಹೇಗೆ ಪರಿಭಾವಿಸುವೆವೋ ಅದು ಹಾಗೆ ನಮಗೆ ಪರಿಣಮಿಸುತ್ತದೆ. ಸ್ವೀಕರಿಸುವ ಮನಸ್ಸು ಮಹತ್ವದ್ದು ಎಂಬುದನ್ನು ಸಾರುವುದರ ಜೊತೆಗೆ ಈ ಪವಾಡ ಕಥೆ ಪ್ರಸಾದ ತತ್ವದ ಮೇಲ್ಮೆಯನ್ನು ಪ್ರಕಟಿಸಿದೆ.

ಬಿಜ್ಜಳ ಸುಣ್ಣ ತುಂಬಿದ ಕಡಾಯಿಯನ್ನು ಬಸವಣ್ಣನಿಗೆ ತೋರಿಸುತ್ತ ಇದು ನಿಮ್ಮ ಪ್ರಸಾದವಲ್ಲವೇ? ಎಂದು ವ್ಯಂಗ್ಯವಾಗಿ ನುಡಿಯುವನು. ಅದಕ್ಕೆ ಬಸವಣ್ಣನು ಹೌದು ಎನ್ನುವನು ಆಗ ಬಿಜ್ಜಳ ಅದು ಸುಣ್ಣವಿದೆ, ಪ್ರಸಾದ ಹೇಗೆ ಆಗುತ್ತದೆ? ತೋರಿಸು ಎನ್ನುವನು. ಆಗ ಅವನು ಪ್ರಸಾದವಾಗಿಸಿ ತೋರಿಸುವನು.[೩೨] ನೋಡುವ ದೃಷ್ಟಿ ಪರಿಶುದ್ಧವಾಗಿದ್ದರೆ ಸುಣ್ಣವಿದ್ದರೂ ಅದು ಪ್ರಸಾದವಾಗಬಲ್ಲುದೆಂಬುದನ್ನು ಈ ಪವಾಡ ಕಥೆ ಸಾರಿದೆ. ಪ್ರಸಾದದ ಬಗ್ಗೆ ಲಘುವಾಗಿ ವರ್ತಿಸಿದ ಬಿಜ್ಜಳನಿಗೆ ಇದು ಪಾಠವನ್ನೂ ಕಲಿಸಿದೆ. ಇಂಥದೇ ಇನ್ನೊಂದು ಕಥೆಯನ್ನಿಲ್ಲಿ ಉದಾಹರಿಸಬಹುದು. ಒಮ್ಮೆ ಕಬ್ಬಲಿತಿಯೊಬ್ಬಳು ವಿಭೂತಿಯನ್ನು ಹಚ್ಚಿದ ಹರವಿಯೊಂದರಲ್ಲಿ ಸುರೆಯನ್ನು ಒಯ್ಯುತ್ತಿದ್ದಳು. ಇದನ್ನು ಕೆಲವು ಪಿಸುಣರು ಕಂಡು ಬಿಜ್ಜಳನಿಗೆ ತಿಳಿಸುವರು. ಆತ ಬಸವಣ್ಣನನ್ನು ಕರೆಸಿ ನಗುತ್ತ, ಏನಿದು ಬಸವಾ, ಇದು ಸರಿಯೆ? ಶುದ್ಧವೇ? ಎಂದು ಪ್ರಶ್ನಿಸುವನು. ಶುದ್ಧ, ಪಾವನವೆನ್ನುತ್ತ ಬಸವಣ್ಣನು ಬಿಜ್ಜಳನಿಗೆ ಭಸಿತ ಗೋಕ್ಷೀರಕ್ಕಲ್ಲದೆ ಇನ್ನೊಂದಕ್ಕಾಗದು ಎನ್ನುವನು. ಇದನ್ನು ಪ್ರತ್ಯಕ್ಷವಾಗಿ ಪರೀಕ್ಷಿಸಬೇಕೆಂದು ಬಿಜ್ಜಳನು ಆ ಕಬ್ಬಲಿತಿಯನ್ನು ಸಭೆಗೆ ಕರೆಸುವನು. ಆಗ ಬಸವಣ್ಣನು ಆಕೆಯು ಹೊತ್ತು ತಂದ ಹರವಿಯನ್ನು ಸ್ಪರ್ಶಿಸಿ ತೋರಿಸುವನು. ಅದರಲ್ಲಿ ಹಾಲಿದ್ದುದು ಕಾಣಿಸುವುದು.[೩೩] ಇಲ್ಲಿ ವಿಭೂತಿಯ ಮಹತಿಯನ್ನು ಸಾರಿದೆ, ಈ ಪವಾಡ ಕಥೆ. ಈ ಕಥೆಯ ಹಿಂದಿರುವ ಅರ್ಥ, ವಿಭೂತಿ ಪವಿತ್ರತೆಯಿದ್ದಲ್ಲಿ ಮಾತ್ರ ಇರುತ್ತದೆ ಎಂಬುದನ್ನು ತಿಳಿಸುವುದಾಗಿದೆ. ಆ ಹರವಿಯಲ್ಲಿ ಸುರೆ ಇರಲಿ, ಹಾಲಿರಲಿ ಅದನ್ನು ಕಾಣುವ, ಭಾವಿಸುವ ದೃಷ್ಟಿ, ಮನಸ್ಸು ಪರಿಶುದ್ಧವಾಗಿರಬೇಕು ಎಂಬ ಭಾವನೆ ಇದರ ಹಿಂದಿದೆ.

ಎಲ್ಲರನ್ನೂ ಶಿವಭಾವನೆಯಿಂದಲೇ ಕಾಣುವ ಬಸವಣ್ಣನಿಗೆ ವೇಷಧಾರಿ ಡಂಭಕರೂ, ಭಕ್ತರೂ ನಿಜ ಜಂಗಮರಾಗಿ ಕಾಣುವರು. ಜಂಗಮರನ್ನು ಸತ್ಕರಿಸುವುದು, ಅವರಿಗೆ ದಾಸೋಹ ಏರ್ಪಡಿಸುವುದು ಕೆಲ ವಿಪ್ರರಿಗೆ ಹಾಗೂ ಕೊಂಡೆಯ ಮಂಚಣ್ಣನಿಗೆ ಸರಿ ಕಾಣಲಿಲ್ಲ. ಅವರು ಬಸವಣ್ಣನನ್ನು ಬಂಡು ಮಾಡಬೇಕು, ಪೇಚಿನಲ್ಲಿ ಸಿಕ್ಕಿಸಬೇಕು ಎಂದು ಯೋಚಿಸುವರು. ಈ ವಿಷಯವನ್ನು ಬಿಜ್ಜಳನಿಗೂ ತಿಳಿಸಿ ಆತನನ್ನು ಒಪ್ಪಿಸುವರು. ಮಂಚಣ್ಣನು ಕೆಲವು ಹಗರಣಿಗರಿಗೆ ಮಾಸಿದ ಅರಿವೆಯಲ್ಲಿ ಪಾಷಾಣವನ್ನು ಕಟ್ಟಿ ಲಿಂಗವೆಂದೂ, ನಾರನ್ನು ಜಡೆಯೆಂದೂ, ಔಡಲಕಾಯಿಯನ್ನು ರುದ್ರಾಕ್ಷಿ ಎಂದು ಕಟ್ಟಿ ಜಂಗಮವೇಷ ತೊಡಿಸಿ ಅವರನ್ನು ಬಸವಣ್ಣನೆದುರು ಕರೆತಂದು, ನೋಡಿ ನಿನ್ನ ಜಂಗಮರು ಬಂದಿದ್ದಾರೆ ಎನ್ನುವನು. ಆ ಕೂಡಲೇ ಬಸವಣ್ಣನು ಎದ್ದು ಅವರಿಗೆ ನಮಸ್ಕರಿಸುವನು. ಆಗ ಕೊಂಡೆಯರು ನಗುತ್ತಾ, ನೋಡಿದಿರಾ ದೊರೆಯೆ ಬಸವಣ್ಣನ ಭಕ್ತಿಯ ಪರಿಯನ್ನು ಎಂದು ಬಿಜ್ಜಳನಿಗೆ ಹೇಳುವರು. ಮೂರ್ಖರು, ಬಡಗಿ, ಭೋವಿ, ಕುರುಬ, ಅಕ್ಕಸಾಲಿ ಇವರೆಲ್ಲ ಜಂಗಮರೇ ಎಂದು ಅವರು ಬಸವಣ್ಣನಿಗೆ ಹೀಯಾಳಿಸುವರು. ಆಗ ಅವನು ಶರಣರಲ್ಲಿ

ಜಾತಿಯನ್ನು ಅರಸಬೇಡಿರಿ. ಶರಣರಿಗೆ ಜಾತಿಯೇ ಇಲ್ಲ. ವ್ಯಾಸ ಸೂತನು, ಸಾಂಖ್ಯ ಸ್ವಪಚನು, ದುರ್ವಾಸ ಮೊಚ್ಚಿಗ, ಮಾತಂಗ ಮುನಿಯು ಮಾದಿಗ, ಕಶ್ಯಪನು ಕಮ್ಮಾರ, ಅಗಸ್ತ್ಯನು ಕಬ್ಬಿಲ, ಇವರೆಲ್ಲರ ಜಾತಿಗಳು ಹೀಗಿರುವಾಗ ಶರಣರ ಜಾತಿಯನ್ನೇನು ಅರಸುವಿರಿ ಇವರೇ ನಿಜ ಜಂಗಮರು. ಬೇಕಾದರೆ ನೋಡಿರಿ ಎನ್ನುವನು. ಆಗ ಅವರೆಲ್ಲ ನಿಜ ಜಂಗಮರೇ ಆಗಿದ್ದರು. ಅವರು ಕಟ್ಟಿಕೊಂಡು ಬಂದ ಕಲ್ಲು, ಔಡಲಕಾಯಿ ಲಿಂಗ ರುದ್ರಾಕ್ಷಿಗಳಾಗಿದ್ದವು.[೩೪] ಶಿವಾಚಾರದ ಮಹತ್ವವನ್ನು ಈ ಪವಾಡ ಕಥೆ ಸಾರಿದೆ.

ಈ ಘಟನೆಯಿಂದ ಕೊಂಡೆಯ ಮಂಚಣ್ಣನಿಗೆ ಮುಖಭಂಗವಾಗುವುದು. ಬಸವಣ್ಣನನ್ನು ತಪ್ಪಿನಲ್ಲಿ ಸಿಕ್ಕಿಸಲು, ಅವಮಾನಿಸಲು ಹಾಕಿದ ಹೊಂಚುಗಳೆಲ್ಲ ವ್ಯರ್ಥವಾಗಲು ಮಂಚಣ್ಣ ಬಾಲಸುಟ್ಟ ಬೆಕ್ಕಿನಂತಾದ. ಆತ ಬಸವಣ್ಣನನ್ನು ಹೊಡೆಸಬೇಕೆಂದು ಯೋಚಿಸಿ ಒಂದು ದಿನ ಮೋಟುಮಲ್ಲುಗನಿಗೆ ಜಂಗಮವೇಷ ತೊಡಿಸಿ ಅವನು ಬರುವ ದಾರಿಯಲ್ಲಿ ಕೂಡಿಸುವನು. ಬಸವಣ್ಣನು ಬಂದು ಆತನಿಗೆ ನಮಸ್ಕರಿಸುವನು. ಆ ವೇಷಧಾರಿ ಜಂಗಮ ತನ್ನ ಮೋಟಗಾಲಿನಿಂದ ಅವನನ್ನು ಒದೆಯುತ್ತ, ಗುದ್ದತೊಡಗಿದನು. ಆಗ ಅವನು ಸಂಗಯ್ಯನೊಂದೆಯೆನ್ನುತ್ತ ಆತನ ಮೋಟು ಕಾಲು-ಕೈಗಳನ್ನು ಒತ್ತುವನು. ಆ ಕೂಡಲೇ ಆತನಿಗೆ ಕೈಕಾಲುಗಳು ಬರುವವು.[೩೫]

ಇಂಥ ಅನೇಕ ಪವಾಡ ಕಥೆಗಳನ್ನು ನೋಡಿ ಕೆಲ ವಿಮರ್ಶಕರು ವೀರಶೈವ ಕವಿಗಳು ಪುರಾಣಗಳಲ್ಲಿ ಬಸವಾದಿ ಶರಣರ ಚರಿತ್ರೆಯಲ್ಲಿ ಮೂರ್ಖ ಕಥೆಗಳನ್ನು ಸೇರಿಸಿ ಅವರಿಗೆ ಅಪಚಾರ ಮಾಡಿದ್ದಾರೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯ ಒಂದು ದೃಷ್ಟಿಯಿಂದ ಸರಿಯೆನ್ನಿಸಿದರೂ, ಪವಾಡ ಕಥೆಗಳ ಹಿಂದಿರುವ ಅರ್ಥವನ್ನು ಗ್ರಹಸಿದಾಗ ಇದು ಅವಸರದ ಇಲ್ಲವೆ ಸಿನಿಕತನದ್ದೆನ್ನಿಸುತ್ತದೆ. ಜನಸಾಮಾನ್ಯರ ಮನೋಮಂದಿರದಲ್ಲಿ ಬಸವಣ್ಣನನ್ನು ಒಬ್ಬ ಮಹಿಮಾಪುರುಷ ದೇವತಾಪುರುಷನೆಂದು ಪುರಾಣಕಾರರು ನೆಲೆಗೊಳಿಸಲು ಯತ್ನಿಸಿದುದರ ಫಲ ಇಂಥ ಪವಾಡ ಕಥೆಗಳು. ಇವುಗಳ ಹಿಂದಿರುವ ಅರ್ಥವನ್ನು ಬಹಳ ಸಹನೆಯಿಂದ ಚಾಕಚಾಕ್ಯತೆಯಿಂದ ಅರಿಯಬೇಕಷ್ಟೆ. ಇಲ್ಲಿ ಮೋಟನಿಗೆ ಕೈಕಾಲುಗಳು ಬಂದವೋ ಇಲ್ಲವೋ ನಮಗೆ ಮುಖ್ಯವಲ್ಲ. ಆತನಿಗೆ ಜ್ಞಾನೋದಯವಾಯಿತೆಂಬುದು ಮುಖ್ಯ. ಮೋಟನಿಗೆ ತಾನು ಮಾಡುತ್ತಿರುವುದು ತಪ್ಪೆಂದು ತಿಳಿದು ಒಳ್ಳೆಯ ಮನುಷ್ಯನಾಗಿ ಪರಿವರ್ತನೆ ಹೊಂದಿದ್ದನ್ನು ಈ ಕಥೆ ಧ್ವನಿಪೂರ್ಣವಾಗಿ ತಿಳಿಸುತ್ತದೆ. ಒಮ್ಮೆ ಬಸವಣ್ಣನ ಹತ್ತಿರ ಏಳುನೂರು ಜನ ಕುರುಡರು ಬಂದು ನಮಗೆ ಕಣ್ಣು ದಯಪಾಲಿಸು ದೇವಾ ಎಂದು ಬೇಡಿಕೊಳ್ಳುವರು. ಕರುಣಾಳುವಾದ ಅವನು ಆ ಕುರುಡರ ಕಣ್ಣುಗಳನ್ನು ಮುಟ್ಟಿ ದೃಷ್ಟಿ ಬರುವಂತೆ ಮಾಡಿದನು.೩೬ ಇಲ್ಲಿ ಕುರುಡರಿಗೆ ಕಣ್ಣುಗಳನ್ನು ಇತ್ತನೆಂದರೆ, ಅಜ್ಞಾನಿಗಳಿಗೆ ಜ್ಞಾನನೀಡಿದನು ಎಂದರ್ಥ. ಅಜ್ಞಾನವನ್ನು ಕತ್ತಲೆಗೂ ಜ್ಞಾನವನ್ನು ಬೆಳಕಿಗೂ ನಾವು ಹೋಲಿಸುವುದಿಲ್ಲವೇ? ಅಜ್ಞಾನಿಗಳು ಒಂದರ್ಥದಲ್ಲಿ ಕಣ್ಣಿದ್ದೂ ಕುರುಡರೇ. ಇಂಥ ಅನೇಕರಿಗೆ ಬಸವಣ್ಣನು ಅಂದು ಸೂರ್ಯನೋಪಾದಿಯಲ್ಲಿ ಬೆಳಕು ನೀಡಿ ಅವರನ್ನು ಸನ್ಮಾರ್ಗದಲ್ಲಿ ನಡೆಸಿದನು, ಎಂಬರ್ಥವನ್ನು ಈ ಪವಾಡ ಕಥೆ ಹೊಂದಿದೆ.

ವೀರಶೈವ ಕವಿಗಳು, ಪುರಾಣಕಾರರು ತಂತಮ್ಮ ಕೃತಿಗಳಲ್ಲಿ ಬಸವಣ್ಣನ ವ್ಯಕ್ತಿತ್ವಕ್ಕೆ ಮೆರಗು ಬರಲೆಂದು, ಜನ ಅವನನ್ನು ಮಹಿಮಾಪುರುಷನೆಂದು ತಿಳಿಯಬೇಕೆಂದು ಅನೇಕ ಪವಾಡ ಕಥೆಗಳನ್ನು ವರ್ಣಿಸಿದುದನ್ನು ಈ ವರೆಗೆ ನೋಡಿದೆವು. ಆದರೆ ಇಂಥ ಕಥೆಗಳಿಂದ ಅವನ

ವ್ಯಕ್ತಿತ್ವಕ್ಕೇನೂ ಮೆರಗು ಬಂದಿಲ್ಲವೆಂದೇ ಹೇಳಬೇಕು. ಪುರಾಣಕಾರರಾದರೋ ಅವನನ್ನು ಇಂಥ ಕಥೆಗಳಿಂದ ದೊಡ್ಡವನನ್ನಾಗಿ ಮಾಡಹೊರಟಿದ್ದಾರೆ. ಆದರೆ ಅವನಿಗೆ ಇಂಥವುಗಳ ಅವಶ್ಯಕತೆ ಇಲ್ಲ. ಇವುಗಳ ಅವಶ್ಯಕತೆ ಇರುವುದು ಸಾಮಾನ್ಯ ಜನರಿಗೆ ಮಾತ್ರ. ಪವಾಡ ಕಥೆಗಳಿಂದಾವ್ರತಗೊಂಡ ಅವನ ಚರಿತ್ರೆಯನ್ನು ನಾವಿಂದು ಪುನಃ ರಚಿಸಬೇಕಾಗಿದೆ; ಪವಾಡ ಕಥೆಗಳನ್ನು ವೈಚಾರಿಕ ಸ್ತರದಲ್ಲಿ ಅರ್ಥೈಯಿಸಬೇಕಾಗಿದೆ. ನಾವಿಂದು ಅವನನ್ನು ಪವಾಡಪುರುಷನೆಂದು ತಿಳಿಯದೆ ಅಂಥ ಅಗಾಧವಾದ ಕರ್ತೃತ್ವ ಶಕ್ತಿಯನ್ನು, ಸಂಘಟನಾ ಸಾಮರ್ಥ್ಯವನ್ನು ಹೊಂದಿದ್ದನೆಂದು ತಿಳಿಯಬೇಕು. ಈ ಪವಾಡ ಕಥೆಗಳಾದರೋ ಅವನ ಆಂತರಂಗಿಕ ಜೀವನ, ಪ್ರಗತಿಪರ ವಿಚಾರಧಾರೆ, ಸಂಗಮನಾಥನಲ್ಲಿ ಅವನಿಟ್ಟ ಅಚಲ ವಿಶ್ವಾಸ ಇವೆಲ್ಲವನ್ನು ಸಾಂಕೇತಿಕಾರ್ಥದಲ್ಲಿ ಹೊರಹೊಮ್ಮಿಸಿವೆ. ಇವುಗಳ ಹಿಂದೆ ಅವನ ಮಹಾಮಾನವ ವ್ಯಕ್ತಿತ್ವ ಹುದುಗಿದೆ. ಮೇಲ್ನೋಟಕ್ಕೆ ಈ ಕಥೆಗಳು ಅಸಂಗತ, ಅವೈಜ್ಞಾನಿಕ ಹಾಗೂ ಅವಾಸ್ತವವೆನ್ನಿಸುವ ಸಂಗತಿಗಳನ್ನು ಒಳಗೊಂಡಿವೆ; ನಿಜ, ಆದರೆ ಆಂತರ್ಯದಲ್ಲಿ ಇವು ಸತ್ವಪೂರ್ಣವಾಗಿವೆ. ಇವನ್ನು ಸತ್ಯದ ಶ್ರೀಮುಖಕ್ಕೆ ಮುಚ್ಚಿದ ಸುವರ್ಣದ ಮುಚ್ಚಳಗಳೆನ್ನಬಹುದು. ಆ ಮುಚ್ಚಳವನ್ನು ಓರೆಮಾಡಿದಾಗ ಸತ್ಯದ ಪ್ರದರ್ಶನವಾಗುವಂತೆ, ಬಸವಣ್ಣನ ಕುರಿತಿದ್ದ ಈ ಪವಾಡ ಕಥೆಗಳು ಒಳಗೊಂಡ ಅದ್ಭುತ, ಅತಿಮಾನುಷ ಸಂಗತಿಗಳನ್ನು ಹೆಕ್ಕಿ ತೆಗೆದರೆ ಅವನ ನೈಜ ಮಾನವೀಯ ಅನುಕಂಪೆಯುಳ್ಳ ಮಹಾಮಾನವ ವ್ಯಕ್ತಿತ್ವ ದೃಗ್ಗೋಚರವಾಗುವುದು. ಈ ಕಥೆಗಳನ್ನೆಲ್ಲ ಈ ರೀತಿ ವೈಚಾರಿಕ ಸ್ತರದಲ್ಲಿ ಅರ್ಥೈಸಿ ಅಧ್ಯಯನ ಮಾಡುವುದು ಎಂದಿಗಿಂತ ಇಂದು ಅವಶ್ಯವಾಗಿದೆ.

ಸಹಾಯಕ ಗ್ರಂಥಗಳು

೧. ಬ.ರಾ.ರ.=ಬಸವರಾಜ ದೇವರ ರಗಳೆ (ಸಂ) : ಟಿ.ಎಸ್. ವೆಂಕಣ್ಣಯ್ಯ
೨. ಬ.ಪು.=ಬಸವಪುರಾಣ (ಸಂ) : ಡಾ. ಆರ್.ಸಿ. ಹಿರೇಮಠ
೩. ಶಿ.ಚಿಂ.=ಶಿವತತ್ವ ಚಿಂತಾಮಣಿ (ಸಂ) : ಆರ್. ರಾಚಪ್ಪ
೪. ಸಿಂ.ಪು.=ಸಿಂಗಿರಾಜ ಪುರಾಣ (ಸಂ) : ಎಚ್.ದೇವೀರಪ್ಪ
೫. ಪ್ರೌ.ಕಾ.=ಪ್ರೌಢರಾಯನ ಕಾವ್ಯ (ಸಂ) : ಸಂ.ಶಿ. ಭೂಸನೂರಮಠ
೬. ಗು.ಚಾ.=ಗುರುರಾಜ ಚಾರಿತ್ರ (ಸಂ) : ಸಂ.ಶಿ. ಭೂಸನೂರಮಠ
೭. ಚೆ.ಬ.ಪು.=ಚೆನ್ನಬಸವಪುರಾಣ (ಸಂ) : ಶಿ.ಶಿ. ಬಸವನಾಳ
೮. ರಾ.ಚ.=ರಾಘವಾಂಕ ಚರಿತೆ (ಸಂ) : ಶಿ.ಶಿ. ಬಸವನಾಳ
೯. ಬ.ಪ. ಬಸವ ಪವಾಡ (ಸಂ) : ಬಿ.ನಂ. ಚಂದ್ರಯ್ಯ
೧೦. ಭೈ.ಕಾ.ಕ.ಸೂ.ರ.=ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಭಾಗ–೧, ಭಾಗ–೨, (ಸಂ) : ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಸ್. ಸುಂಕಾಪುರ
೧೧. ಧರ್ಮ ಭಂಡಾರಿ ಬಸವಣ್ಣನವರು : ಬಿ.ಸಿ. ಜವಳಿ
೧೨. ಭಕ್ತಿ ಭಂಡಾರಿ ಬಸವಣ್ಣನವರು : ಎಂ.ಆರ್.ಶ್ರೀನಿವಾಸಮೂರ್ತಿ
೧೩. ವಚನ ಸಾಹಿತ್ಯ ವೈಚಾರಿಕ ಅಧ್ಯಯನ : ಡಾ. ಎಚ್. ತಿಪ್ಪೇರುದ್ರಸ್ವಾಮಿ
೧೪. ದೀಕ್ಷಾ ಬೋಧೆ (ಸಂ) : : ಡಾ. ಬಿ.ಬಿ.ಹೆಂಡಿ

೧೫. ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು : ಡಾ. ವಿ.ಜಿ. ಪೂಜಾರ
೧೬. ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ : ಕ.ವಿ.ವಿ. ವಿಶೇಷ ವಾಙ್ಮಯ ಪ್ರಸಾರ ಮಾಲೆ.
೧೭. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ,
ಭಾಗ ೪ (ಸಂ) : ಡಾ. ಜಿ.ಎಸ್. ಶಿವರುದ್ರಪ್ಪ
೧೮. ಶಾಸನಗಳಲ್ಲಿ ಶಿವಶರಣರು : ಡಾ. ಎಂ.ಎಂ. ಕಲಬುರ್ಗಿ
೧೯. ಬಸವಣ್ಣನವರ ಜೀವನ ಹಾಗೂ ಸಂದೇಶ : ಡಾ. ಸಿದ್ಧಯ್ಯ ಪುರಾಣಿಕ
೨೦. Encyclopaedia Britanica, Vol-12.
೨೧. Encylopaedia of Religion and Ethics, Vol-7-12

ಅಡಿಟಿಪ್ಪಣಿ

೧. ಹೆಂಡಿ ಬಿ.ಬಿ."ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ" ಕ.ವಿ.ವಿ. ವಿಶೇಷ ಉಪನ್ಯಾಸ ಮಾಲೆ.
೨. ತಿಪ್ಪೇರುದ್ರಸ್ವಾಮಿ ಎಚ್. "ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ" ಕ.ವಿ.ವಿ. ವಿಶೇಷ ಉಪನ್ಯಾಸ ಮಾಲೆ.
೩. ಹಿರೇಮಠ ಆರ್. ಸಿ. (ಸಂ) : 'ಮಹಾದೇವಿಯಕ್ಕನ ವಚನಗಳು' ವಚನ : ೨೦೮
೪. ಹಿರೇಮಠ ಆರ್.ಸಿ. (ಸಂ) : 'ಬಸವಣ್ಣನವರ ವಚನಗಳು' ವಚನ : ೮೯೧
೫. ಜವಳಿ ಬಿ.ಸಿ.: 'ಧರ್ಮಭಂಡಾರಿ ಬಸವಣ್ಣನವರು', ಪ್ರಸ್ತಾವನೆ, ಪುಟ ೮
೬. ತಿಪ್ಪೇರುದ್ರಸ್ವಾಮಿ ಎಚ್. : ವಚನ ಸಾಹಿತ್ಯ : ವೈಚಾರಿಕ ಅಧ್ಯಯನ ಪುಟ : ೩೩
೭. ಸಿಂ.ಪು ಸಂ–೧೧, ಪ: ೧೦–೧೬
೮. ಬ.ರಾ.ರ. ಸ್ಥಲ–೮, ಬ.ಪು. ಸಂ–೧೧, ಪ: ೨–೫, ಶಿ.ಚಿಂ. ಸಂ–೩೨, ಪ–೪೪, ಸಿಂ. ಪು: ಸಂ–೩, ಪ: ೫–೮.
೯. ಬಸವ ಪವಾಡ, ಸಂ–೨, ಪ. ೭
೧೦. ಶಿ.ಚಿಂ. ಸಂ. ೩೨, ಪ. ೮೦, ಸಿಂ.ಪು. ಸಂ. ೩೧, ಪ. ೩೩–೩೬
೧೧. ಕಲಬುರ್ಗಿ ಎಂ.ಎಂ. "ಶಾಸನಗಳಲ್ಲಿ ಶಿವಶರಣರು" ಪುಟ : ೫
೧೨. Encyclopaedia Britanica, Vol-12.
೧೩. Encylopaedia Britanica. Vol-12.
೧೪. ಹಿರೇಮಠ ಆರ್.ಸಿ. (ಸಂ) : ಸಿದ್ಧರಾಮೇಶ್ವರ ವಚನಗಳು
೧೫. ಶಿ.ಚಿಂ.ಸಂ: ೩೨, ಪ. ೪೬–೪೭. ಸಿಂ. ಪು. ಸಂ–೩೭, ಪ: ೧೨–೧೪.
೧೬. ಶಿ.ಚಿಂ. ಸಂ–೩೨, ಪ–೪, ಸಿಂ. ಪು: ಸಂ–೯, ಪ: ೪೦–೪೩ ಬ.ಪು. ಸಂ–೨, ಪ: ೩೦.
೧೭. ಚೆ.ಬ.ಪು. ಸಂ–೫೭, ಪ: ೮೧. ಪ್ರೌ. ಕಾ. ಸಂ–೨೧, ಪ: ೮–೧೨ ಗು.ಚಾ. ಸಂ–೫, ಪ: ೨೧, ರಾ.ಚ. ಸಂ–೮, ಪ–೩೭.
೧೮. ಬ.ರಾ.ರ. ಸ್ಥಲ –೧೦ ಬ ಪು.ಸಂ–೫೬, ಪ–೭೦–೭೨ ಶಿ.ಚಿಂ. ಸಂ.೩೨, ಪ–೪೦ ಸಿಂ.ಪು.ಸಂ–೨೮, ಪ:೩
೧೯. ಸಿಂ.ಪು. ಸಂ–೧೨, ಪ–೪–೮.
೨೦. ಸಿಂಪು. ಸಂ–೧೦, ಪ:೧೭–೨೩
೨೧. ಬ.ರಾ.ರ. ಸ್ಥಲ–೯ ಬ.ಪು.ಸಂ–೮, ಪ: ೧–೫
೨೨. ಪ್ರೌ.ಕಾ.ಸಂ:೧೮, ಪ: ೧೮–೨೩
೨೩. ಸಂ: ೪೬, ಪದ್ಯ: ೬–೧೮,
೨೪. ಸಂ: ೬, ಪ: ೪೮–೫೩.
೨೫. ಭಾಗ–೧, ಪುಟ: ೧೪೭–೧೪೮.

೨೬. ಬ.ಪು. ಸ: ೯ ಪದ್ಯ : ೧೧–೫೨, ಶಿ.ಚಿಂ. ಸಂ:೩೨ ಪ: ೧೬–೧೭ ಸಿಂ. ಪು.ಸ:೧೫, ಪ: ೮–೧೮, ಪ್ರೌ.ಕಾ.ಸಂ: ೨೧, ಪ: ೨–೪ ಸಿಂ.ಪು: ಸಂ: ೭, ಪ: ೨೦–೨೫, ಚೆ.ಬ.ಪು. ಸಂ: ೫೭, ಪ: ೭೮, ಬ.ಪ.ಸಂ: ೨ ಪದ: ೯೪–೧೦೧,

೨೭. ಬ.ರಾ.ರ. ಸ್ಥಲ–೯. ಬ.ಪು. ಸಂ: ೩೪. ಪ: ೧೭–೩೯. ಶಿ.ಚಿ: ಸಂ:೩೨. ಪ:೧೦. ಸಿಂ.ಪು.ಸಂ. ೧೧. ಪ: ೩–೧೦. ಬೈ.ಕಾ.ಕ.ಸೂ.ರ. ಭಾಗ–೨. ಪು: ೩೭೦–೩೭೧.

೨೮. ಹೆಂಡಿ. ಬಿ.ಬಿ. (ಸಂ): ದೀಕ್ಷಾಬೋಧೆ, ಪುಟ–೯೭. ಪದ್ಯ : ೧೨೦.

೨೯. ಶಿ.ಚಿಂ. ಸಂ: ೩೨. ಪ: ೩೭. ಶಿಂ.ಪು.ಸಂ: ೨೧. ಪದ್ಯ: ೬–೧೨. ಚೆ.ಬ.ಪು. ಸಂ: ೫೭, ಪ: ೭೮, ಗು.ಚಾ. ಸಂ:೩, ಪ: ೨೯, ರಾ.ಚ. ಸ: ೬, ಪ: ೨೭

೩೦. ಶಿ.ಚಿಂ. ಸಂ: ೩೨, ಪ: ೩೩.

೩೧. ಬ.ಪು. ಸಂ: ೫೭, ಪ: ೨೭–೨೯, ಸಿಂ.ಪು.ಸಂ: ೩೩, ಪ: ೫–೩೧, ರಾ.ಚ. ಸಂ: ೧೨, ಪ: ೫೫–೫೮.

೩೨. ಶಿ.ಚಿಂ. ಸಂ.: ೩೨. ಪ: ೮೫, ಸಿಂ. ಪು. ಸಂ: ೩೬, ಪ: ೬–೧೧, ಚ.ಬ.ಪು. ಸಂ: ೫೭, ಪ: ೨೮, ಗು.ಚಾ. ಸಂ: ೮, :೪೧, ಬ.ಪ.ಸಂ: ೩, ಪ: ೬–೭.

೩೩. ಶಿ.ಚಿಂ. ಸಂ: ೩೨, ಪ: ೩೮, ಸಿಂ.ಪು. ಸಂ: ೨೪, ಪ: ೧೩–೧೯, ರಾ.ಚ. ಸಂ:೯, ಪ: ೫೭, ಗು.ಚಾ. ಸಂ: ೮, ಪ: ೨೮.

೩೪. ಸಿಂ.ಪು. ಸಂ: ೧೯, ಪ: ೭–೨೫, ಚೆ.ಬ.ಪು. ಸಂ: ೫೭, ಪ: ೭೭ ಗು.ಚಾ. ಸಂ: ೧೯, ಪ: ೨೮, ಬ.ಪ.ಸಂ.: ೨, ಪ: ೩೩.

೩೫. ಶಿಂ.ಚಿಂ. ಸಂ.: ೩೨, ಪಳ ೪೬–೪೭.

೩೬. ಬ.ಪ. ಸಂ: ೨, ಪ: ೫೮.

* 'ಶರಣಸಾಹಿತ್ಯ ಮಾರ್ಗ' ಕೃತಿಯಲ್ಲಿ ಪ್ರಕಟವಾದ 'ಬಸವಣ್ಣನವರ ಕುರಿತಿದ್ದ ಪವಾಡ ಕಥೆಗಳ ವೈಚಾರಿಕ ಅಧ್ಯಯನ' ಎಂಬ ಲೇಖನದ ಪರಿಷ್ಕೃತ–ವಿಸ್ತೃತ ರೂಪವಿದು.

❑

ಬಸವೇಶ್ವರ ವಚನಗಳ ಟೀಕೆಗಳು

●

ಡಾ. ಸಿ.ವ್ಹಿ. ಪ್ರಭುಸ್ವಾಮಿಮಠ

ಕನ್ನಡ ಭಾಷೆಯಲ್ಲಿ ಬೆಳೆದು ಬಂದ ವೀರಶೈವ ಸಾಹಿತ್ಯವನ್ನು ಸ್ಥೂಲವಾಗಿ ೧. ಸೃಜನ ೨. ಸಂಪಾದನ ೩. ವಿಮರ್ಶನ ಎಂದು ೩ ಹಂತಗಳಲ್ಲಿ ಗಮನಿಸಬಹುದಾಗಿದೆ. ಬಸವಣ್ಣನವರ ವಚನಗಳನ್ನು ಕುರಿತು ರಚಿತವಾದ ಟೀಕೆಗಳನ್ನು ೩ನೆಯ ವಿಭಾಗದಲ್ಲಿ ರಚಿತವಾದ ಕೃತಿಗಳೆಂದೇ ಭಾವಿಸಬೇಕಾಗುತ್ತದೆ. ಇಂಥ ಕೃತಿಗಳನ್ನು ಕುರಿತು ರಚಿತವಾದ ಟೀಕೆ, ಟಿಪ್ಪಣಿ, ವ್ಯಾಖ್ಯಾನ, ಭಾಷ್ಯ, ವಿವರಣೆಗಳು ತಮ್ಮ ಮಿತಿಯಲ್ಲಿ ಒಂದೊಂದು ಸ್ತರದಲ್ಲಿ ವಿಮರ್ಶೆಯ ಸ್ವರೂಪವೇ ಆಗಿರುತ್ತದೆ. ಹೀಗೆ ಯಾವುದೇ ಸೃಜನಶೀಲ ಕೃತಿಯನ್ನು ಕುರಿತು ವಿಮರ್ಶೆ ರೂಪುಗೊಳ್ಳುವುದಕ್ಕೆ, ಅದಕ್ಕೆ ಹಿನ್ನೆಲೆಯಾದ ಸಂದರ್ಭ, ಉದ್ದೇಶ, ಧೋರಣೆಗಳು ಮುಖ್ಯವಾಗುತ್ತವೆ. ಈ ದೃಷ್ಟಿಯಿಂದ "ಬಸವೇಶ್ವರ ವಚನಗಳ ಟೀಕೆಗಳು" ಹುಟ್ಟುವುದಕ್ಕೆ ಕಾರಣವಾದ ಸಂದರ್ಭ ಮತ್ತು ಉದ್ದೇಶಗಳನ್ನು ಅರ್ಥೈಸಿಕೊಳ್ಳುವುದು ಅವುಗಳ ಪರಿಶೀಲನೆಯ ದೃಷ್ಟಿಯಿಂದ ಅಗತ್ಯವಾಗುತ್ತದೆ.

ವೀರಶೈವ ಪುನರುಜ್ಜೀವನ ಕಾಲದಲ್ಲಿ ರಚಿತವಾದ ಈ ಬಗೆಯ ಕೃತಿಗಳ ಸಂದರ್ಭ ಮತ್ತು ಹಿನ್ನೆಲೆಯನ್ನು ಮುಂದಿನ ಮಾತುಗಳು ಸಮರ್ಪಕವಾಗಿ ಹೇಳಲು ಪ್ರಯತ್ನಿಸುವಂತೆ ಕಾಣುತ್ತದೆ: "ಕನ್ನಡ ಸಾಹಿತ್ಯದ ಉತ್ಕರ್ಷಕ್ಕೆ ಕಾರಣವಾದ ದೊರೆ ಪ್ರೌಢರಾಯ, ರಾಜಾಶ್ರಯದಲ್ಲಿ ಬೆಳೆದು ಬಂದ ಕನ್ನಡ ಸಾಹಿತ್ಯದ ಉಚ್ಛ್ರಾಯ ಘಟ್ಟಗಳಲ್ಲಿ ಇದೂ ಒಂದು. ವೀರಶೈವ ಸಾಹಿತ್ಯೇತಿಹಾಸದಲ್ಲಂತೂ ಇದು ವಸಂತಕಾಲ. ಮಗ್ಗೆಯ ಮಾಯಿದೇವ, ಕಲ್ಲುಮಠದ ಪ್ರಭುದೇವ, ಮಹಾಲಿಂಗದೇವ, ಜಕ್ಕಣಾರ್ಯರು ಅಂದು ಕೈಕೊಂಡ ವಚನಸಂಕಲನ, ವ್ಯಾಖ್ಯಾನ ಹಾಗೂ ಷಟ್‌ಸ್ಥಲ ಸಿದ್ಧಾಂತ ಪ್ರತಿಪಾದನೆಯ ಕಾರ್ಯಗಳು ಕನ್ನಡ ನಾಡಿನ ಧಾರ್ಮಿಕ, ತಾತ್ವಿಕ ಇತಿಹಾಸದಲ್ಲಿ ಚಿರಸ್ಮರಣೀಯವಾದವು. ಸಾಕ್ರೆಟೀಸ್‌ನ ತತ್ತ್ವಗಳಿಗೆ ಪ್ಲೇಟೋನ ಸಂಭಾಷಣೆ, ಉಪನಿಷತ್ತುಗಳಿಗೆ ಬ್ರಹ್ಮಸೂತ್ರ ಬುದ್ಧನ ತತ್ತ್ವಗಳಿಗೆ ತ್ರಿಪಿಟಕಗಳಿರುವಂತೆ ಬಸವಾದಿ ಪ್ರಮಥರ ವಚನಗಳಿಗೆ ಈ ಕಾಲದ ನೂರೊಂದು ವಿರಕ್ತರು ಹಾಗೂ ಉಳಿದ ಮಹಾನುಭಾವರು ಮಾಡಿದ ವ್ಯಾಖ್ಯಾನಗಳು ಆಧಾರಸ್ಥಂಭಗಳಾಗಿವೆ. ಷಟ್‌ಸ್ಥಲ ಕಟ್ಟಿಗನುಗುಣವಾಗಿ ವಚನಗಳ ಸಂಕಲನ ಹಾಗೂ ಅದಕ್ಕೆ ಬರೆದ ಅಮೂಲ್ಯವಾದ ಟೀಕೆ,

ಟಿಪ್ಪಣಿಗಳು ಕನ್ನಡ ಸಾಹಿತ್ಯದ ಬಹುಮುಖ್ಯ ಅಂಗವಾದ ವೀರಶೈವ ಸಾಹಿತ್ಯಕ್ಕೆ ಈ ಕಾಲವು ಕೊಟ್ಟ ಮಹತ್ವಪೂರ್ಣ ಕೊಡುಗೆ ಎನ್ನಬಹುದು..."

ಈ ಬಗೆಯ ಮಹತ್ವದ ಕಾರ್ಯವನ್ನು ಕೈಕೊಳ್ಳುವುದಕ್ಕೆ ವೀರಶೈವ ಗಣ್ಯ ವಿದ್ವಾಂಸರಿಗೆ, ಆಂತರಿಕ ಹಾಗೂ ಬಾಹ್ಯ ಎರಡೂ ರೀತಿಯ ಪ್ರೇರಣೆಗಳಿದ್ದಂತೆ ಕಂಡುಬರುತ್ತವೆ. ಅಂದರೆ ೧೪ನೆಯ ಶತಮಾನದ ಮಧ್ಯ ಮತ್ತು ಉತ್ತರಭಾಗಗಳಲ್ಲಿ ನಡೆದ ವೈದಿಕ ವಾಙ್ಮಯ ಸಂಬಂಧಿಯಾದ ಚಟುವಟಿಕೆಗಳಿಂದ ವೀರಶೈವ ವಿದ್ವಾಂಸರು ಉತ್ತೇಜಿತರಾಗಿ ಆ ವಿದ್ವಾಂಸರಂತೆಯೇ ತಾವೂ ಕನ್ನಡದ ವಚನಗಳಿಗೆ ಸಂಬಂಧಿಸಿದಂತೆ ಸಂಕಲನ ಪರಿಷ್ಕರಣ ವ್ಯಾಖ್ಯಾನದ ಕಾರ್ಯಗಳನ್ನು ಕೈಗೆತ್ತಿಕೊಂಡಂತೆ ತಿಳಿಯುತ್ತದೆ.[೨]

ಹೀಗೆ ವೈದಿಕ ವಾಙ್ಮಯ ಸಂಬಂಧಿಯಾದ ಚಟುವಟಿಕೆಗಳಿಂದ ಪ್ರೇರಿತರಾದಂತೆ ಬಸವಾದಿ ಪ್ರಮಥರ ವಚನಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲು ಅನಾಸಕ್ತರಾದ ಅನ್ಯಮತೀಯರು, ವಿಶೇಷವಾಗಿ ಪ್ರಭುದೇವರ ಬೆಡಗಿನ ವಚನಗಳನ್ನು ಅಪಾರ್ಥಕ್ಕೆಡೆಗೊಡುವಂತೆ ವ್ಯಾಖ್ಯಾನಿಸುತ್ತಿದ್ದುದು ಕಾರಣಗಳಲ್ಲೊಂದಾಗಿತ್ತೆಂದು ಶಾಂತಲಿಂಗ ದೇಶಿಕನ "ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರ ರತ್ನಾಕರ"ದ ಆಧಾರದಿಂದ ಒಂದೆಡೆ ವಿವೇಚಿಸಲಾಗಿದೆ.[೩] ಅಲ್ಲದೆ ಬಸವಣ್ಣನವರ "ಈ ಟೀಕಿನ ವಚನಗಳು ೧೫ ರಿಂದ ೧೯ನೆಯ ಶತಮಾನದವರೆಗಿನ ವೀರಶೈವ ವಿದ್ವಾಂಸರು ಬಸವಣ್ಣನವರ ಬರವಣಿಗೆಯನ್ನು ಅರ್ಥಮಾಡಿಕೊಳ್ಳಲು ಅರ್ಥಮಾಡಿಕೊಡಲು ನಡೆಸಿದ ಪ್ರಯತ್ನದ ಫಲವೆನಿಸಿದೆ...[೪] ಅಲ್ಲದೆ "ಯಾವುದೇ ಕೃತಿಗೆ ಬರೆದ ಟೀಕೆ ಅಂತರಂಗದ ಆಲೋಚನಾ ರೀತಿ, ಟೀಕಾಕಾರರ ವೈಯಕ್ತಿಕ ಪರಿಮಿತಿಗಳ ವಲಯವನ್ನು ಹೊಂದಿರುವುದರಿಂದ ಪ್ರಸ್ತುತ ಟೀಕೆಗಳನ್ನು ಆ ದೃಷ್ಟಿಯಿಂದಲೇ ನೋಡಬೇಕು. ಮೇಲಾಗಿ ಕಲ್ಲುಮಠದ ಪ್ರಭುದೇವ(?) ಪರ್ವತ ಶಿವಯೋಗಿ, ಸೋಮಶೇಖರ ಶಿವಯೋಗಿಗಳಂಥ ಆಯಾಯುಗದ "ವೀರಶೈವ ನಿರ್ಣಯ ಪರಮಾವತಾರ"ರು ಇವುಗಳನ್ನು ಬರೆದಿರುವುರೆಂಬುದನ್ನು ಮರೆಯುವಂತಿಲ್ಲ.೫ ಎಂದಿರುವುದು ಬಸವೇಶ್ವರರ ವಚನಗಳಿಗೆ ಟೀಕೆಗಳನ್ನು ಬರೆದ ವಿದ್ವಾಂಸರ ಮುಖ್ಯ ಉದ್ದೇಶ ಯಾವುದಾಗಿತ್ತೆಂಬುದನ್ನು ತಿಳಿಯಪಡಿಸುತ್ತದೆ. ಇಂಥ ಟೀಕೆಗಳನ್ನು ಅಭ್ಯಸಿಸುವಾಗ ಗಮನಿಸಬೇಕಾದ ಅಂಶಗಳನ್ನು ಕುರಿತು ವ್ಯಕ್ತವಾದ ಅಭಿಪ್ರಾಯವು ಬಸವಣ್ಣನವರ ವಚನಗಳ ಟೀಕೆಗಳಿಗೆ ಒಂದು ಸರಿಯಾದ ಪ್ರವೇಶವನ್ನು ನೀಡುವಂತೆ ಕಂಡುಬರುತ್ತದೆ. "ಬಸವಣ್ಣನವರ ವಚನಗಳಿಗೆ ಟೀಕೆಗಳು ಹುಟ್ಟಿದುದು ವಚನಗಳನ್ನು ತಾತ್ವಿಕ ದೃಷ್ಟಿಯಿಂದ ನೋಡುತ್ತಲಿದ್ದ ಕಾಲದಲ್ಲಿ. ಹೀಗಾಗಿ ಸಾಹಿತ್ಯಿಕ, ಸಾಮಾಜಿಕ ದೃಷ್ಟಿಗಳಿಂದ ಈ ಟೀಕೆಗಳನ್ನು ನೋಡಬಯಸುವವರಿಗೆ ಇಲ್ಲಿ ನಿರಾಸೆ ಖಂಡಿತ. ಟೀಕಾಕಾರನ ಉದ್ದೇಶವು ಅದಾಗಿರಲಿಲ್ಲ. ಕಾರಣ ಇಲ್ಲಿ ಈ ಟೀಕೆಗಳು ವಚನಗಳಿಗೆ ಬರೆದ ಸಾಹಿತ್ಯಿಕ ವಿಮರ್ಶೆ, ಸಾಮಾಜಿಕ ವಿಮರ್ಶೆಗಳಾಗಿರದೆ ಶಬ್ದಕ್ಕೆ ಅರ್ಥಕೊಡುತ್ತಾ ಬರೆದ ತಾತ್ತ್ವಿಕ ವಿವರಣೆ ವಿಮರ್ಶೆಗಳಾಗಿವೆ ಎಂಬುದನ್ನು ಓದುಗರು ನೆನಪಿಟ್ಟುಕೊಳ್ಳಬೇಕು....[೬]

ಬಸವಣ್ಣನವರನ್ನು ಕುರಿತು ಅಧಿಕ ಸಂಖ್ಯೆಯಲ್ಲಿ ಕೃತಿಗಳು ರಚನೆಯಾದಂತೆ ಅವರ ಷಟ್‌ಸ್ಥಲ ವಚನ ಸಂಪುಟಕ್ಕೆ ಉಳಿದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಟೀಕೆಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಐದು ಟೀಕೆಗಳು ಪ್ರಮುಖವಾಗಿವೆ. ಇವುಗಳಲ್ಲಿ ಅತ್ಯಂತ ಹಳೆಯ ಟೀಕೆ ೧೭ನೆಯ ಶತಮಾನದಲ್ಲಿ ಸಂಕಲಿತವಾಗಿದ್ದರೂ ವಚನ ಟೀಕೆಗಳ ಸೃಷ್ಟಿ

೧೫ನೆಯ ಶತಮಾನದಲ್ಲಿ ಹುಟ್ಟಿದ "ಲಿಂಗಲೀಲಾ ವಿಲಾಸ ಚಾರಿತ್ರ್ಯ"ಕ್ಕೆ ಪ್ರಾಚೀನವೆಂದು ಹೇಳಬಹುದು[೭] ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಈ ವರೆಗಿನ ವಿವೇಚನೆಯಿಂದ ಈ ಟೀಕೆಗಳ ಮುಖ್ಯ ಉದ್ದೇಶ ಮೊದಲು ವಚನಗಳಿಗೆ ವಾಚ್ಯಾರ್ಥಗಳನ್ನು ಕೊಡುವುದು, ಅನಂತರ ತಾತ್ವಿಕ ಅರ್ಥಗಳನ್ನು ಕೊಟ್ಟು ತನ್ಮೂಲಕ ವೀರಶೈವ ಸಿದ್ಧಾಂತ ನಿರ್ಣಯಕ್ಕೆ ಪ್ರಯತ್ನಿಸುವುದಾಗಿತ್ತೆಂದು ತಿಳಿದುಬರುತ್ತದೆ. ಈ ದೃಷ್ಟಿಯಿಂದ ಬಸವೇಶ್ವರರ ವಚನಗಳ ಟೀಕೆಗಳನ್ನು ಬರೆದ ಟೀಕಾಕಾರರು ಎಷ್ಟರಮಟ್ಟಿಗೆ ತಮ್ಮ ಧೋರಣೆ, ಉದ್ದೇಶಗಳಲ್ಲಿ ಯಶಸ್ವಿಯಾದರೆಂಬುದನ್ನು ಕೆಲವು ಪ್ರಾತಿನಿಧಿಕ ಉದಾಹರಣೆಗಳೊಂದಿಗೆ ಪರಿಶೀಲಿಸಬಹುದಾಗಿದೆ.

೧) **"ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು**
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು.
ನನೆಯೊಳಗಣ ಪರಿಮಳದಂತಿದ್ದಿತ್ತು: ಕೂಡಲ
ಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು".

ಟೀಕೆ : ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು; ಉದಕದೊಳಗೆ ಮುನ್ನೀರ ಮಧ್ಯದಲ್ಲಿ ಬೈಚಿಟ್ಟ – ಪ್ರಳಯಕಾಲಕ್ಕಾಗ ಬೇಕೆಂದು ಮಡಗಿದ ಬಯಕೆಯ–ಇಚ್ಛೆಯ ಕಿಚ್ಚಿನಂತೆ– ವಡಬಾಗ್ನಿಯ ಹಾಂಗೆ ಇದ್ದಿತ್ತು ಎಂಬಲ್ಲಿ ಸಮುದ್ರದ ಮಧ್ಯದಲ್ಲಿ ಮಹಾವಡಬಾಗ್ನಿಯಡಗಿರ್ದು ಆ ಸಮುದ್ರ ದಹಿಸಬೇಕೆಂಬ ಅಪ್ಯಾಯನವು ತನಗೆ ತಲೆದೋರದೆ ಆ ಸಮುದ್ರದ ಶೈತ್ಯದಿಂದ ತಾನು ಆರಿ ನಂದಿ ಹೋಗದೆ ಹೇಂಗೆ ತದಾಕಾರವಾಗಿ ಇರುತ್ತಿಹುದೋ ಹಾಂಗೆ ಇಲ್ಲಿ ಜಲ ಬುದ್ಬುದಮಯ ಸ್ವರೂಪವಾದ ಆತ್ಮನ ಪಿಂಡ ಮಧ್ಯದಲ್ಲಿ ಮಹಾಜ್ಞಾನಾಗ್ನಿ ಸ್ವರೂಪವಾದ ಪರಬ್ರಹ್ಮವು ಅಡಗಿರ್ದು ಜ್ಞಾನೋದಯಕ್ಕೆ ಮುನ್ನವೇ ಪಿಂಡದಲ್ಲಿ ಪಿಂಡಸ್ಥಲವಾಗಿ ಇದ್ದಿತು. ಸಸಿಯೊಳಗಣ ರಸದ ರುಚಿಯಂತಿದ್ದಿತ್ತು. ಸಸಿಯೊಳಗಣ ಚಂದ್ರನೊಳಗಣ ರಸದ–ಷೋಡಶ ಕಲೆಗಳ, ರುಚಿಯಂತೆ–ಅಮೃತ ಕಿರಣದ ಹಾಂಗೆ ಇದ್ದಿತ್ತು–ಒಪ್ಪುತ್ತಿದ್ದಿತ್ತು ಎಂಬಲ್ಲಿ ಚಂದ್ರಮನ ಮಧ್ಯದಲ್ಲಿ ಷೋಡಶ ಕಲೆಗಳು. ಅಡಗಿರ್ಪುವು. ಆ ಷೋಡಶ ಕಲೆಗಳ ಮಧ್ಯದಲ್ಲಿ ಅಮೃತ ಕಿರಣವಿದ್ದು, ಅವಕ್ಕೆಲ್ಲ ಚೈತನ್ಯವಾಗಿರ್ದು ಅವರ ಪ್ರಪಂಚಿನೊಳಗೆ ಬರೆಯದ, ಅವದೊಳಗೆ ಹೇಂಗೆ ವಿಲಕ್ಷಣವಾಗಿರುತಿಹುದೋ ಹಾಂಗೆ ಇಲ್ಲಿ ಚಂದ್ರಮನ ಹಾಂಗೆ ದೇಹ, ಷೋಡಶ ಕಲೆಗಳ ಹಾಂಗೆ ಆತ್ಮನು, ಅಮೃತ ಕಿರಣದ ಹಾಂಗೆ ಪರಬ್ರಹ್ಮವು. ಆ ಪರಬ್ರಹ್ಮವು ದೇಹಮಧ್ಯಸ್ಥಾನವಾದಾತ್ಮ ರಸವನ್ನು ಬೇರ್ಪಡಿಸಿ ಚಿತ್ತ್ರಣವಲಿಂಗದ ಚಿತ್ತ್ರಕಾಶ (ವೆಂಬ) ಜ್ಞಾನೋದಯಕ್ಕೆ ಮುನ್ನವೆ ಕುರುಹುಗಾಣಿಸಿಕೊಳ್ಳದೆ (ಪಿಂಡದಲ್ಲಿಯೇ) ಪಿಂಡಸ್ಥಲವಾಗಿದ್ದಿತ್ತು.

ಸಸಿಯೊಳಗಣ ಪರಿಮಳದಂತಿದ್ದಿತ್ತು–ಇಂದು ನಾಳೆ ಮುಂಜಾನೆ ವೇಳೆಗೆ ವಿಕಸನವಾದಲ್ಲಿ ಕಾಣಿಸಿಕೊಂಡು, ವಿಕಸನವಾಗದಲ್ಲಿ ಕಾಣಿಸಿಕೊಳ್ಳದೆ ಅದರಲ್ಲಿ ಹೇಂಗೆ ಅತಿ ರಹಸ್ಯವಾಗಿರ್ಪುದೋ ಹಾಂಗೆ ಇಲ್ಲಿ ಭಕ್ತಿ ಪರಿಪಕ್ವತೆ ಇಲ್ಲದಾತ್ಮನ ಪಿಂಡಮಧ್ಯದಲ್ಲಿ ಶಿವ ಸದ್ವಾಸನಾ ಸ್ವರೂಪವಾಗಿ ಪರಬ್ರಹ್ಮವಡಗಿರ್ದು ಜ್ಞಾನೋದಯಕ್ಕೆ ಮುನ್ನಡೆ ಕುರುಹುಕಾಣಿಸಿಕೊಳ್ಳದೆ ಪಿಂಡದಲ್ಲಿಯೇ ಪಿಂಡಸ್ಥಲವಾಗಿದ್ದಿತ್ತು. ಕೂಡಲಸಂಗಮ ದೇವ ಕೂಡಲ–ಭಕ್ತರಂಗದಲ್ಲಿ ಕೊಡುವಂಥ ಕೂಟದಲ್ಲಿ ವಿಯೋಗವಿಲ್ಲದ ಸಂಯೋಗವಾದ,

ಸಂಗಮದೇವ–ಭಕ್ತಮಹೇಶ್ವರರುಗಳ ಲಿಂಗಮನ ಪ್ರಾಣಂಗಳಲ್ಲಿ ಒಲ್ಪಟ್ಟಂಥ ಎಲೆಪರಶಿವಲಿಂಗವೆ, ಕನ್ನೆಯ ಸ್ನೇಹದಂತಿದ್ದಿತ್ತು–ವಿಷಯ ಯೌವನ ಕಾಲದಲ್ಲಿ ಕಾಣಿಸಿಕೊಂಡು ಯೌವನವಿಲ್ಲದಲ್ಲಿ ಕಾಣಿಸಿಕೊಳ್ಳದೆ ಅದರಲ್ಲಿ ಹೇಂಗೆ ಅತಿ ರಹಸ್ಯವಾಗಿರುತ್ತಿಹುದೋ ಹಾಂಗೆ ಇಲ್ಲಿ ಪರಬ್ರಹ್ಮಚಿತ್ರ ಕಾಶ(ವೆಂಬ) ಜ್ಞಾನೋದಯಕ್ಕೆ ಮುನ್ನವೆ ಕುರುಹುಗಾಣಿಸಿಕೊಳ್ಳದೆ ಪಿಂಡದಲ್ಲಿ ಪಿಂಡಸ್ಥಲವಾಗಿರುವಂಥದನ್ನು ವಿವರಿಸಬಾರದೆಂಬಲ್ಲಿ ಕನ್ನೆಯ ಸ್ನೇಹದಂತಿದ್ದಿತ್ತು.

ಈ ಟೀಕೆಯು ಭಕ್ತಸ್ಥಲದಲ್ಲಿನ ಪಿಂಡಸ್ಥಲಕ್ಕೆ ಸಮರ್ಪಕವಾದ ರೀತಿಯಲ್ಲಿ ವಾಚ್ಯಾರ್ಥ ದಲ್ಲಿಯೂ ತಾತ್ವಿಕಾರ್ಥದಲ್ಲಿಯೂ ಸಮರ್ಪಕತೆಯನ್ನು ಪಡೆಯುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಉಳಿದ ಟೀಕೆಗಳು ಇದೇ ಮಾರ್ಗದಲ್ಲಿ ಮುಂದುವರಿಯುವುದು ಕಂಡುಬರುತ್ತದೆ. ಆದರೆ ಬಸವಣ್ಣನವರು ವಚನದ ಕೊನೆಯಲ್ಲಿ ವೀರಶೈವ ತಾತ್ತ್ವಿಕ ಚಿಂತನೆಯ "ಶರಣಸತಿ ಲಿಂಗಪತಿ" ಎಂಬ ಭಾವಕ್ಕೆ ಭಕ್ತನ ಮನೋಭಾವವು ಹೊಂದುವಂತೆ ಕನ್ನೆಯ ಸ್ನೇಹದಂತಿದ್ದಿತ್ತು" ಎಂದು ಕೊಡುವ ಕಲ್ಪನೆ ಒಟ್ಟು ಪರಿಣಾಮದಲ್ಲಿ ಟೀಕೆಯಲ್ಲಿ ವ್ಯಕ್ತವಾಗುವುದೇಯಿಲ್ಲ. ಇಲ್ಲಿ ಕನ್ನೆಯ ಸ್ನೇಹ ಮತ್ತು ಸಾಧನೆಯ ಪ್ರಾಥಮಿಕ ಹಂತದಲ್ಲಿರುವ, ಪಿಂಡಸ್ಥಲದ ಭಕ್ತನ ಸ್ಥಿತಿ ಎರಡೂ ಒಂದೇ ಬಗೆಯವು. ಕನ್ನೆಯ ಸಂದರ್ಭದಲ್ಲಿ ಬಯಕೆಯ ಕಿಚ್ಚು, ರಸದ ರುಚಿ, ನನೆಯ ಪರಿಮಳ ಮತ್ತು ಸ್ನೇಹಗಳು ವಿಶೇಷ ಅರ್ಥವನ್ನು ಪಡೆಯುತ್ತವೆ. ಕೂಡಲಸಂಗಮನನ್ನು ಕೊಡಬಯಸುವ ಭಕ್ತನ ಆಕಾಂಕ್ಷೆ ಕನ್ನೆಯ ಸ್ನೇಹ ಒಂದೇ ಬಗೆಯವು. ಈ ದೃಷ್ಟಿಯಿಂದ ಬಸವಣ್ಣನವರು ತಮ್ಮ ವಚನದಲ್ಲಿ ಸಾಧಿಸ ಬಯಸುವ ಆಧ್ಯಾತ್ಮ ಶೃಂಗಾರದ ಅನುಭವದ ಸೂಚನೆ ಟೀಕೆಯ ವ್ಯಾಖ್ಯಾನದಲ್ಲಿ ವ್ಯಕ್ತವಾಗುವುದೇಯಿಲ್ಲ. ಇದು ತಾತ್ವಿಕ ಅರ್ಥವನ್ನು ಹೊಳೆಯಿಸಬೇಕೆಂಬ ಟೀಕೆಯ ಉದ್ದೇಶಕ್ಕೂ ಮಿತಿಯನ್ನು ಕಲ್ಪಿಸುತ್ತದೆ.

ಕೆಲವು ಸಾರೆ ಟೀಕೆಗಳು ವಾಚ್ಯಾರ್ಥ ಮತ್ತು ತಾತ್ವಿಕ ಅರ್ಥಗಳನ್ನು ಹೃದ್ಯವಾಗಿ ವಿವರಿಸುವಲ್ಲಿ ಯಶಸ್ವಿಯಾಗುತ್ತವೆ. ಉದಾಹರಣೆಗೆ ಒಂದು ವಚನವನ್ನು ಗಮನಿಸಬಹುದು.

೨) ನೀರಿಂಗೆ ನೈದಿಲೆಯ ಶೃಂಗಾರ : ಊರಿಂಗೆ ಆಗರವೆ ಶೃಂಗಾರ;
ಸಮುದ್ರಕ್ಕೆ ತೆರೆಯೇ ಶೃಂಗಾರ. ನಾರಿಗೆ ಗುಣವೇ ಶೃಂಗಾರ
ಗಗನಕ್ಕೆ ಚಂದ್ರಮನೆ ಶೃಂಗಾರ; ನಮ್ಮ ಕೂಡಲ ಸಂಗನ
ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ.

ಟೀಕೆ : "ನೀರಿಂಗೆ ನೈದಿಲೆಯೆ ಶೃಂಗಾರ : ನೀರಿಂಗೆ–ಉದಕಕ್ಕೆ ನೈದಿಲೆಯ ನೀಲೋತ್ಪಲವೆ ಶೃಂಗಾರ – ಅಲಂಕಾರವೆಂಬಲ್ಲಿ ಕೆರೆಗಳಲ್ಲಾಗಲಿ, ಬಾವಿಗಳಲ್ಲಾಗಲಿ, ಕೊಳಗಳಲ್ಲಾಗಲಿ ಹೊಂದಾವರೆ ಮಂದಾವರೆ ತಾವರೆ ಕಮಲ ಕಣಂಗಿಲ ನೈದಿಲೆ ಹೂವು ಕೊಳೆಹೂವು ಮೊದಲಾದಂಥವಿದ್ದರೆ ನೋಡುವವರ ಕಣ್ಣಿಗೆ ಅಲಂಕಾರವಾಗಿರ್ಪುವು. ಅವೇನೂ ಇಲ್ಲದೆ ಬರೇ ಗುಂಭವಾಗಿ ನೀರೇ ತುಂಬಿಕೊಂಡಿದ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಭೋಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು. ಊರಿಂಗೆ ಆಗರವೆ ಶೃಂಗಾರ–ಊರಿಂಗೆ–ಗ್ರಾಮಕ್ಕೆ ಆಗರವೆ– ವನಾಂತರವೆ, ಶೃಂಗಾರ–ಅಲಂಕಾರವೆಂಬಲ್ಲಿ ತೆಂಗಿನ ತೋಟ, ಅಡಿಕೆಯ ತೋಟ. ಬಾಳೆಯ ತೋಟ, ಕಬ್ಬಿನ ತೋಟ. ನೆಲ್ಲುಗದ್ದೆ ಮೊದಲಾದಂಥವಿದ್ದರೆ, ನೋಡುವಂಥವರ ಕಣ್ಣಿಗೆ ಅಲಂಕಾರವಾಗಿರ್ಪುದು. ಅವೇನೂ ಇಲ್ಲದೆ ಮಹಾಬಯಲಲ್ಲಿ ಗ್ರಾಮವನ್ನು ಕಟ್ಟಿದ್ದರೆ ನೋಡುವಂಥವರ ಕಣ್ಣಿಂಗೆ ರಣರಣಾಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು.

ಸಮುದ್ರಕ್ಕೆ ತೆರೆಯೇ ಶೃಂಗಾರ : ಸಮುದ್ರಕ್ಕೆ – ಅಬ್ಧಿಗೆ, ತೆರೆಯೇ – ಕಲ್ಲೋಲಂಗಳೆ ಶೃಂಗಾರ–ಅಲಂಕಾರವೆಂಬಲ್ಲಿ ಸಮುದ್ರವು ನೊರೆತೆರೆ ಬುದ್ಬುದ ಸೀಕರಾದಿ ತುಂತುರ್ವನಿಗಳಿರದ ಹೆಣ್ಣು ತೆರೆ ಗಂಡುತೆರೆಗಳಿಂದ ಭೋರೆಂದು ಉಲಿಯುತ್ತಿದ್ದಲ್ಲಿ ನೊಡವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದು, ಅದೇನೂ ಇಲ್ಲದ ತೆಪ್ಪಗೆ ನೀರು ತುಂಬಿಕೊಂಡಿರ್ದಲ್ಲಿ ನೋಡುವವರ ಕಣ್ಣಿಂಗೆ ಅಭೋಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು. ನಾರಿಗೆ ಗುಣವೆ ಶೃಂಗಾರ ನಾರಿಗೆ – ಸ್ತ್ರೀಯಳಿಗೆ, ಗುಣವೆ–ಸದ್ಗುಣವೆ ಶೃಂಗಾರ–ಅಲಂಕಾರವೆಂಬಲ್ಲಿ ಮನೆಗೆ ಬಂದಂಥ ಭಕ್ತಮಹೇಶ್ವರರುಗಳಿಗೆ ಜಯ ಜೀಯಾ ಚಿತ್ತೈಸಿ ಬನ್ನಿ ಮುಹೂರ್ತವ ಮಾಡಿರೆಂದು ಅಗ್ಗವಣಿಯನ್ನು ಕೊಟ್ಟು ಅರ್ಚನಾರ್ಪಣಾದಿ ಕ್ರಿಯೆಗಳನ್ನು ಮಾಡಿಸುವಂಥದೆ ಸದ್ಗುಣವಿಲ್ಲದೆ, ಮಿಂದು ಮಡಿಯನುಟ್ಟು ಕೊಂಡು, ಬಾಚಿ ಬೈತಲೆಯ ತೆಗೆದುಕೊಂಡು ಮಿಂಚಾಗಿರ್ದದಲ್ಲಿ ಹೋ ಹೋ ಇವಳು ಹೊಗರಾಗೈದಾಳೆ ಎಂದು ನಕ್ಕು ಹಾಸ್ಯವ ಮಾಡುತ್ತಿಹರು.

ಗಗನಕ್ಕೆ ಚಂದ್ರಮನೆ ಶೃಂಗಾರ : ಗಗನಕ್ಕೆ–ಆಕಾಶಕ್ಕೆ ಚಂದ್ರಮನೆ–ಪೌರ್ಣಮಿ ಚಂದ್ರನೆ, ಶೃಂಗಾರ–ಅಲಂಕಾರವೆಂಬಲ್ಲಿ ಬಹು ನಕ್ಷತ್ರಂಗಳ ಮಧ್ಯದಲ್ಲಿ ಪೌರ್ಣಮಿ ಚಂದ್ರನಿದ್ದರೆ, ನೋಡುವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದು. ಅವೇನೂ ಇಲ್ಲದೆ ಅಮಾವಾಸ್ಯೆಯ ಕಾಲದಲ್ಲಿ ಗಡದ್ದಾಗಿ ಕಾವಳ ಬಿದ್ದಿದ್ದಲ್ಲಿ ನೋಡುವಂಥವರ ಕಣ್ಣಿಂಗೆ ಅಲಂಕಾರವಾಗಿರ್ಪುದೆ? ಇಲ್ಲವು ರಣಾ ರಣಾಯೆಂದು ಭೀತಿಯನ್ನು ಹುಟ್ಟಿಸುತ್ತಿಹುದು. ನಮ್ಮ ಕೂಡಲಸಂಗನ–ನಮ್ಮ ಪರಶಿವಲಿಂಗದಪರಾವತಾರ ಮೂರ್ತಿಗಳಾದ ಶರಣರ–ಶಿವಶರಣರ, ಫಣಿಯಲ್ಲಿಯ–ನೊಸಲಲ್ಲಿಯ ವಿಭೂತಿಯ ಚಿದ್ವಿಭೂತಿಯ ಶೃಂಗಾರ–ಅಲಂಕಾರವೆಂಬಲ್ಲಿ ಆಭರಣವಾಗಿ ಒಪ್ಪುತ್ತಿಹುದು."

ಇಂಥ ಕಡೆಗಳಲ್ಲಿ ಟೀಕೆಯು ಮೂಲ ವಚನದ ಸೃಷ್ಟಿಶೀಲ ಗುಣವನ್ನು ಅನುಸರಿಸಿ ಕೊಂಡು ವಚನದ ಆಶಯವನ್ನು ಪರಿಣಾಮಕಾರಿಯಾಗಿ ಬಿಂಬಿಸಲು ಪ್ರಯತ್ನಿಸುವುದು ಕಂಡು ಬರುತ್ತದೆ. ಕೆಲವು ಕಡೆ ಟೀಕೆಯು ವಾಚ್ಯ ಮತ್ತು ತಾತ್ವಿಕ ಅರ್ಥಗಳನ್ನು ಅತ್ಯಂತ ಅಡಕವಾಗಿ ಔಚಿತ್ಯಪೂರ್ಣವಾಗಿ ಹೇಳಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ ಗುರುಕರುಣ ಸ್ಥಲದಲ್ಲಿಯ ಒಂದು ವಚನವನ್ನು ಗಮನಿಸಬಹುದಾಗಿದೆ.

ಇ) **ಮಡಕೆಯ ಮಾಡುವಡೆ ಮಣ್ಣೆ ಮೊದಲು ತೊಡಿಗೆಯ ಮಾಡುವಡೆ**
ಹೊನ್ನೆ ಮೊದಲು : ಶಿವಪಥವನರಿವಡೆ ಗುರುಪಥವೆ ಮೊದಲು :
ನಮ್ಮ ಕೂಡಲಸಂಗಮದೇವರನರಿವಡೆ ಶರಣರ ಸಂಗವೆ ಮೊದಲು.

ಟೀಕೆ : ಮಡಕೆಯ ಮಾಡುವಡೆ ಮಣ್ಣೆ ಮೊದಲು : ಮೃತ್ತಿಕೆಯೇ ಅದಿಯಾಗಿರ್ಪುದು, ತೊಡಿಗೆಯ ಹೊನ್ನೆ ಮೊದಲು, ತೊಡಿಗೆಯ ಸಮಸ್ತಾಭರಣಗಳನು ಮಾಡುವಡೆ – ಅನುಗೆಯ್ಯಬೇಕಾದರೆ, ಹೊನ್ನೆ ಮೊದಲು–ಸುವರ್ಣವೆ ಮುಖ್ಯವಾಗಿರ್ಪುದು. ಶಿವಪಥವ ಪರಿವಡೆ ಗುರುಪಥವೆ ಮೊದಲು : ಶಿವಪಥವನರಿವಡೆ – ಲಿಂಗಾಚಾರ ಮಾರ್ಗವನು ತಿಳಿಯಬೇಕಾದರೆ. ಗುರುಪಥವೆ ಮೊದಲು – ಶ್ರೀ ಗುರುನಾಥನ ವೇದಾ ಮಂತ್ರ ಕ್ರಿಯೆಗಳೆಂಬ ದೀಕ್ಷಾತ್ರಯಂಗಳಿಂದ ಲಿಂಗಕ್ಕೆ ಲಿಂಗ ಸಂಬಂಧವ ಪಡಿಸುವಂಥದೆ ಮುಖ್ಯವಾಗಿರ್ಪುದು. ನಮ್ಮ ಕೂಡಲ ಸಂಗಮ ದೇವರನರಿವಡೆ ಅಂತರಂಗದಲ್ಲಿ ಪ್ರಾಣಲಿಂಗ ಸಂಬಂಧವ

ತಿಳಿಯಬೇಕಾದರೆ. ಶರಣರ ಸಂಗವೆ ಮೊದಲು – ತ್ರಿವಿಧ ಅಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ ಶಿವಾನುಭವದ ಗೋಷ್ಠಿಯ ಸಂಪರ್ಕವೆ ಮುಖ್ಯವಾಗಿರ್ಪುದು".

ಇನ್ನು ಕೆಲವು ಕಡೆಗಳಲ್ಲಿ ತತ್ತ್ವಾರ್ಥವನ್ನು ಸುಲಭದಲ್ಲಿ ಹೊಳೆಯಿಸಬೇಕೆಂಬ ಉತ್ಸಾಹದಲ್ಲಿ ನಿತ್ಯದ ಸಡಿಲು ವಾಚ್ಯ ಮಾತುಗಳನ್ನು ಪ್ರಯೋಗಿಸಿ ವ್ಯಾಖ್ಯಾನಿಸಲು ಪ್ರಯತ್ನಿಸಿದ ಟೀಕೆಗಳು ಕಂಡುಬರುತ್ತವೆ. ಉದಾಹರಣೆಗೆ ಈ ವಚನವನ್ನು ಪರಿಶೀಲಿಸಬೇಕು.

ಳ) ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟಡೆ ಕೊಳೆವುದಲ್ಲದೆ
ಬಲ ಹಾಗ ಬಲ್ಲುವೆ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟಡೆ
ಭಕ್ತಿಯಂತಹುದೋ? ಮುನ್ನಿನಂತಲ್ಲದೆ ಕೂಡಲಸಂಗಮದೇವಾ
ಮನಹೀನನ ಮೀಸಲು ಕಾಯ್ದಿರಿಸಿದಂತೆ.

ಟೀಕೆ : "ಕುಂಬಳದ ಕಾಯಿಗೆ–ಲೋಕದಲ್ಲಿ ಹಲಾಯುಧನೇನಾದರೂ ಹಿತ್ತಲದೊಳಗೆ ಕುಂಬಳವನ್ನು ಬಿತ್ತಿದಲ್ಲಿ ಹರವಿ ಗಡತರ, ಮೂಟೆ ಗಡತರ, ಗುಡಾಣ ಗಡತರ ಕಾಯಿಬಿಟ್ಟಲ್ಲಿ ಇವು ನಾಡಿಗೆ ದೇಸಾಯಿ ಶೆಟ್ಟಿ ಚೌದರಿ ಮೊದಲಾದವರಿಗೆ ಕೈಗಾಣಿಕೆಯನ್ನು ಕೊಡಬೇಕೆಂದು, ಕಬ್ಬುನದ ಕಟ್ಟ ಕೊಟ್ಟಡೆ–ಕರ್ಬೊನ್ನದಿಂದ ಬಂಧಿಸಿದರೆ, ಕೊಳೆವುದಲ್ಲದೆ–ಜೀರ್ಣಿಸುವುದಲ್ಲದೆ. ಬಲುಹಾಗ ಒಲ್ಲುದೆ? ಭದ್ರವಾಗಿದ್ದೀತೆ? ಇರಲರಿಯದೆಂಬ ದೃಷ್ಟೋಪಮಾನದ ಹಾಂಗೆ ಕುಂಬಳಕಾಯಿಗೆ–ಸಪ್ತದಾತು ಸಮ್ಮಿಶ್ರವಾದ ದೇಹ ಸಂಬಂಧಿಯಾದ ಜೀವನಿಗೆ, ಕಬ್ಬುನದ ಕಟ್ಟು ಕೊಟ್ಟಡೆ–ಅವಲೋಹ ಸ್ವರೂಪವಾದಷ್ಟು ಭೋಗ ಮಲತ್ರಯಂಗಳ ನಿತ್ತರೆ. ಕೊಳೆವುದಲ್ಲದೆ ಅಹಂಕಾರ ಹಿರಿಯವನ ಆತ್ಮ ತೇಜಸ್ಸುಗಳು ಹೆಚ್ಚಿ ಭವಕ್ಕೆ ಹೋಗುವಂಥದೆ ಪ್ರಾಪ್ತಿಯಾಗಿಪ್ಪುದಲ್ಲದೆ, ಬಲುಹಾಗ ಬಲ್ಲದೆ. ಭಕ್ತಿ ಜ್ಞಾನ ವೈರಾಗ್ಯದಿಂದ ಪುಷ್ಠಿಯಾದೀತೆ? ಆಗಲರಿಯದು ಅಳಿಮನದವಂಗೆ–ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಸೆಯನ್ನು ಮುಂದು ಗೊಂಡಾಚರಿಸಲ್ಪಟ್ಟಂಥ ಜೀವನಿಗೆ ಶಿವದೀಕ್ಷೆಯ ಕೊಟ್ಟಡೆ–ವೇದಾ ಮಂತ್ರ ಕ್ರಿಯಂಗಳೆಂಬ ದೀಕ್ಷಾತ್ರಯಂಗಳಿಂದ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕರುಣಿಸಿ ಕೊಟ್ಟರೆ ಭಕ್ತಿಯಂತಹುದೊ? ಶಿವಾದ್ವೈತಭಕ್ತಿ ಹೇಂಗೆ ಅಳವಟ್ಟೀತೊ? ಅಳವಡದು, ಮುನ್ನಿನಂತಲ್ಲದೆ! ಮೊದಲಿನ ಹಾಂಗೆ ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಸೆಯನ್ನು ಮುಂದು ಗುಂಡಾಚರಿಸಿ ಭವಕ್ಕೆ ಹೋಗುವಂಥದೆ ಪ್ರಾಪ್ತಿಯಾಗಿಪ್ಪುದಲ್ಲದೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಮನಹೀನನ ಮೀಸಲು ಕಾಯ್ದಿರಿಸಿದಂತೆ; ವೀರಣ್ಣ ಬಸವಣ್ಣಂಗೆಂದು ಗುರು ಲಿಂಗ ಜಂಗಮಕ್ಕೆಂದು ಹಪ್ಪಳ, ಸಂಡಿಗೆ, ಗೌಲಿ, ಬಟುವಿ ಮೊದಲಾದಂಥವು ಮಾಡಿ ಮನೆಯ ಮೂಲೆಯೊಳಗಿಟ್ಟರೆ, ಮುಗ್ಗುನಟ್ಟು ಕೆಟ್ಟು ಹೋದವಲಾ ಎಂದು ಹಿತ್ತಲೊಳಗೆ ಮಡಿ ಪಾವಡವನ್ನು ಹಾಸಿ, ಮೇಲೆ ಒಣ ಹರವಿ. ಶುನಿ ಮಾರ್ಜಾಲ ಮೂಷಕ ಮೊದಲಾದವು ಮುಟ್ಟದ ಹಾಂಗೆ ಒಬ್ಬಾನೊಬ್ಬ ಅಲ್ಪಮನಸ್ಸನುಳ್ಳಾತನನು ಕಾಯ್ದುಕೊಂಡಿರುಯೆಂದು ಇರಿಸಿದಲ್ಲಿ ಅವನು ಯಾರಿಗೆ ಕಾಣಬಾರದ ಹಾಂಗೆ ಅದರಾಗಿಷ್ಟು ತೆಗೆದುಕೊಂಡು ಬಾಯಾಗ ಹಾಕಿಕೊಳ್ಳಲು ಅವು ದೇವತಾ ಕಾರ್ಯಕ್ಕೆ ಯೋಗ್ಯವಾಗದೆ ಹೇಂಗೆ ಉಚ್ಛಿಷ್ಟವಾಗಿ ಕೆಟ್ಟು ಹೋಗುತ್ತಿಹವೋ ಹಾಂಗೆ. ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಸೆಯನ್ನು ಮುಂದುಗೊಂಡಾಚರಿಸಲ್ಪಟ್ಟಂಥ ಜೀವನಿಗೆ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶದ ಕರುಣಿಸಿ ಕೊಟ್ಟರೆ ಅವನು

ಸಕಲ ಪದಾರ್ಥವನ್ನು ಲಿಂಗಾರ್ಪಣವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸಿದಲ್ಲಿ ಅವನಂಗ ತತ್ತ್ವ ಪದಾರ್ಥಗಳೆಲ್ಲವೂ ಲಿಂಗಕ್ಕೆ ಸಮರ್ಪಣೆಯಾಗದೆ ಮಾಯಾ ಉಚ್ಛಿಷ್ಟವಾಗಿ ಕೆಟ್ಟು ಹೋಗುತ್ತಿಹವು".

ಆದರೆ ಇದೇ ಸಂದರ್ಭದಲ್ಲಿ ಈ ಟೀಕೆಯ ಕರ್ತೃಗಳು ಅತ್ಯಂತ ಸಂಗ್ರಹವಾಗಿ ನೇರವಾಗಿ ಔಚಿತ್ಯಪೂರ್ಣವಾಗಿ ಟೀಕೆಯನ್ನು ಭಾಷೆಯ ಯಾವುದೇ ಗೊಂದಲವಿಲ್ಲದಂತೆ ಬರೆಯಬಲ್ಲ ರೆಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬೇಕು.

೫) **ಹುತ್ತವ ಬಡಿದರೆ ಹಾವು ಸಾಯ ಬಲ್ಲುದೆ ಅಯ್ಯಾ?**
ಅಘೋರ ತಪವ ಮಾಡಿದಡೇನು? ಅಂತರಂಗದ ಆತ್ಮಶುದ್ಧಿ
ಯಿಲ್ಲದವರ ನಾನೆಂತು ನಂಬುವೆನಯ್ಯಾ ಕೂಡಲಸಂಗಮ
ದೇವಾ ಇನ್ನೆಂತು ಮೆಚ್ಚುವೆನಯ್ಯಾ?

ಟೀಕೆ : ಹುತ್ತುವ ಬಡಿದಡೆ ಹಾವು ಸಾಯಬಲ್ಲುದೆ–ಕಡೆಯಲ್ಲಿ ತಿರುಗಾಡುವ ಸರ್ಪನ ಬಡಿದರೆ ಸತ್ತಿತ್ತಲ್ಲದೆ ಓಡಿಹೋಗಿ ಹುತ್ತವ ಹೊಕ್ಕಲ್ಲಿ; ಹುತ್ತವ–ವಾಲ್ಮೀಕವನ್ನು ಬಡಿದಡೆ–ಕೋಲು ಗುದಿಗೆಗಳಿಂದ ಸದೆಬಡಿದರೆ, ಹಾವು ಸಾಯಬಲ್ಲುದೆ– ಒಳಗಿರುವಂಥ ಸರ್ಪವೇನಾದರೂ ಮೃತವಾದೀತೆ? ಆಗಲರಿಯದು. ಹಾಂಗೆ ಹುತ್ತವ ಬಡಿದೆಡೆ: (ಹುತ್ತವ) ನವನಾಳಯುಕ್ತವಾದ ದೇಹವನ್ನು ಬಡಿದಡೆ–ತಪನಿಗ್ರಹಾದಿಗಳಿಂದ ದಂಡಿಸಿದರೆ ಹಾವು ಸಾಯಬಲ್ಲುದೆ–ಅಧೋಕುಂಡಲಿಯಳಿದು ಊರ್ಧ್ವಕುಂಡಲಿಯಾದೀತೆ? ಅಗಲರಿಯದು ಅಯ್ಯಾ ಎಲೆ ಲಿಂಗವೆ. ಅಘೋರ ತಪವ ಮಾಡಿದಡೇನು–ಭಯಂಕರವಾದ ಉಗ್ರತಪಸ್ಸನಾಚರಿಸಿದರೇನು. ಅಂತರಂಗ–ಹೃದಯವು ಆತ್ಮಶುದ್ಧಿಯಿಲ್ಲದವರ–ಮನನಿರ್ಮಲವಿಲ್ಲದವರನನೆಂತು ನಂಬುವೆನಯ್ಯಾ–ಇವರು ಜ್ಞಾನಿಗಳು. ಶಿವ ಸ್ವರೂಪಿಗಳು ಪರಬ್ರಹ್ಮ ಸ್ವರೂಪಿಗಳೆಂದು ನಾ ಹೇಂಗೆ ವಿಶ್ವಾಸಿಸುವೆನಯ್ಯಾ ಕೂಡಲ ಸಂಗಮದೇವಾ ಪರಶಿವಲಿಂಗವು, ಇನ್ನೆಂತು ಮೆಚ್ಚುವೆನಯ್ಯಾ–ಇನ್ನು ಹೇಂಗೆ ಮಮಕರಿಸಿ ನಿಜಮೋಕ್ಷವನ್ನು ಕರುಣಿಸಿ ಕೊಟ್ಟಾನೆ? (ಕರುಣಿಸಿ) ಕೊಡನು".

ಇಂಥ ಸಂದರ್ಭಗಳಲ್ಲಿ ಟೀಕೆಯು ತಾನು ಹೇಳಬೇಕಾದ ವಸ್ತು ವಿಷಯಕ್ಕೂ ತನ್ನ ಅಭಿವ್ಯಕ್ತಿಯ ಸಾಧನೆಯಾದ ಭಾಷೆಗೂ ಇರಬೇಕಾದ ಸಂಲಗ್ನತೆಯನ್ನು ಸಮರ್ಥವಾಗಿ ತೂಕತಪ್ಪದಂತೆ ವ್ಯಕ್ತಪಡಿಸುತ್ತದೆ.

ಬಸವಣ್ಣನವರ ಮನೋಭಾವಕ್ಕೂ ಅವರ ಅಭಿವ್ಯಕ್ತಿ ಕ್ರಮಕ್ಕೂ "ಬೆಡಗು" ಅಷ್ಟೊಂದು ಒಗ್ಗುವ ಪ್ರಕಾರವೆಂದು ಕಾಣಿಸುವುದಿಲ್ಲ. ತುಂಬ ಕಡಿಮೆಯಾದರೂ ಅವರು ವ್ಯಕ್ತಪಡಿಸಿದ ಬೆಡಗಿನ ವಚನಗಳಿಗೆ ಬರೆದ ಒಂದು ಟೀಕೆಯನ್ನು ಮಾದರಿಗಾಗಿ ಗಮನಿಸಬಹುದಾಗಿದೆ.

೬) **ಹಾವಡಿಗನು ಮೂಕೊರತಿಯು ತನ್ನ ಕೈಯಲ್ಲಿ**
ಹಾವು ಮಗನ ಮದುವೆಗೆ ಶಕುನವ ನೋಡ ಹೋಹಾಗ
ಇದಿರಲೊಬ್ಬ ಮೂಕೊರತಿಯ ಹಾವಡಿಗನ ಕಂಡು
ಶಕುನ ಹೊಲ್ಲೆಂಬ ಚದುರನ ನೋಡಾ
ತನ್ನ ಸತಿ ಮೂಕೊರತಿ ತನ್ನ ಕೈಯಲ್ಲಿ ಹಾವು
ತಾನು ಮೊಕೊರೆಯ! ತನ್ನ ಭಿನ್ನವ ನರಿಯದೆ
ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲಸಂಗಮದೇವಾ?

ಟೀಕೆ : ಹಾವಾಡಿಗನು–ಹಾವಾಡಿಸುವಂಥ ಗಾರುಡಿಗನು. ಮೂಕೊರತಿಯು–ಮೊಲೆ ಮೂಗನು ಕೊಯ್ಸಿಕೊಂಡಂಥ ಜೋಗಿವೆಣ್ಣು. ತನ್ನ ಕೈಯಲ್ಲಿ–ಹಾವಾಡಿಗನ ಹಸ್ತದಲ್ಲಿ, ಹಾವು–ಹಾವಿನ ಪುಟ್ಟಿವುಂಟಾಗಿರ್ಪುದು; ಮಗನ ಮದುವೆಗೆ–ತನ್ನ ಕುಮಾರನ ವಿವಾಹ ಮಾಡುವುದಕ್ಕೆ: ಶಕುನವ ನೋಡ ಹೋದಾಗ–ಶುಭಾಶುಭಂಗಳ ಪರಾಮರಿಸುತ್ತೈದುವಾಗ, ಇದರಲ್ಲಿ–ಸಮ್ಮುಖದಲ್ಲಿ. ಒಬ್ಬ ಮೂಕೊರತಿಯು–ಒಂದು ಮೊಲೆ ಮೂಗನ್ನು ಕೊಯ್ದಿಕೊಂಡಂಥ ಜೋಗಿವೆಣ್ಣು ಹಾವಾಡಿಗನ–ಹವಾಡಿಸುವಂಥ ಗಾರುಡಿಗನ ಕಂಡು ನೋಡಿ ಶಕುನ ಹೊಲ್ಲೆಂಬುತ್ತೆ–ನಮ್ಮ ಕುಮಾರನ ವಿವಾಹವನ್ನು ಮಾಡುವುದಕ್ಕೆ ಶುಭಾಶುಭಂಗಳೆ ಪರಾಮರಿಸುತ್ತೈದುತ್ತಿದೀವಿ. ಒಂದು ಮೊಲೆ ಮೂಗನ್ನು ಕೊಯ್ಸಿಕೊಂಡಂಥ ಜೋಗಿವೆಣ್ಣು ಒಬ್ಬ ಗಾರುಡಿಗನ ದರುಶನವಾಯಿತ್ತು. ಶಕುನವಾಗಲಿಲ್ಲೆನುತ್ತೆ ತಿರುಗುವ– ಹಿಮ್ಮುಖವಾಗುವ ಚದುರನ ನೋಡ! ಕುಶಲತ್ವವುಳ್ಳ ಗಾರುಡಿಗನ ಕಂಡಾ! ತನ್ನ ಸತಿ ಮೂಕೊರತಿಯು–ತನ್ನ ಸ್ತ್ರೀಯಳು ಮೊಲೆ ಮೂಗನ್ನು ಕೋಯ್ಸಿಕೊಂಡಿರ್ಪಳು. ತನ್ನ ಕೈಯಲ್ಲಿ ಹಾವು–ಗಾರುಡಿಗ ಕೈಯಲ್ಲಿ ಹಾವಿನ ಪುಟ್ಟಿವುಂಟಾಗಿರ್ಪುದು–ತಾನು ಮೂಕೊರೆಯ–ತಾನು ಮೂಗು ಕೊಯ್ಸಿಕೊಂಡಿಪ್ಪನು: ತನ್ನ ಭಿನ್ನವ ತಾನರಿಯದೆ– ತನ್ನ ಕೊರತೆಯ ತಾನ ತಿಳಿಯದೆ. ಅನ್ಯರನೆಂಬ–ಪರರನ್ನು ಒಂದು ಮೊಲೆ ಮೂಗು ಕೊಯ್ಸಿಕೊಂಡಂಥ ಜೋಗಿವೆಣ್ಣು ಗಾರುಡಿಗನಿದಿರಾದರೆ ನಿಂದಿಸುವ ಕುನ್ನಿಯನೇನೆಂಬೆ–ಶುನಿಗೆ ಸಮಾನವಾದ ಗಾರುಡಿಗನ ಎಂತೆಂದು ಹೇಳುವೆನೆಂಬುದರ್ಥ.

ಹಾವಾಡಿಗನು – ಇಂದ್ರಿಯಂಗಳ ವರ್ತನೆಯೊಡನೆ ಕೂಡಿ ಚರಿಸುವಂಥ ವಾಗದ್ವೈತಿಯು ಮೂಕೊರೆತಿಯು–ಭಿನ್ನ ಕ್ರಿಯ ಆಚಾರವನ್ನುಳ್ಳ ಸಿದ್ಧಾಂತಿಯು, ತನ್ನ–ವೇದಾಂತಿಯು, ಕೈಯಲ್ಲಿ–ಕುಚಿತ್ತವೆಂಬ ಹಸ್ತದಲ್ಲಿ ಹಾವು–ಇಂದ್ರಿಯಂಗಳೆಂಬ ಸರ್ಪಂಗಳುಂಟಾಗಿಪ್ಪವು: ಮಗನ ಮದುವೆಗೆ–ತನ್ನಾತ್ಮನ ಮಹಾಲಿಂಗದಲ್ಲಿ ಕೂಡೋದಕ್ಕೆ, ಶಕುನವ ನೋಡ ಹೋದಾಗ–ಶುಭಾಶುಭಂಗಳ ಪರಾಮರಿಸುತ್ತೈದುವಾಗ, ಇದಿರಲಿ–ಸಮ್ಮುಖದಲ್ಲಿ ಒಬ್ಬ ಮೂಕೊರೆತಿಯು–ಭಿನ್ನಕ್ರಿಯಾಚಾರವನುಳ್ಳ ಸಿದ್ಧಾಂತಿಯು, ಹಾವಾಡಿಗನ–ವಾಗದ್ವೈತಿಯನ್ನು, ಕಂಡು–ನೋಡಿ, ಶಕುನಹೊಲ್ಲೆಂಬುತ್ತೆ–ನಮ್ಮಾತ್ಮನ ಮಹಾಲಿಂಗದಲ್ಲಿ ಕೂಡೋದಕ್ಕೈದುತ್ತಿದ್ದೇವೆ. ಭಿನ್ನ ಜ್ಞಾನ ಭಿನ್ನ ಕ್ರಿಯಾಚಾರದವರ ದರುಶನವಾಯಿತ್ತು. ಶಕುನವಾಗಲಿಲ್ಲೆನುತ್ತೆ ತಿರುಗುವ ಹಿಮ್ಮುಖವಾಗುವ. ಚದುರ ನೋಡಾ! ಕುಶಲತ್ವನವನುಳ್ಳ ದ್ವೈತಾದ್ವೈತಿಗಳ ಕಂಡಾ. ತನ್ನ ಸತಿ ಮೂಕೊರಿತಿಯು–ಸಿದ್ಧಾಂತ ಅಂಗದಲ್ಲಿ ಅಭಿನ್ನಕ್ರಿಯಾಚಾರವುಂಟಾಗಿಲ್ಲವು. ತನ್ನ ವೇದಾಂತಿಯ, ಕೈಯಲ್ಲಿ–ಕುಚಿತ್ತವೆಂಬ ಹಸ್ತದಲ್ಲಿ. ಹಾವು–ಇಂದ್ರಿಯಂಗಳೆಂಬ ಸರ್ಪಗಳುಂಟಾಗಿರ್ಪವು. ತಾನು ಮೂಕೊರಿಯ, ತಾನು–ವೇದಾಂತಿ (ಮೂಕೊರೆಯ) ಅಂಗದಲ್ಲಿ ಅಭಿನ್ನ ಜ್ಞಾನವುಂಟಾಗಿಲ್ಲವು. ತನ್ನ ಭಿನ್ನವ ತಾನರಿಯದೆ–ತನ್ನ ಕೊರತೆಯ ತಾ ತಿಳಿಯದೆ, ಅನ್ಯರನೆಂಬ–ಪರರುಗಳನ್ನು ದ್ವೈತಾದ್ವೈತಿಗಳೆಂಬ ಹೇಳುವ ಕುನ್ನಿಯನೀನೆಂಬೆ–ಶಕುನಿಗೆ ಸಮಾನವಾದ ದ್ವೈತಾದ್ವೈತಿಗಳ ಎಂತೆಂದು ಹೇಳುವೆನು. ಕೂಡಲಸಂಗಮದೇವಾ–ಎಲೆಪರಶಿವಲಿಂಗವೆ."

ಇಂಥ ಬೆಡಗಿನ ವಚನಗಳಲ್ಲಿ ಅಡಗಿರುವ ಮಾಂತ್ರಿಕತೆಯು ಟೀಕೆಯಲ್ಲಿ ಎಲ್ಲಿಯೂ ಸ್ಫೋಟವಾದ ಅನುಭವವನ್ನು ಕೊಡುವುದೇಯಿಲ್ಲ. ಇದಲ್ಲದೆ ಟೀಕೆಗಳಲ್ಲಿಯ ಲೋಕಾನುಭವ,

ಸೂಕ್ಷ್ಮ ನಿರೀಕ್ಷೆ, ಹೊಸ ಹೊಸ ದೇಶಿಪದಗಳ ಅಪೂರ್ವಪ್ರಯೋಗ, ಅಪರೂಪವಾದ ಶಬ್ದಾರ್ಥಗಳ ಲವಲವಿಕೆಯನ್ನು ಮೆಚ್ಚಿಯೂ ನಮ್ಮ ಗಣ್ಯವಿದ್ವಾಂಸರು ಈ ಟೀಕೆಗಳನ್ನು ಕುರಿತು ಅಷ್ಟೊಂದು ಉತ್ಸಾಹ ತೋರದಿರುವುದಕ್ಕೆ ಕಾರಣಗಳೇನಿರಬಹುದು?[೮] ಯೋಚಿಸಬೇಕು. ಒಟ್ಟಾರೆ ವಚನಗಳ ಸಂದರ್ಭದಲ್ಲಿ ವಿಶೇಷವಾಗಿ ಬಸವಣ್ಣನವರ ವಚನಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಬಗೆಯ ಅತೃಪ್ತಿಗೆ ಮುಖ್ಯಕಾರಣವೆಂದರೆ, ತಾತ್ವಿಕ ಅಂಶಗಳು ವಚನಗಳಲ್ಲಿ ಅನುಭವದ ಭಾಗಗಳಾಗಿ ಸೃಜನಶೀಲ ಮನಸ್ಸೊಂದರ ಸ್ಪಂದನಗಳಾಗಿ ಬರುವುದರಿಂದ ಅವುಗಳನ್ನೋದಿದಾಗ ಯಾರಿಗೂ ಉಲ್ಲಾಸ ಉಂಟಾಗುತ್ತದೆ. ಆದರೆ ಅವುಗಳಲ್ಲಿನ ಅನುಭವದ ಭಾವಸ್ಪರ್ಶವನ್ನು ಕಳಚಿ, ಶುದ್ಧತತ್ತ್ವಗಳನ್ನಾಗಿ ಟೀಕಾಕಾರರು ಹೆಕ್ಕಿ ತೆಗೆಯಲು ಪ್ರಯತ್ನಿಸುವುದು. ಮನುಷ್ಯನ ದೇಹದಲ್ಲಿನ ಮಾಂಸ, ರಕ್ತ, ಸ್ನಾಯು, ಚರ್ಮಗಳನ್ನು ಕಳಚಿ ಕೇವಲ ಗಟ್ಟಿ ಅಸ್ತಿಪಂಜರವನ್ನು ಹೊರತೆಗೆಯುವ ಪ್ರಯತ್ನಕ್ಕೆ ಸಮಾನವಾಗಿದೆ. ವಚನಕಾರರು ತತ್ತ್ವಗಳನ್ನು ತಮ್ಮ ವೈಯಕ್ತಿಕ ಅನುಭವದ ನಿಜದಲ್ಲಿ ಕಂಡು ಆದರ್ಶವನ್ನು ಹೃದಯತುಂಬಿ ಎಲ್ಲರ ಬುದ್ಧಿ–ಭಾವಕ್ಕೆ ತಟ್ಟುವಂತೆ ವ್ಯಕ್ತಪಡಿಸಿರುವುದು ಇಲ್ಲಿನ ಹೆಚ್ಚಳವಾಗಿದೆ. ಈ ದೃಷ್ಟಿಯಿಂದ ಟೀಕಾಕಾರರಿಗೆ ಆ ಬಗೆಯ, ಸೃಷ್ಟಿಶೀಲ ಅನುಭವಕ್ಕೆ ಸಂವಾದಿಯಾದ, ತಕ್ಕನಾದ ಭಾಷೆಯಲ್ಲಿ ಮಂಡಿಸಲು ಸಾಧ್ಯವಾಗದ್ದೇ ಹೀಗೆ ಟೀಕೆಗಳು ನೀರಸವೆನ್ನಲು ಕಾರಣವಾಗಿದೆ. ಕೆಲವು ಕಡೆ ಟೀಕೆಗಳಲ್ಲಿ ಲೋಕಾನುಭವ, ಮಾನವೀಯ ಸಂದರ್ಭಗಳ ವಿವರಣೆ ಬಂದರೂ, ಅದು ಭಾಷೆಯಲ್ಲಿ ವಚನ ರೂಪಕ್ಕೆ ಜೋಡು ಎನ್ನಿಸದೆ ಅತೃಪ್ತಿಯನ್ನುಂಟು ಮಾಡುತ್ತದೆ. ಓದುಗನಿಗೆ ಟೀಕೆಯ ಮಧ್ಯೆ ಏನನ್ನೋ ಕಳೆದುಕೊಂಡ ಅನುಭವವಾಗುತ್ತದೆ. ಒಂದು ದೃಷ್ಟಿಯಿಂದ ಇದು ವಚನಗಳಲ್ಲಿಯ ಜಂಗಮ ಅನುಭವಗಳನ್ನು ಟೀಕೆಗಳ ಚೌಕಟ್ಟಿನಲ್ಲಿ ಸ್ಥಾವರಗೊಳಿಸಲು ಪ್ರಯತ್ನಿಸಿದಂತಾಗಿದೆ. ಅನೇಕ ಸಾರಿ ಅವರಿಗೆ ತಮ್ಮ ಓದುಗರಾರೋ ಎಂಬ ಬಗ್ಗೆಯೂ ಅಸ್ಪಷ್ಟತೆ ಇದ್ದಂತೆ ಕಂಡುಬರುತ್ತದೆ. ಇಂಥ ಅನೇಕ ಮಿತಿಗಳ, ಅಡಚಣೆಗಳ ನಡುವೆಯೂ ತಮ್ಮ ನೇರವಾದ ಉದ್ದೇಶದಲ್ಲಿ ಒಂದು ಹಂತದವರೆಗೆ ಈ ಟೀಕೆಗಳು ಯಶಸ್ವಿಯಾಗಿವೆಯೆಂದೇ ಹೇಳಬಹುದು. ಅವರ ಟೀಕೆಗಳನ್ನು ಕುರಿತು ಎಷ್ಟೇ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದರೂ ವಚನ ಸಾಹಿತ್ಯವನ್ನು ಕುರಿತು ಅವರ ಆಳವಾದ ನಿಷ್ಠೆ ಶ್ರದ್ಧೆಗಳನ್ನು ಮೆಚ್ಚಲೇಬೇಕು.

ಅಡಿ ಟಿಪ್ಪಣಿಗಳು

೧. ಡಾ. ವ್ಹಿ. ಶಿವಾನಂದ ವಿರಕ್ತಮಠ : ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ ಪ್ರಸ್ತಾವನೆ: ಪುಟ ೭–೮.
೨. ಡಾ. ಎಂ. ಚಿದನಂದಮೂರ್ತಿ, ವಚನ ಸಾಹಿತ್ಯ : ಪುಟ ೧೯೫
೩. ಡಾ. ವ್ಹಿ. ಶಿವಾನಂದ ವಿರಕ್ತಮಠ : ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ ಪುಟ ೨೬೮.
೪. ಡಾ. ಎಂ.ಎಸ್. ಸುಂಕಾಪೂರ : ಬಸವಣ್ಣನವರ ಟೀಕಿನ ವಚನಗಳು : ಸಂ. ೧ ಮುನ್ನುಡಿ.
೫. ಡಾ. ಎಂ.ಎಸ್. ಸುಂಕಾಪೂರ : ಬಸವಣ್ಣನವರ ಟೀಕಿನ ವಚನಗಳು : ಸಂ. ೧ ಮುನ್ನುಡಿ.
೬. ಸಂ. ಡಾ. ಎಂ.ಎಂ. ಕಲಬುರ್ಗಿ : ಬಸವಣ್ಣನವರ ಟೀಕಿನ ವಚನಗಳು: ಸಂ. ೧, ಪ್ರಸ್ತಾವನೆ : ಪುಟ : xii
೭. ಸಂ. ಡಾ. ಎಂ.ಎಂ. ಕಲಬುರ್ಗಿ : ಬಸವಣ್ಣನವರ ಟೀಕಿನ ವಚನಗಳು: ಸಂ. ೧, ಪ್ರಸ್ತಾವನೆ : ಪುಟ : xii
೮. ೧) ಸಂ. ಪ್ರೊ. ಶಿ.ಶಿ. ಬಸವನಾಳ : ಬಸವಣ್ಣನವರ ಷಟ್‌ಸ್ಥಲದ ವಚನಗಳು : ಪ್ರಸ್ಥಾವನೆ : ಪುಟ x vii.

೨) ಡಾ. ಎಂ. ಚಿದಾನಂದಮೂರ್ತಿ : ವಚನ ಸಾಹಿತ್ಯ : ಪುಟ ೧೯೫.
೩) ಡಾ. ಎಂ.ಎಂ. ಕಲಬುರ್ಗಿ : ಬಸವಣ್ಣನವರ ಟೀಕಿನ ವಚನಗಳು: ಪ್ರಸ್ತಾವನೆ : ಪುಟ : xiii.

(ಪ್ರಸ್ತುತ ಲೇಖನದಲ್ಲಿ ಉದ್ಧರಿಸಿದ ವಚನ – ಟೀಕೆಗಳು, ಡಾ. ಎಂ.ಎಂ. ಕಲಬುರ್ಗಿಯವರಿಂದ ಸಂಪಾದಿತವಾಗಿ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರಿಂದ ಪ್ರಕಾಶಿತವಾದ "ಬಸವಣ್ಣನವರ ಟೀಕಿನ ವಚನಗಳು" ಸಂಪುಟದಿಂದ ಆಯ್ದುಕೊಳ್ಳಲಾಗಿದೆ.)

❑

ಬಸವಣ್ಣನವರ ವಚನಗಳು – ಉಪನಿಷತ್ತುಗಳು

●

ಡಾ. ಎಂ.ಎನ್. ವಾಲಿ

ಉಪನಿಷತ್ತುಗಳೆಂದರೆ ಮಾನವ ಮರ್ತ್ಯಲೋಕದಿಂದ ಅಮೃತತ್ವಕ್ಕೆ ಸಾಗಲು ನಿರ್ಮಿಸಿದ ಏಣಿಗಳು ! ಇವುಗಳ ಕಾಲವನ್ನು ಖಚಿತವಾಗಿ ಹೇಳಲು ಆಧಾರಗಳು ಸಾಲವು. ಆದರೆ ಇವು ಬಹಳ ಪ್ರಾಚೀನವೆಂಬುದರಲ್ಲಿ ಎರಡು ಮಾತಿಲ್ಲ. ಕಾಲ, ದೇಶ, ಕಾರ್ಯ, ಕಾರಣ ಪ್ರಪಂಚವನ್ನು ಮೀರಿ ಹೋದ ಮಹಾಮಹಿಮರ ವಿಚಾರಗಳು ಇಲ್ಲಿ ಘನೀಭೂತವಾಗಿ ಮಡುಗಟ್ಟಿ ನಿಂತಿವೆ. ಇಲ್ಲಿ ನಾವು ಕಾಣುವುದು ತತ್ತ್ವಗಳ ಸಮುದಾಯ; ಹಲವು ತತ್ತ್ವಗಳ ಶಿವುಡು. ಉಪನಿಷತ್ತುಗಳು ಹಲವಾರು ಇರುವವಾದರೂ ಅವುಗಳಲ್ಲಿ ಮುಖ್ಯವಾದವುಗಳು ಹತ್ತು ಮಾತ್ರ. ಅವು : ೧) ಈಶ, ೨) ಕೇನ, ೩) ಕಠ, ೪) ಮುಂಡಕ, ೫) ಮಾಂಡೂಕ್ಯ, ೬) ಪ್ರಶ್ನೆ, ೭) ತೈತ್ತರೀಯ, ೮) ಐತ್ತರೀಯ, ೯) ಛಾಂದೋಗ್ಯ ಮತ್ತು ೧೦) ಬೃಹದಾರಣ್ಯಕ. ಒಟ್ಟಾರೆ ಈ ಉಪನಿಷತ್ತುಗಳಲ್ಲಿ ಬರುವ ವಿಷಯಗಳು ತಾತ್ವಿಕ, ಬ್ರಹ್ಮ, ಜೀವ, ಜಗತ್ತು ಇವುಗಳಲ್ಲಿರುವ ಪರಸ್ಪರ ಸಂಬಂಧವನ್ನು ಈ ಉಪನಿಷತ್ತುಗಳಲ್ಲಿ ಕಾಣುತ್ತೇವೆ. ಈ ಸಾಹಿತ್ಯವನ್ನು 'ಅನುಭಾವ ಸಾಹಿತ್ಯ' ಎಂದು ಕರೆಯಲಾಗುವುದು. ಇದನ್ನು (Mysticism) ಎಂಬ ಆಂಗ್ಲ ಪದಕ್ಕೆ ಸಂವಾದಿಯಾಗಿ ಬಳಸುತ್ತಾ ಬರಲಾಗಿದೆ. 'ಅನುಭಾವ' ಎಂಬುದು ಜೀವನವನ್ನು ಸಾರ್ಥಕಗೊಳಿಸುವ ಅಂತರಂಗದ ಅನುಭವ. ವಿಶ್ವದ ತತ್ವದಲ್ಲಿಯೇ ಶ್ರೇಷ್ಠತಮ ಭಾವನೆಗಳನ್ನು ಯಾವ ಮಹಾಮಹಿಮರು ಪ್ರಥಮ ಬಾರಿ ಜಗತ್ತಿಗೆ ಕೊಟ್ಟರೋ ಅವರಲ್ಲಿ ಹೆಸರಿನ ಆಶೆಯಾಗಲೀ ಕೀರ್ತಿಯ ಲವಲೇಶವಾಗಲೀ ಇಲ್ಲದಿರುವುದನ್ನು ಕಾಣುತ್ತೇವೆ. ಕೇವಲ ತತ್ವದಿಂದ ಮಾನವ ಕೋಟಿಯ ಕಲ್ಯಾಣವಾದರೆ ಸಾಕು ಎಂಬ ಉದ್ದೇಶ ಅವರದಾಗಿತ್ತು. ಅಂತೆಯೇ ಉಪನಿಷತ್ತುಗಳನ್ನು ರಚಿಸಿದ ಕರ್ತೃಗಳ ಹೆಸರು ನಮಗೆ ಸಿಗುವುದು ವಿರಳ.

ಇತ್ತ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಹರಿಸುತ್ತ ಬರುವಾಗ ಒಂದು ಕಡೆ ನಮಗೆ ದಿವ್ಯವಾದ ಆನಂದಾನುಭವ ಉಂಟಾಗುತ್ತದೆ. ಇಲ್ಲಿ ಸಹಜ ಶಾಂತಿ, ಪರಸ್ಪರ ಪ್ರೇಮ, ಸಮತಾಭಾವ, ಸ್ವಾತಂತ್ರ್ಯ ಇವುಗಳ ಮೂಲಕ ಸತ್ಯ ದರ್ಶನ ಲಭಿಸಿದಂತಾಗುತ್ತದೆ. ಅದುವೇ ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ಇನ್ನೊಂದರ್ಥದಲ್ಲಿ ಇದುವೇ ಉಪನಿಷತ್ತು

ಸಾಹಿತ್ಯ. ಈ ವಚನಕಾರರೇ ಅಥವಾ ಶರಣರೇ ಉಪನಿಷತ್ತು ಕರ್ತೃಗಳಾದ ಮಹರ್ಷಿಗಳಿದ್ದಂತೆ! ಗಂಡು–ಹೆಣ್ಣು ಎಂಬ ಭೇದವಾಗಲೀ, ಜಾತಿಯ ತಾರತಮ್ಯ ಭಾವವಾಗಲೀ, ಕಾಯಕದಲ್ಲಿ ಮೇಲು–ಕೀಳು ಎಂಬ ಕಲ್ಪನೆಯಾಗಲೀ ಇಲ್ಲಿ ಸುಳಿಯವು. ಸ್ತ್ರೀ ಶೂದ್ರಾದಿಗಳು ಪ್ರವೃತ್ತಿ ಮಾರ್ಗದಿಂದ ಮೋಕ್ಷ ಪಡೆಯಲು ಇಲ್ಲಿ ಅರ್ಹರು. ಅಂತೆಯೇ ವಚನ ಸಾಹಿತ್ಯದಲ್ಲಿ ಮಹಾದೇವಿಯಕ್ಕ, ನೀಲಲೋಚನೆ, ಮುಕ್ತಾಯಕ್ಕ, ಮೋಳಿಗೆ ಮಹದೇವಿ ಮೊದಲಾದವರು ಈ ಮಾರ್ಗದಲ್ಲಿ ಮಿಂಚುತ್ತಾರೆ.

ವಚನಕಾರರಿಗೆ ಉಪನಿಷತ್ತುಗಳು ಮಾರ್ಗದರ್ಶಿಯಾಗಿವೆ. ಆದಾಗ್ಯೂ ಅವರು ಸ್ವತಂತ್ರ್ಯವಾಗಿ ಚಿಂತನೆ ಮಾಡಿದವರೆಂಬುದನ್ನು ಮರೆಯಲಾಗದು. ಉಪನಿಷತ್ತಿನ ಋಷಿಗಳು ಕರ್ಮಕಾಂಡದಲ್ಲಿ ಫಲವನ್ನು ಕಾಣದೆ ಜ್ಞಾನ ಮಾರ್ಗಕ್ಕೆ ಹೊರಳಿದಂತೆ ವಚನಕಾರರು ಹಿಂದಿನ ಶೈವ ಮಾರ್ಗದಲ್ಲಿ ತಿರುಳನ್ನು ಕಾಣದೆ ಷಟ್‌ಸ್ಥಲ ಮಾರ್ಗದಲ್ಲಿ ಮುನ್ನಡೆದರು. ಈ ಶರಣ ಸಾಹಿತ್ಯ ಎರವಲು ತಂದುದಲ್ಲ, ಅದು ಕನ್ನಡದ ಸ್ವತ್ತು. ವಚನಕಾರರು ಅಚ್ಚ ಕನ್ನಡದ ಬೇಸಾಯಗಾರರು. ಈ ವಚನಕಾರರ ಆಶಯ ಸಾಹಿತ್ಯ ಸಾಧನೆ ಯಾಗಿರದೆ ಜೀವನ ಶೋಧನೆಯಾಗಿದೆ. ಉಪನಿಷತ್ಕಾರರಂತೆ ವಚನಕಾರರಿಗೂ ಅನುಭವವೇ ಪ್ರಮಾಣ. ಇಂತಹ ವಚನಕಾರರಲ್ಲಿ ಬಸವಣ್ಣ ನವರ ವಚನಗಳು ವಚನ ಸಾಹಿತ್ಯದ ತವನಿಧಿಯಂತಿದೆ. ವೇದಾಗಮಗಳಲ್ಲಿ ಹೇಳಿದೆ ಎಂದ ಮಾತ್ರಕ್ಕೆ ಅವರು ಕಣ್ಣು ಮುಚ್ಚಿ ಅದನ್ನು ಒಪ್ಪಲಾರರು.

ವೇದಕ್ಕೆಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗ ಕೊಯ್ಯುವೆ ನೋಡಯ್ಯ
ಮಹಾದಾನಿ ಕೂಡಲಸಂಗಮದೇವ
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ

ಬಸವಣ್ಣನವರೇ ಇನ್ನೊಂದೆಡೆ

ಶಾಸ್ತ್ರ ಘನವೆಂಬೆನೆ ಕರ್ಮವ ಭಜಿಸುತ್ತಿದೆ
ವೇದ ಘನವೆಂಬೆನೆ ಪ್ರಾಣಿವಧೆಯ ಹೇಳುತ್ತಿದೆ
ಸ್ಮೃತಿ ಘನವೆಂಬೆನೆ ಮುಂದಿಟ್ಟು ಅರಸುತ್ತಿದೆ
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ ತ್ರಿವಿಧ ದಾಸೋಹದಲ್ಲಲ್ಲದೆ
ಕಾಣಬಾರದು ಕೂಡಲಸಂಗಮದೇವಾ

ಪರಮಾತ್ಮನು ವಿಶ್ವದ ತುಂಬ ತುಂಬಿಕೊಂಡಿರುವನು. ಅವನಿಲ್ಲದ ಎಡೆಯಿಲ್ಲ. ಇದನ್ನೇ ಈಶೋಪನಿಷತ್ತು

"ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್" ಎನ್ನುತ್ತದೆ. ಇದೇ ವಿಚಾರವು ಬಸವಣ್ಣನವರ ಒಂದು ವಚನದಲ್ಲಿ ಹೀಗೆ ಬಂದಿದೆ.

ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ
ಸಕಲ ವಿಸ್ತಾರದ ರೂಹು ನೀನೇ ದೇವಾ
ವಿಶ್ವತೋ ಬಾಹು ನೀನೇ ದೇವಾ
ವಿಶ್ವತೋ ಚಕ್ಷು ನೀನೇ ದೇವಾ
ವಿಶ್ವತೋ ಮುಖ ನೀನೇ ದೇವಾ
ವಿಶ್ವತೋ ಪಾದ ನೀನೇ ದೇವಾ ಕೂಡಲಸಂಗಮದೇವಾ

ಹೀಗೆ ವಿಶ್ವವನ್ನೇ ವ್ಯಾಪಿಸಿದ ಪರವಸ್ತು ಒಂದೇ ಆಗಿದೆ. 'ದೇವನೊಬ್ಬ ನಾಮ ಹಲವು' ಎಂಬುದು ಬಸವಣ್ಣನವರ ದೃಢ ನಿಲುವು. ಉಪನಿಷತ್ತುಗಳೂ ಏಕೇಶ್ವರೀ ವಾದವನ್ನೇ ಸಾರುತ್ತವೆ. ಅದನ್ನೇ ಬಸವಣ್ಣನವರು,

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ
ದೇವನೊಬ್ಬನೇ ಕಾಣಿರೋ ಇಬ್ಬರೆಂಬುದು ಹುಸಿ ನೋಡಾ
ಕೂಡಲ ಸಂಗಮದೇವನೊಬ್ಬನೇ ಅಲ್ಲದೆ
ಇಬ್ಬರಿಲ್ಲವೆಂದಿತ್ತು ಆ ವೇದ.

ಈ ಪರವಸ್ತು ಅಂಗುಷ್ಠ ಮಾತ್ರ

"ಪುರುಷೋ ಜ್ಯೋತಿರಿವಾಧೂಮಕಃ ಮಧ್ಯ ಆತ್ಮನಿ ತಿಷ್ಠತಿ" ಅಂದರೆ ಹೃದಯದಲ್ಲಿ ಅಂಗುಷ್ಠ ಪರಿಮಿತವಾದ ಚೈತನ್ಯವು ಜ್ಯೋತಿಯಾಗಿ ಪ್ರಕಾಶಿಸುತ್ತದೆ ಎಂಬುದನ್ನು ಕಠೋಪನಿಷತ್ತಿನಲ್ಲಿ ಹೇಳಲಾಗಿದೆ. ಬಸವಣ್ಣ ನವರು ಇದನ್ನೇ 'ಕರಿಯು ಕನ್ನಡಿಯೊಳಡಗಿದಂತೆ' ಪರವಸ್ತು, ಎನ್ನೊಳಗೆ ಅಡಗಿದೆ ಎಂದು ಹೇಳುತ್ತಾರೆ.

"ಹಿರಣ್ಮಯೇನ ಪಾತ್ರೇಣ, ಸತ್ಯಸ್ಯಾಪಿ ಹಿತಂ ಮುಖಂ
ತತ್ತ್ವಂ ಪೂಷನ್ನ ಪಾವೃಣು ಸತ್ಯಧರ್ಮಾಯ ದೃಷ್ಟಯೇ"

ಅಂದರೆ "ಸತ್ಯದ ಮುಖ ಚಿನ್ನದ ಮುಚ್ಚಳದಿಂದ ಮುಚ್ಚಿದೆ. ಆ ಮುಚ್ಚಳದ ಸೌಂದರ್ಯವೆಷ್ಟೇ ಇದ್ದರೂ ಅದಕ್ಕೆ ಮರುಳಾಗಿ ಸತ್ಯದ ಸ್ವರೂಪವನ್ನು ಪ್ರತ್ಯಕ್ಷವಾಗಿ ಕಾಣುವುದನ್ನು ಮರೆಯಲಾರೆವು. ಓ ! ಜ್ಞಾನಸೂರ್ಯನೇ ಚಿನ್ನದ ಮುಚ್ಚಳವನ್ನು ತೆರೆದು ಸತ್ಯದ ಪ್ರತ್ಯಕ್ಷ ದರ್ಶನವನ್ನು ಮಾಡಿಸು" ಎಂದು ಬೇಡಿಕೊಳ್ಳುತ್ತಾರೆ. ಅನುಭಾವಿಯ ದೃಷ್ಟಿಯೇನೆಂಬುದನ್ನು ಇಲ್ಲಿ ಸುಂದರವಾಗಿ ತಿಳಿಸಲಾಗಿದೆ.

'ಮಹಾಜನಾಯೇನ ಗತಃ ಸ ಪಂಥಾಃ' ಎಂಬ ಉಕ್ತಿಯಂತೆ ಬಸವಣ್ಣ ನವರು ಬರುವುದಕ್ಕಿಂತ ಬಹಳ ಹಿಂದೆಯೇ ಉಪನಿಷತ್ಕಾರರ ರಾಜಮಾರ್ಗ ಸಿದ್ಧವಾಗಿತ್ತು. ಬಸವಣ್ಣ ಆ ಮಾರ್ಗವನ್ನೇ ಅನುಸರಿಸಿ ಮುನ್ನಡೆದು ವಿಜಯಿಯಾದ.

'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ಬ್ರಹ್ಮಾನುವಾದದೊಡನೆ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಅನುಭವವನ್ನೂ ಉಪನಿಷತ್ಕಾರರು ಕಂಡರು. ಅದರಂತೆ '...ಸಾಕಾರ ನಿರಾಕಾರ ಏಕೋದೇವ ನಮ್ಮ ಕೂಡಲ ಸಂಗಮದೇವ' ಎಂದು ಸಕಲವಾದ ಜಗತ್ತನ್ನು ನಿಷ್ಕಲವಾದ ಲಿಂಗವನ್ನು 'ಏಕೋದೇವ' ಎಂದು ಬಸವಣ್ಣನವರು ಹೇಳಿದುದನ್ನು ಗಮನಿಸಲೇಬೇಕು. 'ಶಿವಜಗನ್ಮಯ ಸ್ಥಲ', 'ಸರ್ವಂ ಲಿಂಗಮಯಂ ಜಗತ್' ಮುಂತಾದ ಅನುಭವಗಳೆಲ್ಲ ದೇವನ ಏಕಮೇವ ಸತ್ಯವನ್ನು ನಿರ್ಮಾಣವಾದ ಜಗತ್ತಿನ ದೇವಮಯ ಸತ್ಯವನ್ನು ಸಾರುತ್ತದೆ.

ಅಶಬ್ದಮಸ್ಪಶಮರೂಪಮವ್ಯಯಂ।
ತಥಾರಸಂ ನಿತ್ಯ ಮಗನ್ಧ ವಚ್ಚಯತ್॥
ಅನಾದ್ಯನಂತಂ ಮಹತಃ ಪರಂ ಧ್ರುವಂ।
ನಿಚಾಯ್ಯ ತನ್ಮತ್ಯು ಮುಖಾತ್ ಪ್ರಮುಚ್ಯತೇ ॥

ಮಹತ್ ತತ್ತ್ವಕ್ಕೆ ಮೀರಿದುದಾಗಿಯೂ, ನಿತ್ಯವಾಗಿಯೂ, ಅನಾದಿ ಅನಂತಗಳಾಗಿಯೂ, ಧ್ರುವವಾಗಿಯೂ ಪರವಸ್ತು ಇದೆ ಎಂದು ಕಠೋಪನಿಷತ್ತಿನಲ್ಲಿ ಹೇಳಲಾಗಿದೆ.

ಆದುದರಿಂದ ಪರವಸ್ತು–ದೇವರು ಎನ್ನುವುದು ಬ್ರಹ್ಮನಲ್ಲ, ವಿಷ್ಣುವಲ್ಲ, ಮಹೇಶ್ವರನಲ್ಲ – ಇವರೆಲ್ಲರಿಗೂ ಮೀರಿದ್ದು. ಆಕಾಶದಲ್ಲಿ ಮೋಡಗಳಾಗಿ ಕಾಣುವ ಮೊದಲು ಹವೆ ಅಗೋಚರವಾಗಿ ಇಲ್ಲವೆಂದು ಹೇಳಲಿಕ್ಕಾಗದೆ ಇದ್ದುದಾಗಿ, ಇದೆಯೆಂದು ಹೇಳಲಿಕ್ಕಾಗದೆ ಅವ್ಯಕ್ತವಾಗಿ ಹೇಗೆ ವರ್ಣನಾತೀತ ವಾಗಿರುವುದೋ ಹಾಗೆಯೇ ಎಲ್ಲ ದೇವರುಗಳು, ಎಲ್ಲ ಸೃಷ್ಟಿಗಳ ಯಾವ ಕಲ್ಪಿತವೂ ಇಲ್ಲದೆ, ಆದರೆ ಎಲ್ಲಕ್ಕೂ ರೂಪುಕೊಡುವ, ಚೈತನ್ಯ ಕೊಡುವ ಪರವಸ್ತುವಾಗಿ ಇದ್ದೇ ಇದೆ.

ಇದನ್ನೇ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೇಳಿದ್ದು ಇಂತಿದೆ.

ಉದಕದೊಳಗೆ ಬೈಚಿಟ್ಟ
ಬೈಕೆಯ ಕಿಚ್ಚಿನಂತೆ ಇದ್ದಿತ್ತು
ಶಶಿಯೊಳಗಣ
ರಸದ ರುಚಿಯಂತೆ ಇದ್ದಿತ್ತು;
ನನೆಯೊಳಗಣ
ಪರಿಮಳದಂತೆ ಇದ್ದಿತ್ತು;
ಕೂಡಲಸಂಗಮದೇವರ ನಿಲುವು
ಕನ್ನೆಯ ಸ್ನೇಹದಂತೆ ಇದ್ದಿತ್ತು.

ಈಶಾವಾಸ್ಯ ಉಪನಿಷತ್ತಿನ ಒಂದು ಸೂತ್ರದಲ್ಲಿನ ಸತ್ಯವಸ್ತುವನ್ನು ಪರಿಚಯಿಸಿದ್ದು ಹೀಗಿದೆ:

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ
ತದಂತರಸ್ಯ ಸರ್ವಸ್ಯ, ತದು ಸರ್ವಸ್ಯಾಸ್ಯ ಬಾಹ್ಯತಃ ॥

ಅಂದರೆ ಪರಮಾತ್ಮನು ಚಲಿಸುತ್ತಾನೆ, ಚಲಿಸುವುದಿಲ್ಲ, ಅವನು ಬಹುದೂರ, ಅತಿ ಸಮೀಪ, ಅವನು ಎಲ್ಲದರ ಒಳಗಿದ್ದಾನೆ, ಎಲ್ಲದರ ಹೊರಗಿದ್ದಾನೆ. ಇದನ್ನೇ ಬಸವಣ್ಣನವರು ಹೀಗೆ ಹೇಳಿದ್ದಾರೆ.

ಕುರುಹಿಲ್ಲ ಕುರುಹಿಲ್ಲ ಲಿಂಗವೆಂದೆಂಬರೆ,
ತೆರಹಿಲ್ಲ ತೆರಹಿಲ್ಲ ಜಂಗಮವೆಂದೆಂಬರೆ
ಇದೇ ನೋಡಾ ಶಿವಾಚಾರ !
ಇದೇ ನೋಡಾ ಶಿವದೊಡಕು !
"ಆತ್ಮಾನಾಂ ಪ್ರಕೃತಿ ಸ್ವಭಾವ" ಎಂದುದಾಗಿ
ಮುಟ್ಟಬಾರದ ಠಾವ ಮರೆಗೊಂಡಿಪ್ಪ
ಮಮ ಕರ್ತೃ ಕೂಡಲಸಂಗಮದೇವಾ

ಜೀವಿಯ ಕೊನೆಯ ಗುರಿ ಮುಕ್ತಿ. ಇದನ್ನೇ ಕೈವಲ್ಯ, ಮೋಕ್ಷ, ಐಕ್ಯ ಮೊದಲಾದ ಹೆಸರುಗಳಿಂದ ಕರೆಯಲಾಗಿದೆ.

ಯಥಾನದ್ಯಃ ಸ್ಕಂದಮಾನಾಃ ಸಮುದ್ರೇऽ
ಸ್ತಂಗಚ್ಛಂತಿ ನಾಮರೂಪೇ ವಿಹಾಯ ।
ತಥಾ ವಿದ್ವಾನ್ ನಾಮ ರೂಪಾದ್ ವಿಮುಕ್ತಃ
ಪರಾತ್ಪರಂ ಪುರುಷಮುಪೈತಿ ದಿವ್ಯಂ।

ಎಂಬ ಮುಂಡಕೋಪನಿಷತ್ತಿನ ಅಭಿಪ್ರಾಯದಂತೆ ಮಾನವನ ಗುರಿ, ನದಿಯು ಸಾಗರವನ್ನು ಸೇರಿ ಸಾಗರವೇ ಆಗುವಂತೆ ಐಕ್ಯ ಹೊಂದುವುದೇ ಆಗಿದೆ. ವಚನಕಾರರ ಆಶಯದಂತೆ

ಷಟ್‌ಸ್ಥಲ ಸಿದ್ಧಾಂತದ ಪ್ರಕಾರ ಐಕ್ಯ ಅಥವಾ ಮುಕ್ತಿಯೇ ಆಗಿದೆ. ಅಲ್ಲಮಪ್ರಭುಗಳೂ 'ಇದು ಅದ್ವೈತ ಕಾಣಾ' ಎಂದಿರು ವುದನ್ನು ಗಮನಿಸಬೇಕು. ಬಸವಣ್ಣನವರ ವಚನಗಳಲ್ಲಿ ಇದನ್ನು ಸಮರತಿ, ಸಮಕಳೆ, ಸಮಸುಖ, ಬಯಲಿನಲ್ಲಿ ಬಯಲು ಇತ್ಯಾದಿಯಾಗಿ ಹೇಳಲಾಗಿದೆ.

ಊರಿಂದ ಬಹುದೂರವಾಗಿ ಅರಣ್ಯಗಳ ಆ ಕಡೆಯಂಚಿನಲ್ಲಿ ನೆಲೆನಿಂತ ಉಪಷನಿತ್ ಕಾಲದ ಋಷಿಗಳಿಗಿಂತ ಮತ್ತು ಅವರ ದೇವಭಾಷೆಯ ಪ್ರಭು ಸಂಹಿತೆಗಿಂತ, ಊರು ಕೇರಿಗಳಲ್ಲಿ, ಹೊಲಗದ್ದೆಗಳಲ್ಲಿ ಜೀವಿಸಿ, ಬದುಕಿದಂತೆ ನುಡಿದು, ನಡೆನುಡಿಗಳಲ್ಲಿ ಸಾಮರಸ್ಯ ಸಾಧಿಸಿ, ನೆರೆಹೊರೆಯವರಂತೆ ನೈಜವಾಗಿ ಕಾಣುವ ಶಿವಶರಣರು, ಅವರ ತಿಳಿಗನ್ನಡ ಸಲ್ಲಾಪ ಸುಭಾಷಿತಗಳೂ ಸರಳ ಮಾತ್ರವಲ್ಲ, ಈ ನೂತನ ಯುಗ ಪರಿಸರದಲ್ಲಿಯೂ ನಮಗೆ ಮಾರ್ಗದರ್ಶನ; ಅವು ನಿತ್ಯನೂತನ. ಇಂತಹ ಶಿವಶರಣರಲ್ಲಿ ಬಸವಣ್ಣನವರು ನಮಗೆ ವಿಶಿಷ್ಟವಾಗಿ ಕಾಣುತ್ತಾರೆ. ಅವರ ವಚನಗಳು ಕನ್ನಡದ ಉಪನಿಷತ್ತುಗಳು !

❑

ಬಸವಣ್ಣನವರ ವಚನಗಳಲ್ಲಿ ಮನೋವೈಜ್ಞಾನಿಕತೆ

ಪ್ರೊ. ಬಿ.ಜಿ. ಅಮ್ಮಣಗಿ

ಭಾರತೀಯ ದಾರ್ಶನಿಕರು ತಮ್ಮದೇ ಆದ ರೀತಿಯಲ್ಲಿ ಮನಸ್ಸನ್ನು ಅರಿತುಕೊಂಡಿದ್ದರು. ಅದು ಪಾರಲೌಕಿಕ, ಲೌಕಿಕಗಳೆರಡಕ್ಕೂ ಅವಶ್ಯವಾದ ಒಂದು ಉಪಕರಣವೆಂದು ಭಾವಿಸಿದ್ದರು. ಅದರ ಗುಣ, ಸ್ವಭಾವ, ಸ್ವರೂಪ ಗಳನ್ನು ತಿಳಿದವರಾಗಿದ್ದರು. ಮನಸ್ಸಿನ ಮೂಲ, ವಿಚಾರದಲ್ಲೆಂಬುದು ಅವರಿಗೆ ಗೊತ್ತಿತ್ತು. ವಿಚಾರ ಮಾಡುವಂಥಂದೇ ಮನಸ್ಸು. ಇದು ಜಡವಾಗಿದ್ದು ಇದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲವೆಂಬುದು ಅವರ ಅಭಿಮತವಾಗಿತ್ತು. ಆದ್ದರಿಂದಲೇ ಇದರ ಹಿಂದೆ ಇರುವ ಆತ್ಮವೇ, ಇದರ ಎಲ್ಲ ಕಾರ್ಯ ಚಟುವಟಿಕೆಗಳಿಗೆ ಪ್ರೇರಕವೆಂದು ಪ್ರತಿಪಾದಿಸಿದರು. 'ಮನ ಏವ ಮನುಷ್ಯಾನಾಂ ಕಾರಣಂ, ಬಂಧ ಮುಕ್ಷಯೋಃ' – ಮನವೇ ಬಂಧನ ಬಿಡುಗಡೆಗಳಿಗೆ ಕಾರಣವೆಂದು ನಿರ್ಣಯಿಸಿದರು. ಮಾನವನ ಬಾಳು–ಬದುಕು ಮನಸ್ಸಿನ ಅಧೀನವಾದ ಕಾರಣ ಅದರ ಪ್ರಯೋಜನ ಪಡೆಯಲು, ನೆಮ್ಮದಿಯಿಂದ ಇಡಲು ಚಿಂತಿಸಿದರು. ಈ ಚಿಂತನೆಯ ಮೂಸೆಯಲ್ಲಿ ಮೂಡಿಬಂದ ಪರಿಹಾರ ವೆಂದರೆ ಯೋಗ ಸಾಧನೆ, ಧ್ಯಾನ, ಧರ್ಮಾಚರಣೆ, ಆಧ್ಯಾತ್ಮಿಕ ಉನ್ನತಿ ಮತ್ತು ವಿಕಾಸ. ಅವರ ಜೀವನಾನುಭವವು ಕಲಿಸಿದ ಪಾಠವೆಂದರೆ – ಈ ಬದುಕಿನಲ್ಲಿ ಸಮಸ್ಯೆಗಳು, ತೊಂದರೆಗಳು, ಉದ್ವಿಗ್ನತೆ, ಭಾವೋದ್ವೇಗ, ಕಷ್ಟ–ನಷ್ಟ, ಕೋಪ, ತಾಪ, ದುಃಖ, ಹತಾಶೆ–ನಿರಾಶೆಗಳು ಇವೆಯೆಂಬುದು. ಇಂಥ ಪರಿಸ್ಥಿತಿಯಲ್ಲಿ ಮನ ಕಲಕಿ, ಮುದುಡುವುದು ಸಹಜ. ಅದರ ಸಂಕಲನಕ್ಕೆ ಧ್ಯಾನ, ದೇವರ ನಾಮಸ್ಮರಣೆ, ಪ್ರಾರ್ಥನೆ, ಯೋಗಗಳನ್ನು ಸಾಧನಗಳನ್ನಾಗಿ ಮಾಡಿ ಕೊಂಡರು. ಇವೇ ಇಹ–ಪರ ಜೀವನದ ದಾರಿ ದೀಪಗಳಾದವು. ಏಕೆಂದರೆ, ಉತ್ತೇಜಿತಗೊಂಡ ನರಮಂಡಲ, ದ್ವಂದ್ವಗಳಿಂದ ಖತಿಗೊಂಡ ಮನಸ್ಸು ಇವುಗಳ ಅನುಷ್ಠಾನದಿಂದ ಮನಸ್ಸು ಶಾಂತವಾಗಿ ಖಿನ್ನತೆ, ಒತ್ತಡಗಳು ಕಡಿಮೆಯಾಗುತ್ತವೆ.

ಆಧುನಿಕ ಮನೋವಿಜ್ಞಾನಿಗಳು ಇದೇ ಜಾಡಿನಲ್ಲಿ ಮನಸ್ಸನ್ನು ವಿಸ್ತೃತವಾಗಿ ಅಭ್ಯಸಿಸಿದರು, ಪ್ರಯೋಗಕ್ಕೆ ಒಳಪಡಿಸಿದರು. ಅದರ ಪರಿಣಾಮದ ರೂಪವಾಗಿ ಅವರು ಕಂಡುಕೊಂಡ ಸತ್ಯವೆಂದರೆ – ಮನಸ್ಸು ಜಡವಲ್ಲ, ಕ್ರಿಯಾಶೀಲವುಳ್ಳ ಚೈತನ್ಯದ ಚಿಲುಮೆ, ಸಾಮರ್ಥ್ಯದ ಆಗರ. ಇದು ಶರೀರದ ಕಾರ್ಯಾಂಗ. ಮೆದುಳು ಇದರ ವಾಸಸ್ಥಾನ. ಮನಸ್ಸಿನ

ಆಳದಲ್ಲಿ ಜಾಗೃತಾವಸ್ಥೆಯಲ್ಲಿ ನೋಡುವ, ಕೇಳುವ, ಚಲಿಸುವ, ಆಲೋಚಿಸುವ, ಆನಂದಿಸುವ, ದುಃಖಿಸುವ, ಚಿಂತಿಸುವ, ಕಲ್ಪಿಸುವ, ಕಾತರ– ಆತುರ ಗೊಳ್ಳುವ, ಭಯಪಡುವ, ಉದ್ವಿಗ್ನಗೊಳ್ಳುವ, ಭಾವಿಸುವ, ಕುತರ್ಕ–ಸುತರ್ಕ ಮಾಡುವ ಮುಂತಾದ ಅನಂತ ಕ್ರಿಯೆಗಳು ನಡೆಯುತ್ತಲೇ ಇರುತ್ತವೆ. ಮನಸ್ಸಿನ ಕ್ರಿಯೆಗಳನ್ನು ಬೃಹದಾರಣ್ಯ ಉಪನಿಷತ್ ಕೂಡ ಗುರುತಿಸಿದೆ. ಕಾಮ, ಸಂಕಲ್ಪ, ಸಂದೇಹ, ಶ್ರದ್ಧೆ–ಅಶ್ರದ್ಧೆ, ಧೃತಿ–ಅಧೃತಿ, ಲಜ್ಜೆ, ಭಯ, ಬುದ್ಧಿ ಇವೆಲ್ಲವೂ ಮನಸ್ಸೇ ಎಂದು ಹೇಳುತ್ತದೆ (೧.೫.೩)

ಮನಸ್ಸಿನ ಒಂದು ಪ್ರಕಾರವಾದ 'ಈಗೋ' ವಾಸ್ತವತೆಯನ್ನು ಅರಿತು ಕೊಂಡರೆ, ಇನ್ನೊಂದು 'ಸೂಪರ್ ಈಗೋ' ಸಾಮಾಜಿಕ, ನೈತಿಕ, ಧಾರ್ಮಿಕ, ನೀತಿ ನಿಯಮಗಳನ್ನು, ವಿಧಿ–ವಿಧಾನಗಳನ್ನು ಪಾಲಿಸಲು ಪ್ರಯತ್ನಿಸುತ್ತದೆ. ಆದರೆ 'ಇದ್' ಮೂಲ ಪ್ರವೃತ್ತಿಗಳಾದ ಹಸಿವು, ನೀರಡಿಕೆ ಗಳನ್ನು ತೃಪ್ತಿಪಡಿಸಲು ನಿರ್ಬಂಧಗಳನ್ನು ಪಾಲಿಸುವ ಸಂಭವವೇ ಕಡಿಮೆ. ಇಂಥ ಸ್ಥಿತಿಯಲ್ಲಿ ಸಾಮಾಜಿಕ, ಧಾರ್ಮಿಕ ನಿಯಮ–ನಿರ್ಬಂಧಗಳು ಅವಶ್ಯ. ಕಾಮ, ಕ್ರೋಧ, ಮದ, ಮತ್ಸರ, ಮೋಹ, ಲೋಭಗಳನ್ನು ನಿಯಂತ್ರಿಸುವಲ್ಲಿ ಧರ್ಮ ತನ್ನ ಪಾತ್ರವನ್ನು ನಿರ್ವಹಿಸುತ್ತದೆ. ಇಂದಿಗೂ ಧರ್ಮ–ನೀತಿಗಳು ಕೇವಲ ಗೊಡ್ಡು ಆಚರಣೆಗಳಲ್ಲ, ನೈತಿಕ ಮೌಲ್ಯಗಳು, ಅಷ್ಟೇ ಅಲ್ಲ ಜೀವನದ ಮೌಲ್ಯಗಳೂ ಹೌದು. "The new prescriptions include prayer, practising forgiveness, going to church or Temple and surrendering to a devine authority etc" (East & West Magazine) ಎಂಬ ಮಾತುಗಳು ಮನನೀಯವಾಗಿವೆ.

'ಬಾಹ್ಯ ಪ್ರಚೋದನೆ, ಆಕರ್ಷಣೆ, ಆಸೆ–ಆಮಿಷ, ದುಃಖ–ಕಷ್ಟಗಳಿಂದ ಮನ ಕದಡಿದಾಗ, ನೆಮ್ಮದಿ ಹಾಳಾದಾಗ, ಭಾವ ಪ್ರಪಂಚಕ್ಕೆ ಭಂಗ ಉಂಟಾದಾಗ ಶಾಂತಿ–ಸಮಾಧಾನಗಳು ಹೊರಟು ಹೋಗಿ, ಮನಸ್ಸು ಉದ್ವೇಗಗೊಂಡು ರಕ್ತದೊತ್ತಡಕ್ಕೆ ದಾರಿಮಾಡಿ ಕೊಡುತ್ತದೆ. ಏರೊತ್ತಡಕ್ಕೆ (High BP) ಕಾರಣೀಭೂತವಾಗುತ್ತದೆ. ಅದು ಮಿತಿ ಮೀರಿದಾಗ ಹೃದಯಾಘಾತ ಸಂಭವಿಸುತ್ತದೆ. ಮನಸ್ಸಿನ ಮೇಲೆ ವಿಚಾರಗಳ ಒತ್ತಡ (Stress & Strain) ಅತಿಯಾದಾಗ ಒತ್ತಡದ ಕಾಯಿಲೆ ಉಂಟಾಗುತ್ತದೆಂದು ಮನಃಶಾಸ್ತ್ರ ಹೇಳುತ್ತದೆ. ಮನಸ್ಸಿನ ಸಮತೋಲನ ತಪ್ಪಿ ಒತ್ತಡದಿಂದ ಅಡ್ರಿನಲ್ ಹಾರ್ಮೋನುಗಳು ಅಧಿಕವಾಗಿ ಪ್ರಚೋದನೆಗೆ ಒಳಗಾಗುತ್ತವೆ. ಆಗ ಹೃದಯ, ಶ್ವಾಸಕೋಶಗಳ ಕಾರ್ಯಭಾರ ಹೆಚ್ಚಾಗಿ ಮೆದುಳಿಗೆ ರಕ್ತದ ಪೂರೈಕೆ ಕಡಿಮೆಯಾಗಿ ಜೀರ್ಣಾಂಗಗಳು ನಿಷ್ಕ್ರಿಯವಾಗುತ್ತವೆ. ಆಗ ಭಯ, ದುಃಖ, ಸಿಟ್ಟುಗಳು ಆವರಿಸಿ ಮಾನಸಿಕ ಅಸ್ತವ್ಯಸ್ತತೆ ಉಂಟಾಗಿ ಹೈಪರ್ ಆ್ಯಸಿಡಿಟಿ, ಏರೊತ್ತಡ, ಅಲ್ಸರ್, ಮಧುಮೇಹ, ಸಂದುಬೇನೆ, ಚರ್ಮರೋಗ, ಸಯಕೋ ಸೋಮ್ಯಾಟಿಕ್ ಮುಂತಾದ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ. ನಿರೋಧಕ ಶಕ್ತಿ ಕುಗ್ಗಿ, ರೋಗಾಣುಗಳ ಸೋಂಕು ಅಧಿಕವಾಗಿ, ಮನೋದೈಹಿಕ ವಿಕಾಸ ಕುಂಠಿತವಾಗುತ್ತದೆ. ಇದರಿಂದ ಮಾನಸಿಕ ಒತ್ತಡ ಎಷ್ಟು ಭಯಂಕರ ಮತ್ತು ದುಷ್ಪರಿಣಾಮಕಾರಿ ಎಂಬುದರ ಅರಿವಾಗುತ್ತದೆ.

ಮನುಷ್ಯನ ಕೆಟ್ಟ ಆಲೋಚನೆಗಳಾದ ಹೊಟ್ಟೆಕಿಚ್ಚು, ದ್ವೇಷ, ವೈರ, ಸಿಟ್ಟು ಮುಂತಾದ ವಿಕಲ್ಪಗಳಿಂದ ಮನಃಶಾಂತಿ ಕೆಡುತ್ತದೆ. ಮತ್ಸರ, ದುಃಖಗಳು ಅಸಂತೋಷದ ಜನನಿ. ಇದು ಮನುಷ್ಯನ ಪರಮ ವೈರಿ. ಪರರ ಪ್ರಗತಿ, ಏಳಿಗೆ, ಸುಖ–ಸಂತೋಷಗಳನ್ನು ಸಹಿಸದೇ ಇರುವ

ಗುಣ–ಸ್ವಭಾವವೇ ಮತ್ಸರ ಅರ್ಥಾತ್ ಹೊಟ್ಟೆಕಿಚ್ಚು. ಹತಾಶೆ, ನಿರಾಶೆಗಳ ಮೂಲವಾಗಿರುವ ಈ ಗುಣ ಅತ್ಯಂತ ಅಪಾಯಕಾರಿ, ವಿನಾಶಕಾರಿ. 'Jealous is the jaundice of mind' ಎಂಬ ನುಡಿ ಪ್ರಚಲಿತವಾಗಿದೆ. ಬರ್ಟ್ರೆಂಡ್ ರಸೆಲ್ ಹೇಳುವಂತೆ "ನಮ್ಮ ಆಲೋಚನಾ ಶಕ್ತಿ ಹೊಟ್ಟೆಕಿಚ್ಚನ್ನು ಬದಲಿಸುತ್ತದೆ" ಎಂಬ ಮಾತು ಸದಾ ನೆನಪಿಡುವಂತಹುದಾಗಿದೆ. ಅದಕ್ಕಾಗಿ ಸಕಾರಾತ್ಮಕ ಚಿಂತನೆಗಳು ನಡೆಯಬೇಕು. ಅವಗುಣಗಳು ಮನುಷ್ಯನನ್ನು ಬಾಧಿಸುತ್ತವೆ, ಬಂಧಿಸುತ್ತವೆ. "ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಿಂದ ಕಟ್ಟುವಡೆದೆನು" ಎಂದು ಬಸವಣ್ಣನವರು ಕಳವಳಪಡುತ್ತಾರೆ. ಈ ಹುಟ್ಟಾಸೆಗಳು ಹಲವು ಬಗೆಯಾಗಿ ವ್ಯಕ್ತಿಯನ್ನು ಕಾಡಿಸುತ್ತವೆ, ಪೀಡಿಸುತ್ತವೆ. ಇದರಿಂದ ಆತನ ಮನಸ್ಸು ವಿಕ್ಷಿಪ್ತಗೊಂಡು ಶಾಂತಿ ಪಲಾಯನ ಮಾಡುತ್ತದೆ. ಅದಕ್ಕಾಗಿಯೇ ಮನನೊಂದು ಹೇಳುತ್ತಾರೆ : "ಕಾಯ ವಿಕಾರ ಕಾಡಿಹುದಯ್ಯಾ; ಮನೋ ವಿಕಾರ ಕೂಡಿಹುದಯ್ಯಾ"; ಕಾರಣ "ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ" ಎಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ಕಾಮ ಮೊದಲಾದ (ಬಯಕೆ) ಕಾಯ ವಿಕಾರಗಳು ಕಾಡುತ್ತವೆ. ಲೋಭ ಮೋಹಾದಿ ಮನೋವಿಕಾರಗಳು ಅದರ ಜೊತೆಗೆ ಕಾಡಿ ಇನ್ನಷ್ಟು ನೋವನ್ನು ಉಂಟುಮಾಡುತ್ತವೆ. ಆಗ ಮನಸ್ಸು ಅಶಾಂತವಾಗಿ ಒತ್ತಡಕ್ಕೆ ಸಿಲುಕುತ್ತದೆ. ಅತಿ ಆಶೆಯಿಂದ ಲೋಭವುಂಟಾದರೆ, ವಸ್ತುವಿನ ಮೇಲಿನ ಅತಿ ಪ್ರೀತಿಯಿಂದ ಮೋಹ ಉಂಟಾಗುತ್ತದೆ. ಧನ ಮದ, ಅಧಿಕಾರ ಮದ, ಜ್ಞಾನ ಮದ, ರೂಪ ಮದ ಮುಂತಾದವುಗಳಿಂದ ಮನುಷ್ಯ ಅಹಂಕಾರಿಯಾಗಿ ಪರರ ಪೀಡೆಗೆ ಕಾರಣೀಭೂತನಾಗುತ್ತಾನೆ. ಈ ಅವಗುಣಗಳು ಮಿತಿ ಮೀರಿದಾಗ ಮನೋಕಾಯಗಳ ವಿಕಾರವಾಗುತ್ತದೆ; ಇಂಥ ಮನಸ್ಸಿನಿಂದ ಲೌಕಿಕ ಸುಖ–ಸಮಾಧಾನಗಳೂ ಇಲ್ಲ; ಪಾರಲೌಕಿಕ ಸಾಧನೆ–ಸಿದ್ಧಿಗಳೂ ಇಲ್ಲ. ಅದಕ್ಕಾಗಿ ನಾವು ಮೊದಲು ವರ್ತಮಾನ ಕಾಲದಲ್ಲಿ ಬಾಳುವುದನ್ನು ಕಲಿಯಬೇಕು. ಇದರ ಸಾಧನೆಗೆ ಮನೋದೈಹಿಕ ಆರೋಗ್ಯ ಅತಿ ಮುಖ್ಯವಾದುದು.

ಮನೋದುರ್ಬಲತೆಗೆ ಎಡೆ ಮಾಡುವ ಆಸೆ ಅಂದರೆ ವಸ್ತುವಿನ ಬಯಕೆ, ಆಮಿಷ ಆ ವಸ್ತುವಿನಿಂದಾಗುವ ಸೆಳೆತ, ತಾಮಸ–ಅವಗುಣಗಳ ಜಡತೆ, ಹುಸಿ ಸುಳ್ಳು ಮಾತು, ವಿಷಯ–ಲೈಂಗಿಕ ಭಾವನೆ, ಕುಟಿಲ–ಮೋಸ, ಕುಹಕ–ವಂಚನೆ, ಕ್ರೋಧ–ಕೋಪ, ಕ್ಷುದ್ರ–ಕೀಳು, ಮಿಥ್ಯೆ–ಭ್ರಮೆ, ಹುಸಿ ಮುಂತಾದವು ಗಳನ್ನು ನಾವು ಮನಸ್ಸಿನಿಂದ ದೂರ ಮಾಡಿದಲ್ಲಿ ನಮ್ಮ ಮನಸ್ಸು ಪ್ರಶಾಂತ ವಾಗಿರುತ್ತದೆ. ಎಮರ್ಸನ್‌ನ ಮಾತಿನಲ್ಲಿ ಹೇಳುವುದಾದರೆ, "ಮನಸ್ಸು ನಿರ್ಮಲ ವಾಗಿದ್ದರೆ ನಮ್ಮ ಮುಖ ಸದಾ ನವೋಲ್ಲಾಸದಿಂದ್ಧಿರುತ್ತದೆ" ದೈಹಿಕ ಸುಖಗಳನ್ನು ಇತಿಮಿತಿಯಲ್ಲಿಟ್ಟುಕೊಂಡು, ವಿವೇಕ, ಜ್ಞಾನಗಳಿಂದ ಮನದ ಹತೋಟಿಯನ್ನು ಸಾಧಿಸಿ ಸುಖ–ಸಂತೋಷದಿಂದ ಬಾಳಿ ಬದುಕಿ ಈ ಇಹವನ್ನು ಧಾರ್ಮಿಕ ಆಚರಣೆಯಿಂದ ಗೆಲ್ಲುವುದೇ ಮಾನವನ ಜೀವನದ ಗುರಿಯಾಗಿದೆ.

ನಮ್ಮ ಬದುಕಿನ ಹಲವಾರು ಸಮಸ್ಯೆಗಳಿಗೆ ಬಸವಣ್ಣನವರ ವಚನಗಳಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಅವರೊಬ್ಬ ಧಾರ್ಮಿಕ ಮನೋವಿಜ್ಞಾನಿ, ಮನೋಚಿಕಿತ್ಸಕ. ಅವರು ಮನಸ್ಸಿನ ಆಳ–ಅಗಲ, ಗುಣ–ಸ್ವಭಾವಗಳನ್ನು ಅರಿತು ತಮ್ಮ ವಚನಗಳಲ್ಲಿ ಅಭಿವ್ಯಕ್ತಪಡಿಸಿದರು. ಧಾರ್ಮಿಕ ಇತಿಹಾಸದಲ್ಲಿ ನಾವು ಇಂಥ ಇನ್ನೊಬ್ಬರನ್ನು ಕಾಣುವುದು

ಅಪರೂಪ. ಅವರು ಮನಸ್ಸಿನಲ್ಲಿ ಚಿತ್ರವನ್ನು ಸ್ಫುಟವಾಗಿ ಚಿತ್ರಿಸಿದ್ದಾರೆ. ಅದರ ಸ್ವಭಾವ–ಸ್ವರೂಪ ಗಳನ್ನು ತಮ್ಮ ಅಂತರ್‌ನಿರೀಕ್ಷಣೆ, ಮತ್ತು ಅನುಭವಗಳ ಹಿನ್ನೆಲೆಯಲ್ಲಿ ಹಲವಾರು ಉದಾಹರಣೆಗಳ ಮೂಲಕ ಮನಂಬುಗುವಂತೆ ವಿವರಿಸುತ್ತಾರೆ. 'ಚಂಚಲಂ ಇದಂ ಮನಂ' ಎಂಬುದು ಸಾರ್ವತ್ರಿಕ ಸತ್ಯ. ಅದರ ಚಂಚಲತೆಯ ಚಿತ್ರ ಇಲ್ಲಿದೆ.

"ಎನ್ನ ಚಿತ್ತ ಅತ್ತಿಯ ಹಣ್ಣು, ನೋಡಯ್ಯ;
ವಿಚಾರಿಸದಡೆ ಏನೂ ಹುರುಳಿಲ್ಲವಯ್ಯಾ
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪುಮಾಡಿ
ನೀವಿರಿಸಿದಿರಿ, ಕೂಡಲಸಂಗಮದೇವಾ"

ಅತ್ತಿಯ ಹಣ್ಣು ಮೇಲ್ನೋಟಕ್ಕೆ ಕೆಂಪಗೆ, ಚಂದವಾಗಿ ಕಂಡರೂ, ಒಡೆದು ನೋಡಿದರೆ ಅದರ ಒಳಗೆ ಹುಳುಗಳು ಇರುವುದನ್ನು ಕಾಣುತ್ತೇವೆ. ಹಾಗೆಯೇ ನಮ್ಮ ಮನಸ್ಸು ಹೊರನೋಟಕ್ಕೆ ಅಂದವಾಗಿ ಕಂಡರೂ ಅದರ ಒಳಗೆ ಕೆಟ್ಟ ವಿಚಾರಗಳು, ದುಷ್ಟ ಆಲೋಚನೆಗಳು ತುಂಬಿಕೊಂಡಿರುತ್ತವೆ. ದ್ವೇಷ, ದುರಾಸೆ, ಸಿಟ್ಟು, ಹೊಟ್ಟೆಕಿಚ್ಚು ಮುಂತಾದವು ಮನೆ ಮಾಡಿಕೊಂಡಿರುತ್ತವೆ. ಆದ್ದರಿಂದಲೇ ನಮ್ಮ 'ನುಡಿಯೊಂದು ಪರಿ, ನಡೆಯೊಂದು ಪರಿ' ಇಂದು ದ್ವಂದ್ವ ಮನಸ್ಸು – ಒಳಗೊಂದು, ಹೊರಗೊಂದು. ಇವೆರಡೂ ಒಂದಾದಾಗ ಸಂತುಲಿತ, ಸಮಾಧಾನಕರ ಸುಮಧುರ ಜೀವನ.

ಮಂಗ ಚಂಚಲತೆಗೆ, ಚಪಲತೆಗೆ ಸುಪ್ರಸಿದ್ಧ

"ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು
ನಿಂದಲ್ಲಿ ನಿಲಲೀಯದೆನ್ನ ಮನವು ಹೊಂದಿದಲ್ಲಿ ಹೊಂದಲೀಯದೆನ್ನ ಮನವು"

ಮರದ ಕೊಂಬಿನ ಮೇಲಿರುವ ಮರ್ಕಟ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ನಿಮಿಷ ನಿಮಿಷಕ್ಕೂ ಜಿಗಿಯುವಂತೆ, ಸಂಸಾರವೆಂಬ ವೃಕ್ಷದಲ್ಲಿ, ಇಂದ್ರಿಯಗಳೆಂಬ ಕೊಂಬೆಗಳ ಮೇಲೆ ಚಂಚಲ ಮನಸ್ಸು ಜಿಗಿಯುತ್ತಿರುತ್ತದೆ. ಅದು ಒಂದೇ ಸ್ಥಳದಲ್ಲಿ, ವಿಷಯದಲ್ಲಿ ನಿಲ್ಲಲಾರದು. ಧ್ಯಾನ– ಪೂಜೆಗಳಲ್ಲಿ ನಿರತವಾಗದು. ಇಂಥ ಮನಸ್ಸಿಗೆ ಗುರಿ ತೋರಿಸಿ ಅದು ಅಲ್ಲಿ ನಿಲ್ಲುವಂತೆ ಮಾಡಬೇಕೆಂದು ಹಂಬಲಿಸುತ್ತಾರೆ. ಮನಸ್ಸಿನ ಕೇಂದ್ರೀಕರಣದಿಂದಲೇ (Concentration of mind) ಅದರ ಚಂಚಲತೆ ನಿವಾರಣೆಯಾಗುತ್ತದೆ. ಅದಕ್ಕಾಗಿ ದೇವರ ಮೊರೆ ಹೋಗುತ್ತಾರೆ. 'ನಿಮ್ಮ ಚರಣದಲ್ಲಿ ನನ್ನನ್ನು ಭ್ರಮರನನ್ನಾಗಿಸು' ಎಂದು ಪ್ರಾರ್ಥಿಸುತ್ತಾರೆ. ಬಂಡು ತುಂಬಿದ ಕಮಲದ ಮೇಲೆ ಭ್ರಮರ ಕುಳಿತು ಮಕರಂದ ಹೀರಿ ಶಾಂತವಾಗುವಂತೆ ಮನುಷ್ಯನ ಮನಸ್ಸು ಕೂಡ ದೇವರ ನಾಮಸ್ಮರಣೆಯಲ್ಲಿ, ಆರಾಧನೆ, ಪ್ರಾರ್ಥನೆಯಲ್ಲಿ ನೆಲೆ ನಿಲ್ಲುತ್ತದೆ. ಮನುಷ್ಯ ಪ್ರಯತ್ನದ ನಿಗ್ರಹ, ದೈವೀ ಅನುಗ್ರಹದಿಂದ ಮನಸ್ಸಿನ ಚಂಚಲತೆ, ದುರ್ಬಲತೆ ದೂರವಾಗಿ ಪ್ರಶಾಂತ, ಪ್ರಫುಲ್ಲ ಮನಸ್ಸು ಸಾಧ್ಯವಾಗುತ್ತದೆ. ಇಂಥ ಸುಮನಸ್ಸು ಉಳ್ಳವರಿಗೆ ಒತ್ತಡವೆಲ್ಲಿ, ಮನೋರೋಗ ಎಲ್ಲಿ ?

ಲೌಕಿಕ ವ್ಯವಹಾರಗಳಲ್ಲಿಯೂ ಕೂಡ ಮನಸ್ಸಿನ ಏಕಾಗ್ರತೆ ಅವಶ್ಯ. ಇದರಿಂದಲೇ ವ್ಯವಹಾರ ನಡೆಸುವುದರಲ್ಲಿ, ಅಭ್ಯಾಸ ಮಾಡುವುದರಲ್ಲಿ, ವೃತ್ತಿಯನ್ನು ಕುಶಲತೆಯಿಂದ, ಕ್ಷಮತೆಯಿಂದ ನಿರ್ವಹಿಸುವಲ್ಲಿ ಸುಲಭತೆ ಸಾಧ್ಯವಾಗುತ್ತದೆ. ಇಲ್ಲವಾದರೆ ಅಕ್ಷಮತೆಯವ ರಾಗುತ್ತೇವೆ (inefficient). ಕದಡಿದ ಮನದಿಂದ (perturbed or distrubed mind)

ಏನನ್ನೂ ಸಾಧಿಸಲಾರೆವು. ಸದೃಢ ಮನ-ಶರೀರಗಳೆರಡೂ ಬೇಕು. ಆದರೆ ಅದು ಸುಲಭ ಸಾಧ್ಯವಲ್ಲ. ಮನಸ್ಸು ತನ್ನ ಮೂಲ ಸ್ವಭಾವವನ್ನು ಬಹು ಬೇಗ ಬದಲಿಸಲಾರದು :

ಅಂದಣವನೇರಿದ ಸೊನಗನಂತೆ, ಕಂಡಡೆ ಬಿಡದು ಮುನ್ನಿನ ಸ್ವಭಾವವನು.

ಸುಡು ! ಸುಡು ! ಮನವಿದು ವಿಷಯಕ್ಕೆ ಹರಿವುದು."

ಪಲ್ಲಕ್ಕಿಯನ್ನು ಏರಿದ ನಾಯಿ ರಸ್ತೆಯಲ್ಲಿ ಒಂದು ಎಲುಬು ಬಿದ್ದಿದ್ದನ್ನು ಕಂಡು ಟಣ್ಣನೆ ಜಿಗಿದು ಹಿಡಿದುಕೊಳ್ಳುವಂತೆ ಮನಸ್ಸು ಕೂಡ ಬಯಕೆಯೆಡೆಗೆ ಎಳಸುತ್ತದೆ. ಅದು ಹೇಗೆ ತನ್ನ ಮೊದಲಿನ ಸ್ವಭಾವವನ್ನು ಬಿಡಲಾರದೋ ಹಾಗೆ ಮನಸ್ಸು ಕೂಡ ಒಮ್ಮೆಲೇ ಬದಲಾಗದು. ಉನ್ನತ ಸ್ಥಾನವನ್ನು ಪ್ರಧಾನ ಮಾಡುವುದರಿಂದ ಅದರಲ್ಲಿ ಪರಿವರ್ತನೆಯಾಗದು. ಅದನ್ನು ಹತೋಟಿಗೆ ತರಲು ಮನುಷ್ಯ ಪ್ರಯತ್ನದ ಜೊತೆಗೆ ದೇವರ ದಯೆಯೂ ಬೇಕು. ಕಾಮ ಮನುಷ್ಯನ ಮೊದಲ ವೈರಿ. ಅದರ ಮೇಲೆ ಅವನ ನಿಯಂತ್ರಣವಿಲ್ಲದಿದ್ದರೆ ಅವನನ್ನು ನಾಶಮಾಡದೆ ಬಿಡದು. ಮನೋ ನಿಗ್ರಹವೆಂದರೆ ಅದು ಸರಿಯಾಗಿ ವರ್ತಿಸುವಂತೆ ನೋಡುವುದು, ಅದನ್ನು ತಿದ್ದುವುದು. "ಮನಸ್ಸು ಮದೋನ್ಮತ್ತ ಸಲಗದಂತೆ. ಎಲ್ಲ ಕಡೆಗೂ ಓಡಾಡುತ್ತದೆ. ಅದಕ್ಕೆ ಜ್ಞಾನದ ಅಂಕುಶ ಬೇಕು" ಅದನ್ನು ಒಳ್ಳೆಯ ವಿಚಾರಗಳಲ್ಲಿ ತೊಡಗಿಸಬೇಕು. ಮನೋನಿಗ್ರಹದ ಅಭಾವದಿಂದ ಬುದ್ಧಿ-ಭ್ರಮಣೆ, ಆತಂಕ, ಖಿನ್ನತೆಗಳಿಗೆ ಒಳಗಾಗಿ ಮನೋರೋಗಕ್ಕೆ ಇಂದು ಮನುಷ್ಯ ತುತ್ತಾಗುತ್ತಿದ್ದಾನೆ. ಮನೋ ನಿಗ್ರಹದ ಉಪಾಯಗಳೆಂದರೆ ಒಂದು ಸ್ವಪ್ರಯತ್ನ, ಎರಡನೆಯದು ದೇವರ ದಯೆ ಅಥವಾ ದೇವರ ಸ್ವರೂಪವೇ ಆದ ಗುರುವಿನ ಕೃಪೆ.

"ತನ್ನನ್ನು ತಾನು ಗೆಲ್ಲುವುದೇ ನಿಜವಾದ ಗೆಲುವು. ಇದು ಮಹತ್ತರ ವಾದುದು" ಎಂಬುದು ಬುದ್ಧನ ಕಥನ. ಅಂದರೆ ನಮ್ಮ ಮನಸ್ಸಿನ ಮೇಲೆ ನಾವು ಹತೋಟಿಯನ್ನು ಸಾಧಿಸಬೇಕು. ಅಂದಾಗ ಮಾತ್ರ ಇಹ ಪರಗಳನ್ನು ಸಾಧಿಸಬಲ್ಲೆವು.

ಗೀತೆಯೂ ಕೂಡ ಮನಸ್ಸಿನ ದುರ್ಬಲತೆಯನ್ನು ಕಂಡುಕೊಂಡು ಪ್ರಯತ್ನದಿಂದ ವೈರಾಗ್ಯದಿಂದ ಅದರ ನಿಗ್ರಹ ಸಾಧ್ಯವೆಂದು ಸಾರುತ್ತದೆ –

"ಅಸಂಶಯಂ ಮಹಾಬಾಹೋ ಮನೋದುರ್ನಿಗ್ರಹಂ ಚಲಮ್ ।

ಅಭ್ಯಾಸೇನ ಕೌಂತೇಯ ವೈರಾಗ್ಯೇಣ ಚ ಗ್ರಹ್ಯತೆ ॥" – ೬.೩೫

ಉದ್ವೇಗರಹಿತ ಜೀವನ : ಉದ್ವೇಗರಹಿತ ಜೀವನಕ್ಕೆ (Tension free life) ಮನಸ್ಸಿನ ಸಂತುಲನ ಅತ್ಯವಶ್ಯ. (Balance of mind) ನಮ್ಮ ದೈನಂದಿನ ಜೀವನದಲ್ಲಿಯ ದುಃಖ, ಚಿಂತೆ, ಕಷ್ಟಗಳಿಂದುಂಟಾಗುವ ನಿರಾಶೆ, ಹತಾಶೆ, ಭಯ, ಸಿಟ್ಟು, ಭಾವೋದ್ವೇಗ, ಮನದ ಚಾಂಚಲ್ಯ, ದ್ವೇಷ, ವೈರಭಾವ, ದುಷ್ಟ ಆಲೋಚನೆಗಳು, ಮದ-ಮತ್ಸರಗಳು, ಕಪಟ ವಂಚನೆಯ ಭಾವನೆ ಮುಂತಾದ ಹಲವಾರು ಕಾರಣಗಳಿಂದ ಮನಸ್ಸಿನ ಸಮತೋಲನ ತಪ್ಪಿ ಮಾನಸಿಕ ಒತ್ತಡಕ್ಕೆ, ಉದ್ವೇಗಕ್ಕೆ ಒಳಗಾಗುತ್ತೇವೆ. ಇದರಿಂದ ಒತ್ತಡದ ಖಿನ್ನತೆಯ ಕಾಯಿಲೆಗಳಿಂದ ಬಳಲುತ್ತೇವೆ. ಹಿಸ್ಟೀರಿಯಾ, ಸೋಮಾಟೋ ಫಾರಂಡಿಸ್ ಆರ್ಡರ್, ಆತಂಕ, ಮನೋಬೇನೆ ಕಾಣಿಸಿಕೊಳ್ಳುತ್ತವೆ. ಮಾನಸಿಕ ಒತ್ತಡವೇ ಅನೇಕ ರೋಗಗಳಿಗೆ ಕಾರಣವಾಗಿದೆ. ಈ ಕಾಯಿಲೆಗಳೆಂದರೆ ಆಮ್ಲತೆ, ಅಧಿಕಾಮ್ಲತೆ, ಜಠರದ ಹುಣ್ಣು, ಅಧಿಕ ರಕ್ತದೊತ್ತಡ, ಸಿಹಿ ಮೂತ್ರರೋಗ, ಕೀಲುಬೇನೆ, ಒತ್ತಲೆ ನೋವು, ಕರುಳೂತ, ಚರ್ಮ

ರೋಗಗಳು, ಕೂದಲು ಉದುರುವಿಕೆ, ಋತುಚಕ್ರದ ಏರುಪೇರು. ಯೋಗ ಕೆಲ ಮನೋರೋಗಗಳಿಗೆ ಸಹಕಾರಿಯಾಗಿ ಮನೋ–ದೈಹಿಕ ಆರೋಗ್ಯ ಸುಧಾರಿಸಲು ಸಹಾಯಕವಾಗಿದೆ. ನರವ್ಯವಸ್ಥೆ ಪ್ರಚೋದನೆಗೊಂಡು ದೇಹದ ಶಕ್ತಿ ಅಪವ್ಯಯವಾಗುವುದು ತಪ್ಪುತ್ತದೆ. ಕ್ರೋಧ, ಸ್ವಾಭಾವಿಕ ಹುಟ್ಟುಗುಣ, ಕೋಪ ಒಂದು ಸಂಕ್ಷಿಪ್ತ ಹುಚ್ಚು. ತನಗೆ ಆಗದ, ಒಗ್ಗದ ಕ್ರಿಯೆ ಅಥವಾ ಪ್ರತಿಕ್ರಿಯೆ, ಇಲ್ಲವೇ ನಿರಾಶೆ ಕೋಪಕ್ಕೆ ಕಾರಣವಾಗುತ್ತದೆ. ವಿನಯ, ಶಾಂತತೆಯ ಅಭಾವವೇ ಕೋಪದ ಮೂಲ. ಆಸೆ, ನಿರಾಶೆಗಳನ್ನು ಕಡಿಮೆ ಮಾಡಿದರೆ ಕೋಪವೂ ತಾನೇ ತಾನಾಗಿ ಕಡಿಮೆಯಾಗುತ್ತದೆ. ಅತಿ ಕೋಪ ಅನೇಕ ಅನಾಹುತಗಳಿಗೆ ಈಡುಮಾಡುತ್ತದೆ. ಕೋಪಗೊಂಡವನ ಮುಖ ಕೆಂಪಾಗುತ್ತದೆ. ಉದ್ವೇಗ ಅಧಿಕವಾಗುತ್ತದೆ. ಹೃದಯ ಬಡಿತವೂ ಹೆಚ್ಚುತ್ತದೆ. ಅತಿ ಕೋಪ ಹೃದಯಾಘಾತಕ್ಕೆ ಕಾರಣವಾಗಬಹುದು. ಏರೊತ್ತಡ ದಿಂದ ಮರಣವನ್ನು ಆಹ್ವಾನಿಸುತ್ತೇವೆ. ಕ್ರೋಧವೇ ದ್ವೇಷ, ಮತ್ಸರ, ಹಗೆತನಗಳಿಗೆ ಕಾರಣೀಭೂತವಾಗುವುದೆಂದರೂ ಸಲ್ಲುವುದು. ಸಿಟ್ಟಿನ ಸೂಕ್ಷ್ಮ ರೂಪವೇ, ವಿಸ್ತಾರವೇ ಈ ಅನ್ಯಗುಣಗಳ ಹುಟ್ಟಿಗೆ ಕಾರಣ. ಇದರ ಹತೋಟಿಯೇ ಉಳಿದವುಗಳ ನಿಯಂತ್ರಣವೆಂದರೂ ಸರಿಯೇ. ಬಸವಣ್ಣನವರು ಹೀಗೆ ಹೇಳುತ್ತಾರೆ, ಕೋಪ ಕುರಿತು, ಅದರ ಉಪಾಯ ಕುರಿತು :

"ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ ?
ತನಗೆ ಆಗೇನು ? ಅವರಿಗಾದ ಚೇಗೇನು ?
ತನುವಿನ ಕೋಪ ತನ್ನ ಹಿರಿತನದ ಕೇಡು !
ಮನದ ಕೋಪ ತನ್ನ ಅರಿವಿನ ಕೇಡು !
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ,
ನೆರೆಮನೆಯ ಸುಡುವುದೆ ಕೂಡಲಸಂಗಮದೇವಾ"

ನಮ್ಮ ಮೇಲೆ ಯಾರಾದರೂ ಕೋಪಿಸಿಕೊಂಡರೆ, ನಾವು ಪ್ರತಿಯಾಗಿ ಕೋಪಿಸಬಾರದು. ಅದರಿಂದ ನಮಗೆ ಯಾವ ಲಾಭವು ಇಲ್ಲ, ಹಿತವೂ ಇಲ್ಲ. ಅವರಿಗೆ ಕೇಡಾದರೂ ನಮಗೆ ಏನಾಗುವುದಿದೆ ? ಕೋಪದಿಂದಾಗುವ ದೈಹಿಕ ಪ್ರತಿಕ್ರಿಯೆಗಳಿಂದ ರಕ್ತದ ಪರಿಚಲನೆ, ಹೃದಯದ ಬಡಿತ ಹೆಚ್ಚಾಗಿ ಉದ್ವಿಗ್ನತೆ ಅಧಿಕವಾಗುತ್ತದೆ; ಮಾನಸಿಕ ಒತ್ತಡವೂ ಏರುಮುಖವಾಗುತ್ತದೆ. ಇದರಿಂದ ಮನಸ್ಸು ಅಶಾಂತವಾಗಿ ನಮಗೆ ಹಾನಿಯಾಗುತ್ತದೆ, ಕೆಡುಕಾಗುತ್ತದೆ. ಅಲ್ಲದೆ ನಮ್ಮ ಹಿರಿಮೆ ಗೌರವಗಳೂ ನಾಶವಾಗುತ್ತವೆ. ಮನಸ್ಸನ್ನು ಆವರಿಸಿದ ಕೋಪ ನಮ್ಮ ಅರಿವನ್ನು ಮಸುಕಾಗಿಸುತ್ತದೆ. ಬುದ್ಧಿ ಕುಂಠಿತವಾಗಿ ಏನೂ ತಿಳಿಯ ದಂತಾಗುತ್ತದೆ. ಅಜ್ಞಾನಿಯಾಗಿ, ಹುಚ್ಚನಾಗಿ ವರ್ತಿಸುವಂತೆ ಆಗುತ್ತದೆ. ಇದು ಅತಿಯಾದಾಗ ಬುದ್ಧಿಭ್ರಮಣೆಯಾಗುತ್ತದೆ. ಮನೋರೋಗಿಯಾಗಿಯೂ ಪರಿವರ್ತಿತವಾಗಬಹುದು. ಈ ಸಿಟ್ಟು ನಮ್ಮ ಮನದೇಹಗಳನ್ನು ಮೊದಲು ಸುಟ್ಟು ಹಾಕುತ್ತದೆಯೇ ಹೊರತು ಪರರಿಗೆ ಏನೂ ಮಾಡಲಾರದು. ಶರೀರವೆಂಬ ಮನೆಯೊಳಗಣ ಸಿಟ್ಟೆಂಬ ಕಿಚ್ಚು ಅದನ್ನೇ ಸುಡುತ್ತದೆ. ಮನಸ್ಸಿನ ನೆಮ್ಮದಿಯನ್ನು ಹಾಳುಮಾಡುತ್ತದೆ. ಅದಕ್ಕಾಗಿಯೇ 'ಸಿಟ್ಟು' ತನ್ನ ವೈರಿ, 'ಶಾಂತಿ' ಪರರ ವೈರಿ ಎಂಬ ಗಾದೆ ಮಾತೇ ಪ್ರಚಲಿತವಾಗಿದೆ. ಗೀತೆಯೂ ಕೂಡ ಪರಿಹಾರ ಸೂಚಿಸಿದೆ :

"ದುಃಖೇಷುನುದ್ವಿಗ್ನ ಮನಾಃ ಸುಖೇಷು ವಿಗತಸ್ಪೃಹಃ ।
ವೀತರಾಗ ಭಯ ಕ್ರೋಧಃ ಸ್ಥಿತಿಧೀರ್ಮುನಿರುಚ್ಯತೇ ॥

ದುಃಖದಲ್ಲಿ ಉದ್ವೇಗಗೊಳ್ಳದೆ, ಸುಖದಲ್ಲಿ ಅತಿಯಾಗಿ ಆನಂದಿತನಾಗದೆ ಸ್ಥಿರ ಬುದ್ಧಿಯುಳ್ಳ ಮುನಿಯಂತೆ ಇರುವವ ಉದ್ವಿಗ್ನರಹಿತ ಜೀವನವನ್ನು ಸಾಗಿಸಬಲ್ಲ. ಮಾತಿಗೆ ಮಾತು ಬೆಳೆದು, ಘರ್ಷಣೆಯುಂಟಾಗಿ ಸಿಟ್ಟು ಬರುವುದು ಸಹಜ. ಅದು ಅಧಿಕವಾಗದೆ, ಅನವಶ್ಯಕ ಮನಸ್ತಾಪಕ್ಕೆ ಇಳಿಯದೆ ಮನಸ್ಸಿನ ಸಂತುಲನವನ್ನು (Balance of mind) ಕಾಯ್ದುಕೊಂಡು ಶಾಂತವಾಗಿರುವುದೇ ಉತ್ತಮ. ಮನಸ್ಸಿಗೆ ಕಡಿವಾಣ ಹಾಕುವುದರಿಂದ ಇದು ಸಾಧ್ಯವಾಗುತ್ತದೆ. ಸಮತೆ, ಸಮಾಧಾನಗಳು ತಾರಕ. ಈ ವಿಚಾರ ವಚನಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ಸಂಕಲ್ಪ–ವಿಕಲ್ಪಾತ್ಮಕ ಮನಸ್ಸು ಕೇವಲ ಸ್ಮರಣೆಯಿಂದಲೇ ವಿಷಯವನ್ನು ಗ್ರಹಿಸಬಲ್ಲದು, ಚಂಚಲವಾಗಬಲ್ಲದು. ವಿಷಯವೆಂದರೆ ಇಂದ್ರಿಯ ಕೃತ್ಯ, ಪ್ರಪಂಚ ಸುಖ, ಭೋಗ್ಯವಸ್ತು, ಬಯಕೆ ಎಂದೆಲ್ಲಾ ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೋಪದ ಹುಟ್ಟನ್ನು ಗೀತೆಯು ಆಸೆಯ ಆತಂಕದಲ್ಲಿ ಗುರುತಿಸಿದೆ. ವಿಷಯದ ಚಿಂತನೆಯಲ್ಲಿ ಆಸಕ್ತಿ, ಆಸಕ್ತಿಯಿಂದ ಆಸೆ, ಆಸೆಗೆ ಅಡ್ಡಿಯಾದರೆ ಕೋಪ ಉಂಟಾಗುತ್ತದೆ. ಇದೇ ಅನರ್ಥಕ್ಕೆ, ಅವಿವೇಕಕ್ಕೆ ಕಾರಣವಾಗುತ್ತದೆ.

> **"ಧ್ಯಾಯ ತೋ ವಿಷಯಾನ್ಪುಂಸಃ ಸಂಗಸ್ತೇಷೂಪಜಾಯತೇ।**
> **ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಭಿಜಾಯತೇ॥ ೨.೬೨**
> **ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿ ವಿಭ್ರಮಃ॥**
> **ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ॥"**

ವಿಷಯಗಳನ್ನೇ ನೆನಪಿಸಿಕೊಳ್ಳುವವನಿಗೆ ಅವುಗಳಲ್ಲಿ ಆಸಕ್ತಿಯು ಉಂಟಾಗುತ್ತದೆ. ಆಸಕ್ತಿಯಿಂದ ಆಸೆ ಉಂಟಾಗಿ, ಅದಕ್ಕೆ ಯಾವುದೇ ರೀತಿಯ ಅಡ್ಡಿಯುಂಟಾದರೆ ಕೋಪ ಉತ್ಪತ್ತಿಯಾಗುತ್ತದೆ. ಆ ಕ್ರೋಧದಿಂದ ಅವಿವೇಕ ಅಂದರೆ ಮೂಢ ಭಾವನೆ ಉತ್ಪನ್ನವಾಗುತ್ತದೆ. ಅವಿವೇಕದಿಂದ ಸ್ಮರಣ ಶಕ್ತಿ ಕುಂಠಿತವಾಗುತ್ತದೆ. ಈ ನೆನಪಿನ ಶಕ್ತಿಯ ನಾಶದಿಂದ ಬುದ್ಧಿ ಅರ್ಥಾತ್ ವಿವೇಕ ಶಕ್ತಿ, ಜ್ಞಾನಶಕ್ತಿ ನಾಶವಾಗುತ್ತದೆ. ಬುದ್ಧಿನಾಶದಿಂದ ವ್ಯಕ್ತಿಯ ಇಹ–ಪರ ಜೀವನವೇ ಇಲ್ಲದಂತಾಗುತ್ತದೆ.

ಬಸವಣ್ಣನವರೂ ಕೂಡ 'ವಿಷಯ'ಕ್ಕೆ ಒತ್ತುಕೊಟ್ಟು ಅದನ್ನು ತಮ್ಮ ಅನೇಕ ವಚನಗಳಲ್ಲಿ ನಿರೂಪಿಸಿದ್ದಾರೆ. ಇದು ಇಹದಲ್ಲಿ ಕಡಿಮೆಯಾಗಿ ಪರದಲ್ಲಿ ಇಲ್ಲದಾಗಬೇಕು. ಆಗ ಇವೆರಡೂ ಸಿದ್ಧಿಸುತ್ತವೆ. ಮನಸ್ಸಿನ ಮೂಲವೇ ಆದ ಈ 'ವಿಷಯ'ದ ಅನಂತ ಚಟುವಟಿಕೆಗಳ, ಅನೇಕ ಕಾರ್ಯಗಳ ವ್ಯಾಪಾರದಿಂದಲೇ ನಮ್ಮ ಮನಸ್ಸಿನ ನೆಮ್ಮದಿ ಹಾಳಾಗುತ್ತದೆ. ಅದರ ತಡೆಗೆ ವ್ಯಕ್ತಿಯ ಯತ್ನ, ಪರಮಾತ್ಮನ ಅನುಗ್ರಹ ಅವಶ್ಯ.

> **'ವಿಷಯವೆಂಬ ಹಸುರನೆನ್ನ ಮುಂದೆ ಪಸರಿಸಿದೆಯಯ್ಯಾ;**
> **ಪಶುವೇನು ಬಲ್ಲುದು, ಹಸುರೆಂದೆಳಸುವುದು,**
> **ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,**
> **ಸುಬುದ್ಧಿಯೆಂಬ ಉದಕವನೆರೆದು**
> **ನೋಡಿ ಸಲಹಯ್ಯಾ ಕೂಡಲಸಂಗಮದೇವಾ"**

ಹಸುವಿನ ಮುಂದೆ ಹುಲ್ಲನ್ನು ಹರಡಿದರೆ ಅದು ಸಹಜವಾಗಿ ಅದಕ್ಕೆ ಎಳಸುವಂತೆ ವ್ಯಕ್ತಿಯೂ ಕೂಡ ಅಷ್ಟೇ ಸಹಜವಾಗಿ ಆಕರ್ಷಕವಾದ ಲೌಕಿಕ ಆಸೆ ಆಮಿಷಗಳಿಗೆ

ಒಳಗಾಗುತ್ತಾನೆ. ಅದಕ್ಕೆ ಎಳಸದಂತೆ ಮಾಡೆಂದು ಬಸವಣ್ಣ ನವರು ದೇವರಲ್ಲಿ ಪ್ರಾರ್ಥಿಸುತ್ತಾರೆ. ವಿಷಯರಹಿತನಾಗಲು ಮಾನವನಿಗೆ ಭಕ್ತಿರಸ ಮತ್ತು ಸುಬುದ್ಧಿಯೆಬ ನೀರು ಅವಶ್ಯಕವೆಂದು ಪ್ರತಿಪಾದಿಸುತ್ತಾರೆ. ವಿವೇಕ ಎಂಬ ಉದಕ ಅನಿವಾರ್ಯವೆಂದು ಮನಗಾಣಿಸುತ್ತಾರೆ. ನೋಡಿ ಎಂದರೆ, ದಯಾದೃಷ್ಟಿಯನ್ನು ಬೀರಿ ಸಲಹು ಎಂದು ಕಳಕಳಿಯ ಕೋರಿಕೆ ಯನ್ನು ಸಲ್ಲಿಸುತ್ತಾರೆ. ದೇವರಿಗೆ ಶರಣಾಗತರಾಗಿ, ತಮ್ಮನ್ನು ಅವನಿಗೆ ಸಮರ್ಪಿಸಿಕೊಂಡು ಲೌಕಿಕ-ಪೌರಲೌಕಿಕಗಳನ್ನು ಗೆಲ್ಲಲು ಅನುವು ಮಾಡಿಕೊಡಬೇಕೆಂದು ಬೇಡಿಕೊಳ್ಳುತ್ತಾರೆ. ಕೋಪವನ್ನು ಕಳೆದುಕೊಂಡು, ಶಾಂತಿಯನ್ನು ಪಡೆದುಕೊಂಡು ಉದ್ವೇಗರಹಿತ ಜೀವನವನ್ನು ನಡೆಸುವ ಕ್ರಮವನ್ನು ವಿಶದೀಕರಿಸುತ್ತಾರೆ.

ಈ ಪರಿಯಾಗಿ ಪ್ರಾರ್ಥಿಸಲು ಕಾರಣವೆಂದರೆ 'ಬೆಂದ ಮನ (Pertured mind) ಗತಿಗೆಡಿಸಿ, ಮತಿಗೆಡಿಸಿ ಕಾಡುತ್ತದೆ' ಮನುಷ್ಯ ಶಾಂತಿಯೆಡೆಗೆ ಹೋಗಲು ಸದ್ಗುಣಿಯಾಗಬೇಕು, ಸದಾಚಾರಿಯಾಗಬೇಕು. ಆತ 'ಸುಳಿದೆಗೆದು ಬೆಳೆಯಲು, ದೇವರು ಅವಗುಣವೆಂಬ ಕಸವ ಕಿತ್ತು ಸಲಹ' ಬೇಕು. ಅದಕ್ಕಾಗಿ ನಾವು ದೇವರಿಗೆ ಮನೋನಿಗ್ರಹ ದಯಪಾಲಿಸಲು ಪ್ರಾರ್ಥಿಸಬೇಕು. ಮನ, ಬುದ್ಧಿ, ಭಾವ, ಇಂದ್ರಿಯಗಳನ್ನು ಉದಾತ್ತೀಕರಿಸಬೇಕು.

"ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ,
ನಯನದಲ್ಲಿ ನಿಮ್ಮ ಮೂರುತಿ ತುಂಬಿ
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ
ಕೂಡಲ ಸಂಗಮದೇವಾ
ನಿಮ್ಮ ಚರಣಕಮಲದೊಳಗಾನು ತುಂಬಿ

ನಮ್ಮ ಮಾತುಗಳಲ್ಲಿ ದೇವರ ಸ್ಮರಣೆಯಿದ್ದರೆ ಮನಸ್ಸು ದೇವರೆಡೆಗೇ ಹೋಗಿ ಚಂಚಲ ವಾಗಲಾರದು. ಅದು ದಿವ್ಯಾನಂದವನ್ನು ಕೊಡುತ್ತದೆ. ಏಕೆಂದರೆ ಧ್ಯಾನ ಮನೋನಿಗ್ರಹಕ್ಕೆ ಅತ್ಯಂತ ಪರಿಣಾಮಕಾರಿಯಾದ ಮಾರ್ಗ. ಅದು ಅಮೃತಕ್ಕೆ ಸಮಾನ. ನಮ್ಮ ಕಣ್ಣುಗಳಲ್ಲಿ ಮಂಗಲಮಯ ಮಹಾದೇವನ ಮೂರುತಿ ತುಂಬಿಕೊಂಡಿರಬೇಕು. ಕಿವಿಗಳಲ್ಲಿ ಅವನ ಕೀರುತಿಯೇ ತುಂಬಿಕೊಳ್ಳಬೇಕು. ಮನಸ್ಸಿನಲ್ಲಿ ಸದಾ ಅವನ ಸ್ಮರಣೆ ತುಂಬಿಕೊಂಡಿರಬೇಕು. ಅಂದರೆ ನಮ್ಮ ಮನ ಕದಡಲಾರದು, ಕಲಕಲಾರದು. ಅದಕ್ಕಾಗಿಯೇ 'ನಿಮ್ಮ ಮನದೆತ್ತನ್ನ ತೆಗೆಯಯ್ಯಾ' ಎಂದು ಕೇಳಿಕೊಳ್ಳುತ್ತಾರೆ.

'ನೆನಹು' (ನೆನಪು) ನೆನೆಯುವಿಕೆಯಾಗಿದೆ; ಏಕ ಮನಸ್ಸಿನ ನೆನವು ಆಗಿದೆ. ಇದೇ ಧ್ಯಾನ, ಸತ್‌ಚಿಂತನೆ, ಸಕಾರಾತ್ಮಕ ಆಲೋಚನೆ (Positive thinking). ಒಂದು ಧ್ಯೇಯ ವಿಷಯ ಅಥವಾ ವಸ್ತುವಿನ ಮೇಲೆ ನಿರಂತರವಾಗಿ ಮನಸ್ಸು ಹರಿಸತೊಡಗಿದರೆ ಅದು ಧ್ಯಾನವೆನಿಸುತ್ತದೆ. ಅಲ್ಲಿ ಅದು ನೆಲೆ ನಿಂತರೆ ಅಂತಿಮ ಗುರಿಯನ್ನು ಮುಟ್ಟಿದಂತೆ. ಇದರ ಸತತ ಸಾಧನೆಯಿಂದ ಮನೋದೇಹಾರೋಗ್ಯ ಉತ್ತಮಗೊಳ್ಳುತ್ತದೆ. ಮನೋ ಕಾಯಿಲೆಗಳಿಗೆ, ಒತ್ತಡದ ಬೇನೆಗಳಿಗೆ ಇದೊಂದು ದಿವ್ಯೌಷಧ. ಮನಸ್ಸು ಕದಡುತ್ತಿರುವುದರಿಂದಲೇ ಧ್ಯಾನದ ಅವಶ್ಯಕತೆಯಿದೆ. ಅದೊಂದು ಮನೋವಿರಾಮದ ಸಾಧನ; ವಿಶೇಷ ಏಕಾಗ್ರತೆಯ ಕ್ರಮ. "ಮನಸ್ಸನ್ನು ಅನುಕ್ರಮವಾಗಿ, ವ್ಯವಸ್ಥಿತವಾಗಿ ನಿಗ್ರಹಕ್ಕೆ ತಂದುಕೊಳ್ಳಬೇಕು. ಅದೊಂದು

ಸಾಧನೆ, ಸಾರ್ಥಕವಾದ ಕೆಲಸ. ಅದು ಬ್ರಹ್ಮಾದ್ವೈತ ಸಿದ್ಧಿಗಿಂತ ಕಡಿಮೆಯೇನಲ್ಲ." ವಿವೇಕಾನಂದರ ಈ ಕಥನದ ಬೆಳಕಿನಲ್ಲಿ ನಾವು ಮುನ್ನಡೆಯಬಹುದು. ಆಧುನಿಕ ಮನೋವಿಜ್ಞಾನವೂ ಕೂಡ ಧ್ಯಾನದ ಮಹತ್ವವನ್ನು ಅರಿತು, ಅನುಸರಿಸಲು ಹೇಳುತ್ತದೆ. ಇದು ಮನಸ್ಸಿನ ಆರೋಗ್ಯಕ್ಕೆ ಒಂದು ಒಳ್ಳೆಯ ಮದ್ದು; ಸಮತೋಲನ ಕಾಯ್ದುಕೊಳ್ಳಲು ಸರಳ ಸಾಧನ, ಒಳ್ಳೆಯ ಉಪಾಯ.

ಮನೋ-ದೈಹಿಕ ಆರೋಗ್ಯಕ್ಕಾಗಿ ಮನಸ್ಸಿನಲ್ಲಿಯ ದುಷ್ಟ ವಿಚಾರಗಳನ್ನು ಕಿತ್ತುಹಾಕಿ ಅದರೊಳಗೆ ಪರೋಪಕಾರ, ಸ್ನೇಹ, ದಯೆ, ದಾನ, ವಿವೇಕ, ಭಗವತ್ ಚಿಂತನೆ ಮುಂತಾದ ಸುವಿಚಾರಗಳನ್ನು ತುಂಬಬೇಕು. ಇದರ ಜೊತೆಗೆ ಸಮಾಜ ಸೇವೆ, ಸತ್‌ಸಂಗ, ಸತ್‌ಶ್ರವಣ, ಸತ್ಕಾರ್ಯ, ವ್ರತಾಚರಣೆ ಮಾಡುತ್ತ ಕರ್ತವ್ಯ ಪರಾಯಣತೆಯನ್ನು ಮೆರೆಯಬೇಕು. ವಿವೇಕ, ವಿವೇಚನೆ ಗಳಿಂದ ಅನಿಷ್ಟಗಳನ್ನು ದೂರೀಕರಿಸಬೇಕು. ಹಿತಮಿತವಾದ ಆಹಾರ, ನಿಯಮಿತ ವ್ಯಾಯಾಮ, ಕ್ರೀಡೆಗಳು, ಯೋಗಾಸನ, ತೋಟಗಾರಿಕೆ, ಸೃಜನಶೀಲ ಚಟುವಟಿಕೆಗಳು ದೈಹಿಕ ಆರೋಗ್ಯಕ್ಕೆ ಅತ್ಯುತ್ತಮವಾದ ಸಾಧನಗಳು. ನಮ್ಮ ಶಾರೀರಿಕ ಬೇನೆಗಳಿಗೂ ಆಧ್ಯಾತ್ಮಕ್ಕೂ, ಧಾರ್ಮಿಕ ಜೀವನಕ್ಕೂ ನಿಕಟ ಸಂಬಂಧವಿದೆಯೆಂಬುದನ್ನು ಮರೆಯಬಾರದು. ವಿಶೇಷವಾಗಿ ಹೃದಯ ರೋಗಕ್ಕೆ ಇವುಗಳ ಅನ್ಯೋನ್ಯ ಸಂಬಂಧವಿದೆ ಯೆಂದು ಶತಶಃ ಸತ್ಯ. ಆಧ್ಯಾತ್ಮಿಕತೆ ನಮ್ಮ ಹೃದಯದ ಬಡಿತವನ್ನು, ರಕ್ತದೊತ್ತಡವನ್ನು ಗಣನೀಯವಾಗಿ ಕಡಿತಗೊಳಿಸುತ್ತದೆಂಬ ವಿಷಯ ಪ್ರಾಯೋಗಿಕವಾಗಿ ಸಿದ್ಧಮಾಡಲಾಗಿದೆ. "There is an overhelming positive relationship between highest level of faith or spiritual practice and less incidence of heart disease" ಎಂಬ ಮಾತುಗಳು ಒತ್ತಡರಹಿತ ಜೀವನಕ್ಕೆ ಆಧ್ಯಾತ್ಮ ಎಷ್ಟು ಮಹತ್ವದ್ದೆಂಬುದನ್ನು ಬಿಂಬಿಸುತ್ತದೆ.

ಆಧುನಿಕ ಜೀವನ ಶೈಲಿಯ ಉಪದ್ರವಗಳಾದ ಮನೋಒತ್ತಡ, ಮನೋಬೇನೆಗಳಿಗೆ ಸರಳ, ಶಿಸ್ತಿನ, ಸಂತೃಪ್ತ, ಸಮಾಧಾನದ ಜೀವನ ಪರಮೌಷಧಿಯಾಗಿದೆ. ನಮಗೆ ವರ್ತಮಾನ ಜೀವನ ಮುಖ್ಯ. ಅದು ಸುಖಮಯ, ಸಂತೋಷಮಯವಾದಾಗ ಪಾರಮಾರ್ಥಿಕದ ಕಡೆಗೆ ಸಹಜವಾಗಿಯೇ ತಿರುಗುತ್ತೇವೆ. ಮಾನವರಿಗೆಲ್ಲ ಪ್ರಶಾಂತತೆ, ಪ್ರಸನ್ನತೆ ಅತ್ಯವಶ್ಯ. ಅದಕ್ಕಾಗಿ ಸದಾ ದೇವರಲ್ಲಿ ಶಾಂತಿ-ಸಮಾಧಾನಗಳನ್ನು, ಸುಖ ಸಂತೋಷಗಳನ್ನು ಕೊಡಲು ಪ್ರಾರ್ಥಿಸಬೇಕು. ಇದೇ ಪ್ರಾಪಂಚಿಕತೆ, ಪಾರಮಾರ್ಥಿಕತೆಯ ಕೀಲಿಕೈ.

ಆಕರ ಗ್ರಂಥಗಳು

೧. ಬಸವೇಶ್ವರರ ವಚನ ದೀಪಿಕೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ.
೨. ನಿಮ್ಮ ಆರೋಗ್ಯವನ್ನು ಹೆಚ್ಚಿಸಿಕೊಳ್ಳಿ. ಡಾ. ಸಿ.ಆರ್. ಚಂದ್ರಶೇಖರ್.
೩. ಮನಸ್ಸು ಮತ್ತು ಅದರ ನಿಗ್ರಹ – ಸ್ವಾಮಿ ಬುದ್ಧಾನಂದ.
೪. ಮನೋದೈಹಿಕ ರೋಗಗಳು (ಕಷ್ಟ ಮನಸ್ಸಿಗೆ, ಕಾಯಿಲೆ ದೇಹಕ್ಕೆ), ಡಾ. ಸಿ.ಆರ್. ಚಂದ್ರಶೇಖರ್.
೫. ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ – ಸ್ವಾಮಿ ಯತೀಶ್ವರಾನಂದ.
೬. ಶ್ರೀ ಮದ್ಭಗವದ್ಗೀತಾ–ಕನ್ನಡಾನುವಾದ: ತಂ.ಶ್ರೀ.ನ. ಮೂರ್ತಿ ತಂಡಗ. ಹಿಂದೀ ಮೂಲಾನುವಾದ: ಶ್ರೀ ದಯಾಲಜೀ ಗೋಯಂಕ, ಗೀತಾ ಪ್ರೆಸ್, ಗೋರಖಪುರ.

❑

ಬಸವಣ್ಣನವರ ವಚನಗಳ ಕಾವ್ಯ ಸಂಪನ್ನತೆ

●

ಚೆನ್ನವೀರ ಕಣವಿ

ಕಾಲ ಬದಲಾದಂತೆ, ಹಳೆಯ ಮೌಲ್ಯಗಳಿಗೆ ತುಕ್ಕು ಹಿಡಿದು ಇಲ್ಲವೆ ಅವುಗಳ ತಿರುಳಿಗಿಂತ ಸಿಪ್ಪೆಗೇ ಪ್ರಾಧಾನ್ಯ ಒದಗಿದಾಗ ವಿಚಾರಶೀಲನಾದ ವ್ಯಕ್ತಿ ಹೊಸ ಮೌಲ್ಯಗಳ ಹುಡುಕಾಟ ನಡೆಸಿ ತನ್ನ ಸಮಕಾಲೀನ ಜೀವನದೊಡನೆ ಹೋರಾಟವೆಸಗುತ್ತಾನೆ. ರೂಢಿಯಿಂದ ಬಲಗೊಂಡ ಪ್ರತಿಯೊಂದಕ್ಕೂ ಪ್ರತಿಕ್ರಿಯೆ ವ್ಯಕ್ತಪಡಿಸಿ ತನ್ನತನವನ್ನು ಕಂಡುಕೊಳ್ಳಲು ಹವಣಿಸುತ್ತಾನೆ. ಕನ್ನಡನಾಡಿನಲ್ಲಿ ಇಂಥ ಒಂದು ಹೋರಾಟ ೧೨ನೆಯ ಶತಮಾನದಲ್ಲಿ ಶಿವಶರಣರಿಂದ ನಡೆಯಿತು. ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಎಂತೋ ಅಂತೆಯೇ ಸಾಹಿತ್ಯಕ್ಷೇತ್ರದಲ್ಲಿಯೂ ಅವರ ಸಾಹಸ ಹೊಸ ದಿಕ್ಕನ್ನು ತೆರೆದು ಫಲಪ್ರದವಾಯಿತು. ಹೊಸ ಜೀವನಮಾರ್ಗಕ್ಕೆ ಪ್ರೇರಕವಾದ ಇವರ ಚಿಂತನ, ಅನುಭವ, ಅನಿಸಿಕೆಗಳು ಜನತೆಯ ಜೀವನದ ಹಾಸುಹೊಕ್ಕಾಗಿ ಹೊಸ ಭಾವಗಳಿಗೆ ತಕ್ಕ ಹೊಸ ಭಾಷೆಯನ್ನೇ ಇವರು ನಿರ್ಮಿಸಬೇಕಾಯಿತು. ಇದರ ಪರಿಣಾಮವಾಗಿ 'ವಚನ' ರೂಪುಗೊಂಡಿತು. ಬಸವಣ್ಣನವರಿಗಿಂತ ಕೆಲಕಾಲ ಮೊದಲೇ ಈ ದಿಶೆಯಲ್ಲಿ ಪ್ರಯತ್ನ ನಡೆದಿದ್ದುದರಿಂದ ಇವರು ಅದಕ್ಕೆ ಪುಷ್ಟಿಯನ್ನೊದಗಿಸಿ ತಮ್ಮ ಭಾವಾಭಿವ್ಯಕ್ತಿಗೆ ಪ್ರಬಲವಾದ ಮಾಧ್ಯಮವನ್ನಾಗಿ ಮಾಡಿಕೊಂಡರು. ಮಾರ್ಗದೊಡನೆ ದೇಸಿಯನ್ನು ಒಡಂಬಡಿಸಿ ತೋರಿದ ಪಂಪನ ತರುವಾಯ ಕನ್ನಡ ಭಾಷೆಯ ಸತ್ವವನ್ನೆಲ್ಲ ತೆರೆದು ತೋರಿ, ಅದರ ಕೃತಕತೆಯನ್ನೆಲ್ಲ ಹೋಗಲಾಡಿಸಿ ಜೀವಂತಿಕೆಯಿಂದ ಕಳಕಳಿಸುವಂತೆ ಮಾಡಿದವರು ಈ ವಚನಕಾರರು. ಅವರು ಕಂಡುಕೊಂಡ ಜೀವನದ ಮೌಲ್ಯಗಳ ನಿರೂಪಣೆಗೂ, ಮಾಡಿದ ಸಾಮಾಜಿಕ ವಿಮರ್ಶೆಗೂ, ಅನುಭಾವದ ಆಳದ ದರ್ಶನಕ್ಕೂ ವಚನ ಶೈಲಿ ಅವರಿಗರಿವಿಲ್ಲದಂತೆಯೇ ಸಹಜವಾಗಿ ಕಾವ್ಯಶಕ್ತಿಯನ್ನೂ ಪಡೆಯಿತು. ಕಾವ್ಯಸೃಷ್ಟಿ ಅವರ ಗುರಿಯಾಗಿರದಿದ್ದರೂ ಅವರ ಬದುಕಿನ ಬಗೆ, ಭಾವದ ಕಾವು, ಅನುಭಾವದ ಚಿತ್ರ ಭಾಷೆಯಲ್ಲಿ ಪುನರ್ನಿರ್ಮಾಣಗೊಂಡುದರಿಂದ ಅನೇಕ ವಚನಗಳು ಸ್ವಯಂ ಕಲಾಕೃತಿಯಾಗಿ ಪರಿಣಮಿಸಿದವು. ಇಲ್ಲಿಯ ಸಹಜವಾದ ಪ್ರಾಸಾನುಪ್ರಾಸ, ಭಾವ, ಲಯ, ಪ್ರಸಾದಗುಣ, ರೂಪಕ ದೃಷ್ಟಾಂತಗಳು, ಆಧ್ಯಾತ್ಮಿಕ ಅನುಭವದ ಪ್ರತೀಕಾತ್ಮಕತೆ, ಕಾಯಕದ ಸಲಿಗೆಯ ಭಾಷೆ – ಇವು ನಮ್ಮ ಹೃದಯದಲ್ಲಿ ಕಾವ್ಯದ ಮುದ್ರೆಯನ್ನೊತ್ತಲು ಸಮರ್ಥವಾಗಿವೆ. ಕಾವ್ಯದ ಭಾಷೆಗೂ ಜನರಾಡುವ ಭಾಷೆಗೂ ಇದ್ದ ಅಂತರವನ್ನು ಹೋಗಲಾಡಿಸಿ /ಅಡುನುಡಿಯನ್ನೇ

ಹಣತೆಯಾಗಿ ಬೆಳಗಿ ಕನ್ನಡ ಸರಸ್ವತಿಗೆ ಲಕ್ಷದೀಪೋತ್ಸವಗೈದರು ವಚನಕಾರರು. ಅವರ ಮಾತು 'ವಚನವೇದ'ವೆನಿಸಿತು; ಅವರ ಆಚರಣೆ 'ವಚನಧರ್ಮ'ವಾಯಿತು. ಈ ಎಲ್ಲ ಶರಣರ ನಡುವೆ ಭಕ್ತಿಭಾಂಡಾರಿ ಬಸವಣ್ಣನವರ ವ್ಯಕ್ತಿತ್ವ ನಿಲುಗನ್ನಡಿಯಾಗಿ ನಿಂತಿತು.

ವಚನ ವಾಙ್ಮಯದಲ್ಲಿ ಬಸವಣ್ಣನವರ ವಚನಗಳಿಗೆ ಮೊದಲೆಡೆ ಮೀಸಲಾಗಿದ್ದರೂ, ಪ್ರಾಚೀನ ವಚನಕಾರನಾದ ದೇವರದಾಸಿಮಯ್ಯನಂಥವರ ವಚನಗಳ ಸ್ಫೂರ್ತಿಯನ್ನು ಅಂಗೀಕರಿಸಿಕೊಂಡೇ ಬಸವಣ್ಣನವರು ತಮ್ಮ ರೀತಿಯಲ್ಲಿ ಅದಕ್ಕೆ ರೂಪುಕೊಟ್ಟರು. 'ಆದ್ಯರ ವಚನ ಪರುಷ ಕಂಡಣ್ಣಾ' ಎಂದು ಮುಂತಾಗಿ ತಮ್ಮ ಹಿಂದಿನ ವಚನಸಾಹಿತ್ಯವನ್ನು ಅವರು ಭಕ್ತಿಪೂರ್ವಕ ನೆನೆದಿರುವರಲ್ಲದೆ ಅದರ ಸವಿಯನ್ನು ಹೀಗೆ ಸೂರೆಗೊಂಡಿದ್ದಾರೆ:

ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು
ತವರಾಜದ ನೊರೆ ತೆರೆಯಂತೆ
ಆದ್ಯರ ವಚನವಿರಲು
ಬೇರೆ ಬಾವಿಯ ತೋಡಿ
ಉಪ್ಪುನೀರುಂಬುವನ ವಿಧಿಯಂತೆ
ಆಯಿತ್ತೆನ್ನ ಮತಿ ಕೂಡಲಸಂಗಮದೇವಾ

ಆದ್ಯರ ವಚನದ ಹಾಲತೊರೆ ಹರಿಯುತ್ತಿದ್ದರೂ ಬಸವಣ್ಣನವರಿಗೆ ತಮ್ಮ ಹೃದಯದ ಬಾವಿಯನ್ನು ತೋಡಿ ಜೀವ ಜಲವನ್ನು ಪಡೆಯುವುದು ಅನಿವಾರ್ಯವಾಯಿತು. ಆದರೆ ಇಲ್ಲಿ ತಮ್ಮ ಮತಿಯ ಬಗ್ಗೆ ಹೇಳಿಕೊಂಡುದು ಅವರ ಸದ್ವಿನಯದ ಲಕ್ಷಣವೇ ಹೊರತು, ವಾಸ್ತವ ಸಂಗತಿಯಲ್ಲ. ಅವರ ಅಂತರಂಗದ ಬಾವಿಯಲ್ಲಿ ಉಕ್ಕಿದ ಸಿಹಿನೀರು ಜನತೆಯ ಬಾಳಿನ ಹೊಸ ತೋಟವನ್ನು ಹಸುರು ಮುರಿಯುವಂತೆ ಮಾಡಿತು. ಅವರ ದೆಸೆಯಿಂದ ಅಸಂಖ್ಯಾತ ಶಿವಶರಣರ ಭಕ್ತಿಗೆ ಬಣ್ಣವೇರಿತು, ಉಕ್ತಿಗೆ ಕಣ್ಣು ಮೂಡಿತು. ಅಂತರಂಗ ಶೋಧನೆ, ಆತ್ಮನಿರೀಕ್ಷಣೆ ಈ ಯುಗದ ಧರ್ಮವೇ ಆಯಿತು. ಯಾವ ಮಾತನ್ನಾದರೂ ಹೃದಯಾಂತರ್ಗತ ಅನುಭವ ಸತ್ಯಕ್ಕೆ ಒರೆಹಚ್ಚದೆ ಅವರು ಮುಂದುವರಿಯಲಿಲ್ಲ.

ಭಕ್ತಿಯ ಓಜೆ, ಕಿಂಕರ ವೃತ್ತಿ ಬಿಂಕದ ಭಾಷೆ, ನಿರ್ಮಲ ರೂಪು, ನೆಚ್ಚಿನ ಕೂರ್ಮೆ, ಶೀತಳ ಶಾಂತಿ – ಇವೇ ಮೊದಲಾದವು ಬಸವಣ್ಣನವರ ವ್ಯಕ್ತಿತ್ವದ ಗುಣವಾಗಿರುವಂತೆ ಅವರ ವಚನಗಳ ಲಕ್ಷಣಗಳೂ ಆಗಿವೆ. ಭಕ್ತಿಯಿಂದ ಮೃದುಗೊಂಡ ಅವರ ಹೃದಯದಲ್ಲಿ ಯಾವ ಮಾತೂ ಹದಗೊಳ್ಳದೆ ಹುಸಿ ಹೋಗುತ್ತಿರಲಿಲ್ಲ. ಭಕ್ತಿಯೆಂಬುದು 'ಗರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು' ಎಂಬ ಪ್ರಾಮಾಣಿಕ ಅನುಭವ ಅವರದಾಗಿದ್ದುದರಿಂದ ಅವರ ನಡೆ–ನುಡಿ, ಆಚಾರ–ವಿಚಾರ, ಶ್ರುತಿ–ಸ್ವಭಾವಗಳಲ್ಲಿ ಸೂಕ್ಷ್ಮದೃಷ್ಟಿ, ಭಾವೋತ್ಕಟತೆ, ವಿಚಾರಪರತೆ ಮುಪ್ಪುರಿಗೊಂಡುದನ್ನು ಅವರ 'ಭಾವದ ಕಾಣ್ಕೆ'ಯಲ್ಲಿ ಕಾಣುತ್ತೇವೆ. 'ಅಕಟಕಟಾ ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ ಪರಲೋಕ ದೂರನ' ಎಂಬ ಆತ್ಮಭಾವದಿಂದ ಮೊದಲ್ಗೊಂಡು 'ಸಮಸ್ತ ಕತ್ತಲೆಯ ಕಳೆದಿಪ್ಪ ಇರವ ನೋಡಾ' ಎಂಬ, 'ಬೆಳಗಿಂಗೆ ಬೆಳಗು ಸಿಂಹಾಸನ'ವಾಗಿರುವ ಅನುಭಾವ ದರ್ಶನದವರೆಗೆ ಅವರು ತಮ್ಮ ಬದುಕಿನ ಕಾವ್ಯವನ್ನು ವಚನಗಳಲ್ಲಿ ಕಂಡರಿಸಿದ್ದಾರೆ. ಸಂಪದ್ಯುಕ್ತವಾದ ಉಪಮೆ–ದೃಷ್ಟಾಂತಗಳು, ರೂಪಕ–ಪ್ರತಿಮೆಗಳು, ಅನುಭಾವದ ಸಾಂಕೇತಿಕ–ನುಡಿಚಿತ್ರಗಳು, ಅನುಭವದ ಕಾವಿನಲ್ಲಿ

ರೂಹುಗೊಂಡ ಸೂಕ್ತಿಗಳು, ನುಡಿಗಟ್ಟುಗಳು, ಕಿಡಿನುಡಿಗಳು, ಗಾದೆ ಮಾತುಗಳು, ಸೂಕ್ಷ್ಮವಾದ ಭಾವಲಯ–ಇವೆಲ್ಲವುಗಳಿಂದ ಬಸವಣ್ಣನವರ ವಚನಗಳ ಕಾವ್ಯ ಸಂಪನ್ನತೆ ಹೆಚ್ಚಿದೆ.

ಕಾವ್ಯಕರ್ಮವೆಲ್ಲ ವಿಶಾಲವಾದ ಅರ್ಥದಲ್ಲಿ ಉಪಮಾನಿಷ್ಠವಾದುದೇ. ಬಸವಣ್ಣನವರ ವಚನಗಳಲ್ಲಿ ಉಪಮೆ ಬರಿ ಹೋಲಿಕೆಯಲ್ಲ; ಕಣ್ಣೆದುರು ಚಿತ್ರವನ್ನು ನಿರ್ಮಿಸುವ ಆಡಿದ ಮಾತಿನ ಭಾವವನ್ನು ಮನಕ್ಕೆ ಮುಟ್ಟಿಸುವ, ಅರ್ಥವನ್ನು ಔಚಿತ್ಯಪೂರ್ಣವಾಗಿ ಬಿಂಬಿಸುವ ಸಾರ್ಥಕ್ಯವನ್ನು ಅದು ಪಡೆದಿದೆ. ನಾವು ಆಡುವ ಮಾತು ಹೇಗಿರಬೇಕು ಎಂಬ ಆದರ್ಶ ನಿರೂಪಣೆಯ ಜೊತೆಗೆ ಒಳ್ಳೆಯ ಸಾಹಿತ್ಯದ ಲಕ್ಷಣವನ್ನೂ ಸೂಚಿಸುವ ಈ ವಚನವನ್ನು ನೋಡಿ:

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯಾ?

ನುಡಿ ಸುಂದರವಾಗಿ, ದೀಪ್ತಿಮಂತವಾಗಿ, ಪಾರದರ್ಶಕವಾಗಿ, ಆತ್ಮಸಾಕ್ಷಿಯಾಗಿ ಒಡಮೂಡಬೇಕೆಂಬ ಭಾವವನ್ನು ಇಲ್ಲಿಯ ಮುತ್ತಿನಹಾರ, ಮಾಣಿಕ್ಯದ ದೀಪ್ತಿ, ಸ್ಫಟಿಕದ ಸಲಾಕೆಯ ಚಿಕ್ಕ ಚಿಕ್ಕ ಪ್ರತಿಮೆಗಳು ಅರ್ಥಗೌರವವನ್ನು ಹೆಚ್ಚಿಸುತ್ತ ಮೂಲಭಾವಕ್ಕೆ ದೀಪಸ್ತಂಭವಾಗಿ ನಿಂತಿವೆ. ಪರಮ ಸತ್ಯದ ಸಂಕೇತವಾದ ಲಿಂಗ ಮೆಚ್ಚುವಂತಿರುವ ನುಡಿ ಸಾರ್ಥಕವಾಗುವದು, ನಡೆಯಲ್ಲಿ ಅದನ್ನು ಬಿಂಬಿಸಿದಾಗ ಎಂಬ ಬಸವಣ್ಣನವರ ಬದುಕಿನ ಸೂತ್ರದಲ್ಲಿ ಈ ವಚನ ಕೊನೆಗೊಳ್ಳುತ್ತದೆ.

ಹೀಗೆ ಒಂದು ಭಾವವನ್ನು ಸಮಗ್ರವಾಗಿ ಉಪಮೆಗಳ ಮೂಲಕ ಮಾರ್ಮಿಕವಾಗಿ ಮೂಡಿಸಿದಂತೆ ಬಿಡಿಬಿಡಿಯಾಗಿಯೂ ಉಪಮೆ–ರೂಪಕಗಳು ಅವರ ವಚನಗಳಲ್ಲಿ ಕಿಡಿ ಕೆತ್ತಿರುವುದುನ್ನು ಕಾಣುತ್ತೇವೆ. ತಮ್ಮ ಮನಸ್ಸನ್ನು ಅರೆದು, ಒರೆದು, ಹಿಂಜಿ, ಹಿಡಿದು ನೋಡಿಕೊಂಡು ಅದನ್ನು ಪ್ರಾಮಾಣಿಕವಾಗಿ ನಿರೂಪಿಸುವಾಗ ಅತ್ಯಂತ ಪರಿಣಾಮಕಾರಿಯಾಗಿ ಅವು ನಮ್ಮ ಹೃದಯವನ್ನು ಮುಟ್ಟುತ್ತವೆ: 'ಅಂದಣವನೇರಿದ ಸೊಣಗದಂತೆ' ತನ್ನ ಮುನ್ನಿನ ಸ್ವಭಾವವನ್ನು ಬಿಡದ ಮನಸ್ಸು, 'ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ' ನಮ್ಮ ಇರುವಿಕೆಯ ಸ್ಥಿತಿ, 'ಹೊತ್ತಿಗೊಂದು ಪರಿಯಲ್ಲ ಗೋಸುಂಬೆಯಂತೆ' ಅದರ ಬಣ್ಣ ಬದಲಿಸುವ ಚಿತ್ರ; 'ಕಂಬಳಿಯಲ್ಲಿ ಕಣಕವ ನಾದಿದಂತೆ' ಗುಂಜುಗಟ್ಟಿದ ಅದರ ತೊಡಕು ಸಂಕೀರ್ಣತೆ; 'ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ' ನುಗ್ಗುವ ಕಾಯವಿಕಾರ, ಮನೋವಿಕಾರಗಳು; 'ಓಡಲಾರದ ಮೃಗವು ಸೊಣಗಗೆ ಮಾಂಸವ ಕೊಡುವಂತೆ' ಸಹಜವಿಲ್ಲದ ಭಕ್ತಿ; 'ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯುವ' ಜೀವನದ ಕರುಣಾಜನಕ ಸ್ಥಿತಿ; 'ಸಮುದ್ರದೊಳಗಣ ಸಿಂಪಿನಂತೆ' ಬಾಯ ಬಿಡುವ, 'ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ' ಅಂಬೆ ಎಂದು ಕರೆಯುವ ಹೃದಯದ ಆರ್ತಭಾವ; 'ಬೀಗಿ ಬೆಳೆದ ಗೊನೆವಾಳೆಯಂತೆ' ಬಾಗುವ ಸತ್ವಪೂರ್ಣವಾದ ವಿನಯದ ಸಮರ್ಪಣ ಭಾವ–ಹೀಗೆ

ಬಸವಣ್ಣನವರ ಉಪಮಾಲೋಕ–ಒಂದು ಅದ್ಭುತವಾದ ಚಿತ್ರಸೃಷ್ಟಿ. ಅವುಗಳ ವಾಸ್ತವತೆಯನ್ನೂ ವೈವಿಧ್ಯವನ್ನೂ ವೇಧಕತೆಯನ್ನೂ ನೋಡಿದರೆ ಅವರ ಕವಿಹೃದಯದ ಕೆಚ್ಚು, ಕುದಿ, ಕರುಣೆಯ ಜೀವಂತಸ್ಪರ್ಶವನ್ನು ಪಡೆದಂತಾಗುತ್ತದೆ.

ವಚನಗಳಲ್ಲಿ ದೃಷ್ಟಾಂತಗಳು ಮತತತ್ವ ಪ್ರತಿಪಾದನೆಗೂ ಕಾವ್ಯಮಯ ನಿರೂಪಣೆಗೂ ಏಕರೀತಿಯಾಗಿ ಪುಷ್ಟಿಯನ್ನೊದಗಿಸಿರುವುದನ್ನು ನೋಡಬಹುದು. ನಿಸರ್ಗದಿಂದ, ಪುರಾಣಗಳಿಂದ, ಪಶು–ಪಕ್ಷಿಗಳ ಜೀವನದಿಂದ, ಸುತ್ತುಮುತ್ತಿನ ವಾಸ್ತವ ಜೀವನದಿಂದ–ಈ ದೃಷ್ಟಾಂತಗಳು ರೂಪುಗೊಂಡಿವೆ. 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' ಎಂಬಂತಹ ವಚನಗಳಲ್ಲಿ ಅವು ಒಡಪಿನ ಅಂದವನ್ನು ಪಡೆದಿದ್ದರೆ, 'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ' ಎಂಬ ವಚನದಲ್ಲಿ ತರ್ಕಪೂರ್ಣವಾದ, ತೂಕಬದ್ಧವಾದ ವಿಚಾರಸರಣಿಯನ್ನು ನಿರೂಪಿಸುತ್ತವೆ. ನಿತ್ಯಜೀವನದ ಸಾಮಾನ್ಯ ಘಟನೆಗಳಲ್ಲಿಯೂ ಕಾವ್ಯಾಂಶವನ್ನು ಕಾಣುವ ಮತ್ತು ಅದಕ್ಕೆ ಮಾತಿನಲ್ಲಿ ಮೂರ್ತಸ್ವರೂಪವನ್ನು ಕೊಡುವ ಕಲೆಯನ್ನಿವರ ವಚನಗಳಲ್ಲಿ ಹೆಜ್ಜೆ ಹೆಜ್ಜೆಗೆ ಕಾಣುತ್ತೇವೆ:

ಕಾಗೆಯೊಂದಗುಳ ಕಂಡರೆ ಕರೆಯದೆ
ತನ್ನ ಬಳಗವನು?
ಕೋಳಿಯೊಂದು ಕುಟುಕ ಕಂಡರೆ
ಕೂಗಿ ಕರೆಯದೆ ತನ್ನ ಕುಲವೆಲ್ಲವ
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ!

ವಿಧಿರೂಪಕವಾಗಿರದೆ ಪ್ರಶ್ನಾರ್ಥಕವಾಗಿರುವ ಇಲ್ಲಿನ ಮಾತು ವ್ಯತಿರೇಕ ದೃಷ್ಟಾಂತದ ಮೂಲಕ ವ್ಯಂಗ್ಯಾಂಶವನ್ನು ಸೂಚಿಸುತ್ತ ಭಾವವನ್ನು ಬಲಗೊಳಿಸುತ್ತದೆ. ಒಂದರಮೇಲೊಂದು ದೃಷ್ಟಾಂತವನ್ನಿಟ್ಟು ಭಾವವನ್ನು ಇನ್ನಷ್ಟು ಖಚಿತಗೊಳಿಸುತ್ತವೆ 'ಮಡಕೆಯ ಮಾಡುವರೆ ಮಣ್ಣೇ ಮೊದಲು' ಎಂಬಂತಹ ವಚನಗಳು. ಶರಣರ ಒಳಹೊರಗನ್ನು ಚಿತ್ರಿಸುವ 'ಹಾವಿನ ಡೊಂಕು ಹುತ್ತಕ್ಕೆ ಸಸಿನ, ನದಿಯ ಡೊಂಕು ಸಮುದ್ರಕ್ಕೆ ಸಸಿನ' ಎಂಬ ಮಾತಿನಲ್ಲಿ ದೃಷ್ಟಾಂತ ಪ್ರತಿಮಾರೂಪದಲ್ಲಿ ಭಾವವನ್ನು ಭಟ್ಟಿ ಇಳಿಸುತ್ತದೆ. ನಿಜದ ಹಿನ್ನೆಲೆಯನ್ನರಿಯದ ಆಚರಣೆ ಬರಿ ಬಳಲಿಕೆಯಾಗಿ ಪರಿಣಮಿಸುವದನ್ನೂ ಆತ್ಮದ ಅಲಿಪ್ತತೆಯನ್ನೂ ಸೂಚಿಸುವ ಈ ನಿದರ್ಶನ:

ಅಳೆಯುತ್ತ ಅಳೆಯುತ್ತ ಬಳಲುವರಲ್ಲದೆ
ಕೊಳಗ ಬಳಲುವದೆ?
ನಡೆಯುತ್ತ ನಡೆಯುತ್ತ ಬಳಲುವರಲ್ಲದೆ
ಬಟ್ಟೆ ಬಳಲುವದೆ?
ಶ್ರವವಮಾಡುತ್ತ ಮಾಡುತ್ತ ಬಳಲುವರಲ್ಲದೆ
ಕೋಲು ಬಳಲುವದೆ?
ನಿಜವನರಿಯದ ಭಕ್ತ ಬಳಲುವನಲ್ಲದೆ
ಲಿಂಗ ಬಳಲುವದೆ?

ಸಾಮಾನ್ಯವಾಗಿ ದೋಷವೆನಿಸಬಹುದಾದ ಪುನರುಕ್ತಿ ಇಲ್ಲಿ ಕ್ರಿಯೆಯ ಸಾಹಿತ್ಯವನ್ನು

ಸೂಚಿಸಿ ಗುಣವೆನಿಸಿದೆ. ಭಾವಬುದ್ಧಿಯ ಈ ಸಂಗಮದಲ್ಲಿ ಕಾವ್ಯ ಸುಳುಹುದೋರುವದನ್ನು ಕಾಣುತ್ತೇವೆ.

ಭಾವ–ಭಾಷೆಯ ಅನ್ಯೋನ್ಯ ಹೊಂದಿಕೆ, ಸಾಮರಸ್ಯ ಬಸವಣ್ಣನವರ ವಚನಗಳ ವೈಶಿಷ್ಟ್ಯವಾಗಿದೆ. ಅಂತೆಯೇ ಅವರ ರೂಪಕನಿರ್ಮಾಣಶಕ್ತಿ ನಮ್ಮನ್ನು ಬೆರಗುಗೊಳಿಸುತ್ತದೆ. ಭಾವತೀವ್ರತೆಯನ್ನೊಳಗೊಂಡ ಪೂರ್ಣ ರೂಪಕಗಳು ವಚನ ಶಿಲ್ಪವನ್ನು ಬಂಧುರಗೊಳಿಸಿವೆ. ಅದಕ್ಕೆ ಮುಂದಿನ ವಚನ ಅತ್ಯುತ್ತಮ ಉದಾಹರಣೆ:

ವಿಷಯವೆಂಬ ಹಸುರನೆನ್ನ ಮುಂದೆ ತಂದು
ಪಸರಿಸಿದೆಯಯ್ಯಾ
ಪಶುವೇನ ಬಲ್ಲುದು? ಹಸುರೆಂದೆಳಸುವದು
ವಿಷಯರಹಿತನ ಮಾಡಿ ಭಕ್ತಿರಸವ
ದಣಿಯೆ ಮೇಯಿಸಿ
ಸುಬುದ್ಧಿಯೆಂಬುದಕವನೆರೆದು
ನೋಡಿ ಸಲಹಯ್ಯಾ ಕೂಡಲಸಂಗಮದೇವಾ.

ಜನಜೀವನಕ್ಕೆ ಪರಿಚಿತವಾದ ಸಂಗತಿಯನ್ನೆತ್ತಿಕೊಂಡು ಅದಕ್ಕೆ ಕಾವ್ಯರೂಪವನ್ನು ನೀಡಿ ಅನುಭವವನ್ನು ಎರಕಹೊಯ್ಯುವ ಬಸವಣ್ಣನವರ ರೀತಿಯಿದು. ವಿಷಯವೆಂಬ ಹಸುರು ಕಣ್ಣಮುಂದೆ ಹರಡಿದೆ, ಮುಗ್ಧವಾದ ಹಸು ಏನೂ ವಿಚಾರಮಾಡದೆ ಅದನ್ನು ಗಪಗಪ ತಿನ್ನುತ್ತದೆ. ಜೀವನದ ಮುಗ್ಧತೆ, ಅಸಹಾಯಕತೆ, ವಾಸನಾಬಲ ಇವುಗಳನ್ನು 'ಪಶುವೇನಬಲ್ಲುದು, ಹಸುರೆಂದೆಳಸುವದು' ಎಂಬ ಸಾಲು ಸಮರ್ಥವಾಗಿ ಹೊಮ್ಮಿಸುತ್ತದೆ. ಮುಂದಿನ ಸಾಲುಗಳಲ್ಲಿ 'ಹಸು' ಭಕ್ತಿಜೀವವಾಗಿ ಮಾರ್ಪಟ್ಟು ಭಕ್ತಿರಸವನ್ನ, ಸುಬುದ್ಧಿ ಎಂಬ ನೀರನ್ನೂ ಬಯಸಿ ಮೊರೆಯಿಡುತ್ತದೆ. ಇಡಿಯ ವಚನದ ತುಂಬ 'ಸ' ಕಾರದ ಪ್ರಾಸಾನುಪ್ರಾಸ ಸಂಪದ್ಯುಕ್ತವಾಗಿ ಭಾವವನ್ನು ಸೂಸಿಸೂಸಿ ಹೊರಹೊಮ್ಮಿಸುವ ರೀತಿ ಅನ್ಯಾದೃಶವಾದುದು. ಮೊದಲ ಸಾಲಿನಲ್ಲಿಯ 'ಪಸರಿಸಿದೆಯಯ್ಯಾ' ಎಂಬ ಪದವಂತೂ ಹಸುವಿನ ಮುಂದೆ ಹುಲ್ಲನ್ನು ಕೊಡವಿ ಚೆಲ್ಲುವ ಕ್ರಿಯೆಯನ್ನು ಅಭಿನಯಿಸಿ ತೋರಿಸುತ್ತದೆ. ಮುಂದಿನ ಸಾಲುಗಳಲ್ಲಿಯ 'ಮಾಡಿ' 'ಮೇಯಿಸಿ' 'ಎರೆದು' 'ನೋಡಿ' ಎಂಬ ಪದಗಳಲ್ಲಿಯ ಸಲಿಗೆಯ ಬಿನ್ನಹ ಮೊದಲಿನ ಆರೋಪ ಭಾವದ ಪರಿವರ್ತನೆಯನ್ನು ಸುಂದರವಾಗಿ ಸೂಚಿಸುತ್ತದೆ. 'ನೋಡಿ ಸಲಹಯ್ಯಾ' ಎಂಬ ನುಡಿಗಟ್ಟಿನಲ್ಲಿಯ 'ಕಾಕು' ಇಡಿಯ ವಚನದ ಭಾವ ಅರ್ಥಭಾರದಿಂದ ಬಳುಕುವಂತೆ ಮಾಡುತ್ತದೆ. ಇಂಥ ವಚನಗಳಲ್ಲಿ ಬಸವಣ್ಣನವರ ಕಾವ್ಯಶಕ್ತಿಯ ಪರಿಪೂರ್ಣ ಸಿದ್ಧಿಯನ್ನು ಕಾಣುತ್ತೇವೆ.

ಆತ್ಮಶುದ್ಧಿಯ ಹಂಬಲ, ಚಿನ್ನವನ್ನು ಕರಗಿಸಿ ಚೊಕ್ಕಗೊಳಿಸಿ ಶರಣರ ಪಾದಕ್ಕೆ ತೊಡಿಗೆಯಾಗುವವರೆಗಿನ ಕ್ರಿಯೆಗಳಿಂದ 'ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ' ಎಂಬ ವಚನದ ರೂಪಕದಲ್ಲಿ ಸಮರ್ಥವಾಗಿ ಒಡಮೂಡಿದೆ. ಬಸವಣ್ಣನವರ ಸರ್ವಸಮರ್ಪಣಭಾವದ ತೀವ್ರತೆಯನ್ನು ಮುಂದಿನ ವಚನ ವೀಣೆಯ ರೂಪಕದಲ್ಲಿ ಶ್ರೀಮಂತವಾಗಿ ಹಿಡಿದಿಟ್ಟಿದೆ:

ಎನ್ನ ಕಾಯವ ದಂಡಿಗೆ ಮಾಡಯ್ಯ
ಎನ್ನ ಶಿರವ ಸೋರೆ ಮಾಡಯ್ಯ

ಎನ್ನ ನರವ ತಂತಿಯ ಮಾಡಯ್ಯಾ
ಎನ್ನ ಬೆರಳ ಕಡ್ಡಿಯ ಮಾಡಯ್ಯಾ
ಬತ್ತೀಸ ರಾಗವ ಹಾಡಯ್ಯಾ
ಉರದಲೊತ್ತಿ ಬಾರಿಸು
ಕೂಡಲಸಂಗಮದೇವಾ.

ತಮ್ಮ ದೇಹವನ್ನು ಕೊಳಲು ಮಾಡುವ ಕೇಳಿಕೊಂಡ ಕವಿಗಳುಂಟು. ಬಸವಣ್ಣನವರು ತಮ್ಮನ್ನು ವೀಣೆಯನ್ನಾಗಿ ಸಮರ್ಪಿಸಿಕೊಳ್ಳುವ ಈ ರೂಪಕ ಔಚಿತ್ಯಪೂರ್ಣವಾದದ್ದು. ಇಲ್ಲಿಯ ಭಾವವೂ ರಕ್ತ ಮಾಂಸದಿಂದ ಕೂಡಿಕೊಂಡು ಜೀವಂತವಾಗಿ, ಸಾಲುಸಾಲಿಗೂ ಜೀವನಾದವನ್ನು ಮಿಡಿಯುತ್ತದೆ. ದೇಹದ ಒಂದೊಂದು ಅವಯವವೂ ವೀಣೆಯ ಬೇರೆ ಬೇರೆ ಭಾಗಗಳಿಗೆ ಸಮನ್ವಯಗೊಳ್ಳುವ ಈ ಸಮಸ್ತವಸ್ತುವಿಷಯರೂಪಕ ಹೆಚ್ಚಿನ ಸಾರ್ಥಕ್ಯವನ್ನು ಪಡೆದಿದೆ. 'ಉರದಲೊತ್ತಿ ಬಾರಿಸು' ಎನ್ನುವಲ್ಲಿಯ ಅವಧಾರಣೆ ಗಮನಾರ್ಹ; ಸಂಗಮದೇವ ಈ ವೀಣೆಯನ್ನು ಎದೆಗವಚಿ ತನ್ನದನ್ನಾಗಿ ಮಾಡಿಕೊಂಡು ಅದನ್ನು ಮಿಡಿಯುತ್ತ ಹಾಡಬೇಕೆಂಬ ಸಮರ್ಪಣಭಾವ ಇಲ್ಲಿಯ ಪ್ರತಿಯೊಂದು ವಿವರದಲ್ಲಿಯೂ ತುಂಬಿ ಸಜೀವವಾಗಿ ಅಭಿವ್ಯಕ್ತಿಪಡೆದಿದೆ.

ಹಲವು ಸಲ ಬಸವಣ್ಣನವರ ಭಾವ ನಿರೂಪಣೆಯ ನಿರಾಭರಣ ಸೌಂದರ್ಯವೇ ಕಾವ್ಯವಾಗುವ ಸೋಜಿಗವನ್ನು ನೋಡಬಹುದು. ಅವರ ಒಳದನಿ ಹೇಗೆ ಶುದ್ಧಕಾವ್ಯಧ್ವನಿಯನ್ನೇ ಹೊತ್ತುಕೊಂಡು ಹೊರಬರುತ್ತದೆ ನೋಡಿ:

ಎಲ್ಲ ಗಂಡಸರ ಪರಿಯಂತಲ್ಲ ನೋಡವ್ವಾ
ನಮ್ಮ ನಲ್ಲ ಸುಳಿಯಲಿಲ್ಲ;
ಸುಳಿದು ಸಿಂಗಾರವ ಮಾಡಲಿಲ್ಲ,
ಕೂಡಲಸಂಗಮದೇವ
ತನ್ನೊಳಗೆ ಬೈಚಿಟ್ಟನಾಗಿ

ವಿಭೂತಿಯನ್ನು ಪೂಸಿ, ರುದ್ರಾಕ್ಷಿಯನ್ನು ಕಟ್ಟಿ, ಶಿವನ ಒಲವಿಲ್ಲದಂತಾದಾಗಿನ ಸ್ಥಿತಿ 'ಅರಿಸಿನವನೆ ಮಿಂದು ಹೊಂದುಡಿಗೆಯನೆ ತೊಟ್ಟು ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ? ಎಂಬ ಪ್ರತಿಮೆಯಲ್ಲಿ ತಿರುಳ್ಗೊಂಡು ನಿಂತಿದೆ.

ಹೀಗೆ ಪ್ರತೀಕಗಳೂ ಪ್ರತಿಮೆಗೂ ಹದವರಿತು ಒದಗಿಬಂದು ವಚನಗಳ ಕಾವ್ಯಗುಣವನ್ನು ಹೆಚ್ಚಿಸಿವೆ:

ಹುತ್ತವ ಬಡಿದೊಡೆ
ಹಾವು ಸಾಯಬಲ್ಲುದೇ ಅಯ್ಯಾ?
ಅಘೋರ ತಪವ ಮಾಡಿದೊಡೇನು?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು
ನಂಬುವನಯ್ಯಾ ಕೂಡಲಸಂಗಮದೇವಾ.

ಮನದಲ್ಲಿ ವಿಕಾರವನ್ನು ಹುದುಗಿಸಿ ಬರೀ ದೇಹದಂಡನೆ ಎಷ್ಟೊಂದು ವ್ಯರ್ಥ ಎಂಬ ಭಾವವನ್ನು ಹುತ್ತ-ಹಾವಿನ ಪ್ರತೀಕದಲ್ಲಿ ಸ್ಫುಟಗೊಳಿಸಲಾಗಿದೆ. ಅದೇ 'ಹುತ್ತ'ದ ಪ್ರತೀಕ ಅಘೋರ ತಪಸ್ಸಿಗೂ ಸಂಕೇತವಾಗಿ ನಿರೂಪಣೆಯ ಸಂಗ್ರಹಶಕ್ತಿಯನ್ನು ಚೆನ್ನಾಗಿ

ವ್ಯಕ್ತಗೊಳಿಸಿದೆ. ಅವರ ಆತ್ಮವಿಮರ್ಶೆ, 'ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?' ಎಂಬ ವಚನದ ಪ್ರತೀಕದಲ್ಲಿ ಸಂದೇಹಭಾವದಿಂದ ನಿಶ್ಚಿತಕ್ಕೆ ನಿಲುಕುವ ನಾಟಕೀಯತೆಯಿಂದ ಅತ್ಯಂತ ಯಶಸ್ವಿ ಚಿತ್ರಣವಾಗಿದೆ. ಜೀವಭಾವ ಶರಣಭಾವಕ್ಕಾಗಿ ಕಾತರಿಸುವ ಸ್ಥಿತಿಯನ್ನು 'ಗಿಳಿಯ ಪಂಜರವಿಕ್ಕಿ ಸೊಡರಿಂಗೆಣ್ಣೆಯ ನೆರೆದು ಬತ್ತಿಯನಿಕ್ಕಿ ಬರುವ ಹಾರುತ್ತಿರು'ವ ಗೃಹಣಿಯ ಪ್ರತಿಮಾ ವಿಧಾನದಲ್ಲಿ ಸುಂದರವಾಗಿ ಕಂಡರಿಸಲಾಗಿದೆ. ಹೀಗೆ ಕಿರಿದರಲ್ಲಿ ಹಿರಿದಾದ ಅರ್ಥವನ್ನೂ, ಭಾವದೀಪ್ತಿಯನ್ನೂ ಬೆಳಗುವ ಹಲವಾರು ಪ್ರತಿಮೆಗಳು ವಚನಗಳಲ್ಲಿ ರೂಪುಗೊಂಡಿದ್ದು ಬಸವಣ್ಣನವರ ಕಾವ್ಯಸೃಷ್ಟಿಯ ಹಾಗೂ ಕಲಾಸೃಷ್ಟಿಯ ಮೇಲ್ಮೆಯನ್ನು ಎತ್ತಿ ತೋರಿಸುತ್ತಿವೆ.

ಬಸವಣ್ಣನವರು ತಮ್ಮ ಶಬ್ದಕುಂಚದ ಮಿತವಾದ ಗೆರೆಗಳಿಂದ, ಭಾವ ಸೂಕ್ಷ್ಮತೆಯ ಬಣ್ಣದಿಂದ ಎಂಥ ಉಜ್ವಲಚಿತ್ರವನ್ನು ಬರೆಯಬಲ್ಲರು ಎಂಬುದಕ್ಕೆ ಮುಂದಿನ ವಚನವೇ ಸಾಕು:

ನೆರೆ ಕೆನ್ನೆಗೆ, ತೆರೆ ಗಲ್ಲಕೆ
ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ ಬೆನ್ನು ಬಾಗಿ.
ಅನ್ಯರಿಗೆ ಹಂಗಾಗದ ಮುನ್ನ
ಕಾಲ ಮೇಲೆ ಕೈಯನೂರಿ
ಕೋಲ ಹಿಡಿಯದ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ
ಮೃತ್ಯು ಮುಟ್ಟದ ಮುನ್ನ
ಪೂಜಿಸು ನಮ್ಮ ಕೂಡಲಸಂಗಮದೇವನ.

ಪ್ರತಿಯೊಂದು ವಿವರವನ್ನೂ ಸಜೀವಗೊಳಿಸಿ ಮುಪ್ಪಾವಸ್ಥೆಯ ಕರುಣಾಜನಕ ಚಿತ್ರ ಕಣ್ಣಮುಂದೆ ಕಟ್ಟುವಂತೆ ಮಾಡುವ ಶಕ್ತಿ ಇಲ್ಲಿಯ ಪದಗಳಲ್ಲಿದೆ. 'ಕಾಲ ಮೇಲೆ ಕೈಯನೂರಿ ಕೋಲ ಹಿಡಿ'ಯುವಂಥ ಸೂಕ್ಷ್ಮಗ್ರಾಹಿಯಾದ ಸ್ವಭಾವೋಕ್ತಿ ಅನ್ಯಾದೃಶವಾಗಿ ಮೂಡಿದೆ. ಮುಟ್ಟಿದರೆ ಸಾಕು ಈ ಜೀರ್ಣ ಶರೀರ ಕಡಿದುಕೊಂಡು ಬೀಳುತ್ತದೆ. ಅದಕ್ಕಾಗಿ 'ಮೃತ್ಯು ಮುಟ್ಟದ ಮುನ್ನ' ಎಂಬ ಸಾರ್ಥಕ ಪ್ರಯೋಗ. ಇಂಥ ಸ್ಥಿತಿ ಒದಗುವ ಮೊದಲೇ ದೇವನನ್ನು ಪೂಜಿಸು ಎಂಬ ಉಕ್ತಿಯನ್ನು ಈ ವಚನದ ಚಿತ್ರವೇ ಪ್ರತಿಯೊಂದು ಗೆರೆಯಲ್ಲಿ ಒಡನುಡಿಯುವಂತಿದೆ. ಬಸವಣ್ಣನವರ ಬಾಳಿನ ಸೂಕ್ಷ್ಮ ನಿರೀಕ್ಷಣೆ, ಹಾಗೂ ಅದು ಭಾವಕ್ಕೆ ತಕ್ಕ ಭಾಷೆಯಲ್ಲಿ ಅಭಿವ್ಯಕ್ತಿಗೊಳ್ಳುವ ರೀತಿ ಇಂಥ ಸಂದರ್ಭಗಳಲ್ಲಿ ಅತ್ಯಂತ ಮೇಲ್ಮಟ್ಟದ್ದಾಗಿ ಕಂಗೊಳಿಸುತ್ತದೆ.

ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಶ್ಲೇಷೆ ಸಹಜವೂ ಅರ್ಥಪುಷ್ಟಿಯ ನ್ನೊದಗಿಸುವಂಥದೂ ಆಗಿದೆ. 'ಕೂಡಲಸಂಗಮದೇವ ಬರಿಯುದಕದಲ್ಲಿ ನೆನೆವನೆ?' ಎಂಬಲ್ಲಿ 'ನೆನೆ' ಪದದ ದ್ವಂದ್ವಾರ್ಥ ಬಂಡಿತುಂಬ ಪತ್ರೆಯ ತಂದು ಕಂಡಕಂಡಲ್ಲಿ ಮಜ್ಜನಕ್ಕೆರೆವವರನ್ನು ವಿಡಂಬಿಸುವಲ್ಲಿ ಅರ್ಥಪುಷ್ಟಿಯನ್ನೊದಗಿಸಿದೆ. 'ಐದು ಮಾನವ ಕುಟ್ಟಿ ಒಂದು ಮಾನವ ಮಾಡು ಕಂಡಾ ಮದವಳಿಗೆ' ಎಂಬ ವಚನದಲ್ಲಿ 'ಐದುಮಾನ' (೧. ಒಂದು ಅಳತೆ, ೨. ಏಕಾಗ್ರಚಿತ್ತ) 'ಮದವಳಿಗೆ' (೧. ಮದವಣಗಿತ್ತಿ, ೨. ಅಹಂಕಾರವಳಿಯಲಿ) ಈ

ಪದಗಳ ಶ್ಲೇಷೆಯ ಹಿತವಾದ ಬಳಕೆ ಈ ವಚನದ ಅರ್ಥ ಸ್ವಾರಸ್ಯವಾಗಿ ಸೂಚ್ಯವಾಗಿ ಇಮ್ಮಡಿಸಿದೆ. ಮುಂದಿನ ವಚನದಲ್ಲಿ ಅದೇ ಗುಣ ವ್ಯಂಗ್ಯ ಧೋರಣೆಯನ್ನನುಸರಿಸಿ ಹೇಗೆ ಪರಿಣಾಮಕಾರಿಯಾಗಿದೆ ನೋಡಿ:

ತೊರೆಯ ಮೀವಣ್ಣಗಳಿರಾ
ತೊರೆಯ ಮೀವ ಸ್ವಾಮಿಗಳಿರಾ
ತೊರೆಯಿಂಭೋ, ತೊರೆಯಿಂಭೋ!
ಪರನಾರಿಯ ಸಂಗವ ತೊರೆಯಿಂಭೋ!
ಪರಧನದಾಮಿಷವ ತೊರೆಯಿಂಭೋ!
ಇವ ತೊರೆಯದೆ ಹೋಗಿ
ತೊರೆಯ ಮಿಂದರೆ
ಬರುದೊರೆ ಹೋಹುದು ಕೂಡಲಸಂಗಮದೇವಾ!

'ತೊರೆ' ('ಬಿಡು' 'ನದಿ') ಪದವನ್ನು ನಾಮ ಮತ್ತು ಕ್ರಿಯಾರೂಪದಲ್ಲಿ ಬಳಸಿರುವುದಲ್ಲದೆ: 'ಅಣ್ಣಗಳಿರಾ' 'ಸ್ವಾಮಿಗಳಿರಾ' 'ತೊರೆಯಿಂಭೋ' ಎಂಬ ಸಂಬೋಧನೆಯ ರೀತಿ–ಇಡಿಯ ವಚನವನ್ನೇ ವ್ಯಂಗ್ಯದ ಧಾಟಿಯಲ್ಲಿ ನಡೆಸಿಕೊಂಡು ಹೋಗಿ ತೀಕ್ಷ್ಣವಾದ ಪರಿಣಾಮವನ್ನು ಬೀರುತ್ತದೆ.

ಸಲ್ಲದ ಆಚಾರ, ರೀತಿ ನಡಾವಳಿಗಳನ್ನೂ ಮೂಢಭಾವನೆಗಳನ್ನೂ ಖಂಡಿಸುವಾಗ ಬಸವಣ್ಣನವರ ಮಾತು ಇನ್ನಿಷ್ಟು ಹರಿತಗೊಳ್ಳುತ್ತದೆ. ಭಾಷೆಯಲ್ಲಿ ಸೂಕ್ಷ್ಮವಾದ ವಿಡಂಬನೆ ಮೈದಾಳುತ್ತದೆ. 'ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು ಮೂಗ ಹಿಡಿದು ಧ್ಯಾನವ ಮಾಡುವವರ'ನ್ನು ಕಣ್ಣೆದುರು ನಿಲ್ಲಿಸುತ್ತಾರೆ. 'ಅರಗು ತಿಂದು ಕರಗುವ ದೈವ, ಉರಿಯ ಕಂಡರೆ ಮುರುಟುವ ದೈವ, ಅವಸರ, ಬಂದರೆ ಮಾರುವ ದೈವ ಅಂಜಿಕೆಯಾದರೆ ಹೂಳುವ ದೈವ'ಗಳನ್ನು ಬಯಲಿಗೆಳೆಯುತ್ತಾರೆ. 'ಆಗಲೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪ ಕೆಲವು ದೈವಂಗಳ'ನ್ನು ವಿಡಂಬಿಸುತ್ತಾರೆ. 'ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ'ಯಾಗಿ ವರ್ತಿಸುವವರನ್ನೂ, ಸತ್ಯದ ನಿಲವನರಿಯದೆ 'ಅಹಂಕಾರವೆಂಬ ಮದಗಜವೇರಿ ವಿಧಿಗೆ ಗುರಿಯಾಗಿ ಹೋದ'ವರನ್ನೂ ಕಂಡು ಕನಿಕರಿಸುತ್ತಾರೆ.

ಭಾವೋತ್ಕಟತೆಯಂತೆಯೇ ಅನುಭವದ ಆಳದಿಂದ ಮೂಡಿಬರುವ ಅವರ ಸೂಕ್ತಿಗಳು ವಚನಗಳಲ್ಲಿ ಬೆರಸಿ ಬೇರಿಲ್ಲದಂತೆ ರೂಪುಗೊಂಡಿವೆ. ಅವು ಸಂಕ್ಷಿಪ್ತವಾಗಿಯೂ ಸಾರವತ್ತಾಗಿಯೂ ಆಯಾ ಸಂದರ್ಭದ ಅರ್ಥವಂತಿಕೆಯನ್ನೂ ರಸವಂತಿಕೆಯನ್ನೂ ಹೆಚ್ಚಿಸುತ್ತವೆ. 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ;, 'ಗರಿ ತೋರೆ ಗಂಡರೆಂಬಿವರ ಕಾಣೆ ನಿರಿ ಸೋಂಕಲು ಮುನಿಯಿಲ್ಲ ನೋಡಯ್ಯ', 'ಕಲಿಯ ಕೈಯ ಕೈದುವಿನಂತಿರಬೇಕು', 'ವೀರನಾದರೆ ವೈರಿಗಳು ಮೆಚ್ಚಬೇಕು', 'ನೆರಹಿ ಮಾಡುವದು ಡಂಬಿನ ಭಕ್ತಿ', 'ಮಾಲೆಗಾರನ ಕೇಳಿ ನನೆಯರಳುವದೆ?' ಇತ್ಯಾದಿ ನಾನಾ ಸಂದರ್ಭಗಳಲ್ಲಿ ಮೂಡಿದ ಇಂಥ ನೂರಾರು ನುಡಿಗಳಲ್ಲಿ ಭಾವ–ಅನುಭವ ಘನೀಭೂತವಾಗಿ ನಿಂತಿದೆ.

ಬಸವಣ್ಣನವರು ಜನವಾಣಿಯಿಂದ ಪಡೆದ ಕಾಣಿಕೆಗಳಲ್ಲಿ ಗಾದೆಮಾತಿನ ಪ್ರಯೋಗವೂ ಒಂದು ಮಹತ್ವದ ಅಂಶವಾಗಿದೆ. ಆಗ ಪ್ರಚಲಿತವಿದ್ದ ಗಾದೆಗಳನ್ನು ಅನುವರಿತು ಅರ್ಥಪೂರ್ಣವಾಗಿ ಬಳಸಿದ ಬಸವಣ್ಣನವರ ವಚನ ಶೈಲಿ ಕಳೆಗೊಂಡಿದೆ. 'ಓಡುವಾತ

ಲೆಂಕನಲ್ಲ, ಬೇಡುವಾತ ಭಕ್ತನಲ್ಲ' 'ಬೆರಣಿಯನಾಯಲಿಲ್ಲದೆ ಅಟ್ಟುಣ್ಣ ತೆರಹಿಲ್ಲ', 'ಹಗಹದಲ್ಲಿ ಬಿದ್ದವರ ಮೇಲೆ ಒರಳನೂಂಕುವರೆ?' 'ನಡುವಿರುಳೊಳೆದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ', 'ಸಂತವಿದ್ದ ಮನೆಗೆ ಕೊಂತವ ತಂದಂತೆ' ಇತ್ಯಾದಿ ಹಲವಾರು ಉದಾಹರಣೆಗಳನ್ನು ಕೊಡಬಹುದು. ಒಂದೊಂದು ಕಡೆ ಇಡೀ ವಚನವೇ ಗಾದೆಗಳಿಂದ ಕೋದುಕೊಂಡು ದೃಷ್ಟಾಂತವನ್ನು ಸಂತುಷ್ಟಿಗೊಳಿಸಿರುವದುಂಟು:

ಚೇಳಿಂಗೆ ಬಸುರಾಯಿತ್ತೆ ಕಡೆ
ಬಾಳೆಗೆ ಫಲವಾಯಿತ್ತೆ ಕಡೆ, ನೋಡಾ!
ರಣರಂಗದಲ್ಲಿ ಕಾದುವ ಓಲೆಕಾರಂಗೆ
ಓಸರಿಸಿತ್ತೆ ಕಡೆ!
ಮಾಡುವ ಭಕ್ತಂಗೆ ಮನಹೀನವಾದರೆ
ಅದೇ ಕಡೆ ಕೂಡಲಸಂಗಮದೇವಾ.

ಜನತೆಯ ಭಾಷೆಯಲ್ಲಿ ಅಡಗಿರುವ ಜೀವನಿಧಿಯನ್ನು ಕಂಡು ಎಲ್ಲ ಬಗೆಯ ಭಾವಾಭಿವ್ಯಕ್ತಿಗೂ ಅದನ್ನು ಬಾಗಿಸಿಕೊಂಡು ಅಂತರಂಗದ ಎಂಥ ಭಾರವನ್ನೂ ಹೊತ್ತು ನೀಗಿಸುವಂತೆ ದುಡಿಸಿಕೊಂಡ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಅವರು ಬಳಸಿದ ಪಡೆನುಡಿ, ಹಿಡಿನುಡಿ, ಜೋಡುನುಡಿ, ಕಿಡಿನುಡಿಗಳಲ್ಲಿ ಆಡುನುಡಿಯ ಶಕ್ತಿಯನ್ನೂ ಸೌಂದರ್ಯವನ್ನೂ ಸೂರೆಗೊಳ್ಳಲಾಗಿದೆ. 'ಹಲುದೋರೆಕೊಯ್ಯು', 'ಗುಡಿತೋರಣ ಕಟ್ಟು', 'ಕಿವಿವಿಡಿದಾಡು', 'ಹಾಸಲುಂಟು ಹೊದೆಯಲುಂಟು', 'ಒಂದಡಕೆಗೆ ಕೊಳ್ಳು', 'ಕರಕಟಕಾಡು', 'ಟೇವಕ ಟೆಂಬಕವನಾಡಿಸು', 'ಅಂತರ ಬೆಂತರ', 'ಕೆಮ್ಮನೆ ಕೆಡು', 'ಒಕ್ಕುದಕನಿಕ್ಕು', 'ಆಗು-ಚೇಗು', 'ಡಂಬುಗಳಹು', 'ದರದಾರ', 'ಅಟ್ಟಾಳಿಕೆಯಮಾತು', 'ಹೊರಹಂಚೆ', 'ಒಳಬೊಳ್ಳತನ', 'ಸಂಭೋಳಿ', 'ಹೆಣಮೂಳ' – ಒಂದೇ ಎರಡೇ, ಇಂಥ ಸಾವಿರಾರು ಪದಗಳು ನಾ ಮುಂದೆ ತಾ ಮುಂದೆ ಎಂದು ಬಸವಣ್ಣನವರ ವಚನಗಳಲ್ಲಿ ತಮ್ಮ ಶಕ್ತಿಯನ್ನೂ, ಸೊಗಸನ್ನೂ ಮೆರೆದಿವೆ. ಸಂಸ್ಕೃತಪದಗಳ ಸಮಾಸಗಳ ಬಳಕೆ ಇವರ ವಚನಗಳಲ್ಲಿ ತೀರ ವಿರಳ. 'ಶತಪತ್ರಕಮಲಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿರ್ಪ ನಮ್ಮ ಕೂಡಲಸಂಗಮದೇವಾ' ಇತ್ಯಾದಿ ನಾಲ್ಕಾರು ವಾಕ್ಯಗಳು ಕೂಡಲಸಂಗಮದೇವನ ಗುಣವಿಶೇಷಗಳ ವರ್ಣನೆಯ ಸಂದರ್ಭಗಳಲ್ಲಿ ಮಾತ್ರ ಬಳಕೆಗೊಂಡಿರುವದು ಗಮನಾರ್ಹವಾಗಿದೆ. ಒಟ್ಟಿನಲ್ಲಿ ಬಸವಣ್ಣನವರ ವಚನಗಳ ಶೈಲಿ ಅಚ್ಚಗನ್ನಡದ ಕೆಚ್ಚಿನಿಂದ ಬಿಗಿವೊಂದಿದೆ. ಭಾವಕ್ಕೆ ತಕ್ಕಂತೆ ಬಾಗಿ, ತೂಗಿ, ತೊನೆದು, ತಣಿದು, ತೃಪ್ತಿಗೊಂಡಿದೆ ಇಲ್ಲಿ ರಚನಾವಿಲಾಸ.

ಈ ವಚನಗಳಲ್ಲಿ ಛಂದೋಲಯ ಕೆಲಮಟ್ಟಿಗೆ ಕಂಡುಬಂದರೂ ಉಸಿರಿಗೆ ತಕ್ಕಹಾಗೆ ಆಡುವ ಆಂತರಿಕವಾದ ಭಾವ ಲಯ ನಮ್ಮ ಮನಸ್ಸನ್ನು ಸೆರೆ ಹಿಡಿಯುತ್ತದೆ. ವಾಕ್ಯಗಳು ಒಂದಕ್ಕೊಂದು ತೂಕ ಹಿಡಿಯುವಂತೆ ಒದಗುವ ಪ್ರಾಸಾನುಪ್ರಾಸ, ಪದಗಳ ಪುನರಾವರ್ತನೆ, ಸ್ವಾಭಾವಿಕವಾದ ಯತಿ ಇವುಗಳಿಂದ ಉಂಟಾಗುವ ಭಾವಾಭಿನಯ, ನಾಟಕೀಯತೆ ಗಮನಾರ್ಹವಾದುದು. ಕೆಲವು ಸಾಲುಗಳು ಗಣಗಳಿಗೆ ಒಳಪಟ್ಟು ಪದ್ಯದ ತುಣುಕಿನಂತೆ ಗೋಚರಿಸುತ್ತವೆ. ಅವುಗಳನ್ನು ನೋಡಿ :

ಉಣ್ಣದೆ ಉಡದೆ ಹೊಗೆಯ ಕೈಯಲ್ಲಿ
ಸತ್ತ ಅಣ್ಣಗಳ ಕೇಡ ನೋಡಾ

ಕೊಳನ ತಡಿಯಲ್ಲೊಂದು
ಹೊಜಿಸು ಕುಳ್ಳಿರ್ದರೇನು
ಷಡುತ್ರಿಂಶತ್ ಪ್ರಭಾ ಪಟಲದ
ಪ್ರಭೆಯ ಬೆಳಗಿದೆ ನೋಡಿರೆ

ಬೇರೆ ಬೇರೆ ಲಯ ವಿನ್ಯಾಸದಲ್ಲಿ ಸಾಗಿ ವೈವಿಧ್ಯವನ್ನು ತಂದುಕೊಟ್ಟ ವಚನಗಳೂ ಉಂಟು. "ವಚನಗಳನ್ನು ಗದ್ಯ ಪದ್ಯಗಳ ಮಧ್ಯದ ಇನ್ನೊಂದು ಜಾತಿಯ ಬರಹವೆಂದು ಭಾವಿಸಬೇಕಾಗುತ್ತದೆ"ಂಬುದೇನೋ ನಿಜ. ಆದರೆ "ಅವುಗಳನ್ನು ಲಯಾನ್ವಿತ ಗದ್ಯವೆಂದೂ ಅನಿಶ್ಚಿತಲಯವಿರುವ ಪದ್ಯವೆಂದೂ" ಕರೆದುಬಿಟ್ಟರೆ ಪೂರ್ಣ ಸ್ವರೂಪವನ್ನು ನಿಶ್ಚಯಿಸಿದಂತಾಗುವುದಿಲ್ಲ. ಈ ವಚನಪ್ರಕಾರಕ್ಕೆ ತನ್ನದೇ ಆದ ವಿಶಿಷ್ಟರೂಪವಿರುವುದರಿಂದ ಇವುಗಳ ರಚನಾ ವಿಧಾನ, ಭಾವ, ಆಲೋಚನೆಗಳಿಗೆ ತಕ್ಕ 'ಶಿಲ್ಪ'ವೊಂದನ್ನು (Structure) ನಿರ್ಮಿಸಿದೆ. ಇಂದಿನ ಕಾವ್ಯಕ್ಕೆ ಒಗ್ಗಿರುವ ಆಡುಮಾತಿನ ಲಯ (Speech rhythm) ವಚನಗಳಲ್ಲಿ ಪ್ರಧಾನವಾಗಿರುವುದನ್ನು ಸಂಸ್ಕಾರಗೊಂಡ ಕಿವಿ ತಟ್ಟನೆ ಗ್ರಹಿಸಬಲ್ಲುದು.

ಭಾವದ ಗಾಳಿಗೆ ಗದ್ಯದ ಹಾಯಿಯನ್ನು ಬಿಚ್ಚಿ ಪದ್ಯದ ತೆರೆಗಳ ಮೇಲೆ ಅನುಭವದ ಮುತ್ತು ರತ್ನಗಳನ್ನು ಹೊತ್ತುಕೊಂಡು ಕನ್ನಡ ಸಾಹಿತ್ಯಸಾಗರದಲ್ಲಿ ಸಡಗರದಿಂದ ಸಾಗಿದ ಈ ಚಿಕ್ಕ ಚಿಕ್ಕ ಹಡಗುಗಳ ಬೆಡಗಿಗೆ, ಅಪ್ರತಿಮಲಿಂಗ ಕರಸ್ಥಳಕ್ಕೆ ಬಂದು ಚುಳುಕಾದಂತೆ ಶಿವಶರಣರ ವಿನೂತನವಾದ ವಚನಸಾಹಿತ್ಯದೃಷ್ಟಿ ಬಸವಣ್ಣನವರ ಕರಸ್ಥಳದಲ್ಲಿ ಸಹಜವಾಗಿ ಕಾವ್ಯ ಪ್ರತಿಮೆಯಾಗಿ ಕಂಗೊಳಿಸಿತು.

❑

ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ

●

ಡಾ. ಸಿ. ನಾಗಭೂಷಣ

ಭಾರತೀಯ ಸಮಾಜದ ಎಲ್ಲಾ ವರ್ಗಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿ ಅದರಲ್ಲಿ ಒಂದು ಒಳ ಎಚ್ಚರವನ್ನು ಮೂಡಿಸಿದ ಮೊತ್ತಮೊದಲ ನಿಜವಾದ ಅರ್ಥದ ಸಾಮಾಜಿಕ ಚಳುವಳಿಯು ಬಸವಾದಿ ಪ್ರಮಥರ ಮೂಲಕ ನಡೆದಿರುವುದು ಗಮನಾರ್ಹವಾಗಿದೆ. ಮತದ ಉದಾತ್ತ ಚಿಂತನೆ, ಸಮಾಜದ ತೀರಾ ಕೆಳಗಿನ ಪದರಗಳನ್ನು ಮುಟ್ಟಿದ್ದುಇಲ್ಲಿಯೇ ಎಂಬಲ್ಲಿ ಉತ್ಪ್ರೇಕ್ಷೆ ಇಲ್ಲ. ಬಸವಾದಿ ಪ್ರಮಥರ ವಚನಗಳ ರಚನೆಯು ಅವರಲ್ಲಿ ಮೂಡಿದ ಸಾಮಾಜಿಕ ಅರಿವಿನ ಸಂಕೇತ ಎನ್ನುವ ಕಾರಣದಿಂದ ಮಹತ್ವವನ್ನು ಪಡೆಯುತ್ತವೆ. ಬಹಳಷ್ಟು ವಚನಕಾರರ ವಚನಗಳು ಇಂದು ಸಾಹಿತ್ಯಿಕ ಮಾನದಂಡದಿಂದ ಅಳೆದರೆ ತೀರಾ ಸಾಮಾನ್ಯ ಎನಿಸ ಬಹುದಾದರೂ ಸಮಾಜಶಾಸ್ತ್ರದ ದೃಷ್ಟಿಯಿಂದ ಪ್ರಮುಖ ಎನಿಸುತ್ತವೆ. ಬಸವಣ್ಣನ ನೇತೃತ್ವದಲ್ಲಿ ಎಲ್ಲಾ ಶರಣರೂ ತಮ್ಮನ್ನು ತಾವು ಬಹಿರಂಗವಾಗಿ ವ್ಯಕ್ತಪಡಿಸಿಕೊಂಡು ತಮ್ಮ ಸಾಮಾನ್ಯ ಚಿಂತನೆಗಳನ್ನು ಅಭಿವ್ಯಕ್ತಪಡಿಸುವ ಧೈರ್ಯ ತೋರಿದ್ದು ಮುಖ್ಯ ಎನಿಸುತ್ತದೆ. ಸಮಾಜೋಧಾರ್ಮಿಕ ಆಂದೋಲನದ ಫಲ ಸಾಮಾನ್ಯರೂ ಮಾತನಾಡುವ ಮನಸ್ಸು ಮಾಡಿದ್ದು.

ಬಸವಣ್ಣನವರ ಬಗೆಗೆ ಯಾವ ನಿಟ್ಟಿನಿಂದ ನೋಡಿದರೂ ಸಾಲದು ಎನಿಸುವಷ್ಟು ವ್ಯಕ್ತಿತ್ವವನ್ನು ಅವರು ಪಡೆದವರಾಗಿದ್ದಾರೆ. ಶ್ರೇಷ್ಠ ವಚನಗಳನ್ನು ರಚಿಸುವುದರಿಂದ ಕವಿಗಳು, ಭಗವಂತನ ಸಾಕ್ಷಾತ್ಕಾರಕ್ಕಾಗಿ ಜೀವನದುದ್ದಕ್ಕೂ ಹಂಬಲಿಸುವುದರಿಂದ ಸಾಧಕರು, ಸಮಾಜದ ಬಗೆಗೆ ಚಿಂತನೆ ನಡೆಸುವುದರಿಂದ ಸಮಾಜದ ದಾರ್ಶನಿಕರು, ನೂತನ ಸಮಾಜವನ್ನು ನಿರ್ಮಾಣ ಮಾಡಲು ಪ್ರಯತ್ನಿಸಿದ್ದರಿಂದ ಸಮಾಜಸುಧಾರಕರು. ಪ್ರಮುಖ ಅರಸು ಮನೆತನದಲ್ಲಿ ಕೆಲಸ ಮಾಡಿದ ರಾಜನೀತಿ ವಿಶಾರದರು ಕನ್ನಡ ನಾಡಿನ ಪ್ರಮುಖ ಧರ್ಮವಾದ ವೀರಶೈವ ಧರ್ಮದ ಪ್ರಮುಖ ನಾಯಕರು ಇಷ್ಟೆಲ್ಲಾ ವ್ಯಕ್ತಿತ್ವವನ್ನು ತನ್ನೊಳಗೆ ಹುದುಗಿಸಿಕೊಂಡಿದ್ದರೂ ಅದರಾಚೆ ಉಳಿಯುವ ವ್ಯಕ್ತಿಗಳು ಹೌದು. ಸಂಪ್ರದಾಯಪ್ರಿಯ ವರ್ಗದಲ್ಲಿ ಜನಿಸಿ ಅದರ ವಿರುದ್ಧವಾಗಿಯೇ ಸಿಡಿದು ನಿಂತು ಸಮಾಜದ ಅತ್ಯಂತದ ಕೆಳವರ್ಗದ ಜನತೆಯ ಒಳಿತಿಗಾಗಿ ಶ್ರಮಿಸಿದರು. ಬಸವಣ್ಣನವರಷ್ಟು ಸ್ಪಷ್ಟವಾಗಿ ಮತ್ತು ಕಟುಕವಾಗಿ ಸಮಾಜದ ಉನ್ನತ ವರ್ಗದ ಡಂಬಾಚಾರಗಳನ್ನು ಖಂಡಿಸಿದವರು, ತಮ್ಮನ್ನು

ತಾವು ತೆರೆದ ಮನಸ್ಸಿನಿಂದ ವಿಮರ್ಶಿಸಿ ಕೊಂಡವರು ಮತ್ತಾರೂ ದೊರಕಲಾರರು. ಇವರು ಬೃಹತ್ ಪ್ರಮಾಣದಲ್ಲಿ ಸಾಮಾಜಿಕ ವ್ಯತ್ಯಾಸವೊಂದಕ್ಕಾಗಿ ಶ್ರಮಿಸಿದವರಾಗಿದ್ದಾರೆ.

ಸಾಮಾಜಿಕ ಪ್ರಜ್ಞೆಯು ಸಮಾಜದ ವಸ್ತುಸ್ಥಿತಿಯನ್ನು ತಿಳಿಸಿ ಕುಂದು ಕೊರತೆಗಳನ್ನು ಟೀಕಿಸುವುದಷ್ಟೇ ಅಲ್ಲ, ಅದನ್ನು ಸುಧಾರಿಸುವ, ಬದಲಿಸುವ ಮಾರ್ಗದರ್ಶನ ಕಾರ್ಯಗಳನ್ನು ನಿರ್ವಹಿಸುವಂತೆಯೂ ಮಾಡುತ್ತದೆ. ಶಿವಾನುಭವಿಗಳು, ಲೋಕಾನುಭವಿಗಳು ಆಗಿದ್ದ ವಚನಕಾರರ ಸಾಮಾಜಿಕ ಪ್ರಜ್ಞೆ ಅತ್ಯುನ್ನತ ಮಟ್ಟದ್ದಾಗಿತ್ತು. ಬಸವಾದಿ ಪ್ರಮಥರ ಸಾಮಾಜಿಕ ಪ್ರಜ್ಞೆಯಲ್ಲಿ ತಮ್ಮ ಸಮಕಾಲೀನ ಹದಗೆಟ್ಟ ಸಮಾಜವನ್ನು ಯೋಗ್ಯರೀತಿಯಲ್ಲಿ ನಡೆಯಿಸುವ ಧರ್ಮದ ಡಾಂಭಿಕತೆಯನ್ನು ಹೊಡೆದೋಡಿಸಿ ಮಾನವತೆಯ ಎಚ್ಚರಗೊಳಿಸುವ, ಪರಂಪರಾಗತ ಶುಷ್ಕ, ಅರ್ಥಹೀನ, ಸವಕಳಿ ನಡೆ ನುಡಿಗಳನ್ನು ತಿದ್ದಿ ಸಜೀವಗೊಳಿಸುವ, ಅಂಧಾನುಕರಣೆಯಲ್ಲಿ ಮುಳುಗಿ ಹೋಗಿದ್ದ ಜನತೆಗೆ ತಮ್ಮ ತಮ್ಮ ವ್ಯಕ್ತಿ ವೈಶಿಷ್ಟ್ಯದ ಬಗೆಗೆ ಅರಿವು ಮೂಡಿಸುವ ಹಲವಾರು ಅಂಶಗಳನ್ನು ಗುರುತಿಸಬಹುದಾಗಿದೆ. ಸಂಪ್ರದಾಯ ನಿಷ್ಠೆಯ ವಿರುದ್ಧ, ಸ್ವಾಯತ್ತತೆಯ ವಿರುದ್ಧ ಪ್ರತಿಭಟನೆಯ ಅಂಶಗಳನ್ನು ಕಾಣಬಹುದಾಗಿದೆ. ಸಂಪ್ರದಾಯ ನಿಷ್ಠೆಯ ವಿರುದ್ಧ, ಸ್ವಾಯತ್ತತೆಯ ವಿರುದ್ಧ ಪ್ರತಿಭಟನೆಯ ಅಂಶಗಳನ್ನು ಕಾಣಬಹುದಾಗಿದೆ. ಸಾಮಾಜಿಕ ಪ್ರಜ್ಞೆಯಲ್ಲಿ ವಿಡಂಬನೆಯು ಒಳಗೊಂಡಿದೆ. ಈ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಬಸವಣ್ಣನವರ ಸಾಮಾಜಿಕ ಪ್ರಜ್ಞೆಯ ನೆಲೆಗಟ್ಟನ್ನು ಗುರುತಿಸಬಹುದಾಗಿದೆ.

ಬಸವಣ್ಣನವರು ಮಧ್ಯಕಾಲೀನ ಯುಗಕ್ಕೆ ಸೇರಿದವರಾದರೂ ಆಧುನಿಕರಾಗಿ ಕಾಣಬರುತ್ತಾರೆ. ಸರಳ ಭಕ್ತರೆನಿಸಿದ್ದ ಬಸವಣ್ಣ ಇಡೀ ಪ್ರಪಂಚದಲ್ಲಿ ತಾನೊಬ್ಬನೇ ಭಕ್ತನೆಂದೂ, ಉಳಿದ ಶರಣರೆಲ್ಲಾ ತನಗೆ ಭಗವಂತನ ಸ್ವರೂಪಿಗಳೆಂದು ವಿನಯದಿಂದ ಸಾರಿದರು. ಸಂಪ್ರದಾಯ ಜಡತೆಯಿಂದ ನಿಶ್ಚೇಷ್ಟಿತವಾಗಿದ್ದ ಒಂದು ಇಡೀ ಯುಗಕ್ಕೆ ಉತ್ಸಾಹ ರೂಪದಲ್ಲಿ ಕಾಣಿಸಿಕೊಂಡವರಾಗಿದ್ದಾರೆ. ಸಾಂಪ್ರದಾಯಿಕ ವೈದಿಕ ಶಿಕ್ಷಣ ಕೇಂದ್ರವಾಗಿದ್ದ ಅಗ್ರಹಾರವೊಂದರ ಬ್ರಾಹ್ಮಣನೊಬ್ಬನ ಮಗನಾಗಿ ಜನಿಸಿದ ಅವರು ಬ್ರಾಹ್ಮಣ್ಯವು ಭಕ್ತಿಯಿಂದ ಕರ್ಮಕ್ಕೆ ಪ್ರಾಮುಖ್ಯ ನೀಡುವುದೆಂದು ಚಿಕ್ಕವಯಸ್ಸಿನಲ್ಲಿ ಉಪನಯನವನ್ನು ತಿರಸ್ಕರಿಸಿದವರು. ತಾನು ಕೈಗೊಂಡಿದ್ದ ಧಾರ್ಮಿಕ ಆಂದೋಲನದ ಎಲ್ಲಾ ಪ್ರಗತಿಪರ ಬೀಜಗಳನ್ನು ತನ್ನಲ್ಲಿ ಹುದುಗಿಸಿಕೊಂಡಿದ್ದ ವೀರಶೈವ ಧರ್ಮದ ಪ್ರಕಾರ ಭಕ್ತಿಯೇ ನಿಜವಾದ ಲಿಂಗಪೂಜೆಯಾಗಿತ್ತು. ಅದು ಜಾತಿಭೇದವನ್ನು ಸಂಪೂರ್ಣವಾಗಿ ನಿರಾಕರಿಸಿತ್ತು. ಶಿವಭಕ್ತರಲ್ಲಿ ಜಾತಿಭೇದವನ್ನು ಎಣಿಸಬಾರದೆಂಬುದು ವೀರಶೈವ ಧರ್ಮದ ಪ್ರಮುಖ ತತ್ವವಾಗಿತ್ತು.

ತನ್ನ ಬದುಕಿನುದ್ದಕ್ಕೂ ಬಡವರ ಜೊತೆ ಅಬ್ರಾಹ್ಮಣರ ಜೊತೆ ತನ್ನನ್ನು ತಾನು ಸಮೀಕರಿಸಿಕೊಳ್ಳಲು ಯತ್ನಿಸಿದ ಬಸವಣ್ಣ ಅಂದಿನ ಆಂದೋಲನದ ಕೇಂದ್ರ ವ್ಯಕ್ತಿಯಾಗಿದ್ದವನು. ಅಸ್ಪೃಶ್ಯ ಜಾತಿಯಿಂದ ಬಂದಿದ್ದ ದಲಿತರನ್ನು ಬಸವಣ್ಣನ ನೇತೃತ್ವದ ಚಳುವಳಿಯು ಹಿರಿಯ ಮಹೇಶ್ವರರೆಂದು, ಹಿರಿಯ ಕುಲದವರೆಂದು ಕರೆಯುತ್ತಿದ್ದುದು ಅತ್ಯಂತ ಗಮನಾರ್ಹ ಸಂಗತಿ. ಮಾಹೇಶ್ವರ ಎಂದರೆ ಶಿವನ ಅನುಯಾಯಿಗಳು ಮೇಲ್ವರ್ಗದ ವೀರಶೈವರು ಮಾಹೇಶ್ವರರಾದರೆ, ಕೆಳವರ್ಗದಿಂದ ಬಂದ ವೀರಶೈವರು ಹಿರಿಯ ಮಾಹೇಶ್ವರರರು. ಬಹುಶಃ ಕೆಳವರ್ಗದ ವೀರಶೈವರನ್ನು ಉಳಿದವರಿಗಿಂತ ಕಡಿಮೆಯಾಗಿ ಕಾಣುವ ಕೆಲವು ವೀರಶೈವರು ಆ ಕಾಲದಲ್ಲಿದ್ದಿರಬೇಕು. ಅಂತಹ ಮನೋಭಾವವನ್ನು

ತೊಲಗಿಸಬೇಕಾದರೆ ಕೆಳವರ್ಗದ ವೀರಶೈವರು ಉಳಿದವರ ಸಮಾನರು ಮಾತ್ರವಲ್ಲ, ಉಳಿದವರಿಗಿಂತ ಶ್ರೇಷ್ಠರು ಎಂದು ಹೇಳುವುದು ಅಗತ್ಯವಾಗಿತ್ತು. ಕ್ರಾಂತಿಕಾರಿ ಧೋರಣೆಯುಳ್ಳ ಬಸವಣ್ಣ ಮೊದಲಿಗೆ ಕೊಳೆತು ನಾರುತ್ತಿದ್ದ ಸಮಾಜ ವ್ಯವಸ್ಥೆಯ ವಿರುದ್ಧ ತಿರುಗಿಬಿದ್ದವರು. ಹೊಸತನದ ಹುಟ್ಟಿಗಾಗಿ ಪ್ರಾರಂಭಿಸಿದ ಸಮಾಜೋ ಧಾರ್ಮಿಕ ಆಂದೋಲನದ ನೇತಾರರಾಗಿ ವ್ಯವಸ್ಥಾಬದ್ಧ ಸಮಾಜದ ವಿರುದ್ಧ ಕ್ರಾಂತಿಯನ್ನೇ ಸಾರಿದ ಬಸವಣ್ಣನವರ ವಚನಗಳಲ್ಲಿಯ ಸಾಮಾಜಿಕ ಪ್ರಜ್ಞೆಯನ್ನು ಕುರಿತಾದ ವಚನಗಳು ಸಮಾಜದಲ್ಲಿಯ ಅಂಕುಡೊಂಕುಗಳ ಬಗೆಗೆ ಅರಿವು ಮೂಡಿಸುವ ರೀತಿಯಲ್ಲಿವೆ.

ಇವರ ಕಾಲಕ್ಕೆ ಧರ್ಮವು ಸತ್ವರಹಿತ ಸಂಪ್ರದಾಯಗಳ ಹೆಣಭಾರವೂ ಸಮಯ ಸಾಧಕರ ಮೂಲಕ ಶೋಷಣೆಯ ಮಾಧ್ಯಮವಾಗಿದ್ದು ಜನಸಾಮಾನ್ಯರ ಜೀವನವನ್ನು ನಲುಗಿಸಿದ್ದಿತು. ಧರ್ಮವೇ ಜೀವನದ ಉಸಿರು ಎಂದು ನಂಬಿದ್ದ ಆ ಕಾಲದ ಜನತೆಗೆ ಧರ್ಮದ ತಿರುಳನ್ನು ತಿಳಿಸುವುದು ಇವರಿಗೆ ಮುಖ್ಯವಾಗಿದ್ದಿತು. ಅಂದಿನ ಪುರೋಹಿತ ಸಂಸ್ಕೃತಿಯ ಬೇರನ್ನೆ ಅಲ್ಲಾಡಿಸಿ ವೇದಾಗಮಗಳ ಹೊರ ತೊಗಟೆಯನ್ನು ಬಿಚ್ಚಿ ಒಳ ತಿರುಳನ್ನೇ ಜನತೆಗೆ ತೋರಿಸಿಕೊಟ್ಟರು. ಯಜ್ಞಯಾಗಾದಿಗಳನ್ನು ಖಂಡಿಸಿ ಬಹುದೇವತಾರಾಧನೆಯನ್ನು ಹೊಡೆದು ಹಾಕಿ ಅದು ಧರ್ಮದಲ್ಲಿ ಕೇವಲ ಕರ್ಮಠತನ ಎಂಬುದನ್ನು ವಚನಗಳ ಮೂಲಕ ಜನತೆಯಲ್ಲಿ ಬಿಂಬಿಸಿದರು. ನೇಮ, ಹೋಮಗಳನ್ನು ಧಿಕ್ಕರಿಸಿದ್ದಲ್ಲದೆ ಅನರ್ಥ ಹೋಮ ಮಾಡುವ ವಿಪ್ರರಿಗೆ ಅವರ ಅಗ್ನಿ ಹೋಮಗಳನ್ನು, ದ್ವಂದ್ವ ನೀತಿಯನ್ನು,

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲ್ಲಿ
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ ಬದಿಯ ಧೂಳ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ ಕೂಡಲ ಸಂಗಮದೇವಾ *(ವ.ಸಂ.೫೮೪)*

ವಂದನೆಯ ಮರೆದು ನಿಂದಿಸುತಿರ್ದರಯ್ಯಾ ಎಂದು ಮೂದಲಿಸಿದರು
ತಮ್ಮ ಹೊಸಧರ್ಮದ ಅಸ್ತಿತ್ವಕ್ಕೆ ಅಡೆತಡೆಯೊಡ್ಡಿದ ವೈದಿಕರಿಗೆ ಉತ್ತರವಾಗಿ,
ವೇದಕ್ಕೆ ಒರೆಯಕಟ್ಟುವೆ
ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರೆತ್ತುವೆ
ಆಗಮದ ಮೂಲ ಕೊಯ್ಯುವೆ ನೋಡಯ್ಯಾ *(ವ.ಸಂ. ೭೧೭)*

ಮಹಾದಾನಿ ಕೂಡಲ ಸಂಗಮದೇವ
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ ಎಂದೂ
ಶಾಸ್ತ್ರ ಘನವೆಂಬೆನೆ ? ಕರ್ಮವಭಜಿಸುತ್ತಿದೆ
ವೇದ ಘನವೆಂಬೆನೆ ? ಪ್ರಾಣಿ ವಧೆಯ ಹೇಳುತ್ತಿದೆ
ಶ್ರುತಿ ಘನವೆಂಬೆನೆ ? ಮುರದಿಟ್ಟರಸುತ್ತಿದೆ *(ವ.ಸಂ. ೨೦೮)*

ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ

ಎಂದು ವಚನಗಳ ಮೂಲಕ ಅವರ ಡಾಂಬಿಕತೆ, ಕುಟಿಲ ತಂತ್ರಗಳನ್ನೊಳ ಗೊಂಡ ಶೋಷಣೆಯ ಮಾರ್ಗವನ್ನು ಖಂಡಿಸಿದ್ದಾರೆ.

ಸ್ವಾನುಭವದ ನೆಲೆಗಟ್ಟಿಲ್ಲದೆ ಗಿಳಿಪಾಠದಂತೆ ಪಡೆದ ಪಾಂಡಿತ್ಯ ವ್ಯರ್ಥವೆಂಬುದನ್ನು ವೇದ ಭೇದಿಸಲರಿಯದೆ ಕೆಟ್ಟವು.

ವೇದ ಘನವೆಂಬೆನೆ ಪ್ರಾಣಿವಧೆಯ ಹೇಳುತ್ತಿದೆ ಎಂದು ಪಾಂಡಿತ್ಯ ಜ್ಞಾನದ ಬಗೆಗೆ ತಿರಸ್ಕಾರ ವ್ಯಕ್ತಪಡಿಸುತ್ತಾರೆ. ಅರ್ಥವಿಲ್ಲದ ಕಾಲ ಕಾಲಕ್ಕೆ ಹೊಂದದ ಸಂಪ್ರದಾಯಗಳನ್ನು ಅವರು ಮೆಚ್ಚಿಲ್ಲ. ವರ್ಣಾಶ್ರಮದ ಹೆಸರಿನಲ್ಲಿ ಸಮಾಜವನ್ನು ಒಡೆದು ಬಾಳುವ ನೇತಾರರನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಕುಲ ಜಾತಿಗಳ ತಾರತಮ್ಯದ ಬಗೆಗೆ ತಿರಸ್ಕಾರವನ್ನು ವ್ಯಕ್ತಪಡಿಸಿದ್ದಾರೆ. ಸ್ವತಃ ವಿಪ್ರಕುಲದಲ್ಲಿ ಹುಟ್ಟಿದ ಬಸವಣ್ಣನವರೇ ಬ್ರಾಹ್ಮಣರನ್ನು ಅವರ ಕೊಂಕು ಸ್ವಾರ್ಥಗಳನ್ನು ಬಯಲಿಗೆಳೆದಿರುವುದು ಗಮನಾರ್ಹ ಸಂಗತಿ. ವ್ಯಕ್ತಿ ಸ್ವಾತಂತ್ರ್ಯವನ್ನು ಮನ್ನಿಸಿದ ಬಸವಣ್ಣ ವ್ಯಕ್ತಿ ಪೂಜೆಯನ್ನು ಅಲಕ್ಷಿಸಿದ್ದಾರೆ.

ಬ್ರಾಹ್ಮಣ ದೈವವೆಂದು ನಂಬಿದ ಕಾರಣ
ಗೌತಮ ಮುನಿಗೆ ಗೋವಧೆಯಾಗಿತ್ತು.
ಬಲಿಗೆ ಬಂಧನವಾಯಿತ್ತು.
ಕರ್ಣನ ಕವಚ ಹೋಯಿತ್ತು. *(ವ.ಸಂ.೫೭೦)*
ದಕ್ಷನಿಗೆ ಕುಂದಲೆಯಾಯಿತು.

ಅವರು ದೇವರಾಗಿದ್ದರೆ ಹೀಗೆ ಆಯಿತು ಎಂಬುದಾಗಿ ಅಣಕವಾಡಿದ್ದಾರೆ. ವೈದಿಕ ವ್ಯಕ್ತಿ ತಾನು ಅತ್ಯಂತ ಚತುರನೆಂದು ತಿಳಿದಿದ್ದರೂ ಅವನಲ್ಲಿಯೂ ಮೌಢ್ಯ ಸಾಕಷ್ಟಿದೆ ಎಂಬುದನ್ನು ಬಸವಣ್ಣ ತಮ್ಮ ಹಲವಾರು ವಚನಗಳಲ್ಲಿ ಗುರುತಿಸಿದ್ದಾರೆ. ಜಾಣರ ದಡ್ಡತನದ ವಿಡಂಬನೆ ಮಾಡಿದ್ದಾರೆ.

ನೀರ ಕಂಡಲ್ಲಿ ಮುಳುಗುವರಯ್ಯಾ
ಮರವ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವ ಒಣಗುವ ಮರನ ಮೆಚ್ಚಿದವರು ನಿಮ್ಮನೆತ್ತ ಬಲ್ಲರು

ಹಾರುವವರ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ
ಕೆಳಯಿಂಕೆ ಬೇರೂರದು ಮೇಲೆ ಫಲವಾಗದು
ಮೀಂಬುಲಿಗನ ಹಕ್ಕಿಯಂತೆ ನೀರತಡಿಯಲಿದ್ದು
ಮೂಗ ಹಿಡಿದು ಧ್ಯಾನ ಮಾಡುವರಯ್ಯ
ಬಿಟ್ಟ ಮಂಡೆವರೆಸಿ ಬಾಯ ಮಿಡುಕಿಸುತ ಕಣ್ಣಮುಚ್ಚಿ ಬೆರಳೆನಿಸುವರಯ್ಯಾ
ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯ ಹುಲ್ಲು
ಕೂಡಲ ಸಂಗನ ಅರಿಯದೆ ಮೊರೆಯಿಡುವಂತೆ *(ವ.ಸಂ. ೫೭೮)*

ಬಸವಣ್ಣನವರು ತನ್ನ ಸ್ವ ಸಮಾಜವನ್ನು ಹೃದಯ ಬಿಚ್ಚಿ ಮನಸ್ಸು ತೆರೆದು ವಿಡಂಬಿಸಿರುವುದನ್ನು ಮೇಲಿನ ವಚನಗಳು ಸೂಚಿಸುತ್ತವೆ.

ದೇವರು-ಧರ್ಮದ ಬಗೆಗೆ ಬಸವಣ್ಣನವರು ತಳೆದಿರುವ ನಿಲುವುಗಳು ಸಾಂಪ್ರದಾಯಿಕ ನಿಲುವುಗಳಿಂದ ಬೇರೆಯಾಗಿದ್ದು ಪ್ರಗತಿಪರವಾಗಿವೆ. ಸಾಮಾನ್ಯ ಜನತೆಯಲ್ಲಿ ವೈಚಾರಿಕ ಶಕ್ತಿಯನ್ನು ಮೂಡಿಸುವಂತಹುಗಳಾಗಿವೆ.

ದೇವರ ಸ್ವರೂಪವನ್ನು ಕುರಿತ ಬಸವಣ್ಣನವರ ಈ ವಚನದಲ್ಲಿಯ

ಕಲ್ಲದೇವರು ದೇವರಲ್ಲ ಮಣ್ಣು ದೇವರು ದೇವರಲ್ಲ
ಪಂಚಲೋಹದಲ್ಲಿ ಮಾಡುವ ದೇವರು ದೇವರಲ್ಲ
ಸೇತುಬಂಧ ರಾಮೇಶ್ವರ ಗೋಕರ್ಣ ಕಾಶಿ
ಕೇದಾರ ಮೊದಲಾದ ಅಷ್ಟಾಷಷ್ಠಿ ಪುಣ್ಯತೀರ್ಥಗಳು
ಪುಣ್ಯಕ್ಷೇತ್ರಗಳಲ್ಲಿಹ ದೇವರು ದೇವರಲ್ಲ
ತನ್ನ ತಾನರಿದು ತಾನಾರೆಂಬುದ ತಿಳಿದಡೆ
ತಾನೇ ದೇವ ನೋಡಾ

ಎಂಬ ವಿವರಣೆಯಲ್ಲಿ ದೇವರು ತನ್ನಲ್ಲೇ ಇರುವನೆಂದು ಸೂಚಿಸಿದ್ದಾರೆ.

ಬಸವಣ್ಣನವರು ಸಮಾಜದಿಂದ ತಿರಸ್ಕಾರಕ್ಕೆ ಗುರಿಯಾಗಿದ್ದ ದಲಿತರ ಸಖ್ಯ ಬೆಳೆಸಿದರು. ನಿರ್ಬಂಧಗಳಿಂದ ಧರ್ಮವನ್ನು ಮುಕ್ತಗೊಳಿಸಿ ಧಾರ್ಮಿಕ ವಿಧಿವಿಧಾನಗಳನ್ನು ಸರಳಗೊಳಿಸಿದರು. ನೂತನ ಸಮಾಜದ ನಿರ್ಮಾಣಕ್ಕಾಗಿ ತಮ್ಮ ಧರ್ಮ ಮಂದಿರದ ಎಲ್ಲಾ ಬಾಗಿಲುಗಳನ್ನು ತೆರೆದು ಕೆಳಸ್ತರದ ಎಲ್ಲಾ ವ್ಯಕ್ತಿಗಳಿಗೂ ಅವಕಾಶ ಕಲ್ಪಿಸಿಕೊಟ್ಟರು. ತನ್ನ ಬದುಕಿನುದ್ದಕ್ಕೂ ಬಡವರ ಜೊತೆ, ಅಬ್ರಾಹ್ಮಣರ ಜೊತೆ ತನ್ನನ್ನು ತಾನು ಸಮೀಕರಿಸಿಕೊಳ್ಳಲು ಯತ್ನಿಸಿದ ಬಸವಣ್ಣ ಅಂದಿನ ಆಂದೋಲನದ ಕೇಂದ್ರವ್ಯಕ್ತಿಯಾಗಿದ್ದವರು. ಒಬ್ಬ ಬ್ರಾಹ್ಮಣ ಮತ್ತು ಅಸ್ಪೃಶ್ಯನನ್ನು ಅವರ ಹುಟ್ಟಿನಿಂದ ಗುರುತಿಸಬಾರದು. ಯಾವನೇ ಸದ್ ವ್ಯಕ್ತಿಯನ್ನು ಬ್ರಾಹ್ಮಣನೆಂದೂ, ಯಾವನೇ ಕೆಟ್ಟ ವ್ಯಕ್ತಿಯನ್ನು ಅಸ್ಪೃಶ್ಯನೆಂದೂ ಕರೆಯಬಹುದು. ಎಲ್ಲರಿಗೂ ಒಳಿತನ್ನೇ ಬಯಸುವವನೇ ಶ್ರೇಷ್ಠ ಕುಲಜ ಎಂದು ಪ್ರತಿಪಾದಿಸಿದರು. ಬಸವಣ್ಣ ತನ್ನನ್ನು ತಾನೇ ಸ್ವವಿಮರ್ಶೆ ಮಾಡಿಕೊಳ್ಳುತ್ತಾ ತನ್ನ ಹುಟ್ಟಿನಿಂದ ಹಿಡಿದು ಸರ್ವಸ್ವವನ್ನೂ ದಲಿತರ ಜೊತೆ ಸಮೀಕರಿಸಿಕೊಂಡಿರುವುದನ್ನು ಈ ಕೆಳಕಂಡ ವಚನಗಳು ಸ್ಥಿರೀಕರಿಸುತ್ತವೆ.

ಕೀಳಾಗಲಲ್ಲದೆ ಮೇಲಾಗಲೊಲ್ಲೆನು
ನಾನು ಹಾರುವನೆಂದರೆ ಕೂಡಲಸಂಗಮದೇವ ನಗುವನಯ್ಯಾ
ಚೆನ್ನಯ್ಯನ ಮನೆಯ ದಾಸಿಯ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು
ಇವರಿಗೆ ಹುಟ್ಟಿದ ಮಗ ನಾನು *(ವ.ಸಂ.೩೪೬)*
ಚೆನ್ನಯ್ಯ ನಮ್ಮಯ್ಯ ಚೆನ್ನಯ್ಯನ ಮಗ ನಾನು
ಹಿರಿಯಯ್ಯ ಶ್ವಪಚಯ್ಯ ಕಿರಿಯಯ್ಯ ಡೋಹರ ಕಕ್ಕಯ್ಯ

ತಾನು ಹುಟ್ಟಿನಿಂದ ಬ್ರಾಹ್ಮಣ, ಆದರೆ ಬ್ರಾಹ್ಮಣ ತಂದೆ ತಾಯಿಗಳಿಗೆ ಹುಟ್ಟಿದವನಲ್ಲವೆಂದೂ ತಾನು ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯರ ದಾಸ–ದಾಸಿಯರ ಅಕ್ರಮ ಸಂಬಂಧದಿಂದ ಜನಿಸಿದವನೆಂದು ಹೇಳಿಕೊಂಡು ಸಮಾಜದ ತೀರ ಕೆಳಸ್ತರದ ಜೊತೆ ತನ್ನನ್ನು ತಾನು ಸಮೀಕರಿಸಿಕೊಂಡು ಆ ಮೂಲಕ ತನ್ನನ್ನು ಅಬ್ರಾಹ್ಮಣೀಕರಿಸಿಕೊಳ್ಳಲು ಪ್ರಯತ್ನಿಸಿದರು.

ಬಸವಣ್ಣನವರ ಸಾಮಾಜಿಕ ಪ್ರಜ್ಞೆಯು ಸಮಾಜ ಸುಧಾರಕರ ಮನಸ್ಸಿನಂತಹದ್ದು. ತಾನು ನಂಬದ ಧರ್ಮಶ್ರದ್ಧೆಯನ್ನು ಸಾರ್ವತ್ರಿಕ ಗೊಳಿಸುವಂತಹದ್ದು. ಅನುಷ್ಠಾನ ಮಾರ್ಗದಲ್ಲೂ, ಸುತ್ತಲಿನ ಸಮಾಜವನ್ನು ಸುಧಾರಿಸುವಾಗ ಓರೆ–ಕೋರೆಗಳನ್ನು ಕಾಣುವಾಗ ಇತರರಿಗೆ ತಿದ್ದಲು ಹೇಳುವುದರ ಜೊತೆಗೆ ತಾನು ತಿದ್ದಿಕೊಳ್ಳುವ ಭಕ್ತ ಹೃದಯದ ಕಳಕಳಿ ಆತ್ಮತೆಯನ್ನು

ಸಾಮಾಜಿಕ ವಿಡಂಬನೆಯಲ್ಲಿ ಗುರುತಿಸಬಹುದಾಗಿದೆ. ಭಕ್ತಿ ಭಂಡಾರಿಯಾಗಿ, ಸಮಾಜ ಸುಧಾರಕನಾಗಿ, ಮಾನವತಾವಾದಿಯಾಗಿ, ಮಹಾಮಂತ್ರಿಯಾಗಿ ಬಸವಣ್ಣನವರು ಗಳಿಸಿದ ಲೋಕಾನುಭವ ಹಾಗೂ ಜೀವನಾನುಭವಗಳು ಆತನ ಹಲವು ವಚನಗಳಲ್ಲಿ ಅಭಿವ್ಯಕ್ತ ಗೊಂಡಿರುವುದನ್ನು ಕಾಣಬಹುದು.

ಇಹಲೋಕದ ಸಾಧ್ಯತೆಗಳನ್ನೆಲ್ಲ ವಿವರಿಸುವ
ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂಸಲ್ಲುವರಯ್ಯಾ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು
ಕೂಡಲಸಂಗಮದೇವಾ......

ಎಂಬ ವಚನವು ಇಹಲೋಕವೇ ಕರ್ತಾರನ ಕಮ್ಮಟವಾಗಿರುವಾಗ, ಅದಕ್ಕೆ ತನ್ನನ್ನು ಒಳಪಡಿಸಿಕೊಂಡು ಸಲ್ಲುವ ಸ್ಥಿತಿಯನ್ನು ಸೂಚಿಸುತ್ತದೆ. ಜಾತಿಪದ್ಧತಿಯ ಮೂಲವನ್ನು ವಸ್ತುನಿಷ್ಠವಾಗಿ ಗ್ರಹಿಸಿದ ಬಸವಣ್ಣ ಅದರ ಪೊಳ್ಳುತನವನ್ನು ಬಯಲಿಗೆಳೆದಿದ್ದಾರೆ. ಜಾತಿ ಮತ್ತು ವ್ಯಕ್ತಿಗಳ ಸಂಬಂಧವನ್ನು ಖಚಿತವಾಗಿ ಗುರುತಿಸಿದ್ದಾರೆ.

ಕಾಸಿ ಕಮ್ಮಾರನಾದ
ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ
ವೇದವನೋದಿ ಹಾರುವನಾದ

ಎನ್ನುವ ಬಸವಣ್ಣನವರ ಮಾತುಗಳಲ್ಲಿ ಜಾತಿಪದ್ಧತಿಯನ್ನು ವಿಶ್ಲೇಷಿಸುವ ಪರಿಯನ್ನು ಕಾಣಬಹುದು. ಸಾಮಾಜಿಕ ವ್ಯವಸ್ಥೆಯಲ್ಲಿ ಮತ–ವ್ಯಕ್ತಿ–ಲಿಂಗ ಭೇದಗಳೆಲ್ಲಾ ಅಳಿದು ಶಿವಭಕ್ತಿ ಸಾಧನೆಯೊಂದೇ ತಳಹದಿಯೆಂದು ಪ್ರತಿಪಾದಿಸಿದ ಬಸವಣ್ಣ ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರನ್ನೆಲ್ಲ ಒಂದೇ ಎಂದು ನಿರ್ಣಯಿಸಿದರು. ಧರ್ಮ, ಕುಲ, ಜಾತಿ ಮೊದಲಾದ ಪರಂಪರೆಗಳಿಗೆ ಮಹತ್ವ ಕೊಡದ ಬಸವಣ್ಣನವರು ಹೊಲೆತನ ಎಂಬುದು ಜಾತಿಯಲ್ಲ. ಸಮಾಜದ ಎಲ್ಲಾ ವರ್ಗದಲ್ಲಿಯೂ ಇದ್ದಾರೆಂಬುದನ್ನು,

ಕೊಲುವನೇ ಮಾದಿಗ ಹೊಲಸ ತಿಂಬುವನೇ ಹೊಲೆಯ
ಕುಲವೇನೋ ಅವಂದಿರ ಕುಲವೇನೋ
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ *(ವ.ಸಂ.೬೫)*
ನಮ್ಮ ಕೂಡಲ ಸಂಗನ ಶರಣರೇ ಕುಲಜರು

ಎಂದು ಹೇಳಿದ್ದು ಚಿಂತನಾರ್ಹವಾಗಿದೆ.

ಈ ಹೇಳಿಕೆಯಲ್ಲಿ ಸಕಲ ಜೀವಿಗಳಿಗೂ ಒಳ್ಳೆಯದನ್ನೇ ಬಯಸುವವನೇ ಶ್ರೇಷ್ಠ ಕುಲಜ ಎಂಬ ಪ್ರತಿಪಾದನೆಯನ್ನು ಕಾಣಬಹುದಾಗಿದೆ. ಜಾತಿಯ ಉಚ್ಚ–ನೀಚ ಭ್ರಮೆಗೆ ಈಡಾಗಿದ್ದವರನ್ನು ದಾರಿಗೆ ತರಲು ಪ್ರಯತ್ನಿಸಿದರು. ಅಂಧ ಸಂಪ್ರದಾಯ, ಕಂದಾಚಾರ, ಮೂಢನಂಬಿಕೆಗಳು, ಅಮಾನವೀಯ ಆಚರಣೆಗಳನ್ನು ಬಸವಣ್ಣನವರು ಸಾರಸಗಟಾಗಿ ತಿರಸ್ಕರಿಸಿ ಅಲ್ಲಗಳೆದಿದ್ದಾರೆ.

ಎಮ್ಮವರು ಬೆಸೆಗೊಂಡರೆ ಶುಭಲಗ್ನವೆನ್ನಿರಯ್ಯಾ
ರಾಶಿಕೂಟ ಋಣ ಸಂಬಂಧವುಂಟೆಂದು ಹೇಳಿರಯ್ಯಾ
ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯಾ *(ವ.ಸ.೮೩)*
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ

ಎಂದು ನುಡಿದರು. ಮನುಷ್ಯನ ಕಪಟಭಕ್ತಿ, ತೋರಿಕೆಯ ಆಚಾರ-ವಿಚಾರಗಳು ಕೃತಕ, ನಗೆ ಪಾಟಲಿಗೆ ಈಡಾಗುತ್ತವೆ ಎಂಬುದನ್ನು ಈ ಕೆಳಕಂಡ ವಚನದ ಮೂಲಕ ವ್ಯಕ್ತಪಡಿಸಿದ್ದಾರೆ.

ಕಲ್ಲನಾಗರ ಕಂಡರೆ ಹಾಲನೆರೆಯೆಂಬರು
ದಿಟನಾಗರ ಕಂಡರೆ ಕೊಲ್ಲೆಂಬರಯ್ಯ *(ವ.ಸಂ.೧೯೪)*
ಉಂಬ ಜಂಗಮ ಬಂದರೆ ನಡೆಯೆಂಬರು
ಉಣ್ಣದ ಲಿಂಗಕ್ಕೊ ಬೋನವ ಹಿಡಿಯೆಂಬರಯ್ಯಾ

ಈ ಅನಿಸಿಕೆಯು ಶುದ್ಧ ವಾಸ್ತವಕ್ಕೆ ಹಿಡಿದ ಕನ್ನಡಿಯಂತಿದೆ. ಏಕದೇವೋಪಾಸನೆಗೆ ಮಹತ್ವ ನೀಡಿದ ಬಸವಣ್ಣನವರು ಈ ಕೆಳಕಂಡ ವಚನದಲ್ಲಿ

ಗಂಡಶಿವಲಿಂಗ ದೇವರ ಭಕ್ತ
ಹೆಂಡತಿ ಮಾರಿಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿಕೊಂಬುದು ಸುರೆ ಮಾಂಸ
ಬಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ *(ವ.ಸಂ. ೧೦೪)*
ಹೆಂಡದ ಮಡಕೆಯ ಹೊರಗೆ ತೊಳೆದಂತೆ.

ಎಂದು ವಿಡಂಬಿಸಿದ್ದಾರೆ. ಈ ವಚನದಲ್ಲಿ ಸತಿ-ಪತಿಗಳ ವಿರಸದಿಂದ ಇಡೀ ಕೌಟುಬಿಕ ಪರಿಸರವು ಅಜ್ಞಾನದಲ್ಲಿ ಮುಳುಗಿ ತೇಲಿ ಹೋಗುತ್ತಿದ್ದು ಅದನ್ನು ತಪ್ಪಿಸುವ ಹಿನ್ನೆಲೆಯಲ್ಲಿ ಈ ರೀತಿಯಾಗಿ ನುಡಿದಿದ್ದಾರೆ. ಸತಿಪತಿಗಳಲ್ಲಿರುವ ಧರ್ಮ ಸಂಬಂಧದ ಆಚರಣೆ ನಂಬಿಕೆಗಳನ್ನು ಮೂದಲಿಸುವುದರ ಜೊತೆ ಪರಸ್ಪರ ಐಕಮತ್ಯವಿಲ್ಲದಿರುವುದನ್ನು ದೃಷ್ಟಿಯಲ್ಲಿರಿಸಿಕೊಂಡು ನುಡಿದಿದ್ದಾರೆ. ಜನರ ಮೂಢನಂಬಿಕೆಗಳನ್ನೇ ಅವಲಂಬಿಸಿದ್ದ ಹಲವಾರು ಕ್ಷುದ್ರದೈವಗಳ ಆರಾಧನೆಯನ್ನು ಅವರು ತಪ್ಪಿಸಿ ಏಕದೇವೋಪಾಸನೆಯನ್ನು ಪ್ರೋತ್ಸಾಹಿಸಿದರು. ಕೆಳಕಂಡ ವಚನದಲ್ಲಿ ಕ್ಷುದ್ರ ದೈವಗಳ ಆರಾಧನೆಯನ್ನು, ಅದರ ಸಾಧಕ ಬಾಧಕಗಳನ್ನು

ಅರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯಾ
ಉರಿಯಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ
ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯ
ಅಂಜಿಕೆಯಾದರೆ ಹೂಳುವ ದೈವವನೆಂತುಸರಿಯೆಂಬೆನಯ್ಯಾ *(ವ.ಸಂ.೫೫೭)*
ಸಹಜಭಾವ ನಿಜೈಕ್ಯ ಕೂಡಲ ಸಂಗಮದೇವನೊಬ್ಬನೇ

ಎಂದು ವಿಡಂಬಿಸುವುದರ ಮೂಲಕ ವ್ಯಕ್ತಪಡಿಸಿದ್ದಾರೆ.

ದಯವೇ ಧರ್ಮದ ಮೂಲವಯ್ಯಾ ಎಂಬ ನೂತನ ತತ್ವವನ್ನೇ ವೀರಶೈವ ಧರ್ಮದ ಮೂಲ ತತ್ವವನ್ನಾಗಿ ಮಾಡಿಕೊಂಡ ಬಸವಣ್ಣ ಪಶುಬಲಿ, ಪ್ರಾಣಿಹಿಂಸೆ ತೀರಾ ಅಸಹ್ಯ, ಅಮಾನುಷ ಎಂಬುದಾಗಿ ಭಾವಿಸಿ ಅಂತೆಯೇ ದುಃಖಿತಪ್ತರಾಗಿ,

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೆ ಹೋತೇ ಅಳುಕಂಡಾ
ವೇದವನ್ನು ಓದಿದವರ ಮುಂದೆ ಅಳುಕಂಡಾ
ಶಾಸ್ತ್ರವನ್ನು ಕೇಳಿದವರ ಮುಂದೆ ಅಳುಕಂಡಾ *(ವ.ಸಂ.೫೭೩)*
ನೀನು ಅತ್ತುದಕ್ಕೆ ತಕ್ಕುದು ಮಾಡುವ ಕೂಡಲಸಂಗಮದೇವಾ

ಎಂದು ನುಡಿದಿದ್ದಾರೆ.

ಬಸವಣ್ಣನವರು ದಯೆಯನ್ನು ಮಾನವರಿಗೆ ಮಾತ್ರ ಸೀಮಿತಗೊಳಿಸದೆ ಯಜ್ಞ ಯಾಗಗಳ ಹೆಸರಿನಲ್ಲಿ ಪ್ರಾಣಿವಧೆ ಮಾಡುವ ಪದ್ಧತಿಯನ್ನು ಟೀಕಿಸುವುದರ ಮೂಲಕ ಪ್ರಾಣಿಗಳಿಗೂ ವಿಸ್ತರಿಸಿದ್ದಾರೆ.

ಸಮಾಜ ಸುಧಾರಣೆಯ ಕಾರ್ಯದಲ್ಲಿ ಮನುಷ್ಯ ಮೊದಲು ತನ್ನನ್ನು ತಾನು ತಿದ್ದಿಕೊಳ್ಳಬೇಕು ತನ್ನ ಲೋಪದೋಷಗಳನ್ನು ನಿವಾರಿಸಿಕೊಂಡು ಆತ್ಮಶ್ರೀಯನ್ನು ಬೆಳೆಸಿಕೊಳ್ಳಬೇಕು ಎಂಬುದನ್ನು,

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ನಮ್ಮ
ಕೂಡಲಸಂಗಮ ದೇವಾ *(ವ.ಸಂ.೧೨೪)*

ಎಂದು ಹೇಳುವುದರ ಮೂಲಕ ಮನವರಿಕೆ ಮಾಡಿಕೊಟ್ಟರು. ಅನಕ್ಷರಸ್ತರೂ ಆದ ಕೆಳವರ್ಗದವರಿಗೆ ಧಾರ್ಮಿಕ ಆಚರಣೆಗಳಲ್ಲಿಯೂ ಅವಕಾಶ ಕಲ್ಪಿಸುವ ಸಲುವಾಗಿ,

ಹಾಲನೇಮ ಹಾಲಕೆನೆಯ ನೇಮ
ಕೆನೆತಪ್ಪಿದ ಬಳಿಕ ಕಿಚ್ಚಡಿಯನೇಮ
ಬೆಣ್ಣೆಯ ನೇಮ ಬೆಲ್ಲದನೇಮ
ಅಂಬಲಿಯ ನೇಮದವರಾರನೂ ಕಾಣೆ
ಕೂಡಲಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ *(ವ.ಸಂ.೨೩೨)*

ಎಂದು ದೈವೋಪಾಸನೆಯಲ್ಲಿದ್ದ ಡಾಂಭಿಕತೆಗೆ ಬದಲು ಕೆಳವರ್ಗದ ದಲಿತ ಜನರಿಗೆ ಸುಲಭವಾಗಿ ಎಟಕುತ್ತಿದ್ದ ಅಂಬಲಿಗೆ ಮಹತ್ವ ಕಲ್ಪಿಸಿ ಆ ಜನರಿಗೆ ಧಾರ್ಮಿಕ ನೆಲೆಯನ್ನು ಕಲ್ಪಿಸಿಕೊಟ್ಟರು. ದಲಿತೋದ್ಧಾರದ ಕಾರ್ಯದಲ್ಲಿ ಧರ್ಮವು ಚೇತನದಾಯಕ ಅಂಶವಾಗಿ ಮಾರ್ಪಟ್ಟಿತು. ತಮ್ಮ ಅಜ್ಞಾನ ದಲ್ಲಿಯೇ ಮುಳುಗಿದ್ದ ಕೆಳವರ್ಗದ ಜನತೆಗೆ ವೇದದ ನಿಜಸಂದೇಶವನ್ನು ಮರೆಮಾಚಿ ಜ್ಞಾನಜ್ಯೋತಿಯನ್ನು ಅವರಿಗೀಯದೆ ಆಳಿಯುತ್ತಿದ್ದ ಅಂದಿನ ಪುರೋಹಿತ ಸಂಸ್ಕೃತಿಯನ್ನು ವಿರೋಧಿಸಿ ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರೂ ಒಂದೇ ಎಂದು ನಂಬುವುದೆನ್ನ ಮನವು ಎಂದು ಸಾರಿದ ಬಸವಣ್ಣ ಒಂದು ರೀತಿಯಲ್ಲಿ 'ಸ್ಥಗಿತ ಸಮಾಜದ ವ್ಯವಸ್ಥೆಗೆ ಪ್ರಗತಿಪರ ಸಸಿಯನ್ನು ಕಸಿಯಾಗಿ ಬೆಳೆಸಲು' ಪ್ರಯತ್ನಿಸಿದವರಾಗಿದ್ದಾರೆ.

ಒಟ್ಟಾರೆಯಾಗಿ ಬಸವಣ್ಣನವರ ಸಾಮಾಜಿಕ ಪ್ರಜ್ಞೆಯುಳ್ಳ ವಚನಗಳ ಮೂಲಕ ಗ್ರಹಿತವಾಗುವ ಸಂಗತಿ ಎಂದರೆ, ಇವರ ಸಮಾಜ ವಿಮರ್ಶೆ ಮತ್ತು ವಿಡಂಬನೆಯಲ್ಲಿ ಉತ್ಕಟವಾದ ಸಮಾಜಪ್ರಜ್ಞೆ ಜಾಗೃತವಾಗಿರುವುದನ್ನು ಅರಿಯಬಹುದು. ಸಮಾಜ ಸುಧಾರಣೆಯ

ಕಳಕಳಿ ಪ್ರವೃತ್ತಗೊಂಡಿದೆ. ವ್ಯಕ್ತಿ– ವ್ಯಕ್ತಿಗಳ ಅಂತರಂಗದ ಪರಿಶೋಧನೆಗೆ ಪ್ರೇರಣೆ ದೊರೆತಿದೆ. ಇದರಿಂದಾಗಿ ಸಮಾಜ ಸುಧಾರಣೆಯತ್ತ ಎಲ್ಲರ ಗಮನ ಕೇಂದ್ರೀಕೃತವಾಯಿತು. ಇವರ ಈ ವಚನಗಳಲ್ಲಿ ಮಾನವತೆಗೆ ಹತ್ತಿರವಾಗುವ ಆಚಾರ–ವಿಚಾರಗಳು ಹುಟ್ಟಿಕೊಂಡಿರುವುದನ್ನು ಗುರುತಿಸಬಹುದು. ಜನತೆಯಲ್ಲಿ ದೇವರು, ಧರ್ಮ, ಪೂಜೆ, ಮುಕ್ತಿ, ಲೌಕಿಕ, ಪಾರಮಾರ್ಥಿಕ ಇವುಗಳ ಬಗೆಗೆ ಹೊಸ ಅರ್ಥವಂತಿಕೆ ಮೂಡಿತು. ಬಾಹ್ಯಾಡಂಬರ, ಬಾಹ್ಯಲಾಂಛನ, ನೇಮನಿತ್ಯ ಇವೇ ದೇವರು ಧರ್ಮ ಸಾಧನೆಗಳು ಎಂದು ಭಾವಿಸಿದ್ದ ಮೂಢ ಸಮಾಜಕ್ಕೆ ತನ್ನ ತಾನರಿದಡೆ ತನ್ನರಿವೇ ಗುರು ಎಂಬ ಅಂತರಾತ್ಮ ಜಾಗೃತಗೊಂಡಿತು. ಸಮಾಜದಲ್ಲಿ ಸೌಹಾರ್ದತೆ, ಸಮಾನತೆಗಳು ಅಗತ್ಯವೆನಿಸಿದವು. ಸಮಾಜ ಹೊಸ ಅಧ್ಯಾಯದಲ್ಲಿ ಕಾಲಿಟ್ಟು ಹೊಸ ಜೀವನದಲ್ಲಿ ಪ್ರವೇಶವನ್ನು ಪಡೆಯಿತು.

❑

ಬಸವಣ್ಣನವರ ಕಾಲಜ್ಞಾನ ಸಾಹಿತ್ಯ

●

ಡಾ. ಕೆ. ರವೀಂದ್ರನಾಥ

೧. ಪೀಠಿಕೆ

ಶಿವಶರಣರು ಶಿವಜ್ಞಾನಿಗಳಾಗಿದ್ದಂತೆ ಕಾಲಜ್ಞಾನಿಗಳೂ ಆಗಿದ್ದರು. ಪಾತಂಜಲಿ ದರ್ಶನದ 'ಪರಿಣಾಮತ್ರಯ ಸಂಯಮಾದಕೀ ತಾನಾಗತ ಜ್ಞಾನಂ' ಎಂಬ ಹೇಳಿಕೆಯ ಪ್ರಕಾರ ಧರ್ಮ, ಲಕ್ಷಣ, ಅವಸ್ಥಾನಗಳೆಂಬ ಮೂರು ಪರಿಣಾಮಗಳಲ್ಲಿ ಸಂಯಮ ಮಾಡುವುದರಿಂದ ಕ್ರಮವಾಗಿ ಭೂತ, ವರ್ತಮಾನ, ಭವಿಷ್ಯತ್ ಕಾಲದ ಜ್ಞಾನವಾಗುವುದು. ಹೀಗಾಗಿ ಇದೊಂದು ಸಿದ್ಧಿ. ಇದನ್ನೇ ಅಂತಃಸ್ಫುರಣದಿಂದ ತಿಳಿಯುವ ತ್ರಿಕಾಲ ಜ್ಞಾನವೆನ್ನುತ್ತೇವೆ. ಜೈನರಲ್ಲಿ ಇದನ್ನು 'ಅವಧಿಜ್ಞಾನ' ಎನ್ನುತ್ತಾರೆ. ಇಲ್ಲಿ ಅವಧಿ ಎಂದರೆ ಕಾಲವೆಂದರ್ಥ, ಅವಧಿ ಜ್ಞಾನವೆಂದರೆ ಕಾಲಜ್ಞಾನ. "ವೀರಶೈವ ಕಾಲಜ್ಞಾನ ಸಾಹಿತ್ಯವು ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ನೈತಿಕ ದೃಷ್ಟಿಯಿಂದ ಮಹತ್ವದ ಕೊಡುಗೆಯಾಗುತ್ತದೆ. ಹನ್ನೆರಡನೆಯ ಶತಮಾನದ ವೀರಶೈವ ಕ್ರಾಂತಿಯಿಂದ ಇದು ಪ್ರೇರಿತವಾಗಿ ಅನಂತರದ ಧಾರ್ಮಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳಲ್ಲಿ ಅಂದಂದಿನ ಯುಗಧರ್ಮವನ್ನು ರೂಪಿಸಿಕೊಂಡು ಜನತೆಯಲ್ಲಿ ಮಹಾ ಪುರುಷರ ವಾಕ್ಯವಿಚಾರವಾಗಿ ಶ್ರದ್ಧೆ ನಂಬಿಕೆಯನ್ನು ಹೆಚ್ಚಿಸಿರುವುದಲ್ಲದೆ; ಅವರನ್ನು ಅಪಾಯದ ಸಂದರ್ಭಗಳಲ್ಲಿ ಎಚ್ಚರಿಸುವ ಕಾರ್ಯವನ್ನು ಮಾಡಿದೆ.[೧] (ಗೌರವ (ಪ್ರೊ. ಭೂಸನೂರ ಮಠ ಅಭಿನಂದನಾ ಗ್ರಂಥ) ಸಂ. ಬಿ.ವಿ. ಶಿರೂರ, ಪು. ೧೯೮–೧೯೯) ಪುರಾಣ ಕವಿಗಳು, ಅನುಭಾವಿ ಕವಿಗಳಂತೆ ವಚನಕಾರರು ಈ ಸಾಹಿತ್ಯ ಸೃಷ್ಟಿಯಲ್ಲಿ ಪ್ರಮುಖರೆನಿಸಿದ್ದಾರೆ.

೨. ಕಾಲಜ್ಞಾನ ಸಾಹಿತ್ಯದ ಲಕ್ಷಣ

೧. ಕಾಲಜ್ಞಾನ ಸಾಹಿತ್ಯ ಪ್ರಾರಂಭದಲ್ಲಿ ವಚನ (ಗದ್ಯ) ಪ್ರಧಾನವಾಗಿದ್ದಂತೆ ತೋರುತ್ತದೆ. ಮುಂದಿನವರು ಈ ವಚನಗಳನ್ನನುಸರಿಸಿ ಪದ, ಪದ್ಯ, ಶ್ಲೋಕ, ತ್ರಿವುಡೆ, ಸಾಂಗತ್ಯ; ಷಟ್ಪದಿ, ಲಾವಣಿ ಮುಂತಾದ ದೇಶಿಮಟ್ಟು ಗಳಲ್ಲಿ ರೂಪಾಂತರಿಸಿದ್ದಂತೆ ಕಾಣುತ್ತದೆ. ಕೆಲವು ಕಡೆ ಗುರು–ಲಘು, ಪ್ರಾಸ, ಮಾತ್ರೆಕೆಗಳು ನಿಯಮಾನುಸಾರ ಬಾರದಿರುವುದು ಈ ಅಭಿಪ್ರಾಯಕ್ಕೆ ನಿದರ್ಶನವಾಗಿದೆ.

೨. ಪದ್ಯಾತ್ಮಕವಾಗಿ ಹೇಳಿದ ನಂತರ ನಡುನಡುವೆ ವಚನವೊಂದು ಕೊಟ್ಟು "ಈ ರೀತಿ ಚೆನ್ನಬಸವಣ್ಣನವರು ಧರೆಯೊಳು ನಡೆಯುವ ಕುರುಹಿನ ವಾಕ್ಯವಂ ಪೇಳಿ, ಇದಲ್ಲದೆ ಮುಂದೆ ನಾವು ಬರುವ ಕಾಲಕ್ಕೆ ಏಳುಮಂದಿ ದುರ್ಗಿಯರ ನಿರ್ಣಯವೆಂ ಪೇಳುತಿರ್ದರದೆಂತೆನೆ" ಎಂದು ಹಿಂದಿನ ಪದ್ಯದ ಸಾರಾಂಶವನ್ನು ಮುಂದಿನ ಪದ್ಯದ ಪ್ರಾಸ್ತಾವಿಕತೆಯನ್ನು ಸೂಚಿಸುವ ರೀತಿ ಶೂನ್ಯ ಸಂಪಾದನೆಗಳ ಮಾದರಿಯಲ್ಲಿವೆ.
೩. ಸ್ವರವಚನಗಳಂತೆ ರಾಗ–ತಾಳಗಳ ನಿರ್ದೇಶನ ಜೊತೆಗೆ ಸುವ್ವಿ ಸುವ್ವಿ, ಸೂರಿಯೊ, ಕೋಲು, ಕೋಲು, ಬೆಡಗ ಕೇಳಿರೊ, ಹುಯ್ಯಲ ಕೇಳಿರಣ್ಣ, ಡಂಗುರ, ಕುಕ್ಕುಕ್ಕೂ, ಮ್ಯಾ, ದಿಮ್ಮಿಸಾಲೆ, ಕಣೆಯ ಕೇಳಿರೋ, ಕೊರವಂಜಿ ನಾ ಬಂದೆ, ಉಲಿಯುತಿದೆ ಪಲ್ಲಿ, ಜೋ ಜೋ, ನೋಡಿರಣ್ಣ, ಕೇಳಿರಣ್ಣ ಎಂಬ ಜಾನಪದ ಪಲ್ಲವಿಗಳಿಂದ ಈ ಸಾಹಿತ್ಯ ಶೈಲಿ ಹಾಗೂ ರೂಪಗಳು ಜನಪದಕ್ಕೆ ನಿಕಟವಾಗಿ ಸಂಯೋಜಿತ ಗೊಂಡಿವೆ.
೪. ಯಥಾವತ್ತತೆ ಈ ಸಾಹಿತ್ಯದ ಇನ್ನೊಂದು ಲಕ್ಷಣ. ಆದರ್ಶಕ್ಕಿಂತ ವಾಸ್ತವತೆಗೆ ಇಲ್ಲಿ ಮಹತ್ವ ಹೆಚ್ಚು.
೫. ಬೆಡಗು ಈ ಸಾಹಿತ್ಯದ ಮತ್ತೊಂದು ಲಕ್ಷಣ, ಲೌಕಿಕ ಸಾದೃಶ್ಯಗಳನ್ನು ವಿಪರ್ಯಾಸವಾಗಿ ವರ್ಣಿಸುವುದು ಇಲ್ಲಿಯ ವೈಶಿಷ್ಟ್ಯ. ಉದಾಹರಣೆಗೆ ಇಲಿ ಬೆಕ್ಕು ನುಂಗೀತು; ಮೊಲ ನಾಯಿ ತಡೆದೀತು, ಕಲ್ಲು ಕೋಳಿ ಕೂಗಿತು ಇತ್ಯಾದಿ.
೬. ಸಾಂಕೇತಿಕತೆ ಮೊಗದೊಂದು ಲಕ್ಷಣ. ವಾಚ್ಯಾರ್ಥ ಒಂದಾದರೆ ಸೂಚ್ಯಾರ್ಥ ಇನ್ನೊಂದು ತೆರನಾಗಿರುತ್ತದೆ. ಮೈಲಾರ ಲಿಂಗನ ಕಾರಣಿಕದಂತೆ ವಸ್ತು, ಪ್ರಾಣಿ, ಸಸ್ಯಗಳಿಗೆ, ಆರೋಪಿಸಿ ಹೇಳುವುದು ಇದರ ರಂಜಕ ಶೈಲಿ. ಉದಾಹರಣೆಗೆ : ಉತ್ತರ ದಿಕ್ಕಿನಿಂದ ಉರಿಯೆದ್ದು ಬಂದೀತು. (ಆಪತ್ಕಾಲ) ಗಂಡನಿಲ್ಲದೆ ಬಾಲೆ ಮಗನ ಹಡೆದಾಳು (ಅನೈತಿಕತೆ), ಹಾಲು ಸಾಗರ ಉಕ್ಕಿ ಹರಿದೀತು (ಸಮೃದ್ಧಿ) ಇತ್ಯಾದಿ.
೭. ಐತಿಹ್ಯ, ಪುರಾಣ, ನಂಬಿಕೆ, ಸಂಪ್ರದಾಯಗಳಿಂದ ಕೂಡಿದ ಈ ಸಾಹಿತ್ಯವನ್ನು ವೀರಶೈವರ ಕೈಫಿಯತ್ತುಗಳೆಂದು ಕರೆದಿರುವ ದಿ. ಡಾ.ವಿ. ಶಿವಾನಂದ ಅವರ ಮಾತುಗಳಿಂದ ಕೈಫಿಯತ್ತುಗಳ ವೈಲಕ್ಷಣಗಳು ಈ ಸಾಹಿತ್ಯಕ್ಕಿದೆಯೆಂಬುದನ್ನು ಮನಗಾಣಬೇಕು.

೩. ಕಾಲಜ್ಞಾನದ ವಸ್ತು ವಿಷಯ

ಕಾಲಜ್ಞಾನ ಸಾಹಿತ್ಯ ನಾಡಿನ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ವಸ್ತುವನ್ನೊಳಗೊಂಡ ಭವಿಷ್ಯ ಸಾಹಿತ್ಯ, ಕಾಲಜ್ಞಾನ ವಚನಕಾರರನ್ನು ಕುರಿತು ಡಾ. ಎಲ್. ಬಸವರಾಜು ಅವರು 'ಜನರ ಯೋಗಕ್ಷೇಮದ ಗಡಿ ರಕ್ಷಕರಾಗಿ; ಅಪಾಯ ಬರುವ ಸಂದರ್ಭಗಳಲ್ಲಿ ಅವರನ್ನು ಎಚ್ಚರಿಸಿದ್ದಾರೆ'[೧] ಎನ್ನುತ್ತಾರೆ. (ಶಿವದಾಸ ಗೀತಾಂಜಲಿ, ಡಾ. ಎಲ್. ಬಸವರಾಜು, ಪು. ೫೮). ಜನರ ರಕ್ಷಣೆಯ ಉದ್ದೇಶವೇ ಕಾಲಜ್ಞಾನ ಸಾಹಿತ್ಯದ ಪ್ರಮುಖ ಆಶಯವಾಗಿದೆ.

ರಾಜಕೀಯವಾಗಿ ಬಿಜ್ಜಳನ ವಧೆ; ಮುಸ್ಲಿಂ ಆಳ್ವಿಕೆ, ಹೊಯ್ಸಳ ಪಟ್ಟಾಧಿಕಾರದ ಕಾಲ; ಕಮ್ಮಟ ದುರ್ಗವನ್ನು ಕಂಪಿಲರಾಯ ಕಟ್ಟಿದ್ದು, ಮುಸ್ಲಿಂ ರೊಂದಿಗೆ ಹೋರಾಡಿ ರಾಮನಾಥ

ಮರಣ ಹೊಂದಿದ್ದು, ವಿಜಯನಗರದ ಅವನತಿ ಹೊಂದಿದ್ದನ್ನು ಕಾಲಜ್ಞಾನ ಸಾಹಿತ್ಯ ವಿವರವಾಗಿ ದಾಖಲಿಸುತ್ತದೆ. ಹಾಗೆಯೇ ವೀರಶೈವ ೧೦೧ ವಿರಕ್ತರಿಗೆ ಪ್ರೌಢದೇವರಾಯನ ಆಶ್ರಯ, ನಂಜರಾಜ, ಕುಂಜಸೋಮಣ್ಣ ನಾಯಕ, ಬುಕ್ಕೊಡೆಯ, ಕೇತುಸಾಗರದ ಶೆಟ್ಟಿ, ಬಿಜ್ಜಾವರದ ಪ್ರಭು, ಭೋಗವಾಡಿಯ ಪ್ರಭು ಮುಂತಾದ ವೀರಶೈವ ಪ್ರಭುಗಳು ಮಠ-ಮಾನ್ಯಗಳ ನಿರ್ಮಾಣ-ರಕ್ಷಣೆಗೆ ನೀಡಿದ ಸಹಕಾರವನ್ನು ಕಾಲಜ್ಞಾನ ಸಾಹಿತ್ಯ ತಿಳಿಸುತ್ತದೆ. ಧಾರ್ಮಿಕವಾಗಿ ೧೨ ವರ್ಷಗಳ ನಂತರ ಕಲ್ಯಾಣಕ್ಕೆ ಬಂದು ಅಲ್ಲಮಪ್ರಭು ಶೂನ್ಯಪೀಠವೇರುವುದು, ಜೈನರ ಉಪಟಳ ಹೆಚ್ಚಾಗಿ ವೀರಶೈವ ಮತವನ್ನು ಜರಿಯುವುದು ಬಸವನ ಪುರಾಣವನ್ನು ಹಳಿಯುವುದು, ಪ್ರೌಢದೇವರಾಯನ ಆಳ್ವಿಕೆ ನಂತರ ೭೦೧ ಮಂದಿ ವಿರಕ್ತರ ಉದಯವಾಗುವುದನ್ನು ವಿವರಿಸುತ್ತದೆ. ಧಾರ್ಮಿಕ ಹತ್ಯಾಕಾಂಡಗಳಾದ ಹರಳಯ್ಯ-ಮಧುವಯ್ಯರ ಎಳಹೂಟೆ ಶಿಕ್ಷೆ; ತುರುಕರು ಕಲ್ಯಾಣ ಕೆಡಿಸುವ ಕಲಬುರ್ಗಿ ಕಟ್ಟುವುದು, ಹಂಪೆಯ ಗೋಪುರಗಳ ಧ್ವಂಸ, ಗುಮ್ಮಯ್ಯ-ಪೆಮ್ಮಯ್ಯಗಳಿಂದ ಗುಮ್ಮಳಾಪುರದ ರಚನೆಯನ್ನು ಕಾಲಜ್ಞಾನದಲ್ಲಿ ಚಿತ್ರಿಸಲಾಗಿದೆ.

ಮತಾಂತರ ಪ್ರಸಂಗಗಳಾದ ಪದ್ಮರಸನೆಂಬ ಬ್ರಾಹ್ಮಣ ವೀರಶೈವಾ ಚಾರ್ಯನಾಗುವುದು, ತ್ರಿಭುವನತಾತ ಪದ್ಮರಸನೊಂದಿಗೆ ವಾದಿಸಿ ವೀರಶೈವ ದೀಕ್ಷೆ ಪಡೆಯುವುದು. ಹಾಗೆಯೇ ಶೂನ್ಯಪೀಠ, ಬಾಳೇಹಳ್ಳಿಪೀಠ, ನೂರೊಂದು ವಿರಕ್ತರ, ಏಳನೂರೊಂದು ಗಣವರರ ಸಂಪ್ರದಾಯಗಳನ್ನು ಇಲ್ಲಿ ವಿವರಿಸಲಾಗಿದೆ.

ರಾಜಕೀಯ ಶಿಥಿಲತೆಯಿಂದ ಸಾಮಾಜಿಕವಾಗಿ ನೈತಿಕ ಅಧಃಪತನ ಹಾಗೂ ಆಚಾರ-ವಿಚಾರಗಳಲ್ಲಿ ಸ್ವೇಚ್ಛಾಚಾರ ಪ್ರವೃತ್ತಿಗಳು ಹೆಚ್ಚಿ ವೀರಶೈವ ಮತದಲ್ಲಿ ಒಳಪಂಗಡಗಳು, ಹೊಲೆ-ಹದಿನೆಂಟು ಜಾತಿ ಒಂದಾಗುವ ಶುಭಸೂಚನೆ. ಶ್ರೀಗಿರಿಯ ಮೇಲೆ ವೇಶ್ಯೆಯರ ಗುಡಿಸಲು ನಿರ್ಮಾಣ; ಜಂಗಮರ ಓಣಿಯಲ್ಲಿ ಕುರಿ-ಕೋಳಿ ಕೊಯ್ವುದು ಇತ್ಯಾದಿ ವಿವರಗಳು ಇಂದು ಅಸ್ತಿತ್ವಕ್ಕೆ ಬಂದಿರುವುದನ್ನು ಗಮನಿಸಬೇಕು. ವಿಶೇಷವೆಂದರೆ, ಮುಸ್ಲಿಂರನ್ನು ಒಂದು ರಾಕ್ಷಸ ಪಂಗಡಕ್ಕೆ ಸೇರಿಸಿ ಅವರಿಂದಾಗಬಹುದಾದ ಅನಾಹುತಗಳನ್ನು ಪಟ್ಟಿಮಾಡಿ ಹೇಳಿರುವುದನ್ನು ಬಹುತೇಕ ಕಾಲಜ್ಞಾನಗಳಲ್ಲಿ ಕಾಣಬಹುದು. ಮಾರಿ-ಮಸಣಿ ಮುಂತಾದವರ ಉಪಟಳ; ಮಳೆ-ಬೆಳೆಗಳಡಗುವ ವಿಚಾರ, ಕೊನೆಗೆ ಎಚ್ಚೆತ್ತು ಶಿವಭಕ್ತಿ ಮಾರ್ಗ ಹಿಡಿಯು ವರೆಂಬ ಆಶಾವಾದ ಇಲ್ಲಿಯ ವಸ್ತು. ಈ ದೃಷ್ಟಿಯಿಂದ ಕಾಲಜ್ಞಾನ ಸಾಹಿತ್ಯ ಇತಿಹಾಸದ ಕಟ್ಟು ಕಥೆಯಲ್ಲ. ಕಾಲಜ್ಞಾನ ಕವಿಗಳು ಅತಿಮಾನುಷರಲ್ಲ; ಕಲಿಯುಗದಲ್ಲಿ ಬದುಕಿದ ದಿವ್ಯಜ್ಞಾನಿಗಳು. ಕಲಿ ಪುರುಷನಿಗೆ ಆಳಾದವರಲ್ಲ ಸಾಮಾನ್ಯ ಜನರ ಕಷ್ಟ-ನಷ್ಟಗಳಿಗೆ ಸಾಮಾಜಿಕ ಆಗು-ಹೋಗುಗಳನ್ನು ದುಃಖ-ದುಮ್ಮಾನಗಳನ್ನು ತಿಳಿದು ಎಚ್ಚರಿಕೆಯ ಗಂಟೆಯನ್ನು ಬಾರಿಸಿದವರು; ರಾಷ್ಟ್ರಹಿತ ಚಿಂತಕರು.

ಕಾಲಜ್ಞಾನ ಸಾಹಿತ್ಯಾಸಕ್ತ ವಿದ್ವಾಂಸರು ಅವಗಾಹನೆಗಾಗಿ ಬಸವಣ್ಣನವರ ಕಾಲಜ್ಞಾನ ಸಾಹಿತ್ಯ ಪಾಠವನ್ನು ಇಲ್ಲಿ ಕೊಡಲಾಗಿದೆ.

೪. ಬಸವಣ್ಣನವರ ಕಾಲಜ್ಞಾನ ವಚನ

ಮರ್ತ್ಯಲೋಕದ ಮಹಾಗಣಂಗಳಿಗೆ ಶರಣು ಶರಣಾರ್ಥಿ – ರಾಕ್ಷಸ ನಾಮ ಸಂವತ್ಸರದ

ಪಾಲ್ಗುಣ ಶುದ್ಧ ಏಕಾದಶಿಯಲ್ಲೂ, ಇಪ್ಪತ್ತೇಳು ನಕ್ಷತ್ರ ಪಾಣಿ ಗ್ರಹಣ ಶುಭ ಕಲ್ಯಾಣದೊಳು ಸೋಮವಾರ ಅಹೋರಾತ್ರಿಯಲ್ಲಿ ಬಸವರಾಜ ದೇವರು ನಿರೂಪವ ಮಾಡಿದರು.

ಕೃತಯುಗ ಪ್ರಮಾಣ (೩೨೨೮೦೦೦) ಮೂವತ್ತೆರಡು ಲಕ್ಷದ ಇಪ್ಪತ್ತೆಂಟು ಸಾವಿರ ವರುಷ ತಿರುಗಿ ಬರುವಲ್ಲಿ, ದೇವಾಂಗನೆಂಬ ಭಕ್ತನಾಗಿ ಬಂದು ದಾಸೋಹವ ಮಾಡುವಲ್ಲಿ ಕಾಯಶೂನ್ಯನೆಂಬ ಜಂಗಮನಾಗಿ ಬಂದು ಲಿಂಗಾರ್ಚನೆಯ ಮಾಡುವ ಭೇದವ ನೀವು ಬಲ್ಲಿರಲ್ಲದೆ ಮತ್ತಾರೂ ಅರಿಯರು. ತ್ರೇತಾಯುಗ (೧೬೯೬೦೦೦೦) ಹದಿನಾರು ಲಕ್ಷದ ತೊಂಬತ್ತಾರು ಸಾವಿರ ವರುಷ ತಿರುತಿರುಗಿ ಬರುವಲ್ಲಿ ಘಂಟಾಕರ್ಣನೆಂಬ ಭಕ್ತನಾಗಿ ಬಂದು ದಾಸೋಹವ ಮಾಡುವಲ್ಲಿ, ನೀಲಕಂಠನೆಂಬ ಜಂಗಮನಾಗಿ ಬಂದು, ಲಿಂಗಾರ್ಚನೆಯ ಮಾಡುವ ಭೇದವ ನೀವು ಬಲ್ಲಿರಲ್ಲದೆ ಮತ್ತಾರೂ ಅರಿಯರು.

ದ್ವಾಪರಯುಗ (೮೬೪೦೦೦) ಎಂಟು ಲಕ್ಷದ ಅರುವತ್ತುನಾಲ್ಕು ಸಾವಿರ ವರುಷ ತಿರು ತಿರುಗಿ ಬರುವಲ್ಲಿ, ವೃಷಭನೆಂಬ ಭಕ್ತನಾಗಿ ಬಂದು ದಾಸೋಹವ ಮಾಡುವಲ್ಲಿ, ಅನಿಮಿಷನೆಂಬ ಜಂಗಮನಾಗಿ ಬಂದು ಲಿಂಗಾರ್ಚನೆಯ ಮಾಡುವ ಭೇದವ ನೀವು ಬಲ್ಲಿರಲ್ಲದೆ ಮತ್ತಾರೂ ಅರಿಯರು.

ಕಲಿಯುಗ (೪೩೨೦೦೦) ನಾಲ್ಕು ಲಕ್ಷದ ಮೂವತ್ತೆರಡು ಸಾವಿರ ವರುಷಗಳಲ್ಲಿ ನನ್ನನ್ನು ಕೈಲಾಸದಲ್ಲಿ, ತಡೆದ ದ್ವಾರಪಾಲಕ ಬಂದು ಚಾಳುಕ್ಯ ರಾಯರ ಜಠರದಲ್ಲಿ ಜನಿಸಲು ಬಿಜ್ಜಳನೆಂಬ ನಾಮವಾಯಿತು. ಇಂಗಳೇಶ್ವರ ಬಾಗೇವಾಡಿಯ ಮಂಡಿಗೆ ಮಾದಿರಾಜನ ಅರಸಿ ಮಾದಲಾಂಬಿಕೆಯ ಗರ್ಭದಲ್ಲಿ ಜನಿಸಿ ಬಂದಲ್ಲಿ, ಬಸವಣ್ಣನೆಂಬ ನಾಮವಾಯಿತು.

ನಾವು ಬಂದ ಕಾರ್ಯಕ್ಕೆ ನೀವು ಬಂದಿರಿ. ನೀವು ಬಂದ ಕಾರ್ಯಕ್ಕೆ ನಾವು ಬಂದೆವು. ನಾವು ನೀವು ಬಂದ ಕಾರ್ಯಕ್ಕೆ ಬಂದವರು ಅಲ್ಲಮ ಪ್ರಭುದೇವರು ಅಲ್ಲದೆ ಮತ್ತಾರೂ ಅಲ್ಲ. ಕೆಲವು ದಿನ ಕಲ್ಯಾಣ ಪ್ರಣತೆ ಯಾಯಿತು. ನಾನೇ ತೈಲವಾದೆನು. ಚಿಕ್ಕದಂಡನಾಯಕರೆ ಬತ್ತಿಯಾದರು. ಅಲ್ಲಮ ಪ್ರಭುದೇವರೆ ಜ್ಯೋತಿಯಾದರು. ಕೆಲವು ದಿನ ಪ್ರಜ್ವಲಿಸುತ್ತಾ ಇರಲು ಅಷ್ಟರಿಂದಲೇ ಪ್ರಣತಿ ಒಡೆಯಿತು. ತೈಲ ಒಸರಿತು. ಬತ್ತಿ ಸವೆಯಿತ್ತು. ಜ್ಯೋತಿ ನಿರ್ವಯಲಾಯಿತು.

ಸೊಡರಳಿದು ಸೊಡ್ಡಳ ಬಾಚರಸ, ಸುಂಕದ ಬಂಕಣ್ಣ, ಹಡಪದ ಅಪ್ಪಣ್ಣ, ಕೊಂಡಗುಳಿಯ ಕೇಶಿರಾಜಯ್ಯಗಳು, ಕಲಕೇತ ಬ್ರಹ್ಮಯ್ಯಗಳು, ಕೆಂಭಾವಿ ಭೋಗಣ್ಣಗಳು ಮಡಿವಾಳ ಮಾಚಯ್ಯಗಳು ಮೊದಲಾದ ಏಳುನೂರ ಎಪ್ಪತ್ತು ಅಮರ ಗಣಂಗಳು ನೀವು ಅನುಭವ ಮಾಡಿ ನಿಮ್ಮ ಕೈಯೊಳಗೆ ಚಿಕ್ಕದಂಡನಾಯಕರ ಕೊಟ್ಟು, ನಾವು ನಮ್ಮ ಕಪ್ಪಡಿಯ ಸಂಗಮೇಶ್ವರ ದೇವರಲ್ಲಿಗೆ ಹೋದೆವು. ಹೋದ ಮೂರುವರೆ ತಿಂಗಳ ಮೇಲೆ ಹರಳಯ್ಯ, ಮಧುವಯ್ಯಗಳ ದೆಸೆಯಿಂದ ಕದನ ಹುಟ್ಟೀತು. ಜಗದೇವ ಮಲ್ಲೆ ಬೊಮ್ಮಣ್ಣಗಳು ಪಂಜುಕಾರರಾಗಿ ಬಿಜ್ಜಳನ ಕ್ಷಯ ಮಾಡ್ಯಾರು. ಅಳಿಯ ಬಿಜ್ಜಳರಾಯ ದಾಳಿಯ ಹರಿದಾನು. ಕಾದರವಳ್ಳಿ ಕಾದ್ಯಾರು. ತಡೆಗೋಡಿಯಲ್ಲಿ ತಡೆದಾರು. ಮುರುಗೋಡಿಯಲ್ಲಿ ಮುರಿದಾರು. ಬಯಲ ಬಸವಣ್ಣನಲ್ಲಿ ನಮ್ಮ ಕೂಗಿನ ಮಾರಿ ತಂದೆಗಳು, ಕೂಗಿನ ಬೊಬ್ಬೆಯನ್ನಿಟ್ಟು ಹೋದಾರು. ನಮ್ಮ ಅಸಂಖ್ಯಾತ ಮಹಾಗಣಂಗಳು ಆಸನವನಿಕ್ಕಿ ಮಾತನಾಡ್ಯಾರು. ಉಳುಮೆಯ ಮಹಾಮನೆಗೆ ಚಿತ್ತೈಸ್ಯಾರು, ಕಲ್ಯಾಣ ಕೆಟ್ಟು ಕಲಬುರುಗಿ ಪಟ್ಟಣವೆನಿಸಿ

ಕೊಂಡೀತು. ಕೊಕಲುವೆನಿಸೀತು. ಮೂಕಂಡಿಕೆಯ ಬಿಲ್ಲಿನವರು ಘನವಾದರು. ಚಪ್ಪಟೆಗಾತಿಯರು ಘನವಾದರು. ಅಲ್ಲ ಇಲ್ಲ ಎಂಬ ಮುಸಲಮಾನ ರಾಕ್ಷಸರು ಏಳು ಚಕ್ರವನ್ನೆತ್ತಿ ರಾಜಕುಲವೆನಿಸಿ ರಾಜ್ಯವನಾಳ್ಯಾರು. ಶಂಭು ತ್ರಿಪುರಾಂತಕ ದೇವರ ಶಿಖರವಳಿದಾರು. ಗರುಡನ ಕಂಭ ಮುರಿದು, ಮಸೀತಿಯ ಕಟ್ಯಾರು. ಖಡ್ಗದ ಕರದವರು ಘನವಾದರು. ಡೊಂಕು ಬಿಲ್ಲಿನವರು ಘನವಾದರು. ಆ ತ್ರಿಪುರಾಂತಕದೇವರ ಮುಂದೆ ಕಪಿಲೆಯ ಕೊಂದು ಬಾಣಸವ ಮಾಡ್ಯಾರು. ಮುಂದವರನು ಎಳೆದೊಯ್ದಾರು. ಗೋಹತ್ಯವಂ ಮಾಡ್ಯಾರು. ಚೆಪ್ಪಟಿಯವರು ಹುಟ್ಟಿ ಸಂಗಯ್ಯ ದೇವರ ಶಿಖರವ ಕೆಡಹ್ಯಾರು. ಬೆಳ್ಳಿಯ ಗುಂಡು ಡಿಳ್ಳಿಗೆ ಹೋದೀತು. ಇದು ತಿರುಣವರಣಾದೀತು.

ನಾವು ಹೋದ ಏಳುನೂರು ವರುಷದ ಮೇಲೆ ಕಲಬುರುಗಿ ಕೆಟ್ಟು ಬಿದುರೆ ಪಟ್ಟಣವೆಂಬ ಪೆಸರಾದೀತು. ಆ ಪಟ್ಟಣದಲ್ಲಿ ರಾಜಕುಲವೆನಿಸಿ ಆಳ್ಯಾರು. ಪಶ್ಚಿಮದಿಂದ ರಾಕ್ಷಸರು ಬಂದಾರು. ಪತಿವ್ರತೆಯರು ಜಾರಸ್ತ್ರೀಯ ರಾದರು. ವೇಶಿಯರ ನಡೆ ಕೆಟ್ಟೀತು. ಮುಂಡೆಯರ ಕುಂಡೆ ಕುಣಿದಾಡೀತು. ಪುಣ್ಯ ಪಾಪಕ್ಕೆ ಪರಿವರ್ತನೆಯಾದೀತು. ಅನಂತ ಹಿರಿಯರೆಲ್ಲಾ ಮುಖಭಂಗಿತರಾದಾರು. ನೈಋತ್ಯದಲ್ಲಿ ವಿರೂಪಾಕ್ಷ ದೇವರ ಮುಂದಣ ಮನ್ಮಥಕೊಂಡ ಹೂಳೀತು. ಬಿದುರೆನಗರ ಕೆಟ್ಟು ಹೋದೀತು. ಗಾಜಿನ ಕಳಶವಿಟ್ಟಾರು. ತೇರುತೀರ್ಥ ಹಾಳಾದವು. ಲಿಂಗದ ಕಲ್ಲಿಗೆ ಕುದುರೆಯ ಕಟ್ಯಾರು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಕುದುರೆ ಕಣುನಲ್ಲಿಯ ಸವಿದೀತು. ಮಾತಾಂಗ ಪರ್ವತದಲ್ಲಿ ಮಸೀತಿ ಕಟ್ಟೀತು. ಗೋಹತ್ಯವಂ ಮಾಡ್ಯಾರು. ಆ ಪರ್ವತದ ಮೇಲೆ ಜಂಗಮರೆ ಅನಾಚಾರಿಗಳಾದಾರು. ಭಕ್ತರೆಲ್ಲ ಹೊಲೆಯರಾದಾರು. ಆ ಪರ್ವತದ ಮೇಲೆ ಠಕ್ಕುಠೌಳಿ ಘನವಾದಾವು. ಮುಡುಹುಗನ್ನಗತಕ ಹೆಚ್ಚಾದೀತು. ಆ ಪರ್ವತದ ಮೇಲೆ ಸುರೆಮಾಂಸ ಮಾರೀತು. ವೇಶಿಯರು ಗುಡಿಸಲ ಕಟ್ಯಾರು. ಪಾಪ ಘನವಾದೀತು. ಆ ಪರ್ವತದ ಮೇಲೆ ಜಂಗಮದ ರಕುತ ಹರಿದೀತು. ಆ ಪರ್ವತ ಕೆಟ್ಟು ಅರಣ್ಯವಾದೀತು.

ನಾವು ಹೋದ ಏಳುನೂರು ಎಪ್ಪತ್ತು ವರ್ಷದ ಮೇಲೆ ಉತ್ತರದಲ್ಲಿ ರಾಕ್ಷಸಿ ಹುಟ್ಟ್ಯಾಳು. ವಿರೋಧೀ ಸಂವತ್ಸರದಲ್ಲಿ ಆರು ದರುಶನ ಹದಿನೆಂಟು ಸಮಯಕ್ಕೆ ವಿರೋಧ ಹುಟ್ಟೀತು. ವಿಕೃತಿಯಲ್ಲಿ ಹದಿನೆಂಟು ಕುಲವೆಲ್ಲಾ ಒಂದು ತಗೆಯಲ್ಲಿ ಉಂಡೀತು. ನಾನಾ ವರ್ಣದ ಜಾತಿ ಏಕವರ್ಣವಾದೀತು. ಉತ್ತರ ರಾಕ್ಷಸೀ ದಕ್ಷಿಣಕ್ಕೆ ನಡೆದಾಳು. ದಕ್ಷಿಣ ಭಾಗದಲ್ಲಿ ವಿರೂಪಾಕ್ಷ ದೇವರ ಮುಂದೆ ವಿಷ್ಣುವಿನ ಅವತಾರವಾದೀತು. ನೆಮಥಬಾದ ಎಂಬ ನಗರದಲ್ಲಿ ಕೃಷ್ಣಾವತಾರವಾದೀತು. ಶತ್ರು ಮಿತ್ರ ಸಮಾರಾಧನೆಯಾಯಿತು. ದೇವರೂ ಮನವರು ಕಟ್ಟಿ ಕುಂಡಿರಿಸಿಕೊಂಡಾರು. ಗುರುಹಿರಿಯರು ಮುಖಭಂಗಿತರಾದಾರು. ಇಂತಪ್ಪ ಮೂರೂವರೆ ವರುಷ ಚಕ್ರವರ್ತಿ ರಾಜಕುಲವೆನಿಸಿ ಕೊಂಡಾರು. ಹೊಲೆಯಂಗೆ ದಂಡಿಗೆ, ಸತ್ತಿಗೆ, ಹಾಸುಮಂಚ, ನಾಟಕ ಶಾಲೆ ಆದೀತು. ಗಂಡ ಹೆಂಡರಿಗೆ ಒಂದೇ ಸೀರೆಯಾದೀತು. ಉಂಬ ತಣಿಗೆ ಮಾರಿ ಹೋದೀತು.

ಖರಸಂವತ್ಸರಕ್ಕೆ ರಾಕ್ಷಸರು ಸೂಕ್ಷ್ಮವಾದರು. ಶುಭಕೃತು ಸಂವತ್ಸರ ಇಪ್ಪತ್ತ ಮೂರೂವರೆ ವರುಷ ಚಕ್ರ ಬಯಲಾದೀತು. ಶೋಭಕೃತ ಸಂವತ್ಸರಕ್ಕೆ ರಾಕ್ಷಸರಿಗೆ ಕದನ ಹುಟ್ಟೀತು. ಕ್ರೋಧಿಸಂವತ್ಸರಕ್ಕೆ ಮುಂದು ಹಿಂದಾದೀತು. ಹಿಂದು ಮುಂದಾದೀತು. ಪಶ್ಚಿಮದಿಂದ

ರಾಕ್ಷಸರು ಬಂದಾರು. ಬಿದುರೆಯಲ್ಲಿ ಮಹಾಮಧುತ್ರಿಯಂಕಟರು ಅಮದರಾಶಿಗೆ ಹಿಮಸೇತು ಮಧ್ಯದ ಶಿಲೆಗಳು ಬಂದಾವು. ಲೋಹದ ಕೀಲು ಕೊಟ್ಟಾವು. ಮಹಾಮಾಣಿಕ್ಯದ ನಮಾಜಕಲ್ಲು ನಿಕ್ಕಾರು. ಉಪ್ಪರದ ಮಣಿಗೆಲಸ ಹುಟ್ಟೀತು. ಗಾಜಿನ ಕಳಶವಿಟ್ಟಾರು. ಪೂರ್ವದಲ್ಲಿ ರಚಿಸಿದಾತನ ಶಿರ ದಕ್ಷಿಣದಲ್ಲಿ ಕ್ಷಯವಾದೀತು. ಹಿರಿದು ಕಿರಿದಾತೀತು. ಅಜನ ಮರೆಯ ಕುಂಜರ ಹೊಕ್ಕೀತು. ಕಪ್ಪೆಯ ಮರೆಯ ಜಂಬೂಕ ಹೊಕ್ಕೀತು. ಆ ಜಂಬೂಕವಂ ಹದ್ದು ನುಂಗೀತು. ನುಂಗಲಿಕ್ಕೆ ಅಜನ ಮರೆಯ ಕುಂಜರನೆದ್ದೀತು. ಹಣೆ ಹನ್ನೆರಡು ಗಾವುದ, ಬೆನ್ನು ಒಂಬೈನೂರು ಗಾವುದ, ಬಾಲ ಬೀಸಿತು. ಅದಕ್ಕೆ ಏಳು ಮುಖವು, ಅವರಿಗೆ ಅಜನ ಮರೆಯ ಕುಂಜರಗೂ, ತರ್ಕ ಹುಟ್ಟೀತು. ಹುಟ್ಟಲಿಕ್ಕೆ ರಕ್ತದ ಕಡಲು ಹರಿದೀತು. ಹರಿಯಲಿಕೆ ಆ ರಾಕ್ಷಸರಿಗೆ ಅದೆ ಕಡೆಯಾದೀತು. ಆಗಲಿಕೆ ಕಪ್ಪೆಯ ಮರೆಯ ಜಂಬೂಕನೆದ್ದೀತು.

ನವಖಂಡ ಪೃಥ್ವಿಗೆ ದುರ್ಗಿ ದುರ್ಗಿಗಳೆಲ್ಲ ಮರ್ತ್ಯವ ಹೊಕ್ಕಾರು. ಮಹಾ ಚೋದ್ಯ ಹುಟ್ಟೀತು. ನಂಜಿನ ಗಾಳಿ ಬೀಸೀತು. ಕೆಂಡದ ಮಳೆಗರೆದೀತು. ವಿಷದ ಬಳ್ಳಿ ಹರಿದೀತು. ವೇಶ್ಯಾಘನವಾದೀತು. ಉಕ್ಕಿ ಸೊಕ್ಕಿದ ಮನುಜರು ಮತ್ತೆ ಖಿಲವಾದಾರು. ಹನ್ನೆರಡು ಗಾವುದಕ್ಕೊಂದು ಪಟ್ಟಣವಾದಾವು. ಮೂಗಾವುದಕ್ಕೊಂದು ಸಂತೆಯಾದಾವು. ಹೊಟ್ಟು ಗಾವುದಕ್ಕೊಂದು ಪಟ್ಟಣವಾದಾವು. ಮೂಗಾವುದಕ್ಕೊಂದು ಸಂತೆಯಾದಾವು. ಹೊಟ್ಟೆ ಹಾರೀತು. ಗಟ್ಟಿ ಉಳಿದೀತು. ಮಿಕ್ಕುದು ಪಲ್ಲವಿಸಿದಂದಿಗೆ ನೂರಕ್ಕೊಬ್ಬ ಶರಣರಾದಾರು.

ನಾವು ಹೋದ ಏಳುನೂರ ಎಪ್ಪತ್ತು ವರ್ಷಕ್ಕೆ ಬಿದುರೆಯೆಂಬ ಪಟ್ಟಣ ಕೆಟ್ಟು ಹುಲಿ ಕರಡಿ ಆಡ್ಯಾವು. ಕಲ್ಯಾಣ ಮುನ್ನಿಯಂತೆ ಪಟ್ಟಣವಾದೀತು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೋರಿಗುಮ್ಮಟವಳಿದಾವು ನವನಾಥ ಸಿದ್ರಿಗೆ ಬಿಡಾರವಾದಾವು. ಶೂನ್ಯ ಸಿಂಹಾಸನದಲ್ಲಿ ಲಿಂಗಪ್ರತಿಷ್ಠೆಯಾದಾವು. ಗುಡಿಯವರು ಗುಡಿಗೆ ಬಂದಾರು. ಬರಲಿಕೆ ಮರ್ತ್ಯದ ಶಾಪವಳಿದೀತು. ಅಳಿಯೆ ಕಲ್ಯಾಣ ನಾಲ್ವತ್ತೆಂಟುಗಾವುದ ವಿಸ್ತೀರ್ಣ ಲಿಂಗಮಯವಾದೀತು. ತ್ರಿಪುರಾಂತಕದೇವರ ಪಶ್ಚಿಮದ ಬದಿಗೆ ಇಪ್ಪತ್ತೇಳು ಬಯಲಾದೀತು. ಬಯಲಾದಂದಿಗೆ ಹಿಂದಕ್ಕೆ ಹತ್ತು, ಮುಂದಕ್ಕೆ ಹನ್ನೊಂದು, ಅಮರಣ ಗಣಂಗಳು ಸಹಿತ, ಆನಂದ ಸಂವತ್ಸರದ ಕಾರ್ತೀಕ ಮಾಸದ ದಶಮಿ ಸೋಮವಾರ ಶ್ರವಣ ನಕ್ಷತ್ರ ಬಂದುದು, ಅಹೋರಾತ್ರಿಯಲ್ಲಿ ಕಲ್ಯಾಣದ ತ್ರಿಪುರಾಂತಕದೇವರ ಅನುಭವ ಮಂಟಪದಲ್ಲಿ ವೀರವಸಂತಗೆ ಪಟ್ಟಣವಾದೀತು. ಚಿಕ್ಕದಂಡನಾಯಕರಿಗೆ ಪ್ರಧಾನಿ ಪಟ್ಟವಾದೀತು. ನಾವು ಬರಲು ವೀರವಸಂತರಾಯನು, ಚಿಕ್ಕದಂಡನಾಯಕರಿಗೆ ಪ್ರಧಾನಿ ಪಟ್ಟವಾದೀತು. ನಾವು ಬರಲು ವೀರವಸಂತರಾನು, ಚಿಕ್ಕದಂಡನಾಯಕರಿಗೆ ಪ್ರಧಾನಿ ಪಟ್ಟ ವಾದೀತು. ನಾವು ಬರಲು ವೀರವಸಂತರಾಯನು, ಚಿಕ್ಕದಂಡನಾಯಕನು, ಅಲ್ಲಮಪ್ರಭುದೇವರು, ಅಸಂಖ್ಯಾತ ಮಹಾಗಣಂಗಳು ಮರ್ತ್ಯಲೋಕಕ್ಕೆ ಚಿತ್ತೈಸ್ಯಾರು. ಇಂತು ನಾವು ಪೇಳಿದ ಕಾಲಜ್ಞಾನ ಹುಸಿಯಲ್ಲ, ನಿಮ್ಮಾಣೆ ನಿಮ್ಮ ಪ್ರಮಥರಾಣೆ, ನಿಮ್ಮ ರಾಣಿವಾಸದಾಣೆ ಅಲ್ಲಮಪ್ರಭು ದೇವರಾಣೆ ತಪ್ಪದು ಕಾಣಾ ಕೂಡಲಸಂಗಮದೇವಾ.

೫. ಬಸವಣ್ಣನವರ ಕಾಲಜ್ಞಾನ – ಪ್ರತಿಪಾದಿತವಾದ ಸಂಗತಿಗಳು

ಬಸವಣ್ಣ ಕೃತಯುಗದಲ್ಲಿ ಕಾಯಶೂನ್ಯನೆಂಬ ಜಂಗಮನಾಗಿ, ತ್ರೇತಾಯುಗದಲ್ಲಿ ನೀಲಕಂಠನೆಂಬ ಜಂಗಮನಾಗಿ, ದ್ವಾಪರಯುಗದಲ್ಲಿ ಅಮಿಷನೆಂಬ ಜಂಗಮನಾಗಿ,

ಕಲಿಯುಗದಲ್ಲಿ ಮಂಡಿಗೆ ಮಾದಿರಾಜನ ಅರಸಿ ಮಾದಲಾಂಬಿಕೆಯ ಗರ್ಭದಲ್ಲಿ ಬಸವಣ್ಣನೆಂಬ ಹೆಸರಿನಲ್ಲಿ ಜನಿಸಿದರು.

ಕಲ್ಯಾಣಕ್ರಾತಿಯ ಸೊಡರಳಿದು ಸೊಡ್ಡಳ ಬಾಚರಾಯ, ಸುಂಕದ ಬಂಕಣ್ಣ, ಹಡಪದ ಅಪ್ಪಣ್ಣ, ಕೊಂಡುಗುಳಿ ಕೇಶಿರಾಜಯ್ಯಗಳು, ಕಲಕೇತ ಬ್ರಹ್ಮಯ್ಯಗಳು, ಕೆಂಭಾವಿ ಭೋಗಣ್ಣಗಳು, ಮಡಿವಾಳ ಮಾಚಯ್ಯಗಳು ಇವರನ್ನು ಚನ್ನಬಸವಣ್ಣನವರ ಸಾಂಗತ್ಯಕ್ಕೆ ಒಪ್ಪಿಸಿ ಕೂಡಲಸಂಗಮಕ್ಕೆ ಬರುತ್ತಾರೆ.

ಇತ್ತ ಹರಳಯ್ಯ– ಮಧುವಯ್ಯಗಳ ವಿಜಾತಿ ಬಂಧುತ್ವದಿಂದ ಕಲಹವಾಗಿ ಮಲ್ಲೆ ಬೊಮ್ಮಣ್ಣಗಳಿಂದ ಬಿಜ್ಜಳನ ಕೊಲೆಯಾಗುತ್ತದೆ. ಎಲ್ಲ ಶರಣರು ಉಳುವೆಯ ಕಡೆಗೆ ನಡೆಯುತ್ತಾರೆ. ಕಾದರವಳ್ಳಿ, ತಡೆಗೋಡೆ, ಮುರುಗೋಡು ಗಳಲ್ಲಿ ಶರಣರಿಗೂ, ಶರಣ ವಿರೋಧಿಗಳಿಗೂ ಯುದ್ಧ ನಡೆಯುತ್ತದೆ. ಇಲ್ಲಿ ಶರಣರು ಕಲ್ಯಾಣದಿಂದ ಉಳುವೆಗೆ ಹೋದ ದಾರಿ ಹಾಗೂ ಸ್ಥಳ ಮಹಾತ್ಮೆ ಅಧ್ಯಯನಕ್ಕೆ ಕಾಲಜ್ಞಾನವೂ ಆಕರವಾಗಿ ಪರಿಣಮಿಸಿದೆ.

ಶರಣ ಚಳುವಳಿಯ ಕಾಲ ತೀರಿ ಹೋಗಿ ನಂತರದಲ್ಲಿ ರಾಜಕೀಯ ಸ್ಥಿತ್ಯಂತರಗಳು, ಧಾರ್ಮಿಕ ಪಲ್ಲಟಗಳು, ಅನ್ಯಾಯ–ಅತ್ಯಾಚಾರ ವಿವರಣೆ ಯನ್ನು ಕಾಲಜ್ಞಾನ ದಾಖಲಿಸಿದೆ. ಕಲಬುರ್ಗಿ, ಬಿದಿರೆ, ಮಾತಂಗಿಬೆಟ್ಟ, ಮನ್ಮಥಕೊಂಡ, ಡಿಳ್ಳಿ, ತ್ರಿಪುರಾಂತಕ ದೇವರಕೆರೆ, ಕಲ್ಯಾಣ ಇತ್ಯಾದಿ ಸ್ಥಳನಾಮಗಳು ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ಪ್ರಮುಖ ಪಾತ್ರವನ್ನಾಡಿವೆ. ಸಾಮಾಜಿಕವಾಗಿ ಪತಿವ್ರತೆಯರ ಜಾರತನ, ವೇಶ್ಯೆಯರ ಅಟ್ಟಹಾಸ, ಸುರೆಮಾಂಸ ಮಾರಾಟ, ಹಿರಿಯರ ಮುಖಭಂಗ, ಗುಡಿ ಗುಂಡಾರ, ಮಠ–ಮಸೀದಿಗಳ ನಾಶ–ನಿರ್ಮಾಣ ಇತ್ಯಾದಿ ಚಟುವಟಿಕೆಗಳನ್ನು ನಿರೂಪಿಸಲಾಗಿದೆ. ಈ ಹೊತ್ತಿನ ವಾಸ್ತವ ಸ್ಥಿತಿಗತಿಗಳನ್ನು ಕಾಲಜ್ಞಾನದಲ್ಲಿ ಕಾಣಬಹುದಾಗಿದೆ.

❑

ಬಸವಣ್ಣನವರ ಸ್ವರವಚನ ಸಾಹಿತ್ಯ

ಡಾ. ಈಶ್ವರಯ್ಯ ಮಠ

ಶ್ರೀ ಬಸವಣ್ಣನವರು ಭಾರತದ ಬೆಳಕು ಮಾತ್ರವಲ್ಲ, ಮಾನವ ಲೋಕದ ಸೂರ್ಯ. ತಮ್ಮೊಳಗಿನ ಬುದ್ಧಿ, ಭಾವ, ಕಲ್ಪನೆಯನ್ನೆಲ್ಲ ಲವಲವಿಕೆಯಿಂದ ಪರಿಪೂರ್ಣಗೊಳಿಸಿಕೊಂಡ ದಿವ್ಯಚೇತನ. ತಮ್ಮ ಅಂತರಂಗವನ್ನು ಅರಳಿಸಿಕೊಂಡು ಸಮಾಜವೆಂಬ ಬಹಿರಂಗವನ್ನು ಶುದ್ಧವಿಸುವ ಕನಸು ಹೊತ್ತ ಕಾರಣಿಕ ಜೀವ. ಸಕಲ ಜೀವರಾಶಿಯನ್ನು ತಮ್ಮ ಪ್ರಾಣಕ್ಕಿಂತ ಮಿಗಿಲಾಗಿ ಭಾವಿಸಿದ ಅಪರೂಪದ ಅನುಭಾವಿ. ಪರಮಾರ್ಥ ಮತ್ತು ಲೋಕಾರ್ಥ ಗಳೆರಡನ್ನು ಸಮನ್ವಯಗೊಳಿಸಿದ ಆಶಾದೀಪ. ಆ ಕಾಲದ ಮಾನವ ಬಾಳುವೆ ಯಲ್ಲಿ ಹತ್ತು ಹಲವು ಮೌಢ್ಯಗಳು ಆವರಿಸಿದ್ದಾಗ; ಮಾತು-ಗೀತಗಳೆಂಬ ಜ್ಯೋತಿಯ ಹೊತ್ತಿಸಿ ಮನೆ-ಮನಗಳನ್ನೆಲ್ಲ ಬೆಳಗಿದ ಮಹಾಮಹಿಮ. ಕಷ್ಟ-ಸುಖ, ಸ್ತುತಿ-ನಿಂದೆಗಳನ್ನು ಸಮನಾಗಿ ಸ್ವೀಕರಿಸಿ; ಸರಿಯಾಗಿ ನಿರ್ವಹಿಸಿದ ಯಶಸ್ವೀ ಚೇತನ. ಸಮಾಜದಲ್ಲಿ ನಲುವಿನ ನಂದನವನವನ್ನು ನಿರ್ಮಿಸುವ ಕೈಂಕರ್ಯವನ್ನು ಪೂರುಗಾಣಿಸಿದ ಸಿದ್ಧಿ ಪುರುಷ. ತನ್ನೊಂದಿಗೆ ತನ್ನ ಒಡನಾಡಿಗಳನ್ನೆಲ್ಲ ಎತ್ತರೆತ್ತರಕ್ಕೆ ಬೆಳೆಸಿದ್ದು ಮಾತ್ರವಲ್ಲ; ಸ್ವತಃ ತಲೆಯ ಮೇಲೆ ಹೊತ್ತು ಮೆರೆಸಿದ ಧೀಮಂತ ಧುರೀಣ. ಬದುಕಿನಿಂದ ಧಿಕ್ಕರಿಸಲ್ಪಟ್ಟವರು, ಸಮಾಜದ ಅಂಚಿಗೆ ಸರಿಸಲ್ಪಟ್ಟವರು, ಬಹಿಷ್ಕೃಯರೆಂದು ಬಹಿಷ್ಕಾರಕ್ಕೆ ಈಡಾದವರು, ಬೆವರನ್ನು ಸುರಿಸಿಯೂ ಸುಖಕ್ಕೆ ಬಾಹಿರವಾದವರಿಗೆಲ್ಲ; ಬಸವಣ್ಣ ಅಣ್ಣನಾಗಿ, ಅಪ್ಪನಾಗಿ, ಅಧಿದೈವವಾದ ನಿರುಪಮ ನಿರಂಜನ.

ಬಸವಣ್ಣನವರು ನಿರೂಪಿಸಿದ ತತ್ತ್ವ ವಿಚಾರಗಳು, ನಡೆದು ತೋರಿದ ರೀತಿ ನೀತಿಗಳು ಸರ್ವರಿಗೆ ಜನಪ್ರಿಯವಾಗಿದೆ. 'ಧಾರ್ಮಿಕ'ವೆಂಬ ದಾರಿಯ ಮೂಲಕ ಮಾನವ ಬದುಕಿನ ಸಕಲ ರಂಗಗಳನ್ನು ಪ್ರವೇಶಿಸಿದ ಅವರು; ವ್ಯಷ್ಟಿ-ಸಮಷ್ಟಿಗಳೆರಡನ್ನೂ ಹಸನುಗೊಳಿಸಿದವರು. ಮುಖ್ಯವಾಗಿ ಮಾನವ ಜೀವಿಯನ್ನು ಒಂದು ಪರಿಪೂರ್ಣ ಘಟಕವೆಂದು ಪರಿಭಾವಿಸಿದವರು. ಎಂಥ ವ್ಯಕ್ತಿಯೂ ಕೂಡ ಯಾವುದೇ ತೆರನಾದ ಉತ್ತುಂಗಕ್ಕೇರಬಲ್ಲ ಸಾಮರ್ಥ್ಯವನ್ನು ಹೊಂದಿರುತ್ತಾರೆಂದು ಸಾರಿದವರು. ಮಾನವನೊಳಗೆ ಬದಲಾವಣೆ ಬಂದರೆ, ಸಮಾಜದಲ್ಲಿ ನೆಮ್ಮದಿ ನೆಲೆಯೂರುತ್ತದೆಂದು ಸಕಲರಿಗೂ ಮನವರಿಕೆ ಮಾಡಿ ಕೊಟ್ಟರು. ಇಹವನ್ನು

ಅಪಾರವಾಗಿ ಪ್ರೀತಿಸುತ್ತ, ಅದಕ್ಕಾವರಿಸಿದ್ದ ವಿಕಾರಗಳ ಅತಿಯನ್ನು ತೊಳೆದುಹಾಕಿದರು. ಮಾನವ ಕುಲವನ್ನು ದೇವ ಕುಲವನ್ನಾಗಿಸಿದರು. ಮರ್ತ್ಯ ಲೋಕವನ್ನು ಕರ್ತಾರನ ಕಮ್ಮಟವನ್ನಾಗಿಸಿದರು. ನಮ್ಮ ಸಮಸ್ಯೆ ಸಂಕಷ್ಟಗಳಿಗೆ ಸಾಮೂಹಿಕ ಪ್ರಯತ್ನದಿಂದ ನಾವೇ ಪರಿಹಾರವನ್ನು ಕಂಡುಕೊಳ್ಳಬೇಕೆಂದು ತಿಳಿಸಿ ಹೇಳಿದರು. ನಮ್ಮ ತಾಪತ್ರಯಗಳಿಗಾಗಿ ದೇವರ ಹಂಗೂ ಬೇಕಾಗಿಲ್ಲವೆಂಬ ನಿಲುವನ್ನು ಪ್ರಕಟಪಡಿಸಿದರು. ಈ ತಮ್ಮ ಅನುಭವಗಳನ್ನೆಲ್ಲ ವಚನ ಮತ್ತು ಸ್ವರ ವಚನಗಳ ಮೂಲಕ ಅಭಿವ್ಯಕ್ತಿಸಿದರು.

ಬಸವಣ್ಣನವರು ರಚಿಸಿದ ಹದಿನಾಲ್ಕು ನೂರಕ್ಕೂ ಹೆಚ್ಚು ವಚನಗಳು ನಮಗಿಂದು ಉಪಲಬ್ಧವಿದ್ದರೆ, ಸ್ವರ ವಚನಗಳು ಕೇವಲ ಹತ್ತೊಂಬತ್ತು ಮಾತ್ರವೇ ದಕ್ಕಿವೆಯೆಂಬುದು ಒಂದು ದುರಂತ. ಇವರ ವಚನಗಳು ಬೋಧನಾತ್ಮಕ ನೆಲೆಯೊಳಗಿದ್ದರೆ ಸ್ವರವಚನಗಳು ಆತ್ಮನಿವೇದನಾತ್ಮಕ ರೀತಿಯಲ್ಲಿವೆ. ವಚನಗಳು ಸಾಮಾಜಿಕ ವಿಷಯಗಳನ್ನು ಒಳಗೊಂಡಿದ್ದರೆ, ಸ್ವರ ವಚನಗಳು ದಾರ್ಶನಿಕತೆಯನ್ನು ವ್ಯಾಪಕವಾಗಿ ಮೈಗೂಡಿಸಿಕೊಂಡಿವೆ. ವಿಶೇಷವಾಗಿ ಸಕಲ ಜೀವಪರವಾದ ಶರಣ ಧರ್ಮವನ್ನು ಜನಮನಕ್ಕೆ ತಲುಪಿಸುವ ಜವಾಬ್ದಾರಿಯನ್ನು ಸ್ವರ ವಚನಗಳು ಪೂರೈಸಿವೆ. ಬಸವಣ್ಣನವರು ತಮಗಾಗಿ, ತಮ್ಮ ಪರಿಸರದ ಶುದ್ಧಿಗಾಗಿ, ಪ್ರಪಂಚ ಮತ್ತು ಪಾರಮಾರ್ಥಗಳೆರಡನ್ನೂ ಸಮರಸಗೊಳಿಸುವುದಕ್ಕಾಗಿ ಲೇಖನಿ ಹಿಡಿದರು. ಪರಮಾನಂದದ ಬದುಕಿಗಾಗಿ ಅವರು ಆಡಿ ಹಾಡಿ ದಣಿದರು. ಜನಸಾಮಾನ್ಯರ ದೈನಂದಿನ ರೀತಿ ನೀತಿಯನ್ನು ತಮ್ಮ ವಚನ ಮತ್ತು ಸ್ವರವಚನಗಿಂದ ನೇರ್ಪುಗೊಳಿಸಿದರು.

'ಸ್ವರವಚನ'ವು ಸ್ವರ ಮತ್ತು ವಚನವೆಂಬೆರಡು ಶಬ್ದಗಳಿಂದ ನಿಷ್ಪನ್ನವಾದ ಸಮಸ್ತ ಪದ. 'ಸ್ವರ' ಎಂದರೆ ಕಂಠದಿಂದ ಹೊರಡುವ ನಾದ, ಧ್ವನಿ, ಧಾಟಿ, ರಾಗ ಅಥವಾ ಕವಿತೆಯನ್ನು ಹಾಡುವ ಪದ್ಧತಿ ಎಂಬರ್ಥಗಳಿವೆ. 'ವಚನ' ಎಂದರೆ ನುಡಿ, ಮಾತು, ಪ್ರಮಾಣ, ಅರ್ಥ ಅಥವಾ ಅಭಿವ್ಯಕ್ತಿ ಎಂಬರ್ಥಗಳಿವೆ. ಕನ್ನಡ ಸಾರಸ್ವತ ಲೋಕದಲ್ಲಿ 'ವಚನ'ಕ್ಕೆ ಪ್ರಧಾನವಾಗಿ ಶುದ್ಧ ನಡೆ-ನುಡಿಗೆ ಬದ್ಧವಾದ ಶಿವಶರಣರ 'ಅಭಿವ್ಯಕ್ತಿ' ಎಂಬರ್ಥ ಹೆಚ್ಚು ಪ್ರತೀತಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಹಾಡಲೆಂದೇ ರಚಿತವಾದ ಶಿವಶರಣರ ಕೃತಿಗಳನ್ನು ಸ್ವರವಚನಗಳೆಂದು ಕರೆದಿರುವುದು ಸ್ಪಷ್ಟವಾಗುತ್ತದೆ. ಇವು ಪಲ್ಲವಿ, ಚರಣ ಹಾಗೂ ಅಂಕಿತವನ್ನು ಒಳಗೊಂಡು ರಾಗ ಪ್ರಧಾನವಾಗಿರುತ್ತವೆ. ಸ್ವರ ವಚನವೊಂದು ಏಕಕಾಲಕ್ಕೆ ಶಾಸ್ತ್ರ ಸಂಹಿತೆಯೂ, ಸರಸ ಸಾಹಿತ್ಯವೂ, ಸುಮಧುರ ಸಂಗೀತವೂ ಆಗಿರುತ್ತದೆ. ಶರಣರು, ತಮಗೆ ಕಾಡಿದ ಭಾವಗಳನ್ನು, ತಟ್ಟಿದ ಅನುಭವವನ್ನು ಹೂವಾಗಿ ಅರಳಿಸುವ ಕಾರ್ಯದ ಭಾಗವಾಗಿಯೇ ಸ್ವರ ವಚನಗಳನ್ನು ರಚಿಸಿದ್ದಾರೆ. ಸಹಜ ಸ್ಫೂರ್ತಿಯಿಂದ ಬರೆದು ಹೃದ್ಭಾವ ತುಂಬಿ ಹಾಡಿದ್ದಾರೆ.

ಬಸವಾದಿಗಳ ಸ್ವರವಚನಗಳು ಕಾವ್ಯ-ಶಾಸ್ತ್ರಗಳ ಲಕ್ಷ್ಯ-ಲಕ್ಷಣವನ್ನಾಗಲೀ ಮಾರ್ಗಪಂಥದ ಕಟ್ಟು ನಿಟ್ಟನ್ನಾಗಲೀ ಅನುಸರಿಸದೆ ಸೃಜನಗೊಂಡಿವೆ. ಅವರು ತಮಗೆ ಸರಿಕಂಡ ರೀತಿಯಲ್ಲಿ ತಮ್ಮಲ್ಲೇ ತಾವು ಗುನುಗುನಿಸಿ ಕೊಂಡರು. ಜೊತೆಗಿದ್ದ ಇತರರು ಅವುಗಳನ್ನು ಕೇಳಿಸಿಕೊಂಡು ದನಿಗೂಡಿಸಿದರು. ಸಕಲವೂ ಸಮರಸಗೊಂಡು ಆತ್ಮ ನಿವೇದನಾತ್ಮಕವಾದ ಹಾಡನ್ನು ಸಾಮುದಾಯಕ ಆಸ್ತಿಯನ್ನಾಗಿಸಿದರು.

ಈ ಹಿನ್ನೆಲೆಯಲ್ಲಿ ಬಸವಣ್ಣನವರ ಸ್ವರವಚನಗಳನ್ನು ನೋಡಿದಾಗ : ಅವು ಸಾಹಿತ್ಯಿಕ ಶಾಸ್ತ್ರಗಳ ಕಟ್ಟು-ನಿಟ್ಟುಗಳ ಕಣ್ಣಪಟ್ಟಿಯಲ್ಲಿ ಕುಂಟುತ್ತ ತೆವಲದೆ, ಅನುಭವದುಂಬಿ ಹರಿದ

ರಸಧಾರೆಯಾಗಿ ಕಂಗೊಳಿಸುತ್ತವೆ. ಹೊತ್ತು-ಗೊತ್ತಿಗೆ ಚಿತ್ತವೊಲಿದಂತೆ; ಸಮಯ ಸಂದರ್ಭಕ್ಕೆ ಹೊಂದಿಕೆಯಾದಂತೆ ಬಸವಣ್ಣ ನವರು ಹಾಡುತ್ತ ಹೋದರು. ಹಾಡುಗಳು ಅರಳುತ್ತ ಹೋದವು. ನಾದಲೋಕದ ತೂರ್ಯಾವಸ್ಥೆಯಲ್ಲಿ, ತೃಪ್ತಿಯ ಶಿಖರವನ್ನು ತಲುಪುತ್ತಿದ್ದಂತೆಯೇ ಅವರು ಶಿವಯೋಗದ ನೆಲೆಗೇರುತ್ತಿದ್ದರು. ಜೊತೆಗಿದ್ದ ಕೂಡಲ ಸಂಗನ ಶರಣರು ತಲೆದೂಗಿ ಒಲಿದರೆ ಅದುವೇ ಅವರಿಗೆ ದಕ್ಕಿದ ಬಹುಮಾನವಾಯಿತು. ಜನಸಾಮಾನ್ಯರ ಜೀವನ ಮಟ್ಟವನ್ನು ಎತ್ತಿ ನಿಲ್ಲಿಸುವುದೇ ಬಸವಣ್ಣನವರ ಸ್ವರವಚನಗಳ ರಚನೆಯ ಗುರಿಯಾಗಿತ್ತು. ಸುಲಭದ ಬದುಕಿನ ವಿವರಣೆಗೆ ಮಾತು ಇಲ್ಲವೆ ವಚನ ಸಾಕಾಗುತ್ತದೆ. ಅಂತರಂಗದ ತುಡಿತಕ್ಕೆ ಆತ್ಮಸಂಗಾತಕ್ಕೆ ಹಾಡು ಬೇಕೇ ಬೇಕಾಗುತ್ತದೆ. ಪ್ರಾರ್ಥನೆ, ಸ್ತುತಿ, ಆತ್ಮನಿವೇದನೆ, ಅನುಭಾವಿ ಅನುಸಂಧಾನಗಳ ಪೂರ್ರೈಕೆಗಾಗಿ ಸ್ವರವಚನಗಳು ರಾಗ ರಸಪಡೆದು ಮೈದಾಳಿ ನಿಂತಿವೆ.

ನಿರಹಂಕಾರಿಯೂ, ನಿರುಪದ್ರವ ಜೀವಿಯೂ ಆದ ಬಸವಣ್ಣನವರು ತಾನೇ ಏನೆಲ್ಲವೂ ಎಂಬಂಥ ಗರ್ವದ ಬೇರ್ಗಡಿದು ಬೂದಿ ಮಾಡಿದರು. ನಾನು ನೀನು ಎಂಬ ಅಭಿಮಾನವನ್ನು ತೊರೆದ ಬಳಿಕ "ನಾನೇ ನೀನಾಗಿರುತಿಹನು", "ನೀನೇ ಮಾತಪು, ನೀನೇ ಕೂಟವು, ನಾನೆಂಬೆಡೆ ಏನೂ ಇಲ್ಲವು" ಎಂದು ಹಾಡಿದರು. "ಎನಗಿಂತಕಿರಿಯರಿಲ್ಲ", 'ಜಗವೆಲ್ಲ ಜಂಗಮ', 'ನಾನೊಬ್ಬನೇ ಭಕ್ತ' ಎಂದು ವಚನದಲ್ಲಿ ಸಾರಿದಂತೆ 'ಅರಿಯೆನು ನಿಮಗಾನುಪುಚಾರ'ವೆಂಬ ಸ್ವರ ವಚನದಲ್ಲಿ ಭಕ್ತ ಸಮೂಹವನ್ನು ಏನೆಲ್ಲವೂ ಎಂದು ಸಾರಿದರು.

"ನೀವಲ್ಲದೆ ಮತ್ತೇನೂ ತೋರದು ನಿಮ್ಮ
ಧ್ಯಾನದಿಂದಿರುಳು ಹಗಲೆಂದರಿಯೆನು
ಮನಸಾ ವಚನ ಕಾಯದೊಳು ಸಂದ
ಳಿದು ನಿಮ್ಮ
ಗಾನೊಲಿದು ಎನ್ನನೊಚ್ಚು ತಗೊಟ್ಟೆನು"

ಎಂದು ಮತ್ತೊಂದೆಡೆ ಹಾಡುತ್ತಾರೆ. "ನಿಮ್ಮ ಶರಣರ ಒಕ್ಕುದ ಕೊಂಡೆನ್ನ ತನು-ಮನ ಶುದ್ಧವಾದುದಯ್ಯ ಎಂದು ಸಂಭ್ರಮಪಡುತ್ತಾರೆ.

ಹರಗಣ ಪಂಕ್ತಿಯ ಮುಂದೆ ನಾನು
ಕರವ ಮುಗಿದು ಪರವಶನಾಗಿ
ಎರಡರಿಯದೆ ಒಡೆಯರ ಪರಿಯಣ
ಹರುಷದಿಂದ ಹಾರಿಕೊಂಡಿಪ್ಪೆನಯ್ಯಾ

ಎನ್ನುತ್ತಾರೆ. "ಉಡುಗಿ ಒಕ್ಕ ಪ್ರಸಾದವ ಕೊಂಡು ಪರಮಸುಖಿಯಾದೆನು ಕೂಡಲ ಸಂಗಯ್ಯ" ಎಂದು ಹಾಡುತ್ತಾರೆ.

ತಾನಿಲ್ಲದೆ ಮಾಡುವ ಸಹಜನು
ತಾನಿಲ್ಲದೆ ನೀಡುವ ಸಹಜನು
ತಾನಿಲ್ಲದೆ ತಾಂ ಬೇರಿಲ್ಲದೆ ಬೆರಸಿಹ
ನಿಜಪದದೊಳಗೆ"

ಎಂಬ ಸಾಲುಗಳಂತೂ ಬಸವಣ್ಣನವರ ನಿಜದ ನೆಲೆಯನ್ನು ಸಾರುವಂತಿವೆ.

'ಶಿವಪಥವನರಿವೊಡೆ ಗುರು ಪಥವೇ ಮೊದಲು' – ಎಂಬುದೊಂದು ಬಸವಣ್ಣನವರ ವಚನದ ಸಾಲು. ಅವರ ಸ್ವರವಚನವೊಂದು ಹೀಗಿದೆ :

ಗುರು ಚರಣವೇ ಗತಿ ಗುರು ಚರಣವೇ ಮತಿ
ಗುರು ಶಬ್ದ ಪರುಷ ಪಾವನವೆನಗೆ
ನಗುರೋರಧಿಕಂ ನಗುರೋರಧಿಕಂ
ನಗುರೋರಧಿಕಂ ಎನುತೈದವೆ ಶ್ರುತಿ''
ಮತ್ತೊಂದು ಸ್ವರ ವಚನದಲ್ಲಿ
ಗುರುವಿನಂತರಂಗದೊಳಗೆ
ಉದಯವಾದ ಶಿಷ್ಯನು
ಗುರುವಿನಂತುಟಲ್ಲದೆ ಬೇರೆ ಭಿನ್ನ ಭಾವವಿಲ್ಲ

ವೆಂದು ತಮ್ಮ ದಾರ್ಶನಿಕತೆಯನ್ನು ಪ್ರತಿಪಾದಿಸುತ್ತಾರೆ. ಗುರು ಎಂದರೆ ಯಾರು ? ನಿಜವಾದ ಶಿಷ್ಯನು ಹೇಗಿರಬೇಕು – ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರ ತುಂಬ ಅರ್ಥಪೂರ್ಣವಾಗಿದೆ

''ಬೇರೆ ಶಿಷ್ಯನೆಂಬ ಭಾವ
ತೋರದಿರ್ದಡಾತ ಗುರು
ಬೇರೆ ಗುರುವೆಂಬ ಭಾವ ತೋರದಿರ್ದಡಾತ ಶಿಷ್ಯ''

ಇಲ್ಲಿ ಶಿಷ್ಯನು 'ಗುರುವಿನ ಗುಲಾಮ'ನಾಗಬೇಕಾಗಿಲ್ಲ. ಗುರುವೂ ಹರಾಮನಾಗಿರಬಾರದು. ಗುರು–ಶಿಷ್ಯರಿಬ್ಬರೂ ಒಂದೇ ಮೂಲವಸ್ತುವಿನ ವಿಭಿನ್ನ ಸ್ವರೂಪವಷ್ಟೆ ! ಇದರಲ್ಲಿ ಒಬ್ಬರು ಮೇಲು – ಇನ್ನೊಬ್ಬರು ಕೀಳು ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ.

''ಗುರು ಶಿಷ್ಯರು ಸಮರಸವಾಗಿ ತಮ್ಮೊಳು
ಬೆರಸಿ ಪರಸ್ಪರವರಿದಡೆ
ಗುರುಕಾರುಣ್ಯಾಮೃತ ಪಾದೋದಕದಲ್ಲಿ
ಪರವಶನಾದುದನೇನೆಂಬೆ''

ಎನ್ನುತ್ತಾನೆ. ಇದು ಬಸವಣ್ಣನವರ ಸ್ವರ ವಚನಗಳ ಸ್ವರೂಪವಾಗಿದೆ. ''ಕಾಯದೊಳಗಣ ವಿಕಾರಂಗಳನು, ಮಾಯದ ಪ್ರಪಂಚವನು'' ಅಳಿದರೆ ಸಾಲದು. ''ಸ್ವಾಯತ ಸಂಬಂಧ'ವು ಸರ್ವೇಂದ್ರಿಯದಲ್ಲಿ ಸನುಮತವಾಗ ಬೇಕೆಂದು ಅವರು ಹಾಡುತ್ತಾರೆ.

'ಸೂತಕ ವಿರಹಿತ' ಅಂತವು ನಿಜವಾದ ಲಿಂಗವೆಂದೂ, ಮನಪಾತಕ ವಿರಹಿತ ಜೀವಿಯು ಜಂಗಮವೆಂದೂ, ಸೂತಕ–ಪಾತಕವೆಂಬ ಉಭಯವನು ಅಳಿದಾತನೇ ಸಹಜ ಸುಸಂಬಂಧಿಯೆಂದು ಸ್ವರವಚನದ ಮೂಲಕ ಹೇಳುತ್ತಾರೆ. ''ಜೀವ ಜೀವಾದಿಗಳಲ್ಲಿ ಅನ್ಯ ಭಿನ್ನ ಭಾವುಕನು ತಾನಲ್ಲ'ವೆಂದೂ, 'ಅಣು ರೇಣು ಸ್ಥೂಲ ಸೂಕ್ಷ್ಮವು ನೀನೇ' ಎಂದು ಸಕಲರೂ ಸಮಸುಖಿ ವಾಗಿರಬೇಕೆಂದು ಬೋಧಿಸುತ್ತಾರೆ.

ಸುತ್ತಿ ಬಳಸಿ ತೀರ್ಥ ಕ್ಷೇತ್ರ
ದತ್ತ ತೊಳಲಿ ಬಳಲಬೇಡ
ಭಕ್ತನಂಗಳವೆ ನಿತ್ಯ
ಮುಕ್ತಿ ಲೋಕ ವಾರಣಾಸಿ
ಮತ್ತು
ಗುರುಪಾದಾಂಗುಷ್ಟದಲಿ ಅಷ್ಟಾಷಷ್ಟಿ
ವರತೀರ್ಥಂಗಳಡಗಿರುತಿರ್ಪವು
ಅರಿದು ಗುರುವಿನಡಿಯಲ್ಲಿ ಪಾದೋದಕ
ಪರಮ ರಸವ ಧರಿಸಲು ಮುಕ್ತಿ

ಎಂದು ತೀರ್ಥ ಕ್ಷೇತ್ರಗಳನ್ನು ಸುತ್ತಬಯಸುವವರಿಗೆ ತಿಳಿಯ ಹೇಳುತ್ತಾರೆ. ಮೌಢ್ಯ, ಕಂದಾಚಾರ ರಹಿತ ಸಮಾಜದ ನಿರ್ಮಾಣಕ್ಕಾಗಿ ಸ್ವರವಚನಗಳನ್ನು ರಚಿಸಿದ ಬಸವಣ್ಣನವರು; ಪ್ರತಿಯೊಂದು ಜೀವವನ್ನೂ ಪರಶಿವನ ಅವತಾರವೆಂದು ಪ್ರತಿಪಾದಿಸಿದರು. ಗುರು ಶಿಷ್ಯರಲ್ಲಿಯ ತಾರತಮ್ಯವನ್ನು ಮಾತ್ರವಲ್ಲ; ಯಾವುದೇ ಬಗೆಯ ಅಸಮಾನತೆಯನ್ನು ಅವರು ಪುರಸ್ಕರಿಸಲಿಲ್ಲ. ಯಾರು ಯಾರಿಗೂ ಕಡಿಮೆಯಲ್ಲ; ಮತ್ಯಾರೂ ಇತರರಿಗಿಂತ ಅಧಿಕರಲ್ಲವೆಂದು ಹಾಡಿದ್ದಾರೆ.

ಬಸವಣ್ಣನವರ ಸ್ವರವಚನಗಳು, ಅಮೃತ ಸಿಂಚನದಂತೆ ಒಡಮೂಡಿ ನಿಂತಿವೆ. ಅವು ಹೃದಯಕ್ಕೆ ತಂಪನ್ನೂ ಕಿವಿಗೆ ಇಂಪನ್ನೂ ಕರ್ಣಕ್ಕೆ ರಸದಾನಂದವನ್ನು ಬದುಕಿಗೆ ಬೆಳಕನ್ನೂ ನೀಡುವಂತಿವೆ. ಇವರ ಸ್ವರವಚನ ಸಾಹಿತ್ಯವು ಭವರೋಗಕ್ಕೆ ವೈದ್ಯನಾಗಿ; ಅನುಭಾವಕ್ಕೆ ಮೆಟ್ಟಿಲಾಗಿ ರೂಪುದಳೆದಿವೆಯೆಂದರೆ ಯಥಾರ್ಥವನ್ನಲ್ಲದೆ ಬೇರೇನನ್ನೂ ಹೇಳಿದಂತೆ ಆಗುವುದಿಲ್ಲ.

❑

ಬಸವಣ್ಣ ಮತ್ತು ಮಾನವತಾವಾದ

ಡಾ. ಗವಿಸಿದ್ದಪ್ಪ ಪಾಟೀಲ

ಹನ್ನೆರಡನೆಯ ಶತಮಾನದ ಶರಣರ ಕ್ರಾಂತಿ ಮಹಾನ್ ಕ್ರಾಂತಿ, ಮನುಷ್ಯ ಕುಲದ ವಿಮೋಚನಾ ಚಳುವಳಿ. ಸಮಾನತೆಗಾಗಿ ಹಾತೊರೆದು ನವಸಮಾಜವನ್ನು ಕಟ್ಟಲು ಪ್ರಯತ್ನಿಸಿದರು. ಜಾತ್ಯಾತೀತ ಮನೋಭಾವನೆಯನ್ನು ಮೂಡಿಸಿ ಲಿಂಗ ಭಕ್ತರನ್ನು ಒಂದುಗೂಡಿಸಲು ಟೊಂಕಕಟ್ಟಿ ನಿಂತರು. ಮನುಷ್ಯನ ಬದುಕಿನಲ್ಲಿ ಮಾನವೀಯತೆಯ ಪ್ರಜ್ಞೆ ತಂದುಕೊಟ್ಟರು. ಅದಕ್ಕೊಂದು ಹೊಸ ಸೃಷ್ಟಿ ಮಾಡುವ ಮೂಲಕ ಸಮಾಜಕ್ಕೆ ಹೊಸ ಆಯಾಮ ತಂದುಕೊಟ್ಟರು. ವಚನ ಸಾಹಿತ್ಯ, ವಚನ ಧರ್ಮ ಎರಡೂ ವೀರ ಶೈವಧರ್ಮ ಒಬ್ಬರನ್ನೊಬ್ಬರು ಪ್ರಶ್ನಿಸಿಕೊಳ್ಳುವಲ್ಲಿ ಒಂದೇ ನಾಣ್ಯದ ಎರಡು ಮುಖಗಳು. ಶೈವಧರ್ಮದ ಮೂಲಕ ಲಿಂಗಾಯುತ ಧರ್ಮ, ತತ್ತ್ವ-ಪರಂಪರೆಗಳ ಹಿನ್ನೆಲೆಯಲ್ಲಿ ಹುಟ್ಟಿದ್ದೇ ಶರಣಧರ್ಮ. ಮನುಷ್ಯ ಜಾತಿಗಳೆಲ್ಲವೂ ಸೇರಿ ಒಂದೇ ಎಂಬ ಭಾವನೆ ಮೂಡಿಸಿದ್ದೆ ಶರಣ ಧರ್ಮ, ಅದೇ ಮಾನವೀಯ ಧರ್ಮ. ಇಂಥ ಮಾನವೀಯತೆಯನ್ನು ಹುಟ್ಟು ಹಾಕಿ ಅದಕ್ಕೊಂದು ಹೊಸ ಸ್ವರೂಪ ನೀಡಿದವರು ಬಸವಣ್ಣ. ಬಸವಕ್ರಾಂತಿ ಎಂದರೇ ವಚನ ಕ್ರಾಂತಿ; ವಚನ ಕ್ರಾಂತಿ ಎಂದರೆ ಬಸವ ಕ್ರಾಂತಿ; ಶರಣಕ್ರಾಂತಿ! ಶರಣರ ಧರ್ಮ-ಸಾಹಿತ್ಯವೆಂದರೆ ಬಸವಣ್ಣ; ಬಸವಣ್ಣ ಎಂದರೆ ಶರಣ ಧರ್ಮ ಸಾಹಿತ್ಯ; ಬಸವಣ್ಣನೆಂದರೆ ಮಾನವೀಯತೆ; ಮಾನವೀಯತೆ ಎಂದರೆ ಬಸವಣ್ಣ. ಬಸವಾದಿ ಶರಣರ ಮಾನವತಾವಾದವನ್ನು ಕೇಳಿಯೇ ಕರ್ನಾಟಕ, ಆಂಧ್ರ, ಕಾಶ್ಮೀರ, ತಮಿಳುನಾಡು, ಗುಜರಾತ್‌ಗಳಂತೆ ದೂರದ ಪ್ರದೇಶಗಳಿಂದ ಆ ಕಾಲದಲ್ಲಿ ಶರಣರು ಆಗಮಿಸಿ ಮಾನವತಾವಾದವನ್ನು ಅಪ್ಪಿಕೊಂಡರು. ಮಾನವಧರ್ಮಕ್ಕೆ ಪುಷ್ಟಿನೀಡಿ, ಪ್ರೋತ್ಸಾಹಿಸಿ ಬೆಳೆಸಿದರು.

ಮಾನವೀಯತೆಯೆನ್ನುವ ಪದವನ್ನು ಪ್ರೀತಿ, ಉತ್ಕಟವಾದ ಕಳಕಳಿ, ಅನುಕಂಪೆ, ದಯೆ, 'ಹ್ಯೂಮಾನಿಸಂ'ಎಂಬ ಪದಗಳ ಮೂಲಕ ಅರ್ಥೈಸಿಕೊಳ್ಳಲಾಗುತ್ತಿದೆ. ಧರ್ಮಗ್ರಂಥ ಹಾಗೂ ಮಾನವತಾವಾದಿಗಳೆಂದು ಕರೆಯಿಸಿಕೊಂಡ ಕನ್‌ಫ್ಯೂಶಿಯಸ್, ಬುದ್ಧ-ಮಹಾವೀರ, ಪಾಶ್ಚಾತ್ಯರ ಕ್ರೈಸ್ತ, ಸಿಖ್ಖರ ಗುರುನಾನಕ್, ಮುಂತಾದವರು ಮಹಾಮಾನವತಾವಾದಿಗಳು. ಅವರ ಸಾಲಿನಲ್ಲಿ ನಿಲ್ಲುವ ಮಾನವತಾವಾದಿಗಳಲ್ಲಿ ಆದ್ಯರೆಂದರೆ ಬಸವಣ್ಣನವರು, ಇವರೆಲ್ಲರೂ ಮಾನವತಾವಾದ, ಅದರ ಮೌಲ್ಯಗಳನ್ನು ಪ್ರಪಂಚಕ್ಕೆ ಧಾರೆಯೆರೆದಿದ್ದಾರೆ.

ಮಾನವತಾವಾದ ಕೇವಲ ಧರ್ಮದ ಮೂಲಕ ಹೊರಬಂದಿಲ್ಲ. ವಿಜ್ಞಾನದ ಬೆಂಬಲ, ಪ್ರಜಾಪ್ರಭುತ್ವ ನೆಲೆ, ವೈಚಾರಿಕತೆಯ ಬೆನ್ನೆಲುಬು ಪಡೆದಿದೆ. ಮಾನವತಾವಾದವು ಕೇವಲ ಹೊರಜಗತ್ತಿನಲ್ಲಿಲ್ಲ; ಒಳಜಗತ್ತಿನಲ್ಲಿಲ್ಲ. ಆದರೆ ಎರಡೂ ಜಗತ್ತಿನಲ್ಲಿ ಅರಳಿದ ಕುಸುಮ. ಬದುಕುವುದರ ಜೊತೆ ಹೇಗೆ ಬದುಕಿದೆ ಎಲ್ಲರ ನಡುವೆ ಏನಾಗಿದ್ದೆ ಎಂಬುದನ್ನು ಹೇಳುತ್ತಾ ಸಾಮಾನ್ಯ ಜನರ ಹಾಗೂ ಮನುಕುಲದ ಕುರಿತು ಚಿಂತನೆ ಮಾಡುವುದೇ ಮಾನವತಾವಾದ ಮನುಷ್ಯ ಪ್ರಯತ್ನದ ಮೂಲಕ ಎಲ್ಲ ಒಳ್ಳೆಯದನ್ನೂ ಪಡೆದುಕೊಳ್ಳುತ್ತಾನೆ.

ಮನುಷ್ಯ ಜೀವಿ ಸಮಾಜ ಜೀವಿ. ಸಮಾಜದೊಳಗಡೆ ಇದ್ದು ತನ್ನ ವ್ಯಕ್ತಿತ್ವದ ವಿಕಾಸವನ್ನು ದೃಢಗೊಳಿಸುತ್ತಾನೆ ಹೊರತು, ಸಮಾಜ ಬಿಟ್ಟು ಹೋಗುವುದರಿಂದ ಸಾಧ್ಯವಿಲ್ಲ. ಮನುಷ್ಯ ಮತ್ತೆ ಮತ್ತೆ ಹುಟ್ಟಲು ಹುಲ್ಲು ಬೀಜವಲ್ಲ ಎಂದು ಬುದ್ಧ ಸಾರಿದ. ಅದನ್ನೇ ಶರಣರೂ ಬೋಧಿಸಿದರು. ಬಸವಣ್ಣ ಅನುಷ್ಠಾನಕ್ಕೆ ತಂದ, ಎಲ್ಲರೂ ಅನುಸರಿಸಿದರು. ಬೋಧನೆ ಜೊತೆಗೆ ಪ್ರಯೋಗಕ್ಕೆ ತಂದು ಇವರೆಲ್ಲರಿಗಿಂತ ಮೊದಲ ಸ್ಥಾನ ಬಸವಣ್ಣ ಹೊಂದಿದ್ದಾನೆ ಎಂಬ ಮಾತಿನಲ್ಲಿ ಎರಡಿಲ್ಲ. ಮಾನವತಾವಾದವು ಪ್ರೀತಿ-ವಾತ್ಸಲ್ಯ, ವಿನಯ, ತಾಳ್ಮೆ, ದಯೆ, ಕ್ಷಮೆ, ನಿಗರ್ವತನ, ನಿಸ್ವಾರ್ಥ, ಸತ್ಯ ಈ ನವ ಸಿದ್ಧಾಂತಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಾಗಬೇಕು. ಅಂದಾಗ ಮನುಷ್ಯ ಸಮಾಜಕ್ಕೆ ಮಾರಕನಾಗದೇ ಪೂರಕವಾಗಿ ಹೊರಬರುತ್ತಾನೆ. ಕಲೆ-ಸಾಹಿತ್ಯ, ಸೌಂದರ್ಯ-ಪ್ರಕೃತಿಗಳ ಮೂಲಕ ಅನುಭವ ಹದಗೊಂಡು ಕಲಾತ್ಮಕವಾಗಿ ಅಭಿವ್ಯಕ್ತಿಗೊಂಡ ಮನಸ್ಸು ನಿಜವಾಗಿ ಮಾನವೀಯತೆ ತೋರಿಸಲು ಇದೊಂದರಿಂದ ಮಾತ್ರ ಸಾಧ್ಯ. ಸತ್ಯಂ-ಶಿವಂ-ಸುಂದರಂ ಎಂಬ ವಾಕ್ಯ ಮಾನವೀಯತೆಯ ಮೂಲ ಮಂತ್ರವಾಗಿದೆ.

ಈ ಎಲ್ಲಾ ಅಂಶಗಳ ಮೂಲಕ ಗಮನಿಸಿದಾಗ ನಿಜವಾಗಿ ಬಸವಣ್ಣ ಒಬ್ಬ ಮಹಾ ಮಾನವತಾವಾದಿಯಾಗಿದ್ದಾನೆ. ಬಹು ಮುಖ ಪ್ರತಿಭೆ ಹೊಂದಿದ ಶಿವನನ್ನೇ ಎಲ್ಲೆಲ್ಲೂ ಕಂಡ ಮನುಷ್ಯ. ಯುಗದ ಚೇತನ. ಈತನನ್ನು ಭಕ್ತಿ ಭಂಡಾರಿ, ವಿಶ್ವಗುರು, ಸಮಾಜ ಸುಧಾರಕ, ವೀರಶೈವ ಧರ್ಮ ಸ್ಥಾಪಕ, ವಚನಕಾರ, ಶರಣ, ಎಂದು ನಾನಾ ಹೆಸರುಗಳಿಂದ ಕರೆಯುತ್ತಾರೆ. ಇವ್ಯಾವುವೂ ಇಲ್ಲದ ನಿರಾಡಂಬರದ ಸರಳ ಜೀವಿ ಬಸವಣ್ಣ ಆಗಿದ್ದ. ಸಾಮಾನ್ಯ ಜನರೂ ಕೂಡಾ ಬಸವರಸ, ಬಸವದೇವ, ಬಸವಣ್ಣ, ಬಸವ, ಬಸವರಾಜ, ಬಸವಪ್ರಭು ಎಂದು ಅನ್ವರ್ಥನಾಮಗಳಿಂದ ಕರೆಯುವುದರಲ್ಲಿ ಜನರಿಗೆ ಪ್ರೀತಿ ಇದೆ, ಮಮತೆ ಇದೆ, ಮಾನವೀಯತೆ ಇದೆ. ಅದನ್ನೇ ನಾವೆಲ್ಲರೂ ಒಪ್ಪಬೇಕಾಗಿದೆ. ಸ್ವಾತಂತ್ರ್ಯ, ಆರ್ಥಿಕ,, ರಾಜಕೀಯ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮಹತ್ವಗಳಿಗಿಂತ ಮಾನವತಾವಾದ ಪ್ರತಿಪಾದಿಸುವ ಏಕೈಕ ಸಮಾಜ ಸುಧಾರಕ ಬಸವಣ್ಣನಾಗಿದ್ದಾನೆ.

ಅನ್ಯಾಯ, ಅಸಮಾನತೆ, ಅಸ್ಪೃಶ್ಯತೆ, ದಬ್ಬಾಳಿಕೆ, ಕ್ರೌರ್ಯದ ವಿರುದ್ಧ ದನಿ ಎತ್ತಿ, ದನಿ ಇಲ್ಲದ ಜನಕ್ಕೆ ದನಿ ನೀಡಿದ ಬಂಡಾಯಗಾರ. ದೇವರ ಮೇಲೆ ನಂಬಿಕೆ ಇಟ್ಟ ಬಸವಣ್ಣ ಧರ್ಮದ ಮೂಲಕವೇ ಸಮಾಜ ಸುಧಾರಣೆ ಸಾಧ್ಯ ಎಂದು ಅರಿತಿದ್ದ. 'ದಯವೇ ಧರ್ಮದ ಮೂಲವಯ್ಯ' ಎಂದು ಹೇಳುವ ಬಸವಣ್ಣ 'ದೇವನೊಬ್ಬ ನಾಮ ಹಲವು' ಎಂಬ ವಾಸ್ತವಿಕ ಚಿತ್ರಣ ಕೊಡುತ್ತಾನೆ. ಮಾನವೀಯತೆಯಲ್ಲಿ ಧರ್ಮ ಅಡಗಿ ಕುಂತಿದೆ. ಧರ್ಮ ಇಲ್ಲದೇ ಮನುಕುಲ ಉದ್ಧಾರ ಸಾಧ್ಯವಿಲ್ಲ ಎಂಬುದನ್ನು

ದಯವಿಲ್ಲದ ಧರ್ಮ ಅದೇವುದಯ್ಯ
ದಯಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಮ ನಂತಲ್ಲದೊಲ್ಲನಯ್ಯ

ದಯೆಯ ಮೂಲಕ ಧರ್ಮಬೋಧನೆ ಒಂದಾಗಿ ಸಹಜತೆ ಕಂಡರೆ ಮತ್ತೊಂದೆಡೆ ಇದೇ ಧರ್ಮ ಮಾನವತಾವಾದವಾಗಿ ಕಾಣಿಸುತ್ತದೆ. ಧರ್ಮದ ಹೆಸರಲ್ಲಿ ನಡೆವ ಸಂಪ್ರದಾಯ ಅನಿಷ್ಟ ಪದ್ಧತಿಗಳ ನಿರ್ಮೂಲನೆಗಾಗಿ ಹಾತೊರೆಯುವುದು ಧರ್ಮ. ಇದೇ ಮುಂದೆ ಮಾನವೀಯತೆಯಾಗುತ್ತದೆ. ಮಾನವ ಧರ್ಮವಾಗುತ್ತದೆ, ವಿಶ್ವಧರ್ಮದ ತೆಕ್ಕೆಯೊಳಗೊಳ್ಳುತ್ತದೆ.

ವಚನಕಾರರು ಪವಾಡ ಪುರುಷರಲ್ಲ. ನಿಜವಾದ ಶಿವಭಕ್ತರು ಮಾನವರು ಮನುಷ್ಯರಾಗಿ ಹುಟ್ಟಿ, ಬೆಳೆದು, ಗುಣ-ದೋಷಗಳನ್ನು ತಮ್ಮ ಜೀವನದಲ್ಲಿ ಕಂಡರು. ಅರಿಷಡ್ವರ್ಗಗಳನ್ನು ಅವರು ಅರಿತು ಅರಿವಿನ ಮೂಲಕ ಅವನ್ನು ಪಡೆಯುವಲ್ಲಿ ಹಾಗೂ ಕಳಚಿ ಹಾಕುವಲ್ಲಿ ಪ್ರಯತ್ನಿಸಿದವರಾಗಿದ್ದಾರೆ.

ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯ
ವಿಚಾರಿಸಿದಡೇನೂ ಹುರುಳಿಲ್ಲವಯ್ಯ
ಪ್ರಪಂಚಿನ ಡಂಭಿನಲ್ಲಿ ಎನ್ನದೊಂದು ರೂಹು ಮಾಡಿ
ನೀವಿರಿಸಿದಿರಯ್ಯಾ ಕೂಡಲ ಸಂಗಮದೇವಾ!

ಮನಸ್ಸು ಅತ್ತಿಯ ಹಣ್ಣು. ಒಳಗಡೆ ತುಂಬಿದ ಹುಳುವಿನಂತೆ ಆತ್ಮ ವಿಮರ್ಶೆ, ಶೋಧನೆ, ತನ್ನ ಅವಗುಣಗಳ ಬಗ್ಗೆ ಒಪ್ಪಿಕೊಳ್ಳುವುದು ಏನಿದೆಯಲ್ಲ ಅದೇ ಮಾನವತಾವಾದ. ಅದನ್ನು ಬಸವಣ್ಣ ತುಂಬಾ ಪ್ರಜ್ಞಾಪೂರ್ವಕವಾಗಿ ಬಳಸಿಕೊಂಡಿದ್ದಾನೆ. ಬಸವಣ್ಣ ಉಪದೇಶ ಮಾಡಲು ಹೊರಡಲಿಲ್ಲ. ತನ್ನ ತಾನು ಅರಿತು-ತಿದ್ದಿಕೊಂಡು ಅಂತರಂಗ-ಬಹಿರಂಗ ಶುದ್ಧಿ ಮಾಡಿಕೊಂಡು ಹೊರ ಬಂದನು. ಹೀಗಾಗಿ ಸಂಸ್ಕಾರದ ಮೂಲಕ ನಿಜದ ನೆಲೆ ತೋರಿದ ಮಹಾನುಭಾವ.

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವಾ

ತಮ್ಮ ಆಚರಣೆಯ ಮೂಲಕ ಬಸವಣ್ಣ ಬೇರೆಯವರ ಡೊಂಕ ತಿದ್ದುವುದು ಬೇಡವೇ ಬೇಡ ಮೊದಲು ನಿನ್ನ ಡೊಂಕನ್ನು ನೀನೆ ತಿದ್ದಿಕೊ ಸಾಕು! ಮಾನವನ ಕುಲ ಬದಲಿಸಿದಂತೆ ಇಡೀ ವ್ಯವಸ್ಥೆಯಲ್ಲಿ ಎಲ್ಲಾ ಬದಲಾಗುತ್ತದೆ. ತಮ್ಮ ಸಾಧನೆಯ ಮೂಲಕ ಕಂಡು ಕೊಂಡ ಸತ್ಯದ ಬೆಳಕು ಹೊರಹಾಕಿ ಮಾನವೀಯತೆ ಮೆರೆದಿದ್ದಾರೆ. ಸಮಾಜದ ಪ್ರತಿಯೊಬ್ಬ ಮನುಷ್ಯನು ತನ್ನ ತಾನು ತಿಳಿದುಕೊಂಡರೆ ಸಾಕು ಎಂಬ ವಾಕ್ಯ ಬಹುದೊಡ್ಡ ಮಾನವತಾವಾದವಾಗಿದೆ. 'ಪರರ ಚಿಂತೆ ಎನಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ?' ಎಂದು ಬಸವ ಮುಂದುವರಿಸುತ್ತಾನೆ ತನ್ನ ಮಾತು. ಚಿಂತೆ ನಮಗೆ ಇದ್ದಾಗ-ಅದರಲ್ಲಿ ನಾವೇ ಮೇಲೆದ್ದೇಳಲು ಆಗಿಲ್ಲ ಪರರ ಚಿಂತೆ ತೆಗೆದುಕೊಂಡು ಏನು ಸಾಧಿಸುವಿರಿ ನೀವು? ಮೊದಲು

ಚಿಂತೆಯಿಂದ ಹೊರಬನ್ನಿ. ಆಗ ಎಲ್ಲರೂ ಪರಿಪೂರ್ಣವಾಗುತ್ತಾರೆ ಎಂಬ ಮನದಲ್ಲಿ ಆಸೆ ಹೋಗಲಾಡಿಸಿ, ತನ್ನ ಭವಿಷ್ಯ ತಾನು ರೂಪಿಸಿಕೊಳ್ಳಬೇಕೆಂದು ಕರೆ ನೀಡಿದ್ದಾನೆ.

ದೇವರು, ಧರ್ಮದ ಕುರಿತು ವಿಚಾರಿಸಿದ ಬಸವಣ್ಣ ಇವೆರಡು ಬಿಟ್ಟು ಮಾನವತಾವಾದವಿಲ್ಲ, ನಮ್ಮ ಹುಟ್ಟುಗಳ ಮೂಲಕ ನಾವು ಏನನ್ನು ಪ್ರತಿನಿಧಿಸಬೇಕು? ಭಕ್ತಿಯನ್ನು ಭಕ್ತಿ ಎಂದರೆ ಮೂಢನಂಬಿಕೆ ಅಲ್ಲ. ಇದೊಂದು ಪ್ರೀತಿ ಅಷ್ಟೇ ಎಂಬುದನ್ನು ಸಾರಿದ್ದಾನೆ.

ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲವಯ್ಯ
ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲವಯ್ಯ
ನಾದವ ಮಾಡಿದ ರಾವಣಂಗೆ ಅರೆ ಆಯುಷ್ಯವಾಯಿತ್ತು.
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು
ನಾದಪ್ರಿಯನೂ ಅಲ್ಲ ವೇದ ಪ್ರಿಯನೂ ಅಲ್ಲ
ಭಕ್ತ ಪ್ರಿಯ ನಮ್ಮ ಕೂಡಲ ಸಂಗಮದೇವ

ಎಂಬ ನಿಲುವು ಭಕ್ತ-ದೇವನ ನಡುವಿನ ಸಂಬಂಧವಿದೆ. ಅಲ್ಲದೇ ಮಾನವೀಯತೆ ಇದೆ. ಪಶುಪ್ರಾಣಿ ಪಕ್ಷಿಗಳಲ್ಲಿ ಒಬ್ಬರನ್ನೊಬ್ಬರು ಕೂಡಿಕೊಂಡು ಸೇರಿ ಇರುವಾಗ ಮನುಷ್ಯ ಅನೇಕ ದ್ವಂದ್ವಗಳಲ್ಲಿ ಸಿಲುಕಿ ಹಾಕಿಕೊಂಡಿದ್ದಾನೆ. ಒಂದೇ ಧರ್ಮ-ಭಾಷೆ-ವೇಷ ಎಂಬುದನ್ನು ಅರಿಯದೆ ತಿಕ್ಕಾಟದಲ್ಲಿದ್ದಾರೆ ಎಂಬ ಕಟು ವಾಸ್ತವ ಕುರಿತು

ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು?
ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಿಂತ ಕರಕಷ್ಟ!
ಕೂಡಲ ಸಂಗಮದೇವಾ.

ಮನುಷ್ಯ ಒಬ್ಬನೇ ದೇವನೊಬ್ಬನೇ ಆದರೆ ಆಕಾರ-ಬಣ್ಣಗಳಲ್ಲಿ ಬೇರೆ-ನಾಮಗಳು ಬೇರೆ. ಇವೆಲ್ಲವನ್ನು ದೂರಸರಿಸಿ ನಾವೆಲ್ಲರೂ ಒಂದೇ ಎಂಬ ಮನೋಧರ್ಮ ಬಂದಾಗ ಅಲ್ಲಿ ಪ್ರೀತಿ-ಕ್ಷೇಮ-ಕ್ಷಮೆ ಇರುತ್ತದೆ. ಇರದಿದ್ದರೆ ಈ ಕಾಗೆ-ಕೋಳಿಗಿಂತಲೂ ನಾವು ಹೀನರಾಗುತ್ತೇವೆ ಎಂದಿದ್ದಾರೆ.

ಬಸವಣ್ಣ ಮುಕ್ತವಾದ ಸಮಾಜವಾದ ಕಲ್ಪಿಸಿದ. ಯಾವ ಜಾತಿ-ಜನಾಂಗ ಎನ್ನದೇ ಸರ್ವರ ಮನಸ್ಸು ಇದ್ದವರಿಗೆಲ್ಲ ಆಹ್ವಾನ ನೀಡಿದ. ಯಾವುದಕ್ಕೂ ಅಂಜಲಿಲ್ಲ-ಅಳುಕಲಿಲ್ಲ. ಅನುಭವ ಮಂಟಪದ ಮೂಲಕ ಸಂಸ್ಕಾರ ನೀಡಿದ. ಚರ್ಚಿಸಲು ಮುಕ್ತ ಅವಕಾಶ ನೀಡಿದ. ಚರ್ಚೆ-ಸಂವಾದಗಳು ನಡೆದು ತಮ್ಮ ಸಮಸ್ಯೆ ಬಗೆಹರಿಸಿಕೊಳ್ಳುವ ತಾಣವಾಯಿತು. 'ಅನುಭವಗಳಿಂದ ಬಂದ ಯಾವ ಮಾತುಗಳೇ ಆಗಲಿ ಅವುಗಳಿಗೆ ಮೌಲಿಕತೆ ಕಲ್ಪಿಸಿ ಕೊಟ್ಟ. ಅದರಲ್ಲಿನ ಪ್ರೀತಿ-ದಯೆ-ಮಾನವತಾವಾದಗಳ ಅಂಶಗಳು ಕಂಡರೆ ಅವನ್ನು ಸ್ವೀಕರಿಸಿದಾಗ ಅವೆಲ್ಲವು ಅನುಭಾವವಾಗುತ್ತದೆ, ಅಂತಹ ಅನುಭವ-ಅನುಭಾವವಾದ ಸ್ಥಳವೇ ಅನುಭವ ಮಂಟಪ ಎಂದು ಹೇಳ ಬಹುದು. ಸಾಮಾಜಿಕ ಚಿಂತನೆಯಲ್ಲಿ ಮುಖ್ಯವಾಗಿ ಗಂಡು-ಹೆಣ್ಣಿನ ನಡುವಿನ ಅಂತರ ಇಲ್ಲ ಎಂಬುದು ಸ್ಪಷ್ಟ ಪಡಿಸಿದ್ದಾನೆ. ಜೊತೆಗೆ ಜಾತಿ-ಕುಲದ ಬಗ್ಗೆ ಹೇಳುತ್ತಾರೆ.

ಒಲ್ಲೆನೆಂಬುದು ವೈರಾಗ್ಯ ಒಲಿವೆನೆಂಬುದು ಕಾಯಗುಣ
ಆವ ಪದಾರ್ಥವಾದರೇನು? ತಾನಿದ್ದೆಡೆಗೆ ಬಂದುದ

ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಆಚಾರ
ಕೂಡಲ ಸಂಗಮದೇವಾ

ಪರಸ್ತ್ರೀಯರನ್ನು ಮಹಾದೇವಿ ಎಂದು ಭಾವಿಸಿದ್ದಾರೆ. ಭೋಗವನ್ನು ಸ್ತ್ರೀಯಿಂದ ದೂರೀಕರಿಸಲಿಲ್ಲ ಲಿಂಗಾರ್ಪಿತ ಮಾಡಿ ಭೋಗಿಸುವುದು ಆಚಾರವೆಂದಿದ್ದಾರೆ. ಅವರು ನಿಜವಾದ ದಾಂಪತ್ಯ ನಡೆಸುವುದು ಸಾಧ್ಯ ಎಂದಿದ್ದಾರೆ. ಜೇಡರ ದಾಸಿಮಯ್ಯ "ಮೊಲೆಮುಡಿ ಬಂದರೆ ಹೆಣ್ಣೆಂಬರು ಗಡ್ಡಮೀಸೆ ಬಂದರೆ ಗಂಡೆಂಬರು. ಒಳಗೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣೂಅಲ್ಲ ಕಾಣಾ ರಾಮನಾಥ" ಎಂದಿದ್ದಾರೆ. ಜಾತಿಯ ಕಲ್ಪನೆ ಆರ್ಥಿಕ ಸಿದ್ಧಾಂತ "ನಿಮ್ಮ ನಿಲುವಿಗೆ ಕುದಿವೆನಲ್ಲದೆ ಎನ್ನೊಡಲವಸರಕ್ಕೆ ಕುದಿದೆ ನಾದೊಡೆ ತಲೆದಂಡ ಕೂಡಲ ಸಂಗಮದೇವಾ" ಎಂದು ತಮ್ಮನ್ನು ತಾವೇ ಸಮಾನತೆ ಹಾಗೂ ಸಮಾಜೋದ್ಧಾರಕ್ಕೆ ಅರ್ಪಿಸಿಕೊಂಡಿದ್ದಾರೆ.

ಬಸವಣ್ಣ ಮನುಷ್ಯನ ಧರ್ಮ ಅವನೊಬ್ಬನಲ್ಲಿಯೇ ಕಾಣಲಿಲ್ಲ. ಪ್ರಾಣಿಗಳಲ್ಲೂ ಕೂಡಾ ಮಾನವೀಯತೆ ಕಂಡಿದ್ದಾನೆ. ದೇವಲೋಕದಂತೆ ಮರ್ತ್ಯಲೋಕವು ಇದೆ ಎಂಬ ಕಲ್ಪನೆ ಮೂಡಿಸಿದ್ದಾನೆ. ನಾವು ಜೀವನದಲ್ಲಿ ನೂರು ವರುಷ ಬಾಳುವುದಕ್ಕಿಂತ ಹತ್ತೇ ವರ್ಷ ಸಾರ್ಥಕ ಜೀವನ ಮಾಡಿದ್ದಾದರೆ ಅದಕ್ಕಿಂತ ದೊಡ್ಡ ಜೀವನವೇ ಇಲ್ಲವೆಂದಿದ್ದಾರೆ. ಮನುಷ್ಯಧರ್ಮ ಒಬ್ಬರಿಗೆ ಮೀಸಲಾಗಿರದೇ ಎಲ್ಲರಿಗೂ ಬೇಕಾಗಿ ಅಲ್ಲಿ-ಇಲ್ಲಿ ಎಲ್ಲರಿಗೆ ಸಲ್ಲಿದಾಗ ಅವನ ಮಾನವಗುಣ ಅರಿಯಬಹುದು.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ!
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ!
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ
ಕೂಡಲ ಸಂಗಮದೇವಾ

ಬಸವಣ್ಣ ಹಾಗೂ ಇತರ ಶರಣರು ಸರಳವಾಗಿಯೇ ತಮ್ಮ ಅರ್ಥಬಿಂಬಿತ ವಚನವನ್ನು ಎಲ್ಲಾ ಧರ್ಮಗ್ರಂಥಗಳೆಂದು ಅರೆದು, ಸಾರವನ್ನು ಹಿಂಡಿ ಅದರ ರಸವನ್ನು ವಚನಗಳಲ್ಲಿ ತುಂಬಿದ್ದಾರೆ.

ಕಳಬೇಡ, ಕೊಲಬೇಡ, ಹುಸಿಯ
ನುಡಿಯಲು ಬೇಡ, ಮುನಿಯಬೇಡ
ಅನ್ಯರಿಗೆ ಅಸಹ್ಯ ಪಡಬೇಡ, ತನ್ನ
ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವನೊಲಿಸುವ ಪರಿ.

ಅಣ್ಣ ಬಸವಣ್ಣ ಸ್ವಾರ್ಥದಾಸೆಗೆ ಏನೂ ಮಾಡದಿರು. ಎಲ್ಲರನ್ನೂ ನೀನು ಒಂದಾಗಿ ತಿಳಿಯಬೇಕೆನ್ನುವ ಆಶಯ ಹೊಂದಿದಾಗ ಮಾತ್ರ ಸಾಧ್ಯ. ಮತ್ತೊಬ್ಬರ ಕೊಲ್ಲುವ-ಬದುಕಿಸುವ, ಹೊಗಳುವ-ಕರುಬುವುದಲ್ಲ, ತನ್ನ ಬಣ್ಣಿಸುವುದು ಬೇಡ. ಇದ್ದಂತೆ ಇದ್ದಾಗ ಅದೇ ರೀತಿ ನೋಡಿದರೆ ಸಾಕು ಅದರ ಪರಿಶುದ್ಧತೆಯಿಂದ ಮನುಷ್ಯನಲ್ಲಿ ತುಂಬಿದ ಜಡತ್ವಕ್ಕೆ ಚೈತನ್ಯ ಬಂದೊದಗುತ್ತದೆ. ಅಂತರಂಗ-ಬಹಿರಂಗ ಎರಡೂ ಶುದ್ಧವಾದಾಗ ನಿಜವಾದ ಮಾನವೀಯತೆ ಹೊರಬರಲು ಸಾಧ್ಯವೆಂದಿದ್ದಾನೆ ಬಸವಣ್ಣ.

ತನ್ನನ್ನು ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸದಿರಿ, ಎಂದು ಬಸವ ಹೊಗಳುವುದನ್ನು ಖಡಾಖಂಡಿತ ನಿರಾಕರಿಸುತ್ತಾನೆ. ಮನುಷ್ಯ ಸ್ವಭಾವ ತನ್ನನ್ನು ಬಿಟ್ಟು ಅನ್ಯರ ಹೊಗಳಿ ತನ್ನ ಬೇಳೆ ಬೇಯಿಸಿಕೊಳ್ಳುವ ರೀತಿಯಲ್ಲಿ ವಿರೋಧಿಸಿದ್ದಾನೆ.

ಅನ್ಯರ ಹಾಡಿ ಅನ್ಯರನೆ ಹೊಗಳಿ
ಅನ್ಯರ ವಚನವ ಕೊಂಡಾಡಲು
ಕರ್ಮ ಬಿಡದು ಭವ ಬಂಧನ

ಎಂದು ಬಸವಣ್ಣ ಮನ ಮೆಚ್ಚಿ ಅನುಭವ-ಅನುಭಾವವಾಗಬೇಕು ಆಗ ಮಾನವತಾವಾದ ಸ್ಪಷ್ಟವಾಗುತ್ತದೆ.

ಬಸವಣ್ಣ ಮನುಷ್ಯನ ಅಂತಃಸ್ತರಗಳನ್ನು ಬಹು ಸೂಕ್ಷ್ಮವಾಗಿ ಅರಿತುಕೊಂಡಿದ್ದ. ಮನುಷ್ಯ ಸ್ವಭಾವ ವಿಚಿತ್ರ. ಹುಟ್ಟಿನಿಂದಲೂ ಬಂದ ಆಂತರಿಕ ಅಂತರ ಕಾಣುತ್ತೇವೆ. ಮನುಷ್ಯ-ಮನುಷ್ಯನ ನಡುವೆ ಕಂದಕ ಹುಟ್ಟಿದೆ. ಮಾನವನಿಗೆ ಮುಕ್ತಿಯೇ ಇಲ್ಲವೇ? ಪ್ರಾಥಮಿಕ ಜ್ಞಾನವೂ ಮಾನವನಿಗೆ ಇರಲಾರದ್ದನ್ನು ಕಂಡೇ ಬಸವಣ್ಣ

ಏನು ಬಂದಿರಿ ಹದುಳವಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
ಕುಳ್ಳಿರೆಂದಡೆ ನೆಲಕುಳಿ ಹೋಹುದೆ ?
ಒಡನೆ ನುಡಿದಡೆ ಸಿರಿ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ,
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವ.

ಎಂದು ನಮ್ಮಲ್ಲಿಗೆ ಬಂದವರನ್ನು ಪ್ರೀತಿಯಿಂದ ಚೆನ್ನಾಗಿದ್ದೀರಾ, ಕುಳಿತುಕೊಳ್ಳಿರಿ ಎಂದರೆ ಮಾತನಾಡಿದರೆ ಏನಾಗುತ್ತದೆ. ಮೈಸಿರಿ, ಭೂಮಿ ಕುಳಿಬಿದ್ದು ಸಿರಹೊಟ್ಟೆ ಒಡೆದು ಹೋಗುತ್ತದೆಯೇ? ಮಾತನಾಡಿದರೆ ಎಲ್ಲಿ ಮೈಮೇಲೆ ಬರುತ್ತದೊ ಎಂದು ದೂರ ಸರಿದು ಹೋಗುವ ಸಂದರ್ಭದಲ್ಲಿ ಸಂಶಯವೇ ತಾಂಡವಾಡುತ್ತದೆ. ಮಾತನಾಡದೇ ಇರುವುದು ಮನುಷ್ಯನ ಮಾನವೀಯತೆ ಅಲ್ಲವೆಂದಿದ್ದಾರೆ.

ಮಾನವ ನಿಸರ್ಗದ ದೈವದತ್ತ ಕೊಡುಗೆ. ಹಾಗೇ ಅವನು ದೈವದತ್ತವಾಗಿ ಪಡೆದುಕೊಂಡಿದ್ದನ್ನೇ ತಾರತಮ್ಯ ಮಾಡುತ್ತಾನೆ. ಅದಕ್ಕೆ ಬಸವಣ್ಣ ಮನುಷ್ಯನ ಗುಣವನ್ನು ಪ್ರಕೃತಿಯಲ್ಲಿನ ವಿಷ ಬೀಜಕ್ಕೆ ಹೋಲಿಸುತ್ತಾನೆ:

ಬೇವಿನ ಬೀಜವ
ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲೆರೆದು
ಜೇನು ತುಪ್ಪವ ಹೊಯ್ದರೆ
ಸಿಹಿಯಾಗ ಬಲ್ಲುದೇ ಕಹಿಯಪ್ಪುದಲ್ಲದೆ?
ಶಿವಭಕ್ತರಲ್ಲದವರ ಕೂಡ
ನುಡಿಯಲಾಗದು ಕೂಡಲ ಸಂಗಮದೇವಾ

ಎಂದು ಹೇಳುವ ಮೂಲಕ ಬೇವು ಕಹಿ, ಅದು ಎಷ್ಟೇ ಆರೈಕೆ ಮಾಡಿದರು ತನ್ನ ಕಹಿತ್ವ ಬಿಡದು. ಹಾಗೇ ಮನುಷ್ಯ ತನ್ನ ಅಂಕುಡೊಂಕಾದ ಬಾಲದಿಂದಲೇ ಇದ್ದು ಅವಗುಣ-ಅನೀತಿಗಳನ್ನು ತಿದ್ದಿಕೊಳ್ಳದೇ ಇದ್ದಾಗ ಆತನ ಮನುಷ್ಯತ್ವದ ಹಾದಿ ಸುಗಮವಾಗವುದಿಲ್ಲ.

ಮಾನವತಾವಾದದಿಂದ ದೂರ ಉಳಿಯುತ್ತಾನೆ ಮನಸ್ಸು ಕೂಡಾ ವಿಷ. ತನಗೆ ತಾನೇ ಬೆಳೆಯುತ್ತಾನೆ. ಇತರರನ್ನು ಕಡೆಗಣಿಸುತ್ತಾನೆ. ಮನುಷ್ಯ ಸಗಣಿಯ ಬೆನಕ. ಮಣ್ಣ ಪ್ರತಿಮೆ ಯಿಂದ ಅವನಿಗೆ ದೀಕ್ಷೆ ಬೋಧನೆ ಮಾಡಿ ಅವನಿಗೆ ಶುಚಿತ್ವ ತಂದು ಕೊಟ್ಟರು. ಅವನ ಮೂಲಗುಣ ಬಿಡಲಾರನು. ಲೋಕದ ಡೊಂಕು ನೀವೇಕೆ ತಿದ್ದುವಿರಿ? ನಾಯಿ ಬಾಲಡೊಂಕೆ ಎಂಬ ವಾಸ್ತವದ ಮಾತು ಬಸವಣ್ಣ ಈ ರೀತಿ ಹೇಳಿದ್ದಾನೆ :

ಸಗಣಿಯ ಬೆನಕನ ಮಾಡಿ ಸಂಪಿಗೆಯರಳಿನಲ್ಲಿ ಪೂಜಿಸಿದರೆ ರಂಜನೆಯಹುದಲ್ಲದೇ ಅದರ ಗಂಜಳ ಬಿಡದಣ್ಣ!

ಮಣ್ಣು ಪ್ರತಿಮೆ ಮಾಡಿ ಮಜ್ಜನಕ್ಕೆರೆದರೆ
ನಿಚ್ಚ ಕೆಸರಹುದಲ್ಲದೇ ಅದರಚ್ಚಿಗ ಬಿಡದಣ್ಣ!!
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ
ಆ ಕೆಟ್ಟವನೇಕೆ ಸದ್ಭಕ್ತನಹನು ಕೂಡಲ ಸಂಗಮದೇವಾ!

ಮನುಷ್ಯ ವಿಷದ ವರ್ತುಲ. ಮನಸ್ಸಿನಲ್ಲಿ ಏನೂ ಇಲ್ಲ. ಬರೀ ಹುಳುಕು ತುಂಬಿದೆ. ಇವುಗಳ ಮಧ್ಯ ಆತ ಬದುಕುತ್ತಿರುವುದು ದುರಂತ. ಮಾನವೀಯತೆಗೆ ಬೆಲೆಯೇ ಇಲ್ಲ. ಮನದಲ್ಲಿಯೇ ಭಕ್ತಿ-ಭಾವ-ನನ್ನತನ-ನಾವೆಲ್ಲ ಒಂದು ಎಂಬ ಭಾವನೆ ಇರದೇ ಡೊಂಬರಾಟದ ನಡುವೆ ಜೀವನವಿರುವುದನ್ನು ಬಸವಣ್ಣ:

ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲುಹುಟ್ಟಿ ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ!
ತನುವಿನಲಿ ಹುಸಿ ತುಂಬಿ ಮನದಲ್ಲಿ ವಿಷಯ ತುಂಬಿ
ಮನೆಯೊಳಗೆ ಮನೆಯೊಡನಿಲ್ಲ ಕೂಡಲ ಸಂಗಮದೇವಾ

ಡೊಂಬರಾಟವಾಡುವ ಭಕ್ತರು ಭಕ್ತರಲ್ಲ. ಒಳ-ಹೊರಗೆ ತುಂಬಿದ ಕಂದಕ ಅಂಧಾನುಕರಣೆಯಲಿ ತುಂಬಿದ, ಹುಲ್ಲು ಹೊಸ್ತಿಲ, ಕಸದ ತೊಪ್ಪೆ ತುಂಬಿದ ಹೊಲಸು ನಾರುವ ಮನೆಯಲಿ ವಿಷದ ವಾತಾವರಣ ತುಂಬಿ ತುಳುಕುವಾಗ ಮನೆಯಲ್ಲಿ ವಾಸಿಸುವುದು ಹೇಗೆ? ಇವರ್‍ಯಾರ ಹತ್ತಿರ ಸುಳಿಯಲಾದ ಡಾಂಭಿಕತೆಯನ್ನು ದೂರೀಕರಿಸಿದ್ದಾನೆ, ಬಸವಣ್ಣ. ಮನುಷ್ಯ ಮಂಗನಾಟದ ವ್ಯಕ್ತಿ. ಚಂಚಲತೆ, ಅಲೆಮಾರಿತನಗಳಿಂದ ದೂರವಾದಾಗ ಮಾತ್ರ ಮಾನವೀಯತೆ ಕಂಡು ಬರುತ್ತದೆ.

ಓದಿ ಬುದ್ಧಿವಂತನಾಗಬೇಕು. ಅರಿವು ಬರಬೇಕು. ಹೃದಯ ಅರಳಿ ಮನಸ್ಸಿನಲ್ಲಿ ವಿಚಲತೆ ಇರದೇ ಆಳಕ್ಕೆ ಹೋಗಿ ಮನುಷ್ಯನ ಅಂತಃಸತ್ವದಲ್ಲಿ ಕಲುಕಬೇಕು. ಜ್ಞಾನದ ಕಣ್ಣು ತೆರೆಸಬೇಕು. ಓದಿ-ಅರಗಿಸಿಕೊಂಡು ನಡೆದು ನುಡಿದು ತೋರಿಸಿ ಆಚರಣೆಗೆ ಬಂದಾಗ ಅನುಭಾವ ಹೆಚ್ಚಿ ಮಾನವೀಯತೆ ಹೊರ ಬರುತ್ತದೆ. ಇಲ್ಲದಿದ್ದರೆ ಓದಿಗೆ ಅರ್ಥವಿಲ್ಲ; ಪಾಂಡಿತ್ಯ ಅವನ ಪಾಂಡಿತ್ಯವೇ ಅಲ್ಲ ಎಂಬುದನ್ನು ಬಸವಣ್ಣ,

ಆಡಿದರೇನೋ ಹಾಡಿದರೇನೋ, ಓದಿದರೇನೋ?
ತ್ರಿವಿಧ ದಾಸೋಹವಿಲ್ಲದನ್ನಕ್ಕ?
ಆಡದೇ ನವಿಲು? ಹಾಡದೇ ತಂತಿ? ಓದದೇ ಗಿಳಿ?
ಭಕ್ತಿಯಿಲ್ಲದವನೊಲ್ಲ ಕೂಡಲಸಂಗಮದೇವ!

ಎಂದು ಹೇಳುತ್ತಾ ಅರಿವು ಓದು ಮೂಲಕ ಆದಾಗ ನಿಜವಾದ ಜ್ಞಾನಿ ಆಗಲು ಸಾಧ್ಯ. ಜಾತಿ-ಜನಾಂಗವನ್ನು ದೂರೀಕರಿಸಿ ಓದಿನ ಮೂಲಕ ಸಂಸ್ಕಾರ ಪಡೆದುಕೊಂಡ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದಾಗ ಮಾತ್ರ ಓದಿಗೆ ಅರ್ಥ ಬರುತ್ತದೆ. 'ಆರು ಮುನಿದು ನಮ್ಮನೇನು ಮಾಡುವರು?' ಎಂದ ಬಸವಣ್ಣ ನಿರ್ಭಿಡೆಯಿಂದ ಪ್ರತಿಭಟಿಸುವ ಮನಸ್ಸು ಅವರಲ್ಲಿದೆ. ಸ್ವಾರ್ಥ, ಮೋಸ, ವಂಚನೆಗೆ ತಿಲಾಂಜಲಿ ಇಡುತ್ತಾರೆ. ಮಾನವೀಯತೆ ಎತ್ತಿ ಹಿಡಿಯುವಲ್ಲಿ ಬಸವಣ್ಣ ಸಫಲನಾಗಿದ್ದಾನೆ.

ಜಾತಿ ಸಂಕರ ಆಹ್ವಾನಿಸಿ ಸಮಾನತೆ ತಂದ ಬಸವಣ್ಣ ಮಾನವ ಪ್ರೇಮಿ. ಅವರ ಬದುಕಿನದ್ದುಕ್ಕೂ ಮಾನವನ ಕುರಿತೇ ವಚನಗಳಿವೆ. ಹೆಣ್ಣು ಗಂಡು ಭೇದ ಭಾವವಿಲ್ಲ, ದೀನದಲಿತರ ಬಗ್ಗೆ ಅನುಕಂಪವಿದೆ. ಕಾಯಕದಿಂದ ಕೈಗೊಂಡ ಪ್ರತಿಯೊಬ್ಬ ಮನುಷ್ಯನ ನಡುವೆ ಕಂದಕವಿಲ್ಲ. ಸಮಾನರೆಂದು ಗೌರವಿಸುವ ಶಕ್ತಿಯಿದೆ. **ಕಾಯಕ-ದಾಸೋಹದ ಮೂಲಕ ಧರ್ಮ-ಶಾಸ್ತ್ರ ಎರಡು ಒಂದಾಗಿಸಿಕೊಂಡು ಮಾನವತಾ ಧರ್ಮ ಎತ್ತಿ ಹಿಡಿದಿದ್ದಾನೆ.** ಇದನ್ನೆಲ್ಲ ಸಾಧಿಸಲು:

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ!
ಛಲಬೇಕು ಶರಣಂಗೆ ಪರಸತಿಯ ನೊಲ್ಲೆನೆಂಬ!
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ!
ಛಲಬೇಕು ಶರಣಂಗೆ ಲಿಂಗಜಂಗಮವೊಂದೆಂಬ!
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ!
ಛಲವಿಲ್ಲದವರ ಮೆಚ್ಚ ಕೂಡಲ ಸಂಗಮದೇವ

ಪರಧನ, ಪರಸತಿ, ಪರ ದೈವವನ್ನು ದೂರೀಕರಿಸಿ ಲಿಂಗ-ಜಂಗಮದ ಪ್ರಸಾದದಲ್ಲಿಯೇ ಎಲ್ಲಾ ಕಂಡುಕೊಂಡ ಛಲದಿಂದ ಮಾತ್ರ ಮನುಷ್ಯನಿಗೆ ಛಲಬೇಕು ಎಂಬ ದಿಟ್ಟ ಬಸವಣ್ಣನ ನಿಲುವು ವರ್ಣನಾತೀತ.

ದೇವಲೋಕ ಮರ್ತ್ಯಲೋಕವೆಂಬುದು
ಬೇರಿಲ್ಲ ಕಾಣಿರೋ
ಸತ್ಯವ ನುಡಿಯುವುದೆ ದೇವಲೋಕ
ಮಿಥ್ಯ ನುಡಿಯುವುದೇ ಮರ್ತ್ಯಲೋಕ,
ಆಚಾರವೇ ಸ್ವರ್ಗ, ಅನಾಚಾರವೇ ನರಕ
ಕೂಡಲ ಸಂಗಮದೇವಾ ನೀನೇ ಪ್ರಮಾಣ.

ದೇವಲೋಕ ಮರ್ತ್ಯಲೋಕ ಎಲ್ಲೂ ಇಲ್ಲ. ಅವನು ನುಡಿವ ಸತ್ಯ-ಮಿಥ್ಯದ ನುಡಿಯಲ್ಲಿದೆ, ಆಚಾರದಲ್ಲಿದೆ. ಆಚಾರ ವಿಚಾರಗಳ ಮೂಲಕ ಸಮಾನತೆ ತರಲು ಸಾಧ್ಯ ಎಂದಿದ್ದಾರೆ. ಬಸವಣ್ಣ!

ನಡೆನುಡಿ ಒಂದಾಗಿರಬೇಕು. ಜ್ಞಾನಕ್ರಿಯಾರೂಪದಲ್ಲಿ ಬರಬೇಕು. ಬರೀ ಜ್ಞಾನವಿದ್ದು ಅದೂ ಕ್ರಿಯಾರೂಪಕ್ಕೆ ಬರದಿದ್ದರೆ ಆಡಿದ ಮಾತಿನಂತೆ ನುಡಿದಂತೆ ನಡೆಯಬೇಕು. ಆಚರಣೆ ಇರಬೇಕೆಂಬುದು ಬಸವಣ್ಣ ಸಾರಿದ ಬೋಧನೆ!

ಬಸವಣ್ಣ ತನ್ನ ವಚನಗಳ ಮೂಲಕ ಮಾನವೀಯ ಮೌಲ್ಯ ಬಿತ್ತುವ ಮೂಲಕ ಅದರ ಮುಖ್ಯ ಪ್ರತಿಪಾದಕನಾಗಿದ್ದಾನೆ. ಮೂಲತಃ ದೈವಭಕ್ತಿಯ ಮೂಲಕವೇ ಆತ ಕಾಯಕ-

ದಾಸೋಹ-ಜಂಗಮತ್ವದ ಕಲ್ಪನೆ ಹೊರಹೊಮ್ಮಿ. ಸಾಮಾಜಿಕ, ಸಾಹಿತ್ಯಿಕ, ಆರ್ಥಿಕ, ರಾಜಕೀಯ ಹಿನ್ನೆಲೆಯಲ್ಲಿ ಎಷ್ಟು ಪ್ರಭಾವಿತನಾಗಿ ಕಾಣುತ್ತಾನೋ ಅದಕ್ಕಿಂತ ಹೆಚ್ಚು ಮಾನವತಾವಾದಿ ಯಾಗಿದ್ದನೆಂಬುದು ಗಮನಿಸುವಂಥ ಸಂಗತಿಯಾಗಿದೆ. ಬಸವಣ್ಣನ ವ್ಯಕ್ತಿತ್ವ ವಿಕಾಸ-ಆತನ ಜೀವನ, ಮಾನವೀಯ ಮಮಕಾರವುಳ್ಳದ್ದಾಗಿದೆ. ವ್ಯಕ್ತಿಯ ವಿಕಸನಕ್ಕೆ ಬಸವಣ್ಣ ಮಹತ್ವ ನೀಡಿದ.

ಮಾನವೀಯ ಮೌಲ್ಯಸಾರಿದ ಬಸವ ಮಾನವೀಯ ಮೌಲ್ಯದ ಪ್ರವರ್ತಕ. ಚರಿತ್ರೆಯ ಹಿನ್ನೆಲೆಯಲ್ಲಿ ವಚನ ಬರೆಯಲಿಲ್ಲ. ಸತ್‌ಚಾರಿತ್ರ್ಯದ ಮೂಲಕ ಬಾಳಿದ ಬಸವಣ್ಣನಿಗೆ ಚರಿತ್ರೆಗಿಂತ ಚಾರಿತ್ರ್ಯ ಮುಖ್ಯವಾಗಿದೆ. ಸಂಘರ್ಷಮಯವಾದ ಜೀವನದಲ್ಲಿ ಬಸವಣ್ಣ ಬಾಲ್ಯದಿಂದಲೂ ತನ್ನ ಕೊನೆ ಹಂತದವರೆಗೂ ಸಂಘರ್ಷದಲ್ಲಿ ಬದುಕಿದ್ದನೆಂಬುದೇ ದೊಡ್ಡ ಸಾಹಸ. ವಚನ ವಿಜ್ಞಾನಕ್ಕೂ ಕೂಡಾ ಅನ್ವಯಿಸುವಂಥದ್ದು. ವಚನ ಇಲ್ಲಿ ಪ್ರಾಣಿ-ಮನುಷ್ಯ ಹಾಗೂ ಸಕಲ ಚರಾಚರಗಳ ಕುರಿತಾಗಿ ಚಿಂತನೆ ಮಾಡುತ್ತದೆ. ಇಂದಿನ ಕಲುಷಿತವಾದ ವಿಜ್ಞಾನ ಕಂಪ್ಯೂಟರೀಕರಣದಿಂದಾಗಿ ಸಂಸ್ಕೃತಿಯ ಮೇಲೆ ಗಾಢಪರಿಣಾಮ ಬೀರುತ್ತಲಿದೆ. ಬಾಂಬುಗಳ ದಾಳಿಯಿಂದ ನಾಶವಾಗುವ ಹಂತದಲ್ಲಿದೆ. ಎಲ್ಲಾ ಮಾಲಿನ್ಯಗಳು ಸೇರಿ ಮನುಷ್ಯನು ಸಹ ಮನಸ್ಸಿನಲ್ಲಿಯೇ ಮಾಲಿನ್ಯ ತುಂಬಿಕೊಂಡಿದ್ದಾನೆ. ಎಲ್ಲಿ ನೋಡಿದರೂ ಸೇಡು, ಹಗೆತನ, ಮೋಸ, ವಂಚನೆ, ಲಂಚ ಬಡಕತನ, ಅಜಾಗರೂಕತೆ, ಸ್ವಾರ್ಥ, ಸುಲಿಗೆ, ದರೋಡೆ, ಜಾತಿ ಸಂಘರ್ಷ, ವರ್ಣ-ಲಿಂಗ-ತಾರತಮ್ಯಗಳಿಂದ ಇಡಿ ಜಗತ್ತೆ ದ್ವಂದ್ವ ನೀತಿಯಲ್ಲಿ ಬದುಕ ಬೇಕಾಗಿದೆ. ಮನುಷ್ಯನಲ್ಲಿಯೇ ಕಡುವೈರತ್ವ-ಹಗೆತನಗಳಿಂದ ಮನುಕುಲ ನಾಶವಾಗುತ್ತಿದೆ.

ಯುವಕರ ಮನಸ್ಸು ಕೇವಲ ಬಣ್ಣ ಬಣ್ಣದ ಕನಸುಗಳತ್ತ ಸಾಗಿದೆ. ಕನಸುಗಳು ಮನುಷ್ಯನಿಗೆ ಬೇಕು. ಆದರೆ ಅಂಧಕಾರದ ಕನಸುಗಳ ಮೂಲಕ ಪ್ರಚೋದನಕಾರಿಯಾದ, ಮನಸ್ಸು ಕೆಡಿಸುವ ಜಾಹಿರಾತುಗಳಿಗೆ ಮಾರು ಹೋಗಿದ್ದಾರೆ. ಕಾಲ ಬದಲಾಗಿದೆ. ಮನುಷ್ಯತ್ವ ಮತ್ತು ಸೌಮ್ಯತೆಯಿಂದ ಬಾಳಲಾರದ ಸ್ಥಿತಿ ಈಗಿಲ್ಲ. ಇಂಡಿಯಾದ ಜನ ಅಪಾಯದ ಸಂದರ್ಭದಲ್ಲಿದ್ದಾರೆ. ಇವುಗಳ ಮಧ್ಯ ಇದ್ದು ಜೀವಿಸಬೇಕಿದೆ; ಜೀವನ ಸಾರ್ಥಕ ಪಡಿಸಿಕೊಳ್ಳುವುದು ಆದ್ಯ ಕರ್ತವ್ಯ.

ಬಸವಣ್ಣ ಮನುಕುಲದ ಉದ್ಧಾರಕ್ಕಾಗಿಯೇ ಮೈದಾಳಿ ಬಂದಂತೆ ಕಾಣುತ್ತದೆ-ಆಡಂಬರದ ಜೀವನ ತಿರಸ್ಕರಿಸಿದ. ಸರಳ ಹಾಗೂ ನೀತಿಯುಕ್ತ ಜೀವನಕ್ಕೆ ಬೆಲೆಕೊಟ್ಟು ಅರಿವನ್ನು ಆಚಾರಕ್ಕೆ ತಂದನು. ಮನುಷ್ಯನ ಮನಸ್ಸು, ದೇಹ, ಭಾವಗಳನ್ನು ಹದಗೊಳಿಸಿ, ಸುಂದರವಾದ ವಚನಗಳ ಅಭಿವ್ಯಕ್ತಿ ಮೂಲಕ ಮಾನವತಾವಾದ-ಮಾನವೀಯತೆಗೆ ಹೊಸ ಬೆಳಕು ತಂದು ಕೊಟ್ಟ ಬಸವಣ್ಣನ ವಚನ ಅನುಪಮ ಅಸದೃಶವಾದುದು. ಮಾನವೀಯತೆಗೆ ಒಂದು ಸ್ವರೂಪ ನೀಡಿದ ಬಸವಣ್ಣ ಕನ್ನಡ ನಾಡಿನ ಮಹಾಮಾನವತಾವಾದಿ ಹಾಗೂ ಜಗತ್ತು ಕಂಡ ಮಹಾ ಮಾನವತಾವಾದಿ.

❑

ಬಸವಣ್ಣನವರು ಮತ್ತು ಜಾತಿವಿನಾಶ

●

ಪ್ರೊ. ಸಿ.ಪಿ. ಸಿದ್ಧಾಶ್ರಮ

ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನಕ್ಕೆ ವಿಶಿಷ್ಟವಾದ ಮತ್ತು ಪ್ರಮುಖವಾದ ಸ್ಥಾನವಿದೆ. ಶರಣ–ಶರಣೆಯರ ಸಮಾಜೋ–ಧಾರ್ಮಿಕ ಆಂದೋಲನದ ಅಂಗವಾಗಿ ಸೃಷ್ಟಿಯಾದ ವಚನಸಾಹಿತ್ಯ ಎಲ್ಲ ಕಾಲಕ್ಕೂ ಪ್ರಸ್ತುತವಾಗುವಂಥ ಜನಪರ ಕಾಳಜಿ – ಆಶಯವನ್ನು ಹೊಂದಿರುವ ಕಾರಣದಿಂದಾಗಿ ಇದರ ಮಹತ್ವ ಇನ್ನೂ ಅಧಿಕವಾಗಿದೆ.

ಬಸವಣ್ಣನವರ ನೇತೃತ್ವದಲ್ಲಿ ಆರಂಭವಾದ ಸಮಾಜೋ–ಧಾರ್ಮಿಕ ಆಂದೋಲನದಲ್ಲಿ ಕಡೆಗಣಿಸಲ್ಪಟ್ಟ ಶೂದ್ರರು, ಪಂಚಮರು ಮತ್ತು ಮಹಿಳೆಯರು ಮೊಟ್ಟಮೊದಲಬಾರಿಗೆ ಸಕ್ರಿಯವಾಗಿ ಭಾಗವಹಿಸಿದ ಕಾರಣದಿಂದಾಗಿ ಆ ಆಂದೋಲನ ಚರಿತ್ರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವ ಭಾರತದಂತಹ ದೇಶದಲ್ಲಿ ಯಾವುದೇ ಒಂದು ಜನಪರ ಚಳವಳಿ ಯಶಸ್ಸು ಹೊಂದಬೇಕಾದರೆ ಶೋಷಣೆಗೊಳಗಾದ ದುಡಿಯುವ ಜನಸಮುದಾಯ, ಕೆಳಸ್ತರದ ಜನವರ್ಗ ಮತ್ತು ಮಹಿಳೆಯರು ಸಕ್ರಿಯವಾಗಿ ಪಾಲುಗೊಳ್ಳುವುದು ಅನಿವಾರ್ಯ ಆಗಿರುತ್ತದೆ. ಬಸವಣ್ಣ ಈ ಎಲ್ಲ ಜನಸಮುದಾಯವನ್ನು ತಾನು ಹುಟ್ಟುಹಾಕಿದ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ನೀಡಿದ್ದರ ಫಲವಾಗಿಯೇಶರಣ ಚಳವಳಿ ಅಂದಿನ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯನ್ನು ಅಲುಗಾಡಿಸಲು, ಪರಿವರ್ತನೆ ತರಲು ಸಾಧ್ಯವಾಯಿತು. ಬಸವಣ್ಣನವರು ಹುಟ್ಟುಹಾಕಿದ ಈ ಸಮಾಜೋ–ಧಾರ್ಮಿಕ ಆಂದೋಲನಕ್ಕಿಂತ ಮುಂಚೆ ಇದ್ದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸ್ಥಿತಿಯನ್ನು ಕೊಂಚಮಟ್ಟಿಗೆ ಪರಿಶೀಲಿಸುವುದು ಈ ಸಂದರ್ಭದಲ್ಲಿ ಉಚಿತವೆನಿಸುತ್ತದೆ.

ಬಸವಪೂರ್ವಯುಗದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸ್ಥಿತಿಗಳನ್ನು ದುಡಿಯುವ ಜನವರ್ಗದ, ಜನಸಾಮಾನ್ಯರ ದೃಷ್ಟಿಯಿಂದ ನೋಡಿದಾಗ ಅಷ್ಟೊಂದು ಅನುಕೂಲಕರ ವಾಗಿರಲಿಲ್ಲವೆಂದು ತಿಳಿದುಬರುತ್ತದೆ. ವೈದಿಕ ಧರ್ಮ ಹುಟ್ಟುಹಾಕಿದ ವರ್ಣಾಶ್ರಮ ಪದ್ಧತಿಯಿಂದಾಗಿ ಅಂದಿನ ಮಾನವ ಸಮಾಜ ಒಡೆದು ಹೋಳು ಹೋಳಾಗಿತ್ತು. ಸಾಮಾಜಿಕ ಸಮಾನತೆ, ರಾಜಕೀಯ ಸ್ವಾತಂತ್ರ್ಯ, ಶೈಕ್ಷಣಿಕ ಸವಲತ್ತುಗಳು ಕೇವಲ ಕೆಲವರಿಗೆ ಮಾತ್ರ

ಮೀಸಲಾಗಿದ್ದವು. ಸಮಾನತೆ, ಸವಲತ್ತುಗಳಿಂದ ಬಹುಸಂಖ್ಯಾತ ದುಡಿಯುವ ಜನವರ್ಗ, ಶೋಷಿತ ಜನಸಮುದಾಯ ಮತ್ತು ಮಹಿಳೆಯರು ವಂಚಿತರಾಗಿದ್ದರು. ವ್ಯವಸ್ಥೆಯ ಸಂಚಿನಿಂದಾಗಿ ಮೂಢನಂಬಿಕೆ, ಅಂಧಶ್ರದ್ಧೆ, ಕಂದಾಚಾರಗಳು ಜನಮನದಲ್ಲಿ ಬೇರೂರಿದ್ದವು. ಈ ಕೆಳವರ್ಗದ ಶೋಷಿತ ಜನತೆ ತಾವು ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕಸ್ವಾತಂತ್ರ್ಯ, ಸವಲತ್ತುಗಳನ್ನು ಪಡೆದುಕೊಳ್ಳುವುದು ಅಪರಾಧವೆಂಬ ಕೀಳರಿಮೆಯನ್ನು ಹೊಂದಿದವರಾಗಿದ್ದರು. ಅಷ್ಟರಮಟ್ಟಿಗೆ ವ್ಯವಸ್ಥೆ ಅವರನ್ನು ಮೂಢರನ್ನಾಗಿ ಮಾಡಿದ್ದಿತು. ಕರ್ಮಸಿದ್ಧಾಂತ, ಇದಕ್ಕೆಲ್ಲ ಪೂರಕವಾಗಿ ಕೆಲಸ ನಿರ್ವಹಿಸುತ್ತಿತ್ತು. ಆನಸಮುದಾಯವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ನಾಲ್ಕು ವರ್ಣಗಳಲ್ಲಿ ವಿಭಜಿಸಲಾಗಿತ್ತು. ಈ ವರ್ಣಗಳೇ ಮುಂದೆ ಕಾಲಾಂತರದಲ್ಲಿ ನೂರಾರು, ಸಾವಿರಾರು ಜಾತಿ ಉಪಜಾತಿಗಳ ಸೃಷ್ಟಿಗೂ ಕಾರಣವಾದವು.

"ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ" (ಭಗವದ್ಗೀತೆ, ೪-೧೩) 'ಅವರವರ ಗುಣಕರ್ಮಗಳಿಗೆ ಅನುಸಾರವಾಗಿ ನಾಲ್ಕು ವರ್ಣಗಳು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ) ನನ್ನಿಂದ ಸೃಷ್ಟಿಸಲ್ಪಟ್ಟಿವೆ' ಎಂಬುದು ಇದರ ತಾತ್ಪರ್ಯ. ಇದೇ ಗೀತೆಯ ೧೮ನೇ ಅಧ್ಯಾಯದಲ್ಲಿನ ೪೧ನೇ ಶ್ಲೋಕವು ಮೇಲಿನ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತದೆ.

"ಬ್ರಾಹ್ಮಣ ಕ್ಷತ್ರಿಯ ವಿಶಾಂ ಶೂದ್ರಾಣಾಂ ಚ ಪರಂತಪ
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವ ಪ್ರಭವೈರ್ಗುಣೈಃ"

(ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ಕರ್ಮಗಳು ಅವರ ಸ್ವಭಾವದಿಂದ ಹುಟ್ಟಿದ ಗುಣಗಳಿಂದ ವಿಭಜಿಸಲ್ಪಟ್ಟಿವೆ.)

ಗುಣಕರ್ಮಗಳಿಗೆ ಅನುಗುಣವಾಗಿ ಮೇಲಿನ ರೀತಿಯ ನಾಲ್ಕು ವರ್ಣಗಳನ್ನು ಭಗವಂತಸ್ವತಃ ತಾನೇ ಸೃಷ್ಟಿಸಿದನೆಂಬುದನ್ನು ಹಾಗೂ ಆಯಾ ವರ್ಣದವರು ಮಾಡಬೇಕಾದ ಕರ್ಮಗಳು (ಕೆಲಸ ಕಾರ್ಯಗಳು) ಸ್ವಭಾವ ಜನ್ಯವೆಂಬ ವಾದವನ್ನು ಒಪ್ಪಲು ಸಾಧ್ಯವಾದೀತೆ? ಒಂದು ವೇಳೆ ಆ ಭಗವಂತ ಇದ್ದುದೇ ನಿಜವಾಗಿದ್ದ ಪಕ್ಷದಲ್ಲಿ ಕರುಣಾಮಯಿಯಾದ, ಸಕಲ ಜೀವಾತ್ಮರನ್ನು ಸಮಾನ ಪ್ರೀತಿ ವಾತ್ಸಲ್ಯದಿಂದ ಕಾಣಬೇಕಾಗಿದ್ದ ಆತ, ತನ್ನ ಮಕ್ಕಲಲ್ಲಿ ಹೀಗೆ ಒಡೆದು ಆಳುವ ತಂತವನ್ನು ರೂಪಿಸುತ್ತಿದ್ದನೇ ? ಮನುಷ್ಯ ತಾನು ಸೃಷ್ಟಿಸಿದ ಈ ತಾರತಮ್ಯವನ್ನು ದೇವರ ಮೇಲೆ ಹಾಕಿ ತನ್ನ ಸ್ವಾರ್ಥಸಾಧನೆ ಮಾಡಿಕೊಳ್ಳುವುದು ಈಗ ಎಲ್ಲರಿಗೂ ಮನವರಿಕೆಯಾಗಿರುವ ಸಂಗತಿಯೇ ಆಗಿದೆ. ಯಾಕೆಂದರೆ ದೇವರೇ ಈ ನೀಚೋಚ್ಚ ವ್ಯವಸ್ಥೆಯನ್ನು ಸೃಷ್ಟಿಸಿ ಆಯಾ ವರ್ಣದವರು ಇಂತಿಂಥ ಕರ್ಮಗಳನ್ನೇ ಮಾಡಿಕೊಂಡು ಮುಂದುವರೆಯಬೇಕೆಂದು ಆದೇಶವಿತ್ತ ಮೇಲೆ, ದೇವರ ಆ ಆದೇಶವನ್ನು ಮೀರುವುದು ಅಷ್ಟು ಸುಲಭವೇ? ಗುಣಕರ್ಮದ ಆಧಾರದ ಮೇಲೆ ವಿಭಜಿಸಲ್ಪಟ್ಟ ಈ ನಾಲ್ಕು ವರ್ಣಗಳಲ್ಲಿ ಸಾಮಾಜಿಕವಾಗಿ ಮತ್ತು ದಾರ್ಮಿಕವಾಗಿ ಬ್ರಾಹ್ಮಣನ ಸ್ಥಾನ ಅತ್ಯಂತ ಉಚ್ಚಮಟ್ಟದ್ದೂ, ಶೂದ್ರನ ಮತ್ತು ಪಂಚಮನ ಸ್ಥಾನ ಅಷ್ಟೇ ಕನಿಷ್ಠ ಮಟ್ಟದ್ದೂ ಆಗಿತ್ತು. ಕ್ಷತ್ರಿಯ ಪ್ರಭುತ್ವದ ವಾರಸುದಾರನಾಗಿದ್ದು, ಆಳುವ ದೊರೆಯಾಗಿದ್ದ. ಅವನಿಗೆ ಶಸ್ತ್ರವಿದ್ಯೆಯ ಜೊತೆಗೆ ಅಕ್ಷರ ಕಲಿಕೆಯ ಅವಕಶವೂ ಇತ್ತು. ವೈಶ್ಯನ ಕರ್ಮ ವ್ಯಾಪಾರವಾಗಿತ್ತು. ನಾಲ್ಕು ವರ್ಣಗಳಲ್ಲಿ ಮೊದಲ ಸ್ಥಾನ ಪಡೆದಿದ್ದ ಬ್ರಾಹ್ಮಣ ವಿದ್ಯೆಯ ವಾರಸುದಾರನಾಗಿದ್ದ; ಧಾರ್ಮಿಕವಾಗಿ ಪೌರೋಹಿತ್ಯದ ಪರಮಾಧಿಕಾರಿಯಾಗಿದ್ದ. ಮಾತ್ರವಲ್ಲದೆ ರಾಜನ ಮಂತ್ರಿಯೋ ಸಲಹೆಗಾರನೋ

ಆಗಿದ್ದುಕೊಂಡು ರಾಜ್ಯಾಡಳಿತದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ; ಜನಪರ ಇಲ್ಲವೇ ಜನವಿರೋಧಿಯಾದ ಎಲ್ಲ ಬಗೆಯ ವಿಧಿ–ಸಾಸನಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ. ಬರುಬರುತ್ತ ಗುಣಕರ್ಮದ ಮಾತು ಹಿಂದೆ ಸರಿದು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿಯೇ ಒಬ್ಬ ವ್ಯಕ್ತಿ ಶ್ರೇಷ್ಠತೆಯನ್ನು – ಆತ ಎಷ್ಟು ಮೂರ್ಖನಾಗಿದ್ದರೂ – ಪಡೆಯುತ್ತಾನೆಂಬ ಅತಿರೇಕಕ್ಕು ಈ ತರ್ಕ ಮುಂದುವರೆಯಿತು. ಒಟ್ಟಿನಲ್ಲಿ ಈ ವಿಭಜನಾ ತಂತ್ರದಿಂದಾಗಿ ಆಂಶಿಕವಾಗಿ ವೈಶ್ಯರು, ಸಂಪೂರ್ಣವಾಗಿ ಶೂದ್ರರು ಮತ್ತು ಪಂಚಮರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ರಾಜಕೀಯ ಹಕ್ಕು ಸವಲತ್ತುಗಳಿಂದ ವಂಚಿತ ರಾದರೆಂಬುದು ಅತ್ಯಂತ ವಿಷಾದನೀಯ ಸಂಗತಿ.

ಋಗ್ವೇದದ ಪುರುಷಸೂಕ್ತದ ಮಾತೊಂದನ್ನು ಇಲ್ಲಿಯೇ ನೋಡುವುದು ವಿಹಿತವೆಂದು ತೋರುತ್ತದೆ.

ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೋ ರಾಜನ್ಯಃ ಕೃತಃ
ಊರೂ ತದಸ್ಯದ್ವೈಶ್ಯ ಪದ್ಭ್ಯಾಗಂ ಶೂದ್ರೋ ಅಜಾಯತ

(ಋಗ್ವೇದ, ಮಂಡಲ–೧೦, ಸೂತ್ರ–೯೦, ಋಕ್ಕು–೧೨)

ಬ್ರಹ್ಮಣ ಮುಖದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ ಮತ್ತು ಪಾದಗಳಿಂದ ಶೂದ್ರರು ಜನಿಸಿದರೆಂಬುದು ಇಲ್ಲಿ ತಾತ್ಪರ್ಯ. ಇಲ್ಲಿಯೂ ಬ್ರಾಹ್ಮಣನ ಸ್ಥಾನ ಮೇಲಿನದಾದರೆ ಶೂದ್ರನ ಸ್ಥಾನ ಕೆಳಸ್ತರದ್ದು ಆಗಿದೆ. ಅಂದರೆ ಬ್ರಾಹ್ಮಣ ಹುಟ್ಟಿನಿಂದಲೇ ಶ್ರೇಷ್ಠ ಮತ್ತು ಮೇಲ್ಮಟ್ಟದವನು, ಶೂದ್ರ ಕನಿಷ್ಠ ಮತ್ತು ಕೆಳಸ್ತೆದವನೆಂಬ ಭಾವನೆ ಇಲ್ಲಿ ಸ್ಪಷ್ಟವಾಗಿಯೇ ಕಂಡುಬರುತ್ತದೆ. ಗೀತೆಯಲ್ಲಿ ಹೀಗೆ ಹೇಳಲಾಗಿದೆ.

'ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್' *(ಗೀತೆ, ೧೮–೪೪)*

ಪರಿಚಾರಿಕೆ ಅಂದರೆ ಸೇವಕವೃತ್ತಿ ಶೂದ್ರನಿಗೆ ಸ್ವಭಾವಜನ್ಯವಾದುದು ಎಂಬುದು ಇಲ್ಲಿನ ಅರ್ಥ. ಅಂದರೆ ವ್ಯವಸ್ಥೆಯ ಮುಂಚೂಣಿಯಲ್ಲಿರುವ ಬ್ರಾಹ್ಮಣ ಮತ್ತು ಕ್ಷತ್ರಿಯರ ಸೇವೆ ಮಾಡಿಕೊಂಡಿರುವುದು ಬಹುಸಂಖ್ಯಾತ ಶೂದ್ರ ಜನರ ಕರ್ತವ್ಯವಾಗಿತ್ತು. ದುಡಿಯುವ ವರ್ಗಕ್ಕೆ ಸೇರಿದ ಶ್ರಮಜೀವಿಗಳಾದ ಶೂದ್ರರಿಗೆ ಸ್ವತಂತ್ರವಾದ ಅಸ್ತಿತ್ವವಿರಲಿಲ್ಲ. ಸಾಮಾಜಿಕ, ದಾರ್ಮಿಕ ಸ್ಥಾನಮಾನಗಳ ಅವಕಾಶವೇ ಇರಲಿಲ್ಲ. ಮೇಲ್ವರ್ಗದವರ ಆಡಳಿತಾರೂಢರ ಸೇವೆಯನ್ನು ಮಾಡುವುದರಲ್ಲೇ ತಮ್ಮ ಬದುಕಿನ ಸಾರ್ಥಕತೆಯನ್ನು ಶೂದ್ರರು ಕಂಡುಕೊಳ್ಳ ಬೇಕಾಗಿತ್ತು. ಇದೇ ಅವರ ಬದುಕಿನ ಮುಖ್ಯ ಗುರಿಯಾಗಿತ್ತು. ಅಂತೂ ವೇದೋಪನಿಷತ್ತುಗಳ ಕಾಲದಲ್ಲಿ ಶೂದ್ರರಿಗೆ ಯಾವುದೇ ರೀತಿಯ ಸ್ಥಾನಮಾನಗಳಿರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. 'ಮನುಸ್ಮೃತಿ' ಶೂದ್ರರಿಗೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಕ್ಕು ಸವಲತ್ತು ಗಳನ್ನು ಕೊಡಕೂಡದೆಂದು ಸ್ಪಷ್ಟವಾಗಿ ಹೇಳಿದ ಗ್ರಂಥ.

"ಶೂದ್ರಂ ತು ಕಾರಯೇದಾಸ್ಯಂ ಕ್ರೀತಮಕ್ರೀತಮೇವ ವಾ
ದಾಸಯೈವ ಹಿ ಸೃಷ್ಟೋ ಸೌಬ್ರಾಹ್ಮಣಸ್ಯ ಸ್ವಯಂಭುವ ವಾ" *(ಮನುಸ್ಮೃತಿ, ೮–೪೧೩)*

ಶೂದ್ರನು ಕೊಳ್ಳಲ್ಪಟ್ಟವನಾಗಿರಲಿ ಅಥವಾ ಇಲ್ಲದಿರಲಿ ಬ್ರಾಹ್ಮಣನ ಸೇವೆಗಾಗಿಯೇ ಬ್ರಹ್ಮ ಶೂದ್ರನನ್ನು ಸೃಷ್ಟಿಮಾಡಿರುತ್ತಾನೆ. ಅದೇ ಮನುಸ್ಮೃತಿಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ,

ನ ಸ್ವಾಮಿನಾ ನಿಸೃಷ್ಟೋ ಶೂದ್ರೋದಾಸ್ಯಾದ್ವಿಮುಚ್ಚತೇ
ನಿಸರ್ಗಜಂ ಹಿ ತತ್ವಸ್ಯ ಕಸ್ತಸ್ಮಾತ್ತತದೋಪಹತಿ *(ಅದೇ, ೮ ೪೧೪)*

ಶೂದ್ರನಾದವನು ತನ್ನ ಒಡೆಯನಿಂದ ವಿಮೋಚನೆ ಹೊಂದಿದವನಾದರೂ ದಾಸ್ಯದಿಂದ ಬಿಡುಗಡೆ ಪಡೆದಿರುವುದಿಲ್ಲ. ಯಾಕೆಂದರೆ ದಾಸ್ಯವು ಹುಟ್ಟಿನಿಂದಲೇ ಅವನಿಗೆ ಸಹಜ ಸ್ವಭಾವ ಗುಣವಾಗಿ ಬಂದಿರುವುದರಿಂದ ಅದನ್ನು ಯಾರೂ ತಪ್ಪಿಸಲಾರರು. ಮನುಸ್ಮೃತಿಯ ಮೇಲಿನ ಮಾತುಗಳಿಂದ ಸ್ಪಷ್ಟವಾಗುವುದಿಷ್ಟು: ಶೂದ್ರನು ಕೇವಲ ಬ್ರಾಹ್ಮಣರ ಸೇವೆಗಾಗಿಯೇ ಹುಟ್ಟಿದವನು, ಅವನನ್ನು ಕೊಳ್ಳುವ ವ್ಯವಸ್ಥೆ ಆಗಿನ ಕಾಲದಲ್ಲಿ ಇದ್ದುದರಿಂದ ಆತನನ್ನು ಮೇಲ್ವರ್ಗದ ಶ್ರೀಮಂತರು ಕೊಂಡುಕೊಂಡು ತಮ್ಮ ಗುಲಾಮನನ್ನಾಗಿ ಮಾಡಿಕೊಂಡು ತಮ್ಮ ಸೇವೆಗೆ ಇಟ್ಟುಕೊಳ್ಳುತ್ತಿದ್ದರೆಂಬುದು. ಒಂದು ವೇಳೆ ಒಡೆಯನಿಂದ ಒಬ್ಬ ಶೂದ್ರ ಬಿಡುಗಡೆ ಪಡೆದರೂ ಆತ ದಾಸ್ಯದಿಂದ ಮಾತ್ರ ಬಿಡುಗಡೆ ಹೊಂದಲು ಸಾಧ್ಯವಿಲಿಲ್ಲ. ಏಕೆಂದರೆ ಆತ ಗುಲಾಮ ಇಲ್ಲವೇ ದಾಸನಾಗಿರುವುದು ಆತನ ಹುಟ್ಟಿನಿಂದಲೇ ಬಂದಿರುವ ಸಹಜ ಗುಣವಾಗಿರುವ ಕಾರಣಕ್ಕಾಗಿ ಎಂಬ ಕೀಳರಿಮೆಯನ್ನು ಬಿತ್ತಿರುವ ಮಾನವ ವಿರೋಧಿ ಕುಟಿಲ ನೀತಿಯನ್ನು ನಾವಿಲ್ಲಿ ಕಾಣುತ್ತೇವೆ. ಶೂದ್ರನನ್ನು ಸರ್ವರೀತಿಯಲ್ಲಿ ನಿಯಂತ್ರಿಸಿ ಆತನನ್ನು ಗುಲಾಮನನ್ನಾಗಿ ಇಟ್ಟುಕೊಂಡ ವ್ಯವಸ್ಥೆಯ ಸಂಚನ್ನು ನಾವಿಲ್ಲಿ ನೋಡುತ್ತೇವೆ. ಇದೇ 'ಮನುಸ್ಮೃತಿ'ಯಲ್ಲಿ 'ವೇದಾಭ್ಯಾಸೋ ಬ್ರಾಹ್ಮಣಸ್ಯ' ಎಂದು ಬ್ರಾಹ್ಮಣನಿಗೆ ಮಾತ್ರ ವೇದಾಭ್ಯಾಸದ ಅಂದರೆ ಅಕ್ಷರ ಕಲಿಕೆಯ ಅಥವಾ ಶಿಕ್ಷಣದ ಅವಕಾಶವನ್ನು ನೀಡಲಾಗಿದೆ. (ರಾಜರಿಗೆ ಮತ್ತು ಅವರ ಮನೆತನದವರಿಗೆ ಮಾತ್ರ ಅಕ್ಷರಜ್ಞಾನದ ಅವಕಾಶ ಇತ್ತೆಂಬುದನ್ನು ಇಲ್ಲಿಯೇ ಸ್ಮರಿಸಬಹುದಾಗಿದೆ.) ಆದರೆ ಶೂದ್ರರಿಗೆ ಉಪನಯನ ಸಂಸ್ಕಾರದ ಅವಕಾಶವಿಲ್ಲದ ಕಾರಣ ಅವರಿಗೆ ವೇದಾಭ್ಯಾಸದ ಅಂದರೆ ಅಕ್ಷರಕಲಿಕೆಯ ಅವಕಾಶ ಇರಲೇ ಇಲ್ಲ. ಒಂದು ವೇಳೆ ಶೂದ್ರರು ವೇದಾಭ್ಯಾಸ ನಿಷೇಧವನ್ನು ಮೀರಿ ವರ್ತಿಸಿದರೆ ಅವರ ನಾಲಿಗೆಯನ್ನು ಕತ್ತರಿಸುವಂಥ, ಕಿವಿಯಲ್ಲಿ ಕಾದ ಸೀಸವನ್ನು ಸುರಿಯುವಂಥ ಘೋರ ಶಿಕ್ಷೆಗೊಳಗಾಗುತ್ತಿದ್ದರು. ಇಂಥ ಮಾನವ ವಿರೋಧಿ ವಿಧಿ-ನಿಷೇಧಗಳ ಮೂಲಕ, ಘೋರ ಶಿಕ್ಷೆಗಳ ಮೂಲಕ ಬಹುಸಂಖ್ಯಾತ ಶೂದ್ರ ಜನಸಮುದಾಯವನ್ನು ಅಕ್ಷರ ಕಲಿಕೆಯಿಂದ, ವಿದ್ಯೆಯಿಂದ ದೂರ ಇಟ್ಟಿದ್ದರ ಸಂಚು ಇಂದು ಯಾರಿಗಾದರೂ ತಿಳಿಯುವಂಥದ್ದೇ ಆಗಿದೆ. ಸ್ತ್ರೀಯರನ್ನೂ ದಾರ್ಮಿಕ, ಶೈಕ್ಷಣಿಕ ಸವಲತ್ತುಗಳಿಂದ ದೂರ ಇಟ್ಟಿದ್ದೂ ಇದೇ ಹಿನ್ನೆಲೆಯಿಂದ ಎಂಬುದು ಗಮನಿಸಬೇಕಾದ ಸಂಗತಿ.

ಒಟ್ಟಿನಲ್ಲಿ ಬಸವಪೂರ್ವಯುಗದಲ್ಲಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರದ ಹಕ್ಕು ಸವಲತ್ತುಗಳು ಕೇವಲ ಮೇಲ್ವರ್ಗದ ಮತ್ತು ಆಡಳಿತಾರೂಢ ಜನರಿಗೆ ಮಾತ್ರ ಮೀಸಲಾಗಿದ್ದು ಕೆಳವರ್ಗದ ಬಹುಸಂಖ್ಯಾತ ಶೂದ್ರರಿಗೆ ಮತ್ತು ಮಹಿಳೆಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯ, ಸವಲತ್ತುಗಳಿಲ್ಲದ ಅಸಮಾನತೆಯ ಸಾಮಾಜಿಕ ಸಂದರ್ಭ ಸೃಷ್ಟಿಯಾಗಿತ್ತೆಂಬುದು ಚರಿತ್ರೆಯಿಂದ ತಿಳಿದುಬರುವ ಸಂಗತಿ. ಅಲ್ಲದೆ ಜನಸಮುದಾಯದಲ್ಲಿ ಬೇರುಬಿಟ್ಟಿದ ಅಜ್ಞಾನ, ಅಂಧಶ್ರದ್ಧೆ, ಮೂಢನಂಬಿಕೆಗಳಿಂದ ಸಾಮಾಜಿಕ ಆರೋಗ್ಯ ಹದಗೆಟ್ಟಿತ್ತು. ಈ ಸಂದರ್ಭದಲ್ಲಿ ವೈದಿಕ ಧರ್ಮದ ಈ ಜನವಿರೋಧಿ ನೀತಿ- ಸಂಹಿತೆಗಳಿಗೆ ಉತ್ತರವೆಂಬಂತೆ ಜೈನಧರ್ಮ ಮತ್ತು ಬೌದ್ಧಧರ್ಮಗಳು ಜನಿಸಿ ಜನಸಾಮಾನ್ಯರನ್ನು ತಮ್ಮತ್ತ ಸೆಳೆದುಕೊಳ್ಳಲು, ಅವರ

ಜೀವನದಲ್ಲಿ ಬದಲಾವಣೆ ತರಲು ಪ್ರಯತ್ನಿದ್ದು ಈಗ ಇತಿಹಾಸವಾಗಿದೆ. ಜೈನ, ಬೌದ್ಧಧರ್ಮಗಳು ಅಹಿಂಸಾ ಪರಿಕಲ್ಪನೆಯ ಮೂಲಕ ಉದಾರವಾದದ ಹಿನ್ನೆಲೆಯಿಂದ ಜನಸಮುದಾಯವನ್ನು ತಲುಪಲು ಸಾಕಷ್ಟು ಪ್ರಯತ್ನ ಮಾಡಿದರೂ ನರೀಕ್ಷಿತ ಯಶಸ್ಸು ಕಾಣಲಿಲ್ಲ. ಕರ್ಮಸಿದ್ಧಾಂತವನ್ನು ದೂರ ಸರಿಸಿ ಮಾನವೀಯ ನೆಲೆಯ ಮೇಲೆ ಕಟ್ಟಲ್ಪಟ್ಟ, ವೈಜ್ಞಾನಿಕ ಮನೋಧರ್ಮದ, ಜನಪರ ಕಾಳಜಿಯ ಬೌದ್ಧಧರ್ಮ ಈ ದೇಶದಲ್ಲಿ ನೆಲೆಯೂರಲು ಸಾಧ್ಯವಾಗದೆ ಹೋದದ್ದು ದೊಡ್ಡ ದುರಂತವೇ ಹೌದು. ಜೈನ, ಬೌದ್ಧಧರ್ಮಗಳ ಹಿನ್ನಡೆಗೆ ಆಗಿನ ಕಾಲದಲ್ಲಿ ರಾಜಾಶ್ರಯದ ಮೂಲಕ ಪ್ರಭಾವಿಧರ್ಮವಾಗಿ ರೂಪುಗೊಂಡಿದ್ದ ವೈದಿಕ ಧರ್ಮದ ಚಾಣಾಕ್ಷತನವೇ ಕಾರಣವೆನ್ನಬೇಕು.

ವೈದಿಕ ಧರ್ಮದಲ್ಲಿ ಜನಿಸಿದ ಬಸವಣ್ಣನವರಿಗೆ ಆ ಧರ್ಮದ ಜನವಿರೋಧಿ ರೀತಿ–ನೀತಿಗಳು ಬಹುಬೇಗನೇ ಅರ್ಥವಾದವು. ಅವರ ಮಾನವ ಪ್ರೀತಿ ಜಾಗೃತಗೊಂಡ ಫಲವಾಗಿ ಜನಹಿತ ಕಡೆಗಣಿಸಿದ ವೈದಿಕ ಧರ್ಮವನ್ನು ತೊರೆದು ಸರ್ವಜನ ಸಮುದಾಯದ ಏಳಿಗೆಯನ್ನು ಸಾಧಿಸುವಂತ ವಿಶ್ವಮಾನ ತತ್ವಗಳ ಸಾರವಾದ 'ವೀರಶೈವ' ಧರ್ಮವನ್ನು ಸ್ಥಾಪಿಸಲು ಅವರಿಂದ ಸಾಧ್ಯವಾಯಿತು. ಬಸವಣ್ಣನವರಿಗಿಂತ ಮುಂಚೆ ಸುಮಾರು ೮–೯ ಶತಮಾನಗಳಲ್ಲಿ ತ್ರಿಷಷ್ಠಿ ಪುತಾತನರ ನಾಯನಾರ್ ಪಂಥ ಸ್ಥಾಪಿತವಾಗಿ ಭಾರತದ ದಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಮೊದಲ ಬಾರಿಗೆ ಸಮಾನತೆಯನ್ನು ತರಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದು ಇಲ್ಲಿ ಉಲ್ಲೇಖನಾರ್ಹವಾಗಿದೆ. ನಾಯನಾರ್ ಪಂಥದ ಜಾತ್ಯತೀತ ನಿಲುವು ಅಂದಿನ ಸಮಾಜದ ಅನೇಕರಿಗೆ ಒಪ್ಪಿಗೆಯಾಗಿತ್ತೆಂದು ತೋರುತ್ತದೆ. ಈ ನಾಯನಾರ್ ಪಂಥನ ಕೆಲವು ಅಪ್ಪಟ ವಿಚಾರವಾದಿಗಳು ಸಂಪ್ರದಾಯವನ್ನು ದಿಕ್ಕರಿಸಿ ಮಾನವೀಯ ಮೌಲ್ಯದ ಜಾತ್ಯತೀತ ಸಮಾಜ ರಚನೆಯ ಸದುದ್ದೇಶದಿಂದ ವೈಷ್ಣವ ಮತದ ನಿಲುವುಗಳ ವಿರುದ್ಧ ಹೋರಾಟ ನಡೆಸಿದರು. ಈ ನಾಯನಾರ್ ಪಂಥದವರಲ್ಲದೆ ಬಸವಣ್ಣನವರಿಗೆ ತೀರ ಹತ್ತಿರದ ಪೂರ್ವಿಕರಾದ ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ದೇವರದಾಸಿಮಯ್ಯ, ಶಂಕರ ದಾಸಿಮಯ್ಯ, ಕೊಂಡುಗುಳಿ ಕೇಶಿರಾಜ, ಕೆಂಭಾವಿ ಭೋಗ್ಯ ಮುಂತಾದ ಶರಣರ ಜಾತ್ಯತೀತ ಮತಾತೀತ ಹೋರಾಟದ ಕಾವು ಮತ್ತು ಸಮಾನತಾ ನಿಲುವು ಬಸವಣ್ಣನವರ ಶರಣ ಪಂಥದ ಆಂದೋಲನಕ್ಕೆ ಪ್ರೇರಣೆ ನೀಡಿತ್ತೆನ್ನಬಹುದು.

ಬಸವಣ್ಣನವರು ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಅತ್ಯಂತ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾರೆ; ಅದರಲ್ಲಿ ಬಹುಮಟ್ಟಿಗೆ ಯಶಸ್ಸನ್ನೂ ಗಳಿಸುತ್ತಾರೆ. ಬ್ರಾಹ್ಮಣ ಆದಿಯಾಗಿ ಪಂಚಮನವರೆಗೆ ಎಲ್ಲ ಜಾತಿ, ಮತ, ಕುಲದವರು ಬಸವಣ್ಣನವರು ಕಟ್ಟಿದ ಹೊಸ 'ವೀರಶೈವ' ಧರ್ಮದಲ್ಲಿ ಸೇರುವಂಥ ಅವಕಾಶ ಪಡೆಯುವುದರ ಮೂಲಕ ಸಮಾನತೆಯ ಚೌಕಟ್ಟಿಗೆ ಒಳಗಾಗುತ್ತಾರೆ; ಜಾತಿಮತ – ಕುಲ ತೊರೆದ ನಿಜವಾದ ಮಾನವರಾಗುತ್ತಾರೆ; ಶರಣರಾಗುತ್ತಾರೆ. ಈ ಸಮಾನತೆಯ ಪರಿಕಲ್ಪನೆ ಪವಾಡ ಸದೃಶ ರೀತಿಯಲ್ಲಿ ಆಗಿನ ಎಲ್ಲರ ಹೃನ್ಮನಗಳಲ್ಲಿ ಚೈತನ್ಯಶೀಲ ಜೀವತಂತುವಾಗಿ ಸಂಚರಿಸುತ್ತದೆ. ಇದು ಬಸವಣ್ಣನವರ ದೊಡ್ಡ ಸಾಧನೆ ಎಂದು ಹೇಳಬೇಕು. ಜಾತಿವಿನಾಶವಲ್ಲದೆ, ಸ್ತ್ರೀ ಸಮಾನತೆ, ಅಂತರಂಗ–ಬಹಿರಂಗ ಶುದ್ಧಿ, ಕಾಯಕನಿಷ್ಠೆ, ವರ್ಗ ಪ್ರಜ್ಞೆ – ಮುಂತಾದ ಜರೂರಿನ ವಿಷಯಗಳತ್ತ ಗಮನಹರಿಸಿದ್ದು ಬಸವಣ್ಣ ಮತ್ತು ಅವರ

ಸಮಕಾಲೀನ ಶರಣ-ಶರಣೆಯರ ಜನಪರ ಕಾಳಜಿ ಮತ್ತು ಮನವಪ್ರೀತಿಯನ್ನು ಎತ್ತಿ ತೋರಿಸುತ್ತದೆ.

ಪ್ರಸ್ತುತ ಬಸವಣ್ಣನವ ವಚನಗಳ ಮೂಲಕ ಅವರ ಜಾತಿವಿನಾಶ ಪರಿಕಲ್ಪನೆಯನ್ನು ಕುರಿತು ಚರ್ಚಿಸಬಹುದು.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ
ಕೂಡಲ ಸಂಗಮದೇವ
ನಿಮ್ಮ ಮನೆಯ ಮಗನೆಂದೆನಿಸಯ್ಯ

(ಸಮಗ್ರ ವಚನ ಸಂಪುಟ, ಬಸವಣ್ಣನವರ ವಚನ ಸಂಪುಟ, ೧ವ-೬೨, ಪು-೧೮)

ಬಸವಣ್ಣನವರು ಸಮಾಜದ ಉಚ್ಚವರ್ಗದಲ್ಲಿ ಜನಿಸಿದವರು. ಆಗಿನ ಕಾಲದಲ್ಲಿ ಉಚ್ಚವರ್ಗದವರು ಸಾಮಾಜಿಕವಾಗಿ ಕೆಳಸ್ತರದಲ್ಲಿದ್ದ ವ್ಯಕ್ತಿಗಳನ್ನು ಸಮಾನವಾಗಿ ಕಾಣದೆ ಕೀಳಾಗಿ ಕಾಣುತ್ತಿದ್ದುದು ಸರ್ವೇ ಸಾಮಾನ್ಯವಾಗಿತ್ತು. ಆದರೆ ಹೊಸ ಚಿಂತನೆಯ, ಮಾನವ ಪ್ರೀತಿಯ ಆಕಾರವಾದ ಸದ್ಗುಣ ಸಂಪನ್ನರಾದ ಬಸವಣ್ಣನವರಿಗೆ ಸಮಾಜದ ಕೆಳಸ್ತರದ ಜನರನ್ನು ಕೀಳಾಗಿ ಕಾಣುವ ಸಣ್ಣತನ ಎಂದೂ ಇರಲಿಲ್ಲ. ಈ ನೀಚೋಚ್ಚ ಭಾವನೆ ವೈದಿಕ ಧರ್ಮದ ಕೊಡುಗೆಯಾದರೂ ಬಸವಣ್ಣನವರು ಅದನ್ನು ಮೀರಿ ಎಲ್ಲ ಮಾನವ ಸಮುದಾಯವನ್ನು ಸಮಾನ ಪ್ರೀತಿ-ಗೌರವಗಳಿಂದ ಕಾಣುವ ನಿಜವಾದ ಮನುಷ್ಯರಾಗಿದ್ದರು. ಆದ್ದರಿಂದ ಮೇಲಿನ ವಚನದಲ್ಲಿನಂತೆ ವೈದಿಕ ಧರ್ಮದ ಬಳುವಳಿಯಾದ ನೀಚೋಚ್ಚ ಭಾವನೆಯನ್ನು ನಿರಾಕರಿಸಿದ ಬಸವಣ್ಣ ಎಲ್ಲ ಜನರೂ ನಮ್ಮವರೇ ಎಂದೆನಿಸುವ ಸಮಾನ ಪ್ರೀತಿಯ ಸಹೋದರ ಭಾವನೆಯನ್ನು ದಯಪಾಲಿಸು ಎಂದು ತನ್ನಿಷ್ಟ ದೇವತೆಯಲ್ಲಿ ಕೇಳುತ್ತಿದ್ದಾರೆ. ಅಂದರೆ ಬಸವಣ್ಣನವರಿಗೆ ಆ ರೀತಿಯ ಸಮಾನತಾ ಭಾವನೆ ಇಲ್ಲದ ಕಾರಣ ಅವರು ದೇವರಲ್ಲಿ ಅದನ್ನು ಕೇಳುತ್ತಿದ್ದಾರೆಂಬ ಅಭಿಪ್ರಾಯವಲ್ಲ, ಮೂಲತಃ ಮಾನವ ಪ್ರೇಮಿಯಾದ ಬಸವಣ್ಣನವರಿಗೆ ಸಮಾನತಾಭಾವ ಸ್ಥಾಯಿಯಾದದ್ದೇ. ಇಲ್ಲಿ ಅವರ ವಿನಯವನ್ನು ಕಾಣುವುದರ ಜೊತೆಗೆ ಸಮಾಜದ ಬೇರೆ ಜನರು ನೀಚೋಚ್ಚಭಾವನೆ ಇಟ್ಟುಕೊಳ್ಳದೆ ಎಲ್ಲರನ್ನು ಸಮಾನವಾಗಿ ಕಾಣಬೇಕೆಂಬ ಆಶಯವೂ ಇದೆ. ಒಟ್ಟಿನಲ್ಲಿ ಇಲ್ಲಿ ಜಾತಿನಿರಾಕರಣೆ ಅಥವಾ ಜಾತಿವಿನಾಶ ಪರಿಕಲ್ಪನೆ ಸ್ಪಷ್ಟವಾಗಿಯೇ ಗೋಚರಿಸುತ್ತದೆ.

ಈ ವಚನಕ್ಕೆ ಇನ್ನೊಂದು ನೆಲೆಯಿಂದ ಅರ್ಥ ಹಚ್ಚುವ ಪ್ರಯತ್ನ ಕೂಡ ಇದೆ. 'ಇವನಾರವ' ಎಂಬುದನ್ನು 'ಇವನು ಹಾರುವ' ಎಂದು ಅರ್ಥೈಸುವ ಪರಿಪಾಠವೂ ಇದ್ದು, ಬಸವಣ್ಣನವರು ಪ್ರತಿಷ್ಠಿತ 'ಹಾರುವ' ಜಾತಿಗೆ ಸೇರಿದವರಾದ್ದರಿಂದ ಅವರನ್ನು ಲೋಕದ ಜನತೆ ತಮ್ಮವನೆಂದು ಸ್ವೀಕರಿಸದೆ, ದೂರವಿಡುವ ಸಾಧ್ಯತೆ ಇರುವುದರಿಂದ ಲೋಕದ ಜನತೆ ಹಾಗೆ ಮಾಡದಿರಲೆಂಬ ಬೇಡಿಕೆ ಬಸವಣ್ಣನವರದಾಗಿದೆ ಎಂದು ತಿಳಿಯಲಾಗಿದೆ. ಆದರೆ ಮೇಲಿನಂತೆ ಜಾತಿವಿನಾಶದ ಪರಿಕಲ್ಪನೆಯ ನೆಲೆಯಲ್ಲಿ ಈ ವಚನಕ್ಕೆ ವ್ಯಾಖ್ಯಾನ ಮಾಡುವುದು ಸೂಕ್ತವೆನಿಸುತ್ತದೆ.

ಹೊಲೆಯ ಹೊಲಬಿಗನಾದಡೆ
ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ

ಹೊಲಬುಗೆಡಬೇಡ, ಶಿವ ಶರಣೆನ್ನಿರಯ್ಯಾ
ಹೊಲಬುಗೆಡಬೇಡ, ಶಿವ ಶರಣೆನ್ನಿರಯ್ಯಾ
ನಮ್ಮ ಕೂಡಲಸಂಗನ ಮಹಾಮನೆಯಲು

ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ (ಅದೇ, ವ-೧೩೫, ಪು-೩೬)

ಇಲ್ಲಿ ಬಸವಣ್ಣನವರು ಶ್ರೇಣೀಕೃತ ಸಮಾಜದಲ್ಲಿ ಮನುಷ್ಯನ ಯೋಗ್ಯತೆಯನ್ನು ಮತ್ತು ಶ್ರೇಷ್ಠತೆಯನ್ನು ಜಾತಿಯ ಆಧಾರದ ಮೇಲೆ ಅಳೆಯದೆಯೇ ಅವನ ಆಚಾರ ವಿಚಾರಗಳಿಂದ ಕೂಡಿದ ವ್ಯಕ್ತಿತ್ವದ ಮೇಲೆ ಅಳೆಯಬೇಕೆಂದು ಸೂಚಿಸಿದ್ದಾರೆ. ಒಬ್ಬ ವ್ಯಕ್ತಿ ಹುಟ್ಟಿನಿಂದ ಸಣ್ಣ ಜಾತಿಯನಾದರೂ ಅವನ ನಡೆ-ನುಡಿಗಳು ಉನ್ನತ ಮಟ್ಟದಲ್ಲಿದ್ದರೆ ಅವನು ದೊಡ್ಡವ ಮತ್ತು ಉತ್ತಮ ಕುಲದವ. ಒಂದು ವೇಳೆ ಒಬ್ಬ ವ್ಯಕ್ತಿ ದೊಡ್ಡ ಜಾತಿಯವನಾದರೂ ನಡತೆ ಕೀಳಾಗಿದ್ದರೆ, ವ್ಯಕ್ತಿತ್ವ ಹದಗೆಟ್ಟಿದ್ದರೆ ಆತ ಸಣ್ಣವನೆಂದು ಭಾವಿಸಬೇಕೆಂಬ ಅರ್ಥ ಇಲ್ಲಿದೆ. ಆದ್ದರಿಂದ ಯಾವುದೇ ವ್ಯಕ್ತಿಯ ಬೆಲೆ ನಿರ್ಧಾರವಾಗುವುದು ಜಾತಿಯ ಆಧಾರದ ಮೇಲಿನಿಂದಲ್ಲ ಎಂಬುದು ಇಲ್ಲಿನ ಮುಖ್ಯ ಆಶಯ. ತಮ್ಮ ಅಭಿಪ್ರಾಯಕ್ಕೆ ಪೂರಕವಾಗಿ ತಮ್ಮ ಪೂರ್ವದ ಶರಣನಾದ ಮಾದಾರ ಚೆನ್ನಯ್ಯ ಜ್ಞಾನ ಜಂಗಮ ವ್ಯಕ್ತಿತ್ವವನ್ನು ಇಟ್ಟುಕೊಂಡಿದ್ದಾರೆ. ಚೋಳರಾಜನ ಅರಮನೆಯ ಭಕ್ಷ್ಯಭೋಜ್ಯವನ್ನು ಸ್ವೀಕರಿಸದ ಶಿವ ಆತನ ಊಳಿಗದವನಾದ, ಜಾತಿಯಲ್ಲಿ ಮಾದಾರನಾದ ಚೆನ್ನಯ್ಯನ ಗುಡಿಸಲಿನ ಅಂಬಲಿಯನ್ನು ಸ್ವೀಕರಿಸುತ್ತಾನೆ. ಈ ವಿಷಯ ತಿಳಿದ ಚೋಳರಾಜ ಚೆನ್ನಯ್ಯನ ಕಾಲಿಗೆ ಬಿದ್ದು, ಜ್ಞಾನಮಾರ್ಗವನ್ನು ತಿಳಿದು ಶಿವಕೃಪೆಗೆ ಪಾತ್ರನಾಗುತ್ತಾನೆ. ಹೀಗೆ ನಡತೆ ಮತ್ತು ಸಾಧನೆಯಿಂದ ವ್ಯಕ್ತಿ ದೊಡ್ಡವನಾಗುತ್ತಾನೆಯೇ ಹೊರತು ಜಾತಿಯಿಂದಲ್ಲ ಎಂಬ ಸತ್ಯವನ್ನು ಇಲ್ಲಿ ಬೆಳಕಿಗೆ ಹಿಡಿಯಲಾಗಿದೆ.

ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ, ಸಂಗವಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ *(ಅದೇ, ವ-೩೪೬, ಪು-೮೩)*

ಇಲ್ಲಿ ಬಸವಣ್ಣನವರು ತಮ್ಮ ಪೂರ್ವಿಕರಾದ ಜಾತಿಯಲ್ಲಿ ಕೀಳಾದ ಶರಣ ಮಾದಾರ ಚೆನ್ನಯ್ಯ ಮತ್ತು ಡೋಹಾರ ಕಕ್ಕಯ್ಯನವರಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದರ ಮೂಲಕ ಸ್ಪಷ್ಟವಾಗಿ ಜಾತಿನಿರಾಕರಣೆ ಮಾಡಿರುವುದನ್ನು ನೋಡುತ್ತೇವೆ. ಬಸವಣ್ಣನವರ ಜಾತ್ಯತೀತ ಮನೋಭಾವದ ದೊಡ್ಡವ್ಯಕ್ತಿತ್ವ ಇಲ್ಲಿ ನಿಚ್ಚಳವಾಗಿ ಕಾಣಿಸಿಕೊಳ್ಳುತ್ತಿದ್ದವರು ಕೆಳಜಾತಿಯವರನ್ನು ಕೀಳಾಗಿ ಕಾಣುತ್ತಿದ್ದುದರ ಕಾರಣದಿಂದಾಗಿ ಬಸವಣ್ಣ ಈ ರೀತಿಯಾಗಿ ತನ್ನ ಜಾತಿ ಶ್ರೇಷ್ಠತೆಯನ್ನು ನಿರಾಕರಿಸುವುದರ ಮೂಲಕವಾಗಿ ಉತ್ತರ ನೀಡಿರಬುದೆಂದು ತೋರುತ್ತದೆ.

(೧) **ಸೆಟ್ಟಿಯೆಂಬೆನೆ ಸಿರಿಯಾಳನ ?**
ಮಡಿವಾಳನೆಂಬೆನೆ ಮಾಚಯ್ಯನ ?
ಡೋಹಾರನೆಂಬೆನೆ ಕಕ್ಕಯ್ಯನ ?
ಮಾದಾರನೆಂಬೆನೆ ಚೆನ್ನಯ್ಯನ ?
ಆನುಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ

(ಅದೇ, ವ-೩೪೫, ಪು-೮೩)

(೨) **ಉತ್ತಮಕುಲದಲ್ಲಿ ಹುಟ್ಟಿದೆನೆಂಬ**
ಕಷ್ಟತನದ ಹೊರೆಯ ಹೊರಿಸದಿರಯ್ಯಾ
ಕಕ್ಕಯ್ಯ ನೊಕ್ಕುದನಿಕ್ಕ ನೋಡಯ್ಯಾ
ದಾಸಯ್ಯ ಶಿವದಾನವನೆರೆಯ ನೋಡಯ್ಯಾ
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ
ಉನ್ನತ ಮಹಿಮ
ಕೂಡಲಸಂಗಮದೇವಾ, ಶಿವಧೋ ಶಿವಧೋ !

(ಅದೇ, ವ-೩೪೪, ಪು-೮೩)

ಮೇಲಿನ ವಚನಗಳಲ್ಲಿ ಜಾತಿ ಮತ್ತು ಜಾತಿ ವ್ಯವಸ್ಥೆಯನ್ನು ನಿರಾಕರಿಸುವ ವೈಜ್ಞಾನಿಕನಿಲುವನ್ನು ನೋಡುತ್ತೇವೆ. ಸಿರಿಯಾಳ ಶೆಟ್ಟಿ, ಮಡಿವಾಳ ಮಾಚಯ್ಯ, ಡೋಹಾರಕಕ್ಕಯ್ಯ, ಮಾದಾರಚೆನ್ನಯ್ಯ–ಇವರು ತಮ್ಮ ತಮ್ಮ ಕಾಯಕ ನಿಷ್ಠೆಯ ಮೂಲಕ ಸಮಾಜ ಸೇವೆ ಮಾಡಿ ಬದುಕನ್ನು ಸಾರ್ಥಕಪಡಿಸಿಕೊಂಡ ಶರಣರು. ಇಂಥ ಶರಣರನ್ನು ಜಾತಿ ಆಧಾರದ ಮೇಲೆ ಕೀಳಾಗಿ ಕಂಡು, ನಾನು ಹಾರುವನೆಂದುಕೊಂಡು ಬೀಗಿದರೆ ಕೂಡಲಸಂಗಯ್ಯ ನಗುವನೆಂದು ಬಸವಣ್ಣ 'ಜಾತಿಶ್ರೇಷ್ಠತೆ'ಯನ್ನು ಅಲ್ಲಗಳೆದು ಇಡೀ ಜಾತಿವ್ಯವಸ್ಥೆಯನ್ನು ನಿರಾಕರಿಸುತ್ತಿದ್ದಾನೆ. ಮಾಡುವ ಕಾಯಕ ಯಾವುದಿದ್ದರೂ ಅದನ್ನು ಅರ್ಪಣಾ ಮನೋಭಾವದಿಂದ, ಸೇವಾನಿಷಠೆಯಿಂದ ಮಾಡಿದರೆ ಅದುವೇ ಪರಮ ಶ್ರೇಷ್ಠವೆಂಬ ನಿಲುವು ಬಸವಣ್ಣನವರದು. ವೃತ್ತಿಗಳ ಆಧಾರದ ಮೇಲೆ ಜಾತಿ ನಿರ್ಮಿಸಿ ನೀಚೋಚ್ಚ ಭಾವನೆಗೆ ಅವಕಾಶ ನೀಡುವುದು ಅವೈಜ್ಞಾನಿಕ ಮತ್ತು ಸಮಾಜದ ಹಿತಕ್ಕೆ ಮಾರಕ ಎಮಬ ಆರೋಗ್ಯಕರ ನಿಲವು ಬಸವಣ್ಣನವರದು. ಆದ್ದರಿಂದ ಅವರು ತಾವು ಉತ್ತಮಕುಲದವರೆಂಬ ಉಚ್ಚಾನು ಸಂಧಾನವನ್ನು ಮತ್ತೆ ಮತ್ತೆ ನಿರಾಕರಿಸುವ ಹಂಬಲವನ್ನು ತೋರುತ್ತರೆ.

ಅಪ್ಪನು ಡೋಹಾರ ಕಕ್ಕಯ್ಯನಾಗಿ
ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕನೆ ?
ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್‌ಗುಣವ ನಾನು ಅರಿವೆನಯ್ಯಾ
ಕಷ್ಟಜಾತಿ ಜನ್ಮದಲಿ ಜನಿಯಿಸಿದೆ ಎನ್ನ
ಎನಗಿದು ವಿಧಿಯೆ ಕೂಡಲಸಂಗಮದೇವಾ ? *(ಅದೇ, ವ-೩೪೩, ಪು-೮೩)*

ಈ ವಚನದಲ್ಲಿ ಕೆಳಜಾತಿಯ ಶರಣರಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವುದರ ಮೂಲಕ ಜಾತಿವ್ಯವಸ್ಥೆಯನ್ನು ನಿರಾಕರಿಸುವ ಬಸವಣ್ಣನವರ ವೈಚಾರಿಕ ನಿಲುವನ್ನು ನೋಡಬಹುದಾಗಿದೆ. ಜಾತಿ, ಮತ, ಕುಲ ಭೇದಗಳಿಂದ ಮುಕ್ತವಾದ, ಸರ್ವಸಮಾನತೆಯ ಧೋರಣೆಯನ್ನು ಹೊಂದಿದ್ದ, ಸರ್ವೋದಯ ಪರಿಕಲ್ಪನೆಯ ನವಸಮಾಜವನ್ನು ಕಟ್ಟುವ ಸ್ಪಷ್ಟ ನಿಲುವು ಹೊಂದಿದ್ದ ಬಸವಣ್ಣ ತಮ್ಮ ವಚನಗಳಲ್ಲಿ ಮತ್ತೆ ಮತ್ತೆ ಜಾತಿನಿರಾಕರಣೆ ಮತ್ತು ಜಾತಿವ್ಯವಸ್ಥೆಯ ನಿರ್ಮೂಲನೆಯ ಬಗ್ಗೆ ಮಾತನಾಡುತ್ತಾರೆ.

ಮೇಲಾಗಲ್ಲೊಲ್ಲೆನು ಕೀಳಾಗಲಲ್ಲದೆ
ಕೀಳಿಂಗಲ್ಲದೆ ಹಯನು ಕರೆವುದೆ ?

ಮೇಲಾಗಿ ನರಕದಲೋಲಾಡಲಾರೆನು
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು
ಮಹಾದಾನಿ ಕೂಡಲಸಂಗಮದೇವ *(ಅದೇ, ವ-೩೬೦, ಪು-೮೬)*

ಇಲ್ಲಿ ಜಾತಿ ಆಧಾರಿತ ನೀಚೋಚ್ಚ ಭಾವನೆಯ ನಿರಾಕರಣೆ ಇದೆ. ಅಲ್ಲದೆ ಬಸವಣ್ಣನವರ ವಿನಯ ಸಂಪನ್ನತೆಯೂ ಇಲ್ಲಿ ಸ್ಪಷ್ಟವಾಗುತ್ತದೆ. 'ಕೀಳಾಗದೆ ಮೇಲಾಗಲು' ಸಾಧ್ಯವಿಲ್ಲ ಎಂಬ ಭಾವ ಸ್ವೀಕಾರ ಯೋಗ್ಯವಾಗಿದೆ. ಸಮಾಜದ ಸಣ್ಣ-ಪುಟ್ಟ ವೃತ್ತಿಗಳನ್ನು, ವೃತ್ತಿನಿರತರನ್ನು ಗೌರವದಿಂದ ಕಂಡಾಗಲೇ ಮನುಷ್ಯನಿಗೆ ಘನತೆ ಗೌರವ ಪ್ರಾಪ್ತವಾಗುತ್ತದೆ ಎಂಬ ಅಂಶ ಇಲ್ಲಿರುವುದು ಬಹಳ ಮುಖ್ಯ. ಇಲ್ಲಿ ಬಸವಣ್ಣ ತಮ್ಮ ಮತ್ತು ಶರಣರ ಸಂಬಂಧವನ್ನು ಕರು-ಹಸುವಿನ ಸಂಬಂಧಕ್ಕೆ ಹೋಲಿಸಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ. ಹಸುವಿನ ಹಾಲು ಕರುವಿಗೆ ದೊರಕಬೇಕಾದರೆ ಹಸುವಿನ ಹಾಲುಭರಿತ ಕೆಚ್ಚಲು ಕರುವಿಗೆ ಎಟುಕುವಷ್ಟು ಕರು ಕೀಳಾಗಿರಬೇಕು; ಚಿಕ್ಕದಾಗಿರಬೇಕು. ಒಂದು ವೇಳೆ ಕರು ದೊಡ್ಡದಾದರೆ ಅದಕ್ಕೆ ಹಾಲು ಸಿಕ್ಕುವುದಿಲ್ಲ. ಇಲ್ಲಿ ಬಸವಣ್ಣನವರು ತಾವು ಕರುವಾಗಿದ್ದುಕೊಂಡು ಮೇಲೆ ಉಲ್ಲೇಖಿಸಿದಂಥ ಶರಣರ ಕೃಪಾಮೃತವನ್ನು ಪಡೆಯಲು ತವಕಿಸುತ್ತಿರುವುದು. 'ಮೇಲಾಗಿ ನರಕದ ಲೋಲಾಡಲಾರೆನು' ಎಂದು ನುಡಿಯುವುದು ಅವರ ವಿನಯೋನ್ನತಿಯನ್ನು ಸಾದರಪಡಿಸುತ್ತದೆ.

ವ್ಯಾಸಬೋವಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂ ಭೋ! ಕುಲದಿಂದ ಮುನ್ನೇನಾದಿರಿಂ ಭೋ
ಸಾಕ್ಷಾತ್ ಅಗಸ್ತ್ಯಕಬ್ಬಿಲ, ದುರ್ವಾಸ ಮಚ್ಚಿಗ, ಕ್ಶ್ಯಪಕಮ್ಮಾರ
ಕೌಂಡಿನ್ಯನೆಂಬ ಋಷಿ ಮೂರು ಭುವನರಿಯೆ ನಾವಿದ ಕಾಣಿಭೋ!
ನಮ್ಮ ಕೂಡಲಸಂಗನ ವಚನವಿಂತೆಂದುದು
ಶ್ವಪಚೋಪಿಯಾದಡೇನು, ಶಿವಭಕ್ತನೆ ಕುಲಜಂ ಭೋ! *(ವ-೫೮೯, ಪು-೧೪೭)*

ಮಹಾಭಾರತ, ಭಗವದೀತೆ, ಅಷ್ಟಾದಶಪುರಾಣಗಳನ್ನು ರಚಿಸಿದವನಾದ ವ್ಯಾಸ ಹುಟ್ಟಿದ್ದು ಬೆಸ್ತರ ಜಾತಿಯ ಸತ್ಯವತಿಯ ಹೊಟ್ಟೆಯಲ್ಲಿ; ಮಹಾಧ್ಯಾನಿಯೂ ಶಿವಭಕ್ತನೂ ಆದ ಮಾರ್ಕಂಡೇಯ ಹುಟ್ಟಿದ್ದು ಮಾತಂಗಿಯ ಗರ್ಭದಲ್ಲಿ; ಪರೀಕ್ಷಿತ ರಾಜ ಪತ್ನಿ ಮಂಡೋದರಿ ಜನಿಸಿದ್ದು ಕಪ್ಪೆಯ ಉದರದಲ್ಲಿ; ಅಷ್ಟೇ ಅಲ್ಲದೆ ಮಹರ್ಷಿಗಳಾದ ಅಗಸ್ತ್ಯ, ದುರ್ವಾಸ, ಕಶ್ಯಪ, ಕೌಂಡಿಣ್ಯ ಮುಂತಾದವರು ಬೇಡ, ಚಮ್ಮಾರ, ಕಮ್ಮಾರ, ಕ್ಷೌರಿಕರ ಉದರದಲ್ಲಿ ಜನಿಸಿದವರು. ಈ ರೀತಿಯಾಗಿ ಮಹಾಜ್ಞಾನಿಗಳು, ಪ್ರತಿಭಾವಂತರು, ಮಹರ್ಷಿಗಳು, ಪ್ರತಿಷ್ಠಿತರೆಂದು ಹೆಸರು ಗಳಿಸಿದವರು ಜನಿಸಿದ್ದು ಸಾಮಾಜಿಕವಾಗಿ ಕೀಳಾಗಿ ಪರಿಗಣಿಸಲ್ಪಟ್ಟ ಸಣ್ಣ-ಪುಟ್ಟ ಜಾತಿಗಳಲ್ಲೇ. ಆದ್ದರಿಂದ ವ್ಯಕ್ತಿಗಳನ್ನು ಜಾತಿಯ ಆಧಾರದ ಮೇಲೆ ಬೆಲೆ ಕಟ್ಟದೆ ಅವರ ಸಾಧನೆ, ಸಿದ್ಧಿ, ಪ್ರತಿಭೆ, ಪಾಂಡಿತ್ಯಗಳ ಆಧಾರದ ಮೇಲೆ ಬೆಲೆಕಟ್ಟುವದು ಸರಿಯಾದದ್ದು ಎಂಬ ವಿಚಾರವನ್ನು ಬಸವಣ್ಣನವರು ಇಲ್ಲಿ ಪ್ರತಿಪಾದಿಸುತ್ತಿದ್ದಾರೆ. ಬಸವಣ್ಣನವರ ಕಾಲದಲ್ಲಿ ವೈದಿಕ ಧರ್ಮ ಹುಟ್ಟುಹಾಕಿದ್ದ ಜಾತಿಭೇದದಿಂದಾಗಿ ಕೆಳಜಾತಿಯ ಪ್ರತಿಭೆಗಳನ್ನು ಜಾತಿ ಆಧಾರದ ಮೇಲೆ ಕೀಳಾಗಿಕಂಡು ಶೋಷಣೆ ಮಾಡುತ್ತಿದ್ದ ವಾತಾವರಣವಿದ್ದ ಕಾರಣ ಬಸವಣ್ಣ ಈ ರೀತಿಯ ಜನಪರ ಕಾಳಜಿಯ ಮೌಲಿಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಜಾತಿ ನಿರಾಕರಣೆಯನ್ನು ಮಾಡಿರುವುದು ಉಚಿತವಾಗಿ ತೋರುತ್ತದೆ. ಆದರೆ ಬಸವಣ್ಣನವರ ಕಾಲ ಸರಿದು

ಎಂಟನೂರು ವರ್ಷಗಳಾದರೂ ಈ ಜಾತಿ ಆಧಾರಿತ ಮಾನದಂಡದಿಂದ ವ್ಯಕ್ತಿ, ಜನಾಂಗ, ಸಮಾಜವನ್ನು ಅಳೆಯುವ ದುಷ್ಟ ಪದ್ಧತಿ ನಾಶವಾಗದೆ ಇರುವುದು ಈ ವ್ಯವಸ್ಥೆಯ ದುರಂತವೇ ಸರಿ.

ಆವ ಕುಲವಾದಡೇನು ? ಶಿವಲಿಂಗವಿದ್ದವನೆ ಕುಲಜನು
ಕುಲವನರಸುವರೆ ಶರಣರಲ್ಲಿ ಜಾತಿಸಂಕರನಾದ ಬಳಿಕ?
ಶಿವಧರ್ಮಕುಲೋಜಾತಃ ಪುನರ್ಜನ್ಮ ವಿವರ್ಜಿತಃ ।
ಉಮಾ ಮಾತಾ ಪಿತಾ ರುದ್ರ ಐಶ್ವರಂ ಕುಲಮೇವ ಚ॥ ಎಂಬುದಾಗಿ
ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ
ಕೂಡಲಸಂಗಮದೇವಾ ನಂಬುವೆ ನಿಮ್ಮ ಶರಣರನು *(ಅದೇ, ವ–೨೧೮, ಪು–೧೮೦)*

ಬಸವಣ್ಣನವರು ಹುಟ್ಟು ಹಾಕಿದ್ದ ಶರಣಧರ್ಮದಲ್ಲಿ ಹಿಂದೂ ಮುಂತಾದ ಎಲ್ಲ ಮತ, ಕುಲ, ಜಾತಿಗಳ ಜನ ಸೇರಿದ್ದರು; ಶರಣರಾಗಿದ್ದರು. ಒಮ್ಮೆ ಎಲ್ಲ ಭೇದ–ಭಾವ ತೊರೆದು ಶರಣಧರ್ಮದಲ್ಲಿ ಲೀನವಾದ ಬಳಿಕ ಮತ್ತೆ ಅಲ್ಲಿ ಕುಲ–ಜಾತಿಗಳ ತಾರತಮ್ಯ ಕೂಡದು. ಆ ಶರಣರೆಲ್ಲರೂ ಶಿವ–ಪಾರ್ವತಿಯರ ಮಕ್ಕಳೇ. ಅವರೆಲ್ಲರ ಕುಲ ಶಿವಕುಲ; ಧರ್ಮ ಶರಣಧರ್ಮ. ಎಲ್ಲರೂ ಸಾಮಾಜಿಕವಾಗಿ, ದಾರ್ಮಿಕವಾಗಿ ಸಮಾನ ಗೌರವಕ್ಕೆ ಪಾತ್ರರಾದವರು. ಆದ್ದರಿಂದ ಅವರಲ್ಲಿ ಕೊಡು–ತೆಗೆದುಕೊಳ್ಳುವ ವ್ಯವಹಾರ ಆಗಬೇಕು. ಬಸವಣ್ಣನವರ ಜಾತ್ಯತೀತ, ಮತಾತೀತ ಶರಣಧರ್ಮದ ಆಶಯ ಇಲ್ಲಿದೆ ಮತ್ತು ಜಾತಿ ನಿರಾಕರಣೆಯ ಅಂಶವೂ ಇಲ್ಲಿರುವುದು ವೇದ್ಯ.

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ ?
ಅಪವಿತ್ರದ ನುಡಿಯ ನುಡಿವ ಸೂತಕವೆ ಪಾತಕ.
ನಿಷ್ಕಳಂಕ ನಿಜೈಕ್ಯ ತ್ರಿವಿಧನಿರ್ಣಯ
ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದಿಲ್ಲ *(ಅದೇ, ವ–೨೨೦, ಪು–೧೯೬)*

ಶರಣಧರ್ಮದ ಜಾತಿ, ಕುಲ ನಿರಾಕರಣೆಯ ಆಶಯ ಇಲ್ಲಿಯೂ ವ್ಯಕ್ತವಾಗಿದೆ.

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ *(ಶ್ರೀ ಬಸವೇಶ್ವರರು ಪು–೮೮)*

ವೃತ್ತಿ ಆಧಾರದ ಮೇಲೆ ಜಾತಿ ವಿಂಗಡಣೆ ಮಾಡಿ ಸಮಾಜವನ್ನು ಹೋಳು ಮಾಡುವುದು ಸರಿಯಲ್ಲವೆಂಬ ಅಂಶ ಇಲ್ಲಿ ವ್ಯಕ್ತವಾಗಿದೆ.

ಅಸ್ಪೃಶ್ಯನಾದ ಹರಳಯ್ಯ ಮತ್ತು ವೈದಿಕನಾದ ಮಧುವಯ್ಯ ಶರಣಧರ್ಮವನ್ನು ಸ್ವೀಕರಿಸಿದ ಮೇಲೆ ಇವರ ಮಗ–ಮಗಳ ಮದುವೆ ನಡೆಯುವಂತೆ ಏರ್ಪಾಡು ಮಾಡಿ ವರ್ಣಸಂಕರವಾಗುವಂತೆ ಮಾಡಿದ್ದು ಬಸವಣ್ಣನವರ ಜಾತ್ಯತೀತ ಸಮಾಜ ರಚನೆಯ ಕಲ್ಪನೆಗೆ ಪೂರಕವಾಗಿದೆಯೆಂದು ತಿಳಿಯಲಾಗಿದೆ. ಈ ಘಟನೆಗೆ ಪೂರಕ ಸಾಕ್ಷಿ ಎಂಬಂತೆ ನಾವು ಈಗಾಗಲೇ ಚರ್ಚಿಸಿದ ವಚನ ೨೧೮ರ 'ಕುಲವನರಸುವರೆ ಶರಣರಲ್ಲಿ, ಜಾತಿಸಂಕರನಾದ ಬಳಿಕ? ಎಂಬ ಪಂಕ್ತಿಯ ಆಶಯದಂತೆ ಇವರಿಬ್ಬರ ಅಂತರ್‌ಜಾತಿಯ ಸಂಬಂಧದಿಂದ ವರ್ಣಸಂಕರ ಅಥವಾ ಜಾತಿಸಂಕರವಾಯಿತೆಂದು ಭಾವಿಸಲು ಸಾಧ್ಯವಿದೆ

ಮತ್ತು ಈ ವರ್ಣಸಂಕರದಿಂದಾಗಿ ಅಸಮಾಧಾನಗೊಂಡ ಸಂಪ್ರದಾಯಸ್ಥರು ಬಿಜ್ಜಳಗೆ ದೂರು ನೀಡಿ, ಬಸವಣ್ಣನವರ ಸಮಾಜೋ–ಧಾರ್ಮಿಕ ಚಳವಳಿ ವಿಫಲವಾಗುವಂತೆ ಸಂಚು ನಡೆಸಿದರೆಂಬ ವಾದವೂ ಇದೆ. ಆದರೆ ಬಸವಣ್ಣನವರ ಸಮಾಜೋ–ಧಾರ್ಮಿಕ ಚಳವಳಿ ಹಿನ್ನೆಡೆ ಸಾಧಿಸಲು ಈ ಅಂತರ್‌ಜಾತೀಯ ವಿವಾಹ ಕಾರಣವಾಯಿತೋ ಅಥವಾ ಬಸವಣ್ಣನವರ ಕಾರಣದಿಂದಾಗಿ ಆ ಸಂಪ್ರದಾಯಸ್ಥರು ಪ್ರಭುತ್ವದ ಕಿವಿಕಚ್ಚಿ ಬಸವಣ್ಣನವರ ಮತ್ತು ಶರಣರ ವಿರುದ್ಧ ಪ್ರಭುತ್ವ ತಿರುಗಿ ಬೀಳುವಲ್ಲಿ ಯಶ್ವಿಯಾದದ್ದರಿಂದ ಸಾಧ್ಯವಾಯಿತೊ ಖಚಿತವಗಿ ಹೇಳುವುದು ಕಷ್ಟ. ಒಂದು ವೇಳೆ ಈ ಅಸ್ಪೃಶ್ಯ–ವೈದಿಕ ಜಾತಿಯ ಗಂಡು–ಹೆಣ್ಣಿನ ಮದುವೆ ಆ ಕಾಲದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡದದ್ದೇ ನಿಜವಾಗಿದ್ದ ಪಕ್ಷದಲ್ಲಿ ಅದು ಬಸವಣ್ಣನವರ ಜನಪರ ಚಳವಳಿಯ ಒಂದು ಮಹತ್ವಪೂರ್ಣಅಂಶವೆಂದು ಹೇಳಬಹುದು.

(೧) ಏನಯ್ಯ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ ?
ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ
ಕೂಡಲಸಂಗಮದೇವಯ್ಯಾ ಹೊಲೆಯರ ಬಸುರಲ್ಲಿ
ವಿಪ್ರರು ಹುಟ್ಟಿ ಗೋಮಾಂಸ ತಿಂಬರೆಂಬುದಕ್ಕೆ ಇದೆ ದೃಷ್ಟ

(ಅದೇ, ವ–೫೭೫. ಪು–೧೪೩)

(೨) ಕೊಲುವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ

(ಅದೇ, ವ–೫೯೧. ಪು–೧೪೧)

(೩) ಕುಲವನರಸುವರೆ ಇದರೊಳು? ಛಲವನರಸುವರೆ?
ಹೊಲಗೇರಿಯಲೊಂದು ಎಲುವಿನ ಮನೆಗಟ್ಟಿ
ತೊಗಲ ಹೊದಿಕೆ ನರವಿನ ಹಂಜರ
ಕುಲವನರಸುವರೆ?
ಹೊಲತಿ ಹೊಲೆಯ ಹೊಗಿ
ಹೊಲೆಯಲ್ಲಿ ವಿಂದಡೆ
ಹೊಲೆ ಹೋಯಿತ್ತಿಲ್ಲ ಕುಲಹೋಗಲಿಲ್ಲ
ಕಂಬಳಿಯೊಳಗೆ ಕೂಳಕಟ್ಟಿ ಕೂದಲನರಸುವರೇ?
ಇಂಥ ಡಂಬಕರ ಕೂಡಲಸಂಗಮ ದೇವರು ಮೆಚ್ಚರಯ್ಯಾ

(ಅದೇ, ವ–೧೧೫೮, ಪು–೩೧೭)

(೪) ಕುಲವ ನೋಡದೆ ಛಲವ ನೋಡದೆ
ನಿಲವ ನೋಡದೆ ಕಕೂಡಿದ ಬಳಿಕ
ಅಲ್ಲಿ ಹೆಚ್ಚು ಕುಂದನರಸಲುಂಟೆ ?
ಮುಂದುವರಿದು ಜಂಗಮಕ್ಕೆ ಭಕ್ತಿಯ ಮಾಡೆಂದು
ನಿಮ್ಮ ಕಾರುಣ್ಯವನುಪದೇಶವ ಮಾಡಿದ ಬಳಿಕ
ಬಂದುದ ಬಂದಂತೆ ಸಮನಿಸಿಕೊಳ್ಳಬೇಕಲ್ಲದೆ
ಅಂತಿಂತೆನಬಾರದು ಕೇಳಯ್ಯ
ನೀನು ನಿರಾಕಾರ ಸಾಕಾರವೆಂಬೆರಡು
ಮೂರ್ತಿಯ ಧರಿಸಿಪ್ಪೆಯಾಗಿ ನ
ಅದೆ ಕೊರತೆ ನೋಡಾ ಪ್ರಭುವೆ ಕೂಡಲಸಂಗಮದೇವಾ

(ಅದೇ, ವ–೧೧೫೯, ಪು–೩೧೭)

ಈ ಮೇಲಿನ ವಚನಗಳ ಭಾವ ಮತ್ತು ಆಶಯ ಬಸವಣ್ಣನವರ ಅಪ್ಪಟ ಪ್ರಗತಿಪರ ವಿಚಾರಗಳಿಗೆ ವಿರುದ್ಧವಾಗಿ ಕಂಡುಬರುತ್ತದೆ. ೫೭೫ನೇ ವಚನದಲ್ಲಿನ "ಹೊಲೆಯರ ಬಸುರಲ್ಲಿ ವಿಪ್ರರು ಹುಟ್ಟಿ ಗೋಮಾಂಸ ತಿಂಬರೆಂಬುದಕ್ಕೆ ಇದೆ ದೃಷ್ಟ" ಎನ್ನುವ ಮಾತಂತೂ ಬಸವಣ್ಣನವರ ಜಾತ್ಯತೀತ ತತ್ವಕ್ಕೆ, ವಿಸಾಲಮನೋಧರ್ಮಕ್ಕೆ ಸಂಪೂರ್ಣ ವಿರುದ್ಧವಾಗಿ ಕಂಡುಬರುತ್ತದೆ. ಅಂತೆಯೇ ೫೯೧ನೇ ವಚನದಲ್ಲಿನ 'ಕೊಲುವನೇ ಮಾದಿಗ ಹೊಲಸು ತಿಂಬವನೇ ಹೊಲೆಯ' ಎನ್ನುವ ಮಾತೂ ಕಿರಿಕಿರಿಯನ್ನು ಉಂಟುಮಾಡುತ್ತದೆ.

ಒಮ್ಮೆ ಶರಣಧರ್ಮವನ್ನು ಸೇರಿದ ಮೇಲೆ ಪ್ರಾಣಿವಧೆ ಮಾಡುವುದು, ಮಾಂಸಾಹಾರ ಸೇವಿಸುವುದು ನಿಷಿಧವೆಂಬ ನಿಯಮವಿದ್ದರೂ ಯಾರಾದರೂ ಈ ನಿಯಮವನ್ನು ಮೀರಿದರೆ ಅವರು ಕೀಳು ಕುಲಕ್ಕೆ ಸೇರಿದ ಹೊಲೆಮಾದಿಗರಂತೆಯೇ ಸರಿ ಎನ್ನುವಂಥ ವ್ಯಾಖ್ಯಾನವನ್ನು ಈ ವಚನಕ್ಕೆ ಮಾಡುವ ಸಾಧ್ಯತೆ ಇದ್ದರೂ ಈ ವಚನದ ಮೆಲಿನ ಪಂಕ್ತಿಯ ಆಶಯವನ್ನು ಒಪ್ಪುವುದು ಕಷ್ಟ. ಅಂತೆಯೇ ೧೧೫೮ ಮತ್ತು ೧೧೫೯ನೆಯ ವಚನಗಳ ವಿಚಾರಧೋರಣೆಗಳು ಬಸವಣ್ಣನವರ ಜನಪರ ನಿಲುವಿಗೆ, ಜಾತ್ಯತೀತ ಮನೋಧರ್ಮಕ್ಕೆ ವಿರುದ್ಧವಾಗಿ ಕಾಣಿಸಿಕೊಳ್ಳುವುದರಿಂದ ಬಸವಣ್ಣನವರ ನಿಲುವಿನಲ್ಲಿ ದ್ವಂದ್ವವೇನಾದರೂ ಇತ್ತೆ? ಎಂಬ ಸಂದೇಹ ಕಾಡುತ್ತದೆ. ಆದರೆ ಬಸವಣ್ಣನವರ ಹೆಸರಿನಲ್ಲಿ, 'ಕೂಡಲಸಂಗಮದೇವ' ಎಂಬ ಅಂಕಿತದಲ್ಲಿ ಬೇರೆಯವರು ಈ ರೀತಿಯ ವಚನಗಳನ್ನು ಬರೆದು ಸೇರಿಸಿರಬಹುದಾದ ಸಾಧ್ಯತೆಗಳೂ ಹೆಚ್ಚಿವೆ. ಯಾಕೆಂದರೆ ಅಪ್ಪಟ ಮಾನವಪ್ರೇಮಿಯಾದ, ಜನಪರ ಕಲಾಳಜಿಯ, ಸಮಾನತಾ ನಿಲುವಿನ ಬಸವಣ್ಣನವರು ಮೇಲಿನ ರೀತಿಯ ಪ್ರತಿಗಾಮಿ ನಿಲುವಿನ ವಚನಗಳನ್ನು ರಚಿಸಿರುವುದು ಸಾಧ್ಯವಿಲ್ಲ ಎಂದು ಯಾರಿಗಾದರೂ ಅನಿಸುವುದು ಸಹಜವಾಗಿದೆ.

ಹೀಗೆ ಬಸವಣ್ಣ ಮತ್ತು ಸಮಕಾಲೀನ ಶರಣ-ಶರಣೆಯರು ಜಾತ್ಯತೀತವಾದ ಮತಾತೀತವಾದ ಸರ್ವಸಮಾನತೆಯ ನವಸಮಾಜವೊಂದನ್ನು ಕಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದು ವಾಸ್ತವ ಸಂಗತಿ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಜಾತಿವಿನಾಶದ ಮೂಲಕ ಸುಂದರವಾದ, ಚಲನಶೀಲವಾದ ಜಾತ್ಯತೀತ, ಮತಾತೀತ, ಅಪ್ಪಟ ಮಾನವ ಸಮಾಜ-ಸಂಸ್ಕೃತಿಯನ್ನು ಕಟ್ಟಲು ಬಸವಣ್ಣ ಮುಂತಾದ ಶರಣರು ಪ್ರಾಮಾಣಿಕ ಪ್ರಯತ್ನ ನಡೆಸಿದರೂ ಸಂಪ್ರದಾಯಸ್ಥರು, ಜಾತ್ಯಭಿಮಾನಿಗಳು ಬಸವಣ್ಣನವರ ಈನ ಸಮಾನತಾ ತತ್ವಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಕಾರಣದಿಂದಾಗಿ ಪ್ರಭುತ್ವದ ಕಿವಿಕಚ್ಚಿ, ಪ್ರಭುತ್ವ, ಶರಣರ ಮತ್ತು ಶರಣಧರ್ಮದ ವಿರುದ್ಧ ತಿರುಗಿ ಬೀಳಲು ಸಂಚು ನಡೆಸಿದರಿಂದ ಬಸವಣ್ಣನವರ ಕಾಲದಲ್ಲೇ ಅವರು ಹುಟ್ಟು ಹಾಕಿದ ಸಮಾಜೋ-ದಾರ್ಮಿಕ ಕ್ರಾಂತಿಗೆ ಹಿನ್ನಡೆ ಉಂಟಾಯಿತು. ಮುಂದೆ ಬಸವಣ್ಣನವರ ಕಾಲದ ನಂತರ ಬಸವಣ್ಣವರ ಅನುಯಾಯಿಗಳು ಮತ್ತು ಇತರರು ಬಸವಣ್ಣನವರ ಸಮಾಜೋ-ಧಾರ್ಮಿಕ ತತ್ವಸಿದ್ಧಾಂತಗಳನ್ನು ಸಮರ್ಥವಾಗಿ ಮತ್ತು ಜವಾಬ್ದಾರಿಯುತವಾಗಿ ಮುನ್ನಡೆಸಿಕೊಂಡು ಹೋಗದ ಕಾರಣ ಶರಣಪಂಥದ ತತ್ತ್ವಾದರ್ಶಗಳು ಬೆಲೆ ಕಳೆದುಕೊಂಡು ಸಾಮಾಜಿಕ ಅಸಮಾನತೆ, ಸ್ಥಿರಗೊಳ್ಳಲು ಕಾರಣವಾಯಿತು.

ಆದರೆ ಈಗ ಭಾರತಕ್ಕೆ ಸ್ವತಂತ್ರ್ಯ ಬಂದು 'ಪ್ರಜಾಪ್ರಭುತ್ವ' ವ್ಯವಸ್ಥೆಯನ್ನು ರಾಜಕೀಯವಾಗಿ ಸ್ವೀಕರಿಸಿದ ಮೇಲೆ ಜಾತಿ-ಕುಲಗಳ ಭೇದ-ಭಾವ ಇರಬಾರದು; ಇರಕೂಡದು. ವಾಸ್ತವದಲ್ಲಿ

ಇದು ಸಾಧ್ಯವಾಗಿದೆಯೇ? ಭಾರದತ ನಿಜವಾದ ಅರ್ಥದಲ್ಲಿ 'ಜಾತ್ಯತೀತ ರಾಷ್ಟ್ರ'ವಾಗಿದೆಯೇ? ಎಂದು ಆಲೋಚಿಸಿದರೆ ವಿಚಾರವಂತನಿಗೆ, ನಿಜವಾದ ಮನುಷ್ಯನಿಗೆ ಬೇಸರವಾಗುತ್ತದೆ; ಕಳವಳ ಉಂಟಾಗುತ್ತದೆ. ಪ್ರಸ್ತುತ 'ಜಾತಿವಿನಾಶ'ಕ್ಕೆ ಬದಲು 'ಜಾತಿ ಪ್ರಜ್ಞೆ' ಹೆಚ್ಚಾಗತೊಡಗಿದೆ. ಜಾತಿ ಜಾತಿಗಳಲ್ಲಿ ಉಪಜಾತಿ, ಪಂಗಡಗಳ ಪ್ರತ್ಯೇಕತೆ ಕಾಣಿಸಿಕೊಳ್ಳತೊಡಗಿದೆ. ಎಲ್ಲಿ ನೋಡಿದರಲ್ಲಿ ಜಾತಿ ಗುಂಪುಗುಳಿತನ ಅಧಿಕ ಪ್ರಮಾಣದಲ್ಲಿ ಬೆಳೆಯತೊಡಗಿದೆ. 'ನಾವೆಲ್ಲ ಒಂದು' ಎಂಬ ಭಾವನೆ ದೂರ ಸರಿದು ಭಿನ್ನತೆ, ಒಡಕು, ಬಿರುಕುಗಳೇ ಕುಣಿಯತೊಡಗಿವೆ. ಬಸವಣ್ಣನವರ ಅನುಯಾಯಿಗಳು ಬಸವಣ್ಣನವರ ಜಾತ್ಯತೀತ ಮತಾತೀತ ತತ್ವ-ಮೌಲ್ಯಗಳನ್ನು ತಾವೂ ಅಳವಡಿಸಿಕೊಂಡು ಸಮಾಜಕ್ಕೂ ಉಣಬಡಿಸುವುದು ಇಂದಿನ ಅಗತ್ಯವಾಗಿದೆ. ಕರ್ನಾಟಕದ ಕೆಲವು ವೀರಶೈವ ಮಠ-ಸಂಸ್ಥೆಗಳು ಈ ನಿಟ್ಟಿನತ್ತ ಪ್ರಯತ್ನ ನಡೆಸಿರುವುದು ಸ್ತುತ್ಯರ್ಹವಾಗಿದೆ. ಈ ಮಠ-ಸಂಸ್ಥೆಗಳುಲಭಿಸುವತ್ತ ಪ್ರಯತ್ನ, ಹೋರಾಟ ಮಾಡುವುದು ಅಪೇಕ್ಷಣೀಯವಾದುದೆಂದು ತೋರುತ್ತದೆ. ಏಕೆಂದರೆ ಧರ್ಮಗುರುಗಳು, ಮಠ-ಸ್ತೆಗಳು ಸರ್ವಸಮಾನತೆಯ ಪರಿಕಲ್ಪನೆಯ ಆಧಾರದ ಮೆಲೆ ಎಲ್ಲರಿಗೂ ಎಲ್ಲ ರೀತಿಯ ಹಕ್ಕು ಸವಲತ್ತುಗಳು ಸಿಗುವತ್ತ ಹೋರಾಟ ನಡೆಸಿದ್ದೇಆದರೆ ಬಸವಣ್ಣನವರ ಆದರ್ಶ ಸಮಾಜದ ಕನಸು ನನಸಾಗುವುದರಲ್ಲಿ ಅನುಮಾನವಿಲ್ಲ. ಇದು ಕೇವಲ ಮಠ-ಸಂಸ್ಥೆಗಳ, ಧರ್ಮಗುಗಳ ಹೆಗಲಿಗೆ ಹೊರಿಸುವ ಜವಾಬ್ದಾರಿ ಮಾತ್ರವಲ್ಲ, ಈ ಸಮಾನತಾ ಪ್ರಕ್ರಿಯೆಯಲ್ಲಿ ರಾಜಕಾರಣಿಗಳ, ಸಮಾಜದ ಇತರೇ ಎಲ್ಲ ವರ್ಗದವರ ಪಾತ್ರವೂ ಬಹಳ ಮುಖ್ಯವಾಗಿದೆ. ಹೀಗೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಈ ನಿಟ್ಟಿನತ್ತ ಪ್ರಾಮಾಣಿಕ ಪ್ರಯತ್ನ ಮಾಡಿದಾಗ ನಾವು ಸುಂದರವಾದ ನವಸಮಾಜವನ್ನು ಕಟ್ಟಲು ಸಾಧ್ಯವಾಗಬಹುದು; ಬಸವಣ್ಣನವರ ಪ್ರಾನಿಕ ಮನಸ್ಸಿನ ಹೋರಾಟ, ಪ್ರಯತ್ನಕ್ಕೆ ಅವರ ಜನಪರವಾದ ಚಲನಶೀಲ ಮೌಲ್ಯಗಳಿಗೆ ಬೆಲೆ ಸಿಗಲು ಸಾಧ್ಯವಾಗಬಹುದು.

❑

ವಚನ ಸಾಹಿತ್ಯದಲ್ಲಿ ಸಮಾನತೆಯ ಪರಿಕಲ್ಪನೆ

ಪ್ರೊ. ಸಿ.ಪಿ. ಸಿದ್ಧಾಶ್ರಮ

ಇದು ಪ್ರಜಾಪ್ರಭುತ್ವ ಯುಗ. ಇಲ್ಲಿ ಎಲ್ಲರಿಗೂ ಎಲ್ಲ ರೀತಿಯ ಸುಖ-ಸೌಕರ್ಯಗಳು ಸಮಾನವಾದ ರೀತಿಯಲ್ಲಿ ದೊರೆಯಬೇಕು. ಸಮಾನತೆಯೇ ಪ್ರಜಾಪ್ರಭುತ್ವದ ಬೆನ್ನೆಲುಬು. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ಎಲ್ಲರಿಗೂ ಅವಕಾಶ ದೊರಕಬೇಕು; ಆ ಮೂಲಕವಾಗಿ ಸರ್ವೋದಯವಾಗಬೇಕು. ಆದರೆ ಗಣರಾಜ್ಯ ವ್ಯವಸ್ಥೆ ಬಂದು ಆರು ದಶಕಗಳಾಗುತ್ತ ಬಂದರೂ ಸಮಾನತೆ, ಸರ್ವೋದಯಗಳು ಕೇವಲ ಕಾಗದದ ಮೇಲೆ ಮಾತ್ರ ಉಳಿದಿವೆ; ನಿಜವಾದ ಅರ್ಥದಲ್ಲಿ ಅನುಷ್ಠಾನಕ್ಕೆ ಬಂದಿಲ್ಲ. ಸಾಮಾಜಿಕವಾಗಿ ಜಾತಿ ಇಂದು ನಮ್ಮೆಲ್ಲರನ್ನೂ ಕತ್ತು ಹಿಸುಕಿಬಿಡುವ ರಕ್ಕಸವಾಗಿಬಿಟ್ಟಿದೆ. ಈ ದೇಶದಲ್ಲಿ 'ವರ್ಗ (Class) ಇಲ್ಲ; ಜಾತಿ (Caste) ಇದೆ. ಇಲ್ಲಿ ಜಾತಿಯೇ ವರ್ಗವಾಗಿ ಪರಿವರ್ತನೆಗೊಂಡಿದೆ. ಮೇಲ್ಜಾತಿ ಮೇಲ್ವರ್ಗವಾಗಿದ್ದರೆ, ಕೆಳಜಾತಿ ಕೆಳವರ್ಗವಾಗಿದೆ. ಜಾತಿ ಆಧಾರಿತ ಈ ಶ್ರೇಣೀಕೃತ ಸಮಾಜದಲ್ಲಿ ಪ್ರತಿಯೊಂದು ಜಾತಿಯವನೂ ತನ್ನ ಕೆಳಜಾತಿಯವನನ್ನು ತುಳಿಯಲು, ಶೋಷಣೆ ಮಾಡಲು ಸದಾ ಪ್ರಯತ್ನ ಮಾಡುತ್ತಲೇ ಇರುತ್ತಾನೆ. ಮೇಲ್ಜಾತಿಯವನಿಗೆ ಸಿಗುತ್ತಿರುವ ವಿವಿಧ ರೀತಿಯ ಅವಕಾಶಗಳು ನಿಮ್ನಜಾತಿಯವನಿಗೆ ದಕ್ಕುತ್ತಿಲ್ಲ. ಕೆಳಜಾತಿಯವರು ಆರ್ಥಿಕವಾಗಿ ಕಡುಬಡವರಾಗುತ್ತ ಹೊರಟಿದ್ದರೆ, ಮೇಲ್ವರ್ಗದವರು ಆರ್ಥಿಕವಾಗಿ ಬಲಿಷ್ಠರಾಗುತ್ತ ಹೋಗುತ್ತಿದ್ದಾರೆ. ಜಾತಿಯ ಶ್ರೇಷ್ಠತೆ ಮತ್ತು ಆ ಮೂಲಕವಾಗಿ ಬಂದ ಸಂಪತ್ತು, ಮೇಲ್ಜಾತಿಯವರಿಗೆ ಲಭ್ಯವಾಗುವುದರಿಂದ ಅವರು ಅಕ್ಷರ ಕಲಿತು, ಅಧಿಕಾರಗಳನ್ನು ಹಿಡಿಯುತ್ತಾರೆ. ಇದ್ಯಾವುದೂ ದೊರಕದ ಕೆಳವರ್ಗದವರು ಅವಿದ್ಯಾವಂತರಾಗುತ್ತಿದ್ದಾರೆ; ಕಡುಬಡವರಾಗುತ್ತಿದ್ದಾರೆ. ಅಂತೂ ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ಇಂದಿನ ಆಧುನಿಕ ಕಾಲದಲ್ಲೂ ಸಮಾನತೆ, ಸರ್ವೋದಯಗಳು ಕೇವಲ ಕನಸಿನ ಮಾತಾಗಿ ಮಾತ್ರ ಉಳಿದಿವೆ.

ಈ ಹಿನ್ನೆಲೆಯಿಂದ ನೋಡಿದಾಗ, ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಮಾಜೋ-ಧಾರ್ಮಿಕ ಚಳವಳಿ ತುಂಬ ಮಹತ್ತ್ವದ್ದಾಗಿ ಕಾಣುತ್ತದೆ. ಈ ಸಮಾಜೋ-ಧಾರ್ಮಿಕ ಚಳವಳಿಯ ಮೂಲಕವಾಗಿ ಎಲ್ಲ ಕ್ಷೇತ್ರಗಳಲ್ಲೂ ಸಮಾನತೆಯನ್ನು ತರಲು ಪ್ರಾಮಾಣಿಕ ಪ್ರಯತ್ನ ಮಾಡಿದವರು ಈ ಶಿವಶರಣರು.

ಬಸವಣ್ಣನವರು ಸಮಾಜೋ–ಧಾರ್ಮಿಕ ಚಳವಳಿಯನ್ನು ಹುಟ್ಟುಹಾಕುವುದಕ್ಕಿಂತ ಮುಂಚೆ ನಾಡಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ – ಮುಂತಾದ ಎಲ್ಲ ಕ್ಷೇತ್ರಗಳಲ್ಲಿ ಅಸಮಾನತೆ ತುಂಬಿಹೋಗಿತ್ತು. ಕೆಳವರ್ಗದವರು ದೇವಸ್ಥಾನ ಪ್ರವೇಶ ಮಾಡುವಂತಿರಲಿಲ್ಲ; ಅಕ್ಷರ ಕಲಿಯುವಂತಿರಲಿಲ್ಲ; ಅಧಿಕಾರ ಹೊಂದುವಂತಿರಲಿಲ್ಲ ಮತ್ತು ಅವರಿಗೆ ಹಣ ಸಂಪಾದನೆ ಮಾಡಲು ಅವಕಾಶವಿರಲಿಲ್ಲ ಸಮಾಜದ ಸರ್ವರೀತಿಯ ಸವಲತ್ತುಗಳು ಕೇವಲ ಕೆಲವರಿಗೆ ಮಾತ್ರ ಮೀಸಲಾಗಿದ್ದು, ಕೆಳವರ್ಗದವರು ತುಂಬಾ ಹೀನಾಯಸ್ಥಿತಿಯಲ್ಲಿದ್ದರು. ವೈದಿಕತೆಯ ಗೊಡ್ಡು ಮಡ್ಡಿ–ಮೈಲಿಗೆಯಿಂದಾಗಿ, ಅರ್ಥಹೀನ ಕಂದಾಚಾರಗಳಿಂದಾಗಿ, ಜನವಿರೋಧಿ ವಾಮಾಚಾರಗಳಿಂದಾಗಿ ಅಂದಿನ ಧಾರ್ಮಿಕ ಬದುಕು ತುಂಬ ದುಃಸ್ಥಿತಿಯಲ್ಲಿತ್ತು. ಅಜ್ಞಾನ ಮೂಢನಂಬಿಕೆ ಮತ್ತು ಅನಿಷ್ಟ ಆಚರಣೆಗಳಿಂದಾಗಿ ಜನಸಾಮಾನ್ಯರ ಬದುಕು ನೆಲಕಚ್ಚಿ ಹೋಗಿತ್ತು.

ವೈದಿಕ ಮತದಿಂದ ಬಂದ ಬಸವಣ್ಣ ತಾನು ಶ್ರೇಷ್ಠ ಕುಲದವನೆಂಬ ಭ್ರಮೆಯಿಂದ ಬಿಡಿಸಿಕೊಂಡು ಕೆಳವರ್ಗದವರ ದುಃಖ ನೋವುಗಳಲ್ಲಿ ತನ್ನನ್ನು ಗುರುತಿಸಿಕೊಂಡ. ಬಸವಣ್ಣ ಜಾತಿಯನ್ನು ನಿರಾಕರಿಸುವುದರ ಮೂಲಕ ನಿಜವಾದ ಮನುಷ್ಯನಾದ. ಬಸವಣ್ಣ ಹೀಗೆ ತಾನು ಕೇವಲ ಒಬ್ಬ ಮನುಷ್ಯನಾಗುವುದರ ಮೂಲಕ ಸಹಜ ಪರಿವರ್ತನೆಗೆ ನಾಂದಿ ಹಾಡಿದ. ವೈದಿಕ ಮತದ ಜನವಿರೋಧಿ ನಿಲುವುಗಳಿಂದ, ಗೊಡ್ಡು ಸಂಪ್ರದಾಯಗಳಿಂದ ರೋಸಿಹೋಗಿದ್ದ ಬಸವಣ್ಣ ಆ ಮತವನ್ನೇ ತಿರಸ್ಕರಿಸಿ 'ವೀರಶೈವ'ವನ್ನು ಪ್ರವೇಶಿಸಿ ಅದನ್ನು ಪುನರುಜ್ಜೀವಿಸಿದ. ಈ ಧರ್ಮದಲ್ಲಿ ಜಾತಿಭೇದ, ಲಿಂಗಭೇದ, ವರ್ಣಭೇದಗಳಿಲ್ಲದೆ ಎಲ್ಲ ವರ್ಗದ ಸ್ತ್ರೀ–ಪುರುಷರಿಗೂ ಸೇರಲು ಸಮಾನ ಅವಕಾಶ ಕಲ್ಪಿಸಿಕೊಟ್ಟ. ಈ ವೀರಶೈವ ಧರ್ಮದ ಮೂಲಕ ಸರ್ವೋದಯ, ಸಮಾನತೆಗಳನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದ; ಆ ಮೂಲಕವಾಗಿ ಈ ಧರ್ಮವನ್ನು ವಿಶ್ವಮಾನವಧರ್ಮವನ್ನಾಗಿ ಪರಿವರ್ತಿಸಲು ಹೆಣಗಿದ. ಬಸವಣ್ಣನವರ ಮತ್ತು ಸಮಕಾಲೀನ ಶಿವಶರಣ–ಶರಣೆಯರ ದೃಷ್ಟಿಯಲ್ಲಿ 'ವೀರಶೈವಧರ್ಮ' ಎಂದರೆ ವಿಶ್ವಮಾನವ ಧರ್ಮವೇ ಆಗಿತ್ತು. ನುಡಿದಂತೆ ನಡೆದ ಈ ವಚನಕಾರರು ಜಾತಿಭೇದವನ್ನು ತೊಡೆದುಹಾಕಲು ನಡೆಸಿದ ಹೋರಾಟ ತುಂಬ ಮಹತ್ತ್ವಪೂರ್ಣವಾದುದು. ಅಂದು ಜಾತಿವ್ಯವಸ್ಥೆ ತುಂಬ ಭದ್ರವಾಗಿ ತಳವೂರಿತ್ತು. ಉಚ್ಚ–ನೀಚ ಭಾವನೆಗಳು ಜನಮನಗಳಲ್ಲಿ ಬೇರೂರಿಬಿಟ್ಟಿದವು. ಸಂಪ್ರದಾಯವಾದಿಗಳು ಜಾತಿ ವ್ಯವಸ್ಥೆಯನ್ನು ನೀರು ಗೊಬ್ಬರ ಹಾಕಿ ಪೋಷಿಸುತ್ತಲೇ ಇದ್ದರು. ಇದರಿಂದಾಗಿ ಮನುಷ್ಯ–ಮನುಷ್ಯರ ನಡುವೆ ದೊಡ್ಡ ಕಂದಕವೇ ಏರ್ಪಟ್ಟಿತ್ತು. ಪರಸ್ಪರ ಪ್ರೀತಿವಿಶ್ವಾಸಗಳು ದೂರವಾಗಿದ್ದವು. ಮೇಲ್ಜಾತಿಯವರು ತಾವು ಸಮಾಜಶ್ರೇಷ್ಠರೆಂಬ ಸುಳ್ಳುಭ್ರಮೆಯಲ್ಲಿ ತಮ್ಮ ಬೆಳವಣಿಗೆಯನ್ನು ತಾವೇ ನಾಶಮಾಡಿಕೊಂಡಿದ್ದರೆ, ಕೆಳವರ್ಗದವರು ತಾವು ನಿಮ್ನಜಾತಿಯವರೆಂಬ ಕೀಳರಿಮೆಯಿಂದ ನೆಲಕಚ್ಚಿಬಿಟ್ಟಿದ್ದರು. ಅಂತೂ ಅಂದಿನ ಜಾತಿವ್ಯವಸ್ಥೆ ಕೆಳವರ್ಗದವರನ್ನು ಶೋಷಣೆ ಮಾಡುವ ಒಂದು ಪ್ರಬಲ ಅಸ್ತ್ರವಾಗಿತ್ತು. ಆದ್ದರಿಂದ ಬಸವಣ್ಣ ಶೋಷಣೆಗೆ ಮೂಲ ಕಾರಣವಾಗಿದ್ದ ಜಾತಿವ್ಯವಸ್ಥೆಯನ್ನು ನಿರ್ಮೂಲನ ಮಾಡಲು ನಿಶ್ಚಯಿಸಿ ಬ್ರಾಹ್ಮಣ ಹುಡುಗಿಯನ್ನು ದಲಿತಗಂಡಿನೊಂದಿಗೆ ಮದುವೆ ಮಾಡಿಸುತ್ತಾನೆ. ಸಮಾಜದ ಅತಿ ಮೇಲ್ವರ್ಗಕ್ಕೆ ಸೇರಿದ ಬ್ರಾಹ್ಮಣ ಹುಡುಗಿಯನ್ನು ಸಮಾಜದ ಅತಿ ಕೆಳವರ್ಗಕ್ಕೆ ಸೇರಿದ ದಲಿತ ಹುಡುಗನೊಂದಿಗೆ

ಮದುವೆ ಮಾಡಿಸಿದರೆ ಮಿಕ್ಕ ಜಾತಿಗಳವರು ತಮ್ಮ ತಮ್ಮ ಜಾತಿಗಳನ್ನು ಸಹಜವಾಗಿಯೇ ನಿರಾಕರಿಸುತ್ತಾರೆಂಬ ಪ್ರಾಮಾಣಿಕ ಅನಿಸಿಕೆ ಬಸವಣ್ಣನವರದಾಗಿತ್ತೆಂದು ತೋರುತ್ತದೆ.

ಸ್ತ್ರೀಗೆ ಸಮಾನತೆಯನ್ನು ಒದಗಿಸಿಕೊಟ್ಟದ್ದು ಶಿವಶರಣ–ಶರಣೆಯರ ಒಂದು ಪ್ರಮುಖ ಸಾಧನೆ ಎನ್ನಬೇಕು. ಹೆಣ್ಣು ಕೇವಲ ಗಂಡಿನ ಆಳಾಗಿ ಅಡುಗೆಮನೆಗೆ, ಒಲೆಯ ಮೂರು ತಿಟ್ಟುಗಳಿಗೆ ಸೀಮಿತವಾಗಿ ತನ್ನ ಮಾನಸಿಕ, ಬೌದ್ಧಿಕ ವಿಕಸನವನ್ನು ಕಳೆದುಕೊಂಡುಬಿಟ್ಟಿದ್ದಳು. ಅವಳಿಗೆ ಸ್ವಂತ ವ್ಯಕ್ತಿತ್ವ ಎಂಬುದು ಇರಲೇ ಇಲ್ಲ. ಆದರೆ ಬಸವಣ್ಣ ಮುಂತಾದ ವಚನಕಾರರು ಹೆಣ್ಣಿಗೆ ಸಮಾನತೆಯನ್ನು ಒದಗಿಸಿಕೊಡುವುದರ ಮೂಲಕವಾಗಿ ಅವಳ ಬೌದ್ಧಿಕ ವಿಕಸನಕ್ಕೆ ದಾರಿಮಾಡಿಕೊಟ್ಟರು. ಆದ್ದರಿಂದಲೇ ಅಕ್ಕಮಹಾದೇವಿ, ಮುಕ್ತಾಯಕ್ಕ, ರೇಚವ್ವೆ, ಸಂಕವ್ವ, ಲಿಂಗಮ್ಮ, ಸತ್ಯಕ್ಕನಂತ ಹಲವಾರು ಜನ ದಿಟ್ಟ ವಚನಕಾರ್ತಿಯರು ರೂಪುಗೊಳ್ಳಲು ಸಾಧ್ಯವಾಯಿತು. ಸ್ತ್ರೀಯ ಅಂತರಂಗದಲ್ಲಿ ಆತ್ಮ ವಿಶ್ವಾಸವನ್ನು, ಧೈರ್ಯ–ಸಾಹಸಗಳನ್ನು ತುಂಬಿ ಅವರನ್ನು ತಮ್ಮ ಸಮಾಜೋ–ಧಾರ್ಮಿಕ ಚಳವಳಿಯಲ್ಲಿ ಭಾಗಿಗಳನ್ನಾಗಿ ಮಾಡಿಕೊಂಡು ಸಮಾಜ ಪರಿವರ್ತನೆಗೆ ಪ್ರಾಮಾಣಿಕ ಹೋರಾಟ ನಡೆಸಿದ್ದು ನಿಜಕ್ಕೂ ಸ್ತುತ್ಯರ್ಹವಾಗಿದೆ. ಹೆಣ್ಣು ಭಾಗವಹಿಸದ ಚಳವಳಿ, ಆಂದೋಲನಗಳು ಗುರಿಮುಟ್ಟಲಾರವೆಂಬ ಸತ್ಯವನ್ನು ವಚನಕಾರರು ಅರಿತಿದ್ದರೆಂಬುದು ಗಮನಾರ್ಹ ವಿಷಯವಾಗಿದೆ. ಕಾಯಕವೇ ಕೈಲಾಸ ಎಂಬ ಸೂತ್ರದ ಮೂಲಕ ದುಡಿಮೆಗೆ ಒತ್ತುಕೊಟ್ಟು ಸಮಾಜದಲ್ಲಿನ ಜಡತ್ವವನ್ನು ನಿವಾರಿಸಲು ಪ್ರಯತ್ನಿಸಿದ್ದು ಆ ಮೂಲಕ ಮಾಡುವ ಕೆಲಸ ಯಾವುದಿದ್ದರೂ ಅದು ಮೇಲಾಗಲಿ, ಕೀಳಾಗಲಿ ಅಲ್ಲ ಎಂಬ 'ಉದ್ಯೋಗ ಸಮಾನತೆ'ಯ ತತ್ತ್ವವನ್ನು ಪ್ರತಿಪಾದಿಸಿದ್ದು ತುಂಬ ದೊಡ್ಡ ಸಂಗತಿಯಾಗಿದೆ.

ಕೆಲವು ವಚನಗಳ ವಿಶ್ಲೇಷಣೆಯ ಮೂಲಕ ವಚನಕಾರರು ಸಾಧಿಸಬಯಸಿದ ಸಾಮಾಜಿಕ, ಧಾರ್ಮಿಕ, ಆರ್ಥಿಕ–ಸಮಾನತೆಯ ಸ್ವರೂಪವನ್ನು ತಿಳಿಯಲು ಪ್ರಯತ್ನಿಸೋಣ.

ಚೆನ್ನಯ್ಯನ ಮನೆಯ ದಾಸಿಯ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವನ ಆತ್ಮಸಾಕ್ಷಿಯಾಗಿ!

ಚೆನ್ನಯ್ಯನ ದಾಸಿಯ ಮಗನು ಮತ್ತು ಕಕ್ಕಯ್ಯನ ದಾಸಿಯ ಮಗಳು – ಇವರಿಬ್ಬರ ಸಂಗದಿಂದ ಬಸವಣ್ಣ ಹುಟ್ಟಿದ ಎಂದು ಅರ್ಥ ಮಾಡಬಾರದಿಲ್ಲಿ. ಇಲ್ಲಿ ಆ ಅರ್ಥ ಅಪ್ರಸ್ತುತ ಮಾದಾರ ಚೆನ್ನಯ್ಯ ಮತ್ತು ಡೋಹಾರ ಕಕ್ಕಯ್ಯರು ಸಮಾಜದ ಅತ್ಯಂತ ಕೆಳವರ್ಗದ ಅಸ್ಪೃಶ್ಯ ಜನಾಂಗಕ್ಕೆ ಸೇರಿದವರಾಗಿದ್ದರು. ಅಂಥ ದಲಿತವರ್ಗಕ್ಕೆ ಸೇರಿದ ಇವರ ದಾಸಿಯರ ಮಕ್ಕಳು ಇನ್ನೂ ಅಧಿಕ ಪ್ರಮಾಣದಲ್ಲಿ ಅಸ್ಪೃಶ್ಯತೆಗೆ ಈಡಾಗಿರುತ್ತಾರೆ. ಇಂಥ ಶೂದ್ರಾತಿಶೂದ್ರರ, ಅತೀ ದಲಿತರ ಮಗ ತಾನೆಂದು ಬಸವಣ್ಣ ಹೇಳಿಕೊಳ್ಳುವಲ್ಲಿ, ಬಸವಣ್ಣ ತನ್ನನ್ನು ಬ್ರಾಹ್ಮಣ ಜಾತಿಯಲ್ಲಿ ಗುರುತಿಸಿಕೊಳ್ಳದೆ, ಸಮಾಜದ ದಲಿತ ವರ್ಗದವರಲ್ಲಿ ಗುರುತಿಸಿಕೊಳ್ಳುತ್ತಾನೆಂಬುದು ಇಲ್ಲಿನ ಧ್ವನ್ಯರ್ಥ. ಇಲ್ಲಿ ಪ್ರಮುಖವಾಗಿ ಗುರುತಿಸಬೇಕಾದ ಎರಡು ಮುಖ್ಯ ಸಂಗತಿಗಳೇನೆಂದರೆ, ಬಸವಣ್ಣ ತಾನು ಈ ಚೆನ್ನಯ್ಯ, ಕಕ್ಕಯ್ಯರ ದಾಸಿಯರ ಮಕ್ಕಳಿಂದ ಜನಿಸಿದವನೆಂದು

ಹೇಳಿಕೊಳ್ಳುವಲ್ಲಿ, ಆತ ಬ್ರಾಹ್ಮಣ ಜಾತಿಯ ಹುಸಿಶ್ರೇಷ್ಠತೆಯನ್ನು ತ್ಯಜಿಸುವುದರ ಮೂಲಕ ಜಾತಿನಿರಾಕರಣೆ ಮಾಡಿದ್ದು ಮತ್ತು ದಲಿತವರ್ಗದವರಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದರ ಮೂಲಕ ದಲಿತರ ನೋವಿನ ಬದುಕಿಗೆ ಪ್ರಾಮಾಣಿಕವಾಗಿ ಸ್ಪಂದಿಸಿ ಅಪಾರ ಮಾನವೀಯ ಕಾಳಜಿಯನ್ನು ತೋರಿಸಿದ್ದು. ಹೀಗೆ ಬಸವಣ್ಣ ಸ್ವಜಾತಿ ನಿರಾಕರಣೆ ಮಾಡಿ ದಲಿತರ ನೋವಿಗೆ ಪ್ರಾಮಾಣಿಕವಾಗಿ ಸ್ಪಂದಿಸಿದ್ದು ಆತ ನಂಬಿದ್ದ ಸಾಮಾಜಿಕ ಸಮಾನತೆಯ ಪ್ರತೀಕವಾಗಿದೆ.

ಅಪ್ಪನು ನಮ್ಮ ಮಾದರಚೆನ್ನಯ್ಯ;
ಬೊಪ್ಪನು ನಮ್ಮ ಡೋಹರಕಕ್ಕಯ್ಯ;
ಚಿಕ್ಕಯ್ಯನೆಮ್ಮಯ್ಯ, ಕಾಣಿರಯ್ಯಾ;
ಅಣ್ಣನು ನಮ್ಮ ಕಿನ್ನರಬೊಮ್ಮಯ್ಯ;
ಎನ್ನನೇತಕ್ಕರಿಯರಿ, ಕೂಡಲಸಂಗಯ್ಯಾ?

ಬಸವಣ್ಣನವರ ಈ ವಚನವೂ ಮೇಲಿನ ಆಶಯವನ್ನೇ ಅಭಿವ್ಯಕ್ತಪಡಿಸುತ್ತದೆ. ಸಮಾಜದ ದಲಿತವರ್ಗಕ್ಕೆ ಸೇರಿದ ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ ಮುಂತಾದವರು ತನ್ನ ಅಪ್ಪ–ಅಣ್ಣ ಮುಂತಾದ ರಕ್ತಸಂಬಂಧಿಕರು ಎಂದು ಹೇಳಿಕೊಳ್ಳುವಲ್ಲಿಯೂ ಸಾಮಾಜಿಕ ಪರಿವರ್ತನೆಗೆ ಬಸವಣ್ಣ ಕೊಟ್ಟಿದ್ದ ಮಹತ್ತ್ವವನ್ನು ಎತ್ತಿಹಿಡಿಯುತ್ತದೆ.

ಬಸವಣ್ಣನಿಗೆ ಉಚ್ಚ–ನೀಚ ಭಾವನೆಗಳನ್ನು ಸೃಷ್ಟಿಸಿ ಸಮಾಜವನ್ನು ಛಿದ್ರ–ಛಿದ್ರಗೊಳಿಸಿದ್ದ ಜಾತಿ ವ್ಯವಸ್ಥೆಯನ್ನು ನಿರ್ಮೂಲನ ಮಾಡುವುದು ಬಹುಮುಖ್ಯ ಕೆಲಸವಾಗಿತ್ತು. ಆದ್ದರಿಂದಲೇ ಆತ ಸ್ವಜಾತಿ ನಿರಾಕರಣೆ ಮಾಡಿ, ತನ್ನನ್ನು ಕೆಳವರ್ಗದವರಲ್ಲಿ ಗುರುತಿಸಿ ಕೊಳ್ಳುವುದರ ಮೂಲಕ ಸಾಮಾಜಿಕ ಸಮಾನತೆಗೆ ದಿಟ್ಟ ಹೋರಾಟ ನಡೆಸುತ್ತಾನೆ.

ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ
ಎಲ್ಲರಿಗೂ ಜನನವೊಂದೆ
ಆಹಾರ, ನಿದ್ರೆ, ಭಯ, ಮೈಥುನವೊಂದೆ
ಪುಣ್ಯಪಾಪವೊಂದೆ, ಸ್ವರ್ಗನರಕವೊಂದೆ
ಬೇಕೆಂಬ ಭಂಗಿತರು ನೀವು ಕೇಳಿರೆ

. . . .

ಸಪ್ತಧಾತು ಸಮಂಪಿಂಡಂ ಸಮಯೋನಿಸಮುದ್ಭವಂ।
ಆತ್ಮ ಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ? ॥

ಹಾವಿನಹಾಳಕಲ್ಲಯ್ಯನ ಈ ವಚನದಲ್ಲೂ ಸಾಮಾಜಿಕ ಸಮಾನತೆಯ ಪ್ರತಿಪಾದನೆ ಎದ್ದು ಕಾಣುತ್ತದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮುಂತಾದ ಎಲ್ಲ ಜಾತಿಯವರಿಗೂ ಒಂದೇ ರೀತಿಯ ಜನನ–ಮರಣ, ಅಭಿಲಾಷೆ, ಪ್ರವೃತ್ತಿಗಳು ಇರುವುದರಿಂದ, ಒಬ್ಬ ಶ್ರೇಷ್ಠ, ಇನ್ನೊಬ್ಬ ಕನಿಷ್ಠ ಎಂಬ ವರ್ಣಭೇದದಿಂದ ಏನೂ ಪ್ರಯೋಜನವಿಲ್ಲ. ಈ ವರ್ಣಭೇದವನ್ನು ಬಿಟ್ಟು ಎಲ್ಲರೂ ಒಂದೇ ಎಂಬ ಸಮತಾಭಾವದಿಂದ ಬದುಕನ್ನು ಸಾಗಿಸುವುದು ಆರೋಗ್ಯ ಪೂರ್ಣ ನಿಲುವು ಎಂದು ಒತ್ತಿ ಹೇಳಲಾಗಿದೆ. ಅಲ್ಲದೆ ಮಾದಾರ ಚೆನ್ನಯ್ಯ, ಸಿದ್ಧರಾಮಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ – ಮುಂತಾದ ಪ್ರಮುಖ ವಚನಕಾರರೆಲ್ಲರೂ ಸಾಮಾಜಿಕ ಸಮಾನತೆಯನ್ನು ತಮ್ಮ ವಚನಗಳಲ್ಲಿ ತುಂಬ ಧ್ವನಿಪೂರ್ಣವಾಗಿ ಪ್ರತಿಪಾದಿಸಿರುವುದನ್ನು ನೋಡುತ್ತೇವೆ.

ಧಾರ್ಮಿಕ ಅಸಮಾನತೆಯೂ ವಚನಕಾರರ ಕಾಲದಲ್ಲಿ ಹೆಚ್ಚಿನ ಪ್ರಮಾಣದಲ್ಲೇ ಇದ್ದು, ಅಂದಿನ ವೈದಿಕ ಧರ್ಮ ತನ್ನೆಲ್ಲ ಅರ್ಥ, ಚಲನಶೀಲತೆ, ಸ್ವಂತಿಕೆಗಳನ್ನು ಕಳೆದುಕೊಂಡು ಜನವಿರೋಧಿ ಕೆಲಸದಲ್ಲಿ ತೊಡಗಿತ್ತೆಂಬುದನ್ನು ವಚನಕಾರರು ತುಂಬ ಮಾರ್ಮಿಕವಾಗಿ ತಮ್ಮ ವಚನಗಳಲ್ಲಿ ಹಿಡಿದಿಟ್ಟಿದ್ದಾರೆ.

ಆದಿಪುರಾಣ ಅಸುರರಿಗೆ ಮಾರಿ
ವೇದಪುರಾಣ ಹೋತಿಂಗೆ ಮಾರಿ
ರಾಮಪುರಾಣ ರಕ್ಕಸರಿಗೆ ಮಾರಿ
ಭಾರತಪುರಾಣ ಗೋತ್ರಕ್ಕೆ ಮಾರಿ
ಇವೆಲ್ಲ ಪುರಾಣವೂ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿ ಇಲ್ಲ ಕೂಡಲಸಂಗಮದೇವ?

ನಮ್ಮ ದೇಶದ ಧಾರ್ಮಿಕ ಗ್ರಂಥಗಳಾದ ಪುರಾಣ, ವೇದ, ರಾಮಾಯಣ, ಮಹಾಭಾರತಗಳು ಜನವಿರೋಧಿ ತತ್ತ್ವಗಳನ್ನು, ಒಳಗೊಂಡಿದ್ದನ್ನು ಆ ಮೂಲಕವಾಗಿ ಧರ್ಮ ಜನರನ್ನು ಉದ್ಧಾರ ಮಾಡುವುದರ ಬದಲು ಅವರನ್ನು ಬಲಿಪಶುವನ್ನಾಗಿ ಮಾಡಿ ಶೋಷಣೆ ಮಾಡಿದ್ದನ್ನು ಬಸವಣ್ಣನವರ ಈ ವಚನ ಅತ್ಯಂತ ಮಾರ್ಮಿಕವಾಗಿ ವ್ಯಂಜಿಸುತ್ತದೆ. ಧರ್ಮ ಮನುಷ್ಯನನ್ನು ಅಧೋಗತಿಯಿಂದ ಮೇಲೆತ್ತಿ ಅವನನ್ನು ಉದ್ಧಾರ ಮಾಡಬೇಕು. ಆದರೆ ನಮ್ಮ ಭಾರತೀಯ ಧರ್ಮಗ್ರಂಥಗಳಾದ ವೇದ, ಉಪನಿಷತ್ತು, ಪುರಾಣ, ರಾಮಾಯಣ, ಮಹಾಭಾರತ – ಮುಂತಾದ ಧರ್ಮಗ್ರಂಥಗಳು ಕರ್ಮಕಾಂಡಕ್ಕೆ ಹೆಚ್ಚು ಒತ್ತು ಕೊಟ್ಟು ಧರ್ಮದ ಹೆಸರಿನಲ್ಲಿ ಬಹುಸಂಖ್ಯಾತ ಶೂದ್ರಜನರ ಬದುಕನ್ನು ಬಲಿ ತೆಗೆದುಕೊಂಡಿವೆ. ಆದ್ದರಿಂದ ಗೊಡ್ಡು ಸಂಪ್ರದಾಯದ ಧಾರ್ಮಿಕ ಗ್ರಂಥಗಳಿಂದ ಜನವಿರೋಧಿಯಾದ ಮತ್ತು ಅಸಮಾನತೆಯಿಂದ ಕೂಡಿದ ಧರ್ಮದಿಂದ ಜನರ ಉದ್ಧಾರ ಖಂಡಿತ ಸಾಧ್ಯವಿಲ್ಲ ಎಂಬ ಸತ್ಯವನ್ನು ಬಸವಣ್ಣ ಈ ವಚನದಲ್ಲಿ ತುಂಬ ಸುಂದರವಾಗಿ ಹೇಳಿದ್ದಾನೆ. "ನಿಮ್ಮ ಪುರಾಣಕ್ಕೆ ಪ್ರತಿ ಇಲ್ಲ ಕೂಡಲಸಂಗಮದೇವ" ಎಂದು ನುಡಿದು ವೀರಶೈವಧರ್ಮ ಸರ್ವರಿಗೂ ಧಾರ್ಮಿಕ ಸಮಾನತೆಯನ್ನು ನೀಡುವ ವಿಶ್ವಮಾನವಧರ್ಮ ಎಂದು ಸೂಚಿಸಿ, ಧಾರ್ಮಿಕ ಸಮಾನತೆಗೆ ಹೆಚ್ಚು ಒತ್ತುಕೊಟ್ಟಿದ್ದಾನೆ. ಬಸವಣ್ಣ ಮುಂತಾದ ಎಲ್ಲ ವಚನಕಾರರೂ ಧಾರ್ಮಿಕ ಸಮಾನತೆಯನ್ನು ತಮ್ಮ ಹೋರಾಟದ ಒಂದು ಪ್ರಮುಖ ಅಂಶವನ್ನಾಗಿಟ್ಟುಕೊಂಡು, ಸರ್ವರಿಗೂ ಧಾರ್ಮಿಕ ಸಮಾನತೆಯನ್ನು ದೊರಕಿಸಿಕೊಡುವ ನಿಟ್ಟಿನತ್ತ ಪ್ರಾಮಾಣಿಕ ಪ್ರಯತ್ನ ಮಾಡಿದ್ದು ಇಂದು ಇತಿಹಾಸದ ಮಾತಾಗಿದೆ.

ವೇದಂಗಳೆಲ್ಲಾ ಬ್ರಹ್ಮನೆಂಜಲು
ಶಾಸ್ತ್ರಂಗಳೆಲ್ಲಾ ಸರಸ್ವತಿಯೆಂಜಲು
ಆಗಮಂಗಳೆಲ್ಲಾ ರುದ್ರನೆಂಜಲು
ಪುರಾಣಂಗಳೆಲ್ಲಾ ವಿಷ್ಣುವಿನೆಂಜಲು
ನಾದ–ಬಿಂದು–ಕಳೆಗಳಕ್ಷರತ್ರಯದೆಂಜಲು
ಈ ಅಕ್ಷರ ತ್ರಯಂಗಳು ಪ್ರಕೃತಿಯೆಂಜಲು
ಇಂತಿವೆಲ್ಲವ ಹೇಳುವರು ಕೇಳುವರು
ಪುಣ್ಯಪಾಪಂಗಳೆಂಜಲೆಂದಾತನಂಬಿಗರ ಚೌಡಯ್ಯ

ಇಲ್ಲಿ ವೇದ, ಶಾಸ್ತ್ರ, ಆಗಮ, ಪುರಾಣಗಳೆಲ್ಲ ಬ್ರಹ್ಮ, ಸರಸ್ವತಿ, ರುದ್ರ, ವಿಷ್ಣು – ಈ ದೇವತೆಗಳ 'ಎಂಜಲು' ಎಂದು ಅಂಬಿಗರ ಚೌಡಯ್ಯ ಹೇಳುವಲ್ಲಿ, ಈ ಧಾರ್ಮಿಕ ಗ್ರಂಥಗಳು ತಮ್ಮ ಸ್ವಂತಿಕೆ, ಸ್ವೋಪಜ್ಞತೆಗಳನ್ನು ಕಳೆದುಕೊಂಡದ್ದು ಸ್ಪಷ್ಟವಾಗಿದೆ. ಚಲನಶೀಲತೆಯನ್ನು ಸ್ವೋಪಜ್ಞತೆಯನ್ನು ಕಳೆದುಕೊಂಡ ಮತಧರ್ಮಗ್ರಂಥಗಳ ವಿಧಿ–ವಿಧಾನಗಳಂತೆ ಧರ್ಮವನ್ನು ಮುನ್ನಡೆಸಿದರೆ ಅಂಥ ಕುರುಡು ಧರ್ಮದಿಂದ ಜನತೆಗೆ ಲಾಭಕ್ಕಿಂತ ಹಾನಿಯೇ ಜಾಸ್ತಿ. ಆದರೆ ವಚನಕಾರರ ಕಾಲದಲ್ಲಿ ವೈದಿಕಧರ್ಮ ತನ್ನೆಲ್ಲ ಅರ್ಥ ಕಳೆದುಕೊಂಡು ಜನವಿರೋಧಿಯಾಗಿ ಬಿಟ್ಟಿತ್ತು; ಆ ಮೂಲಕ ಆ ವೈದಿಕಧರ್ಮ ಧಾರ್ಮಿಕ ಅಸಮಾನತೆಯನ್ನು ಹುಟ್ಟು ಹಾಕಿತ್ತು. ಆದ್ದರಿಂದಲೇ ಚೌಡಯ್ಯ ಆ ಕುರುಡು ಧರ್ಮದ ಅಸಮಾನತೆಯನ್ನು ಇಷ್ಟು ಖಾರವಾಗಿ ಛೇಡಿಸಿದ್ದು.

ವೇದ ವಿಪ್ರರ ಬೋಧೆ
ಶಾಸ್ತ್ರ ಸಂತೆಯ ಮಾತು
ಪುರಾಣ ಪುಂಡರ ಗೋಷ್ಠಿ
ಆಗಮ ಅನೃತದ ನುಡಿ
ತರ್ಕ ವ್ಯಾಕರಣ ಕವಿತ್ವಪ್ರೌಢಿ

ಎಂದು ಮುಂತಾಗಿ ಹೇಳುವ ಮಡಿವಾಳ ಮಾಚಯ್ಯನ ಈ ವಚನದಲ್ಲೂ ವೇದ, ಶಾಸ್ತ್ರ, ಪುರಾಣ, ಆಗಮ–ಮುಂತಾದ ಧರ್ಮ ಗ್ರಂಥಗಳ ಅರ್ಥಹೀನತೆ, ಬೂಟಾಟಿಕೆ, ಡಾಂಭಿಕತನ, ಆ ಮೂಲಕವಾಗಿ ತಲೆದೋರುವ ಧಾರ್ಮಿಕ ಅಸಮಾನತೆಯ ಚಿತ್ರಣ ತುಂಬ ಸಮರ್ಥವಾಗಿ ನೇರವಾಗಿ ಮೂಡಿ ಬಂದಿದೆ.

ಕಾರ್ಲ್‌ಮಾರ್ಕ್ಸ್ ಹುಟ್ಟುವುದಕ್ಕಿಂತ ಮೊದಲೇ ವಚನಕಾರರು ಆರ್ಥಿಕ ಸಮಾನತೆಯನ್ನು ತಮ್ಮ ಅರಿವಿಗೆ ತಕ್ಕನಾದ ರೀತಿಯಲ್ಲಿ ಪ್ರತಿಪಾದಿಸಿದ್ದು ನಿಜಕ್ಕೂ ತುಂಬ ಮಹತ್ತ್ವದ ಸಂಗತಿ. ವಚನಕಾರರ ಕಾಲದಲ್ಲಿ 'ಅಸಂಗ್ರಹ' ಒಂದು ನೀತಿಯಾಗಿತ್ತು. ಯಾರೂ ಅಗತ್ಯಕ್ಕಿಂತ ಹೆಚ್ಚಿನ ಸಂಪತ್ತನ್ನು ಇಟ್ಟುಕೊಳ್ಳುವಂತಿರಲಿಲ್ಲ. ನಿತ್ಯೋಪಜೀವನಕ್ಕೆ ಬೇಕಾಗುವಷ್ಟು ಸಂಪತ್ತನ್ನು ಮಾತ್ರ ಇಟ್ಟುಕೊಳ್ಳಬೇಕಾಗಿತ್ತು. ನಿತ್ಯೋಪಜೀವನಕ್ಕೆ ಬೇಕಾದ ಹಣವನ್ನು ದುಡಿಮೆಯ ಮೂಲಕವೇ ಸಂಗ್ರಹಿಸಬೇಕಾಗಿತ್ತೇ ಹೊರತು ಅನ್ಯ ವಾಮಮಾರ್ಗಗಳಿಂದಲ್ಲ. ಅಕ್ರಮವಾದ ರೀತಿಯಲ್ಲಿ ಹಣ ಸಂಗ್ರಹಿಸುವುದು ವಚನಕಾರರ ನೈತಿಕ ಬದುಕಿಗೆ ವಿರುದ್ಧವಾದ ಕ್ರಿಯೆಯಾಗಿತ್ತು. ಆ ಕಾರಣದಿಂದ ವಚನಕಾರರು ಕಾಯಕಕ್ಕೆ ಹೆಚ್ಚಿನ ಮಹತ್ತ್ವ ಕೊಟ್ಟರು. ಗುರುವಾಗಲಿ, ಜಂಗಮನಾಗಲಿ ಪ್ರತಿಯೊಬ್ಬರೂ ಕಾಯಕದಿಂದಲೇ ಜೀವನ ನಡೆಸಬೇಕೆಂಬುದು ಅಂದಿನ ಬದುಕಿನ ನೀತಿಯಾಗಿತ್ತು. ಕಾಯಕವೇ ಕೈಲಾಸ ಎಂಬ ಉಕ್ತಿಯ ಸಾರವನ್ನು ಬಸವಣ್ಣ ಆದಿಯಾಗಿ ಎಲ್ಲ ವಚನಕಾರರೂ ತಪ್ಪದೆ ನಿಷ್ಠೆಯಿಂದ ಪರಿಪಾಲಿಸುತ್ತಿದ್ದರೆಂದು ತೋರುತ್ತದೆ. ವಚನಕಾರರು ಕಾಯಕಕ್ಕೆ ಕೊಟ್ಟ ಈ ಪ್ರಾಮುಖ್ಯತೆಯಿಂದಾಗಿ ಸಮಾಜದಲ್ಲಿ ಆರ್ಥಿಕ ಸಮಾನತೆ ಬರಲು ಸಾಧ್ಯವಾಯಿತು. 'ಅಸಂಗ್ರಹ' ನೀತಿ ಆರ್ಥಿಕ ಸಮಾನತೆಯ ನೆಲೆಗಟ್ಟು; ಹಾಗೂ ದುಡಿದೇ ಸಂಪಾದಿಸಬೇಕೆಂಬ ನಿಯಮವೂ ಈ ಆರ್ಥಿಕ ಸಮಾನತೆಗೆ ಪೋಷಕ ಅಂಶ.

ಕಾಯಕದಲ್ಲಿ ನಿರತನಾದೊಡೆ
ಗುರುದರುಶನವಾದಡೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು.
ಜಂಗಮ ಮುಂದಿದ್ದಡೆಯೂ ಹಂಗುಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದರೂ
ಕಾಯಕದೊಳಗು.

ಆಯ್ದಕ್ಕಿ ಮಾರಯ್ಯನ ಈ ವಚನದಲ್ಲಿ ಗುರು, ಲಿಂಗ, ಜಂಗಮ ಮತ್ತು ಇಷ್ಟದೇವತೆಗಿಂತ ಕಾಯಕ ಮುಖ್ಯ ಎಂದು ಹೇಳುವಲ್ಲಿ ಕಾಯಕದ ಮಹತ್ತ್ವ ತಿಳಿದು ಬರುತ್ತದೆ. ಇದೇ ಆಯ್ದಕ್ಕಿ ಮಾರಯ್ಯ ತನ್ನ ಇನ್ನೊಂದು ವಚನದಲ್ಲಿ "ಕಾಯಕವಳಿದ ಠಾವಿನಲ್ಲಿ ಜೀವನ ಸುಳಿವುಂಟೆ' ಎಂದು ನುಡಿದಿರುವುದು ತುಂಬ ಮಹತ್ತ್ವದ ಸಂಗತಿಯಾಗಿದೆ. ಎಲ್ಲಿ ಕಾಯಕ ಇಲ್ಲವೋ ಅಲ್ಲಿ ಜೀವನವೇ ಇಲ್ಲ ಎಂದು ಹೇಳುವ ಈ ಮಾತು ತುಂಬ ಅರ್ಥಪೂರ್ಣ. ಪರಿಶ್ರಮಸಹಿತ ಬಾಳು ಅರ್ಥಪೂರ್ಣತೆಯನ್ನು, ಸಾರ್ಥಕತೆಯನ್ನು ಪಡೆಯುತ್ತದೆ. ಆದರೆ ಪರಿಶ್ರಮವಿಲ್ಲದ ಬದುಕು ಅದು ಬದುಕೇ ಅಲ್ಲ; ಸತ್ತ ಬಾಳು. ಪರಿಶ್ರಮರಹಿತ ವ್ಯಕ್ತಿ ಬದುಕಿದ್ದರೂ ಸತ್ತಂತೆಯೇ. ಆ ಬಾಳಿಗೆ ಸಾರ್ಥಕತೆಯಿಲ್ಲ. ಕಾಯಕದ ಮೂಲಕ ಜಡತ್ವ ನೀಗಿ, ಕ್ರಿಯಾಶೀಲತೆ ಅಧಿಕಗೊಂಡು, ಸೃಜನಶೀಲತೆ ಅರಳಿ ವ್ಯಕ್ತಿಯ ಬದುಕು ಹಸನಗೊಳ್ಳುತ್ತದೆ. ಆದ್ದರಿಂದಲೇ ಕಾಯಕಕ್ಕೆ ಒತ್ತುಕೊಡುವ ಆಯ್ದಕ್ಕಿ ಮಾರಯ್ಯನ ಈ ಮಾತು ತುಂಬ ಮಹತ್ತ್ವದ್ದಾಗಿ ಕಂಡುಬರುತ್ತದೆ ಮತ್ತು ಮಾರಯ್ಯನ ಈ ನಿಲುವು, ಆರ್ಥಿಕ ಸಮಾನತೆಯನ್ನು ಪರೋಕ್ಷವಾಗಿ ಎತ್ತಿಹಿಡಿಯುವಂಥದ್ದಾಗಿದೆ. ನುಲಿಯಚಂದಯ್ಯನ ಕೆಳಗಿನ ವಚನ ಕಾಯಕದ ಮಹತ್ತ್ವ, ಪಾವಿತ್ರ್ಯ ಮತ್ತು ಆರ್ಥಿಕ ಸಮಾನತೆಯನ್ನು ತುಂಬ ಮಾರ್ಮಿಕವಾಗಿ, ಸ್ಪಷ್ಟವಾಗಿ ಧ್ವನಿಸುತ್ತದೆ.

ಸತ್ಯಶುದ್ಧ ಕಾಯಕದಲ್ಲಿ ಚಿತ್ತ
ವಿಚ್ಚಂದವಾಗಿರಬೇಕು
ನೇಮದ ಕೂಲಿ ಅಂದಿನ
ನಿತ್ಯ ಕಾಯಕದಲ್ಲಿ ಸಂದಿರಬೇಕು
ನೇಮದ ಕೂಲಿಯ ಬಿಟ್ಟು
ಹೇಮದಾಸೆಗೆ ಕಾಮಿಸಿ
ದ್ರವ್ಯವ ಹಿಡಿದರೆ
ತಾ ಮಾಡುವ ಸೇವೆ ನಷ್ಟವಯ್ಯ

ಇಲ್ಲಿ ಮುಖ್ಯವಾಗಿ ಮೂರು ಅಂಶಗಳನ್ನು ಗಮನಿಸಬಹುದಾಗಿದೆ. ಒಂದು : ಮಾಡುವ ಕಾಯಕ ಪರಿಶುದ್ಧವಾಗಿರಬೇಕು; ಮತ್ತು ಆ ಕಾಯಕವನ್ನು ಮನಃಶುದ್ಧಿಯಿಂದ, ನಿಷ್ಠೆಯಿಂದ ಮಾಡಬೇಕು. ಎರಡು : ದುಡಿಮೆಗೆ ತಕ್ಕನಾದ ಕೂಲಿಯನ್ನು ಮಾತ್ರ ಸ್ವೀಕರಿಸಬೇಕು. ಮೂರು : ಆಸೆಪಟ್ಟು ದುಡಿಮೆಗೆ ಮೀರಿದ ಹಣ ಸಂಗ್ರಹಣೆ ಮಾಡಕೂಡದು, ಅದು ಅಪರಾಧ. ಮನುಷ್ಯ ಬದುಕಬೇಕಾದರೆ ಅವನಿಗೆ ಹಣ ಬೇಕು; ಆ ಹಣವನ್ನು ಆತ ಪವಿತ್ರವಾದ ಕಾಯಕದ ಮೂಲಕವೇ ಸಂಪಾದಿಸಬೇಕು; ದುಡಿಮೆಗೆ ತಕ್ಕ ಪ್ರತಿಫಲವನ್ನು ಮಾತ್ರ ಪಡೆಯಬೇಕು; ಆಸೆಪಟ್ಟು ಹೆಚ್ಚಿನ ಹಣಸಂಗ್ರಹಣೆ ಮಾಡುವುದು ಅಪರಾಧವೆಂಬೀ ನಿಷ್ಠುರ

ನಿಯಮ ವಚನಕಾರರು ಕಾಯಕಕ್ಕೆ ಕೊಟ್ಟ ಮಹತ್ತ್ವವನ್ನೂ ಆ ಮೂಲಕವಾಗಿ ಸಾಧಿಸ ಹೊರಟ ಆರ್ಥಿಕ ಸಮಾನತೆಯನ್ನೂ ತುಂಬ ಔಚಿತ್ಯಪೂರ್ಣವಾಗಿ ಹೇಳಿಬಿಡುತ್ತದೆ. ಇದೇ ನುಲಿಯಚಂದಯ್ಯ ತನ್ನ ಇನ್ನೊಂದು ವಚನದಲ್ಲಿ ಗುರು, ಲಿಂಗ, ಜಂಗಮರಿಗೂ ಕಾಯಕದಿಂದಲೇ ಜೀವನ್ಮುಕ್ತಿ ಎಂದು ಪ್ರತಿಪಾದಿಸಿ ಕಾಯಕದ ಮಹತ್ತ್ವವನ್ನು ಇನ್ನಷ್ಟು ಬೆಳಕಿಗೆ ಹಿಡಿಯುತ್ತಾನೆ. ಬಾಚಿಕಾಯಕದ ಬಸವಯ್ಯನ ಪತ್ನಿ ಕಾಳವ್ವೆ ತನ್ನ ಒಂದು ವಚನದಲ್ಲಿ ಕಾಯಕ ತಪ್ಪಿದಡೆ ಸೈರಿಸಬಾರದು ಎಂದು ನುಡಿದು ಕಾಯಕದ ಮಹತ್ತ್ವಕ್ಕೆ ಒತ್ತು ಕೊಟ್ಟಿದ್ದಾಳೆ.

ವಚನಕಾರರು ಸ್ತ್ರೀಗೆ ಸ್ವಾತಂತ್ರ್ಯವನ್ನು ಕೊಡುವುದರ ಮೂಲಕ ಅವಳಿಗೆ ಸಮಾಜದಲ್ಲಿ ಸಮಾನತೆಯನ್ನು ಒದಗಿಸಿಕೊಡಲು ಪ್ರಾಮಾಣಿಕ ಹೋರಾಟ ಮಾಡಿದರು. ಈಗಿದ್ದಂತೆಯೇ ಆಗಲೂ ಸ್ತ್ರೀ, ಪುರುಷನ ಕಾಮನೆಗಳನ್ನು ಈಡೇರಿಸುವ ಭೋಗದವಸ್ತು ಮಾತ್ರವಾಗಿದ್ದಳು; ಗಂಡಸಿನ ದಾಸಿಯಾಗಿದ್ದುಕೊಂಡು ಅವನ ಸುಖದ ಬದುಕಿಗೆ ಪೋಷಕ ಸಾಮಗ್ರಿಯಾಗಿದ್ದಳು. ಆದರೆ ವಚನಕಾರರ ಕಾಲದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ– ಸಮಾನತೆಗಳು ದೊರಕಿದ್ದರ ಫಲವಾಗಿ ದಿಟ್ಟ ವ್ಯಕ್ತಿತ್ವ ಹೊಂದಿದ್ದ ಅನೇಕ ಸ್ತ್ರೀಯರು ರೂಪುಗೊಳ್ಳಲು ಸಾಧ್ಯವಾಯಿತು. ಅಕ್ಕಮಹಾದೇವಿಯ ವ್ಯಕ್ತಿತ್ವವೇ ಒಂದು ಅಪರೂಪದ ವ್ಯಕ್ತಿತ್ವ. ಸ್ತ್ರೀ ಸ್ವಾತಂತ್ರ್ಯಕ್ಕೆ ಇವಳೊಂದು ಸಂಕೇತ. ಇವಳ ಧೈರ್ಯ, ಸಾಹಸ, ಗಟ್ಟಿತನ, ಮಾನಸಿಕ ದೃಢತೆ, ಹೋರಾಟಮಯ ಪ್ರವೃತ್ತಿ, ಛಲ, ಸ್ವಾತಂತ್ರ್ಯಪ್ರಿಯತೆ, ಸ್ವಂತಿಕೆಗಳು ಇಂದಿನ ಮಹಿಳೆಯರಿಗೂ ಮಾರ್ಗದರ್ಶನವಾಗಿವೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯ ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯ ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ–ನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು !

ಮನುಷ್ಯ ಹೋರಾಟಕ್ಕೆ ನಿಂತಾಗ ಅನೇಕ ಅಡ್ಡಿ – ಅಡಚಣೆಗಳು ಎದುರಾಗುತ್ತವೆ. ಅಂತಹ ಅಡ್ಡಿ – ಆತಂಕಗಳನ್ನು ಧೈರ್ಯವಾಗಿ ಎದುರಿಸಿ ಗುರಿಮುಟ್ಟಬೇಕೆಂಬ ಛಲ, ಗಟ್ಟಿತನ, ಹೋರಾಟಮಯ ಪ್ರವೃತ್ತಿಗಳು ಅಕ್ಕನ ಈ ವಚನದಲ್ಲಿ ವ್ಯಕ್ತವಾಗುತ್ತವೆ. ಕೌಶಿಕ ರಾಜನನ್ನು ತ್ಯಜಿಸಿದ ಅಕ್ಕ ಒಂಟಿಯಾಗಿ ಅಧ್ಯಾತ್ಮ ಸಾಧನೆಯತ್ತ ಮುಖ ಮಾಡಿ ಹೊರಟಾಗ, ಅವಳ ಈ ಸ್ಥಿತಿಯನ್ನು ಕಂಡು ಆಗದವರು, ಅರಿಯದ ಅಜ್ಞಾನಿಗಳು ಅವಳನ್ನು ನಿಂದಿಸಿ ಅವಮಾನ ಮಾಡಲು ಪ್ರಯತ್ನಿಸಿದ್ದರೂ ಆಶ್ಚರ್ಯವಿಲ್ಲ. ಆದ್ದರಿಂದಲೇ ಅವಳು ಈ ಸ್ತುತಿ–ನಿಂದೆಗಳನ್ನು ಸ್ವೀಕರಿಸದೆ ನಿರ್ಲಿಪ್ತವಾದ ಸಮಾಧಾನಚಿತ್ತದಿಂದ ಇರಬೇಕೆಂದು ಹೇಳುತ್ತಾಳೆ. ವ್ಯಕ್ತಿಯ ಸಾಧನೆಯ ಹಾದಿಯಲ್ಲಿ ತೆಗಳಿಕೆಯಂತೆ ಹೊಗಳುವಿಕೆಯೂ ತುಂಬ ಅಪಾಯವೆಂಬ ಅರಿವನ್ನು ಅಕ್ಕ ಹೊಂದಿರುವುದೂ ಇಲ್ಲಿ ಸ್ಪಷ್ಟವಾಗಿದೆ. ಜನನ–ಮರಣವಿಲ್ಲದ, ಭವ–

ಭಯವಿಲ್ಲದ ಚೆನ್ನಮಲ್ಲಿಕಾರ್ಜುನನನ್ನು ಒಲಿದ ಅಕ್ಕ ಈ ಸಾವಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ ಎಂದು ಈ ಲೋಕದ ಗಂಡರನ್ನು ಛೇಡಿಸಿರುವುದು ಅವಳ ದಿಟ್ಟ ವ್ಯಕ್ತಿತ್ವವನ್ನು ಎತ್ತಿಹಿಡಿಯುತ್ತದೆ; ಮಾತ್ರವಲ್ಲ ಗಂಡಿನ ದಬ್ಬಾಳಿಕೆಯನ್ನು ಹೆಣ್ಣು ಇನ್ನು ಮುಂದೆ ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಧ್ವನಿಯನ್ನೂ ವ್ಯಂಜಿಸುತ್ತದೆ. ಅಕ್ಕನಲ್ಲದೆ, ಇನ್ನೂ ಹಲವಾರು ಜನ ವಚನಕಾರ್ತಿಯರು ಪುರುಷನ ವ್ಯಕ್ತಿತ್ವಕ್ಕೆ ಸಮಾನವಾದ ರೀತಿಯಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡದ್ದನ್ನು ನಾವು ವಚನ ಸಾಹಿತ್ಯದ ಮೂಲಕ ತಿಳಿಯುತ್ತೇವೆ. ಅಕ್ಕಮಹಾದೇವಿ, ಆ ಸಂದರ್ಭದ ಎಲ್ಲ ವಚನಕಾರ್ತಿಯರ ಧೈರ್ಯ, ಸಾಹಸ, ಸ್ವಂತಿಕೆಗಳ ಪ್ರತಿನಿಧಿ ಎಂದು ನಾವು ಭಾವಿಸಬಹುದು. ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ಸಮಾಜೋ-ಧಾರ್ಮಿಕ ಚಳವಳಿಯಲ್ಲಿ ಪುರುಷರಂತೆ ಸ್ತ್ರಿಯರೂ ಭಾಗವಹಿಸಿದ್ದು ತುಂಬ ಮಹತ್ತ್ವದ ಸಂಗತಿ. ಹೀಗೆ ಸ್ತ್ರೀಯರು ಈ ಚಳವಳಿಯಲ್ಲಿ ಭಾಗವಹಿಸುವುದರ ಮೂಲಕವಾಗಿ ಸ್ವಂತಿಕೆ, ಧೈರ್ಯ, ಸಾಹಸ, ಗಟ್ಟಿತನಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಈ ರೀತಿ ಸ್ತ್ರೀಯರಿಗೆ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ಮಾಡಿಕೊಟ್ಟ ಶಿವಶರಣರು, ಸ್ತ್ರೀ ಸಮಾನತೆಗೆ ಹೆಚ್ಚು ಬೆಲೆ ಕೊಟ್ಟಿದ್ದರೆಂಬುದರಲ್ಲಿ ಸಂದೇಹವಿಲ್ಲ. ಜನಸಾಮಾನ್ಯರ ಆಡುನುಡಿಯನ್ನು ಶಿವಶರಣ-ಶರಣೆಯರು ತಮ್ಮ ವಚನಗಳ ರಚನೆಗೆ ಬಳಸಿದ್ದು ಇವರ ಸಮಾನತಾ ಪ್ರೀತಿಯನ್ನೇ ಎತ್ತಿಹಿಡಿಯುತ್ತದೆ. ಒಟ್ಟಿನಲ್ಲಿ ವಚನಸಾಹಿತ್ಯದ ಮೂಲ ಉದ್ದೇಶ, ಸಮಾಜದಲ್ಲಿ ಸರ್ವ ರೀತಿಯ ಸಮಾನತೆಯನ್ನು ತಂದು ಸರ್ವೋದಯವನ್ನು ಸಾಧಿಸುವುದೇ ಆಗಿತ್ತು ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

❑

ಲೇಖಕರ ವಿಳಾಸ

೧. **ಡಾ. ಬಿ.ಆರ್. ಹಿರೇಮಠ**
ದಿವಂಗತರು
C/o ಡಾ. ಆರ್.ಸಿ. ಹಿರೇಮಠ
ಕ.ಅ.ಪೀಠ, ಕ.ವಿ.ವಿ. ಧಾರವಾಡ–೩

೨. **ಡಾ. ಎಂ.ಎಂ. ಕಲಬುರ್ಗಿ**
'ಸೌಜನ್ಯ'
ಕಲ್ಯಾಣನಗರ, ಧಾರವಾಡ–೭

೩. **ಡಾ. ವಿಜಯ ಶ್ರೀ ಸಬರದ**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಕನ್ನಡ ವಿಭಾಗ
ಕರ್ನಾಟಕ ರಾಜ್ಯ ಮಹಿಳಾ
ವಿಶ್ವವಿದ್ಯಾಲಯ, ವಿಜಾಪುರ.

೪. **ಡಾ. ಎಂ. ಚಿದಾನಂದಮೂರ್ತಿ**
'ಮಿಂಚು', ೬/A, ೪ನೇ ಕ್ರಾಸ್
೧೧ನೇ ಮುಖ್ಯರಸ್ತೆ, ೨ನೇ ಹಂತ
ವಿಜಯನಗರ, ಬೆಂಗಳೂರು.

೫. **ಡಾ. ಕೆ.ಆರ್. ದುರ್ಗಾದಾಸ**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಡಾ. ಆರ್.ಸಿ. ಹಿರೇಮಠ
ಕ.ಅ. ಪೀಠ, ಕರ್ನಾಟಕ
ವಿಶ್ವವಿದ್ಯಾಲಯ
ಧಾರವಾಡ–೩

೬. **ಪ್ರೊ. ಬಿ. ಮಹಾದೇವಪ್ಪ**
ದಿವಂಗತರು
'ಅರಿವು–ಆಚಾರ' ಪತ್ರಿಕೆಯ ಸಂಪಾದಕರು
ಇಂಡಸ್ಟ್ರಿಯಲ್ ಏರಿಯಾ
ಬಸ್ ಡಿಪೋ ಎದುರು
ಗುಲಬರ್ಗಾ.

೭. **ಡಾ. ಜಿ.ಎಸ್. ಶಿವರುದ್ರಪ್ಪ**
'ಚೈತ್ರ', ೮೬೭, ೧೮ನೇ ಮುಖ್ಯರಸ್ತೆ
ಬನಶಂಕರಿ, ೨ನೇ ಹಂತ.
ಬೆಂಗಳೂರು–೫೬೦ ೦೭೧೦.

೮. **ಶ್ರೀ ರಂಜಾನ್‌ದರ್ಗಾ**
ನಿವೃತ್ತ ಪತ್ರಕರ್ತರು
ಪ್ರಜಾವಾಣಿ
ಗುಲಬರ್ಗಾ.

೯. **ಡಾ. ಸೋಮನಾಥ ಯಾಳವಾರ**
ಕನ್ನಡ ಪ್ರಾಧ್ಯಾಪಕರು
ವೀರಭದ್ರೇಶ್ವರ ಪದವಿ ಕಾಲೇಜು
ಹುಮನಾಬಾದ
ಜಿಲ್ಲೆ ಬೀದರ.

೧೦. **Dr. V. Kamalamma**
Professor of Kannada(Rtd)
Department of Kannada
Arts College Building
Osmania University
Hyderabad.

೧೧. **ಡಾ. ಎಂ.ಎಸ್. ಪಾಟೀಲ**
ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

೧೨. **ಡಾ. ಎಂ.ಬಿ. ಹೂಗಾರ**
ಕನ್ನಡ ಪ್ರಾಧ್ಯಾಪಕರು
ಶ್ರೀ ಶಿವಾನಂದ ಡಿಗ್ರಿ ಕಾಲೇಜು,
ಕಾಗವಾಡ, ತಾಲ್ಲೂಕ ಅಥಣಿ
ಜಿಲ್ಲೆ ಬೆಳಗಾವಿ.

೧೩. **ಡಾ. ಬಸವರಾಜ ಪೊಲೀಸ ಪಾಟೀಲ್**
ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ.

೧೪. **ಡಾ. ಜಯಶ್ರೀ ದಂಡೆ**
ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ.

೧೫. **ಡಾ. ಬಸವರಾಜ ಸಬರದ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ.

೧೬. **ಡಾ. ಎಚ್.ಟಿ. ಪೋತೆ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ.

೧೭. **ಡಾ. ವೀರಣ್ಣ ದಂಡೆ**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ.

೧೮. **ಡಾ. ವ್ಹಿ.ಜಿ. ಪೂಜಾರ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ.

೧೯. **ಡಾ. ಸಿ.ವಿ. ಪ್ರಭುಸ್ವಾಮಿಮಠ**
ನಂ. ೪೬, ಬೆಳಗು
ಗಾಂಧಿ ನಗರ, ೨ನೇ ಮುಖ್ಯರಸ್ತೆ
ಧಾರವಾಡ–೪.

೨೦. **ಡಾ. ಎಂ.ಎಸ್. ವಾಲಿ**
"ಶಿವಯೋಗಿ ನಿಲಯ"
ವಿದ್ಯಾನಗರ, ಬಿ.ಎಲ್.ಡಿ.ಇ. ಆಸ್ಪತ್ರೆ
ಎದುರುರಸ್ತೆ, ವಿಜಾಪುರ–೫೮೬ ೧೦೩.

೨೧. **ಪ್ರೊ. ಬಿ.ಜಿ. ಅಮ್ಮಣಗಿ**
೩೫೨, ೩ನೇ ಕ್ರಾಸ್, ೨ನೇ ಮೇನ್
ಮಾರುತಿ ಟೆಂಪಲ್ ಹತ್ತಿರ
ನಾರಾಯಣಪುರ, ಧಾರವಾಡ–೮.

೨೨. **ಶ್ರೀ ಚೆನ್ನವೀರಕಣವಿ**
ಚೆಂಬೆಳಕು
ಕಲ್ಯಾಣನಗರ
ಧಾರವಾಡ–೫೮೦ ೦೦೭.

೨೩. **ಡಾ. ಸಿ. ನಾಗಭೂಷಣ**
ವಿಶೇಷಾಧಿಕಾರಿಗಳು
ಬೆಂಗಳೂರು ವಿಶ್ವವಿದ್ಯಾಲಯ
ಸ್ನಾತಕೋತ್ತರ ಕೇಂದ್ರ,
ಕೋಲಾರ

೨೪. **ಡಾ. ಕೆ. ರವೀಂದ್ರನಾಥ**
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೫. **ಡಾ. ಈಶ್ವರಯ್ಯ ಮಠ**
'ಚಿನ್ಮಯ' ಸರಸ್ವತೀಪುರ
ಕುಸನೂರ ರಸ್ತೆ
ಗುಲಬರ್ಗಾ.

೨೬. **ಡಾ. ಗವಿಸಿದ್ಧಪ್ಪ ಪಾಟೀಲ**
ಕನ್ನಡ ಉಪನ್ಯಾಸಕರು
ಸರಕಾರಿ ಪದವಿ ಕಾಲೇಜು
ಬಸವಕಲ್ಯಾಣ

೨೭. **ಡಾ. ಸಿ.ಪಿ. ಸಿದ್ಧಾಶ್ರಮ**
ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ
ಮೈಸೂರು.



ಗುಲಬರ್ಗಾ ವಿಶ್ವವಿದ್ಯಾಲಯವು ಕಳೆದ ಮೂರು ದಶಕಗಳಿಂದ ಬೋಧನೆ, ಸಂಶೋಧನೆ ಮತ್ತು ಪ್ರಕಟಣೆಗಳ ಮೂಲಕ ಗಮನ ಸೆಳೆದಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಆಕರಗೊಳ್ಳುವುದು ಪ್ರಕಟಣೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟಣೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆಯುತ್ತಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಬಗೆಯ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ನಮ್ಮ ವಿಶ್ವವಿದ್ಯಾಲಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಯೋಜನೆಗಳಿಗೆ ಅನುದಾನವನ್ನು ನೀಡಿದೆ. ಇದರ ಅಂಗವಾಗಿ ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಭಾಷಾಭಿವೃದ್ಧಿಯ ಯೋಜನೆಯ ಅಡಿಯಲ್ಲಿ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯನ್ನು ಕೈಗೆತ್ತಿಗೊಂಡು ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಶೂನ್ಯಸಂಪಾದನೆ, ವಚನಕಾವ್ಯ ಚಿಂತನೆ, ಜಾಗತಿಕ ಚಿಂತಕರು ಮತ್ತು ಬಸವಣ್ಣ, ಸಿದ್ಧರಾಮ, ವಚನಕಾರ್ತಿಯರು, ದಲಿತ ವಚನಕಾರರು, ಇತರ ವಚನಕಾರರು ಹಾಗೂ ವಚನ: ಜಾನಪದ ಹೀಗೆ ಒಟ್ಟು ಹನ್ನೆರಡು ಸಂಪುಟಗಳನ್ನು ಹೊರತರುತ್ತಿದೆ.

ಡಾ. ವ್ಹಿ.ಜಿ. ಪೂಜಾರ ಅವರು ಬಹು ಶ್ರಮವಹಿಸಿ **ಬಸವಣ್ಣ** ಸಂಪುಟವನ್ನು ಸಿದ್ಧಪಡಿಸಿದ್ದಾರೆ. ಈ ಸಂಪುಟದ ಲೇಖನಗಳು ಶತಮಾನದ ವಿಮರ್ಶಾ ಚಿಂತನೆಯನ್ನು ಸಾದರಪಡಿಸುತ್ತಲೆ ಹೊಸ ಆವಿಷ್ಕಾರ ಮತ್ತು ಚಿಂತನೆಗಳಿಗೆ ಉತ್ತಮ ಹಾದಿಯನ್ನು ನಿರ್ಮಿಸಿಕೊಡುತ್ತಿವೆ. ಈ ಸಂಪುಟವನ್ನು ಶ್ರಮವಹಿಸಿ ಸಿದ್ಧಪಡಿಸಿದ ಸಂಪಾದಕರಾದ ಡಾ.ವ್ಹಿ.ಜಿ. ಪೂಜಾರ ಅವರಿಗೂ ಯೋಜನೆಯ ಪ್ರಧಾನ ಸಂಚಾಲಕರಾದ ಡಾ. ಎಚ್.ಟಿ. ಪೋತೆ ಅವರಿಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಅವರಿಗೂ ಹಾಗೂ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಬೆಲೆ : ರೂ. ೨೦೦/-

ISBN 819210361-7



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬